ಅಧ್ಯಾತ್ಮಗ್ರಂಥಾವಳಿ

ಶ್ರೀಶಾಂಕರಭಾಷ್ಯಸಮೇತ

ತೈತ್ತಿರೀಯೋಪನಿಷತ್ತು

(ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೮

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
೧೯೯೮

ಒಂದನೆಯ ಮುದ್ರಣ	1946	1000 ಪ್ರತಿಗಳು
ಎರಡನೆಯ ಮುದ್ರಣ	1973	2000 ಪ್ರತಿಗಳು
ಮೂರನೆಯ ಮುದ್ರಣ	1998	1000 ಪ್ರತಿಗಳು

ಇವರ ಹಕ್ಕುಗಳೆಲ್ಲವೂ ಅಧ್ಯಾತ್ಮ ಪ್ರಕಾಶಕಾರ್ಯಾಲಯದ್ದು

All rights Reserved

ಡಿ.ಟಿ.ಪಿ. ವಿನ್ಯಾಸ :
ಎಲ್.ಎಂ. ಗ್ರಾಫಿಕ್ಸ್
1752/3, 'ಅಕ್ಷಯ ಮ್ಯಾನ್‌ಷನ್'
ಮಲ್ಲೇಶ್ವರಂ ರೈಲ್ವೆ ನಿಲ್ದಾಣದ ಎದುರು,
ಮಾರುತಿ ಬಡಾವಣೆ, ಬೆಂಗಳೂರು - 21.
ದೂ. : 3321182

ಮುದ್ರಣ :
ಸಾಯಿನಾಥ್ ಗ್ರಾಫಿಕ್ಸ್
ಕಾಟನ್‌ಪೇಟೆ, ಬೆಂಗಳೂರು.
ದೂ. : 620650

ಮುನ್ನುಡಿ

ತೈತ್ತಿರೀಯೋಪನಿಷತ್ತು ಶ್ರೀ ಶಾಂಕರಭಾಷ್ಯ ಮೂಲ, ಕನ್ನಡ ಅನುವಾದ ಸಹಿತ ಪ್ರಥಮ ಬಾರಿಗೆ 1946ರಲ್ಲಿಯೂ ಎರಡನೆಯ ಬಾರಿಗೆ 1973ರಲ್ಲಿಯೂ ಕಾರ್ಯಾಲಯದಿಂದ ಪ್ರಕಟವಾಗಿ ಮಹಾಜನರ ಕೈಸೇರಿ ಶಾಂಕರ ಭಾಷ್ಯಾಧ್ಯಯನಕ್ಕೆ ಅನುಕೂಲವಾಯಿತು. ಈಚೆಗೆ ಈ ಎರಡು ಬಾರಿಯ ಮುದ್ರಣ ಪ್ರತಿಗಳೂ ಮಾರಾಟವಾಗಿ ಮತ್ತೊಮ್ಮೆ ಪುನರ್ಮುದ್ರಣವಾಗಬೇಕಾದ ಸಂದರ್ಭವು ಒದಗಿ ಮೂರು ನಾಲ್ಕು ವರ್ಷಗಳೇ ಆದವು. ಆದರೆ ಈಗ ಶ್ರೀಭಗವತ್ಪಾದರ ಕೃಪಾಕಟಾಕ್ಷದಿಂದ ಈ ಗ್ರಂಥವನ್ನು ಮೂರನೆಯ ಬಾರಿಗೆ ಮುದ್ರಿಸಿ ಮಹಾಜನರಿಗೆ ಸಮರ್ಪಿಸಲಾಗಿದೆ.

ಈ ಗ್ರಂಥವು ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರ ಕೃತಿಯೇ ಆಗಿದ್ದು ಯಾವ ಬದಲಾವಣೆಯನ್ನೂ ಹೊಂದಿರುವದಿಲ್ಲ. ಎಂದಿನಂತೆ ವಾಚಕರು ಈ ಗ್ರಂಥವನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಕಾರ್ಯಾಲಯದವರು ತಮ್ಮ ಗ್ರಂಥಪ್ರಕಟನ ನಿಧಿಯ ನೆರವಿನಿಂದಲೇ ಈ ಗ್ರಂಥವನ್ನು ಪ್ರಕಾಶನಗೊಳಿಸಿರುತ್ತಾರೆ. ಇದಕ್ಕಾಗಿ ಮಹಾಜನರಿಂದ ಯಾವ ಸಹಾಯ ಧನವೂ ಒದಗಲಿಲ್ಲವಾಗಿ ಗ್ರಂಥದ ಬೆಲೆಯನ್ನು ಉತ್ಪಾದನಾ ವೆಚ್ಚದ ಆಧಾರದಿಂದ ಗೊತ್ತುಪಡಿಸಲಾಗಿದೆ.

ಪೂಜ್ಯ ಶ್ರೀ ಶ್ರೀಗಳವರ ಇನ್ನೂ ಅನೇಕ ಕನ್ನಡ, ಸಂಸ್ಕೃತ ಗ್ರಂಥಗಳು ಪುನರ್ಮುದ್ರಣಕ್ಕಾಗಿ ಕಾದಿವೆ. ಉದಾರ ಮಹಾಶಯರು ಈ ಅಧ್ಯಾತ್ಮ ಪ್ರಸಾರ ಕಾರ್ಯಕ್ಕೆ ಯಥೋಚಿತ ಧನ ಸಹಾಯವನ್ನು ನೀಡಿ ಸಹಕರಿಸಬೇಕಾಗಿ ಬೇಡಿದೆ.

ಇತಿ

ಸಜ್ಜನ ವಿಧೇಯ

H. S. ಲಕ್ಷ್ಮೀನರಸಿಂಹ ಮೂರ್ತಿ

ಹೊಳೇನರಸೀಪುರ

ತಾ. 18-4-1998

ಸಂಕೇತಾಕ್ಷರಗಳ ವಿವರ

ಆ॥	ಆನಂದಾಶ್ರಮಪುಸ್ತಕದ ಪಾಠ, ಆನಂದಜ್ಞಾನರ ವ್ಯಾಖ್ಯಾನ.
ಋ॥	ಋಗ್ವೇದ.
ಐ.ಆ.	ಐತರೇಯ ಆರಣ್ಯಕ
ಕಾ॥	ಕಾಶಿಯ ಹಿತಚಿಂತಕಮುದ್ರಣಾಲಯಪುಸ್ತಕದ ಪಾಠ.
ಗೋ॥	ಗೋರಖಪುರದ ಗೀತಾಪ್ರೆಸ್ಸಿನ ಪುಸ್ತಕದ ಪಾಠ.
ಗೌ.ಧ.	ಗೌತಮಧರ್ಮಸೂತ್ರ.
ಜೈ.ಸೂ.	ಜೈಮಿನಿಗಳ ಮೀಮಾಂಸಾಸೂತ್ರ.
ತಂ.ವಾ.	ತಂತ್ರವಾರ್ತಿಕ, ಕುಮಾರಿಲಭಟ್ಟರು ಶಾಬರಭಾಷ್ಯಕ್ಕೆ ಬರೆದಿರುವ ವ್ಯಾಖ್ಯಾನ.
ನೈ.ವಾ.	ನೈಷ್ಕರ್ಮ್ಯಸಿದ್ಧಿಯ ಸುರೇಶ್ವರಾಚಾರ್ಯರು ಬರೆದಿರುವ ವ್ಯಾಖ್ಯಾನ.
ನೈ.ಸಂ.	ನೈಷ್ಕರ್ಮ್ಯಸಿದ್ಧಿಯ ಸಂಹಿತೆ.
ನ್ಯಾ.ಸೂ.	ಗೌತಮರು ಬರೆದಿರುವ ನ್ಯಾಯಸೂತ್ರ.
ಭಾ.ಭಾ.	ಭಾಷ್ಯಭಾಗ.
ಮೋ.ಗೃ.	ಮೋದಾಯನರ ಗೃಹ್ಯಸೂತ್ರ.
ಮೋ.ಧ.	ಮಹಾಭಾರತ ಮೋಕ್ಷಧರ್ಮ.
ರಾ.ಧ.	ಮಹಾಭಾರತ, ಶಾಂತಿಪರ್ವದಲ್ಲಿ ರಾಜಧರ್ಮಪರ್ವ.
ವಾ॥	ಶ್ರೀರಂಗದ ವಾಣೀವಿಲಾಸಮುದ್ರಣಾಲಯದ ಪುಸ್ತಕದ ಪಾಠ.

ವಿಶೇಷ : ಉಪನಿಷತ್ತುಗಳ, ಶ್ರೀಮದ್ಭಗವದ್ಗೀತೆಯ, ಮತ್ತು ಬ್ರಹ್ಮಸೂತ್ರಗಳ ಸಂಖ್ಯೆಯನ್ನು ಆಳಿದ ಉಪನಿಷದ್ಭಾಷ್ಯಗಳಂತೆಯೇ ಆದ್ಯಾಕ್ಷರಗಳಿಂದ ಸೂಚಿಸಿದೆ. ಬರಿಯ ಸಂಖ್ಯೆಯು ಈ ಉಪನಿಷತ್ತಿನ ಭಾಷ್ಯಭಾಗವನ್ನೂ ಬರಿಯ ಎರಡು ಸಂಖ್ಯೆಗಳು ಈ ಉಪನಿಷತ್ತಿನ ವಲ್ಲಿ ಮತ್ತು ಅನುವಾಕಗಳ ಸಂಖ್ಯೆಗಳನ್ನೂ ತಿಳಿಸುವವು.

ಪೀಠಿಕೆ

(ಒಂದನೆಯ ಸಂಸ್ಕರಣದ ಭಾಗ)

ತೈತ್ತಿರೀಯೋಪನಿಷತ್ತು ನಮ್ಮ ದೇಶದಲ್ಲಿ ಸುಪ್ರಸಿದ್ಧವಾಗಿರುತ್ತದೆ. ಈ ಕಡೆಯಲ್ಲಿ ತೈತ್ತಿರೀಯಶಾಖೆಯವರು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತಾರೆ. ಈಗ ವೈದಿಕರು ಸ್ವರಸಹಿತವಾಗಿ ಪಠಿಸುವ ಕೆಲವೇ ಉಪನಿಷತ್ತುಗಳಲ್ಲಿ ಇದೂ ಒಂದು ಮುಖ್ಯವಾದ ಉಪನಿಷತ್ತಾಗಿದೆ. ಈ ಉಪನಿಷತ್ತು ತೈತ್ತಿರೀಯಾರಣ್ಯಕದ ಏಳನೆಯ ಪ್ರಪಾಠಕದಿಂದ ಒಂಭತ್ತನೆಯ ಪ್ರಪಾಠಕದವರೆಗಿನ ಭಾಗವು. ಹತ್ತನೆಯ ಪ್ರಪಾಠಕವಾದ 'ನಾರಾಯಣಪನ್ನ ಅಥವಾ ಅಂಭಸಿ' ಎಂದು ವೈದಿಕರಲ್ಲಿ ಪ್ರಸಿದ್ಧವಾಗಿರುವ ಭಾಗವನ್ನು ಆಚಾರ್ಯರು ಸೂತ್ರಭಾಷ್ಯ (೩-೩-೨೪)ವೇ ಮುಂತಾದವುಗಳಲ್ಲಿ ಪ್ರಮಾಣವಾಗಿ ಉದಾಹರಿಸಿರುತ್ತಾರಾದರೂ ಅದೇಕೋ ಅದಕ್ಕೆ ಭಾಷ್ಯವನ್ನು ಬರೆದಿರುವದಿಲ್ಲ. ಸಾಯಣಾಚಾರ್ಯರು ಇಡಿಯ ವೇದಕ್ಕೇ ಭಾಷ್ಯವನ್ನು ಬರೆಯುವದಕ್ಕೆ ಹೊರಟವರಾದ್ದರಿಂದ ಆ ಭಾಗಕ್ಕೂ ವಿವರಣೆಯನ್ನು ಬರೆದಿರುತ್ತಾರೆ. ಅವರ ಮತದಲ್ಲಿ ತೈತ್ತಿರೀಯೋಪನಿಷತ್ತು 'ಸಾಂಹಿತೀ', 'ವಾರುಣೀ', 'ಯಾಜ್ಞಿಕೀ' - ಎಂದು ಮೂರು ಬಗೆಯಾಗಿರುತ್ತದೆ. ಸಂಹಿತೆಗಳ ವಿಷಯವನ್ನು ಒಳಗೊಂಡಿರುವದರಿಂದ ಏಳನೆಯ ಪ್ರಪಾಠಕವು - 'ಸಾಂಹಿತೀ ಉಪನಿಷತ್ತು' ; ಎಂಟು, ಒಂಭತ್ತು - ಈ ಎರಡು ಪ್ರಪಾಠಕಗಳಿಗೆ ವರುಣನು ಸಂಪ್ರದಾಯಪ್ರವರ್ತಕನಾಗಿರುವದರಿಂದ ಅವೆರಡೂ ಸೇರಿ 'ವಾರುಣೀ ಉಪನಿಷತ್ತು' ; ಹತ್ತನೆಯ ಪ್ರಪಾಠಕದಲ್ಲಿ ಯಜ್ಞೋಪ ಯುಕ್ತವಾದ ಮಂತ್ರಗಳೂ ಅಲ್ಲಲ್ಲಿ ಕಂಡುಬರುವದರಿಂದ ಅದು 'ಯಾಜ್ಞಿಕೀ ಉಪನಿಷತ್ತು' ಎಂದು ಅವರು ಉಪನಿಷತ್ತಿನ ಸಂಬಂಧಭಾಷ್ಯದಲ್ಲಿ ಬರೆದಿರುತ್ತಾರೆ. ತೈತ್ತಿರೀಯರ ಬ್ರಹ್ಮಯಜ್ಞ ತರ್ಪಣದಲ್ಲಿ ಈ ಹೆಸರುಗಳನ್ನು ಉಪಯೋಗಿಸುವ ಪದ್ಧತಿಯೂ ಇದೆ. ಆದರೆ ಶಂಕರಾಚಾರ್ಯರು ಈ ವಿಭಾಗವನ್ನು ಒಪ್ಪಿದ್ದರೋ ಇಲ್ಲವೋ ಎಂಬುದನ್ನು ಭಾಷ್ಯದ ಆಧಾರದಿಂದ ನಿಶ್ಚಯಿಸುವದಕ್ಕೆ ಬರುವಂತಿಲ್ಲ. ನಾರಾಯಣದಲ್ಲಿ ಅಥವಾ ಯಾಜ್ಞಿಕೀ ಉಪನಿಷತ್ತಿನಲ್ಲಿ ಆರವತ್ತುನಾಲ್ಕು ಅನುವಾಕಗಳ ದ್ರಾವಿಡಪಾಠ, ಎಂಬತ್ತು ಅನುವಾಕಗಳ ಆಂಧ್ರಪಾಠ, ಎಂಬತ್ತುನಾಲ್ಕು ಅನು ವಾಕಗಳ ಕರ್ಣಾಟಕ ಪಾಠ, ಎಂಬತ್ತೊಂಬತ್ತು ಅನುವಾಕಗಳ ಮತ್ತೊಂದು ಪಾಠ - ಹೀಗೆ ನಾಲ್ಕು ಪಾಠಸಂಪ್ರದಾಯಗಳು ಇರುವವೆಂದು ಸಾಯಣಭಾಷ್ಯದಲ್ಲಿ ಬರೆದಿದೆ. ಆಚಾರ್ಯರ ಕಾಲದಲ್ಲಿ ಈ ಸಂಪ್ರದಾಯಗಳು ಇದ್ದವೋ ಇಲ್ಲವೋ ಎಂಬುದನ್ನು ನಿರ್ಣಯಿಸುವದಕ್ಕೂ ನಮಗೆ ಸಾಕಾದಷ್ಟು ಆಧಾರವಿರುವದಿಲ್ಲ.

ಉಪನಿಷತ್ತಿನ ಭಾಷ್ಯ

"ಪದವಾಕ್ಯಪ್ರಮಾಣಗಳನ್ನು ಅನುಸರಿಸಿ ಸರ್ವ ಉಪನಿಷತ್ತುಗಳಿಗೂ ವಿವರವನ್ನು ಬರೆದಿರುವ ಗುರುಗಳಿಗೆ ನಾನು ನಿತ್ಯವೂ ನಮಸ್ಕರಿಸುವೆನು" ಎಂಬ ವಾಕ್ಯವೊಂದು ಈ ಭಾಷ್ಯದ ಆದಿಯಲ್ಲಿ ಕಂಡುಬರುತ್ತದೆ. ಭಾಷ್ಯಕಾರರು ಇಲ್ಲಿ ಯಾವ ಗುರುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರುವರೋ ಊಹಿಸುವದಕ್ಕೆ ಬರುವಂತಿಲ್ಲ. ಸದ್ಯಕ್ಕೆ ಉದ್ದೇಶಿಗಳಿಗೆಲ್ಲ ಮಾನ್ಯವಾಗಿ ನಮಗೆ ಸಿಕ್ಕುವ ಅತ್ಯಂತ ಪ್ರಾಚೀನಭಾಷ್ಯವೆಂದರೆ ಈ ಆಚಾರ್ಯರ ಭಾಷ್ಯವೇ ಆಗಿರುತ್ತದೆ. ತೈತ್ತಿರೀಯ ಭಾಷ್ಯದಲ್ಲಿ ವೇದಾಂತಸಿದ್ಧಾಂತದ ಸಾರವನ್ನೆಲ್ಲ ಹಿಂಡಿಟ್ಟಿರುತ್ತದೆ. ಶಂಕರಭಗವತ್ಪಾದರವರ ಶೈಲಿಯು ಸ್ವಭಾವದಿಂದ ಲಲಿತವೇ ಆದರೂ ಈ ಉಪನಿಷತ್ತಿನ ಭಾಷ್ಯವು ಇನ್ನಷ್ಟು ವಿವರವಾಗಿರಬೇಕಾಗಿತ್ತೆಂದು ಅನ್ನಿಸುವ ಭಾಗಗಳೂ ಕೆಲವು ಕಂಡುಬರುತ್ತವೆ. ಈ ಭಾಷ್ಯಕ್ಕೆ ವಾರ್ತಿಕವನ್ನು ಬರೆದಿರುವ ಸುರೇಶ್ವರಾಚಾರ್ಯರು ಭಾಷ್ಯಕಾರರ ಬೆಂಬಳಿಯ ಶಿಷ್ಯರಾಗಿದ್ದರೂ ಅವರ ಬರೆವಣಿಗೆಯಿಂದ ಭಾಷ್ಯದಲ್ಲಿ ಗಡುಬಾಗಿ ಕಾಣುವ ಸ್ಥಳಗಳಲ್ಲಿ ಸಹಾಯವೇನೂ ಆಗುವಂತಿಲ್ಲ. ಭಾಷ್ಯಾರ್ಥವನ್ನು ಬಹು ಸಂಕ್ಷೇಪವಾಗಿ ವಿವರಿಸಿ, ಉದ್ದೇಶಿಗಳಲ್ಲಿ ತಮ್ಮ ಕಾಲಕ್ಕೆ ಕಾಣಿಸಿಕೊಂಡಿದ್ದ ಪ್ರಕ್ರಿಯಾಭೇದಗಳನ್ನು ವಿಮರ್ಶಿಸುವದಕ್ಕೆಂದೇ ಅವರ ವಾರ್ತಿಕವು ಹೊರಟಿರುವಂತೆ ಕಾಣುತ್ತದೆ. ಮುಖ್ಯವಾಗಿ ಬ್ರಹ್ಮಜ್ಞಾನವು ವಸ್ತುತಂತ್ರವಾದದ್ದು, ವಿಧಿಗೆ ವಿಷಯವಲ್ಲ - ಎಂಬುದನ್ನು ಸ್ಪಷ್ಟಪಡಿಸುವದಕ್ಕೇ ಅವರು ತಮ್ಮ ಗ್ರಂಥದ ಬಹುಭಾಗವನ್ನು ವಿನಿಯೋಗಿಸಿರುತ್ತಾರೆ. ಸಾಯಣಾಚಾರ್ಯರು ಆಚಾರ್ಯರಿಗಿಂತ ಬಹಳ ಈಚಿನವರಾಗಿರುವದರಿಂದಲೂ ಕೆಲವು ಕಡೆಗಳಲ್ಲಿ ತಮ್ಮದೇ ಆಗಿರುವ ಸ್ವತಂತ್ರ ವ್ಯಾಖ್ಯಾನವನ್ನು ಅವರು ಬರೆದಿರುವದರಿಂದಲೂ ಭಾಷ್ಯಾರ್ಥವನ್ನು ನಿರ್ಣಯಿಸುವದಕ್ಕೆ ಅವರ ವೇದಭಾಷ್ಯವು ಅಷ್ಟು ಪ್ರಯೋಜನಕರವಾಗಿರುವದಿಲ್ಲ. ಈ ಸಂನಿವೇಶದಲ್ಲಿ ನಾವು ಆಚಾರ್ಯರ ದೇವರೆಯ ಉಪನಿಷತ್ತುಗಳ ಮತ್ತು ಗೀತೆಯ ಭಾಷ್ಯಗಳ ಆಧಾರದಿಂದಲೇ ಸಾಧ್ಯವಾದ ಮಟ್ಟಿಗೂ ಪ್ರಕೃತದಲ್ಲಿ ಅಲ್ಲಲ್ಲಿ ಸಿಕ್ಕುವ ಕಗ್ಗಂಟುಗಳನ್ನು ಬಿಚ್ಚುವದಕ್ಕೆ ಪ್ರಯತ್ನವನ್ನು ಮಾಡಬೇಕಾಗಿರುತ್ತದೆ. ಅದರಲ್ಲಿಯೂ ಮುಖ್ಯವಾಗಿ ಆಚಾರ್ಯರ ಬೃಹದಾರಣ್ಯಕಭಾಷ್ಯವು ಉಪನಿಷದ್ಭಾಷ್ಯಗಳಲ್ಲೆಲ್ಲ ಅತ್ಯಂತವಿಸ್ತಾರವಾಗಿರುವದರಿಂದಲೂ ಆ ಭಾಷ್ಯಕ್ಕೆ ವಾರ್ತಿಕವನ್ನು ಬರೆದಿರುವ ಸುರೇಶ್ವರಾಚಾರ್ಯರು ಅಲ್ಲಿಯ ಅನೇಕ ಶ್ಲೋಕಗಳನ್ನು ಇಲ್ಲಿಯೂ ಹಾಗೆಯೇ ಜೋಡಿಸಿಟ್ಟಿರುವದು ಕಂಡು ಬರುವದರಿಂದಲೂ ಈ ಎರಡು ಉಪನಿಷದ್ಭಾಷ್ಯಗಳ ಹೋಲಿಕೆಯಿಂದ ಭಾಷ್ಯದ ಹೃದಯವನ್ನು ಗೊತ್ತುಪಡಿಸುವದು ಯುಕ್ತವೆಂದು ನಾನು ಭಾವಿಸಿರುತ್ತೇನೆ. ಆದ್ದರಿಂದ ಮಿಕ್ಕ ವ್ಯಾಖ್ಯಾನಗಳ ಸಹಾಯವನ್ನೂ ಪಡೆದುಕೊಂಡೇ ಹೊರಟಿದ್ದರೂ ಭಾಷ್ಯಾನುವಾದದಲ್ಲಿ ನಾನು ಸ್ವತಂತ್ರವಾಗಿಯೇ

ಪ್ರವರ್ತಿಸಿರುವಂತೆ ಕೆಲವು ಕಡೆ ತಟ್ಟನೆ ಕಂಡರೆ ಅದಕ್ಕೆ ಭಾಷ್ಯಹೃದಯವನ್ನು ಭಾಷ್ಯದ ಬೆಂಬಲದಿಂದಲೇ ಕಂಡುಹಿಡಿಯಲು ಮಾಡಿರುವ ಪ್ರಯತ್ನವೇ ಕಾರಣವೆಂದು ಇಲ್ಲಿ ಬಿನ್ನವಿಸಿಕೊಂಡಿರುತ್ತೇನೆ.

ಭಾಷ್ಯದ ವಿಭಾಗಗಳು

ಉಪನಿಷತ್ತಿನಲ್ಲಿ ಶೀಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ - ಎಂಬ ಮೂರು ಭಾಗಗಳಿರುತ್ತವೆ. ಶೀಕ್ಷಾವಲ್ಲಿಯಲ್ಲಿ ವರ್ಣಸ್ವರಾದಿಗಳ ವಿಚಾರವು ಮಾತ್ರವೇ ಇರುವದಿಲ್ಲ ; ಅದರಲ್ಲಿ ಹಲವು ಉಪಾಸನೆಗಳೂ ಇವೆ. ಮುಖ್ಯವಾಗಿ ಅಪರಬ್ರಹ್ಮದ ಅಥವಾ ಸೋಪಾಧಿಕಬ್ರಹ್ಮದ ಉಪಾಸನೆಯನ್ನೂ ಮುಮುಕ್ಷುಗಳಿಗೆ ಬೇಕಾಗಿರುವ ಕರ್ಮದ ವಿಚಾರವನ್ನೂ ಅಲ್ಲಿ ತಿಳಿಸಿರುತ್ತದೆ. ಆದ್ದರಿಂದ ಅದಕ್ಕೆ 'ಶೀಕ್ಷಾವಲ್ಲಿ' ಎಂದು ಪ್ರಚಾರದಲ್ಲಿರುವ ಹೆಸರಾಗಲಿ 'ಸಾಂಹಿತೀ ಉಪನಿಷತ್ತು' ಎಂದು ಸಾಯಣರು ಕೊಟ್ಟಿರುವ ಹೆಸರಾಗಲಿ ಅನ್ವರ್ಥವಾಗಿರುವದಿಲ್ಲ. ಎರಡನೆಯ ವಲ್ಲಿಯಲ್ಲಿ ನಮ್ಮ ಪರಮಾತ್ಮ ಸ್ವರೂಪವಾದ ಆನಂದವೇ ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಬ್ರಹ್ಮವು ಎಂಬ ಜ್ಞಾನದಿಂದ ಪರಮಪುರುಷಾರ್ಥವು ದೊರಕುವದೆಂದು ಪ್ರತಿಪಾದಿಸಿದೆ. ಆದ್ದರಿಂದ 'ಬ್ರಹ್ಮವಲ್ಲಿ', 'ಆನಂದವಲ್ಲಿ', 'ಬ್ರಹ್ಮಾನಂದವಲ್ಲಿ' ಎಂದು ರೂಢಿಯಲ್ಲಿರುವ ಹೆಸರುಗಳು ಅದಕ್ಕೆ ಅನ್ವರ್ಥವಾಗಿವೆ ಎನ್ನಬಹುದು. ಆದರೆ ಆಚಾರ್ಯರು ಕಂಠೋಕ್ತವಾಗಿ 'ಆನಂದವಲ್ಲಿ' ಎಂದೇ ಕರೆದಿರುವದರಿಂದ ಈ ಅನುವಾದದಲ್ಲಿ ಅದೇ ಹೆಸರನ್ನೇ ಇಟ್ಟುಕೊಂಡಿದೆ. ಮೂರನೆಯ ವಲ್ಲಿಯಲ್ಲಿ ಭೃಗುವಿಗೆ ವರುಣನು ಉಪದೇಶಿಸಿದ ತಪಸ್ಸೆಂಬ ಬ್ರಹ್ಮವಿದ್ಯಾಸಾಧನದ ವಿಚಾರವಿದೆ ; ಭೃಗುವು ಅನ್ನದಿಂದ ಹಿಡಿದು ಕ್ರಮಕ್ರಮವಾಗಿ ವಿಚಾರಮಾಡುತ್ತಾ ಆನಂದವೇ ಬ್ರಹ್ಮವೆಂದು ನಿಶ್ಚಯಿಸಿದ ವಿವರವಿದೆ ; ಬ್ರಹ್ಮದ ಬಗೆಬಗೆಯ ಉಪಾಸನೆಗಳ ಮತ್ತು ಅವುಗಳ ಫಲದ ವಿವರವೂ ಇದೆ. ಆದ್ದರಿಂದ ಅದಕ್ಕೆ 'ಭೃಗುವಲ್ಲಿ' ಎಂದು ಪ್ರಚಾರದಲ್ಲಿರುವ ಹೆಸರಾಗಲಿ ಆನಂದವಲ್ಲಿಯನ್ನೂ ಸೇರಿಸಿಕೊಂಡು ಸಾಯಣಾಚಾರ್ಯರವರು ಇಟ್ಟಿರುವ 'ವಾರುಣೀ ಉಪನಿಷತ್ತು' ಎಂಬ ಹೆಸರಾಗಲಿ ಅದರ ಸ್ವರೂಪವನ್ನು ವರ್ಣಿಸುವಷ್ಟು ವ್ಯಾಪಕವಾಗಿರುವದಿಲ್ಲವೆಂದು ಹೇಳಬೇಕಾಗಿದೆ.

ಅನುವಾಕಗಳ ವಿಂಗಡ

ಈ ಮೂರು ವಲ್ಲಿಗಳ ಭಾಷ್ಯವನ್ನು ಕನ್ನಡಿಸುವದರಲ್ಲಿ ಒಂದು ನಿಯತವಾದ ವಿಭಾಗಕ್ರಮವನ್ನು ಅನುಸರಿಸುವದು ಸಾಧ್ಯವಾಗಲಿಲ್ಲ. ವೈದಿಕಪಾಠದ ಸಂಪ್ರದಾಯದಂತೆ ಶೀಕ್ಷಾವಲ್ಲಿಯಲ್ಲಿ ಹತ್ತು (ಶಾಂತಿಯೂ ಸೇರಿ ಹನ್ನೊಂದು) ಅನುವಾಕಗಳಿರುತ್ತವೆ ; ಆನಂದವಲ್ಲಿಯಲ್ಲಿ ಒಂಬತ್ತು (ಶಾಂತಿಯೂ ಸೇರಿ ಹತ್ತು), ಭೃಗುವಲ್ಲಿಯಲ್ಲಿ ಹತ್ತು -

ಹೀಗೆ ಅನುವಾಕಗಳಿರುತ್ತವೆ. ಅನುವಾಕಗಳನ್ನೂ ಅವುಗಳಲ್ಲಿರುವ ವಾಕ್ಯಗಳನ್ನು ಹತ್ತು ಹತ್ತಾಗಿ ವಿಂಗಡಿಸಿಕೊಳ್ಳುವ ಹನಸುಗಳನ್ನೂ ಲೆಕ್ಕಮಾಡಿಕೊಂಡು ವೈದಿಕರು ಅಧ್ಯಯನ ಮಾಡುತ್ತಿರುವರಾದರೂ ಅರ್ಥಕ್ಕನುಸಾರವಾಗಿ ನೋಡಿದರೆ ಆನಂದವಲ್ಲಿಯಲ್ಲಾಗಲಿ ಭೃಗುವಲ್ಲಿಯಲ್ಲಾಗಲಿ ಆ ಕ್ರಮವನ್ನು ಅನುಸರಿಸುವದು ಸಾಧ್ಯವೇ ಇಲ್ಲ. ಭಾಷ್ಯಕಾರರಾಗಲಿ ಸಾಯಣರಾಗಲಿ ಈಗ ಪ್ರಚಾರದಲ್ಲಿರುವ ಅನುವಾಕವಿಭಾಗವನ್ನು ಅನುಸರಿಸಿರುವದಿಲ್ಲ. ವೇದಭಾಷ್ಯವನ್ನು ಅನುವಾಕಾನುಸಾರವಾಗಿ ವಿಂಗಡಿಸಿಕೊಂಡು ಬರೆದಿರುವ ಸಾಯಣರು ಕೂಡ ಆನಂದವಲ್ಲಿಯ ಶಾಂತಿಯನ್ನು ಬಿಟ್ಟು ಮಿಕ್ಕದ್ದೆಲ್ಲ ಒಂದು ಅನುವಾಕವೆಂದೂ ಭೃಗುವಲ್ಲಿಯವನ್ನೆಲ್ಲ ಮತ್ತೊಂದು ಅನುವಾಕವೆಂದೂ ಭಾವಿಸಿ ಎಂಟನೆಯ ಪ್ರಪಾಠಕಕ್ಕೆ ಮೂರು ಅನುವಾಕಗಳೆಂದು ಎಣಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ನಾನು ಅನುವಾಕಗಳ ವಿಂಗಡಣೆಯನ್ನು ಲೆಕ್ಕಕ್ಕೆ ತಾರದೆ ಭಾಷ್ಯದ ಪ್ರತಿಪಾದನೆಗೆ ತಕ್ಕಂತೆ ಅರ್ಥಕ್ಕನುಗುಣವಾಗಿ ಈ ಎರಡು ವಲ್ಲಿಗಳನ್ನೂ ಕೆಲವು ಖಂಡಗಳಾಗಿ ವಿಂಗಡಿಸಿಕೊಂಡಿರುತ್ತೇನೆ. ಭಾಷ್ಯವನ್ನು ಇಂಗ್ಲಿಷಿಗೆ ರೂಪಾಂತರಗೊಳಿಸಿರುವ ಕೈಲಾಸವಾಸಿ ಎ. ಮಹಾದೇವಶಾಸ್ತ್ರಿಗಳವರ ಗ್ರಂಥದಿಂದ ಈ ವಿಭಾಗಕ್ರಮವೇ ಸರಿಯೆಂದು ನನಗೆ ಮೊಟ್ಟಮೊದಲು ಮನದಲ್ಲಿ ಮಿಂಚಿತಾದರೂ ವಿಭಾಗಗಳನ್ನೂ ಅವುಗಳ ಹೆಸರುಗಳನ್ನೂ ನನಗೆ ಯುಕ್ತವಾಗಿ ಕಂಡಂತೆ ಮಾರ್ಪಡಿಸಿಕೊಂಡಿರುತ್ತೇನೆ. ಭಾಷ್ಯದ ವಿಚಾರಸರಣಿಯನ್ನು ಮನದಟ್ಟುಮಾಡಿಕೊಳ್ಳಬೇಕೆನ್ನುವವರಿಗೆ ಈ ಪದ್ಧತಿಯಿಂದ ಹೆಚ್ಚಿನ ಸಹಾಯವಾಗುವದೆಂದು ನಂಬಿರುತ್ತೇನೆ.

ಭಾಷ್ಯದ ಮುಖ್ಯಾಂಶಗಳು

ಭಾಷ್ಯದಲ್ಲಿ ಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಪ್ರತಿಪಾದಿಸಿರುತ್ತದೆ. ಮುಖ್ಯವಾಗಿ ಕರ್ಮಗಳಿಗೂ ಜ್ಞಾನಕ್ಕೂ ಇರುವ ಸಂಬಂಧ, ಅಪರಬ್ರಹ್ಮಪ್ರಾಪ್ತಿಗೂ ಪರಬ್ರಹ್ಮಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವದು ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಅವಿದ್ಯಕವೆಂದೂ ವಿದ್ಯಾವಿದ್ಯೆಗಳು ಕೂಡ ನಿಜವಾಗಿ ಆತ್ಮನ ಧರ್ಮಗಳಲ್ಲವೆಂದೂ ಮನಗಾಣಿಸುವ ಯುಕ್ತಿ - ಇವಿಷ್ಟನ್ನು ಜಿಜ್ಞಾಸುಗಳು ಮನದಟ್ಟುಮಾಡಿಕೊಳ್ಳಬೇಕಷ್ಟಿದೆ. ಒಂದೊಂದರ ವಿಷಯಕ್ಕೂ ದಿಗ್ದರ್ಶಕವಾಗಿ ಎರಡು ಮಾತುಗಳನ್ನು ಇಲ್ಲಿ ಹೇಳುವದು ಅಂಥವರಿಗೆ ಸಹಾಯಕವಾದೀತೆಂದು ನಂಬಿರುತ್ತೇನೆ.

(೧) ಕರ್ಮಗಳಿಗೂ ಜ್ಞಾನಕ್ಕೂ ಸಂಬಂಧ

ಕರ್ಮದಿಂದಲೇ ಎಂದಿಗೂ ಮೋಕ್ಷವಾಗಲಾರದು (ಭಾ.ಭಾ. ೮, ೭೧).

ಸಂಚಿತಕರ್ಮಗಳೂ ಆಗಾಮಿಕರ್ಮಗಳೂ ಯಾವಾಗಲೂ ಉಳಿದುಕೊಂಡೇ ಇರುತ್ತವೆ ಯಾದ್ದರಿಂದ ಅವುಗಳ ಫಲದಿಂದ ಬಿಡುಗಡೆಯನ್ನು ಹೊಂದುವದಕ್ಕೆ ಯಾವ ಕರ್ಮವೂ ಸಹಾಯಕವಾಗಲಾರದು (ಭಾ.ಭಾ. ೪). ಉಪಾಸನೆಯಿಂದ ಕಾರ್ಯಬ್ರಹ್ಮವನ್ನು ಮುಟ್ಟಬಹುದು ; ಆದರೆ ಎಲ್ಲಕ್ಕೂ ಕಾರಣವಾಗಿರುವ ಪರಬ್ರಹ್ಮವನ್ನು ಸೇರುವದು ಅದರಿಂದಾಗಲಾರದು. ಕರ್ಮಕ್ಕೆ ಉತ್ಪತ್ತಿ, ಸಂಸ್ಕಾರ, ವಿಕಾರ, ಆಪ್ತಿ - ಎಂಬ ನಾಲ್ಕೇ ಬಗೆಯಾದ ಫಲವನ್ನು ಕೊಡುವ ಶಕ್ತಿಯಿದೆ ; ಆದರೆ ಬ್ರಹ್ಮಸ್ವರೂಪವಾದ ನಿತ್ಯವಾದ ಮುಕ್ತಿಯು ಈ ನಾಲ್ಕರಲ್ಲಿ ಒಂದೂ ಅಲ್ಲ (೭ಳರಿಂದ ೭೬). ನಾವೆ ಅಜ್ಞಾನದಿಂದಲೇ ಪರಬ್ರಹ್ಮಕ್ಕಿಂತ ಬೇರೆಯಾಗಿರುವದರಿಂದ ಜ್ಞಾನದಿಂದಲೇ ಅದನ್ನು ಸೇರಬೇಕಾಗಿರುವದು (೯೦ರಿಂದ ೯೩). ಅಕರ್ತ್ರಾತ್ಮ ಬುದ್ಧಿರೂಪವಾದ ಬ್ರಹ್ಮಜ್ಞಾನದೊಳಗೆ ಅಜ್ಞಾನ ದಿಂದಾಗಿರುವ ಕರ್ತೃತ್ವಬುದ್ಧಿಯಿಂದೊಡಗೂಡಿದ ಕರ್ಮವು ಇರಲೇ ಆರದು (೭೭). ಆದರೂ ಕರ್ಮಗಳನ್ನು ವಿಧಿಸಿರುವದು ವ್ಯರ್ಥವಲ್ಲ ; ಅವುಗಳನ್ನು ಉಪಾಸನೆಯ ಜೊತೆಗೆ ಅನುಷ್ಠಾನ ಮಾಡುತ್ತಿದ್ದರೆ ಅಪರಬ್ರಹ್ಮವನ್ನು ಸೇರಿ ಸ್ವಾರಾಜ್ಯವನ್ನು ಪಡೆದುಕೊಳ್ಳಬಹುದು ; ನಿಷ್ಕಾಮವಾಗಿ ಅನುಷ್ಠಾನಮಾಡಿ ಚಿತ್ತಶುದ್ಧಿಯ ಮೂಲಕವಾಗಿ ಪರಬ್ರಹ್ಮದ ಜ್ಞಾನವನ್ನೂ ಪಡೆದುಕೊಳ್ಳಬಹುದು (ಭಾ. ೫೩ರಿಂದ ೫೯, ೭೯, ೮೧). ಆದರೆ ಮೋಕ್ಷಕ್ಕೆ ಗೃಹಸ್ಥಾಶ್ರಮದ ಕರ್ಮಗಳೇ ಆಗಬೇಕೆಂಬ ನಿರ್ಬಂಧವೇನೂ ಇಲ್ಲ ; ಪೂರ್ವಜನ್ಮದಲ್ಲಿ ಕರ್ಮವನ್ನು ಮಾಡಿ ಚಿತ್ತಸಂಸ್ಕಾರವಾಗಿರುವವರಿಗೆ ಆಶ್ರಮಾಂತರದಲ್ಲಿಯೇ ಇದ್ದುಕೊಂಡು ಸತ್ಯ, ಬ್ರಹ್ಮಚರ್ಯೆ, ಅಹಿಂಸೆ, ತಪಸ್ಸು - ಮುಂತಾದ ಸಾಧನಗಳಿಂದಲೇ ಈಶ್ವರನ ಅನುಗ್ರಹವುಂಟಾಗಿ ಜ್ಞಾನವುಂಟಾಗಬಹುದಾಗಿದೆ. ಇದಲ್ಲದೆ ಶ್ರವಣ, ಮನನ, ನಿದಿಧ್ಯಾಸನ - ಎಂಬಿವೇ ಜ್ಞಾನಕ್ಕೆ ಬೇಕಾದ ಸಾಕ್ಷಾತ್ಸಾಧನಗಳಾಗಿರುತ್ತವೆ (೮೦ರಿಂದ ೮೫) - ಎಂದು ಭಾಷ್ಯಕಾರರು ಪ್ರತಿ ಪಾದಿಸಿರುತ್ತಾರೆ.

ಕರ್ಮಕಾಂಡದಲ್ಲಿ ಅಲ್ಲಲ್ಲಿ ಜ್ಞಾನವಾಕ್ಯಗಳೂ ಕಾಣುವದುಂಟು ; ಜ್ಞಾನಕಾಂಡದಲ್ಲಿ ಕರ್ಮಗಳೂ ವಿಹಿತವಾಗಿರುವದು ಕಾಣುತ್ತದೆ. ಆದರೆ ಕರ್ಮಕಾಂಡದಲ್ಲಿರುವ ಜ್ಞಾನವು ಕರ್ಮಕ್ಕೆ ಅಂಗವಾಗಿರುತ್ತದೆ ; ಜ್ಞಾನಕಾಂಡದಲ್ಲಿರುವ ಕರ್ಮಗಳೂ ಜ್ಞಾನಾರ್ಥ ವಾಗಿರುತ್ತವೆ. ಕರ್ಮವು ಚಿತ್ತಶುದ್ಧಿಗಾಗಿ ಉಪಯುಕ್ತವಾಗಿ ಜ್ಞಾನಕ್ಕೆ ಹೇತುವಾಗಿರುತ್ತದೆ. ಅದು ಅವಿದ್ಯೆಯಿಂದಾಗಿರುವ ಕಾಮವನ್ನು ಮೂಲವಾಗಿಟ್ಟುಕೊಂಡೇ ಹೊರಟಿರುವದರಿಂದ ಅವಿದ್ಯೆಯನ್ನು ಆತ್ಯಂತಿಕವಾಗಿ ನಾಶಪಡಿಸುವ ಜ್ಞಾನವು ಜ್ಞಾನಕಾಂಡದಲ್ಲಿ ಮಾತ್ರವೇ ಸಿಕ್ಕುತ್ತದೆ ಎಂಬುದನ್ನು ಆಚಾರ್ಯರು ಈ ಉಪನಿಷತ್ತಿನ ಭಾಷ್ಯದಲ್ಲಿ ಸ್ಪಷ್ಟಪಡಿಸಿ ಜ್ಞಾನಕರ್ಮಸಮುಚ್ಚಯವಾದಿಗಳ ಭ್ರಾಂತಿಯನ್ನು ತೊಲಗಿಸಿರುತ್ತಾರೆ (ಭಾ.ಭಾ. ೧, ೨, ೩೦, ೫೪, ೫೯, ೯೦).

(೨) ಪರಾಪರಬ್ರಹ್ಮಪ್ರಾಪ್ತಿಗಳ ತಾರತಮ್ಯ

ಸರ್ವರಿಗೂ ಆತ್ಮವಾಗಿರುವ ಒಂದೇ ಬ್ರಹ್ಮವೇ ಅಪರಬ್ರಹ್ಮ. ಕಾರ್ಯಬ್ರಹ್ಮ, ಸೋಪಾಧಿಕಬ್ರಹ್ಮ - ಎಂಬ ಹೆಸರಿನ ಹಿರಣ್ಯಗರ್ಭನೆಂದೂ (೧೪, ೫೦, ೭೬, ೯೦) ಪರಬ್ರಹ್ಮ, ಕಾರಣಬ್ರಹ್ಮ, ನಿರುಪಾಧಿಕಬ್ರಹ್ಮ - ಎಂಬ ಬ್ರಹ್ಮವೆಂದೂ (೫೦, ೭೬, ೯೦) ಎರಡು ಬಗೆಯಾಗಿರುತ್ತದೆ. ಅಪರಬ್ರಹ್ಮವನ್ನು ಪಾಜ್ಞರೂಪದಿಂದ, 'ಮಹಃ' ಎಂಬ ವ್ಯಾಹೃತಿಯ ಮೂಲಕವಾಗಿ, ಓಂಕಾರದ ಮೂಲಕವಾಗಿ - ಹೀಗೆ ಬಗೆಬಗೆಯಿಂದ ಉಪಾಸಿಸಿಮಾಡುವರು ; ಇದೇ ಅಪರಬ್ರಹ್ಮವಿದ್ಯೆ, ಬ್ರಹ್ಮವನ್ನು ಹೃದಯ ಪುಂಡರೀಕದಲ್ಲಿ ಇಂಥಿಂಥ ಗುಣಗಳುಳ್ಳದ್ದೆಂದು, ಉಪಾಸನೆಮಾಡಿ ಸಾಕ್ಷಾತ್ಕಾರ ಮಾಡಿಕೊಂಡರೆ, ಸುಷುಮ್ನಾನಾಡಿಯ ಮೂಲಕವಾಗಿ ಶರೀರವನ್ನು ಬಿಟ್ಟು, ಹೊರಟು ಹಿರಣ್ಯಗರ್ಭನ ಸಾಯುಜ್ಯವನ್ನು ಪಡೆಯುತ್ತಾನೆ. ಆ ಸಾಯುಜ್ಯವನ್ನು ಪಡೆದವನಿಗೆ ಐಶ್ವರ್ಯವು - ಎಂದರೆ ಧರ್ಮಜ್ಞಾನಸ್ವಾತಂತ್ರ್ಯಾದಿಗಳು ಲಭಿಸುವದು ಫಲವು (೪೦ರಿಂದ ೪೫, ೧೪೧). ಅವನು ಸರ್ವಕಾಮಗಳನ್ನೂ ಪಡೆಯುವನು. ಅಪರಬ್ರಹ್ಮ ವಿದ್ಯೆಯನ್ನು ಕ್ರಮಕ್ರಮವಾಗಿ ವಿವರಿಸುವದೇ ಶಿಕ್ಷಾವಲ್ಲಿಯ ಮುಖ್ಯೋದ್ದೇಶವು.

ಆದರೆ ಪರಬ್ರಹ್ಮವನ್ನು ಪಡೆದುಕೊಂಡವನಿಗೆ ಪರಮಪುರುಷಾರ್ಥವೇ ದೊರಕುವದು. ಪರಬ್ರಹ್ಮಪ್ರಾಪ್ತಿ ಎಂದರೆ ಅಜ್ಞಾನದಿಂದ ಅಪ್ರಾಪ್ತವಾದಂತೆ ಇದ್ದ ತನ್ನ ಆತ್ಮನೇ ಎಗಿರುವ ಸರ್ವಾಧಾರವಾದ ಸತ್ಯಜ್ಞಾನಾನಂತರೂಪವಾದ ಪರಮಾನಂದವನ್ನು ಅನಾತ್ಮ ವಿಷಯಗಳಿಂದ ಹಿಂತಿರುಗಿ ನಾನೇ ಎಲ್ಲರ ಆತ್ಮನು ಎಂದು ಇಲ್ಲಿಯೇ ಅಂತಃಕರಣಸಾಕ್ಷಿಯ ರೂಪದಿಂದಲೇ ಅರಿತುಕೊಳ್ಳುವದು (೯೦ ರಿಂದ ೧೧೩, ೨೧೩, ೨೨೦). ಈ ಆತ್ಮನನ್ನು ವಿಷಯವಾಗಿ ಅರಿತುಕೊಳ್ಳಬೇಕೆಂದೇನೂ ಅರ್ಥವಲ್ಲ ; ತಾನು ಅದ್ವಿತೀಯನು, ಜ್ಞಾತೃಜ್ಞಾನಜ್ಞೇಯವಿಭಾಗಶೂನ್ಯನು - ಎಂಬ ಅನುಭವವನ್ನು ಅಂತಃಕರಣದಲ್ಲಿ ಪಡೆದುಕೊಳ್ಳುವದೇ ಪ್ರಾಪ್ತಿ (೯೯, ೧೦೦). ಈ ಆತ್ಮಜ್ಞಾನವನ್ನುಂಟುಮಾಡುವದಕ್ಕೆಂದೇ ಶ್ರುತಿಯಲ್ಲಿ ಬ್ರಹ್ಮವು ತಾನು ಬಹುವಾಗಿ ಆಕಾಶಾದಿಜಗತ್ತನ್ನು ಸೃಷ್ಟಿಮಾಡಿ ಅದರೊಳಗೆ ಹೊಕ್ಕಿತೆಂದೂ ಜ್ಞಾನಿಗಳು ಅದರ ಸ್ವರೂಪವನ್ನು ಪಡೆದುಕೊಂಡು ಆನಂದಿಗಳಾಗಿ ಅಭಯದಿಂದ ತಮ್ಮ ಪರಮಾರ್ಥ ಸ್ವರೂಪದಲ್ಲಿ ನೆಲೆನಿಲ್ಲುವರೆಂದೂ ವರ್ಣಿಸಿದೆ (೨೦೯, ೨೨೧). ಅಪರಬ್ರಹ್ಮವನ್ನು ಸೇರುವವನು ಸರ್ವಕಾಮಗಳನ್ನೂ ಒಂದೊಂದಾಗಿ ಪಡೆದುಕೊಳ್ಳುತ್ತಾನೆ ; ಆದರೆ ಪರಬ್ರಹ್ಮವನ್ನು ಅರಿತುಕೊಂಡವನು ಎಲ್ಲಾ ಕರ್ಮಗಳನ್ನೂ ಎಲ್ಲಾ ಕಾಮಗಳನ್ನೂ ಬ್ರಹ್ಮರೂಪವಾಗಿಯೇ ಮಾಡಿಕೊಳ್ಳುವದರಿಂದ ಅವನು ಬ್ರಹ್ಮರೂಪದಿಂದಲೇ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಅನುಭವಿಸುವನು (೯೨, ೧೦೯, ೨೨೬). ಅಪರಬ್ರಹ್ಮವನ್ನು ಪಡೆಯುವವನಿಗೆ ತಾನು ಇಚ್ಛಿಸಿದ ರೂಪವೂ ಇಚ್ಛಿಸಿದ

ಭೋಗವೂ ಸಿಕ್ಕುವವು ; ಅವನು ಯಾವ ಲೋಕವನ್ನು ಬೇಕಾದರೂ ಸಂಕಲ್ಪಮಾತ್ರದಿಂದ ಪಡೆದುಕೊಳ್ಳಬಹುದು. ಇಂಥ ಐಶ್ವರ್ಯವು ಅವನಿಗೆ ಉಪಾಸನೆಯ ಫಲವಾಗಿ ದೊರಕುತ್ತದೆ. ಆದರೆ ಪರಬ್ರಹ್ಮಜ್ಞಾನಿಯು ಅಪರಬ್ರಹ್ಮವನ್ನು ಪಡೆದುಕೊಂಡವನಿಗೂ ಆತ್ಮನಾಗಿರುವದರಿಂದ ಅವನ ಭೋಗವೂ ಇವನದೇ ಆಗಿರುತ್ತದೆ (೨೫೮). ಭೋಕ್ತೃ, ಭೋಗ್ಯ, ಭೋಗ - ಎಂಬ ವಿಭಾಗವು ಅವಿದ್ಯೆಯಿಂದಾಗಿರುವದಾದ್ದರಿಂದ ಇಂಥ ಜ್ಞಾನಿಯು ಅದೆಲ್ಲವೂ ತಾನೇ ಆಗಿರುವೆನೆಂದೂ ತನಗಿಂತ ವ್ಯತಿರಿಕ್ತವಾದ ಭೋಗ್ಯಾದಿಗಳು ಇಲ್ಲವೆಂದೂ ತಿಳಿದಿರುತ್ತಾನೆ (೨೫೭, ೨೬೨, ೨೬೩). ಉಪಾಸಕರು ಆನ್ಯದೃಷ್ಟಿಯಿಂದ ಉಪಾಸನೆಮಾಡುವ ಪ್ರಾಣಾದಿಗಳೂ ವಾಕ್ಕು, ವೃಷ್ಟಿ - ಮುಂತಾದವುಗಳಲ್ಲಿ ಕ್ಷೇಮ, ತೃಪ್ತಿ - ಮುಂತಾದ ರೂಪದಿಂದ ಬ್ರಹ್ಮವು ನೆಲಸಿರುವದೆಂದು ಮಾಡುವದರಿಂದ ದೊರೆಯುವ ಫಲಗಳೂ ಬ್ರಹ್ಮವೇ ಆಗಿರುವದರಿಂದ ಬ್ರಹ್ಮಾಭಿನ್ನವಾದ ಜ್ಞಾನಿಯನ್ನೇ ನಿಜವಾಗಿ ಅವರೆಲ್ಲರೂ ಉಪಾಸನೆಮಾಡುತ್ತಿರುವರು (೨೪೯ರಿಂದ ೨೫೧). ಬ್ರಹ್ಮವನ್ನು ಯಾವ ಯಾವ ದೃಷ್ಟಿಯಿಂದ ಉಪಾಸನೆ ಮಾಡುವರೋ ಅಂಥಂಥ ಫಲಗಳು ದೊರಕುವವು (೨೫೧). ಆದರೆ ಬ್ರಹ್ಮವೆಂದೇ ಅದನ್ನು ಅರಿತುಕೊಂಡವನಿಗೆ ಕ್ರಿಯಕಾರಕಫಲರೂಪವಾದ ಯಾವ ಸಂಸಾರವೂ ಇರುವದಿಲ್ಲ, ಅವನು ಬ್ರಹ್ಮವೇ ಆಗಿರುತ್ತಾನೆ (೨೫೨ ರಿಂದ ೨೫೪).

(೩) ಸದ್ಯೋಮುಕ್ತಿ

ಪರಬ್ರಹ್ಮವನ್ನು ಹೃದಯದಲ್ಲಿರುವ ಬುದ್ಧಿಗೆ ಸಾಕ್ಷಿಯಾಗಿ ಅರಿತುಕೊಳ್ಳುವದೇ ಅದರ ಪ್ರಾಪ್ತಿಯು, ಅದೇ ಪರಮಪುರುಷಾರ್ಥವು. ಬ್ರಹ್ಮವು ನಮ್ಮ ಸ್ವರೂಪವೇ ಎಂದು ಅರಿಯದೆ ಅನಾತ್ಮಗಳಾದ ಪಂಚಕೋಶಗಳನ್ನೇ ನಾವೆಂದು ಭಾವಿಸಿರುವ ಅವಿದ್ಯೆಯಿಂದ ಅದು ಅಪ್ರಾಪ್ತವಾಗಿರುವದು. ಅದರ ನಿಜವನ್ನು ಅರಿತುಕೊಂಡ ಕೂಡಲೆ ಅದು ದೊರೆಯುವದು (೯೩). ಬ್ರಹ್ಮವು ನಮ್ಮ ತೀರ ಒಳಗಿನ ಆತ್ಮನಾಗಿರುತ್ತದೆ. ಅದನ್ನು ಅರಿತುಕೊಳ್ಳುವದಕ್ಕಾಗಿ ಅನ್ನಮಯವೇ ಮುಂತಾದ ಪಂಚಕೋಶಗಳನ್ನು ಒಂದೊಂದಾಗಿ ಅರಿತುಕೊಳ್ಳುತ್ತಾಹೋಗಬೇಕು (೧೧೭). ನಮ್ಮ ಅನ್ನಮಯದೇಹವು ಸ್ಥೂಲವಾಗಿರುವ ವಿರಾಟ್ಪುರುಷನ ಉಪಾಧಿಯಾದ ಸಮಷ್ಟಿ ಶರೀರದಲ್ಲಿ ಅಡಕವಾಗಿದೆ. ಪ್ರಾಣವು ಸೂತ್ರಾತ್ಮನಲ್ಲಿ, ಮನಸ್ಸು ಮತ್ತು ವಿಜ್ಞಾನಗಳು ಹಿರಣ್ಯಗರ್ಭನ ಜ್ಞಾತೃತ್ವಕರ್ತೃತ್ವಗಳಲ್ಲಿ ಅಡಕವಾಗಿರುತ್ತವೆ ; ನಮ್ಮ ಭೋಕ್ತೃತ್ವದ ಸುಖವು ಹಿರಣ್ಯಗರ್ಭನ ಆನಂದದಲ್ಲಿ ಅಡಕವಾಗಿರುತ್ತದೆ. ಅನ್ನಮಯನಿಂದ ಹಿಡಿದು ಪ್ರಾಣಮಯ, ಮನೋಮಯ, ವಿಜ್ಞಾನ ಮಯ, ಆನಂದಮಯ - ಎಂಬ ಪಂಚಕೋಶಗಳನ್ನು ಅರಿತುಕೊಳ್ಳುತ್ತಾ ಹೋದಂತೆ ಒಳಗೊಳಗೆ ಹೊಕ್ಕು ಕೊನೆಗೆ ಆನಂದಮಯನಿಗೂ ಆತ್ಮನಾಗಿರುವ ಆನಂದಸ್ವರೂಪವಾದ ನಮ್ಮ ನಿಜವಾದ ಆತ್ಮನಾದ ಬ್ರಹ್ಮದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಹುದು (೧೪೯).

ಆನಂದಮಯನಾದ ಆತ್ಮನೇ ನಮಗೆ ತೀರ ಒಳಗಿರುವಂತೆ ತೋರಿದರೂ ಅವನು ಪರ ಮಾತ್ಮನೆಲ್ಲ (೧೪೫, ೧೪೬). ಆನಂದವೇ ನಿಜವಾದ ಆತ್ಮನು (೧೪೮) ; ಈ ಆನಂದವು ವಿಷಯವಿಷಯಿಗಳ ಸಂಬಂಧದಿಂದ ಹುಟ್ಟುವದಲ್ಲ ; ಮನುಷ್ಯರಿಂದ ಹಿಡಿದು ಹಿರಣ್ಯಗರ್ಭನವರೆಗೆ ತೋರುವ ಆನಂದದ ಉತ್ಕರ್ಷವೆಲ್ಲ ಉಪಾಧಿತಾರ ತಮ್ಯದಿಂದ ಆಗಿರುವದೇ ಹೊರತು ಸ್ವತಃ ಅದರಲ್ಲಿ ಯಾವ ತಾರತಮ್ಯವೂ ಇಲ್ಲ (೧೯೯ ರಿಂದ ೨೦೬). ಅದರಲ್ಲಿ ಯಾವ ವಿಶೇಷವೂ ಇರುವದಿಲ್ಲ (೧೯೧), ಅದನ್ನು ಯಾವ ಮಾತಿನಿಂದ ಲಾದರೂ ತಿಳಿಸುವದಕ್ಕಾಗಲಿ, ಯಾವ ಪ್ರತ್ಯಯದಿಂದಲಾದರೂ ವಿಷಯೀಕರಿಸುವದಕ್ಕಾಗಲಿ ಆಗುವಹಾಗಿಲ್ಲ (೨೨೨, ೨೨೩). ಅದು ಸತ್ಯ, ಜ್ಞಾನ, ಅನಂತ - ಎಂದು ಹೇಳುವದೂ ಆ ಶಬ್ದಪ್ರತ್ಯಯಗಳಿಗೆ ಅದು ವಿಷಯವೆಂಬ ಅಭಿಪ್ರಾಯದಿಂದ ಅಲ್ಲ ; ಆ ಶಬ್ದಗಳಿಗೆ ಅದು ಬರಿಯ ಲಕ್ಷ್ಯಾರ್ಥವು (೧೦೭). ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಸತ್ಯಜ್ಞಾನಾನಂತವೆಂದು ನಾವು ನಮ್ಮ ಲ್ಲಿಯೇ ಕಂಡುಕೊಳ್ಳುವದಕ್ಕೆ ಆಗುತ್ತದೆ. (೧೧೪, ೨೨೨). ಹೀಗೆ ಕಂಡುಕೊಳ್ಳುವದೆಂಬುದೂ ಅವಿದ್ಯೆಯನ್ನು ತೊಲಗಿಸಿಕೊಳ್ಳುವದರಿಂದ ಮಾತ್ರವೇ (೨೨೦) ಆಗಿರುತ್ತದೆ.

(೪) ಸಂಸಾರವೆಲ್ಲವೂ ಅವಿದ್ಯಕ

ನಿರ್ವಿಶೇಷವಾದ ಈ ಬ್ರಹ್ಮವೇ ಮೊದಲು ಸೂಕ್ಷ್ಮರೂಪದಿಂದ ಅವ್ಯಾಕೃತವಾಗಿದ್ದು ಬಳಿಕ ಮೂರ್ತಾಮೂರ್ತಗಳ ರೂಪದಿಂದ ವ್ಯಾಕೃತವಾಗಿರುವಂತೆ ಅವಿದ್ಯೆಯಿಂದ ತೋರುತ್ತಿರುವದು. ಶರೀರದಲ್ಲಿ ಜೀವರೂಪದಿಂದ ಒಳಹೊಕ್ಕು ನೋಡುವದು, ಕೇಳುವದು, ಯೋಚಿಸುವದು, ಅರಿತುಕೊಳ್ಳುವದು, ಮುಂತಾದ - ಸಂಸಾರಧರ್ಮದಿಂದ ಕೂಡಿಕೊಂಡಿರುವಂತೆಯೂ ತೋರುತ್ತಿರುವದು (೧೬೫ ರಿಂದ ೧೮೨). ವ್ಯಾಕೃತಾವ್ಯಾಕೃತ ವಾದ ನಾಮರೂಪಗಳೆಂಬ ಉಪಾಧಿಗಳು ಆತ್ಮನಾದ ಈ ಬ್ರಹ್ಮವನ್ನು ಬಿಟ್ಟು ಎಂದಿಗೂ ಇರಲಾರವು. ಬ್ರಹ್ಮವೇ ಅವುಗಳ ತಿರುಳು (೧೬೬). ಆದ್ದರಿಂದ ಅನ್ನಮಯಾದಿಪಂಚ ಕೋಶಗಳೂ ಅವಿದ್ಯಾಕೃತವಾಗಿರುತ್ತವೆ (೧೨೨, ೧೩೭). ಆದ್ದರಿಂದ ಮಿಥ್ಯಾಕಲ್ಪಿತವಾದ (೧೩೭) ಈ ಕೋಶಗಳ ಧರ್ಮವನ್ನು ಆತ್ಮನು ಯಾವಾಗಲೂ ಮೀರಿರುತ್ತಾನೆ. ಬ್ರಹ್ಮವನ್ನು ಅರಿತವನಿಗೆ ಈ ದ್ವೈತವು ಸತ್ಯವಾಗಿ ತೋರುವದೇ ಇಲ್ಲ. ಆದ್ದರಿಂದಲೇ ಶ್ರುತಿಯು ಬ್ರಹ್ಮವನ್ನು ಅರಿತುಕೊಳ್ಳಬೇಕೆಂದು ಉಪದೇಶಿಸುತ್ತದೆ ; ಅರಿತಮೇಲೆ ಮಾಡಬೇಕಾದ ಸಾಧನವನ್ನು ಯಾವದನ್ನೂ ಉಪದೇಶಿಸುವದಿಲ್ಲ (೨೧೩).

ದ್ವೈತವು ಪರಮಾರ್ಥವಲ್ಲ ಎಂಬುದು ಸುಷುಪ್ತಿಯ ಅನುಭವದಿಂದ ಸಿದ್ಧ ವಾಗುತ್ತದೆ. ಎಚ್ಚರಕನಸುಗಳಲ್ಲಿ ಮಾತ್ರ ದ್ವೈತವು ಕಾಣುವದರಿಂದಲೂ ತನಿನಿದ್ರೆ ಯಲ್ಲಿಯೂ ಸಮಾಧಿಯಲ್ಲಿಯೂ ಕಾಣಿಸದೆ ಇರುವದರಿಂದಲೂ ಅದು ಪರಮಾರ್ಥ,

ವಲ್ಲವೆಂದೂ ಸ್ಪಷ್ಟವಾಗುತ್ತದೆ. ಸುಷುಪ್ತಿಯು ಸ್ವಾಭಾವಿಕವಾದ ಅವಸ್ಥೆ ; ಎಚ್ಚರಕನಸು ಗಳಲ್ಲಿ ಆತ್ಮನಿಗೆ ವಿಶೇಷವಾದ ಅನುಭವವಾಗುತ್ತಿರುವದರಿಂದಲೂ ಆ ಅನುಭವಕ್ಕೆ ಕಾರಕಗಳ ಅಪೇಕ್ಷೆಯಿರುವದರಿಂದಲೂ ಅವು ಸ್ವಾಭಾವಿಕವಾದ ಅವಸ್ಥೆಗಳಲ್ಲ, ಅವಿದ್ಯಾಕೃತ ವಾಗಿರುತ್ತವೆ. ಆದ್ದರಿಂದ ದ್ವೈತವು ಅವಿದ್ಯಾಕೃತವೆಂದೂ ಆತ್ಮನು ಅದ್ವಿತೀಯನೆಂದೂ ಏರ್ಪಡುತ್ತದೆ (೨೧೩).

(೫) ವಿದ್ಯಾವಿದ್ಯೆಗಳು ಆತ್ಮನ ಧರ್ಮಗಳಲ್ಲ

ಅವಿದ್ಯೆಯಿಂದ ತೋರುವ ಸಂಸಾರವು ವಿದ್ಯೆಯಿಂದ ಅಪರಮಾರ್ಥವೆಂದು ತಿಳಿಯಬರುತ್ತದೆ - ಎಂದದ್ದರಿಂದ ವಿದ್ಯಾವಿದ್ಯೆಗಳೆಂಬ ವಿಶೇಷಗಳು ಆತ್ಮನಲ್ಲಿ ರುತ್ತವೆಯೆಂದು ತಿಳಿಯುವದಕ್ಕಿಲ್ಲ. ಏಕೆಂದರೆ ಅವಿದ್ಯೆಯೆಂದರೆ ಬ್ರಹ್ಮಸ್ವರೂಪವನ್ನು ಅರಿಯದೆ ಅನೃತವಾದ ಅನಾತ್ಮಗಳನ್ನು ತಾನೆಂದು ತಪ್ಪಾಗಿ ತಿಳಿದುಕೊಂಡಿರುವದು (೯೩) ; ವಿದ್ಯೆಯೆಂದರೆ ಬ್ರಹ್ಮಸ್ವರೂಪವು ಇಂಥದ್ದೆಂದು ಅರಿತುಕೊಳ್ಳುವದು. ಇವೆರಡೂ ಅಂತಃಕರಣದ ಧರ್ಮಗಳಾಗಿರುತ್ತವೆ (೨೧೮). ಅವು ಅನುಭವಕ್ಕೆ ವಿಷಯವಾಗಿರು ವದರಿಂದಲೂ ವಿದ್ಯೆಯ ಉಪದೇಶ, ಗ್ರಹಣ - ಇವುಗಳಿಂದ ಅವಿದ್ಯೆಯು ಹೋಗುವದ ರಿಂದಲೂ ಅವು ನಾಮರೂಪಪಕ್ಷಕ್ಕೇ ಸೇರಿದವುಗಳಾಗಿವೆ ; ನಾಮರೂಪಗಳು ಆತ್ಮನಲ್ಲಿ ಕಲ್ಪಿತವಾಗಿರುವವೇ ಹೊರತು ಪರಮಾರ್ಥವಲ್ಲವೆಂದು ಆಗಲೆ ತಿಳಿಸಿದ್ದೂ ಆಗಿದೆ. ಆದ್ದರಿಂದ ಆತ್ಮನಲ್ಲಿ ಕಲ್ಪಿತವಾಗಿದ್ದ ಅವಿದ್ಯಾನಾಶವೇ ಪರಮಪುರುಷಾರ್ಥವೆಂದು ಏರ್ಪಡುತ್ತದೆ (೨೨೦).

ಭಾಷ್ಯದ ವ್ಯಾಖ್ಯಾನಕಾರರು

ತೈತ್ತಿರೀಯಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವವರು ಆನಂದಗಿರಿಗಳೆಂದು ಪ್ರಸಿದ್ಧ ರಾಗಿರುತ್ತಾರೆ. ಇವರು 'ಶ್ರೀಮಚ್ಛಂಕರಭಗವತ್ಪಾದರ ಶಿಷ್ಯರು' ಎಂದು ಆನಂದಾಶ್ರಮದ ಮುದ್ರಿತಪುಸ್ತಕದಲ್ಲಿ ಅಚ್ಚಾಗಿರುವದು ಲೇಖಕರ ಭ್ರಾಂತಿಯಿಂದ ಎಂಬುದನ್ನು ಹೇಳ ಬೇಕಾಗಿಯೇ ಇಲ್ಲ. ಅದೇ ಪುಸ್ತಕದಲ್ಲಿ "ಶ್ರೀಮಚ್ಛುದ್ಧಾನಂದ ಭಗವತ್ಪೂಜ್ಯಪಾದಶಿಷ್ಯ ಶ್ರೀಮದ್ಭಗವದಾನಂದಜ್ಞಾನವಿರಚಿತಾಯಾಮ್" ಎಂದೂ ಬರೆದಿರುವದರಿಂದ ಇವರ ಹೆಸರು ನಿಜವಾಗಿ ಆನಂದಜ್ಞಾನರೆಂಬುದು ಸ್ಪಷ್ಟವಾಗಿರುತ್ತದೆ. ಪುಸ್ತಕದ ಕೈಪ್ರತಿಯನ್ನು ಬರೆದವರು, ಆನಂದಗಿರಿಗಳೆಂಬವರು ಶಂಕರಾಚಾರ್ಯರ ನೇರಾದ ಶಿಷ್ಯರೆಂಬ ಭ್ರಾಂತಿಗೆ ಪಕ್ಕಾಗಿ ಹೀಗೆ ಉಲ್ಲೇಖಿಸಿರುವರೆಂಬುದೂ ಸ್ಪಷ್ಟವಾಗುತ್ತದೆ.

ಈ ವ್ಯಾಖ್ಯಾನಕಾರರಾದ 'ಆನಂದಜ್ಞಾನರು' ಶಿಕ್ಷಾವಲ್ಲಿಯಲ್ಲಿ "ತತ್ತ್ವಲೋಕ", "ಪ್ರಕಟಾರ್ಥ" - ಎಂಬ ತಮ್ಮ ಗ್ರಂಥಗಳನ್ನು ಪರಾಮರ್ಶಿಸಿಕೊಂಡಿರುತ್ತಾರೆ. "ಸತ್ಯಂ

ಜ್ಞಾನಮನನ್ತಂ ಬ್ರಹ್ಮ" ಎಂಬ ಲಕ್ಷಣವಾಕ್ಯದ ವ್ಯಾಖ್ಯಾನದಲ್ಲಿ ಲಕ್ಷಣಲಕ್ಷಣವನ್ನು ವಿವರಿಸುವಾಗ ಶ್ರೀಹರ್ಷನ ಖಂಡನಗ್ರಂಥವನ್ನು ಪರಾಮರ್ಶಿಸಿರುತ್ತಾರೆ. "ಸುಷುಪ್ತಿಯಲ್ಲಿ ವಿಷಯವು ಕಾಣದಿರುವದರಿಂದ ಅಲ್ಲಿ ದ್ವೈತವು ಕಾಣದೆ ಇರುವದಕ್ಕೆ ಅನ್ಯಾಸಕ್ತಿಯು ಕಾರಣವಲ್ಲ" (೨೧೬) ಎಂಬ ಭಾಷ್ಯಕ್ಕೆ "ಅಲ್ಲಿರುವ ಅಜ್ಞಾನವು ಆತ್ಮನಿಗಿಂತ ಅತಿರಿಕ್ತವೆಂದು ನಿರ್ವಚನಮಾಡಿ ಹೇಳುವದಕ್ಕೆ ಬರುವಂತಿಲ್ಲವಾದ್ದರಿಂದ ತಾತ್ತ್ವಿಕ ದ್ವಿತೀಯವಸ್ತುವಿಲ್ಲ" ಎಂದು ಅನಿರ್ವಚನೀಯಾವಿದ್ಯಾವಾದವನ್ನು ಸೇರಿಸಿಕೊಂಡು ವ್ಯಾಖ್ಯಾನಮಾಡಿರುತ್ತಾರೆ. "ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ ; ಅನುಭವವೇದ್ಯವಾಗಿ ಅಂತಃಕರಣಧರ್ಮಗಳಾಗಿರುವದರಿಂದ ಅವು ನಾಮರೂಪಪಕ್ಷಕ್ಕೆ ಸೇರಿದವುಗಳೇ" ಎಂಬ (೨೧೮) ಭಾಷ್ಯಕ್ಕೆ "ಚಿನ್ಮಾತ್ರತಂತ್ರವಾದ ಅನಾದಿಯಾದ ಅನಿರ್ವಾಚ್ಯವಾದ ಅವಿದ್ಯೆಯು ಅಂತಃಕರಣವಾಗಿ ಪರಿಣಮಿಸುತ್ತದೆ. ಅದರಲ್ಲಿ ಪ್ರತಿಬಿಂಬಿಸಿದ ಚಿದ್ಧಾತುವು ತನ್ನ ಉಪಾಧಿಯ ಧರ್ಮದಿಂದಲೇ ಭ್ರಾಂತಿಯನ್ನು ಹೊಂದಿತೆಂದೂ ಸರಿಯಾಗಿ ಅರಿತುಕೊಂಡಿತೆಂದೂ ವ್ಯವಹರಿಸಲ್ಪಡುತ್ತದೆ. ಆದ್ದರಿಂದ ನಿಜವಾಗಿ ಅದರಲ್ಲಿ ವಿದ್ಯೆಯಾಗಲಿ ಅವಿದ್ಯೆಯಾಗಲಿ ಇರುವದಿಲ್ಲ" ಎಂದು ಈಚಿನ ವೇದಾಂತಿಗಳ ಅನಿರ್ವಚನೀಯಾವಿದ್ಯಾವಾದವನ್ನೂ ಸೇರಿಸಿಕೊಂಡು ವ್ಯಾಖ್ಯಾನಮಾಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ನಾನು ಈ ವ್ಯಾಖ್ಯಾನಕಾರರು ಭಾಷ್ಯಕ್ಕೆ ಕೊಟ್ಟಿರುವ ಅರ್ಥವನ್ನು ಸ್ವೀಕರಿಸುವಾಗ ಪೂರ್ವಾಪರ ಸಂದರ್ಭಗಳಿಗೂ ಭಾಷ್ಯಾಂತರಕ್ಕೂ ಹೋಲಿಸಿಯೇ ತೆಗೆದುಕೊಂಡಿರುತ್ತೇನೆ ಎಂದು ವಿಜ್ಞಾಪಿಸಿ ಈ ಪೀಠಿಕೆಯನ್ನು ಪೂರ್ಣಗೊಳಿಸುವೆವು.

– ಗ್ರಂಥಕರ್ತ

ವಿಷಯಾನುಕ್ರಮಣಿಕಾ

(ಕಂಸದಲ್ಲಿ ಕೊಟ್ಟಿರುವ ಸಂಖ್ಯೆಗಳು ಭಾಷ್ಯಭಾಗದವುಗಳು)

ಮಂಗಲ (ಶ್ಲೋಕಗಳು ೦-೩) - ಈ ಗ್ರಂಥದ ಸಂಬಂಧ (ಭಾ. ಭಾ. ೦-೨) - ಕರ್ಮಮಾತ್ರದಿಂದ ಮೋಕ್ಷವಾಗಲಾರದು (೩) - ಕರ್ಮಜ್ಞಾನಸಮುಚ್ಚಯದಿಂದಲೂ ಮೋಕ್ಷವುಂಟಾಗಲಾರದು (೯) - ಉಪನಿಷತ್ಪ್ರಾರಂಭಸಮರ್ಥನದ ಉಪಸಂಹಾರ (೧೦) - ಉಪನಿಷತ್ತೆಂದರೆ ಏನು ? (೧೨) ಪುಟ ೦-೧೧

(ಅಪರಬ್ರಹ್ಮವಿದ್ಯೆ)

೧. **ಶಾಂತಿಪಾಠ** (೧೩) - ೨. **ಶೀಕ್ಷಾಧ್ಯಾಯ** (೧೫, ೧೬) - ೩. **ಸಂಹಿತೋಪಾಸನೆ** : ಕೀರ್ತಿ, ಬ್ರಹ್ಮವರ್ಚಸ್ಸು - ಇವುಗಳಿಗಾಗಿ ಪ್ರಾರ್ಥನೆ (೧೭) - ಸಂಹಿತೆಯ ಐದು ಉಪಾಸನೆಗಳು (೧೮) - ಸಂಹಿತೋಪಾಸನೆಗಳ ವಿವರ (೧೯) - ಉಪಾಸನೆಯ ಸ್ವರೂಪ (೨೦) - ೪. **ವಿವಿಧ ಜಪಹೋಮಗಳು** : ಅನುವಾಕದ ವಿಷಯ (೨೧) - ಮೇಧಾಕಾಮನಿಗೆ ಜಪ (೨೨) - ಶರೀರೇಂದ್ರಿಯಗಳ ಯೋಗ್ಯತಾಪ್ರಾಪ್ತಿಗಾಗಿ ಪ್ರಾರ್ಥನೆ (೨೩) - ಜ್ಞಾನಕ್ಕಾಗಿ ಪ್ರಾರ್ಥನೆ (೨೪) - ಶ್ರೀಕಾಮನಿಗೆ ಮಂತ್ರಗಳು (೨೫) - ಶಿಷ್ಯರಿಗಾಗಿ ಹೋಮಮಂತ್ರಗಳು (೨೬) - ಕೀರ್ತಿಗಾಗಿ ಹೋಮಮಂತ್ರಗಳು (೨೭) - ಓಂಕಾರಸಾಯುಜ್ಯಕ್ಕಾಗಿ ಪ್ರಾರ್ಥನೆ (೨೮) - ಬಹುಶಿಷ್ಯರಿಗಾಗಿ ಹೋಮ ಮತ್ತು ಪ್ರಾರ್ಥನೆ (೨೯) - ಶ್ರೀಕಾಮವೂ ಜ್ಞಾನಕ್ಕಾಗಿಯೇ (೩೦) - ೫. **ವ್ಯಾಹೃತ್ಯಾತ್ಮಕಬ್ರಹ್ಮದ ಉಪಾಸನೆ** : ಅನುವಾಕದ ವಿಷಯ (೩೧) - ವ್ಯಾಹೃತಿಗಳ ಸ್ವರೂಪ (೩೨) - ಮಹಃ ಎಂಬ ವ್ಯಾಹೃತಿ (೩೩) - ವ್ಯಾಹೃತಿಗಳು ಒಂದೊಂದೂ ನಾಲ್ಕು ಬಗೆ (೩೪) - ಐದು ಆರನೆಯ ಅನುವಾಕಗಳಲ್ಲಿ ಒಂದೇ ಉಪಾಸನೆಯನ್ನು ಹೇಳಿದೆ (೩೭) - ಅಂಗೋಪಾಸನೆಯ ಫಲ (೩೮) ೬. **ಮಹಃ ಎಂಬ ವ್ಯಾಹೃತಿರೂಪವಾದ ಬ್ರಹ್ಮದ ಉಪಾಸನೆ** : ಸಂಬಂಧ (೩೯) - ಹೃದಯಾಕಾಶದಲ್ಲಿರುವ ಬ್ರಹ್ಮ (೪೦) - ಬ್ರಹ್ಮಪ್ರಾಪ್ತಿಗೆ ದಾರಿ (೪೧) - ಉಪಾಸನೆಯ ಫಲ (೪೩) - ವ್ಯಾಹೃತ್ಯಾತ್ಮನ ರೂಪಕಲ್ಪನೆ (೪೪) - ಉಪಾಸನೆಯನ್ನು ಮಾಡಬೇಕೆಂಬ ಉಪದೇಶ (೪೫) ೭. **ಬ್ರಹ್ಮದ ಪಾಙ್ಕ್ತೋಪಾಸನೆ** : ಅನುವಾಕದ ವಿಷಯ (೪೬) - ಹೊರಗಿನ ಪಾಙ್ಕ್ತತ್ರಯ (೪೭) - ಒಳಗಿನ ಪಾಙ್ಕ್ತತ್ರಯ (೪೮) - ಪಾಙ್ಕ್ತೋಪಾಸನೆಯೂ ಅದರ ಫಲವೂ (೪೯) ೮. **ಓಂಕಾರದ ಉಪಾಸನೆ** : ಅನುವಾಕದ ವಿಷಯ (೫೦) - ಓಂಕಾರೋಪಾಸನೆಯ ವಿಧಿ (೫೧) - ಓಂಕಾರದ ಸ್ತುತಿ (೫೨) - ೯. **ಕರ್ಮಗಳಿಗೆ ಆನರ್ಥಕ್ಯ ಪರಿಹಾರ** : ಅನುವಾಕದ ವಿಷಯ (೫೩) - ಮುಮುಕ್ಷುವು ಮಾಡಬೇಕಾದ ಕರ್ಮಗಳು (೫೪) - ಮುಮುಕ್ಷುವಿನ ಕರ್ಮಗಳಲ್ಲಿ ಮುಖ್ಯವಾದವುಗಳು (೫೫)

೧೦. ತ್ರಿಶಂಕುವಿನ ಆರ್ಷದರ್ಶನ : ಅನುವಾಕದ ವಿಷಯ (೫೬) - ಮಂತ್ರವು ಜ್ಞಾನವನ್ನು ಹೊರಪಡಿಸುವುದು (೫೭) - ಕರ್ಮವು ಜ್ಞಾನಕ್ಕೆ ಕಾರಣ (೫೮) ೧೧. ಕರ್ಮಗಳನ್ನು ಅವಶ್ಯವಾಗಿ ಮಾಡಬೇಕು : ಅನುವಾಕದ ವಿಷಯ (೫೯) - ಕರ್ಮವನ್ನು ಎರಡು ಸಲ ಉಪದೇಶಿಸಿರುವುದರ ಉದ್ದೇಶ (೬೦) - ಸತ್ಯಾದಿಗಳನ್ನು ಅನುಷ್ಠಾನಮಾಡ ಬೇಕು (೬೨) - ದೊಡ್ಡವರ ವಿಷಯದಲ್ಲಿ ವರ್ತನೆ (೬೪) - ದಾನವನ್ನು ಅವಶ್ಯವಾಗಿ ಮಾಡಬೇಕು (೬೫) - ಕರ್ಮವಿಷಯದ ಸಂದೇಹಗಳನ್ನು ಬಗೆಹರಿಸಿಕೊಳ್ಳುವ ಬಗೆ (೬೬) - ಮಾತುಹೊತ್ತಿರುವರಲ್ಲಿ ಸಂವ್ಯವಹಾರವು ಹೇಗಿರಬೇಕು ? (೬೭) - ಉಪಸಂಹಾರ (೬೮). ಪುಟ ೧-೪೪

ಶೀಕ್ಷಾವಲ್ಲಿಯ ಉಪಸಂಹಾರಭಾಷ್ಯ

ವಿಚಾರಣೀಯ ವಿಷಯ (೬೯) - ಬರಿಯ ಕರ್ಮಗಳಿಂದ ಮೋಕ್ಷವಿಲ್ಲ (೭೦) - ಜ್ಞಾನಾಪೇಕ್ಷಕರ್ಮದಿಂದಲೂ ಮೋಕ್ಷವಿಲ್ಲ (೭೩) - ಜ್ಞಾನ ಕರ್ಮಗಳ ಸಮಸಮುಚ್ಚಯ-ದಿಂದಲೂ ಮೋಕ್ಷವಿಲ್ಲ (೭೪) - ಜ್ಞಾನಕರ್ಮಗಳ ಸಮುಚ್ಚಯವು ಆಗುವಂತಿಲ್ಲ (೭೭) - ಆತ್ಮೈಕತ್ವವನ್ನು ತಿಳಿಸುವುದಾದರೆ ಶ್ರುತಿಗೆ ಅಪ್ರಾಮಾಣ್ಯವೇನೂ ಇಲ್ಲ (೭೮) - ಜ್ಞಾನವು ಕರ್ಮದ ಹಂಗಿಲ್ಲದೆ ಮುಕ್ತಿಯನ್ನು ಕೊಡುತ್ತದೆ (೮೦) - ಕರ್ಮಗಳು ವಿದ್ಯೋತ್ಪತ್ತಿಗೆ ಕಾರಣ (೮೧) - ಜ್ಞಾನವುಂಟಾಗುವುದಕ್ಕೆ ಗಾರ್ಹಸ್ಥ್ಯಕರ್ಮವೇ ಬೇಕೆಂಬುದಿಲ್ಲ (೮೨) - ಶ್ರುತಿಯಲ್ಲಿ ಬಹಳವಾಗಿ ಕರ್ಮವನ್ನು ಹೇಳಿರುವುದೇಕೆ ? (೮೩) - ಶ್ರವಣಾದಿಗಳು ವಿದ್ಯೆಗೆ ಸಾಕ್ಷಾತ್ಸಾಧನ (೮೫) - ೧೫. ಶಾಂತಿಪಾಠ. ಪುಟ ೮೫ - ೧೦೯

ಆನಂದವಲ್ಲಿ

(ಪರಬ್ರಹ್ಮವಿದ್ಯೆ)

ಅವತರಣಿಕೆ (೮೭) ಶಾಂತಿಪಾಠ (೮೮) ೧. ಬ್ರಹ್ಮವಿದ್ಯೆಯ ಸಾರ : ಈ ವಲ್ಲಿಯ ಸಂಬಂಧ (೯೦) - ಅವಿದ್ಯಾನಿವೃತ್ತಿಯೇ ಬ್ರಹ್ಮವಿದ್ಯೆಯ ಪ್ರಯೋಜನ (೯೧) - ಈ ವಲ್ಲಿಯ ಅರ್ಥದ ಸೂತ್ರವಾಕ್ಯ (೯೨) - ಬ್ರಹ್ಮದ ಪ್ರಾಪ್ತಿಯೆಂಬುದು ಗೌಣ (೯೩) - ಸೂತ್ರವಾಕ್ಯದ ವಿವರಣೆಯ ಹುಟ್ಟು ವಿಶಕ್ಕೆ ? (೯೪) - ಬ್ರಹ್ಮದ ಲಕ್ಷಣ (೯೫) - ಲಕ್ಷ್ಯಲಕ್ಷಣಭಾವದ ಸ್ವರೂಪ (೯೬) - ಸತ್ಯವೇ ಮುಂತಾದ ಪ್ರತಿಯೊಂದೂ ಬ್ರಹ್ಮದ ಲಕ್ಷಣ (೯೭) - ಸತ್ಯವೆಂಬ ವಿಶೇಷಣದ ಅರ್ಥ (೯೮) - ಜ್ಞಾನವೆಂಬುದರ ಅರ್ಥ (೯೯) - ಅನಂತವೆಂಬುದರ ಅರ್ಥ (೧೦೨) - ಬ್ರಹ್ಮವು ಶೂನ್ಯವಲ್ಲ (೧೦೩) - ಆತ್ಮನೇ ಬ್ರಹ್ಮವು (೧೦೫) - ಬ್ರಹ್ಮವು ಜ್ಞಾತೃವೂ ಅಲ್ಲ, ವೃತ್ತಿಜ್ಞಾನವೂ ಅಲ್ಲ (೧೦೬) - ಬ್ರಹ್ಮಸ್ವರೂಪವು ಶಬ್ದಕ್ಕೆ ನಿಲುಕದು (೧೦೭) - ಬ್ರಹ್ಮವನ್ನು ಹೇಗೆ ಅರಿತುಕೊಳ್ಳಬೇಕು ? (೧೦೮) - ಬ್ರಹ್ಮಜ್ಞಾನದ ಫಲ (೧೦೯) ೨. ಬ್ರಹ್ಮದ ಅನಂತತ್ವ : ಮುಂದಿನ ಗ್ರಂಥದ ಸಂಬಂಧ (೧೧೦) - ಬ್ರಹ್ಮವು ಅನಂತವೆಂಬುದು ಹೇಗೆ (೧೧೧) - ಸೃಷ್ಟಿಕ್ರಮ (೧೧೪) ೩. ಅನ್ನಮಯಾತ್ಮ : ಅನ್ನಮಯಾತ್ಮನ ವರ್ಣನೆ (೧೧೫) - ಅನ್ನಮಯಪ್ರಾಣಗಳಲ್ಲಿ ಪುರುಷನ ವಿಶೇಷ (೧೧೬) - ಅನ್ನಮಯಾತ್ಮನ ಮಹಿಮೆ (೧೧೮) ೪. ಪ್ರಾಣಮಯಾತ್ಮ : ಮುಂದಿನ ಗ್ರಂಥದ ಸಂಬಂಧ (೧೨೦) - ಪ್ರಾಣಮಯಾತ್ಮನ ವರ್ಣನೆ

(೧೬೩) - ಪ್ರಾಣಮಯಾತ್ಮನ ಅವಯವಗಳು (೧೬೪) - ಪ್ರಾಣಮಯನ ಮಹಿಮೆ (೧೬೫) - ಪ್ರಾಣಮಯಪ್ರಕರಣದ ಉಪಸಂಹಾರ (೧೩೦) ೫. ಮನೋಮಯಾತ್ಮ : ಮನೋಮಯಾತ್ಮನ ವರ್ಣನೆ (೧೩೧) - ಮನೋಮಯಾತ್ಮನ ಅವಯವಗಳು (೧೩೨) - ಮನೋಮಯಾತ್ಮನ ಮಹಿಮೆ (೧೩೬) - ಮನೋಮಯಾತ್ಮಪ್ರಕರಣದ ಉಪಸಂಹಾರ (೧೩೭) - ೬. ವಿಜ್ಞಾನಮಯಾತ್ಮ : ವಿಜ್ಞಾನಮಯಾತ್ಮನ ವರ್ಣನೆ (೧೩೮) - ವಿಜ್ಞಾನಮಯಾತ್ಮನ ಅವಯವಗಳು (೧೩೯) - ವಿಜ್ಞಾನಮಯಾತ್ಮನ ಮಹಿಮೆ (೧೪೦) - ವಿಜ್ಞಾನಮಯಾತ್ಮಪ್ರಕರಣದ ಉಪಸಂಹಾರ (೧೪೩) ೭. ಆನಂದಮಯಾತ್ಮ : ಆನಂದಮಯಾತ್ಮನ ವರ್ಣನೆ (೧೪೪) - ಆನಂದಮಯಾತ್ಮನು ಬ್ರಹ್ಮವಲ್ಲ (೧೪೫) - ಆನಂದಮಯನೆಂದರೆ ಯಾರು ? (೧೪೬) - ಆನಂದಮಯಾತ್ಮನ ಅವಯವಗಳು (೧೪೭) - ಬ್ರಹ್ಮದ ಅಸ್ತಿತ್ವ (೧೫೦) - ಆನಂದಮಯಾತ್ಮ ಪ್ರಕರಣದ ಉಪಸಂಹಾರ (೧೫೩) ೮. ಶಿಷ್ಯನ ಪ್ರಶ್ನೆಗಳು : ಪ್ರಶ್ನೆಗಳಿಗೆ ಕಾರಣ (೧೫೪) - ಪ್ರಶ್ನೆಗಳ ವಿಂಗಡ (೧೫೫) ೯. ಬ್ರಹ್ಮವು ಸೃಷ್ಟಿಕರ್ತವಾದ್ದರಿಂದ ಇದೆ : ಮುಂದಿನ ಗ್ರಂಥದ ಸಂಬಂಧ (೧೫೭) - ಬ್ರಹ್ಮವು ಜಗತ್ಕಾರಣವಾದ್ದರಿಂದ ಇದೆ (೧೫೯) - ಜಗತ್ತಿಗೆ ಅಸತ್ತು ಕಾರಣವಲ್ಲ (೧೬೧) - ಬ್ರಹ್ಮವು ಚೇತನ (೧೬೧) - ಬ್ರಹ್ಮವು ಕಾಮಕ್ಕೆ ವಶವಲ್ಲ (೧೬೨) - ಆತ್ಮನು ಬಹುವಾಗುವ ಬಗೆ (೧೬೫) - ಸೃಷ್ಟಿಗಾಗಿ ತಪಸ್ಸು (೧೬೭) - ಬ್ರಹ್ಮವು ಜಗತ್ತನ್ನು ಸೃಷ್ಟಿಸಿದ್ದು (೧೬೮) ೧೦. ಬ್ರಹ್ಮವು ಜೀವರೂಪದಿಂದ ಸೃಷ್ಟಿಯಲ್ಲಿ ಹೊಕ್ಕಿರುವದರಿಂದ ಇದೆ : ಪ್ರವೇಶಶ್ರುತಿಯ ವಿಷಯಕ್ಕೆ ಆಕ್ಷೇಪ (೧೭೦) - ಪ್ರವೇಶ ಶ್ರುತಿಯ ನಿಜವಾದ ಅರ್ಥ (೧೭೬) - ಉಪಸಂಹಾರ (೧೭೮) ೧೧. ಹೊರಗಿನ ಪದಾರ್ಥಗಳ ರೂಪದಲ್ಲಿರುವದರಿಂದ ಬ್ರಹ್ಮವು ಇದೆ : ಮೂರ್ತಾಮೂರ್ತಗಳು ಬ್ರಹ್ಮವೇ (೧೭೯) - ಚೇತನಾಚೇತನಗಳೂ ಸತ್ಯಾನೃತಗಳೂ ಬ್ರಹ್ಮವೇ (೧೮೦) - ಬ್ರಹ್ಮಕ್ಕೆ ಸತ್ಯವೆಂದು ಹೆಸರು (೧೮೧) - ಬ್ರಹ್ಮದ ಅಸ್ತಿತ್ವದ ಉಪಸಂಹಾರ (೧೮೨) ೧೨. ಸುಕೃತಪ್ರಸಿದ್ಧಿಯಿಂದ ಬ್ರಹ್ಮವು ಇದೆ : ಅವ್ಯಾಕೃತವು ವ್ಯಾಕೃತವಾಗಿರುತ್ತದೆ (೧೮೩) ೧೩. ಆನಂದಹೇತುವಾದ್ದರಿಂದ ಬ್ರಹ್ಮವು ಇದೆ (೧೮೫) - ೧೪. ಪ್ರಾಣಗಳ ಪ್ರವೃತ್ತಿಗೆ ಕಾರಣವಾಗಿರುವದರಿಂದ ಬ್ರಹ್ಮವು ಇದೆ (೧೮೭) - ೧೫. ಭಯಾಭಯಗಳಿಗೆ ಕಾರಣವಾಗಿರುವದರಿಂದ ಬ್ರಹ್ಮವು ಇದೆ ; ಜ್ಞಾನಿಗೆ ಅಭಯಕಾರಣವು ಬ್ರಹ್ಮ (೧೯೦) ಅಜ್ಞಾನಿಗೆ ಬಯಕಾರಣವು ಬ್ರಹ್ಮ (೧೯೨) - ಭಯಕಾರಣವಾದ ಬ್ರಹ್ಮ (೧೯೪) - ೧೬. ಬ್ರಹ್ಮದ ಆನಂದವು ಸ್ವಾಭಾವಿಕವಾದದ್ದು : ಆನಂದದ ವಿಷಯಕ್ಕೆ ವಿಚಾರ (೧೯೬) - ಲೌಕಿಕಾನಂದದಿಂದ ಪರಮಾನಂದವನ್ನು ಗೊತ್ತುಪಡಿಸಬಹುದು (೧೯೭) ಲೌಕಿಕಾನಂದದ ತಾರತಮ್ಯ (೧೯೮) - ಲೌಕಿಕಾ ನಂದದ ತಾರತಮ್ಯಕ್ಕೆ ಕಾರಣ (೧೯೯) - ಹಿರಣ್ಯಗರ್ಭನವರೆಗಿನ ಆನಂದಿಜೀವರುಗಳು (೨೦೧) - ಪರಮಾನಂದಕ್ಕೆ ಸಾಧನಗಳು (೨೦೨) - ಪರಮಾನಂದ (೨೦೩) - ಪರಮಾನಂದವು ಅದ್ವಿತೀಯವಾಗಿರುತ್ತದೆ (೨೦೫) ೧೭. ಬ್ರಹ್ಮಜ್ಞಾನದ ಫಲ : ಮುಂದಿನ ಗ್ರಂಥದ ಸಂಬಂಧ (೨೦೯) - ಬ್ರಹ್ಮವನ್ನು ಅರಿಯುವದೇ ಅದರ ಪ್ರಾಪ್ತಿ (೨೧೦) - ಸಂಕ್ರಮಣದ ವಿಷಯದಲ್ಲಿ ವಿಚಾರದ ಆವಶ್ಯಕತೆ (೨೧೧) - ಏಕತ್ವವೇ ಪರಮಾರ್ಥವು, ಅನೇಕತ್ವವು ಆವಿದ್ಯಕ (೨೧೨) - ಜ್ಞಾನಮಾತ್ರದಿಂದ ಆತ್ಮಪ್ರಾಪ್ತಿಯನ್ನು ಹೇಳಿರುವದರಿಂದ ಏಕತ್ವವೇ ಪರಮಾರ್ಥ (೨೧೩) - ಶ್ರುತಿಯಲ್ಲಿ ಏಕತ್ವವನ್ನು ಹೇಳಿದೆ (೨೧೪) - ಮುಕ್ತಿಯಲ್ಲಿ ಅಭಯಪ್ರಾಪ್ತಿಯು

ವಿಕತ್ವ ಪಕ್ಷಕ್ಕೇ ಹೊಂದುತ್ತದೆ (೨೧೫) - ಅದ್ವೈತವು ಅನುಭವಾರೂಢವಾಗಿದೆ (೨೧೬) - ದ್ವೈತಿಗಳಪಕ್ಷದಲ್ಲಿ ಉಭಯಪ್ರಾಪ್ತಿಯಿಲ್ಲ (೨೧೭) - ವಿದ್ಯಾವಿದ್ಯೆಗಳೂ ಆತ್ಮಧರ್ಮವಲ್ಲ (೨೧೮) - ಸಂಕ್ರಮಣವೆಂದರೆ ಜ್ಞಾನವೇ (೨೧೯). ೧೮. ನಿರ್ವಿಕಲ್ಪಾತ್ಮಜ್ಞಾನದ ಉಪಸಂಹಾರ : ನಿರ್ವಿಕಲ್ಪಾತ್ಮಜ್ಞಾನಕ್ಕೆ ಉಪಾಯ (೨೨೧) - ನಿರ್ವಿಕಲ್ಪಾತ್ಮಜ್ಞಾನದ ಫಲ (೨೨೨) - ಜ್ಞಾನಿಗೆ ಭಯನಿಮಿತ್ತವಿಲ್ಲವೆಂಬುದು ಹೇಗೆ ? (೨೨೪) - ೧೯. ಆನಂದವಲ್ಲಿಯ ಉಪಸಂಹಾರ (೨೨೭). ಪುಟ ೧೧೦-೨೭೦

ಭೃಗುವಲ್ಲಿ

(ಬ್ರಹ್ಮಜ್ಞಾನಕ್ಕೆ ಸಾಧನ, ಬ್ರಹ್ಮದ ಉಪಾಸನೆಗಳು)

ಈ ವಲ್ಲಿಯ ಸಂಬಂಧ (೨೨೮) - ೧. ಬ್ರಹ್ಮಜ್ಞಾನಕ್ಕೆ ಸಾಧನ : ಕಥೆಯ ಸಂಬಂಧ (೨೨೯) - ಬ್ರಹ್ಮಜ್ಞಾನಕ್ಕೆ ದ್ವಾರಗಳು (೨೩೦) - ಬ್ರಹ್ಮಲಕ್ಷಣ (೨೩೧) - ಬ್ರಹ್ಮವನ್ನು ಅರಿಯುವುದಕ್ಕೆ ತಪಸ್ಸು ಬೇಕು (೨೩೨). ೨. ಬ್ರಹ್ಮವಿಜ್ಞಾನಕ್ಕೆ ಮೆಟ್ಟಿಲುಗಳು : ಅನ್ನವು ಬ್ರಹ್ಮವೆಂಬ ಜ್ಞಾನ (೨೩೩) - ತಪಸ್ಸು ಕೊನೆಯವರೆಗೂ ಸಾಧನ (೨೩೪) - ಪ್ರಾಣವು ಬ್ರಹ್ಮವೆಂಬ ಜ್ಞಾನ. (ಅನು ೩) - ಭೃಗುವಿನ ತಪಸ್ಸು (ಅನು ೩) - ಮನಸ್ಸು ಬ್ರಹ್ಮವೆಂಬ ಜ್ಞಾನ (ಅನು ೪) - ಭೃಗುವಿನ ತಪಸ್ಸು (ಅನು ೪) - ವಿಜ್ಞಾನವು ಬ್ರಹ್ಮವೆಂಬ ಜ್ಞಾನ (ಅನು ೫) - ಭೃಗುವಿನ ತಪಸ್ಸು (ಅನು ೫) - ಆನಂದವು ಬ್ರಹ್ಮವೆಂಬ ಜ್ಞಾನ (ಅನು ೬). ೩. ಭೃಗುವರುಣರ ಸಂವಾದದ ಉಪಸಂಹಾರ : (೨೩೬) - ಅನ್ನವನ್ನು ನಿಂದಿಸಬಾರದು (೨೩೯). ೪. ಅನ್ನಾನ್ನಾದರ ಉಪಾಸನೆಗಳು : ಶರೀರಪ್ರಾಣಗಳೆಂಬ ಅನ್ನಾನ್ನಾದಗಳು (೨೪೦) - ಈ ಉಪಾಸನೆಯ ಫಲ (೨೪೧) - ಅನ್ನವನ್ನು ಬೇಡವೆನ್ನಬಾರದು (೨೪೨) - ಅಪ್ಪು ಜ್ಯೋತಿ ಎಂಬ ಅನ್ನಾನ್ನಾದಗಳು (೨೪೩) - ಅನ್ನವನ್ನು ಬಹುವಾಗಿ ಮಾಡಿಕೊಳ್ಳಬೇಕು (೨೪೪) - ಪೃಥಿವ್ಯಾಕಾಶಗಳೆಂಬ ಅನ್ನಾನ್ನಾದಗಳು (೨೪೪) - ಮಿತಿ ಇಲ್ಲವೆನ್ನಬಾರದು, ಹೆಚ್ಚು ಅನ್ನವನ್ನು ಸಂಗ್ರಹಿಸಬೇಕು (೨೪೫) - ಅನ್ನದಾನದ ಹೆಚ್ಚುಗಾರಿಕೆ (೨೪೬). ೫. ಬ್ರಹ್ಮದ ಬಗೆಬಗೆಯ ಉಪಾಸನೆಗಳು : ಆಧ್ಯಾತ್ಮಿಕವಾದ ಉಪಾಸನೆಗಳು (೨೪೮) - ಆಧಿದೈವಿಕವಾದ ಉಪಾಸನೆಗಳು (೨೫೦) - ಬ್ರಹ್ಮವು ದೇಸದೇಸೆಯ ಧರ್ಮಗಳುಳ್ಳದ್ದೆಂದು ಮಾಡುವ ಉಪಾಸನೆಗಳು (೨೫೧). ೬. ಜ್ಞಾನದಿಂದ ಪರಮಪುರುಷಾರ್ಥ : ಆತ್ಮನು ಎಂದೆಂದಿಗೂ ಅಸಂಸಾರಿಯೇ (೨೫೨) - ಜೀವನು ಪರಮಾತ್ಮನ ಕಾರ್ಯವಲ್ಲ (೨೫೩) - ಆತ್ಮನಲ್ಲಿ ಸಂಸಾರಿತ್ವವಿದೆ ಎಂಬುದು ಯುಕ್ತಿವಿರುದ್ಧ (೨೫೪) - ಆತ್ಮನು ಅದ್ವಿತೀಯವಾದ್ದರಿಂದ ಸಂಸಾರವು ನಿಜವಲ್ಲ (೨೫೫) - ಜ್ಞಾನಿಗೆ ಒಮ್ಮೆಗೇ ಸರ್ವಕಾಮಪ್ರಾಪ್ತಿ (೨೫೭) - ಜ್ಞಾನಿಯ ಸರ್ವಾತ್ಮಭಾವ (೨೫೮) - ಜ್ಞಾನಿಯ ಏಕತ್ವದ ಗಾನ (೨೫೯) - ಅನ್ನಾನ್ನಾದಗಳು ನಿಜವಾಗಿ ಬ್ರಹ್ಮವೇ (೨೬೨). ಪುಟ ೨೭೧ – ೩೦೭

ಉಪನಿಷತ್ತಿನ ಸಾರ ೩೨೨ – ೩೨೬

ಅನುವಾಕಗಳ ಅನುಕ್ರಮಣಿಕೆ ೩೨೭ – ೩೨೮

ಶಬ್ದಾನುಕ್ರಮಣಿಕೆ ೩೨೯ – ೩೩೮

॥ಓಂ॥

ಶಾಂಕರಭಾಷ್ಯಸಮೇತವಾದ

ತೈ ತ್ತಿ ರೀ ಯೋ ಪ ನಿ ಷ ತ್ತು

ಭಾಷ್ಯಕಾರರ ಅವತರಣಿಕೆ

ಮಂಗಲ

ಯಸ್ಮಾಜ್ಜಾತಂ ಜಗತ್ಸರ್ವಂ ಯಸ್ಮಿನ್ನೇವ ಪ್ರಲೀಯತೇ ।
ಯೇನೇದಂ ಧಾರ್ಯತೇ ಚೈವ ತಸ್ಮೈ ಜ್ಞಾನಾತ್ಮನೇ ನಮಃ ॥೧॥

೧. ಜಗತ್ತೆಲ್ಲವೂ ಯಾವನಿಂದಲೇ ಹುಟ್ಟಿದೆಯೋ, ಯಾವನಲ್ಲಿಯೇ ಪ್ರಲಯವಾಗುವದೋ, ಮತ್ತು ಯಾವನಿಂದಲೇ ಧರಿಸಲ್ಪಡುತ್ತದೆಯೋ, ಆ ಜ್ಞಾನಸ್ವರೂಪನಿಗೆ[1] ನಮಸ್ಕಾರ.

ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯಪ್ರಮಾಣತಃ ।
ವ್ಯಾಖ್ಯಾತಾಃ ಸರ್ವವೇದಾನ್ತಾಸ್ತಾನ್ನಿತ್ಯಂ ಪ್ರಣತೋಽಸ್ಮ್ಯಹಮ್ ॥೨॥

೨. ಯಾವ ಗುರುಗಳಿಂದ (ಈ) ಮೊದಲು ಈ ಉಪನಿಷತ್ತುಗಳೆಲ್ಲವೂ ಪದವಾಕ್ಯಪ್ರಮಾಣವನ್ನನುಸರಿಸಿ[2] ವಿವರಿಸಲ್ಪಟ್ಟಿರುವವೋ ಅವರನ್ನು ನಾನು ನಿತ್ಯವೂ ನಮಸ್ಕರಿಸುವೆನು.[3]

---

1. ಈ ಶ್ಲೋಕದಲ್ಲಿ ಬ್ರಹ್ಮದ ಸ್ವರೂಪಲಕ್ಷಣವನ್ನೂ ತಟಸ್ಥಲಕ್ಷಣವನ್ನೂ ಹೇಳಿರುತ್ತದೆ. ಜಗತ್ತಿನ ಹುಟ್ಟು, ಇರವು, ನಾಶ - ಇವುಗಳಿಗೆ ಕಾರಣವಾಗಿರುವದೆಂಬುದು ತಟಸ್ಥ ಲಕ್ಷಣ, ಜ್ಞಾನಸ್ವರೂಪವೆಂಬುದು ಸ್ವರೂಪಲಕ್ಷಣ.

2. ವ್ಯಾಕರಣ, ಮೀಮಾಂಸಾ, ನ್ಯಾಯ - ಈ ಶಾಸ್ತ್ರಗಳ ಬೆಂಬಲದಿಂದ.

3. ಈ ಶ್ಲೋಕವನ್ನು ಶಾಂತಿಪಾಠದಲ್ಲಿ ಹೇಳಿಕೊಳ್ಳುವ ಸಂಪ್ರದಾಯವಿದೆ. ಆಚಾರ್ಯರಿಗಿಂತಲೂ ಹಿಂದೆ ಉಪನಿಷತ್ತುಗಳ ವ್ಯಾಖ್ಯಾನವನ್ನು ಕೆಲವರು ಈ ಸಂಪ್ರದಾಯದವರು ಮಾಡಿದ್ದರೆಂದು ಈ ಶ್ಲೋಕದ ಆಧಾರದಿಂದ ಹೇಳಬಹುದು. ಆದರೆ ಗೌಡಪಾದರ ಮಾಂಡೂಕ್ಯ ಕಾರಿಕೆಯನ್ನು ಬಿಟ್ಟರೆ ಬೇರೆ ಯಾವ ಪ್ರಾಚೀನವೇದಾಂತಗ್ರಂಥಗಳೂ ಸದ್ಯಕ್ಕೆ ಸಿಕ್ಕಿಲ್ಲ. 'ಗುರುಭಿಃ' ಎಂಬುದರಿಂದ ಗೋವಿಂದಭಗವತ್ಪಾದರವರನ್ನು ಸೂಚಿಸಿರಬಹುದೆ ? - ಎಂಬುದು ವಿಚಾರಣೀಯವಾಗಿರುತ್ತದೆ.

ತೈತ್ತಿರೀಯಕಸಾರಸ್ಯ ಮಯಾಽಽಚಾರ್ಯಪ್ರಸಾದತಃ ।
ವಿಸ್ಪಷ್ಟಾರ್ಥರುಚೀನಾಂ ಹಿ ವ್ಯಾಖ್ಯೇಯಂ ಸಂಪ್ರಣೀಯತೇ ॥೩॥

೩. ತೈತ್ತಿರೀಯಸಾರದ ಅರ್ಥವನ್ನು ವಿಸ್ಪಷ್ಟವಾಗಿ ತಿಳಿಯಬೇಕೆನ್ನುವವರಿಗಾಗಿ ಆಚಾರ್ಯರ ಪ್ರಸಾದದಿಂದ ನಾನು ಈ ವ್ಯಾಖ್ಯಾನವನ್ನು ಮಾಡಿರುತ್ತೇನೆ.[1]

ಈ ಗ್ರಂಥದ ಸಂಬಂಧ

೪ ನಿತ್ಯಾನ್ಯಧಿಗತಾನಿ ಕರ್ಮಾಣಿ ಉಪಾತ್ತದುರಿತಕ್ಷಯಾರ್ಥಾನಿ, ಕಾಮ್ಯಾನಿ ಚ ಫಲಾರ್ಥಿನಾಮ್, ಪೂರ್ವಸ್ಮಿನ್ ಗ್ರನ್ಥೇ । ಇದಾನೀಂ ಕರ್ಮೋಪಾದಾನಹೇತು-ಪರಿಹಾರಾಯ ಬ್ರಹ್ಮವಿದ್ಯಾ ಪ್ರಸ್ತೂಯತೇ ॥

(ಭಾಷ್ಯಾರ್ಥ)

ಹಿಂದಿನ ಗ್ರಂಥ(ಭಾಗ)ದಲ್ಲಿ (ಹಿಂದೆ) ಪಡೆದಿರುವ ಪಾಪವನ್ನು ಕಳೆಯುವದಕ್ಕೆ ಬೇಕಾದ ನಿತ್ಯಕರ್ಮಗಳನ್ನೂ ಫಲವು ಆಗಬೇಕೆನ್ನುವವರಿಗೆ ಬೇಕಾದ ಕಾಮ್ಯಕರ್ಮಗಳನ್ನೂ[2] ತಿಳಿಸುಕೊಂಡದ್ದಾಗಿರುತ್ತದೆ. ಈಗ ಕರ್ಮವನ್ನು ಸ್ವೀಕರಿಸುವದಕ್ಕೆ ಕಾರಣವಾಗಿರುವದನ್ನು ತೊಲಗಿಸುವದಕ್ಕಾಗಿ ಬ್ರಹ್ಮವಿದ್ಯೆಯನ್ನು[3] ಪ್ರಾರಂಭಿಸಿರುತ್ತದೆ.

(ಭಾಷ್ಯ)

೫. ಕರ್ಮಹೇತುಃ ಕಾಮಃ ಸ್ಯಾತ್, ಪ್ರವರ್ತಕತ್ವಾತ್ । ಆಪ್ತಕಾಮಾನಾಂ ಹಿ ಕಾಮಾಭಾವೇ ಸ್ವಾತ್ಮನ್ಯವಸ್ಥಾನಾತ್ ಪ್ರವೃತ್ತ್ಯನುಪಪತ್ತಿಃ । ಆತ್ಮಕಾಮತ್ವೇ ಚಾಪ್ತಕಾಮತಾ । ಆತ್ಮಾ ಚ[4] ಬ್ರಹ್ಮ । ತದ್ವಿದೋ ಹಿ ಪರಪ್ರಾಪ್ತಿಂ ವಕ್ಷ್ಯತಿ । ಅತಃ,

---

1. ಈ ಶ್ಲೋಕವು ತೈತ್ತಿರೀಯವಾರ್ತಿಕದ ಮುದ್ರಿತಪುಸ್ತಕದಲ್ಲಿಯೂ ಕಾಣುತ್ತದೆ ; ವ್ಯಾಖ್ಯಾನಕಾರರು ಆಯಾ ಗ್ರಂಥಕ್ಕೆ ತಕ್ಕಂತೆ ಬೇರೆಬೇರೆಯ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಈ ಶ್ಲೋಕವು ನಿಜವಾಗಿ ಆಚಾರ್ಯಕೃತವೆ, ಅಥವಾ ವಾರ್ತಿಕಕಾರಕೃತವೆ ? - ಎಂಬುದನ್ನು ಪಂಡಿತರು ಶೋಧಿಸಬೇಕಾಗಿದೆ.

2. ಅವಶ್ಯವಾಗಿ ಮಾಡಬೇಕೆಂದು ವೇದದಲ್ಲಿ ಹೇಳಿರುವ ಕರ್ಮಗಳು ನಿತ್ಯಕರ್ಮಗಳು ; ಇಂಥ ಬಯಕೆಯುಳ್ಳವರು ಇಂಥ ಕರ್ಮವನ್ನು ಮಾಡಬೇಕೆಂದು ಹೇಳಿರುವ ಕರ್ಮಗಳು ಕಾಮ್ಯಕರ್ಮಗಳು.

3. ಹಿಂದೆ ಹೇಳಿರುವದು ಕರ್ಮದ ತಿಳಿವಳಿಕೆ, ಈಗ ಹೇಳುವದು ಬ್ರಹ್ಮದ ತಿಳಿವಳಿಕೆ.

4. 'ಹಿ' ಎಂದು ಆ॥ ಕಾ॥ ಪಾಠ. ಇಲ್ಲಿ ಕೊಟ್ಟಿರುವದು ವಾ॥ ಪಾಠ.

ಅವಿದ್ಯಾನಿವೃತ್ತೌ ಸ್ವಾತ್ಮನ್ಯವಸ್ಥಾನಂ ಪರಪ್ರಾಪ್ತಿಃ । ''ಅಭಯಂ ಪ್ರತಿಷ್ಠಾಂ ವಿನ್ದತೇ'' (೨-೭), ''ಏತಮಾನನ್ದಮಯಮಾತ್ಮಾನಮುಪಸಂಕ್ರಾಮತಿ'' (೨-೮) - ಇತ್ಯಾದಿ-ಶ್ರುತೇಃ ॥

(ಭಾಷ್ಯಾರ್ಥ)

ಕರ್ಮಕ್ಕೆ ಕಾರಣವಾದದ್ದು ಕಾಮವಾಗಿರಬೇಕು. ಏಕೆಂದರೆ (ಅದು ಕರ್ಮದಲ್ಲಿ) ಪ್ರವರ್ತಿಸುವಂತೆ ಮಾಡುವದಾಗಿರುತ್ತದೆ. ಯಾರು ಕಾಮಗಳ(ನ್ನೆಲ್ಲ) ಪಡೆದು ಕೊಂಡಿರುತ್ತಾರೋ ಅವರಿಗೆ ಕಾಮವಿಲ್ಲದ್ದರಿಂದ (ಅವರು) ತಮ್ಮ ಸ್ವರೂಪ ದಲ್ಲಿಯೇ ನಿಂತುಬಿಡುವರಾದ್ದರಿಂದ[1] (ಕರ್ಮದಲ್ಲಿ) ತೊಡಗುವದೆಂಬುದು ಹೊಂದುವದಿಲ್ಲ. ಮತ್ತು ಆತ್ಮನೇ ಬೇಕೆನ್ನುವವರಿಗೆ (ಮಾತ್ರ) ಕಾಮಗಳನ್ನೆಲ್ಲ ಪಡೆದುಕೊಂಡಂತೆ (ಆಗುತ್ತದೆ)[2] ; ಏಕೆಂದರೆ ಆತ್ಮನೇ ಬ್ರಹ್ಮವು.[3] ಆ ಬ್ರಹ್ಮವನ್ನು ಅರಿತಾತನಿಗೇ ಹೆಚ್ಚಿನ (ಪುರುಷಾರ್ಥದ) ಪ್ರಾಪ್ತಿಯಾಗುವದೆಂದು (ಮುಂದೆ ೨-೧ರಲ್ಲಿ) ಹೇಳಿರುತ್ತದೆ. ಆದ್ದರಿಂದ ಅವಿದ್ಯೆಯು ತೊಲಗಿದರೆ[4] ತನ್ನ ಸ್ವರೂಪದಲ್ಲಿ ನಿಲ್ಲುವದೇ ಹೆಚ್ಚಿನ (ಪುರುಷಾರ್ಥದ) ಪ್ರಾಪ್ತಿ. ''ಅಂಜಿಕೆಯಿಲ್ಲದ ನಿಲುಗಡೆಯನ್ನು ಪಡೆದುಕೊಳ್ಳುತ್ತಾನೆ'' (೨-೭), ''ಈ ಆನಂದಮಯನಾದ ಆತ್ಮನನ್ನು ಅರಿತು ಕೊಳ್ಳುತ್ತಾನೆ''[5] (೨-೮) - ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣ.

1. ತಮ್ಮ ಪರಮಾರ್ಥಸ್ವರೂಪವನ್ನು ಅರಿತುಕೊಂಡು ಅದರಲ್ಲಿ ನೆಲೆನಿಂತಿರುವ ರಾದ್ದರಿಂದ. ಮುಂ.ಭಾ. ೨-೧-೧೦, ಕ.ಭಾ. ೨-೧-೨ ನೋಡಿರಿ.

2. ಬೃ. ೪-೪-೬ರ ಸೂಚನೆ.

3. ಆದ್ದರಿಂದ ಬ್ರಹ್ಮಜ್ಞಾನಿಗಳಿಗೆ ಮತ್ತೊಂದು ಬೇಕೆಂಬ ಕಾಮವಾಗಲಿ, ಅದಕ್ಕಾಗಿ ಕರ್ಮವಾಗಲಿ ಉಂಟಾಗಲಾರದು.

4. ಬ್ರಹ್ಮವನ್ನರಿತುಕೊಂಡು ಅದರ ವಿಷಯಕ್ಕೆ ನಮಗಿರುವ ತಪ್ಪುತಿಳಿವಳಿಕೆಯನ್ನು ತೊಲಗಿಸಿಕೊಂಡರೆ, ಈ ತಪ್ಪುತಿಳಿವಳಿಕೆಯಿಂದಲೇ ತನಗಿಂತ ಬೇರೆಯಾಗಿ ಪಡೆಯಬೇಕಾದ ವಿಷಯಗಳು ಇರುವಂತೆ ತೋರುತ್ತಿರುವದು.

5. ಇಲ್ಲಿ ಆನಂದಮಯನು ಪರಮಾತ್ಮನೆಂದಿಟ್ಟುಕೊಂಡು ಶ್ರುತಿಯನ್ನು ಉದಾಹರಿಸಿದೆ ಎಂಬ (ಆ॥) ವ್ಯಾಖ್ಯಾನಕ್ಕೆ ಆಧಾರವಿಲ್ಲ. ''ಸ ಯ ಏವಂವಿತ್'' ಎಂದು ಯಾವನು ಈ ರೀತಿ ತಿಳಿದುಕೊಂಡಿರುವನೋ ಅವನಿಗೆ ಆಗುವ ಫಲವನ್ನು ಇಲ್ಲಿ ಹೇಳಿದೆ ; ವಾಕ್ಯಶೇಷದಲ್ಲಿ, ಬ್ರಹ್ಮದ ಆನಂದಸ್ವರೂಪವನ್ನು ಅರಿತವನಿಗೆ ಆಗುವ ಅಭಯಪ್ರಾಪ್ತಿಯನ್ನೂ ಹೇಳ್ದಿದೆ. ಅವಿದ್ಯೆಯು ತೊಲಗುವದರಿಂದ ಅಭಯಪ್ರಾಪ್ತಿ ಎಂಬುದು ಬ್ರಹ್ಮಜ್ಞಾನದ ಫಲವು.

ಕರ್ಮಮಾತ್ರದಿಂದ ಮೋಕ್ಷವಾಗಲಾರದು

(ಭಾಷ್ಯ)

೩ ಕಾಮ್ಯಪ್ರತಿಷಿದ್ಧಯೋರನಾರಮ್ಭಾತ್, ಆರಬ್ಧಸ್ಯ ಚ ಉಪಭೋಗೇನ ಕ್ಷಯಾತ್ ನಿತ್ಯಾನುಷ್ಠಾನೇನ ಚ ಪ್ರತ್ಯವಾಯಾಭಾವಾತ್ ಅಯತ್ನತ ಏವ ಸ್ವಾತ್ಮನ್ಯವಸ್ಥಾನಂ ಮೋಕ್ಷಃ । ಅಥವಾ ನಿರತಿಶಯಾಯಾಃ ಪ್ರೀತೇಃ ಸ್ವರ್ಗಶಬ್ದ-ವಾಚ್ಯಾಯಾಃ ಕರ್ಮಹೇತುತ್ವಾತ್ ಕರ್ಮಭ್ಯ ಏವ ಮೋಕ್ಷಃ ಇತಿ ಚೇತ್ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ:-) ಕಾಮ್ಯಪ್ರತಿಷಿದ್ಧ(ಕರ್ಮ)ಗಳನ್ನು ಮಾಡದೆ, ಫಲವನ್ನು ಕೊಡುವದಕ್ಕೆ ಪ್ರಾರಂಭವಾಗಿರುವದನ್ನು[1] ಅನುಭವಿಸಿ ಸವೆಯಿಸಿಕೊಂಡು, ನಿತ್ಯ ಕರ್ಮವನ್ನು ಮಾಡುವದರಿಂದ ಪ್ರತ್ಯವಾಯವಿಲ್ಲವಾಗಲು[2] ಯಾವ ಯತ್ನವೂ ಇಲ್ಲದೆ[3] ತನ್ನ ಸ್ವರೂಪದಲ್ಲಿ ನಿಂತುಬಿಡುವದೇ ಮೋಕ್ಷವು.[4] ಅಥವಾ ಸ್ವರ್ಗವೆಂಬ ಮಾತಿಗೆ ಪಾಚ್ಯವಾದ ಮಿಗಿಲಿಲ್ಲದ ಸುಖವು[5] ಕರ್ಮವೆಂಬ ಕಾರಣದಿಂದಲೇ ಆಗತಕ್ಕದ್ದಾದ್ದರಿಂದ ಕರ್ಮಗಳಿಂದಲೇ ಮೋಕ್ಷ(ವಾಗುತ್ತದೆಯಲ್ಲ) !

(ಭಾಷ್ಯ)

೪. ನ । ಕರ್ಮಾನೇಕತ್ವಾತ್ । ಅನೇಕಾನಿ ಹಿ ಆರಬ್ಧಫಲಾನಿ ಅನಾರಬ್ಧ-ಫಲಾನಿ ಚ ಅನೇಕಜನ್ಮಾನ್ತರಕೃತಾನಿ ವಿರುದ್ಧಫಲಾನಿ ಕರ್ಮಾಣಿ ಸಂಭವನ್ತಿ । ಅತಃ ಶೇಷ್ಟನಾರಬ್ಧಫಲಾನಾಮ್ ಏಕಸ್ಮಿನ್ ಜನ್ಮನ್ಯುಪಭೋಗೇನ[6] ಕ್ಷಯಾಸಂಭವಾತ್ ಶೇಷಕರ್ಮನಿಮಿತ್ತಶರೀರಾರಮ್ಭೋಪಪತ್ತಿಃ । ಕರ್ಮಶೇಷಸದ್ಭಾವಸಿದ್ಧಿಶ್ಚ । ''ತದ್ಯ

---

1 ವಿಧಿಯ ದೃಷ್ಟಿಯಿಂದ ಕರ್ಮವನ್ನು ನಿತ್ಯ, ನೈಮಿತ್ತಿಕ, ಕಾಮ್ಯ, ನಿಷಿದ್ಧ - ಎಂದು ನಾಲ್ಕು ಬಗೆಯಾಗಿ ವಿಂಗಡಿಸುವರು ; ಫಲಭೋಗದ ದೃಷ್ಟಿಯಿಂದ ಸಂಚಿತ, ಆರಬ್ಧ, ಆಗಾಮಿ - ಎಂದು ಮೂರು ಬಗೆಯಾಗಿ ವಿಂಗಡಿಸುವರು.

2. ಮಾಡದೆ ಇರುವದರಿಂದಾಗುವ ದೋಷವಿಲ್ಲವಾಗಲು.

3. ಜ್ಞಾನವೇ ಮುಂತಾದದ್ದನ್ನು ಪಡೆದುಕೊಳ್ಳುವ ಆವಶ್ಯಕತೆಯಿಲ್ಲದೆ.

4. ಆತ್ಮಸ್ವರೂಪದಲ್ಲಿ ನಿಲ್ಲುವದಕ್ಕೆ ಸಾಧನವು ಬೇಕೆಂದು ಪೂರ್ವಪಕ್ಷಿ ನಂಬಿರುತ್ತಾನೆ. ಈ ಪೂರ್ವಪಕ್ಷವನ್ನು ಗೀ.ಭಾ. ೧೮-೬೬, ಸೂ.ಭಾ. ೪-೩-೧೪ರಲ್ಲಿಯೂ ಖಂಡಿಸಿರುತ್ತದೆ.

5. ಸ್ವರ್ಗಕ್ಕಿಂತ ಬೇರೆಯಾದ ಮೋಕ್ಷವೆಂಬ ಪುರುಷಾರ್ಥವೇ ಇಲ್ಲವೆಂಬ ವೀರ ಮೀಮಾಂಸಕರ ಮತವಿದು.

6 ''ಉಪಭೋಗಕ್ಷಯಾಸಂಭವಾತ್'' ಎಂಬ ಆ।। ಪಾಠಕ್ಕಿಂತ ಈ ವಾ।। ಕಾ।। ಪಾರವು ಉತ್ತಮ.

ಇಹ ರಮಣೀಯಚರಣಾಃ'' (ಛಾಂ. ೫-೧೦-೭). ''ತತಃ ಶೇಷೇಣ'' (ಗೌ.ಧ. ೨-೨೯) - ಇತ್ಯಾದಿಶ್ರುತಿಸ್ಮೃತಿಶತೇಭ್ಯಃ ॥

(ಭಾಷ್ಯಾರ್ಥ)

(ಸಿದ್ಧಾಂತಿ :-) ಹಾಗಲ್ಲ. ಏಕೆಂದರೆ ಕರ್ಮಗಳು ಅನೇಕವಿಧವಾಗಿರುತ್ತವೆ. ಫಲವನ್ನು ಕೊಟ್ಟಿರುವ ಮತ್ತು ಕೊಡದೆ ಇರುವ ಅನೇಕ ಜನ್ಮಾಂತರಗಳಿಂದ ಮಾಡಿಕೊಂಡುಬಂದಿರುವ (ಒಂದಕ್ಕೊಂದು) ವಿರುದ್ಧವಾದ ಫಲವನ್ನು (ಕೊಡ ಬೇಕಾಗಿರುವ)[1] ಅನೇಕ ಕರ್ಮಗಳು ಇರಬಹುದಲ್ಲವೆ ? ಆದ್ದರಿಂದ ಅವುಗಳಲ್ಲಿ ಫಲವನ್ನು ಕೊಡದೆ ಇರುವ (ಅನೇಕಕರ್ಮಗಳನ್ನು) ಒಂದೇ ಜನ್ಮದಲ್ಲಿ ಅನುಭವಿಸಿ ಸವೆಯಿಸುವದು ಆಗಲಾರದಾದ್ದರಿಂದ ಉಳಿದಿರುವ ಕರ್ಮವೆಂಬ ಕಾರಣದಿಂದ (ಮತ್ತೊಂದು) ಶರೀರವು ಉಂಟಾಗಬಹುದಾಗಿರುತ್ತದೆ. ಕರ್ಮದಲ್ಲಿ (ಒಂದು ಭಾಗವು) ಉಳಿದಿರಬಹುದೆಂದೂ ಏರ್ಪಡುತ್ತದೆ. ''ಅವರಲ್ಲಿ ಯಾರು ಇಲ್ಲಿ ಒಳ್ಳೆಯದನ್ನು ಮಾಡಿರುವರೋ (ಅವರು ಬೇಗ ಒಳ್ಳೆಯ ಜನ್ಮವನ್ನು ಪಡೆಯುತ್ತಾರೆ)'' (ಛಾಂ. ೫-೧೦-೭), ''ಆಮೇಲೆ (ಕರ್ಮ)ಶೇಷದಿಂದ (ಜನ್ಮವನ್ನು ಪಡೆಯುವರು)''[2] (ಗೌ. ಧ. ೨-೨೯) - ಇವೇ ಮುಂತಾದ ನೂರಾರು ಶ್ರುತಿ ಸ್ಮೃತಿಗಳು ಇದಕ್ಕೆ ಪ್ರಮಾಣವಾಗಿರುತ್ತವೆ.

(ಭಾಷ್ಯ)

೫. ಇಷ್ಟಾನಿಷ್ಟಫಲಾನಾಮ್ ಅನಾರಬ್ಧಾನಾಂ ಕ್ಷಯಾರ್ಥಾನಿ ನಿತ್ಯಾನಿ ಇತಿ ಚೇತ್ । ನ । ಅಕರಣೇ ಪ್ರತ್ಯವಾಯಶ್ರವಣಾತ್ । ಪ್ರತ್ಯವಾಯಶಬ್ದೋ ಹಿ ಅನಿಷ್ಟವಿಷಯಃ । ನಿತ್ಯಾಕರಣನಿಮಿತ್ತಸ್ಯ ಪ್ರತ್ಯವಾಯಸ್ಯ ದುಃಖಿರೂಪಸ್ಯ ಆಗಾಮಿನಃ ಪರಿಹಾರಾರ್ಥಾನಿ ನಿತ್ಯಾನಿ ಇತ್ಯಭ್ಯುಪಗಮಾತ್ ನ ಅನಾರಬ್ಧಫಲಕರ್ಮ-ಕ್ಷಯಾರ್ಥಾನಿ । ಯದಿ ನಾಮ ಅನಾರಬ್ಧಕರ್ಮಕ್ಷಯಾರ್ಥಾನಿ ನಿತ್ಯಾನಿ ಕರ್ಮಾಣಿ, ತಥಾಪಿ ಅಶುದ್ಧಮೇವ ಕ್ಷಪಯೇಯುಃ, ನ ಶುದ್ಧಮ್ । ವಿರೋಧಾಭಾವಾತ್ । ನ

---

1. ಬ್ರಹ್ಮಹತ್ಯೆ, ಜ್ಯೋತಿಷ್ಟೋಮ - ಇಂಥ ಎರಡು ಕರ್ಮಗಳಿಗೆ ಆಗುವ ಫಲಗಳು ಒಂದಕ್ಕೊಂದು ಅತ್ಯಂತ ವಿರುದ್ಧವಾಗಿರುತ್ತವೆ. ಅವುಗಳ ಫಲವನ್ನು ಒಂದೇ ಶರೀರದಲ್ಲಿ ಅನುಭವಿಸುವದು ಆಗಲಾರದು.

2. ''ವರ್ಣಾ ಆಶ್ರಮಾಶ್ಚ ಸ್ವಕರ್ಮನಿಷ್ಠಾಃ ಪ್ರೇತ್ಯ ಸ್ವಕರ್ಮಫಲಮನುಭೂಯ ತತಃ ಶೇಷೇಣ ವಿಶಿಷ್ಟದೇಶಜಾತಿಕುಲರೂಪಾಯುಃಶ್ರುತವೃತ್ತವಿತ್ತಸುಖಮೇಧಸೋ ಜನ್ಮ ಪ್ರತಿಪದ್ಯನ್ತೇ'' ಎಂಬ ಗೌತಮಧರ್ಮಸೂತ್ರವಾಕ್ಯದ ಭಾಗವಿದು.

ಹಿ ಇಷ್ಟಫಲಸ್ಯ ಕರ್ಮಣಃ ಶುದ್ಧರೂಪತ್ವಾತ್ ನಿತ್ಯೈರ್ವಿರೋಧಃ ಉಪಪದ್ಯತೇ । ಶುದ್ಧಾಶುದ್ಧಯೋರ್ಹಿ ವಿರೋಧೋ ಯುಕ್ತಃ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ:-) ಫಲವನ್ನು (ಇನ್ನೂ) ಕೊಡದೆ ಇರುವ ಬೇಕಾದ ಮತ್ತು ಬೇಡವಾದ ಫಲಗಳನ್ನು ಕೊಡಬಹುದಾದ (ಕರ್ಮಗಳನ್ನು) ಸವೆಯಿಸುವದಕ್ಕೆ ನಿತ್ಯಕರ್ಮಗಳು (ವಿಹಿತವಾಗಿವೆ, ಅಲ್ಲವೆ) ?

(ಸಿದ್ಧಾಂತಿ:-) ಹಾಗಲ್ಲ. ಏಕೆಂದರೆ (ಅವನ್ನು) ಮಾಡದಿದ್ದರೆ ಪ್ರತ್ಯವಾಯವನ್ನು ಶ್ರುತಿಯಲ್ಲಿ ಹೇಳಿರುತ್ತದೆ.[1] ಪ್ರತ್ಯವಾಯವೆಂಬ ಮಾತು ಅನಿಷ್ಟವಾದದ್ದನ್ನೇ ಹೇಳುತ್ತದೆ. ನಿತ್ಯ(ಕರ್ಮ)ಗಳನ್ನು ಮಾಡದೆ ಇರುವ ನಿಮಿತ್ತದಿಂದ ಮುಂದೆ ಉಂಟಾಗ(ಬಹುದಾದ) ದುಃಖರೂಪವಾದ ಪ್ರತ್ಯವಾಯವನ್ನು ನೀಗುವದಕ್ಕೆ ನಿತ್ಯ ಕರ್ಮಗಳನ್ನು (ವಿಧಿಸಿದೆಯೆಂದು ನೀವೇ) (ಒಪ್ಪಿರುವದರಿಂದ ಅವು) ಫಲವನ್ನು ಕೊಡದೆ (ಉಳಿದಿರುವ) ಕರ್ಮಗಳನ್ನು ಸವೆಯಿಸುವದಕ್ಕೆ ವಿಹಿತವಾಗಿವೆ ಎಂಬುದು) ಸರಿಯಲ್ಲ. ಒಂದುವೇಳೆ ಫಲವನ್ನು ಕೊಡದೆ (ಉಳಿದಿರುವ) ಕರ್ಮಗಳನ್ನು ಸವೆಯಿಸುವದಕ್ಕೆ ನಿತ್ಯಕರ್ಮಗಳು (ವಿಹಿತವಾಗಿವೆ) ಎಂದು ಇಟ್ಟುಕೊಂಡರೂ (ಅವು) ಅಶುದ್ಧ(ಕರ್ಮಗಳನ್ನು) ಸವೆಯಿಸಿಯಾವೇ ಹೊರತು ಶುದ್ಧ (ಕರ್ಮ)ವನ್ನು ಸವೆಯಿಸಲಾರವು ; ಏಕೆಂದರೆ (ಇವೆರಡಕ್ಕೂ) ವಿರೋಧವಿರುವದಿಲ್ಲ. ಇಷ್ಟವಾದ ಫಲವನ್ನು ಕೊಡುವ ಕರ್ಮವು ಶುದ್ಧರೂಪವಾಗಿರುವದರಿಂದ (ಅದಕ್ಕೂ) ನಿತ್ಯ(ಕರ್ಮ)ಗಳಿಗೂ ವಿರೋಧ(ವುಂಟೆಂಬುದು) ಸರಿಯಾಗುವದೇ ಇಲ್ಲ ; (ಒಂದು) ಶುದ್ಧ, (ಒಂದು) ಅಶುದ್ಧ - (ಹೀಗಿರುವ ಎರಡು ಕರ್ಮ)ಗಳಿಗಲ್ಲವೆ, ಒಂದಕ್ಕೊಂದಕ್ಕೆ ವಿರೋಧ(ವಿದೆ ಎಂಬುದು) ಯುಕ್ತವಾಗುತ್ತದೆ ?

(ಭಾಷ್ಯ)

೬. ನ ಚ ಕರ್ಮಹೇತೂನಾಂ ಕಾಮಾನಾಂ ಜ್ಞಾನಾಭಾವೇ ನಿವೃತ್ತ್ಯಸಂಭವಾತ್ ಅಶೇಷಕರ್ಮಕ್ಷಯೋಪಪತ್ತಿಃ । ಅನಾತ್ಮವಿದೋ ಹಿ ಕಾಮಃ । ಅನಾತ್ಮಫಲ-ವಿಷಯತ್ವಾತ್ । ಸ್ವಾತ್ಮನಿ ಚ ಕಾಮಾನುಪಪತ್ತಿಃ । ನಿತ್ಯಪ್ರಾಪ್ತತ್ವಾತ್ । ಸ್ವಯಂ ಚ ಆತ್ಮಾ ಪರಂ ಬ್ರಹ್ಮ - ಇತ್ಯುಕ್ತಮ್ ॥

(ಭಾಷ್ಯಾರ್ಥ)

ಇದೂ ಅಲ್ಲದೆ ಕರ್ಮಕ್ಕೆ ಕಾರಣವಾಗಿರುವ ಕಾಮಗಳು (ಆತ್ಮ)ಜ್ಞಾನವುಂಟಾದ ಹೊರತು ತೊಲಗಲಾರವಾದ್ದರಿಂದ (ಅದಿಲ್ಲದೆ) ಎಲ್ಲಾ ಕರ್ಮಗಳೂ ಸವೆಯುವ

1. ಪೂರ್ವಪಕ್ಷಿಯು ಇದನ್ನು ಒಪ್ಪಿರುತ್ತಾನೆ. ಸಿದ್ಧಾಂತಿಯ ಮತವು ಮುಂದೆ ಬರುತ್ತದೆ.

ವೆಂಬುದೂ ಸರಿಯಾಗುವದಿಲ್ಲ.[1] ಆತ್ಮನನ್ನು ಅರಿಯದವನಿಗೇ ಕಾಮವುಂಟಾಗುತ್ತದೆ, ಏಕೆಂದರೆ (ಕಾಮಕ್ಕೆ) ಅನಾತ್ಮ(ರೂಪವಾದ) ಫಲವೇ ವಿಷಯವು. ತನ್ನ ಆತ್ಮನಲ್ಲಿ (ತನಗೆ) ಕಾಮವುಂಟಾಗುವ ಹಾಗೂ ಇಲ್ಲ ; ಏಕೆಂದರೆ (ಆತ್ಮನು) ಯಾವಾಗಲೂ ಪ್ರಾಪ್ತನಾಗಿಯೇ ಇರುತ್ತಾನೆ. ಆತ್ಮನು ತಾನೇ ಪರಬ್ರಹ್ಮವೆಂದು ಹಿಂದೆಯೇ (ಭಾ.ಭಾ. ೨ರಲ್ಲಿ) ಹೇಳಲಾಗಿದೆ.

(ಭಾಷ್ಯ)

೭. ನಿತ್ಯಾನಾಂ ಚ ಅಕರಣಮ್ ಅಭಾವಃ । ತತಃ ಪ್ರತ್ಯವಾಯಾನುಪಪತ್ತಿರಿತ್ಯತಃ ಪೂರ್ವೋಪಚಿತದುರಿತೇಭ್ಯಃ ಪ್ರಾಪ್ಯಮಾಣಾಯಾಃ ಪ್ರತ್ಯವಾಯಕ್ರಿಯಾಯಾಃ ನಿತ್ಯಾಕರಣಂ ಲಕ್ಷಣಮ್ ಇತಿ ''ಅಕುರ್ವನ್ ವಿಹಿತಂ ಕರ್ಮ'' (ಮನು. ೧೧-೪೪, ಶಾಂ. ರಾ. ೩೪-೨) ಇತಿ ಶತುರ್ನಾನುಪಪತ್ತಿಃ । ಅನ್ಯಥಾ ಅಭಾವಾದ್ಭಾವೋತ್ಪತ್ತಿರಿತಿ ಸರ್ವಪ್ರಮಾಣವ್ಯಾಕೋಪ ಇತಿ ಅತಃ ಅಯತ್ನತಃ ಸ್ವಾತ್ಮನ್ಯವಸ್ಥಾನಮ್ ಇತ್ಯನುಪಪನ್ನಮ್ ।।

(ಭಾಷ್ಯಾರ್ಥ)

ನಿತ್ಯಕರ್ಮಗಳನ್ನು ಮಾಡದೆ ಇರುವದೆಂಬುದು ಅಭಾವವು, (ಆದ್ದರಿಂದ) ಅದರಿಂದ ಪ್ರತ್ಯವಾಯ(ವುಂಟಾಗುವ)ದೆಂಬುದು ಹೊಂದುವದಿಲ್ಲ.[2] ಆದ್ದರಿಂದ ಹಿಂದೆ ಕೂಡಿಹಾಕಿಕೊಂಡಿರುವ ಪಾಪಗಳಿಂದ ಮುಂದೆ ಬರುವದಾಗಿರುವ ಪ್ರತ್ಯವಾಯಕ್ರಿಯೆಗೆ ನಿತ್ಯಕರ್ಮವನ್ನು ಮಾಡದಿರುವದು ಗುರುತಾಗಿರುತ್ತದೆಯಾದ್ದರಿಂದ 'ಅಕುರ್ವನ್ ವಿಹಿತಂ ಕರ್ಮ' (ಮನು. ೧೧-೪೪. ಶಾಂ.ರಾ. ೩೪-೨) ಎಂಬ ಸ್ಮೃತಿವಾಕ್ಯದಲ್ಲಿ ಶತೃಪ್ರತ್ಯಯ(ವನ್ನುಪಯೋಗಿಸಿರುವದು) ಅಯುಕ್ತವಾಗುವದಿಲ್ಲ.[3] ಹೀಗಿಲ್ಲದಿದ್ದರೆ ಅಭಾವದಿಂದ ಭಾವವು ಹುಟ್ಟುತ್ತದೆ ಎಂದು (ಹೇಳಿದಂತಾಗಿ) ಎಲ್ಲಾ

---

1. ಕಾಮಗಳಿಗೆ ಆತ್ಮಾಜ್ಞಾನವೇ ಮೂಲವೆಂಬ ಸಿದ್ಧಾಂತದಿಂದ ಇದು ಹೊರಡುತ್ತದೆ. ಈ ಸಿದ್ಧಾಂತಕ್ಕೆ ಯುಕ್ತಿಯನ್ನು ಈಗ ಹೇಳುತ್ತಿದಾರೆ.

2. ನಿತ್ಯಕರ್ಮಗಳನ್ನು ಮಾಡದಿದ್ದರೆ ಪ್ರತ್ಯವಾಯವುಂಟಾಗುವದೆಂದು ಭಾಟ್ಟರು ಹೇಳುತ್ತಾರೆ ; ಈ ವಕ್ಷವನ್ನು ಗೀ.ಭಾ. ೪-೧೪ರಲ್ಲಿಯೂ ಖಂಡಿಸಿದೆ. ನಿತ್ಯಕರ್ಮಗಳಿಗೆ ಬೇರೆಯ ಫಲವಿಲ್ಲವೆಂಬ ಪ್ರಾಭಾಕರಮತವನ್ನು ಗೀ. ೪-೧೪ರಲ್ಲಿ ಖಂಡಿಸಿದೆ

3. ಅಕುರ್ವನ್ ವಿಹಿತಂ ಕರ್ಮ ನಿನ್ದಿತಂ ಚ ಸಮಾಚರನ್ । ಪ್ರಸಕ್ತಶ್ಚೇನ್ದ್ರಿಯಾರ್ಥೇಷು ಪ್ರಾಯಶ್ಚಿತ್ತೀಯತೇ ನರಃ ।। (ಮನು. ೧೧-೪೪) ; ಅಕುರ್ವನ್ ವಿಹಿತಂ ಕರ್ಮ ಪ್ರತಿಷಿದ್ಧಾನಿ ಚಾಚರನ್ । ಪ್ರಾಯಶ್ಚಿತ್ತೀಯತೇ ಹ್ಯೇವಂ ನರೋ ಮಿಥ್ಯಾನುವರ್ತಯನ್ ।। (ರಾ ಧ. ೩೪-೨) - ಎಂಬ ಎರಡು ವಾಕ್ಯಗಳಲ್ಲಿ ಯಾವದನ್ನು ತೆಗೆದುಕೊಂಡರೂ 'ಅಕುರ್ವನ್' ಎಂಬಲ್ಲಿ ಶತೃ(ವರ್ತಮಾನಕೃತ್)ಪ್ರತ್ಯಯವೇ ಇರುತ್ತದೆ.

ಪ್ರಮಾಣಗಳಿಗೂ ವಿರೋಧವಾಗುತ್ತದೆ.[1] ಆದ್ದರಿಂದ ಯಾವ ಯತ್ನವೂ ಇಲ್ಲದೆ ಆತ್ಮನಲ್ಲಿ ನಿಲ್ಲಬಹುದು (ಎಂಬದ್ದು) ಸರಿಯಲ್ಲ.

(ಭಾಷ್ಯ)

೮. ಯಚ್ಚೋಕ್ತಂ ನಿರತಿಶಯಪ್ರೀತೇಃ ಸ್ವರ್ಗಶಬ್ದವಾಚ್ಯಾಯಾಃ ಕರ್ಮನಿಮಿತ್ತತ್ವಾತ್ ಕರ್ಮಾರಭ್ಯ ಏವ ಮೋಕ್ಷಃ ಇತಿ । ತನ್ನ । ನಿತ್ಯತ್ವಾನ್ಮೋಕ್ಷಸ್ಯ । ನ ಹಿ ನಿತ್ಯಂ ಕಿಂಚಿತ್ ಆರಭ್ಯತೇ । ಲೋಕೇ ಯದಾರಬ್ಧಂ ತದನಿತ್ಯಮ್ ಇತಿ । ಅತೋ ನ ಕರ್ಮಾರಭ್ಯೋ ಮೋಕ್ಷಃ ॥

(ಭಾಷ್ಯಾರ್ಥ)

ಇನ್ನು ಸ್ವರ್ಗವೆಂಬ ಶಬ್ದಕ್ಕೆ ವಾಚ್ಯವಾಗಿರುವ ಮಿಗಿಲಿಲ್ಲದ ಸುಖವು ಕರ್ಮದಿಂದಲೇ ಆಗುವದರಿಂದ ಮೋಕ್ಷವು ಕರ್ಮಗಳಿಂದುಂಟಾಗತಕ್ಕದ್ದೇ ಎಂದು(ಪೂರ್ವಪಕ್ಷದಲ್ಲಿ ಹೇಳಿತ್ತಷ್ಟೆ) ?[2] ಅದು ಸರಿಯಲ್ಲ. ಏಕೆಂದರೆ ಮೋಕ್ಷವು ನಿತ್ಯವಾಗಿರುತ್ತದೆ. ನಿತ್ಯವಾದದ್ದು ಯಾವದೂ ಉಂಟಾಗುವದೇ ಇಲ್ಲ. ಲೋಕದಲ್ಲಿ ಯಾವ(ಯಾವದು) ಉಂಟಾಗಿರುವದೋ ಅದು ಅನಿತ್ಯ(ವಾಗಿರುತ್ತದೆ), ಆದ್ದರಿಂದ ಮೋಕ್ಷವು ಕರ್ಮಗಳಿಂದ ಉಂಟಾಗತಕ್ಕದ್ದಲ್ಲ.

ಕರ್ಮಜ್ಞಾನಸಮುಚ್ಚಯದಿಂದಲೂ ಮೋಕ್ಷವುಂಟಾಗಲಾರದು

(ಭಾಷ್ಯ)

೯. ವಿದ್ಯಾಸಹಿತಾನಾಂ ಕರ್ಮಣಾಂ ನಿತ್ಯಾರಮ್ಭಸಾಮರ್ಥ್ಯಮ್ ಇತಿ ಚೇತ್ । ನ । ವಿರೋಧಾತ್ । ನಿತ್ಯಂ ಚ ಆರಭ್ಯತೇ ಚ[3] ಇತಿ ವಿರುದ್ಧಮ್ । ಯದ್ವಿನಷ್ಟಂ ತದೇವ ನೋತ್ಪದ್ಯತೇ ಇತಿ ಪ್ರಧ್ವಂಸಾಭಾವವತ್ ನಿತ್ಯೋಽಪಿ ಮೋಕ್ಷ ಆರಭ್ಯ ಏವ ಇತಿ ಚೇತ್ । ನ । ಮೋಕ್ಷಸ್ಯ ಭಾವರೂಪತ್ವಾತ್ । ಪ್ರಧ್ವಂಸಾಭಾವೋಽಪಿ ಆರಭ್ಯತೇ ಇತಿ[4] ಅಭಾವಸ್ಯ ವಿಶೇಷಾಭಾವಾತ್ ವಿಕಲ್ಪಮಾತ್ರಮೇತತ್ । ಭಾವಪ್ರತಿಯೋಗೀ ಹ್ಯಭಾವಃ । ಯಥಾ ಹಿ ಅಭಿನ್ನೋಽಪಿ ಭಾವೋ ಘಟಪಟಾದಿಭಿರ್ವಿಶೇಷ್ಯತೇ ಭಿನ್ನ ಇವ[5] 'ಘಟಭಾವಃ', 'ಪಟಭಾವಃ' ಇತಿ ಏವಂ ನಿರ್ವಿಶೇಷೋಽಪಿ ಅಭಾವಃ[6] ಕ್ರಿಯಾ

1. ಅಸತ್ಕಾರ್ಯವಾದವು ಸರ್ವಪ್ರಮಾಣಗಳಿಗೂ ವಿರುದ್ಧ.
2. ೩ನೆಯ ಭಾ.ಭಾ. ವನ್ನು ನೋಡಿ.
3. 'ಇತಿ' ಅಥವಾ 'ಇತಿ ಚ' ಎಂಬ ಪಾಠಕ್ಕಿಂತ 'ಚ ಇತಿ' ಎಂದಿದ್ದರೆ ಮೇಲು.
4. 'ನ ಸಮ್ಭವತಿ' - ಎಂದು ವಾ।। ಪಾಠದಲ್ಲಿ ಹೆಚ್ಚಾಗಿದೆ.
5, 6. ಈ ವಾ।। ಪಾಠವೇ ಸರಿ.

ಗುಣಯೋಗಾತ್ ದ್ರವ್ಯಾದಿವತ್ ವಿಕಲ್ಪ್ಯತೇ । ನ ಹಿ ಅಭಾವ ಉತ್ಪಲಾದಿವತ್ ವಿಶೇಷಣಸಹಭಾವೀ ವಿಶೇಷಣವತ್ತ್ವೇ ಭಾವ ಏವ ಸ್ಯಾತ್ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ:-) ಜ್ಞಾನದಿಂದೊಡಗೂಡಿದ ಕರ್ಮಗಳಿಗೆ ನಿತ್ಯವಾದದ್ದನ್ನು ಉಂಟುಮಾಡುವ ಸಾಮರ್ಥ್ಯವಿದೆ - ಎಂದರೊ ?

(ಸಿದ್ಧಾಂತಿ:-) ಹಾಗಲ್ಲ. ಏಕೆಂದರೆ (ಅದು) ವಿರುದ್ಧವಾದದ್ದು. ನಿತ್ಯವೂ ಆಗಿದೆ, ಉಂಟಾಗುವದೂ ಆಗಿದೆ - ಎಂಬುದು ವಿರುದ್ಧವು.

(ಪೂರ್ವಪಕ್ಷಿ:-) ಯಾವದು ವಿನಾಶವಾಗುವದೋ ಅದೇ ಹುಟ್ಟಿಲಾರದು.[1] ಆದ್ದರಿಂದ ಮೋಕ್ಷವು ನಿತ್ಯವಾದರೂ **ಪ್ರಧ್ವಂಸಾಭಾವದಂತೆ**[2] (ಹೊಸದಾಗಿ) ಉಂಟಾಗಲೇಬಹುದಲ್ಲವೆ ?

(ಸಿದ್ಧಾಂತಿ:-) ಹಾಗಲ್ಲ. ಏಕೆಂದರೆ ಮೋಕ್ಷವು ಭಾವರೂಪವಾಗಿರುತ್ತದೆ.[3] ಪ್ರಧ್ವಂಸಾಭಾವವು ಕೂಡ ಹುಟ್ಟುತ್ತದೆ ಎನ್ನುವದು ಬರಿಯ **ವಿಕಲ್ಪವೇ**[4] ; ಏಕೆಂದರೆ ಅಭಾವಕ್ಕೆ ಯಾವ ವಿಶೇಷಗಳೂ ಇರುವದಿಲ್ಲ. ಅದು ಹೇಗೆಂದರೆ : ಅಭಾವವು ಭಾವಕ್ಕೆ **ಪ್ರತಿಯೋಗಿಯು**,[5] ಭಾವವೆಂಬುದು ಒಂದೇ ಆದರೂ ಆ ಒಂದನ್ನೇ 'ಗಡಿಗೆಯ ಇರವು', 'ಬಟ್ಟೆಯ ಇರವು' ಎಂದು ಘಟಪಟಾದಿಗಳಿಂದ ಹೇಗೆ ವಿಂಗಡಿಸುತ್ತಾರೋ ಹಾಗೆಯೇ ಯಾವ ವಿಶೇಷವೂ ಇಲ್ಲದ ಅಭಾವವನ್ನು ಕ್ರಿಯೆ, ಗುಣ - ಇವುಗಳ ಸಂಬಂಧದಿಂದ ದ್ರವ್ಯಾದಿಗಳಂತೆ (ಜನ್ಯರು) ವಿಕಲ್ಪಿಸುತ್ತಾರೆ.[6] ಆದರೆ ಅಭಾವೆಂಬುದು ನೈದಿಲೆಯೇ ಮುಂತಾದವುಗಳಂತೆ ವಿಶೇಷಣಗಳೊಡನೆ

1. ಉಂಟಾಗುವದು ನಿತ್ಯವಲ್ಲ - ಎಂಬುದು ಸರಿಯಾದ ನಿಯಮವಲ್ಲ ವಿನಾಶವಾಗುವದು ನಿತ್ಯ - ಎಂಬ ನಿಯಮವು ಸರಿಯಾದದ್ದು ಎಂದು ಪೂರ್ವಪಕ್ಷಿಯ ಭಾವ.

2. ಪ್ರಾಗಭಾವ (ಕಾರ್ಯವು ಮೊದಲು ಇಲ್ಲದಿರುವಿಕೆ), ಪ್ರಧ್ವಂಸಾಭಾವ (ನಾಶವಾದ ಬಳಿಕ ಇಲ್ಲದಿರುವಿಕೆ), ಅನ್ಯೋನ್ಯಾಭಾವ (ಒಂದು ಇನ್ನೊಂದಲ್ಲದಿರುವಿಕೆ), ಅತ್ಯಂತಾಭಾವ (ತೀರ ಇಲ್ಲದಿರುವಿಕೆ) - ಎಂದು ನಾಲ್ಕು ಬಗೆಯ ಅಭಾವಗಳಿರುವವೆಂದೂ ಪ್ರಧ್ವಂಸಾಭಾವವು ನಿತ್ಯವೆಂದೂ ನೈಯಾಯಿಕರು ಹೇಳುತ್ತಾರೆ.

3. ಆತ್ಮನಲ್ಲಿ ನಿಲ್ಲುವದೆಂಬ ಮೋಕ್ಷವು ಪ್ರಧ್ವಂಸಾಭಾವದಂತೆ ಅಭಾವವಲ್ಲ.

4. ಬರಿಯ ಮಾತೇ, ನಿಜವಾಗಿ ಅಂಥ ಪದಾರ್ಥವೇ ಇಲ್ಲ.

5. ಪ್ರತಿದ್ವಂದ್ವಿ.

6. ಕ್ರಿಯೆಯ ಅಭಾವ, ಗುಣದ ಅಭಾವ - ಎಂದುಮುಂತಾಗಿ ವಿಕಲ್ಪಿಸುತ್ತಾರೆ ; ಇದು ಸರಿಯಲ್ಲ. ಏಕೆಂದರೆ ಅಭಾವದಲ್ಲಿ ವಿಶೇಷಗಳಿಲ್ಲ. ಗೀ.ಭಾ. ೧೮-೪೮, ಸೂ.ಭಾ ೨-೨-೨೬.

ಇರತಕ್ಕದ್ದೇ ಅಲ್ಲ ; (ಏಕೆಂದರೆ ಅದಕ್ಕೆ) ವಿಶೇಷಣಗಳಿರುವದಾದರೆ (ಅದೂ) ಭಾವವೇ ಆಗಿಬಿಟ್ಟೀತು.[1]

(ಭಾಷ್ಯ)

೧೦. ವಿದ್ಯಾಕರ್ಮಕರ್ತುರ್ನಿತ್ಯತ್ವಾತ್[2] ವಿದ್ಯಾಕರ್ಮಸನ್ತಾನಜನಿತಮೋಕ್ಷ ನಿತ್ಯತ್ವಮ್ ಇತಿ ಚೇತ್ । ನ । ಗಙ್ಗಾಸ್ರೋತೋವತ್ಕರ್ತೃತ್ವಸ್ಯ ದುಃಖಿರೂಪತ್ವಾತ್ । ಕರ್ತೃತ್ವೋಪರಮೇ ಚ ಮೋಕ್ಷವಿಚ್ಛೇದಾತ್ ॥

(ಭಾಷ್ಯಾರ್ಥ)

(ಆಕ್ಷೇಪ :-) ಜ್ಞಾನ ಮತ್ತು ಕರ್ಮ - ಇವುಗಳ ಕರ್ತೃವು ನಿತ್ಯನಾಗಿರುವದರಿಂದ ಜ್ಞಾನಕರ್ಮಗಳ ಪ್ರವಾಹದಿಂದುಂಟಾದ ಮೋಕ್ಷವೂ ನಿತ್ಯವಾಗಿರಬಹುದಲ್ಲ !

(ಪರಿಹಾರ :-) ಹಾಗಲ್ಲ. ಏಕೆಂದರೆ ಗಂಗೆಯ ಪ್ರವಾಹದಂತೆ ಕರ್ತೃತ್ವವಿರುವದು ದುಃಖಿರೂಪವಾಗಿರುತ್ತದೆ.[3] ಮತ್ತು ಕರ್ತೃತ್ವವು ಹೋದರೆ ಮೋಕ್ಷವೂ ಕಡಿದುಹೋಗುತ್ತದೆ.[4]

ಉಪನಿಷತ್ಪ್ರಾರಂಭಸಮರ್ಥನದ ಉಪಸಂಹಾರ

(ಭಾಷ್ಯ)

೧೧. ತಸ್ಮಾತ್ (ಅವಿದ್ಯಾಕಾಮ)ಕರ್ಮೋಪಾದಾನಹೇತುನಿವೃತ್ತೌ ನ್ಯಾತ್ಮನ್ಯವ ಸ್ಥಾನಂ ಮೋಕ್ಷ ಇತಿ । ಸ್ವಯಂ ಚ ಆತ್ಮಾ ಬ್ರಹ್ಮ । ತದ್ವಿಜ್ಞಾನಾತ್ ಅವಿದ್ಯಾ ನಿವೃತ್ತಿಃ ಮೋಕ್ಷಃ ಇತಿ ಬ್ರಹ್ಮವಿದ್ಯಾರ್ಥಾ ಉಪನಿಷತ್ ಆರಭ್ಯತೇ ॥

(ಭಾಷ್ಯಾರ್ಥ)

ಆದ್ದರಿಂದ (ಅವಿದ್ಯೆ, ಕಾಮ), ಕರ್ಮ - ಎಂಬ (ದೇಹ)ಸ್ವೀಕಾರದ ಕಾರಣವು[5] ನಿವೃತ್ತಿಯಾಗಲಾಗಿ ತನ್ನ ಆತ್ಮನಲ್ಲಿಯೇ ನಿಲ್ಲುವದು ಮೋಕ್ಷವು.

---

1. ವಿಶೇಷಣಗಳೊಡನಿರುವ ಯೋಗ್ಯತೆಯು ಭಾವಕ್ಕೆ ಮಾತ್ರವೇ ಸೇರಿದ್ದು ಎಂದು ಅಭಿಪ್ರಾಯ. 2. ಇದು ವಾ॥ ಪಾಠ.

3. ಆದ್ದರಿಂದಲೇ ಕರ್ಮವನ್ನು ಮಾಡುತ್ತಲೇ ಇರಬೇಕೆಂದೂ ಯಾರೂ ಬಯಸುವದಿಲ್ಲ. ಸೂ ಭಾ. ೨-೩-೪೦. 4. ಆಗ ಮೋಕ್ಷವು ನಿತ್ಯವಲ್ಲದೆ ಹೋಗುತ್ತದೆ.

5. ಇಲ್ಲಿ 'ಅವಿದ್ಯಾಕಾಮ' ಎಂಬ ಮಾತುಗಳು ಬರೆದವರ ತಪ್ಪಿನಿಂದ ಹೆಚ್ಚು ಬಿದ್ದಿರಬಹುದೆಂದು ಊಹಿಸುವದಕ್ಕೆ ಅವಕಾಶವಿದೆ. 'ಕರ್ಮೋಪಾದಾನಹೇತುನಿವೃತ್ತೌ' ಎಂದು ಇಷ್ಟೇ ಇದ್ದರೆ ಪ್ರತಿಜ್ಞಾಭಾಷ್ಯ(ಭಾ.ಭಾ. ೧)ಕ್ಕೆ ಅನುಗುಣವಾಗುತ್ತದೆ. ''ಕರ್ಮವನ್ನು ಸ್ವೀಕರಿಸುವದಕ್ಕೆ

ಆತ್ಮನು ತಾನೇ ಬ್ರಹ್ಮವು, ಆ (ಬ್ರಹ್ಮವನ್ನು) ಅರಿತುಕೊಳ್ಳುವದರಿಂದ ಅವಿದ್ಯೆಯು ತೊಲಗುವದೆಂಬ ಮೋಕ್ಷವುಂಟಾಗುತ್ತದೆ.[1] ಆದ್ದರಿಂದ ಬ್ರಹ್ಮವಿದ್ಯೆಯನ್ನು ತಿಳಿಸುವದಕ್ಕೋಸ್ಕರ ಉಪನಿಷತ್ತನ್ನು ಪ್ರಾರಂಭಿಸಿದೆ.

ಉಪನಿಷತ್ತೆಂದರೆ ಏನು ?

(ಭಾಷ್ಯ)

೧೨. 'ಉಪನಿಷತ್' ಇತಿ ವಿದ್ಯಾ ಉಚ್ಯತೇ । ತಚ್ಛೀಲಿನಾಂ ಗರ್ಭಜನ್ಮ-ಜರಾದಿನಿಶಾತನಾತ್ ತದವಸಾದನಾದ್ವಾ, ಬ್ರಹ್ಮಣೋ ವಾ ಉಪನಿಗಮಯಿತೃತ್ವಾತ್ । ಉಪನಿಷಣ್ಣಂ ವಾ ಅಸ್ಯಾಂ ಪರಂ ಶ್ರೇಯಃ ಇತಿ । ತದರ್ಥತ್ವಾತ್ ಗ್ರನ್ಥೋಽಪಿ ಉಪನಿಷತ್ ।।

(ಭಾಷ್ಯಾರ್ಥ)

'ಉಪನಿಷತ್' ಎಂಬ ಮಾತು ವಿದ್ಯೆಯನ್ನು[2] ಹೇಳುತ್ತದೆ. ಆ (ವಿದ್ಯೆಯನ್ನು) ಅಭ್ಯಾಸಮಾಡುವವರಿಗೆ ಗರ್ಭದಲ್ಲಿ (ಸೇರುವದು), ಹುಟ್ಟುವದು, ಮುಪ್ಪು - ಮುಂತಾದ ದೋಷಗಳನ್ನು ಕೆತ್ತಿಹಾಕುವದರಿಂದ ಅಥವಾ ಕುಗ್ಗಿಸುವದರಿಂದ ಬ್ರಹ್ಮದ ಬಳಿಗೆ ಕೊಂಡೊಯ್ಯುವದರಿಂದ, ಅಥವಾ ಇದರಲ್ಲಿ ಪರಮಶ್ರೇಯಸ್ಸೇ ಆಶ್ರಯಿಸಿಕೊಂಡಿರುವದರಿಂದ (ಈ ವಿದ್ಯೆಗೆ) 'ಉಪನಿಷತ್ತು' ಎಂಬ ಹೆಸರು (ಬಂದಿರುತ್ತದೆ). ಆ (ವಿದ್ಯೆಯೆಂಬ) ಪ್ರಯೋಜನವನ್ನುಂಟುಮಾಡುವದರಿಂದ ಗ್ರಂಥವೂ ಉಪನಿಷತ್ತು (ಎನಿಸುತ್ತದೆ).[3]

ಕಾರಣವಾಗಿರುವ (ಅವಿದ್ಯಾಕಾಮಗಳು) ತೊಲಗಲಾಗಿ" ಎಂದು ಸರಳವಾಗಿ ಅರ್ಥವನ್ನು ಮಾಡಿಕೊಳ್ಳಬಹುದಾಗಿರುತ್ತದೆ.

1. ಅವಿದ್ಯೆಯು ತೊಲಗಿದರೆ ಕಾಮವು ತೊಲಗಿ ಕರ್ಮದಿಂದ ಬಿಡುಗಡೆಯು ಅವಶ್ಯವಾಗಿ ಆಗುತ್ತದೆ. 'ಸ್ವಾತ್ಮನ್ಯವಸ್ಥಾನಮ್' ಎಂಬ ಮೋಕ್ಷವಿವರಕ್ಕೆ ಕೇನ ಭಾ. ೨-೪ (ಭಾ.ಭಾ. ೫೮), ಕ.ಭಾ ೨-೧-೨ (ಭಾ.ಭಾ. ೧೦೨) ನೋಡಿ.

2. ಆತ್ಮತತ್ತ್ವಜ್ಞಾನವನ್ನು.

3. ತತ್ತ್ವಚಿಂತಕರಿಗೆ ಗರ್ಭಾದಿಗಳು ಅವಿದ್ಯಾಕಲ್ಪಿತವೇ ಹೊರತು ಪರಮಾರ್ಥವಲ್ಲ ಎಂಬ ದೃಢನಿಶ್ಚಯವಾಗಿರುತ್ತದೆ, ಬ್ರಹ್ಮವು ನಿತ್ಯಪ್ರಾಪ್ತವೆಂಬ ನಿಶ್ಚಯವೂ ಆಗಿರುತ್ತದೆ. ಆದ್ದರಿಂದ ತತ್ತ್ವಜ್ಞಾನಕ್ಕೆ ಉಪನಿಷತ್ ಎಂಬ ಹೆಸರು ಬಂದಿದೆ ಎಂದರ್ಥ. ಕಠ, ಮುಂಡಕ, ಬೃಹದಾರಣ್ಯಕ - ಇವುಗಳ ಭಾಷ್ಯಗಳಲ್ಲಿ ಉಪನಿಷತ್ ಎಂಬ ಶಬ್ದಕ್ಕೆ ಕೊಟ್ಟಿರುವ ನಿರ್ವಚನವನ್ನು ನೋಡಿರಿ.

ಶೀಕ್ಷಾವಲ್ಲಿ

೧. ಶಾಂತಿಪಾಠ

॥ ಓಂ ॥

ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ । ಶಂ ನ ಇನ್ದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಅವತು ಮಾಮ್ । ಅವತು ವಕ್ತಾರಮ್ ॥೧॥

ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥

೧. ನಮಗೆ ಮಿತ್ರನು ಸುಖವನ್ನುಂಟು(ಮಾಡಲಿ) ! ವರುಣನು ಸುಖವನ್ನುಂ(ಟುಮಾಡಲಿ) ! ಅರ್ಯಮನು ಸುಖ(ಕಾರಕ) ನಾಗಲಿ ! ಇಂದ್ರನೂ ಬೃಹಸ್ಪತಿಯೂ ಸುಖವ(ನ್ನುಂಟುಮಾಡಲಿ) ! ಉರುಕ್ರಮನಾದ ವಿಷ್ಣುವು ನಮಗೆ ಸುಖವ(ನ್ನುಂಟುಮಾಡಲಿ) ! ಬ್ರಹ್ಮಕ್ಕೆ ನಮಸ್ಕಾರ ! ವಾಯುವೆ, ನಿನಗೆ ನಮಸ್ಕಾರ ! ನೀನೇ ಪ್ರತ್ಯಕ್ಷ ಬ್ರಹ್ಮವಾಗಿರುತ್ತೀಯೆ. ನೀನೇ ಪ್ರತ್ಯಕ್ಷಬ್ರಹ್ಮವೆನ್ನುವೆನು, ಋತವೆನ್ನುವೆನು, ಸತ್ಯವೆನ್ನುವೆನು. ಅದು ನನ್ನನ್ನು ಕಾಪಾಡಲಿ, ಅದು ಹೇಳುವಾತನನ್ನು ಕಾಪಾಡಲಿ ! ನನ್ನನ್ನು ಕಾಪಾಡಲಿ, ಹೇಳುವಾತನನ್ನು ಕಾಪಾಡಲಿ !

ಓಂ ಶಾಂತಿ , ಶಾಂತಿ, ಶಾಂತಿ !

(ಭಾಷ್ಯ)

೧ಃ. ಶಂ ಸುಖಂ ಪ್ರಾಣವೃತ್ತೇಃ ಅಹ್ನಶ್ಚ ಅಭಿಮಾನೀ ದೇವತಾತ್ಮಾ ಮಿತ್ರಃ ನಃ ಅಸ್ಮಾಕಂ ಭವತು । ತಥೈವ ಅಪಾನವೃತ್ತೇಃ ರಾತ್ರೇಶ್ಚ ಅಭಿಮಾನೀ ದೇವತಾತ್ಮಾ ವರುಣಃ । ಚಕ್ಷುಷಿ ಆದಿತ್ಯೇ ಚ ಅಭಿಮಾನೀ ಅರ್ಯಮಾ । ಬಲೇ ಇನ್ದ್ರಃ । ವಾಚಿ ಬುದ್ಧೌ ಚ ಬೃಹಸ್ಪತಿಃ । ವಿಷ್ಣುಃ ಉರುಕ್ರಮಃ ವಿಸ್ತೀರ್ಣಕ್ರಮಃ ಪಾದಯೋರಭಿ

ಮಾನೀ । ಏವಮ್ ಅಧ್ಯಾತ್ಮದೇವತಾಃ । ಶಂ ನಃ । 'ಭವತು' ಇತಿ ಸರ್ವತ್ರಾನು ಷಜ್ಗಃ । ತಾಸು ಹಿ ಸುಖಿಕೃತ್ಸು ವಿದ್ಯಾಶ್ರವಣಧಾರಣೋಪಯೋಗಾಃ ಅಪ್ರತಿಬನ್ಧೇನ ಭವಿಷ್ಯನ್ತಿ ಇತಿ ತತ್ಸುಖಿಕೃತ್ತ್ವಂ[1] ಪ್ರಾರ್ಥ್ಯತೇ "ಶಂ ನೋ ಭವತು" ಇತಿ ॥

(ಭಾಷ್ಯಾರ್ಥ)

ಪ್ರಾಣವೃತ್ತಿಗೂ ಹಗಲಿಗೂ ಅಭಿಮಾನಿಯಾದ ದೇವತಾನ್ತರೂಪನಾಗಿರುವ ಮಿತ್ರನು[2] ನಮಗೆ ಸುಖವನ್ನು (ಒಟುಮಾಡುವ) ನಾಗಲಿ ! ಹಾಗೆಯೇ ಅಪಾನವೃತ್ತಿಗೂ ರಾತ್ರಿಗೂ ಅಭಿಮಾನಿಯಾದ ದೇವತಾತ್ಮನಾದ ವರುಣನು ; ಕಣ್ಣಿಗೂ ಸೂರ್ಯನಿಗೂ ಅಭಿಮಾನಿಯಾದ ಅರ್ಯಮನು ; ಬಲಕ್ಕೆ ಅಭಿಮಾನಿಯಾದ ಇಂದ್ರನು ; ವಾಕ್ಕಿಗೂ ಬುದ್ಧಿಗೂ (ಅಭಿಮಾನಿಯಾದ) ಬೃಹಸ್ಪತಿಯು ; ಉರುಕ್ರಮನಾದ ಎಂದರೆ ವಿಸ್ತೀರ್ಣವಾಗಿ ಹೆಜ್ಜೆಯಿಡುವ ಪಾದಗಳಿಗಭಿಮಾನಿಯಾದ ವಿಷ್ಣು - ಈ ರೀತಿಯಲ್ಲಿರುವ ಅಧ್ಯಾತ್ಮದೇವತೆಗಳು.[3] ನಮಗೆ ಸುಖವನ್ನು 'ಉಂಟುಮಾಡಲಿ' ಎಂದು (ಹಿಂದೆ ಹೇಳಿರುವ ಮಾತನ್ನು) ಎಲ್ಲಾ ಕಡೆಯಲ್ಲಿಯೂ ಸೇರಿಸಿಕೊಳ್ಳಬೇಕು. ಅವರು ಸುಖವನ್ನುಂಟುಮಾಡಿದರೇ ವಿದ್ಯೆಯನ್ನು[4] ಶ್ರವಣಮಾಡುವದು, ಧಾರಣೆಮಾಡುವದು, (ಮತ್ತೊಬ್ಬರಿಗಾಗಿ) ಉಪಯೋಗಿಸುವದು - (ಇವು) ಅಡ್ಡಿಯಿಲ್ಲದೆ[5] ಆಗುವವು ಎಂಬ ಕಾರಣದಿಂದ ಅವರು ಸುಖಿಕಾರಕರಾಗಿರಲೆಂದು ಪ್ರಾರ್ಥಿಸಲಾಗಿದೆ.

(ಭಾಷ್ಯ)

೧೪. ಬ್ರಹ್ಮವಿದ್ಯಾವಿವಿದಿಷುಣಾ ನಮಸ್ಕಾರಬ್ರಹ್ಮವದನಕ್ರಿಯೇ[6] ವಾಯು

1. 'ಸುಖಿಕರ್ತೃತ್ವಮ್' ಎಂಬ ಆ॥ ಪಾಠಕ್ಕೂ ಇದೇ ಅರ್ಥ.

2. ದೇವತೆಗಳೆಲ್ಲ ಹಿರಣ್ಯಗರ್ಭನೆಂಬ ಹೆಸರಿನ ಬ್ರಹ್ಮಸ್ವರೂಪದಲ್ಲಿ ಅಡಕವಾಗಿರುತ್ತಾರೆ. ಹಗಲು ಮುಂತಾದವುಗಳಿಗೆ ಅಧಿದೇವತೆಗಳಾಗಿರುವವರೇ ಅಧ್ಯಾತ್ಮದೇವತೆಗಳು ಎಂಬುದನ್ನು ತಿಳಿಸುವದಕ್ಕಾಗಿ ಹೊರಗಿನ ಹಗಲು ಮುಂತಾದವುಗಳನ್ನೂ ಉದಾಹರಿಸುತ್ತಾರೆ.

3. ಅಧಿದೈವತಕ್ಕೂ ಇವರೇ ಅಭಿಮಾನಿಗಳಾದರೂ ಮುಖ್ಯವಾಗಿ ಇವರನ್ನು ಅಧ್ಯಾತ್ಮದೇವತೆಗಳಾಗಿಯೇ ಪ್ರಾರ್ಥನೆಮಾಡಿರುತ್ತದೆ.

4. ಇಲ್ಲಿ ಹೇಳುವ ಅಪರಬ್ರಹ್ಮವಿದ್ಯೆಯನ್ನು, ಉಪಾಸನೆಯನ್ನು.

5. ಉಪಾಸನಾವಿಷಯವನ್ನು ಶಾಸ್ತ್ರಾಚಾರ್ಯರುಗಳಿಂದ ಕೇಳಿ ತಿಳಿದುಕೊಂಡು ಅದನ್ನು ತನ್ನಲ್ಲಿಟ್ಟುಕೊಂಡು ಶಿಷ್ಯರಿಗೆ ತಿಳಿಸಿಕೊಡುವ ಸಾಮರ್ಥ್ಯವು ಬರುವದಕ್ಕೆ ಶರೀರವೂ ಇಂದ್ರಿಯಗಳೂ ಪಟುವಾಗಿರಬೇಕು. ಇದಕ್ಕೆ ಅಧ್ಯಾತ್ಮಾಭಿಮಾನಿದೇವತೆಗಳ ಅನುಗ್ರಹವು ಬೇಕಾಗುತ್ತದೆ.

6. ವನ್ದನಕ್ರಿಯೇ ಎಂಬ ಆ॥ ಪಾಠಕ್ಕಿಂತ ಈ ವಾ॥ ಕಾ॥ ವಾತವು ಉತ್ತಮ.

ವಿಷಯೇ ಬ್ರಹ್ಮವಿದ್ಯೋಪಸರ್ಗಶಾನ್ತ್ಯರ್ಥಂ ಕ್ರಿಯೇತೇ । ಸರ್ವಕ್ರಿಯಾಫಲಾನಾಂ ತದಧೀನತ್ವಾತ್ । ಬ್ರಹ್ಮವಾಯುಃ । ತಸ್ಮೈ ಬ್ರಹ್ಮಣೇ ನಮಃ ಪ್ರಹ್ವೀಭಾವಂ 'ಕರೋಮಿ' ಇತಿ ವಾಕ್ಯಶೇಷಃ । ನಮಃ ತೇ ತುಭ್ಯಂ ಹೇ ವಾಯೋ ನಮಸ್ಕರೋಮಿ ಇತಿ ಪರೋಕ್ಷ ಪ್ರತ್ಯಕ್ಷಾಭ್ಯಾಂ ವಾಯುರೇವಾಭಿಧೀಯತೇ । ಕಿಂ ಚ ತ್ವಮೇವ ಚಕ್ಷುರಾದ್ಯಪೇಕ್ಷ ಬಾಹ್ಯಂ ಸನ್ನಿಕೃಷ್ಟಮ್ ಅವ್ಯವಹಿತಂ ಪ್ರತ್ಯಕ್ಷಂ ಬ್ರಹ್ಮ ಅಸಿ ಯಸ್ಮಾತ್ ತಸ್ಮಾತ್ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ಯಥಾಶಾಸ್ತ್ರಂ ಯಥಾಕರ್ತವ್ಯಂ ಬುದ್ಧ್ಯಾ ಸುಪರಿನಿಶ್ಚಿತಮ್ ಅರ್ಥಂ[1] ತ್ವದಧೀನತ್ವಾತ್ ತ್ವಾಮೇವ ವದಿಷ್ಯಾಮಿ । 'ಸತ್ಯಮ್' ಇತಿ ಸ ಏವ ವಾಕ್ಕಾಯಾಭ್ಯಾಂ ಸಂಪಾದ್ಯಮಾನಃ । ಸೋಽಪಿ ತ್ವದಧೀನ ಏವ ಸಂಪಾದ್ಯಃ ಇತಿ ತ್ವಾಮೇವ ಸತ್ಯಂ ವದಿಷ್ಯಾಮಿ । ತತ್ ಸರ್ವಾತ್ಮಕಂ ವಾಯ್ವಾಖ್ಯಂ ಬ್ರಹ್ಮಮಯಾ ಏವಂ ಸ್ತುತಂ ಸತ್ ವಿದ್ಯಾರ್ಥಿನಂ ಮಾಮ್ ಅವತು ವಿದ್ಯಾಸಂಯೋಜನೇನ । ತದೇವ ಬ್ರಹ್ಮ ವಕ್ತಾರಮ್ ಆಚಾರ್ಯಂ ವಕ್ತೃತ್ವ ಸಾಮರ್ಥ್ಯಸಂಯೋಜನೇನ ಅವತು । ಅವತು ಮಾಮ್, ಅವತು ವಕ್ತಾರಮ್'' ಇತಿ ಪುನರ್ವಚನಮ್ ಆದರಾರ್ಥಮ್ । ''ಓಂ ಶಾನ್ತಿಃ ಶಾನ್ತಿಃ ಶಾನ್ತಿಃ'' ಇತಿ ತ್ರಿರ್ವಚನಂ ಆಧ್ಯಾತ್ಮಿಕಾಧಿಭೌತಿಕಾಧಿದೈವಿಕಾನಾಂ ವಿದ್ಯಾಪ್ರಾಪ್ತ್ಯುಪಸರ್ಗಾಣಾಂ ಪ್ರಶಮಾರ್ಥಮ್ ॥

(ಭಾಷ್ಯಾರ್ಥ)

ಬ್ರಹ್ಮವಿದ್ಯೆಯನ್ನು[2] ಅರಿತುಕೊಳ್ಳಬೇಕೆಂಬವನಿಂದ ಬ್ರಹ್ಮವಿದ್ಯೆಗೆ ಇರುವ ಅಡ್ಡಿಗಳು ಶಾಂತಿಯಾಗುವದಕ್ಕಾಗಿ ವಾಯುವಿಷಯಕವಾದ[3] ನಮಸ್ಕಾರ, ಬ್ರಹ್ಮವದನ ಎಂಬ ಕ್ರಿಯೆಗಳು (ಇಲ್ಲಿ) ಮಾಡಲ್ಪಟ್ಟಿರುತ್ತವೆ. ಎಲ್ಲಾ ಕರ್ಮಗಳ ಫಲಗಳೂ ಆತನ ಅಧೀನವಾಗಿರುವದರಿಂದ[4] (ಹೀಗೆ ನಮಸ್ಕರಿಸಿದೆ). ಬ್ರಹ್ಮವೆಂದರೆ ವಾಯು. ಆ ಬ್ರಹ್ಮಕ್ಕೆ ನಮಸ್ಕಾರ ! ನಮಸ್ಕಾರವನ್ನು 'ಮಾಡುತ್ತೇನೆ' ಎಂದು ವಾಕ್ಯಶೇಷವು. ಎಲೈ ವಾಯುವೆ, ನಿನಗೆ ನಮಸ್ಕಾರ, ನಮಸ್ಕಾರವನ್ನು ಮಾಡುತ್ತೇನೆ ಎಂದು

1 'ತದಪಿ' ಎಂದು ಆ।। ಪಾಠದಲ್ಲಿ ಹೆಚ್ಚಾಗಿದೆ.

2. ಇಲ್ಲಿ ಪ್ರಕೃತವಾಗಿರುವದು ಬ್ರಹ್ಮವಿದ್ಯೆ. ಆದ್ದರಿಂದ 'ಬ್ರಹ್ಮವಿದ್ಯಾವಿವಿದಿಷುಣಾ' ಎಂಬ (ವಾ।।) ಪಾಠವೇ ಮೇಲು.

3. ಕ್ರಿಯಾಶಕ್ತಿಪ್ರಧಾನನಾದ ಸೂತ್ರಾತ್ಮನನ್ನು ಇಲ್ಲಿ ವಾಯುವೆಂದು ಕರೆದಿದೆ. ಬೃ.ಭಾ. ೩-೭-೨ ನೋಡಿ. ವಾಯುವು ನಮ್ಮ ಶರೀರದಲ್ಲಿ ಪ್ರಾಣನಾಗಿರುತ್ತಾನೆ.

4. ಕರ್ಮಗಳು ಸರಿಯಾಗಿ ನಡೆದು ಫಲವನ್ನು ಕೊಡಬೇಕಾದರೆ ಸೂತ್ರಾತ್ಮನ ಅನುಗ್ರಹವು ಬೇಕು.

ಪರೋಕ್ಷಪ್ರತ್ಯಕ್ಷವಾದ (ವಚನ)ಗಳಿಂದ[1] ವಾಯುವನ್ನೇ ಹೇಳಿರುತ್ತದೆ. ಮತ್ತು ಹೊರಗಿನ ಚಕ್ಷುರಾದೀಂದ್ರಿಯಗಳಿಗೆ ಹೋಲಿಸಿದರೆ[2] ನೀನೇ ಹತ್ತಿರವಿರುವ ನಡುವೆ ಏನೂ ಇಲ್ಲದ ಪ್ರತ್ಯಕ್ಷವಾದ ಬ್ರಹ್ಮವಾಗಿರುತ್ತೀಯೆ ! ಹೀಗಿರುವದರಿಂದ ನಿನ್ನನ್ನೇ[3] ಪ್ರತ್ಯಕ್ಷವಾದ ಬ್ರಹ್ಮವೆಂದು ಕರೆಯುವೆನು. ಋತವನ್ನು ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ಮಾಡಬೇಕೆಂದು ಬುದ್ಧಿಯಲ್ಲಿ ಚೆನ್ನಾಗಿ ನಿಶ್ಚಯವಾಗಿರುವ ಅರ್ಥವನ್ನು (ಅದು) ನಿನ್ನ ಅಧೀನವಾಗಿರುವದರಿಂದ ನೀನೆಂದೇ ಹೇಳುವೆನು. ಸತ್ಯವೆಂದರೂ ಅದೇ ; ಮಾತಿನಿಂದಲೂ ಶರೀರದಿಂದಲೂ ಮಾಡತಕ್ಕದ್ದು.[4] ಅದೂ ನಿನ್ನ ಅಧೀನವಾಗಿಯೇ ಮಾಡಿಕೊಳ್ಳಬೇಕಾಗಿರುವದರಿಂದ[5] ನಿನ್ನನ್ನೇ ಸತ್ಯವೆಂದು ಕರೆಯುವೆನು. ಆ ಸರ್ವಾತ್ಮನಾದ[6] ವಾಯುವೆಂಬ ಬ್ರಹ್ಮವು ಹೀಗೆ ನನ್ನಿಂದ ಸ್ತುತವಾಗಿರುವದಾಗಿ ವಿದ್ಯಾರ್ಥಿಯಾದ ನನ್ನನ್ನು ವಿದ್ಯೆಯನ್ನು ಕೊಟ್ಟು ಕಾಪಾಡಲಿ ! ಅದೇ ಬ್ರಹ್ಮವು ಹೇಳುವಾತನನ್ನು ಎಂದರೆ ಆಚಾರ್ಯನನ್ನು ಹೇಳಿಕೊಡುವ ಸಾಮರ್ಥ್ಯವನ್ನು ಕೊಡುವಮೂಲಕ ಕಾಪಾಡಲಿ ! ''ನನ್ನನ್ನು ಕಾಪಾಡಲಿ, ಹೇಳುವಾತನನ್ನು ಕಾಪಾಡಲಿ !'' ಎಂದು ಮತ್ತೆ ಹೇಳಿರುವದು ಆದರ(ವನ್ನು ತೋರಿಸು)ವದಕ್ಕೆ. ಓಂ ಶಾನ್ತಿಃ ಶಾನ್ತಿಃ ಶಾನ್ತಿಃ'' ಎಂದು ಮೂರು ಸಲ (ಶಾಂತಿಶಬ್ದವನ್ನು) ಹೇಳಿರುವದು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ (ಮೂರು ಬಗೆಯ) ಅಡ್ಡಿಗಳು[7] ನಾಶವಾಗಲೆಂದು.

---

1. 'ಬ್ರಹ್ಮಕ್ಕೆ ನಮಸ್ಕಾರ' ಎಂಬುದು ಪರೋಕ್ಷವಾಗಿ ಹೇಳಿದ್ದು ; 'ವಾಯುವೆ, ನಿನಗೆ ನಮಸ್ಕಾರ' ಎಂಬುದು ಪ್ರತ್ಯಕ್ಷವಾಗಿ ಹೇಳಿದ್ದು.

2. ಇಂದ್ರಿಯಗಳಿಗಿಂತ ಪ್ರಾಣನು ನಮಗೆ ಹತ್ತಿರದ ಆತ್ಮನು. ಪ್ರಾಣದಮೂಲಕ ಇಂದ್ರಿಯಗಳೂ ದೇಹವೂ ನಮ್ಮವೆನಿಸಿವೆ.

3. ಉಪನಿಷತ್ತಿನಲ್ಲಿರುವ 'ತ್ವಮೇವ' ಎಂಬುದನ್ನೇ 'ತ್ವಾಮೇವ' ಎಂದು ಭಾಷ್ಯದಲ್ಲಿ ಅರ್ಥಕ್ಕನುಗುಣವಾಗಿ ಬರೆದುಕೊಂಡಿದೆ.

4. ಮಾತಿನಿಂದ ಸತ್ಯವನ್ನು ಹೇಳುವದು, ಶರೀರದಿಂದ ಧರ್ಮವನ್ನು ಮಾಡುವದು.

5. ಶಾಸ್ತ್ರಾರ್ಥವನ್ನು ನಿಶ್ಚಯಿಸುವ ಕ್ರಿಯೆ, ಅದರಂತೆ ನಡೆನುಡಿಗಳನ್ನು ಇಟ್ಟುಕೊಳ್ಳುವ ಕ್ರಿಯೆ - ಇವೆರಡೂ ವಾಯುವಿನ ಅನುಗ್ರಹದಿಂದ ಆಗಬೇಕು.

6. ಕಾರ್ಯಕರಣಗಳಲ್ಲಿರುವ ಸರ್ವವ್ಯಾಪಾರರೂಪನಾಗಿರುವ.

7. ಶರೀರದ ಒಳಗೆ, ಮತ್ತು ಶರೀರದ ಹೊರಗೆ, ಏಕಸ್ಮಾತ್ತಾಗಿ ಆಗುವ ಅಡ್ಡಿಗಳು. ಪ್ರತಿದಿನವೂ ಸರ್ವದೇವತಾತ್ಮಕನಾದ ಪರಮೇಶ್ವರನನ್ನು ಆರಾಧಿಸುವ ಮುಮುಕ್ಷುವಿಗೆ ಕರಣಗಳ ಪಾಟವ, ಉತ್ತಮವಾದ ನನ್ನಿವೇಶ, ಏಕಸ್ಮಾತ್ತಾಗಿ ಒದಗಬಹುದಾದ ವಿಘ್ನಗಳ ಪರಿಹಾರ - ಎಲ್ಲವೂ ಆಗುವವು.

(ಭಾಷ್ಯ)

೧೫ ಅರ್ಥಜ್ಞಾನಪ್ರಧಾನತ್ವಾತ್ ಉಪನಿಷದಃ ಗ್ರಂಥಪಾಠೇ ಯತ್ನೋಪರಮೋ ಮಾ ಭೂತ್ ಇತಿ ಶೀಕ್ಷಾಧ್ಯಾಯ ಆರಭ್ಯತೇ -

(ಭಾಷ್ಯಾರ್ಥ)

ಉಪನಿಷತ್ತಿಗೆ[1] ಅರ್ಥಜ್ಞಾನವೇ ಮುಖ್ಯವಾಗಿರುವದರಿಂದ ಗ್ರಂಥವನ್ನು ಪಾಠಮಾಡುವದರಲ್ಲಿ ಯತ್ನವನ್ನು ಬಿಡುವದಾಗದೆ ಇರಲೆಂದು ಈ[2] ಶೀಕ್ಷಾಧ್ಯಾಯವನ್ನು ಆರಂಭಿಸಿರುತ್ತದೆ :-

೨. ಶೀಕ್ಷಾಧ್ಯಾಯ

ಓಂ ಶೀಕ್ಷಾಂ ವ್ಯಾಖ್ಯಾಸ್ಯಾಮಃ । ವರ್ಣಃ ಸ್ವರಃ । ಮಾತ್ರಾ ಬಲಮ್ । ಸಾಮ ಸನ್ತಾನಃ । ಇತ್ಯುಕ್ತಃ ಶೀಕ್ಷಾಧ್ಯಾಯಃ ॥೨॥

೨. ಶೀಕ್ಷೆಯನ್ನು ವ್ಯಾಖ್ಯಾನಮಾಡುವೆವು. ವರ್ಣ, ಸ್ವರ, ಮಾತ್ರೆ, ಬಲ, ಸಾಮ, ಸಂತಾನ - ಹೀಗೆ ಶೀಕ್ಷಾಧ್ಯಾಯವನ್ನು ಹೇಳಿದ್ದಾಯಿತು.

(ಭಾಷ್ಯ)

೧೬. ಶಿಕ್ಷಾ ಶಿಕ್ಷ್ಯತೇ ಅನಯಾ ಇತಿ, ವರ್ಣಾದ್ಯುಚ್ಚಾರಣಲಕ್ಷಣಮ್ । ಶಿಕ್ಷ್ಯನ್ತ ಇತಿ ವಾ ಶಿಕ್ಷಾಃ ವರ್ಣಾದಯಃ । ಶಿಕ್ಷೈವ ಶೀಕ್ಷಾ । ದೈರ್ಘ್ಯಂ ಛಾನ್ದಸಮ್ । ತಾಂ ಶೀಕ್ಷಾಂ ವ್ಯಾಖ್ಯಾಸ್ಯಾಮಃ ವಿ ಸ್ಪಷ್ಟಮ್ ಆ ಸಮನ್ತಾತ್ ಪ್ರಕಥಯಿಷ್ಯಾಮಃ । ಚಕ್ಷಿಙೋ ವಾ ಖ್ಯಾಞಾದಿಷ್ಟಸ್ಯ ವ್ಯಾಙ್‌ಪೂರ್ವಸ್ಯ ವ್ಯಕ್ತವಾಕ್ಕರ್ಮಣ ಏತದ್ರೂಪಮ್ । ತತ್ರ ವರ್ಣಃ ಅಕಾರಾದಿಃ ಸ್ವರಃ ಉದಾತ್ತಾದಿಃ । ಮಾತ್ರಾ ಹ್ರಸ್ವಾದ್ಯಾಃ । ಬಲಂ ಪ್ರಯತ್ನವಿಶೇಷಃ । ಸಾಮ ವರ್ಣಾನಾಂ ಮಧ್ಯಮವೃತ್ತ್ಯಾ ಉಚ್ಚಾರಣಮ್ ಸಮತಾ । ಸನ್ತಾನಃ ಸನ್ತತಿಃ । ಸಂಹಿತಾ ಇತ್ಯರ್ಥಃ । ಏಷ ಹಿ ಶಿಕ್ಷಿತವ್ಯೋಽರ್ಥಃ । ಶಿಕ್ಷಾ ಯಸ್ಮಿನ್ ಅಧ್ಯಾಯೇ ಸೋಽಯಂ ಶೀಕ್ಷಾಧ್ಯಾಯಃ ಇತಿ ಏವಮ್ ಉಕ್ತಃ ಇತ್ಯುಪಸಂಹಾರಃ ಉತ್ತರಾರ್ಥಃ ॥

1. ಮಂತ್ರಗಳಿಗೆ ಉಚ್ಚಾರಣೆಯು ಪ್ರಧಾನ ; ಉಪನಿಷತ್ತಿನ ವಾಕ್ಯಗಳಿಗೆ ಹಾಗಲ್ಲ. ಅರ್ಥವನ್ನು ಅರಿಯದೆ ಉಪಾಸನೆಯನ್ನು ಮಾಡುವದಕ್ಕಾಗಲಿ ತತ್ತ್ವವನ್ನು ತಿಳಿದು ಕೊಳ್ಳುವದಕ್ಕಾಗಲಿ ಆಗಲಾರದು.

2. ಸರಿಯಾದ ಅರ್ಥವಾಗುವದಕ್ಕೆ ಗ್ರಂಥೋಚ್ಚಾರಣೆ ಸರಿಯಾಗಿರಬೇಕು.

(ಭಾಷ್ಯಾರ್ಥ)

. ಯಾವದರಿಂದ ಕಲಿಯುತ್ತೇವೆಯೋ ಅದು ಶಿಕ್ಷೆ. ವರ್ಣಗಳೇ ಮುಂತಾದವುಗಳ ಉಚ್ಚಾರಣೆಯ ಶಾಸ್ತ್ರವು. ಅಥವಾ ಯಾವವು ಕಲಿಸಲ್ಪಡುತ್ತವೆಯೋ ಆ ವರ್ಣಾದಿಗಳೇ ಶಿಕ್ಷೆ (ಯೆನಿಸುವವು).[1] ಶಿಕ್ಷೆಯೇ ಶೀಕ್ಷೆ ; (ಇಲ್ಲಿ ಬಂದಿರುವ) ದೀರ್ಘವು ವೇದಭಾಷೆಯದು.[2] ಆ ಶೀಕ್ಷೆಯನ್ನು ವ್ಯಾಖ್ಯಾನಮಾಡುವೆವು, ಎಂದರೆ (ವಿ) ವಿಸ್ಪಷ್ಟವಾಗಿ (ಆ) ಎಲ್ಲಾ ವಿಧದಿಂದಲೂ (ಖ್ಯಾ) ವಿವರಿಸುವೆವು (ಎಂದರ್ಥ). ಅಥವಾ (ಇಲ್ಲಿರುವ ವ್ಯಾಖ್ಯಾಸ್ಯಾಮಃ ಎಂಬ) ಈ (ಶಬ್ದ) ರೂಪವು ವ್ಯಕ್ತವಾಗಿ ಹೇಳು ಎಂಬರ್ಥದ ಚಕ್ಷಿಙ್ ಎಂಬ ಧಾತುವಿಗೆ ಖ್ಯಾಞ್ ಎಂಬ ಆದೇಶವು ಬಂದಿದೆ ; ಇದಕ್ಕೆ ವಿ, ಆಙ್ ಎಂಬ ಉಪಸರ್ಗಗಳನ್ನು ಹಿಂದೆ (ಸೇರಿಸಿ ಆದ ರೂಪವಿದು ಎಂದಾದರೂ ಹೇಳಬಹುದು).[3]

ಇವುಗಳಲ್ಲಿ[4] ವರ್ಣವೆಂದರೆ ಅಕಾರಾದಿಗಳು. ಸ್ವರವೆಂದರೆ ಉದಾತ್ತವೇ ಮುಂತಾದದ್ದು.[5] ಮಾತ್ರೆಗಳು ಎಂದರೆ ಹ್ರಸ್ವವೇ ಮುಂತಾದದ್ದು. ಬಲ ಎಂದರೆ ಆಯಾ (ಉಚ್ಚಾರಣೆಯ) ಪ್ರಯತ್ನವು. ಸಾಮ ಎಂದರೆ ವರ್ಣಗಳನ್ನು ನಡುವಿನ ಧ್ವನಿಯಿಂದ ಉಚ್ಚರಿಸುವದು. ಸಮತೆ, ಸಂತಾನ ಎಂದರೆ ಎಡೆಬಿಡದೆ ಇರುವದು ಸಂಹಿತೆ ಎಂದರ್ಥ.

ಇಷ್ಟೇ (ಉಚ್ಚಾರಣೆಯ ವಿಷಯದಲ್ಲಿ) ಕಲಿಯಬೇಕಾಗಿರುವ ವಿಷಯವು. ಯಾವ ಅಧ್ಯಾಯದಲ್ಲಿ ಶಿಕ್ಷೆ ಇರುವದೋ ಅದೇ ಶೀಕ್ಷಾಧ್ಯಾಯವು. (ಅದನ್ನು) 'ಇತಿ' ಹೀಗೆಂದು ಹೇಳಿದ್ದಾಯಿತು - ಎಂದು ಉಪಸಂಹಾರಮಾಡಿರುವದು ಮುಂದಿನ ವಿಷಯವನ್ನು (ಪ್ರಾರಂಭಮಾಡು)ವದಕ್ಕೆ.[6]

---

1. ಶಿಕ್ಷ್-ಕಲಿ ಎಂಬ ಧಾತುವಿನಿಂದ ಕರಣಾರ್ಥದಲ್ಲಿ ಹುಟ್ಟಿರುವ ರೂಪವೆಂದು ಭಾವಿಸಿದರೆ ಶಿಕ್ಷಾ ಎಂಬ ಶಬ್ದಕ್ಕೆ ವರ್ಣಾದಿಗಳನ್ನು ಉಚ್ಚರಿಸುವದನ್ನು ತಿಳಿಸುವ ಶಾಸ್ತ್ರವೆಂದು ಅರ್ಥವಾಗುತ್ತದೆ, ಕರ್ಮಾರ್ಥದಲ್ಲಿ ಹುಟ್ಟಿರುವ ರೂಪವಿದೆಂದು ಭಾವಿಸಿದರೆ ವರ್ಣಾದಿಗಳು ಎಂದರ್ಥವಾಗುತ್ತದೆ ; ಎರಡನೆಯದೇ ಇಲ್ಲಿ ಹೆಚ್ಚು ಒಪ್ಪುತ್ತದೆ.

2. ಶಿಕ್ಷಾ ಎಂಬ ಮಾತಿಗೆ ವೈದಿಕಭಾಷೆಯಲ್ಲಿ ಶೀಕ್ಷಾ ಎಂಬ ರೂಪವೂ ಉಂಟು. ಅರ್ಥಭೇದವೇನೂ ಇಲ್ಲ.

3. ಖ್ಯಾ-ಪ್ರಕಥನೇ ಎಂಬ ಧಾತುವಿನಿಂದಲೇ ಅಲ್ಲದೆ ಚಕ್ಷಿಙ್ - ವ್ಯಕ್ತಾಯಾಂ ವಾಚಿ ಎಂಬ ಧಾತುವಿನಿಂದ ಹುಟ್ಟಿದ್ದು ಈ ರೂಪವು ಎಂದಾದರೂ ಹೇಳಬಹುದು ಎಂದರ್ಥ.

4. ವರ್ಣಾದಿಗಳಲ್ಲಿ.

5. ಉದಾತ್ತ, ಅನುದಾತ್ತ, ಸ್ವರಿತ - ಎಂಬೀ ಮೂರು ರೂಪದ್ದು.

6. ಶೀಕ್ಷಾಧ್ಯಾಯವನ್ನು ಹೇಳಿ ಅದರಲ್ಲಿ ಅಡಕವಾಗಿರುವ ಸಂಹಿತೆಯ ವಿಷಯವಾದ

೩. ಸಂಹಿತೋಪಾಸನೆ

ಸಹ ನೌ ಯಶಃ । ಸಹ ನೌ ಬ್ರಹ್ಮವರ್ಚಸಮ್ । ಅಥಾತಃ ಸಗ್ಂ ಹಿತಾಯಾ ಉಪನಿಷದಂ ವ್ಯಾಖ್ಯಾಸ್ಯಾಮಃ । ಪಞ್ಚಸ್ವಧಿಕರಣೇಷು । ಅಧಿಲೋಕಮಧಿಜ್ಯೌತಿಷಮಧಿವಿದ್ಯಮಧಿಪ್ರಜಮಧ್ಯಾತ್ಮಮ್ । ತಾ ಮಹಾಸಗ್ಂಹಿತಾ ಇತ್ಯಾಚಕ್ಷತೇ । ಅಥಾಧಿಲೋಕಮ್ । ಪೃಥಿವೀ ಪೂರ್ವರೂಪಮ್ । ದ್ಯೌರುತ್ತರರೂಪಮ್ । ಆಕಾಶಃ ಸನ್ಧಿಃ । ವಾಯುಃ ಸನ್ಧಾನಮ್ । ಇತ್ಯಧಿಲೋಕಮ್ । ಅಥಾಧಿಜ್ಯೌತಿಷಮ್ । ಅಗ್ನಿಃ ಪೂರ್ವರೂಪಮ್ । ಆದಿತ್ಯಉತ್ತರರೂಪಮ್ । ಆಪಃ ಸನ್ಧಿಃ । ವೈದ್ಯುತಃ ಸನ್ಧಾನಮ್ । ಇತ್ಯಧಿಜ್ಯೌತಿಷಮ್ । ಅಥಾಧಿವಿದ್ಯಮ್ । ಆಚಾರ್ಯಃ ಪೂರ್ವರೂಪಮ್ । ಅನ್ತೇವಾಸ್ಯುತ್ತರರೂಪಮ್ । ವಿದ್ಯಾ ಸನ್ಧಿಃ । ಪ್ರವಚನಗ್ಂ ಸನ್ಧಾನಮ್ । ಇತ್ಯಧಿವಿದ್ಯಮ್ । ಅಥಾಧಿಪ್ರಜಮ್ । ಮಾತಾ ಪೂರ್ವರೂಪಮ್ । ಪಿತೋತ್ತರ ರೂಪಮ್ । ಪ್ರಜಾ ಸನ್ಧಿಃ । ಪ್ರಜನನಗ್ಂ ಸನ್ಧಾನಮ್ । ಇತ್ಯಧಿ ಪ್ರಜಮ್ । ಅಥಾಧ್ಯಾತ್ಮಮ್ । ಅಧರಾ ಹನುಃ ಪೂರ್ವ ರೂಪಮ್ । ಉತ್ತರಾ ಹನುರುತ್ತರರೂಪಮ್ । ವಾಕ್ ಸನ್ಧಿಃ । ಜಿಹ್ವಾ ಸನ್ಧಾನಮ್ । ಇತ್ಯಧ್ಯಾತ್ಮಮ್ । ಇತೀಮಾ ಮಹಾಸಗ್ಂಹಿತಾಃ । ಯ ಏವಮೇತಾ ಮಹಾಸಗ್ಂಹಿತಾ ವ್ಯಾಖ್ಯಾತಾ ವೇದ । ಸನ್ಧೀಯತೇ ಪ್ರಜಯಾ ಪಶುಭಿಃ । ಬ್ರಹ್ಮವರ್ಚಸೇನಾನ್ನಾದ್ಯೇನ ಸುವರ್ಗ್ಯೇಣ[1] ಲೋಕೇನ ॥೩॥

೩. ನಮ್ಮಿಬ್ಬರಿಗೂ ಜೊತೆಯಲ್ಲಿಯೇ ಕೀರ್ತಿ(ಯುಂಟಾಗಲಿ) ! ನಮ್ಮಿಬ್ಬರಿಗೂ ಜೊತೆಯಲ್ಲಿಯೇ ಬ್ರಹ್ಮವರ್ಚಸ್ಸು(ಂಟಾಗಲಿ) ! ಇನ್ನು ಆವ್ದರಿಂದ ಸಂಹಿತೆಯ ಉಪನಿಷತ್ತನ್ನು ವಿವರಿಸುವೆವು. ಐದು ಅಧಿಕರಣ

ಉಪಾಸನೆಯನ್ನು ಇನ್ನು ಹೇಳುವೆವೆಂದು ಸೂಚಿಸುವದಕ್ಕೆ. ವಾ॥ಕಾ॥ಗೋ॥ ಪಾಠಗಳಲ್ಲಿ 'ಉಪಸಂಹಾರಾರ್ಥಃ' ಎಂದಿಷ್ಟೇ ಇದೆ.

1. 'ಸುವರ್ಗ್ಯೇಣ', 'ಸುವರ್ಗೇಣ' ಎಂದು ಎರಡು ಪಾಠಗಳಿವೆ ; ಇವುಗಳಲ್ಲಿ ಯಾವದು ಯುಕ್ತರವೆಂಬುದನ್ನು ಲಕ್ಷಣಶಾಸ್ತ್ರವನ್ನು ಬಲ್ಲ ವೈದಿಕರಿಂದ ನಿರ್ಣಯಿಸಬೇಕಾಗಿದೆ.

ಗಳಲ್ಲಿ ಅಧಿಲೋಕ, ಅಧಿಜ್ಯೌತಿಷ, ಅಧಿವಿದ್ಯ, ಅಧಿಪ್ರಜ, ಅಧ್ಯಾತ್ಮ. ಅವುಗಳನ್ನು ಮಹಾಸಂಹಿತೆಗಳೆಂದು ಕರೆಯುತ್ತಿದ್ದಾರೆ.

ಈಗ ಅಧಿಲೋಕ :- ಪೃಥಿವಿಯು ಹಿಂದಿನ ರೂಪವು ; ದ್ಯುಲೋಕವು ಮುಂದಿನ ರೂಪವು ; ಆಕಾಶವು ಸಂಧಿ ; ವಾಯುವು ಸಂಧಾನವು. ಇಂತು ಅಧಿಲೋಕವಾಯಿತು.

ಈಗ ಅಧಿಜ್ಯೌತಿಷ :- ಅಗ್ನಿಯು ಹಿಂದಿನ ರೂಪವು ; ಆದಿತ್ಯನು ಮುಂದಿನ ರೂಪವು ; ಅಪ್ಸು ಸಂಧಿ ; ಮಿಂಚು ಸಂಧಾನವು. ಇಂತು ಅಧಿಜ್ಯೌತಿಷವಾಯಿತು.

ಈಗ ಅಧಿವಿದ್ಯ :- ಆಚಾರ್ಯನು ಹಿಂದಿನ ರೂಪವು ; ಶಿಷ್ಯನು ಮುಂದಿನ ರೂಪವು ; ವಿದ್ಯೆಯು ಸಂಧಿ ; ಹೇಳಿಕೊಡುವದೇ ಸಂಧಾನವು. ಇಂತು ಅಧಿವಿದ್ಯವಾಯಿತು.

ಈಗ ಅಧಿಪ್ರಜ :- ತಾಯಿಯು ಹಿಂದಿನ ರೂಪವು ; ತಂದೆಯು ಮುಂದಿನ ರೂಪವು ; ಪ್ರಜೆಯು ಸಂಧಿಯು ; ಪ್ರಜನನವು ಸಂಧಾನವು. ಇಂತು ಅಧಿಪ್ರಜವಾಯಿತು.

ಈಗ ಅಧ್ಯಾತ್ಮ :- ಕೆಳಗಿನ ದವಡೆಯು ಹಿಂದಿನ ರೂಪವು ; ಮೇಲಿನ ದವಡೆಯು ಮುಂದಿನ ರೂಪವು ; ವಾಕ್ಕು ಸಂಧಿ ; ನಾಲಗೆಯು ಸಂಧಾನವು. ಇಂತು ಅಧ್ಯಾತ್ಮವಾಯಿತು.

ಇಂತಿವು **ಮಹಾಸಂಹಿತೆಗಳು**. ಈ ವಿವರಿಸಿದ ದೊಡ್ಡ ಸಂಹಿತೆಗಳನ್ನು ಯಾವಾತನು ತಿಳಿಯುವನೋ ಅವನು - ಮಕ್ಕಳು, ದನಕರುಗಳು, ಬ್ರಹ್ಮವರ್ಚಸ್ಸು, ಅನ್ನಾದ್ಯವು, ಸ್ವರ್ಗಲೋಕ - ಇವುಗಳಿಂದ ಕೂಡಿಕೊಳ್ಳುತ್ತಾನೆ.

ಕೀರ್ತಿ, ಬ್ರಹ್ಮವರ್ಚಸ್ಸು - ಇವುಗಳಿಗಾಗಿ ಪ್ರಾರ್ಥನೆ

(ಭಾಷ್ಯ)

೧೭. ಅಧುನಾ ಸಂಹಿತೋಪನಿಷತ್ ಉಚ್ಯತೇ । ತತ್ರ ಸಂಹಿತಾದ್ಯುಪನಿಷತ್ಪರಿಜ್ಞಾನನಿಮಿತ್ತಂ ಯದ್ ಯಶಃ ಪ್ರಾರ್ಥ್ಯತೇ ತತ್ ನೌ ಆವಯೋಃ ಶಿಷ್ಯಾಚಾರ್ಯಯೋಃ ಸಹೈವ ಅಸ್ತು । ತನ್ನಿಮಿತ್ತಂ ಚ ಯದ್ ಬ್ರಹ್ಮವರ್ಚಸಂ ತೇಜಃ ತಚ್ಚ ಸಹೈವ ಅಸ್ತು ಇತಿ

ಶಿಷ್ಯವಚನಮ್ ಆಶೀಃ । ಶಿಷ್ಯಸ್ಯ ಹಿ ಕೃತಾರ್ಥತ್ವಾತ್ ಪ್ರಾರ್ಥನಾ ಉಪವದ್ಯತೇ ನಾಚಾರ್ಯಸ್ಯ । ಕೃತಾರ್ಥತ್ವಾತ್ । ಕೃತಾರ್ಥೋ ಹಿ ಆಚಾರ್ಯೋ ನಾಮ ಭವತಿ ॥

(ಭಾಷ್ಯಾರ್ಥ)

ಈಗ ಸಂಹಿತಾವಿಷಯವಾದ ಉಪಾಸನೆಯನ್ನು ಹೇಳಲಾಗುತ್ತದೆ. ಅಲ್ಲಿ ಸಂಹಿತೆಯೇ ಮುಂತಾದವರ[1] ಉಪಾಸನೆಯನ್ನು ಅರಿತುಕೊಂಡದ್ದರಿಂದ ಯಾವ ಯಶಸ್ಸನ್ನು ಕೋರಿದೆಯೋ[2] ಅದು ಶಿಷ್ಯಾಚಾರ್ಯರಾದ ನಮ್ಮಿಬ್ಬರಿಗೂ ಜೊತೆಯಲ್ಲಿಯೇ ಉಂಟಾಗಲಿ ! ಅದರ ನಿಮಿತ್ತದಿಂದಾಗುವ ಬ್ರಹ್ಮವರ್ಚಸವು ತೇಜಸ್ಸುಂಟಲ್ಲ,[3] ಅದೂ ಜೊತೆಯಲ್ಲಿಯೇ (ನಮ್ಮಿಬ್ಬರಿಗೂ) ಆಗಲಿ ! ಹೀಗೆಂಬುದು ಶಿಷ್ಯನ ಹಾರೈಕೆಯ ಮಾತು. ಏಕೆಂದರೆ ಶಿಷ್ಯನು ಕೃತಾರ್ಥನಲ್ಲವಾದ್ದರಿಂದ ಅವನು (ಹೀಗೆಂದು) ಹಾರೈಸುವದು ಹೊಂದಿಕೆಯಾಗುತ್ತದೆ ; ಆಚಾರ್ಯನು (ಹಾರೈಸುವ ದೆಂಬುದು) ಸರಿಯಾಗಲಾರದು, ಏಕೆಂದರೆ ಅವನು ಕೃತಾರ್ಥನಾಗಿರುತ್ತಾನೆ. ಕೃತಾರ್ಥನೇ ಅಲ್ಲವೆ, ಆಚಾರ್ಯನೆನಿಸುವವನು ?

ಸಂಹಿತೆಯ ಐದು ಉಪಾಸನೆಗಳು

(ಭಾಷ್ಯ)

೧೮. ಅಥ ಅನಸ್ತರಮ್ ಅಧ್ಯಯನಲಕ್ಷಣವಿಧಾನಸ್ಯ[4] (ಅತಃ) ಯತಃ ಅತ್ಯರ್ಥಂ ಗ್ರನ್ಥಭಾವಿತಾ ಬುದ್ಧಿಃ ನ ಶಕ್ಯತೇ ಸಹಸಾ ಅರ್ಥಜ್ಞಾನವಿಷಯೇ ಅವತಾರಯಿತುಮ್ ಇತ್ಯತಃ, ಸಂಹಿತಾಯಾ ಉಪನಿಷದಂ ಸಂಹಿತಾವಿಷಯಂ ದರ್ಶನಮ್ ಇತ್ಯೇತತ್ । ಗ್ರನ್ಥಸನ್ನಿಕೃಷ್ಟಾಮೇವ ವ್ಯಾಖ್ಯಾಸ್ಯಾಮಃ । ಪಞ್ಚಸು ಅಧಿಕರಣೇಷು ಆಶ್ರಯೇಷು ಜ್ಞಾನವಿಷಯೇಷು ಇತ್ಯರ್ಥಃ । ಕಾನಿ ತಾನೀತಿ ? ಆಹ - ಅಧಿಲೋಕಮ್ ಲೋಕೇಷ್ವಧಿ ಯದ್ ದರ್ಶನಮ್ ತತ್ ಅಧಿಲೋಕಮ್ । ತಥಾ ಅಧಿಜ್ಯೌತಿಷಮ್ ಅಧಿವಿದ್ಯಮ್ ಅಧಿಪ್ರಜಮ್ ಅಧ್ಯಾತ್ಮಮ್ ಇತಿ ।

---

1. ಇಲ್ಲಿ 'ಮುಂತಾದವರ' ಎಂದಿರುವದರಿಂದ ಇತರ ಉಪಾಸನೆಗಳನ್ನೂ ಗ್ರಹಿಸಬೇಕೆಂದು ಅರ್ಥ.

2. ಪ್ರಾಪ್ನತೇ ಎಂಬ (ವಾ॥) ಪಾಠದಲ್ಲಿ "ಯಾವ ಯಶಸ್ಸು ದೊರೆಯುವದೋ" ಎಂದು ಕನ್ನಡಿಸಿಕೊಳ್ಳಬೇಕು.

3. ತಮಿದಮಾದಿನಿಮಿತ್ತವಾದ ತೇಜಸ್ಸು ; ೩-೬ರ ಭಾಷ್ಯವನ್ನು ನೋಡಿ.

4. ಇಲ್ಲಿ 'ಪೂರ್ವವೃತ್ತಸ್ಯ' ಎಂಬ ಮಾತು ವಾ॥ ಕಾ॥ ಪಾಠಗಳಲ್ಲಿದೆ ; 'ಹಿಂದೆ ಆಗಿಹೋಗಿರುವ ಅಧ್ಯಯನದ ಲಕ್ಷಣವನ್ನು ವಿಧಿಸಿದಮೇಲೆ' ಎಂದು ಅದಕ್ಕೆ ಅರ್ಥ.

ತಾಃ ಏತಾಃ ಪಞ್ಚವಿಷಯಾ ಉಪನಿಷದಃ ಲೋಕಾದಿಮಹಾವಸ್ತುವಿಷಯತ್ವಾತ್, ಸಂಹಿತಾವಿಷಯತ್ವಾಚ್ಚ ಮಹತ್ಯಶ್ಚ ತಾಃ ಸಂಹಿತಾಶ್ಚ ಮಹಾಸಂಹಿತಾಃ ಇತಿ ಆಚಕ್ಷತೇ ಕಥಯನ್ತಿ ವೇದವಿದಃ ॥

(ಭಾಷ್ಯಾರ್ಥ)

'ಇನ್ನು' ಎಂದರೆ ಅಧ್ಯಯನದ ಲಕ್ಷಣವನ್ನು ವಿಧಿಸಿದಮೇಲೆ[1] (ಆದ್ದರಿಂದ)[2] ಬಹಳವಾಗಿ ಗ್ರಂಥದ ವಾಸನೆಯೇ ಬಲವಾಗಿರುವ ಬುದ್ಧಿಯನ್ನು ತಟಕ್ಕನೆ[3] ಅರ್ಥ ಜ್ಞಾನಕ್ಕೆ ಇಳಿಸುವದು ಆಗಲಾರದ್ದರಿಂದ ಸಂಹಿತೆಯ ಉಪನಿಷತ್ತನ್ನು ಎಂದರೆ ಗ್ರಂಥಕ್ಕೆ ಹತ್ತಿರವೇ ಇರುವ[4] ಸಂಹಿತಾವಿಷಯವಾದ ಉಪಾಸನೆಯನ್ನು ಎಂದರ್ಥ ; (ಅದನ್ನು) ವಿವರಿಸುತ್ತೇವೆ. ಐದು ಅಧಿಕರಣಗಳಲ್ಲಿ ಎಂದರೆ ಆಶ್ರಯಗಳಲ್ಲಿ, ಜ್ಞಾನವಿಷಯ ಗಳಲ್ಲಿ[5] (ಉಪಾಸನೆಯನ್ನು ವಿವರಿಸುತ್ತೇವೆ) ಎಂದರ್ಥ. ಅವು ಯಾವವು ? - ಎಂದರೆ (ಶ್ರುತಿಯು) ಹೇಳುತ್ತದೆ : ಅಧಿಲೋಕವು, ಲೋಕಗಳನ್ನು ಕುರಿತ ಉಪಾಸನೆಯು ಯಾವದೋ ಅದು ಅಧಿಲೋಕವು. ಇದರಂತೆಯೇ ಅಧಿಜ್ಯೌತಿಷ, ಅಧಿವಿದ್ಯ, ಅಧಿಪ್ರಜ, ಅಧ್ಯಾತ್ಮ - (ಇವುಗಳನ್ನೂ ಅರ್ಥಮಾಡಿಕೊಳ್ಳಬೇಕು). ಐದು ವಿಷಯಗಳ ಆ ಈ ಉಪನಿಷತ್ತುಗಳು[6] ಲೋಕಗಳೇ ಮುಂತಾದ ಮಹಾವಸ್ತುಗಳನ್ನು ಕುರಿತ (ಉಪಾಸನೆ)ಗಳಾದ್ದರಿಂದಲೂ ಸಂಹಿತೆಗಳನ್ನು ಕುರಿತ (ಉಪಾಸನೆ)ಗಳಾದ್ದರಿಂದಲೂ ಮಹಾಸಂಹಿತೆಗಳು ಎಂದು ವೇದವನ್ನು ಬಲ್ಲವರು (ಇವನ್ನು) ಕರೆಯುತ್ತಾರೆ.

1. ಅಧ್ಯಯನದಲ್ಲಿ ಲಕ್ಷವಿಡಬೇಕಾದ ವರ್ಣ, ಸ್ವರ - ಮುಂತಾದವುಗಳ ವಿಚಾರವನ್ನು ಹಿಂದೆ ಹೇಳಲಾಗಿದೆ ; ಈ ಅನುವಾಕದಲ್ಲಿ ಸಂಧಿಗಳ ವಿಷಯವಾದ ಉಪಾಸನೆ ಯನ್ನು ಹೇಳಿರುತ್ತದೆ.

2. 'ಅತಃ' ಎಂಬ ಮಾತಿನ ಪರಿವರ್ತನೆಯಿದು. ಈ ಮಾತು ವಾ॥ ಮುಂತಾದ ಕೋಶಗಳಲ್ಲಿಲ್ಲ. ಇದಿಲ್ಲದಿದ್ದರೂ ಸಾಗುತ್ತದೆ.

3. ಗ್ರಂಥವಾಸನೆಯಿರುವವರಿಗೆ ಮೇಧಾಶಕ್ತಿಯೊಂದೇ ಸಾಕು ; ಅರ್ಥವಿಚಾರ ವನ್ನು ಮಾಡುವವರಿಗೆ ವಿಕಾಗ್ರತೆಯಿಂದ ನೋಡುವ ಧ್ಯಾನಶಕ್ತಿಯೂ ಬೇಕು. ಆದ್ದರಿಂದ.

4. ಉಪಾಸನೆಗಳಲ್ಲಿ ಗ್ರಂಥಕ್ಕೆ ಸಂಬಂಧಪಟ್ಟ ಉಪಾಸನೆಗಳನ್ನೇ ಮೊದಲು ಹೇಳಿರುವದು ಸೌಕರ್ಯಕ್ಕೆ ; ಏಕೆಂದರೆ ಅಧ್ಯಯನಮಾಡಿರುವವರಿಗೆ ವೇದದಲ್ಲಿರುವ ಶಬ್ದರೂಪವು ಚೆನ್ನಾಗಿ ಗೊತ್ತಾಗಿರುತ್ತದೆ.

5. ಉಪಾಸನೆಗೆ ವಿಷಯವಾದ ಲೋಕ ಮುಂತಾದವುಗಳಲ್ಲಿ.

6. ಉಪಾಸನೆಗಳು. ಉಪನಿಷತ್ತೆಂದರೆ ಈ ಪ್ರಕರಣದಲ್ಲಿ ಉಪಾಸನೆ

ಸಂಹಿತೋಪಾಸನೆಗಳ ವಿವರ

(ಭಾಷ್ಯ)

೧೯. ಅಥ ತಾಸಾಂ ಯಥೋಪನ್ಯಸ್ತಾನಾಂ (ಮಧ್ಯೇ)[1] ಅಧಿಲೋಕಂ ದರ್ಶನಮುಚ್ಯತೇ । ದರ್ಶನಕ್ರಮವಿವಕ್ಷಾರ್ಥಃ ಅಥಶಬ್ದಃ ಸರ್ವತ್ರ । ಪೃಥಿವೀ ಪೂರ್ವರೂಪಮ್ । ಪೂರ್ವೋ ವರ್ಣಃ ಪೂರ್ವರೂಪಮ್ । ಸಂಹಿತಾಯಾಃ ಪೂರ್ವೋ ವರ್ಣೋ ವೃಥಿವೀದೃಷ್ಟ್ಯಿಃ ಕರ್ತವ್ಯಾ ಇತ್ಯುಕ್ತಂ ಭವತಿ । ತಥಾ ದ್ಯೌಃ ಉತ್ತರರೂಪಮ್ । ಆಕಾಶಃ ಅನ್ತರಿಕ್ಷಲೋಕಃ ಸನ್ಧಿಃ ಮಧ್ಯಂ ಪೂರ್ವೋತ್ತರ ರೂಪಯೋಃ, ಸನ್ಧೀಯತೇ ಅಸ್ಮಿನ್ ಪೂರ್ವೋತ್ತರರೂಪೇ ಇತಿ । ವಾಯುಃ ಸನ್ಧಾನಮ್ । ಸನ್ಧೀಯತೇ ಅನೇನ ಇತಿ ಸನ್ಧಾನಮ್ । ಇತಿ ಅಧಿಲೋಕಂ ದರ್ಶನಮ್ ಉಕ್ತಮ್ । 'ಅಥಾಧಿಜ್ಯೌತಿಷಮ್' ಇತ್ಯಾದಿ ಸಮಾನಮ್ ॥

(ಭಾಷ್ಯಾರ್ಥ)

ಈಗ ಮೇಲೆ ಹೇಳಿದ (ಉಪಾಸನೆಗ)ಳೊಳಗೆ ಅಧಿಲೋಕವಾದ ಉಪಾಸನೆಯನ್ನು ಹೇಳಲಾಗುವದು. (ಮೂಲದಲ್ಲಿರುವ) 'ಅಥ' ಈಗ ಎಂಬ ಶಬ್ದವು (ಇಲ್ಲಿ) ಎಲ್ಲಾ ಕಡೆಯಲ್ಲಿಯೂ ಉಪಾಸನೆಯ ಕ್ರಮವನ್ನು[2] ಹೇಳುವ ಇಚ್ಛೆಯಿಂದ (ಉಪಯೋಗಿಸಲ್ಪಟ್ಟಿರುತ್ತದೆ). ಪೃಥ್ವಿಯು ಹಿಂದಿನ ರೂಪವು. ಹಿಂದಿನ ರೂಪವೆಂದರೆ ಹಿಂದಿನ ವರ್ಣವು. ಸಂಹಿತೆಯ[3] ಹಿಂದಿನ ವರ್ಣದಲ್ಲಿ ಪೃಥ್ವಿ ಎಂಬ ದೃಷ್ಟಿಯನ್ನು ಮಾಡಬೇಕು[4] ಎಂದು ಹೇಳಿದಂತೆ ಆಯಿತು. ಹೀಗೆಯೇ[5] ದ್ಯುಲೋಕವು ಮುಂದಿನ ರೂಪವು ; ಆಕಾಶವು ಎಂದರೆ ಅಂತರಿಕ್ಷಲೋಕವು ಸಂಧಿ ಎಂದರೆ ಹಿಂದು

---

1. ಈ ಮಾತು ವಾ॥ ಕಾ॥ ಪಾಠಗಳಲ್ಲಿ ಹೆಚ್ಚಾಗಿರುತ್ತದೆ.

2. ಈಗ ಉಪಾಸನೆಯ ವಿವರವು ಮೊದಲಾಯಿತು ಎಂದು ತಿಳಿಸುವದಕ್ಕೆ ಮತ್ತು ಈ ಕ್ರಮದಲ್ಲಿ ಉಪಾಸನೆಯನ್ನು ಮಾಡಬೇಕೆಂದು ತಿಳಿಸುವದಕ್ಕೆ.

3. ವೇದದಲ್ಲಿ 'ಇಷೇ ತ್ವಾ ಊರ್ಜೇ ತ್ವಾ' ಇವುಗಳು ಸೇರಿ 'ಇಷೇ ತ್ವೋರ್ಜೇ ತ್ವಾ' ಎಂದಾಗಿರುವದಷ್ಟೆ ? ಈ ಸಂಹಿತೆಯಲ್ಲಿ ಹಿಂದಿನ ವರ್ಣವಾದ ಆಕಾರವನ್ನು ಪೃಥ್ವಿಯೆಂದು ತಿಳಿಯಬೇಕು ಎಂದರ್ಥ.

4. ಆಕಾರವು ಪೃಥ್ವಿಯಲ್ಲ, ಆದರೂ ಪೃಥ್ವಿ ಎಂದು ಅದನ್ನು ಧ್ಯಾನಮಾಡಬೇಕು. ಶಾಲಗ್ರಾಮಶಿಲೆಯನ್ನು ವಿಷ್ಣುವೆಂದು ಬಗೆವಂತೆಯೇ ಇದು. ಹೀಗೆ ಒಂದು ವಸ್ತುವನ್ನು ಮತ್ತೊಂದೆಂಬ ದೃಷ್ಟಿಯಿಂದ ಉಪಾಸನೆಮಾಡುವದಕ್ಕೆ ಪ್ರತೀಕೋಪಾಸನೆ ಎಂದು ಹೆಸರು.

5. ಸಂಹಿತೆಯ ಮುಂದಿನ ವರ್ಣವಾದ ಊಕಾರದಲ್ಲಿ ಸ್ವರ್ಗವೆಂಬ ದೃಷ್ಟಿಯನ್ನು ಮಾಡಿ ಉಪಾಸನೆಮಾಡಬೇಕು ಎಂದರ್ಥ.

ಮುಂದಿನ ವರ್ಣಗಳ ನಡುಭಾಗವು. (ಇದರಲ್ಲಿ)[1] ಹಿಂದುಮುಂದಿನ ವರ್ಣಗಳು ಸೇರುತ್ತವೆಯಾದ್ದರಿಂದ (ಇದಕ್ಕೆ ಸಂಧಿ ಎಂದು ಹೆಸರು). ವಾಯುವು ಸಂಧಾನವು ; ಇದರಿಂದ[2] ಸೇರಿಸೋಣವಾಗುತ್ತದೆಯಾದ್ದರಿಂದ (ಇದು ಸಂಧಾನವೆನಿಸುತ್ತದೆ). ಈ ರೀತಿಯಲ್ಲಿ ಅಧಿಲೋಕದ ಉಪಾಸನೆಯನ್ನು ಹೇಳಿದ್ದಾಯಿತು.

'ಈಗ ಅಧಿಜ್ಯೌತಿಷವು' ಮುಂತಾದದ್ದರ (ಅರ್ಥವು ಮೇಲೆ ವಿವರಿಸಿರುವ ಅಧಿಲೋಕದ ವಿವರಣೆಗೆ) ಸಮಾನವಾಗಿರುತ್ತದೆ.[3]

ಉಪಾಸನೆಯ ಸ್ವರೂಪ

(ಭಾಷ್ಯ)

೨೦. 'ಇತೀಮಾಃ' ಇತಿ ಉಕ್ತಾಃ ಉಪಪ್ರದರ್ಶ್ಯನ್ತೇ । ಯಃ ಕಶ್ಚಿತ್ ಏವಮ್ ಏತಾಃ ಮಹಾಸಂಹಿತಾಃ ವ್ಯಾಖ್ಯಾತಾಃ ವೇದ ಉಪಾಸ್ತೇ । 'ವೇದ' ಇತಿ ಉಪಾಸನಂ ಸ್ಯಾತ್ । ವಿಜ್ಞಾನಾಧಿಕಾರಾತ್, ''ಇತಿ ಪ್ರಾಚೀನಯೋಗ್ಯೋಪಾಸ್ವ'' (೧-೬) ಇತಿ ಚ ವಚನಾತ್ । ಉಪಾಸನಂ ಚ ಯಥಾಶಾಸ್ತ್ರಂ ತುಲ್ಯಪ್ರತ್ಯಯಸನ್ತತಿಃ, ಅಸಙ್ಕೀರ್ಣಾ ಚ ಅತತ್ಪ್ರತ್ಯಯೈಃ ಶಾಸ್ತ್ರೋಕ್ತಾಲಮ್ಬನವಿಷಯಾ ಚ । ಪ್ರಸಿದ್ಧಶ್ಚ ಉಪಾಸನಶಬ್ದಾರ್ಥೋ ಲೋಕೇ 'ಗುರುಮ್ ಉಪಾಸ್ತೇ', 'ರಾಜಾನಮ್ ಉಪಾಸ್ತೇ' ಇತಿ । ಯೋ ಹಿ ಗುರ್ವಾದೀನ್ ಸನ್ತತಮ್ ಉಪಚರತಿ ಸ ಉಪಾಸ್ತೇ ಇತ್ಯುಚ್ಯತೇ । ಸ ಚ ಫಲಮ್ ಆಪ್ನೋತ್ಯುಪಾಸನಸ್ಯ । ಅತಃ ಅತ್ರಾಪಿ ಯ ಏವಂ ವೇದ ಸನ್ಧೀಯತೇ ಪ್ರಜಾದಿಭಿಃ ಸ್ವರ್ಗಾನ್ತೈಃ । ಪ್ರಜಾದಿಫಲಂ ಪ್ರಾಪ್ನೋತಿ[4] ಇತ್ಯರ್ಥಃ ॥

(ಭಾಷ್ಯಾರ್ಥ)

'ಇಂತಿವು' ಎಂದು (ಹಿಂದೆ) ಹೇಳಿರುವ (ಸಂಹಿತೆಗಳನ್ನು) ಪರಾಮರ್ಶಿ

1. ತ್ವಾ, ಊ ಇವುಗಳ ನಡುವಿನ ಭಾಗವನ್ನು ಆಕಾಶವೆಂದು ಚಿಂತಿಸಬೇಕು.

2. ಓಕಾರದಿಂದ ಆಊಕಾರಗಳೆರಡೂ ಸೇರಿಸಲ್ಪಟ್ಟಿವೆಯಾದ್ದರಿಂದ ಅದು ಸಂಧಾನವು - ಎಂದರ್ಥ. ಸಾಯಣಭಾಷ್ಯದಲ್ಲಿ ಕೊಟ್ಟಿರುವ ಉದಾಹರಣೆ ಹೀಗಿದೆ : ಇಷೇ ತ್ವಾ ಎಂಬಲ್ಲಿ ಏಕಾರವು ಪೃಥ್ವಿ ; ತಕಾರವು ದ್ಯುಲೋಕವು ; ಅವುಗಳ ನಡುವೆ ಇರುವ ಭಾಗವು ಆಕಾಶವು ; ಸಂಹಿತೆಯಿಂದ ಇಷೇತ್ವಾ ಎಂದಾಗುವ ದ್ವಿರ್ಭಾವದ ತಕಾರವು ವಾಯು - ಎಂದು ಚಿಂತಿಸಬೇಕು.

3. ಹಿಂದಿನ ವರ್ಣವು ವಹ್ನ್ಯಾದಿ, ಮುಂದಿನದು ಆದಿತ್ಯಾದಿ, ನಡುವಣ ಭಾಗವು ಅಬಾದಿ, ಕೂಡಿಸುವ ಸಂಧಿಯ ವರ್ಣವು ವಿದ್ಯುದಾದಿ ಎಂದು ಚಿಂತಿಸಬೇಕು ಎಂದರ್ಥ.

4. 'ಫಲಾನ್ಯಾಪ್ನೋತಿ' ಎಂದು ಆ॥ ಪಾಠ.

ಸಿರುತ್ತವೆ. ಯಾವನೇ ಆಗಲಿ ಈ ರೀತಿಯಲ್ಲಿ[1] ಈ ವಿವರಿಸಿದ ಮಹಾಸಂಹಿತೆಗಳನ್ನು 'ವೇದ' ಉಪಾಸನೆಮಾಡುವನೋ (ಎಂದರ್ಥ). ವೇದ ಎಂಬ (ಮಾತಿಗೆ ಇಲ್ಲಿ) ಉಪಾಸನೆಯೇ (ಅರ್ಥ)ವಾಗಿರಬೇಕು[2] ; ಏಕೆಂದರೆ ಇದು ಉಪಾಸನೆಯ ಪ್ರಕರಣವಾಗಿರುತ್ತದೆ,[3] ಮತ್ತು ಮುಂದೆ "ಹೀಗೆಂದು ಎಲ್ಲೆ ಪ್ರಾಚೀನಯೋಗ್ಯನೆ, ಉಪಾಸನೆಮಾಡು" (೧-೬) ಎಂದು ಹೇಳಿಯೂ ಇರುತ್ತದೆ. 'ಉಪಾಸನೆ' ಎಂದರೆ ಶಾಸ್ತ್ರೋಕ್ತವಾದ ಆಲಂಬನವನ್ನು ಕುರಿತು ಶಾಸ್ತ್ರದಲ್ಲಿ ಹೇಳಿರುವಂತೆ ಸಮಾನವಾದ ಪ್ರತ್ಯಯಗಳನ್ನು ಬೇರೆಯ ವಿಷಯದ ಪ್ರತ್ಯಯಗಳ ಬೆರಕೆಯಿಲ್ಲದೆ ಪ್ರವಾಹವಾಗಿ (ನಡೆಯಿಸಿಕೊಂಡು ಹೋಗುವದು)[4]. ಇದಲ್ಲದೆ 'ಗುರುವನ್ನು ಉಪಾಸನೆಮಾಡುತ್ತಾನೆ', 'ರಾಜನನ್ನು ಉಪಾಸನೆಮಾಡುತ್ತಾನೆ' - ಎಂದು (ಹೇಳುವಾಗ) ಉಪಾಸನೆ ಎಂಬ ಶಬ್ದದ ಅರ್ಥವು ಲೋಕದಲ್ಲಿ[5] ಪ್ರಸಿದ್ಧವೂ ಆಗಿದೆ. ಯಾವನು ಗುರುವೇ ಮೊದಲಾದವರನ್ನು ಒಂದೇಸಮನೆ ಉಪಚರಿಸುತ್ತಾನೋ ಅವನು ಉಪಾಸನೆ ಮಾಡುತ್ತಾನೆ ಎನ್ನತ್ತಾರಲ್ಲವೆ ? ಮತ್ತು ಅವನು (ಆ) ಉಪಾಸನೆಯ ಫಲವನ್ನು ಪಡೆದುಕೊಳ್ಳುತ್ತಾನೆ (ಎಂಬುದೂ ಪ್ರಸಿದ್ಧವು).[6] ಆದ್ದರಿಂದ ಇಲ್ಲಿಯೂ ಯಾವಾತನು ಹೀಗೆಂದು ತಿಳಿಯುವನೋ[7] ಅವನು ಪ್ರಜೆ ಮುಂತಾಗಿ ಸ್ವರ್ಗದವರೆಗಿನ ಫಲಗಳಿಂದ ಕೂಡಿಕೊಳ್ಳುತ್ತಾನೆ, ಎಂದರೆ ಪ್ರಜೆಯೇ ಮುಂತಾದ ಫಲಗಳನ್ನು ಪಡೆದುಕೊಳ್ಳುತ್ತಾನೆ[8] ಎಂದರ್ಥ.

1. ಇಲ್ಲಿ ವಿಧಿಸಿರುವ ರೀತಿಯಲ್ಲಿ.

2. ವೇದ ಎಂದರೆ ಅರಿಯುತ್ತಾನೆ, ಚಿಂತಿಸುತ್ತಾನೆ - ಎಂದು ವೇದದಲ್ಲಿ ಎರಡು ಅರ್ಥಗಳು ಇಲ್ಲಿ 'ಚಿಂತಿಸುತ್ತಾನೆ' ಎಂದೇ ಅರ್ಥ.

3. ಶೀಕ್ಷಾವಲ್ಲಿಯಲ್ಲಿ ಉಪಾಸನೆಯನ್ನೇ ಮುಖ್ಯವಾಗಿ ಹೇಳಿರುತ್ತದೆ ; ಮುಂದಿನ ವಲ್ಲಿಯಲ್ಲಿ ಜ್ಞಾನವನ್ನು ಹೇಳಿದೆ.

4. ಪ್ರ.ಭಾ.೫-೧, ಛಾಂ. ಸಂಬಂಧಭಾಷ್ಯ, ಬೃ.ಭಾ. ೧-೩-೨, ಗೀ.ಭಾ.೧೨-೩, ಸೂ.ಭಾ. ೪-೧-೧ ಇವುಗಳಲ್ಲಿ ಉಪಾಸನಾಶಬ್ದಕ್ಕೆ ಇದೇ ನಿರ್ವಚನವಿದೆ.

5. ವೈದಿಕವಲ್ಲದ ಸಂಸ್ಕೃತಭಾಷೆಯಲ್ಲಿ.

6. ಗುರುವಿನ ಉಪಾಸನೆಯಿಂದ ವಿದ್ಯೆಯನ್ನೂ, ರಾಜನ ಉಪಾಸನೆಯಿಂದ ಗ್ರಾಮಾದಿಗಳನ್ನೂ ಪಡೆಯುತ್ತಾನೆ.

7. ಉಪಾಸನೆಮಾಡುವನೋ.

8. ಪ್ರಜೆ, ಪಶು, ಅನ್ನ - ಇವು ದೃಷ್ಟಫಲಗಳು ; ಸ್ವರ್ಗವು ಅದೃಷ್ಟಫಲ. ಇಲ್ಲಿ ಕೊಟ್ಟಿರುವ ಉಪಾಸನೆಗಳನ್ನು ಉಪಾಸಕನು ತನ್ನ ಕಾಮಗಳಿಗೆ ಅನುಗುಣವಾಗಿ ಬೇಕಾದರೆ ಕೂಡಿಸಿಕೊಳ್ಳಬಹುದು, ಇಲ್ಲದಿದ್ದರೆ ಬಿಡಬಹುದು. ಸೂ.ಭಾ.೩-೩-೬೦ನ್ನು ನೋಡಿ.

೪. ವಿವಿಧ ಜಪಹೋಮಗಳು

ಅನುವಾಕದ ವಿಷಯ

(ಭಾಷ್ಯ)

೨೧. 'ಯಶ್ಛನ್ದಸಾಮ್' ಇತಿ ಮೇಧಾಕಾಮಸ್ಯ ಶ್ರೀಕಾಮಸ್ಯ ಚ ತತ್ಪ್ರಾಪ್ತಿ ಸಾಧನಂ ಜಪಹೋಮೌ ಉಚ್ಯೇತೇ । ''ಸ ಮೇನ್ದ್ರೋ ಮೇಧಯಾ ಸ್ಪೃಣೋತು'', ''ತತೋ ಮೇ ಶ್ರಿಯಮಾವಹ'' ಇತಿ ಚ ಲಿಙ್ಗದರ್ಶನಾತ್ ॥

(ಭಾಷ್ಯಾರ್ಥ)

'ಯಾವನು ಛಂದಸ್ಸುಗಳಿಗೆ' ಎಂಬ (ಅನುವಾಕದಲ್ಲಿ) ಮೇಧಾಕಾಮನಿಗೂ ಶ್ರೀಕಾಮನಿಗೂ[1] ಅವುಗಳನ್ನು ಪಡೆದುಕೊಳ್ಳುವದಕ್ಕೆ ಸಾಧನವಾಗಿ ಜಪಹೋಮ ಗಳನ್ನು ಹೇಳಿರುತ್ತದೆ. ''ಆ ಇಂದ್ರನು ನನ್ನನ್ನು ಮೇಧಾಶಕ್ತಿಯಿಂದ ಬಲಪಡಿಸಲಿ !'', ''ಆಮೇಲೆ ಶ್ರೀಯನ್ನು ನನಗಾಗಿ ತರುವವನಾಗು !'' ಎಂದೂ (ಮೇಧಾಶ್ರೀಗಳನ್ನು ಸೂಚಿಸುವ ಮಾತಿನ) ಗುರುತು (ಇಲ್ಲಿ) ಕಂಡುಬರುವದರಿಂದ (ಹೀಗೆಂದು) ನಿಶ್ಚಯಿಸಬೇಕು.

ಯಶ್ಛನ್ದಸಾಮೃಷಭೋ ವಿಶ್ವರೂಪಃ । ಛನ್ದೋಭ್ಯೋಽಧ್ಯಮೃತಾತ್ ಸಂಬಭೂವ । ಸ ಮೇನ್ದ್ರೋ ಮೇಧಯಾ ಸ್ಪೃಣೋತು । ಅಮೃತಸ್ಯ ದೇವ ಧಾರಣೋ ಭೂಯಾಸಮ್ । ಶರೀರಂ ಮೇ ವಿಚರ್ಷಣಮ್ । ಜಿಹ್ವಾ ಮೇ ಮಧುಮತ್ತಮಾ । ಕರ್ಣಾಭ್ಯಾಂ ಭೂರಿ ವಿಶ್ರುವಮ್ । ಬ್ರಹ್ಮಣಃ ಕೋಶೋಽಸಿ ಮೇಧಯಾ ಪಿಹಿತಃ । ಶ್ರುತಂ ಮೇ ಗೋಪಾಯ । ಆವಹನ್ತೀ ವಿತನ್ವಾನಾ । ಕುರ್ವಾಣಾ ಚೀರಮಾತ್ಮನಃ । ವಾಸಾಗ್ಂಸಿ ಮಮ ಗಾವಶ್ಚ । ಅನ್ನಪಾನೇ ಚ ಸರ್ವದಾ । ತತೋ ಮೇ ಶ್ರಿಯಮಾವಹ । ಲೋಮಶಾಂ ಪಶುಭಿಃ ಸಹ ಸ್ವಾಹಾ । ಆ ಮಾಯನ್ತು ಬ್ರಹ್ಮಚಾರಿಣಃ ಸ್ವಾಹಾ । ವಿ ಮಾಯನ್ತು ಬ್ರಹ್ಮಚಾರಿಣಃ ಸ್ವಾಹಾ । ಪ್ರ ಮಾಯನ್ತು ಬ್ರಹ್ಮಚಾರಿಣಃ ಸ್ವಾಹಾ । ದಮಾಯನ್ತು ಬ್ರಹ್ಮಚಾರಿಣಃ ಸ್ವಾಹಾ । ಶಮಾಯನ್ತು ಬ್ರಹ್ಮಚಾರಿಣಃ ಸ್ವಾಹಾ । ಯಶೋ ಜನೇಽಸಾನಿ

1. ಶರೀರಾದಿಗಳ ಸುಸ್ಥಿತಿ, ಕೀರ್ತಿ - ಮುಂತಾದವುಗಳನ್ನು ಬಯಸುವವರಿಗೂ ಎಂದು ಸೇರಿಸಿಕೊಳ್ಳಬೇಕು. ಏಕೆಂದರೆ ಇಲ್ಲಿ ಅವನ್ನೂ ಪ್ರಾರ್ಥಿಸಿದೆ.

ಸ್ವಾಹಾ । ಶ್ರೇಯಾನ್ ವಸ್ಯಸೋಽಸಾನಿ ಸ್ವಾಹಾ । ತಂ ತ್ವಾ ಭಗ ಪ್ರವಿಶಾನಿ ಸ್ವಾಹಾ । ಸ ಮಾ ಭಗ ಪ್ರವಿಶ ಸ್ವಾಹಾ । ತಸ್ಮಿನ್ತ್ಸಹಸ್ರ ಶಾಖೇ । ನಿ ಭಗಾಹಂ ತ್ವಯಿ ಮೃಜೇ ಸ್ವಾಹಾ । ಯಥಾಪಃ ಪ್ರವತಾ ಯನ್ತಿ । ಯಥಾ ಮಾಸಾ ಅಹರ್ಜರಮ್ । ಏವಂ ಮಾಂ ಬ್ರಹ್ಮ ಚಾರಿಣಃ । ಧಾತರಾಯನ್ತು ಸರ್ವತಃ ಸ್ವಾಹಾ । ಪ್ರತಿವೇಶೋಽಸಿ ಪ್ರ ಮಾ ಭಾಹಿ ಪ್ರ ಮಾ ಪದ್ಯಸ್ವ ॥೪॥

೪. ಯಾವನು ಛಂದಸ್ಸುಗಳಿಗೆ ಋಷಭನಾಗಿರುವನೋ, ವಿಶ್ವರೂಪನಾಗಿರುವನೋ ಛಂದಸ್ಸುಗಳಿಂಬ ಅಮೃತದಿಂದ ಉಂಟಾಗಿರುವನೋ ಆ ಇಂದ್ರನು ನನ್ನನ್ನು ಮೇಧಾಶಕ್ತಿಯಿಂದ ಬಲಪಡಿಸಲಿ ! ಎಲ್ಲೈ ದೇವನೆ, (ನಾನು) ಅಮೃತವನ್ನು ಧರಿಸುವಂತಾಗಲಿ ! ನನ್ನ ಶರೀರವು ಯೋಗ್ಯವಾಗಲಿ ! ನನ್ನ ನಾಲಗೆಯು ಅತ್ಯಂತ ಸವಿಯುಳ್ಳದ್ದಾಗಲಿ ! (ನಾನು) ಕಿವಿಗಳಿಂದ ಹೆಚ್ಚು ಕೇಳುವಂತೆ ಆಗಲಿ ! (ನೀನು) ಬ್ರಹ್ಮದ ಕೋಶವಾಗಿರುತ್ತೀಯೇ, ಮೇಧೆಯಿಂದ ಮುಚ್ಚಿಕೊಂಡಿರುತ್ತೀಯೆ ! ನಾನು ಕೇಳಿದ್ದನ್ನು ಕಾಪಾಡಿಕೊಡು ! ನನಗೆ ಬಚ್ಚೈಗಳು, ಗೋವುಗಳು ಮತ್ತು ಅನ್ನಪಾನಗಳು - ಇವುಗಳನ್ನು ಯಾವಾಗಲೂ ಹೊತ್ತು ತರುವವಳೂ, ಹೆಚ್ಚಿಸುವವಳೂ ಯಾವಾಗಲೂ (ಇರುವಂತೆ) ಮಾಡುವವಳೂ ಆಗಿ, ತುಪ್ಪಟದಿಂದ ಕೂಡಿದವಳೂ ಪಶುಗಳಿಂದ ಕೂಡಿದವಳೂ ಆದ ಶ್ರೀಯನ್ನು ಆಮೇಲೆ ನನಗಾಗಿ ತರುವವನಾಗು, ಸ್ವಾಹಾ ! ಬ್ರಹ್ಮಚಾರಿಗಳು ನನ್ನಲ್ಲಿಗೆ ಬರಲಿ, ಸ್ವಾಹಾ ! ಬ್ರಹ್ಮಚಾರಿಗಳು ನನ್ನಲ್ಲಿಗೆ ವಿಧವಿಧವಾಗಿ ಬರಲಿ, ಸ್ವಾಹಾ ! ಬ್ರಹ್ಮಚಾರಿಗಳು ನನ್ನಲ್ಲಿಗೆ ಪ್ರಕೃಷ್ಟವಾಗಿ ಬರಲಿ, ಸ್ವಾಹಾ ! ಬ್ರಹ್ಮಚಾರಿಗಳು ದಮವುಳ್ಳವರಾಗಿ ಬರಲಿ, ಸ್ವಾಹಾ ! ಬ್ರಹ್ಮಚಾರಿಗಳು ಶಮವುಳ್ಳವರಾಗಿ ಬರಲಿ, ಸ್ವಾಹಾ ! ಜನರಲ್ಲಿ (ನಾನು) ಯಶಸ್ಸುಳ್ಳವನಾಗುವಂತಾಗಲಿ, ಸ್ವಾಹಾ ! ಹೆಚ್ಚಿನವನೂ ಹೆಚ್ಚಿನ ಧನವಂತನೂ ಆಗುವಂತಾಗಲಿ, ಸ್ವಾಹಾ ! ಎಲ್ಲೈ ಭಗವಂತನೆ, ನಿನ್ನನ್ನು ನಾನು ಸೇರಿಕೊಳ್ಳುವಂತಾಗಲಿ, ಸ್ವಾಹಾ ! ಆ ನೀನು, ಎಲ್ಲೈ ಭಗವಂತನೆ ! ನನ್ನನ್ನು ಸೇರಿಕೊ, ಸ್ವಾಹಾ ! ಸಾವಿರ ಶಾಖೆಗಳುಳ್ಳ ಆ ನಿನ್ನಲ್ಲಿ ನಾನು (ಪಾಪವನ್ನು) ತೊಳೆದುಕೊಳ್ಳುತ್ತೇನೆ, ಸ್ವಾಹಾ ! ನೀರು ತಗ್ಗಿಗೆ ಹರಿದುಬರುವಂತೆಯೂ,

ತಿಂಗಳುಗಳು ಅಹರ್ಜರವನ್ನು (ಸೇರಿಕೊಳ್ಳುವಂತೆಯೂ) ನನ್ನನ್ನು ಬ್ರಹ್ಮ ಚಾರಿಗಳು ಎಲ್ಲಾ ಕಡೆಯಿಂದಲೂ ಎಲೈ ಧಾತನೆ, ಬಂದು ಸೇರಲಿ, ಸ್ವಾಹಾ ! (ನೀನು) ಪ್ರತಿವೇಶವಾಗಿರುತ್ತೀಯೆ, ನನಗೆ ಹೊಳೆಯುವವನಾಗು, ನನ್ನನ್ನು ಹೊಂದುವವನಾಗು !

ಮೇಧಾಕಾಮನಿಗೆ ಜಪ

(ಭಾಷ್ಯ)

೨೨. ಯಃ ಛನ್ದಸಾಂ ವೇದಾನಾಮ್ ಋಷಭ ಇವ ಋಷಭಃ । ಪ್ರಾಧಾನ್ಯಾತ್ । ವಿಶ್ವರೂಪಃ ಸರ್ವರೂಪಃ । ಸರ್ವವಾಗ್ವ್ಯಾಪ್ತೇಃ । 'ತದ್ಯಥಾ ಶಙ್ಕುನಾ' (ಛಾಂ. ೨-೨೩-೩) ಇತ್ಯಾದಿಶ್ರುತ್ಯನ್ತರಾತ್ । ಅತ ಏವ ಋಷಭತ್ವಮ್ ಓಂಕಾರಸ್ಯ । ಓಂಕಾರೋ ಹಿ ಅತ್ರ ಉಪಾಸ್ಯಃ ಇತಿ ಋಷಭಾದಿಶಬ್ದೈಃ ಸ್ತುತಿಃ ನ್ಯಾಯ್ಯೈವ ಓಂಕಾರಸ್ಯ । ಛನ್ದೋಭ್ಯಃ ವೇದೇಭ್ಯಃ । ವೇದಾ ಹಿ ಅಮೃತಮ್, ತಸ್ಮಾತ್ ಅಮೃತಾತ್ ಅಧಿ ಸಂಬಭೂವ । ಲೋಕವೇದವ್ಯಾಹೃತಿಭ್ಯಃ ಸಾರಿಷ್ಠಂ ಜಿಘೃಕ್ಷೋಃ ಪ್ರಜಾಪತೇಸ್ತಪಸ್ಯತಃ ಓಂಕಾರಃ ಸಾರಿಷ್ಠತ್ವೇನ ಪ್ರತ್ಯಭಾತ್ ಇತ್ಯರ್ಥಃ । ನ ಹಿ ನಿತ್ಯಸ್ಯ ಓಂಕಾರಸ್ಯ ಅಞ್ಜಸೈವ ಉತ್ಪತ್ತಿಃ ಅವಕಲ್ಪತೇ[1] । ಸ ಏವಂಭೂತಃ ಓಂಕಾರಃ ಇನ್ದ್ರಃ ಸರ್ವಕಾಮೇಶಃ ಪರಮೇಶ್ವರಃ ಮಾ ಮಾಂ ಮೇಧಯಾ ಪ್ರಜ್ಞಯಾ ಸ್ಪೃಣೋತು ಪ್ರೀಣಯತು । ಬಲಯತು ವಾ । ಪ್ರಜ್ಞಾಬಲಂ ಹಿ ಪ್ರಾರ್ಥ್ಯತೇ । ಅಮೃತಸ್ಯ ಅಮೃತತ್ವಹೇತುಭೂತಸ್ಯ ಬ್ರಹ್ಮಜ್ಞಾನಸ್ಯ ತದಧಿಕಾರಾತ್ । ಹೇ ದೇವ । ಧಾರಣಃ ಧಾರಯಿತಾ ಭೂಯಾಸಂ ಭವೇಯಮ್ ॥

(ಭಾಷ್ಯಾರ್ಥ)

ಯಾವನು ಛಂದಸ್ಸುಗಳಿಗೆ ಎಂದರೆ ವೇದಗಳಿಗೆ ಋಷಭನಾಗಿರುವನೋ ಮುಖ್ಯನಾಗಿರುವದರಿಂದ ಎತ್ತಿನಂತೆ ಇರುವನೋ[2] ವಿಶ್ವರೂಪನಾಗಿರುವನೋ ಸರ್ವ ರೂಪನಾಗಿರುವನೋ (ಎಂದರ್ಥ). ಏಕೆಂದರೆ (ಓಂಕಾರವು) ವಾಕ್ಕೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತದೆ. ''ಹೇಗೆ ನಾಳದಿಂದ (ಎಲೆಗಳೆಲ್ಲ ವ್ಯಾಪ್ತವಾಗಿರುವವೋ ಹಾಗೆ ಓಂಕಾರದಿಂದ ವಾಕ್ಕೆಲ್ಲವೂ ವ್ಯಾಪ್ತವಾಗಿರುತ್ತದೆ)'' (ಛಾಂ. ೨-೨೩-೩) ಎಂದು

---

1. ''ಉತ್ಪತ್ತಿರೇವ ಕಲ್ಪ್ಯತೇ'' ಎಂಬ (ಆ॥) ಪಾಠಕ್ಕಿಂತ ಈ (ವಾ॥) ಪಾಠವೇ ಉತ್ತಮ.

2. 'ಪುರುಷರ್ಷಭ' ಮುಂತಾದ ಪ್ರಯೋಗಗಳಲ್ಲಿ ಹೇಗೋ ಹಾಗೆ ಇಲ್ಲಿಯೂ ಮುಖ್ಯನೆಂಬ ಅರ್ಥದಲ್ಲಿಯೇ ಋಷಭಶಬ್ದವನ್ನು ಉಪಯೋಗಿಸಿರುತ್ತದೆ ಎಂದು ಭಾವ.

ಮುಂತಾಗಿರುವ ಬೇರೊಂದು ಶ್ರುತಿಯು ಇದಕ್ಕೆ ಪ್ರಮಾಣವು. ಆದ್ದರಿಂದಲೇ ಓಂಕಾರವು ಋಷಭನಾಗಿರುತ್ತದೆ. ಓಂಕಾರವೇ ಅಲ್ಲವೆ, ಇಲ್ಲಿ ಉಪಾಸ್ಯವಾಗಿರುವದು ? ಆದ್ದರಿಂದ ಓಂಕಾರವನ್ನು ಋಷಭ ಮುಂತಾದ ಶಬ್ದಗಳಿಂದ ಹೊಗಳಿರುವದು ಯುಕ್ತವೇ[1] (ಆಗಿರುತ್ತದೆ). ಛಂದಸ್ಸುಗಳೆಂಬ ಎಂದರೆ ವೇದಗಳೆಂಬ (ಅಮೃತದಿಂದ)[2] - ವೇದಗಳು ನಾಶವಿಲ್ಲದವುಗಳಷ್ಟೆ.[3] ಆ ಅಮೃತದಿಂದ - ಉಂಟಾಗಿರುವನೋ (ಎಂದರೆ) ಲೋಕಗಳು, ವೇದಗಳು, ವ್ಯಾಹೃತಿಗಳು - ಇವುಗಳಿಂದ ಅತ್ಯಂತಸಾರವಾದದ್ದನ್ನು ಗ್ರಹಿಸಬೇಕೆಂದು ತಪಸ್ಸುಮಾಡಿದ ಪ್ರಜಾಪತಿಗೆ ಓಂಕಾರವೇ ಸಾರತಮವಾದದ್ದೆಂದು ಹೊಳೆಯಿತು[4] ಎಂದರ್ಥ. ಏಕೆಂದರೆ ನಿತ್ಯವಾಗಿರುವ ಓಂಕಾರಕ್ಕೆ[5] ಮುಖ್ಯವೃತ್ತಿಯಿಂದಲೇ ಉತ್ಪತ್ತಿಯು ಹೊಂದುವದಿಲ್ಲ. ಆ ಇಂಧವ ನಾದ ಓಂಕಾರವೆಂಬ ಇಂದ್ರನು ಎಂದರೆ ಸರ್ವಕಾಮಗಳಿಗೂ ಒಡೆಯನಾದ[6] ಪರಮೇಶ್ವರನು 'ಮಾ' ನನ್ನನ್ನು ಮೇಧಾಶಕ್ತಿಯಿಂದ ಎಂದರೆ ಪ್ರಜ್ಞೆಯಿಂದ 'ಸ್ಪೃಣೋತು' (ಎಂದರೆ) ಸಂತೋಷಗೊಳಿಸಲಿ, ಅಥವಾ 'ಬಲಪಡಿಸಲಿ !' (ಎಂದಾದರೂ ಸ್ಪೃಣೋತು ಎಂಬುದಕ್ಕೆ ವ್ಯಾಖ್ಯಾನಮಾಡಬಹುದು). ಏಕೆಂದರೆ (ಇಲ್ಲಿ) ಪ್ರಜ್ಞಾಬಲವನ್ನೇ[7] ಪ್ರಾರ್ಥಿಸಿರುತ್ತದೆ. ಎಲ್ಲೆ ದೇವನೆ, (ನಾನು) ಅಮೃತ

---

1. ವಿಧಿಯನ್ನು ಹೊಗಳುವದು ವೇದದಲ್ಲಿ ಸ್ವಾಭಾವಿಕ ; ಇಲ್ಲಿ ಓಂಕಾರವನ್ನು ಹೊಗಳಿರುವದರಿಂದ ಅದರ ಉಪಾಸನೆಯನ್ನು ವಿಧಿಸಿದೆ ಎಂದು ನಿಶ್ಚಯವಾಗುತ್ತದೆ - ಎಂದು ಭಾವ.

2. 'ಅಮೃತಾತ್' ಎಂಬ ಮಾತು ಭಾಷ್ಯದಲ್ಲಿದ್ದು ಬರೆದವರು ಬಿಟ್ಟಿರಬೇಕೆಂದು ತೋರುವದು.

3. ವೇದವು ನಿಯತರಚನಾರೂಪವಾಗಿ ಯಾವಾಗಲೂ ಇದ್ದುಕೊಂಡಿರುವದೆಂದು ಮೀಮಾಂಸಕರ ಮತವು. ವೇದವು ಆತ್ಮರೂಪದಿಂದ ನಿತ್ಯವೆಂದು ಮುಂದೆ ಭಾಷ್ಯದಲ್ಲಿ (೨-೩) ರಲ್ಲಿ ಸಾಧಿಸಿರುತ್ತದೆ.

4 ಛಾಂ. ೨-೨೩-೨ ನೋಡಿ. ಆ ಶ್ರುತಿಯಲ್ಲಿ ದೇವ ಎಂಬ ಶಬ್ದವಿಲ್ಲದ್ದರಿಂದ ಇಲ್ಲಿ ಬರೆದವರ ಕೈತಪ್ಪಿನಿಂದ ಬಿದ್ದಿರಬೇಕೆಂದು ಅದನ್ನು ಕೈಬಿಟ್ಟಿದೆ.

5. ವೇದಸಾರವಾದ್ದರಿಂದ ಓಂಕಾರವೂ ನಿತ್ಯ, ಇಲ್ಲಿ ನಾಮವಾದ ಓಂಕಾರಕ್ಕೂ ನಾಮಿಯಾದ ಪರಮೇಶ್ವರನಿಗೂ ಅಭೇದವನ್ನು ಇಟ್ಟುಕೊಳ್ಳಬೇಕು.

6. ಯಾವನು ಏನು ಬಯಸಿದರೆ ಅದು ಓಂಕಾರದಿಂದ ದೊರೆಯುವದು. (ಕ. ೧-೨-೧೬)

7. ಸ್ಪೃ-ಪ್ರೀತಿಪಾಲನಯೋಃ ಎಂಬ ಎರಡರ್ಥವನ್ನೂ ತೆಗೆದುಕೊಳ್ಳಬಹುದು. ಆದರೂ ಇಲ್ಲಿ ಓಂಕಾರೋಪಾಸನೆಯನ್ನು ವಿಧಿಸಿರುವದು ಬ್ರಹ್ಮಜ್ಞಾನಕ್ಕಾಗಿ ; ಆದ್ದರಿಂದ 'ಮೇಧಾ' ಎಂದರೆ ಬರಿಯ ಗ್ರಂಥಧಾರಣಾಶಕ್ತಿಯಲ್ಲ ಎಂದರ್ಥ.

ವನ್ನು ಎಂದರೆ ಮುಕ್ತಿಗೆ ಕಾರಣವಾಗಿರುವ ಬ್ರಹ್ಮಜ್ಞಾನವನ್ನು (ಎಂದರ್ಥ) ಏಕೆಂದರೆ ಅದೇ ಇಲ್ಲಿ ಪ್ರಕೃತವಾಗಿರುತ್ತದೆ. (ಆ ಜ್ಞಾನವನ್ನು) ಧರಿಸುವವನಾಗಲಿ, ಪಡೆಯುವವನಾಗಲಿ !

ಶರೀರೇಂದ್ರಿಯಗಳ ಯೋಗ್ಯತಾಪ್ರಾಪ್ತಿಗಾಗಿ ಪ್ರಾರ್ಥನೆ

(ಭಾಷ್ಯ)

೨೩. ಕಿಂ ಚ ಶರೀರಂ ಮೇ ಮಮ ವಿಚರ್ಷಣಂ ವಿಚಕ್ಷಣಂ ಯೋಗ್ಯಮ್ ಇತ್ಯೇತತ್ । ಭೂಯಾತ್ ಇತಿ ಪ್ರಥಮಪುರುಷವಿಪರಿಣಾಮಃ । ಜಿಹ್ವಾ ಮೇ ಮಮ ಮಧುಮತ್ತಮಾ ಮಧುಮತೀ ಅತಿಶಯೇನ ಮಧುರಭಾಷಿಣೀ ಇತ್ಯರ್ಥಃ । ಕರ್ಣಾಭ್ಯಾಂ ಶ್ರೋತ್ರಾಭ್ಯಾಂ ಭೂರಿ ಬಹು ವಿಶ್ರುವಂ ವ್ಯಶ್ರವಮ್ (?) ಶ್ರೋತಾ ಭೂಯಾಸಮ್ ಇತ್ಯರ್ಥಃ । ಆತ್ಮಜ್ಞಾನಯೋಗ್ಯಃ ಕಾರ್ಯಕಾರಣಸಂಘಾತೋಽಸ್ತು ಇತಿ ವಾಕ್ಯಾರ್ಥಃ । ಮೇಧಾ ಚ ತದರ್ಥಮೇವ ಹಿ ಪ್ರಾರ್ಥ್ಯತೇ ॥

(ಭಾಷ್ಯಾರ್ಥ)

ಮತ್ತು ನನ್ನ ಶರೀರವು ವಿಚರ್ಷಣವು, ವಿಚಕ್ಷಣವಾದದ್ದು, ಯೋಗ್ಯವಾದದ್ದು ಎಂದರ್ಥ, ಭೂಯಾತ್ (ಆಗಲಿ) ಎಂದು ಪ್ರಥಮಪುರುಷಕ್ಕೆ ತಿರುಗಿಸಿಕೊಳ್ಳಬೇಕು.[1] ನನ್ನ ನಾಲಗೆಯು ಅತ್ಯಂತ ಸವಿಯುಳ್ಳದ್ದಾಗಲಿ (ಬಹಳ) ಸವಿಯುಳ್ಳದ್ದು ಎಂದರೆ ಅತ್ಯಂತವಾಗಿ ಸವಿನುಡಿಯನ್ನಾಡುವದು (ಆಗಲಿ) ! ಎಂದರ್ಥ. (ನಾನು) ಕರ್ಣಗಳಿಂದ ಕಿವಿಗಳಿಂದ ಭೂರಿ ಹೆಚ್ಚಾಗಿ ವಿಶ್ರುವಮ್ - ವ್ಯಶ್ರವಮ್ (ಕೇಳಿದೆನು), ಕೇಳುವವನಾಗಲಿ ! ಎಂದರ್ಥ. ದೇಹೇಂದ್ರಿಯಗಳ ಗುಂಪು ಆತ್ಮಜ್ಞಾನಕ್ಕೆ ತಕ್ಕದ್ದು ಆಗಲಿ[2] ಎಂಬುದು (ಒಟ್ಟು)ವಾಕ್ಯದ ಅರ್ಥವು. ಏಕೆಂದರೆ ಇಲ್ಲಿ ಮೇಧಾಶಕ್ತಿಯನ್ನು ಕೇಳಿಕೊಂಡಿರುವದು ಅದಕ್ಕಾಗಿಯೇ ಅಲ್ಲವೆ ?[3]

1. ಹಿಂದೆ ಪ್ರಯೋಗಿಸಿರುವ 'ಭೂಯಾಸಮ್' ಎಂಬ ಉತ್ತಮಪುರುಷದ ಕ್ರಿಯಾಪದವನ್ನು ಇಲ್ಲಿ 'ಶರೀರಮ್' ಎಂಬುವದಕ್ಕೆ ಹೊಂದುವದಕ್ಕಾಗಿ ಪ್ರಥಮಪುರುಷಕ್ಕೆ ತಿರುಗಿಸಿಕೊಳ್ಳಬೇಕು.

2. ಶರೀರಾದಿಗಳ ಆರೋಗ್ಯವನ್ನು ಕೇಳಿರುವದು ಬರಿಯ ಆರೋಗ್ಯಕ್ಕಾಗಿ ಅಲ್ಲ ; ದೇಹೇಂದ್ರಿಯಗಳು ಸಾತ್ತ್ವಿಕವಾಗಿದ್ದು ಜ್ಞಾನಕ್ಕೆ ತಕ್ಕವುಗಳಾಗಲಿ ಎಂಬ ಉದ್ದೇಶದಿಂದ.

3. ಮೇಧೆಯನ್ನು ಕೊಡು ಎಂದರೆ ಆತ್ಮಜ್ಞಾನಕ್ಕೆ ತಕ್ಕ ಮೇಧಾಶಕ್ತಿಯನ್ನು ಕೊಡು ಎಂದೇ ಅರ್ಥವೆಂದು ಹಿಂದೆಯೇ ಹೇಳಿದೆ.

ಜ್ಞಾನಕ್ಕಾಗಿ ಪ್ರಾರ್ಥನೆ

(ಭಾಷ್ಯ)

೨೪ ಬ್ರಹ್ಮಣಃ ಪರಮಾತ್ಮನಃ ಕೋಶಃ ಅಸಿ ಅಸೇರಿವ । ಉಪಲಬ್ಧಿ-ಸ್ಥಾನತ್ವಾತ್ । ತ್ವಂ ಹಿ ಬ್ರಹ್ಮಣಃ ಪ್ರತೀಕಮ್, ತ್ವಯಿ ಬ್ರಹ್ಮ ಉಪಲಭ್ಯತೇ । ಮೇಧಯಾ ಲೌಕಿಕಪ್ರಜ್ಞಯಾ ಪಿಹಿತಃ ಆಚ್ಛಾದಿತಃ । ಸ ತ್ವಂ ಸಾಮಾನ್ಯ ಪ್ರಜ್ಞೈರವಿದಿತತತ್ತ್ವಃ - ಇತ್ಯರ್ಥಃ । ಶ್ರುತಂ ಶ್ರವಣಪೂರ್ವಕಮ್ ಆತ್ಮಜ್ಞಾನಾದಿಕಂ ವಿಜ್ಞಾನಂ ಮೇ ಗೋಪಾಯ ರಕ್ಷ । ತತ್ಪ್ರಾಪ್ತ್ಯವಿಸ್ಮರಣಾದಿಕಂ ಕುರು ಇತ್ಯರ್ಥಃ । ಜಪಾರ್ಥಾ ವಿತೇ ಮನ್ತ್ರಾ ಮೇಧಾಕಾಮಸ್ಯ ।।

(ಭಾಷ್ಯಾರ್ಥ)

(ನೀನು) ಕತ್ತಿಗೆ (ಒರೆಯಂತೆ) ಬ್ರಹ್ಮಕ್ಕೆ ಪರಮಾತ್ಮನಿಗೆ ಒರೆಯಾಗಿರುತ್ತೀಯೆ. ಏಕೆಂದರೆ (ಅದನ್ನು) ಅರಿಯುವದಕ್ಕೆ ಸ್ಥಾನವಾಗಿರುತ್ತೀಯೆ.[1] ನೀನೇ ಬ್ರಹ್ಮಕ್ಕೆ ಪ್ರತೀಕವು,[2] ನಿನ್ನಲ್ಲಿ ಬ್ರಹ್ಮವು ತೋರುವದು.[3] ಮೇಧೆಯಿಂದ ಎಂದರೆ ಲೌಕಿಕಪ್ರಜ್ಞೆಯಿಂದ ಮುಚ್ಚಿರುತ್ತೀಯೆ, ಮರೆಯಾಗಿರುತ್ತೀಯೆ. ಆ ನಿನ್ನ ಸ್ವರೂಪವು ಸಾಮಾನ್ಯವಾದ ತಿಳಿವಳಿಕೆಯುಳ್ಳವರಿಗೆ ತಿಳಿಯುವದಿಲ್ಲ[4] - ಎಂದರ್ಥ. ನಾನು ಕೇಳಿದ್ದನ್ನು ಎಂದರೆ ಶ್ರವಣಪೂರ್ವಕವಾದ ಆತ್ಮಜ್ಞಾನವೇ ಮುಂತಾದ[5] ತಿಳಿವಳಿಕೆಯನ್ನು ಕಾಪಾಡಿಕೊಡು, ರಕ್ಷಿಸಿಕೊಡು ; ಅದು ದೊರೆಯುವಂತೆಯೂ, ಮರೆಯದಂತೆಯೂ - ಇದೇ ಮುಂತಾದದ್ದನ್ನು[6] ಮಾಡಿಕೊಡು ಎಂದರ್ಥ. ಈವರೆಗಿನ ಮಂತ್ರಗಳು ಮೇಧಾಕಾಮನಾದವನು ಜಪಮಾಡುವದಕ್ಕೋಸ್ಕರ ಹೇಳಿದವುಗಳಾಗಿವೆ.

---

1. ಒರೆಯಲ್ಲಿ ಕತ್ತಿ ಇರುವಂತೆ ಓಂಕಾರದಲ್ಲಿ ಆತ್ಮನು ಇರುತ್ತಾನೆ.

2. ಓಂ ಎಂಬುದನ್ನೇ ಬ್ರಹ್ಮವೆಂದು ಉಪಾಸನೆಮಾಡಿದರೆ ಪ್ರತೀಕವಾಗುವದು.

3. ಓಂಕಾರವು ಬ್ರಹ್ಮದ ನಾಮವೆಂದು ತಿಳಿದು ಅರ್ಥವನ್ನು ವಿಚಾರಮಾಡಿದರೆ ಬ್ರಹ್ಮವನ್ನು ಅರಿಯುವ ಸಾಧನವಾಗುವದು.

4. ವಿಷಯವಾಸನೆಯಿಂದ ಕೂಡಿರುವವರಿಗೆ ಓಂಕಾರವು ಬರಿಯ ಶಬ್ದವೆಂದು ತೋರುತ್ತದೆ ; ಅದರ ತತ್ತ್ವವು ತಿಳಿಯುವುದಿಲ್ಲ.

5. ಇಲ್ಲಿ 'ಮುಂತಾದದ್ದು' ಎಂದರೆ 'ಜ್ಞಾನಕ್ಕೆ ಬೇಕಾದದ್ದು' ಎಂದರ್ಥ ; ಒಂದು ಪಾಠದಲ್ಲಿ 'ಆತ್ಮಜ್ಞಾನಮ್' ಎಂದಿಷ್ಟೇ ಇದೆ.

6. 'ಮುಂತಾದದ್ದನ್ನು' ಎಂಬುದರಿಂದ ಶಿಷ್ಯರಲ್ಲಿ 'ವಿನಿಯೋಗಮಾಡುವಂತೆಯೂ' ಎಂದು ಸೇರಿಸಿಕೊಳ್ಳಬಹುದು.

ಶ್ರೀಕಾಮನಿಗೆ ಮಂತ್ರಗಳು

(ಭಾಷ್ಯ)

೨೫. ಹೋಮಾರ್ಥಾಸ್ತ್ವಧುನಾ ಶ್ರೀಕಾಮಸ್ಯ ಮನ್ತ್ರಾ ಉಚ್ಯನ್ತೇ[1] । ಆವಹನ್ತೀ ಆನಯನ್ತೀ । ವಿತನ್ವಾನಾ ವಿಸ್ತಾರಯನ್ತೀ । ತನೋತೇಸ್ತತ್ಕರ್ಮತ್ವಾತ್ । ಕುರ್ವಾಣಾ ನಿರ್ವರ್ತಯನ್ತೀ ಅಚೀರಮ್ ಅಚಿರಂ ಕ್ಷಿಪ್ರಮೇವ । ಛಾನ್ದಸೋ ದೀರ್ಘಃ । ಚಿರಂ ವಾ ಕುರ್ವಾಣಾ । ಆತ್ಮನಃ ಮಮ । ಕಿಮಿತಿ ? ಆಹ - ವಾಸಾಂಸಿ ವಸ್ತ್ರಾಣಿ ಮಮ ಗಾವಶ್ಚ ಗಾಶ್ಚ ಇತಿ ಯಾವತ್ । ಅನ್ನಪಾನೇ ಚ ಸರ್ವದಾ । ಏವಮಾದೀನಿ ಕುರ್ವಾಣಾ ಶ್ರೀರ್ಯಾ ತಾಂ ತತಃ ಮೇಧಾನಿರ್ವರ್ತನಾತ್ ಪರಮ್ ಆವಹ ಆನಯ । ಅಮೇಧಸೋ ಹಿ ಶ್ರೀಃ ಅನರ್ಥಾಯೈವ ಇತಿ । ಕಿಂ ವಿಶಿಷ್ಯಾಮ್ ? ಲೋಮ ಶಾಮ್ ಅಜಾವ್ಯಾದಿಯುಕ್ತಾಮ್ ಅನ್ಯೈಶ್ಚ ಪಶುಭಿಃ ಸಹ ಯುಕ್ತಾಮ್[2] ಆವಹ ಇತಿ ಅಧಿಕಾರಾತ್ ಓಂಕಾರ ಏವ ಅಭಿಸಂಬಧ್ಯತೇ । ಸ್ವಾಹಾ । ಸ್ವಾಹಾಕಾರೋ ಹೋಮಾರ್ಥಮನ್ತ್ರಾನ್ತರ್ಜ್ಞಾಪನಾರ್ಥಃ ॥

(ಭಾಷ್ಯಾರ್ಥ)

ಈಗಲಾದರೋ ಶ್ರೀಕಾಮನಾದವನಿಗೆ ಹೋಮಮಾಡುವದಕ್ಕೋಸ್ಕರ ಮಂತ್ರಗಳನ್ನು ಹೇಳಲಾಗುತ್ತದೆ. ಹೊತ್ತುತರುವವಳು ಎಂದರೆ ತಂದುಕೊಡುವವಳು ; ಹೆಚ್ಚಿಸುವವಳು ಎಂದರೆ ವಿಸ್ತರಿಸುವವಳು ; ತನು ಎಂಬ ಧಾತುವಿಗೆ (ವಿಸ್ತರಿಸು) ಎಂಬುದೇ ಅರ್ಥವಾದ್ದರಿಂದ (ಹೀಗೆ ಅರ್ಥಮಾಡಬೇಕು). ಮಾಡುವವಳು ಎಂದರೆ ಉಂಟುಮಾಡುವವಳು ; ಅಚೀರಮ್ ಎಂದರೆ ಕ್ಷಿಪ್ರವಾಗಿಯೇ (ಅಚೀರಮ್ ಎಂದು) ದೀರ್ಘವನ್ನು ಉಪಯೋಗಿಸಿರುವದು ವೈದಿಕಪ್ರಯೋಗವು. ಅಥವಾ (ಕುರ್ವಾಣಾ ಚೀರಮ್ ಎಂದು ಪದಚ್ಛೇದಮಾಡಿದರೆ) ಯಾವಾಗಲೂ (ಇರುವಂತೆ) ಮಾಡುವವಳು (ಎಂದಾದರೂ ಅರ್ಥವನ್ನು ಮಾಡಬಹುದು). ಆತ್ಮನಃ ಎಂದರೆ ನನಗೆ (ಉಂಟು ಮಾಡುವವಳು) ; ಏನನ್ನು ? ಎಂದರೆ ಹೇಳುತ್ತಾರೆ ; ಬಟ್ಟೆಗಳನ್ನು, ಉಡಿಗೆ ತೊಡಿಗೆಗಳನ್ನು, ಮೂಲದಲ್ಲಿರುವ 'ಗಾವಶ್ಚ' ಎಂಬ ರೂಪಕ್ಕೆ 'ಗಾಶ್ಚ' (ಗೋವುಗಳನ್ನು) ಎಂದೇ ಅರ್ಥ ; ಅನ್ನಪಾನಗಳನ್ನು ಇವೇ ಮುಂತಾದವುಗಳನ್ನು ಯಾವಾಗಲೂ ಉಂಟುಮಾಡುವ ಶ್ರೀಯುಂಟಷ್ಟೆ, ಆಕೆಯನ್ನು - ಆಮೇಲೆ ಎಂದರೆ

---

1. "ಶ್ರೀಕಾಮಸ್ಯ ಹೋಮಾರ್ಥಾಸ್ತ್ವಧುನಾ ಉಚ್ಯನ್ತೇ ಮನ್ತ್ರಾಃ" ಎಂದು ವಾ॥ ಪಾಠ.

2. 'ಸಂಯುಕ್ತಾಮ್' ಎಂಬ (ಆ॥ ಗೋ॥ ಕಾ॥) ಪಾಠಕ್ಕಿಂತ ಈ (ವಾ॥) ವಾಠವು ಮೂಲಕ್ಕೆ ಹೆಚ್ಚು ಹೊಂದುತ್ತದೆ.

ಮೇಧಾಶಕ್ತಿಯನ್ನುಂಟುಮಾಡಿದ ಬಳಿಕ - ತರುವವನಾಗು, ಕರೆದುಕೊಂಡು ಬಾ ; ಏಕೆಂದರೆ ತಿಳಿವಳಿಕೆ ಇಲ್ಲದವನಿಗೆ ಸಂಪತ್ತು ಅನರ್ಥವನ್ನೇ ಉಂಟುಮಾಡುತ್ತದೆ (ಅದ್ವರಿಂದ ಮೇಧೆಯಾದಬಳಿಕವೇ ಶ್ರೇಯಸ್ಸನ್ನು ಕರೆತರುವವನಾಗು). ಎಂಥ ಶ್ರೇಯಸ್ಸನ್ನು (ತರಬೇಕು) ? - ಎಂದರೆ ತುಪ್ಪಟದಿಂದ ಕೂಡಿದವಳೂ ಎಂದರೆ ಆಡು, ಕುರಿ ಮುಂತಾದವುಗಳಿಂದ ಕೂಡಿದವಳೂ ಮತ್ತು ಬೇರೆಯ ಪಶುಗಳಿಂದಲೂ ಕೂಡಿದವಳೂ ಆದವಳನ್ನು (ಬಳಿಕ) 'ಕರೆತರುವವನಾಗು' ಎಂಬುದನ್ನು ಓಂಕಾರಕ್ಕೇ ಸಂಬಂಧಿಸಬೇಕು ; ಏಕೆಂದರೆ ಇದು (ಓಂಕಾರದ್ದೇ) ಪ್ರಕರಣವು. ಸ್ವಾಹಾ ! (ಇಲ್ಲಿ) ಸ್ವಾಹಾಕಾರವನ್ನು ಕೊಟ್ಟಿರುವದು, ಹೋಮಕ್ಕಾಗಿ (ಕೊಟ್ಟಿರುವ) ಮಂತ್ರವು ಇಲ್ಲಿಯವರೆಗೆ - ಎಂದು ತಿಳಿಸುವದಕ್ಕೆ.

ಶಿಷ್ಯರಿಗಾಗಿ ಹೋಮಮಂತ್ರಗಳು

(ಭಾಷ್ಯ)

೨೬. ಆ ಮಾ ಯನ್ತು ಇತಿ । ಆ ಯನ್ತು ಮಾಮ್ ಇತಿ ವ್ಯವಹಿತೇನ ಸಂಬನ್ಧಃ । ಬ್ರಹ್ಮಚಾರಿಣಃ । ವಿ ಮಾ ಯನ್ತು । ಪ್ರ ಮಾ ಯನ್ತು । ದಮಾಯನ್ತು । ಶಮಾಯನ್ತು ಇತ್ಯಾದಿ ॥

(ಭಾಷ್ಯಾರ್ಥ)

ಆ ಮಾ ಯನ್ತು ಎಂಬ ವಾಕ್ಯದಲ್ಲಿ 'ಆ ಯನ್ತು ಮಾ' ಎಂದು ಆಚೆ ಇರುವ ಪದಕ್ಕೆ (ಆ ಎಂಬ ಉಪಸರ್ಗವನ್ನು) ಸಂಬಂಧಿಸಬೇಕು.[1] ಬ್ರಹ್ಮಚಾರಿಗಳು (ನನ್ನನ್ನು ಬಂದು ಸೇರಲಿ ಎಂದರ್ಥ). ವಿ ಮಾ ಯನ್ತು, ಪ್ರ ಮಾ ಯನ್ತು, ದಮಾಯನ್ತು, ಶಮಾಯನ್ತು (ಎಂಬಲ್ಲಿಯೂ ಹೀಗೆಯೇ).

ಕೀರ್ತಿಗಾಗಿ ಹೋಮಮಂತ್ರಗಳು

(ಭಾಷ್ಯ)

೨೭. ಯಶೋ ಯಶಸ್ವೀ ಜನೇ ಜನಸಮೂಹೇ ಅಸಾನಿ ಭವಾನಿ

1. 'ಮಾ ಆಯನ್ತು', 'ಮಾ ವಿ ಆಯನ್ತು', 'ಮಾ ಪ್ರ ಆಯನ್ತು' - ಎಂದು ಅನ್ವಯ. ಇಲ್ಲಿ ಭಾಷ್ಯದ ಮೂಲದಲ್ಲಿ ಏಕೆ 'ಇತ್ಯಾದಿ' ಎಂದಿದೆಯೋ ಗೊತ್ತಾಗುವಂತಿಲ್ಲ. ವಿಮಾಯನ್ತು ಮುಂತಾದ ನಾಲ್ಕು ಮಂತ್ರಗಳು ಶಾಖಾಂತರಕ್ಕೆ ಸೇರಿದವೆಂಬ ಕಾರಣದಿಂದ ಕೆಲವು ದೇಶಗಳಲ್ಲಿ ಇದನ್ನು ತೈತ್ತಿರೀಯದಲ್ಲಿ ಪಠಿಸುವದಿಲ್ಲ ಎಂದು ಸಾಯಣಭಾಷ್ಯದಲ್ಲಿದೆ. ಆ ಸೂಚನೆಯೇನೂ ಭಾಷ್ಯದಲ್ಲಿ ಕಂಡುಬರುವದಿಲ್ಲ.

ಶ್ರೇಯಾನ್ ಪ್ರಶಸ್ಯತರಃ ವಸ್ಯಸಃ ವಸೀಯಸಃ । ವಸುತರಾತ್ ವಸುಮತ್ತರಾದ್ವಾ ಅನಾನಿ ಇತ್ಯನ್ವಯಃ ।।

(ಭಾಷ್ಯಾರ್ಥ)

(ನಾನು) ಜನರಲ್ಲಿ ಎಂದರೆ ಜನರ ಗುಂಪಿನಲ್ಲಿ, ಯಶಸ್ಸು ಎಂದರೆ ಹೆಸರುಳ್ಳವನು ಆಗಲಿ, ಹೆಚ್ಚಿನವನು ಎಂದರೆ ಹೊಗಳತಕ್ಕವನು, ವಸ್ಯಸಃ - ವಸೀಯಸಃ, ಅತಿಶಯವಾಗಿ ವಸುವುಳ್ಳವನಿಗಿಂತಲೂ ಅಥವಾ (ಅತಿಶಯವಾಗಿ) ಧನವಂತನಾಗಿರುವವನಿಗಿಂತಲೂ[1] (ನಾನು ಹೆಚ್ಚಿನವನು) ಆಗಲಿ ಎಂದು ಅನ್ವಯವು.

ಓಂಕಾರಸಾಯುಜ್ಯಕ್ಕಾಗಿ ಪ್ರಾರ್ಥನೆ

(ಭಾಷ್ಯ)

೨೮. ಕಿಂ ಚ ತಂ ಬ್ರಹ್ಮಣಃ ಕೋಶಭೂತಂ ತ್ವಾ ತ್ವಾಂ ಹೇ ಭಗ ಭಗವನ್ ಪೂಜಾವನ್, ಪ್ರವಿಶಾನಿ । ಪ್ರವಿಶ್ಯ ಚ ಅನನ್ಯಃ ತ್ವದಾತ್ಮ್ಯೇವ ಭವಾನಿ ಇತ್ಯರ್ಥಃ । ಸ ತ್ವಮಪಿ ಮಾ ಮಾಂ ಭಗ ಭಗವನ್ ಪೂಜಾವನ್, ಪ್ರವಿಶ । ಆವಯೋಃ ಏಕತ್ವಮೇವ ಅಸ್ತು । ತಸ್ಮಿನ್ ತ್ವಯಿ ಸಹಸ್ರಶಾಖೇ ಬಹುಶಾಖಾ ಭೇದೇ[2] ಹೇ ಭಗವನ್[3] ನಿಮೃಜೇ ಶೋಧಯಾಮಿ ಅಹಂ ಪಾಪಕೃತ್ಯಾಮ್ ।।

(ಭಾಷ್ಯಾರ್ಥ)

ಮತ್ತು ಬ್ರಹ್ಮಕ್ಕೆ ಒರೆಯಾಗಿರುವ ಆ ನಿನ್ನನ್ನು ಎಲೈ ಭಗ, ಭಗವಂತನೆ, ಪೂಜ್ಯನೆ (ನಾನು) ಸೇರಿಕೊಳ್ಳುವಂತೆ, ಒಳಸೇರಿಕೊಂಡು ನಿನಗಿಂತ ಬೇರೆಯಲ್ಲದೆ ನಿನ್ನ ಸ್ವರೂಪವೇ ಆಗುವಂತೆ, ಆಗಲಿ ! - ಎಂದರ್ಥ. ಆ ನೀನುಕೂಡ ನನ್ನನ್ನು ಎಲೈ ಭಗ, ಭಗವಂತನೆ, ಪೂಜ್ಯನೆ, ಸೇರುವವನಾಗು ; ನಮ್ಮಿಬ್ಬರಿಗೂ ಏಕತ್ವವೇ ಉಂಟಾಗಲಿ ![4] ಸಾವಿರ ಕವಲುಗಳುಳ್ಳ ಹಲವು ಭೇದಗಳುಳ್ಳ ಆ ನಿನ್ನಲ್ಲಿ ಎಲೈ

---

1. ವಸ - ನಿವಾಸೇ, ವಸ - ಆಚ್ಛಾದನೇ ಎಂಬ ಧಾತುಗಳನ್ನು ಇಟ್ಟುಕೊಂಡರೆ ವಸು ಎಂಬುದಕ್ಕೆ ವಾಸವುಳ್ಳವನು, ಮತ್ತೊಬ್ಬರಿಗೆ ಅನ್ನಬಟ್ಟೆಗಳನ್ನು ನೀಡುವವನು - ಎಂದರ್ಥವಾಗುವದು ; ಅಥವಾ ವಸುಮಾನ್ ಎಂದರ್ಥಮಾಡಿದರೆ ಧನವಂತನಾಗಿರುವವನು ಎಂದೂ ಅರ್ಥಮಾಡಿಕೊಳ್ಳಬಹುದು.

2. ವಾ।। ಪಾಠ.

3. ಇದು ವಾ।। ಪಾಠ. ಇದು ಭಗ ಎಂಬ ಮೂಲದ ಅರ್ಥ.

4. ಓಂಕಾರಸ್ವರೂಪನಾದ ಪರಮೇಶ್ವರನ ಸಾಯುಜ್ಯವನ್ನೇ ಇಲ್ಲಿ ಬೇಡಿರುತ್ತದೆ.

ಭಗವಂತನೆ, ನಾನು ಪಾಪಕೃತ್ಯವನ್ನು (ನಿಮ್ಮಜೀ) ತೊಳೆದುಕೊಳ್ಳುತ್ತೇನೆ, ಶುದ್ಧಿ ಮಾಡಿಕೊಳ್ಳುತ್ತೇನೆ [1]

ಬಹುಶಿಷ್ಯರಿಗಾಗಿ ಹೋಮಮಂತ್ರಪ್ರಾರ್ಥನೆ

(ಭಾಷ್ಯ)

೫೯. ಯಥಾ ಲೋಕೇ ಅವಃ ಪ್ರವತಾ ಪ್ರವಣವತಾ ನಿಮ್ನವತಾ ದೇಶೇನ ಯನ್ತಿ ಗಚ್ಛನ್ತಿ । ಯಥಾ ಚ ಮಾಸಾಃ ಅಹರ್ಜರಮ್ । ಸಂವತ್ಸರೋ ಅಹರ್ಜರಃ ; ಅಹೋಭಿಃ ಪರಿವರ್ತಮಾನೋ ಲೋಕಾನ್ ಜರಯತಿ ಇತಿ । ಅಹಾನಿ ವಾ ಅಸ್ಮಿನ್ ಜೀರ್ಯನ್ತಿ ಅನ್ತರ್ಭವನ್ತಿ ಇತಿ ಅಹರ್ಜರಃ । ತಂ ಚ ಯಥಾ ಮಾಸಾಃ ಯನ್ತಿ । ಏವಂ ಮಾಂ ಬ್ರಹ್ಮಚಾರಿಣಃ ಹೇ ಧಾತಃ ಸರ್ವಸ್ಯ ವಿಧಾತಃ, ಮಾಮ್ ಆಯನ್ತು ಆಗಚ್ಛನ್ತು ಸರ್ವತಃ ಸರ್ವದಿಗ್ಭ್ಯಃ । ಪ್ರತಿವೇಶಃ ಶ್ರಮಾಪನಯನಸ್ಥಾನಮ್ ; ಆಸನ್ನಂ ಗೃಹಮ್ ಇತ್ಯರ್ಥಃ । ಏವಂ ತ್ವಂ ಪ್ರತಿವೇಶ ಇವ ಪ್ರತಿವೇಶಃ ತ್ವಚ್ಛೀಲಿನಾಂ ಸರ್ವಪಾಪದುಃಖಾಪನಯನಸ್ಥಾನಮ್ - ಅಸಿ । ಅತಃ ಮಾ ಮಾಂ ಪ್ರತಿ ಪ್ರಭಾಹಿ ಪ್ರಕಾಶಯ ಆತ್ಮಾನಮ್ । ಪ್ರ ಮಾ ಪದ್ಯಸ್ವ [2] ಪ್ರಪದ್ಯಸ್ವ ಚ ಮಾಮ್ । ರಸವಿದ್ದ ಮಿವ ಲೋಹಂ ತ್ವನ್ಮಯಂ ತ್ವದಾತ್ಮಾನಂ ಕುರು - ಇತ್ಯರ್ಥಃ ।।

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ನೀರು ತಗ್ಗಾದ - ಹಳ್ಳವಾದ ಕೆಳಮಟ್ಟದ - ಪ್ರದೇಶದ ಮೂಲಕ ಹರಿದುಬರುವದೋ, ಮತ್ತು ಹೇಗೆ ತಿಂಗಳುಗಳು ಅಹರ್ಜರವನ್ನು - ಅಹರ್ಜರವೆಂದರೆ ಸಂವತ್ಸರವು. ದಿನಗಳ ರೂಪದಿಂದ ಸುತ್ತುತ್ತಾ ಜನರನ್ನು ಮುದಿಯಾಗಿ ಮಾಡುತ್ತಿರುವದರಿಂದ, ಅಥವಾ ದಿನಗಳು ಇದರಲ್ಲಿ ಹುದಿಯಾಗುತ್ತವೆ-ಎಂದರೆ ಅಡಕವಾಗಿಹೋಗುತ್ತವೆ-ಯಾದ್ದರಿಂದ (ಇದಕ್ಕೆ) ಅಹರ್ಜರ (ವೆಂದು ಹೆಸರು) ; ಆ (ಅಹರ್ಜರವನ್ನು)- ಹೇಗೆ ತಿಂಗಳುಗಳು ಸೇರಿಕೊಳ್ಳುತ್ತಿರುವವೋ, ಹೀಗೆಯೇ ನನ್ನನ್ನು ಬ್ರಹ್ಮಚಾರಿಗಳು ಎಲ್ಲಾ ಕಡೆಯಿಂದಲೂ, ಎಲೈ ಧಾತನೆ, ಸರ್ವವನ್ನೂ ವಿಧಾನಮಾಡುವಾತನೆ, ನನ್ನನ್ನು ಕುರಿತು ಎಲ್ಲಾ ಕಡೆಯಿಂದಲೂ, ಎಲ್ಲಾ ದಿಕ್ಕುಗಳಿಂದಲೂ ಬಂದು ಸೇರಲಿ ! (ನನ್ನಲ್ಲಿಗೆ) ಬರಲಿ ! ಪ್ರತಿವೇಶವೆಂದರೆ ಆಯಾಸವನ್ನು ಪರಿಹರಿಸಿಕೊಳ್ಳುವ ಸ್ಥಾನವು, ಹತ್ತಿರದ ಮನೆಯು ಎಂದರ್ಥ ; ಹೀಗೆಯೇ ನೀನೂ ಪ್ರತಿವೇಶದಂತೆ ಪ್ರತಿವೇಶವಾಗಿರುತ್ತೀಯೆ, ಎಂದರೆ ನಿನ್ನನ್ನು

1. ಪರಮಾತ್ಮಸ್ವರೂಪನಾದ ಜೀವನಿಗೆ ಇನ್ನುಮೇಲೆ ಯಾವ ಪಾಪವೂ ಇರುವದಿಲ್ಲ.

2. ಇದು ಆ।। ಪಾಠದಲ್ಲಿ ಬಿಟ್ಟುಹೋಗಿದೆ ; ವಾ।। ಪಾಠದಲ್ಲಿದೆ.

ಪರಿಶೀಲನೆಮಾಡುವವರಿಗೆ[1] ಎಲ್ಲಾ ಬಗೆಯ ದುಃಖವನ್ನೂ ಕಳೆಯುವ ನ್ಯಾಸವಾಗಿರುತ್ತೀಯೆ ; ಆದ್ದರಿಂದ ನನಗೆ ನನಗೋಸ್ಕರ ಹೊಳೆಯುವವನಾಗು ! ನಿನ್ನ ಸ್ವರೂಪವನ್ನು ತೋರಿಸುವವನಾಗು ! ಮತ್ತು (ಪ್ರ ಮಾ ಪದ್ಯಸ್ವ = ಮಾಂ ಪ್ರಪದ್ಯಸ್ವ) ನನ್ನನ್ನು ಹೊಂದುವವನಾಗು ! ಪಾದರಸವು ಹತ್ತಿಕೊಂಡ ಲೋಹವು ತನ್ಮಯವಾಗುವಂತೆ ನಿನ್ನ ಸ್ವರೂಪದವನೇ[2] ಆಗಿಬಿಡುವಂತೆ (ನನ್ನನ್ನು) ಮಾಡಿಬಿಡು ! - ಎಂದರ್ಥ.

ಶ್ರೀಕಾಮವೂ ಜ್ಞಾನಕ್ಕಾಗಿಯೇ

(ಭಾಷ್ಯ)

೩೦. ಶ್ರೀಕಾಮೋಽಸ್ಮಿನ್ ವಿದ್ಯಾಪ್ರಕರಣೇ ಅಭಿಧೀಯಮಾನಃ ಧನಾರ್ಥಃ । ಧನಂ ಚ ಕರ್ಮಾರ್ಥಮ್ । ಕರ್ಮ ಚ ಉಪಾತ್ತದುರಿತಕ್ಷಯಾರ್ಥಮ್ । ತತ್ಕ್ಷಯೇ ಹಿ ವಿದ್ಯಾ ಪ್ರಕಾಶತೇ । ತಥಾ ಚ ಸ್ಮೃತಿಃ -

ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ ।
ಯಥಾದರ್ಶತಲೇ[3] ಪ್ರಖ್ಯೇ ಪಶ್ಯನ್ನ್ಯಾತ್ಮಾನಮಾತ್ಮನಿ ॥

(ಮೋ. ೨೦೪-೮) ಇತಿ.

(ಭಾಷ್ಯಾರ್ಥ)

ಈ ಜ್ಞಾನಪ್ರಕರಣದಲ್ಲಿ[4] ಶ್ರೀಯ ಬಯಕೆಯ (ವಿಷಯವಾಗಿ ಹೇಳಿರುವದು) ಧನಕ್ಕಾಗಿ ; ಧನವು ಕರ್ಮಕ್ಕಾಗಿ, ಕರ್ಮವು ಹಿಂದೆ ಮಾಡಿದ ಪಾಪದ ಕ್ಷಯ

1. ಉಪಾಸನೆಮಾಡುವವರಿಗೆ ಮತ್ತು ಅರ್ಥವಿಚಾರವನ್ನು ಮಾಡುವವರಿಗೆ ಓಂಕಾರವು ಅಪರಬ್ರಹ್ಮದ ಅಥವಾ ಪರಬ್ರಹ್ಮದ ಅನುಭವವನ್ನು ಕೊಟ್ಟು, ದುಃಖಿಗಳನ್ನೆಲ್ಲಾ ಕಳೆಯುತ್ತದೆ.

2. ಕಲಾಯವನ್ನು ಮಾಡಿದ ಪಾತ್ರೆಯು ತವರವೇ ಮುಂತಾದ ಕಲಾಯದ ಲೋಹದ ಸ್ವರೂಪವೇ ಆಗಿ ತೋರುವಂತೆ ಸಾಧಕನು ಉಪಾಸ್ಯಸ್ವರೂಪನೇ ತಾನೆಂಬ ಸಾಕ್ಷಾತ್ಕಾರ ಹೊಂದಿದರೆ ಮಾತ್ರ ಆಯಾ ದೇವತೆಯ ಸಾಯುಜ್ಯವನ್ನು ಪಡೆಯುವನೆಂದು ಶಾಸ್ತ್ರದಲ್ಲಿದೆ. ಬೃ. ೪-೧, ಗೀ. ೮-೯ ನೋಡಿರಿ.

3. 'ಆದರ್ಶತಲಪ್ರಖ್ಯೇ' ಎಂದು ಕುಂಭಕೋಣಮುದ್ರಿತಭಾರತದ ಪಾಠ. 'ಆ ಬಳಿಕ ಕನ್ನಡಿಯ ಮೇಲುಭಾಗದಂತೆ ಹೊಳೆಯುವ ಅಂತಃಕರಣದಲ್ಲಿ' - ಎಂದು ಅದಕ್ಕೆ ಅರ್ಥ.

4 ಉಪಾಸನೆಯನ್ನೂ ಜ್ಞಾನವನ್ನೂ ಹೇಳುವ ಪ್ರಕರಣದಲ್ಲಿ ಶ್ರೀಕಾಮದ ಸುದ್ದಿ ಏಕೆ ? ಇಲ್ಲಿ ಕಾಮ್ಯಕರ್ಮದ ವಿಚಾರವಿಲ್ಲವಲ್ಲ ! - ಎಂಬ ಶಂಕೆಗೆ ಪರಿಹಾರವಿದು.

ಕ್ಕಾಗಿ. ಏಕೆಂದರೆ ಆ (ಪಾಪವು) ನಾಶವಾದರೇ ಜ್ಞಾನವು ತೋರಿಕೊಳ್ಳುತ್ತದೆ.[1] ಆದ್ದರಿಂದಲೇ ''ಜನರಿಗೆ ಪಾಪಕರ್ಮವು ನವೆಯುವದರಿಂದ ಜ್ಞಾನವುಂಟಾಗುತ್ತದೆ. ಸ್ವಚ್ಛವಾದ ಕನ್ನಡಿಯ ಮೇಲುಗಡೆಯಲ್ಲಿ ಹೇಗೋ ಹಾಗೆ ಅಂತಃಕರಣದಲ್ಲಿ ತಮ್ಮ ಆತ್ಮನನ್ನು ಕಂಡುಕೊಳ್ಳುವರು !'' (ಮೋ. ೨೦೪-೮) ಎಂದು ಸ್ಮೃತಿಯಲ್ಲಿ ಹೇಳಿದೆ.

೫. ವ್ಯಾಹೃತ್ಯಾತ್ಮಕಬ್ರಹ್ಮದ ಉಪಾಸನೆ

ಅನುವಾಕದ ವಿಷಯ

(ಭಾಷ್ಯ)

೫೧. ಸಂಹಿತಾವಿಷಯಮ್ ಉಪಾಸನಮ್ ಉಕ್ತಮ್ । ತದನು ಮೇಧಾಕಾಮಸ್ಯ ಶ್ರೀಕಾಮಸ್ಯ ಚ ಮನ್ತ್ರಾ ಅನುಕ್ರಾನ್ತಾಃ । ತೇ ಚ ಪಾರಂಪರ್ಯೇಣ ವಿದ್ಯೋಪಯೋಗಾರ್ಥಾ ಏವ । ಅನನ್ತರಂ ವ್ಯಾಹೃತ್ಯಾತ್ಮನೋ ಬ್ರಹ್ಮಣಃ ಅನ್ತರುಪಾಸನಂ ಸ್ವಾರಾಜ್ಯಫಲಂ ಪ್ರಸ್ತೂಯತೇ ॥

(ಭಾಷ್ಯಾರ್ಥ)

ಸಂಹಿತೆಗಳ ವಿಷಯದ ಉಪಾಸನೆಯನ್ನು ಹೇಳಿದ್ದಾಯಿತು ; ಆಮೇಲೆ ಮೇಧಾಕಾಮನಿಗೂ ಶ್ರೀಕಾಮನಿಗೂ ಮಂತ್ರಗಳನ್ನು ಹೇಳಿದ್ದಾಯಿತು; ಅವುಗಳೂ ಪರಂಪರೆಯಿಂದ ಜ್ಞಾನಕ್ಕೆ ಉಪಯೋಗವಾದವುಗಳೇ (ಎಂದು ತಿಳಿಸಿರುತ್ತೇವೆ). ಇನ್ನು ಈಗ ಸ್ವಾರಾಜ್ಯವೆಂಬ ಫಲವನ್ನು ಕೊಡುವ ವ್ಯಾಹೃತಿರೂಪವಾದ ಬ್ರಹ್ಮವನ್ನು[2] ಒಳಗೆ ಉಪಾಸನೆಮಾಡುವ (ಕ್ರಮವನ್ನು ಹೇಳುವದಕ್ಕೆ) ಪ್ರಾರಂಭಿಸಿರುತ್ತದೆ :-

ಭೂರ್ಭುವಃ ಸುವರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ । ತಾಸಾಮು ಹ ಸ್ಮೈತಾಂ ಚತುರ್ಥೀಮ್ । ಮಾಹಾಚಮಸ್ಯಃ ಪ್ರವೇದಯತೇ । ಮಹ ಇತಿ । ತದ್ ಬ್ರಹ್ಮ । ಸ ಆತ್ಮಾ । ಅಙ್ಗಾನ್ಯನ್ಯಾ ದೇವತಾಃ । ಭೂರಿತಿ ವಾ ಅಯಂ ಲೋಕಃ । ಭುವ ಇತ್ಯನ್ತರಿಕ್ಷಮ್ । ಸುವರಿತ್ಯಸೌ ಲೋಕಃ । ಮಹ ಇತ್ಯಾದಿತ್ಯಃ । ಆದಿತ್ಯೇನ ವಾವ ಸರ್ವೇ ಲೋಕಾ ಮಹೀಯನ್ತೇ । ಭೂರಿತಿ ವಾ ಅಗ್ನಿಃ । ಭುವ ಇತಿ ವಾಯುಃ । ಸುವರಿತ್ಯಾದಿತ್ಯಃ । ಮಹ

---

1. ಅಧಿಕಾರಕ್ಕೆ ತಕ್ಕಂತೆ ಸಗುಣಬ್ರಹ್ಮದ ಜ್ಞಾನವೋ ನಿರ್ಗುಣಬ್ರಹ್ಮದ ಜ್ಞಾನವೋ ಉಂಟಾಗುತ್ತದೆ

2. ಸಗುಣಬ್ರಹ್ಮವನ್ನು.

ಇತಿ ಚನ್ದ್ರಮಾಃ । ಚನ್ದ್ರಮಸಾ ವಾವ ಸರ್ವಾಣಿ ಜ್ಯೋತೀಗ್ಂಷಿ ಮಹೀಯನ್ತೇ । ಭೂರಿತಿ ವಾ ಋಚಃ । ಭುವ ಇತಿ ಸಾಮಾನಿ । ಸುವರಿತಿ ಯಜೂಗ್ಂಷಿ । ಮಹ ಇತಿ ಬ್ರಹ್ಮ । ಬ್ರಹ್ಮಣಾ ವಾವ ಸರ್ವೇ ವೇದಾ ಮಹೀಯನ್ತೇ । ಭೂರಿತಿ ವೈ ಪ್ರಾಣಃ । ಭುವ ಇತ್ಯಪಾನಃ । ಸುವರಿತಿ ವ್ಯಾನಃ । ಮಹ ಇತ್ಯನ್ನಮ್ । ಅನ್ನೇನ ವಾವ ಸರ್ವೇ ಪ್ರಾಣಾ ಮಹೀಯನ್ತೇ । ತಾ ವಾ ಏತಾಶ್ಚತಸ್ರಶ್ಚತುರ್ಧಾ । ಚತಸ್ರಶ್ಚತಸ್ರೋ ವ್ಯಾಹೃತಯಃ । ತಾ ಯೋ ವೇದ । ಸ ವೇದ ಬ್ರಹ್ಮ । ಸರ್ವೇಽಸ್ಮೈ ದೇವಾ ಬಲಿಮಾವಹನ್ತಿ ॥೫॥

೫. 'ಭೂಃ', 'ಭುವಃ', 'ಸುವಃ' - ಎಂಬಿವು ಮೂರು ವ್ಯಾಹೃತಿಗಳಷ್ಟೆ. ಅವುಗಳಿಗೆ ನಾಲ್ಕನೆಯದಾದ ಈ (ವ್ಯಾಹೃತಿಯನ್ನು) ಮಾಹಾಚಮಸ್ಯನು ತಿಳಿದುಕೊಂಡನು. (ಅದು ಯಾವದೆಂದರೆ) 'ಮಹಃ' ಎಂಬುದು. ಅದು ಬ್ರಹ್ಮವು, ಅದು ಆತ್ಮನು. ಉಳಿದ ದೇವತೆಗಳು ಅಂಗಗಳು.

(೧) ಭೂಃ ಎಂಬುದೇ ಈ ಲೋಕವು ; ಭುವಃ ಎಂಬುದು ಅಂತರಿಕ್ಷವು ; ಸುವಃ ಎಂಬುದು ಆ ಲೋಕವು ; ಮಹಃ ಎಂಬುದು ಆದಿತ್ಯನು ; ಆದಿತ್ಯನಿಂದಲೇ ಅಲ್ಲವೆ, ಲೋಕಗಳೆಲ್ಲಾ ಮಹತ್ತಾಗುವವು ?

(೨) ಭೂಃ ಎಂಬುದೇ ಅಗ್ನಿ ; ಭುವಃ ಎಂಬುದು ವಾಯು ; ಸುವಃ ಎಂಬುದು ಆದಿತ್ಯ ; ಮಹಃ ಎಂಬುದು ಚಂದ್ರನು ; ಚಂದ್ರನಿಂದಲೇ ಅಲ್ಲವೆ, ಜ್ಯೋತಿಗಳೆಲ್ಲವೂ ಮಹತ್ತಾಗುವವು ?

(೩) ಭೂಃ ಎಂಬುದೇ ಋಕ್ಕುಗಳು ; ಭುವಃ ಎಂಬುದು ಸಾಮಗಳು ; ಸುವಃ ಎಂಬುದು ಯಜುಸ್ಸುಗಳು ; ಮಹಃ ಎಂಬುದು ಬ್ರಹ್ಮ ; ಬ್ರಹ್ಮನಿಂದಲೇ ಅಲ್ಲವೆ, ಎಲ್ಲಾ ವೇದಗಳೂ ಮಹತ್ತಾಗುವವು ?

(೪) ಭೂಃ ಎಂಬುದು ಪ್ರಾಣವು ; ಭುವಃ ಎಂಬುದು ಅಪಾನವು ; ಸುವಃ ಎಂಬುದು ವ್ಯಾನವು ; ಮಹಃ ಎಂಬುದು ಅನ್ನವು ; ಅನ್ನದಿಂದಲೇ ಅಲ್ಲವೆ, ಪ್ರಾಣಗಳು ಮಹತ್ತಾಗುವವು ?

ಆ ಈ ಪ್ರಸಿದ್ಧವಾದ ನಾಲ್ಕು, ನಾಲ್ಕು ಬಗೆಯಾಗಿರುತ್ತವೆ.

ನಾಲ್ಕುನಾಲ್ಕಾಗಿವೆ (ಈ) ವ್ಯಾಹೃತಿಗಳು. ಅವುಗಳನ್ನು ಯಾವಾತನು ಅರಿಯುತ್ತಾನೋ ಅವನು ಬ್ರಹ್ಮವನ್ನು ಅರಿತುಕೊಂಡವನಾಗುವನು. ದೇವತೆಗಳೆಲ್ಲರೂ ಇವನಿಗೆ ಕಾಣಿಕೆಯನ್ನು ತಂದುಕೊಡುತ್ತಾರೆ.

ವ್ಯಾಹೃತಿಗಳ ಸ್ವರೂಪ

(ಭಾಷ್ಯ)

೩೨. ಭೂರ್ಭುವಃ ಸುವರಿತಿ । ಇತಿರುಕ್ತೋಪಪ್ರದರ್ಶನಾರ್ಥಃ । 'ಏತಾಃ ತಿಸ್ರಃ' ಇತಿ ಚ ಪ್ರದರ್ಶಿತಾನಾಂ ಪರಾಮರ್ಶಾರ್ಥಃ । ಪರಾಮೃಷ್ಟಾಃ ಸ್ಮಾರ್ಯಂತ್ಯೇ 'ಷಾ' ಇತ್ಯನೇನ । ತಿಸ್ರಃ ಏತಾಃ ಪ್ರಸಿದ್ಧಾಃ ವ್ಯಾಹೃತಯಃ ಸ್ಮಾರ್ಯಂತ್ಯೇ ತಾವತ್ । ತಾಸಾಮ್ ಇಯಂ ಚತುರ್ಥೀ ವ್ಯಾಹೃತಿಃ 'ಮಹಃ' ಇತಿ । ತಾಮ್ ಏತಾಂ ಚತುರ್ಥೀಂ ಮಹಾಚಮಸಸ್ಯ ಅಪತ್ಯಂ ಮಾಹಾಚಮಸ್ಯಃ ಪ್ರವೇದಯತೇ । 'ಉ' 'ಹ' 'ಸ್ಮ' ಇತ್ಯೇತೇಷಾಂ ವೃತ್ತಾನುಕಥನಾರ್ಥತ್ವಾತ್ ವಿದಿತವಾನ್, ದದರ್ಶ - ಇತ್ಯರ್ಥಃ । ಮಾಹಾಚಮಸ್ಯಗ್ರಹಣಮ್ ಆರ್ಷಾನುಸ್ಮರಣಾರ್ಥಮ್ । ಋಷ್ಯನುಸ್ಮರಣಮಪಿ ಉಪಾಸನಾಙ್ಗಮಿತಿ ಗಮ್ಯತೇ । ಇಹ ಉಪದೇಶಾತ್ ॥

(ಭಾಷ್ಯಾರ್ಥ)

'ಭೂರ್ಭುವಸ್ಸುವರಿತಿ' ಎಂಬಲ್ಲಿ 'ಇತಿ' ಎಂಬ ಮಾತು ಹೇಳಿದ್ದನ್ನು ಬಿಡಿಸಿ ತಿಳಿಸುವದಕ್ಕೆ ; 'ಈ ಮೂರು' ಎಂಬ ಮಾತು ತಿಳಿಸಿದ್ದನ್ನು ಪರಾಮರ್ಶಿಸುವದಕ್ಕೆ ; 'ಷೈ' (ಅಷ್ಟೆ) ಎಂಬ ಮಾತು (ಹಾಗೆ) ಪರಾಮರ್ಶಿಸಿದ್ದನ್ನು ನೆನಪಿಗೆ ತರುತ್ತದೆ.[1] ಈ ಮೂರು ಪ್ರಸಿದ್ಧವಾದ ವ್ಯಾಹೃತಿಗಳನ್ನು ಮೊದಲು ನೆನಪಿಗೆ ತಂದುಕೊಟ್ಟಿದ್ದಾಗಿದೆ.[2] ಅವುಗಳಿಗೆ ನಾಲ್ಕನೆಯದು 'ಮಹಃ' ಎಂಬೀ ವ್ಯಾಹೃತಿಯು. ಆ ಈ ನಾಲ್ಕನೆಯ (ವ್ಯಾಹೃತಿಯನ್ನು) **ಮಹಾಚಮಸನ ಮಗನಾದ**[3] ಮಾಹಾಚಮಸ್ಯನು ತಿಳಿದುಕೊಂಡನು. 'ಉ' 'ಹ' 'ಸ್ಮ' ಎಂಬೀ (ಶಬ್ದಗಳು) ಹಿಂದೆ ನಡೆದದ್ದನ್ನು

1. ಅನುವಾದಮಾಡಿಕೊಂಡಿದೆ ಎಂದರ್ಥ. ಈ ಅರ್ಥವು 'ಸ್ಮರ್ಯಂತ್ಯೇ' ಎಂಬ ವಾ॥ ಪಾತದಲ್ಲಿ ಬರುವದಿಲ್ಲ.

2. ಇವುಗಳನ್ನು ಅನುವಾದಮಾಡಿಕೊಂಡು ನಾಲ್ಕನೆಯ ವ್ಯಾಹೃತಿಯನ್ನು ಹೇಳಿರುತ್ತದೆ ಎಂದರ್ಥ.

3. ಚಮಸವೆಂಬ ಸೋಮಪಾನಪಾತ್ರೆಯನ್ನು ಅನೇಕ ಸೋಮಯಾಗಗಳಲ್ಲಿ ಉಪಯೋಗಿಸುವರು. ಮಹಾಚಮಸನೆಂದರೆ ಅನೇಕ ಸೋಮಯಾಗಗಳನ್ನು ಮಾಡಿದವನು.

ತಿಳಿಸುವವಾದ್ದರಿಂದ ಅರಿತುಕೊಂಡನು. ಕಂಡುಹಿಡಿದನು ಎಂದು ಅರ್ಥವನ್ನು (ಮಾಡಬೇಕು)[1] ಮಾಹಾಚಮಸ್ಯನ ಹೆಸರನ್ನು ಹೇಳಿರುವದು ಋಷಿಯನ್ನು ಸ್ಮರಿಸಬೇಕೆಂದು (ತಿಳಿಸುವದಕ್ಕೆ). ಇಲ್ಲಿ (ಹೆಸರನ್ನು) ಉಪದೇಶಮಾಡಿರುವದರಿಂದ ಋಷಿಸ್ಮರಣವೂ ಉಪಾಸನೆಗೆ ಒಂದು ಭಾಗವೆಂದು[2] ನಿಶ್ಚಯವಾಗುತ್ತದೆ.

ಮಹಃ ಎಂಬ ವ್ಯಾಹೃತಿ

(ಭಾಷ್ಯ)

೫೩. ಯೇಯಂ ಮಾಹಾಚಮಸ್ಯೇನ ದೃಷ್ಟಾ ವ್ಯಾಹೃತಿಃ ಮಹಃ ಇತಿ ತತ್ ಬ್ರಹ್ಮ । ಮಹದ್ ಹಿ ಬ್ರಹ್ಮ । ಮಹಶ್ಚ ವ್ಯಾಹೃತಿಃ । ಕಿಂ ಪುನಸ್ತತ್ ? ನ ಆತ್ಮಾ । ಆಪ್ನೋತೇರ್ವ್ಯಾಪ್ತಿಕರ್ಮಣಃ ಆತ್ಮಾ । ಇತರಾಶ್ಚ ವ್ಯಾಹೃತಯೋ ಲೋಕಾಃ ದೇವಾಃ ವೇದಾಃ ಪ್ರಾಣಾಶ್ಚ ಮಹಃ ಇತ್ಯನೇನ ವ್ಯಾಹೃತ್ಯಾತ್ಮನಾ ಆದಿತ್ಯಚನ್ದ್ರಬ್ರಹ್ಮಾನ್ನ ಭೂತೇನ ವ್ಯಾಪ್ಯನ್ತೇ ಯತಃ, ಅತಃ ಅಙ್ಗಾನಿ ಅವಯವಾಃ ಅನ್ಯಾಃ ದೇವತಾಃ । ದೇವತಾಗ್ರಹಣಮ್ ಉಪಲಕ್ಷಣಾರ್ಥಂ ಲೋಕಾದೀನಾಮ್ । ಮಹಃ ಇತ್ಯೇತಸ್ಯ ವ್ಯಾಹೃತ್ಯಾತ್ಮನೋ ದೇವಾಃ ಲೋಕಾದಯಃ ಸರ್ವೇ ಅವಯವಭೂತಾಃ । ಯತ ಆಹ - ಆದಿತ್ಯಾದಿಭಿಃ ಲೋಕಾದಯೋ ಮಹೀಯನ್ತ ಇತಿ । ಆತ್ಮನಾ ಹಿ ಅಙ್ಗಾನಿ ಮಹೀಯನ್ತೇ । ಮಹನಂ ವೃದ್ಧಿಃ ಉಪಚಯಃ । ಮಹೀಯನ್ತೇ ವರ್ಧನ್ತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಮಾಹಾಚಮಸ್ಯನು ಕಂಡುಹಿಡಿದ ಯಾವ ಈ 'ಮಹಃ' ಎಂಬ ವ್ಯಾಹೃತಿಯುಂಟೋ ಅದು ಬ್ರಹ್ಮವು ; ಏಕೆಂದರೆ ಬ್ರಹ್ಮವು ದೊಡ್ಡದು ; ವ್ಯಾಹೃತಿಯೂ 'ಮಹಃ' ಎಂಬುದು.[3] ಅದು ಯಾವದು ? ಎಂದರೆ ಅದು ಆತ್ಮನು. ಆತ್ಮ ಎಂಬ ಶಬ್ದವು ವ್ಯಾಪಿಸಿಕೊಳ್ಳು ಎಂಬರ್ಥದ ಆಪ್ ಧಾತುವಿನಿಂದ ಬಂದಿರುತ್ತದೆ. (ಆದ್ದರಿಂದ ಈ ವ್ಯಾಹೃತಿಯು) ಆತ್ಮನು. ಉಳಿದ ವ್ಯಾಹೃತಿಗಳು - ಎಂದರೆ ಲೋಕಗಳು,

1. ಸಂಸ್ಕೃತದಲ್ಲಿ ವರ್ತಮಾನಕ್ರಿಯಾಪದಕ್ಕೆ 'ಸ್ಮ' ಮುಂತಾದ ನಿಪಾತಗಳನ್ನು ಸೇರಿಸಿದರೆ ಕ್ರಿಯೆಯು ಹಿಂದೆ ನಡೆಯಿತು - ಎಂಬರ್ಥವನ್ನು ಕೊಡುತ್ತದೆ.

2. ಕರ್ಮದಲ್ಲಿ ಮಂತ್ರದ ಋಷಿ, ಛಂದಸ್ಸು ಮುಂತಾದವನ್ನು ನೆನಪಿಡುವಂತೆ ಈ ಉಪಾಸನೆಯಲ್ಲಿ ಋಷಿಯ ಹೆಸರನ್ನೂ ನೆನಪಿಡಬೇಕು.

3. ಬ್ರಹ್ಮ ಎಂಬ ಮಾತು ವೃದ್ಧಿ (ಹೆಚ್ಚಿಗೆಯನ್ನು) ಹೇಳುವ ಬೃಹ್ ಧಾತುವಿನಿಂದ ಹುಟ್ಟಿರುತ್ತದೆ ; ಮಹಃ ಎಂಬ ಮಾತೂ ದೊಡ್ಡದೆಂಬ ಅರ್ಥವನ್ನು ಕೊಡುತ್ತದೆ.

ದೇವತೆಗಳು, ವೇದಗಳು, ಪ್ರಾಣಗಳು (ಇವುಗಳ ರೂಪದಲ್ಲಿರುವವು). ಮಹಃ ಎಂಬ ಆದಿತ್ಯ, ಚಂದ್ರ, ಬ್ರಹ್ಮ, ಅನ್ನ - ಇವುಗಳ ರೂಪದಲ್ಲಿರುವ ವ್ಯಾಹೃತಿರೂಪವಾದ ಆತ್ಮನಿಂದ ವ್ಯಾಪಿಸಲ್ಪಟ್ಟಿರುತ್ತವೆ[1]ಯಾದ್ದರಿಂದ (ಮಹಃ ಎಂಬುದು) ಆತ್ಮನು.[2] ಆದ್ದರಿಂದ ಉಳಿದ ದೇವತೆಗಳು ಅಂಗಗಳು, ಅವಯವಗಳು. ದೇವತೆ ಎಂಬ ಮಾತನ್ನು ಉಪಲಕ್ಷಣಕ್ಕಾಗಿ[3] ಹೇಳಿರುತ್ತದೆಯಾದ್ದರಿಂದ ಲೋಕಾದಿಗಳನ್ನೂ (ಇಲ್ಲಿ ತೆಗೆದುಕೊಳ್ಳಬೇಕು). ಮಹಃ ಎಂಬೀ ವ್ಯಾಹೃತ್ಯಾತ್ಮನಿಗೆ ದೇವತೆಗಳು, ಲೋಕಗಳು - ಮುಂತಾದವು ಅವಯವಗಳಾಗಿರುತ್ತವೆ ; ಆದ್ದರಿಂದಲೇ 'ಆದಿತ್ಯಾದಿಗಳಿಂದ ಲೋಕಾದಿಗಳು ಮಹತ್ತಾಗುತ್ತವೆ' ಎಂದು (ಶ್ರುತಿಯು) ಹೇಳುತ್ತದೆ. ಆತ್ಮನಿಂದಲೇ ಅಲ್ಲವೆ, ಅಂಗಗಳು ಮಹತ್ತಾಗುತ್ತವೆ ? ಮಹತ್ತಾಗುವದೆಂದರೆ ಬೆಳೆಯುವದು, ಪುಷ್ಟವಾಗುವದು. ಮಹತ್ತಾಗುತ್ತವೆ ಎಂದರೆ ಬೆಳೆಯುತ್ತವೆ ಎಂದರ್ಥ.[4]

ವ್ಯಾಹೃತಿಗಳು ಒಂದೊಂದೂ ನಾಲ್ಕು ಬಗೆ

(ಭಾಷ್ಯ)

೩೪. ಅಯಂ ಲೋಕಃ, ಅಗ್ನಿಃ, ಋಗ್ವೇದಃ, ಪ್ರಾಣಃ - ಇತಿ ಪ್ರಥಮಾ ವ್ಯಾಹೃತಿಃ ಭೂಃ ಇತಿ । ಏವಮ್ ಉತ್ತರೋತ್ತರಾ ಏಕೈಕಾ ಚತುರ್ಧಾ ಭವತಿ[5] । ಮಹ

1. ಲೋಕಾದಿಗಳು ಆದಿತ್ಯಾದಿಗಳಿಂದ ವ್ಯಾಪಿಸಲ್ಪಟ್ಟಿರುತ್ತವೆ.

2. ಮಹಃ ಎಂಬುದು ಬ್ರಹ್ಮವೆಂದೂ ಇತರ ವ್ಯಾಹೃತಿಗಳನ್ನು ವ್ಯಾಪಿಸಿಕೊಂಡಿರುವದೆಂದೂ ಚಿಂತಿಸಬೇಕು ಎಂದರ್ಥ.

3. ಹೆಗ್ಗುರುತಾಗಿ, ಒಂದನ್ನು ಹೇಳಿದರೆ ಮಿಕ್ಕದ್ದನ್ನೂ ಹೇಳಿದಂತೆ ಎಂದು ಸೂಚಿಸುವ ಅಭಿಪ್ರಾಯದಿಂದ.

4. ಮಹತ್ತಾಗುತ್ತವೆ ಎಂದರೆ ಬೆಳೆಯುತ್ತವೆ ಎಂದರ್ಥ. ಆತ್ಮನಿಂದ - ಎಂದರೆ ಶರೀರದ ನಡುಭಾಗದಿಂದ - ಅವಯವಗಳೆಲ್ಲವೂ ಪುಷ್ಟಿಯನ್ನು ಪಡೆಯುವಂತೆ ಮಹಃ ಎಂಬ ವ್ಯಾಹೃತಿಯ ಅರ್ಥವಾದ ಆದಿತ್ಯಾದಿಗಳಿಂದ ಲೋಕಾದಿಗಳು ಮಹತ್ತಾಗುತ್ತವೆ ಎಂದಿರುವದರಿಂದ ಮಿಕ್ಕ ವ್ಯಾಹೃತಿಗಳೆಲ್ಲವೂ ಅವಯವಗಳೆಂದು ಹೇಳಿದಂತಾಯಿತು. ಬರಿಯ ದೇವತೆಗಳು ಮಾತ್ರ ಅವಯವಗಳೆಂಬುದೇನೂ ಶ್ರುತಿಯ ತಾತ್ಪರ್ಯವಲ್ಲ - ಎಂದು ಭಾವ.

5. ಇಲ್ಲಿ "ಏವಂ....ಭವತಿ" ಎಂಬ ವಾಕ್ಯದ ಬದಲು "ಅನ್ತರಿಕ್ಷಂ ವಾಯುಃ ಸಾಮಾನಿ ಅಪಾನಃ ಇತಿ ದ್ವಿತೀಯಾ ವ್ಯಾಹೃತಿಃ ಭುವಃ । ಅಸೌ ಲೋಕಃ ಆದಿತ್ಯಃ ಯಜೂಗ್ಂಷಿ ವ್ಯಾನಃ ಇತಿ ತೃತೀಯಾ ವ್ಯಾಹೃತಿಃ ಸುವಃ । ಆದಿತ್ಯಃ ಚನ್ದ್ರಮಾಃ ಬ್ರಹ್ಮ ಅನ್ನಮ್ ಇತಿ ಚತುರ್ಥೀ ವ್ಯಾಹೃತಿಃ ಮಹಃ - ಇತ್ಯೇವಮ್ ಏಕೈಕಾಃ ಚತುರ್ಧಾ ಭವನ್ತಿ ॥" ಎಂಬ ವಾಕ್ಯಗಳು ವಾ॥ ಕಾ॥ ಪಾಠದಲ್ಲಿವೆ.

ಇತಿ ಬ್ರಹ್ಮ ಇತ್ಯೋಙ್ಕಾರಃ ಶಬ್ದಾಧಿಕಾರೇ ಅನ್ಯಸ್ಯ ಅಸಂಭವಾತ್ । ಉಕ್ತಾರ್ಥ ಮಿಸ್ಯತ್

(ಭಾಷ್ಯಾರ್ಥ)

ಈ ಲೋಕವು, ಅಗ್ನಿ, ಋಗ್ವೇದ, ಪ್ರಾಣ - ಎಂದು ಭೂಃ ಎಂಬ ಒಂದನೆಯ ವ್ಯಾಹೃತಿಯು (ನಾಲ್ಕು ಬಗೆ). ಹೀಗೆ ಮುಂದುಮುಂದಿನ ಒಂದೊಂದು (ವ್ಯಾಹೃತಿಯೂ) ನಾಲ್ಕು ಬಗೆಯಾಗಿರುತ್ತದೆ. 'ಮಹ ಇತಿ ಬ್ರಹ್ಮ' ಎಂಬ (ಮೂರನೆಯ ಪರ್ಯಾಯದ ವಾಕ್ಯದಲ್ಲಿ) ಬ್ರಹ್ಮವೆಂದರೆ ಓಂಕಾರವೇ ; ಏಕೆಂದರೆ (ಅದು) ಶಬ್ದದ ಪ್ರಕರಣವಾದ್ದರಿಂದ ಮತ್ತೊಂದು (ಅರ್ಥವು) ಅದಕ್ಕೆ ಹೊಂದುವದಿಲ್ಲ. ಉಳಿದ (ಶ್ರುತಿಯ ಭಾಗಕ್ಕೆ) ಅರ್ಥವನ್ನು ಹೇಳಿದಂತಾಗಿದೆ.

(ಭಾಷ್ಯ)

೩೫. ''ತಾ ವಾ ಏತಾಶ್ಚತಸ್ರಶ್ಚತುರ್ಧಾ'' ಇತಿ । ತಾ ವೈ ಏತಾಃ ಭೂಃ ಭುವಃ ಸುವಃ ಮಹಃ ಇತಿ ಚತಸ್ರಃ ಏಕೈಕಶಃ ಚತುರ್ಧಾ ಚತುಷ್ಪ್ರಕಾರಾಃ । ಧಾಶಬ್ದಃ ಪ್ರಕಾರವಚನಃ । ಚತಸ್ರಶ್ಚತಸ್ರಃ ಸತ್ಯಃ ಚತುರ್ಧಾ ಭವನ್ತಿ ಇತ್ಯರ್ಥಃ । ತಾಸಾಂ ಯಥಾಕ್ಲಪ್ತಾನಾಂ ಪುನರುಪದೇಶಃ ತಥೈವ ಉಪಾಸನಾನಿಯಮಾರ್ಥಃ ।।

(ಭಾಷ್ಯಾರ್ಥ)

''ಈ ನಾಲ್ಕು ನಾಲ್ಕು ಬಗೆ'' (ಎಂಬ ವಾಕ್ಯದ ಅರ್ಥವೇನೆಂದರೆ) ಆ ಪ್ರಸಿದ್ಧವಾದ ಭೂಃ ಭುವಃ ಸುವಃ ಮಹಃ ಎಂಬೀ ನಾಲ್ಕು ಒಂದೊಂದಾಗಿ ನಾಲ್ಕುನಾಲ್ಕು ಪ್ರಕಾರಗಳಾಗಿವೆ. ಧಾಶಬ್ದವು ಪ್ರಕಾರವನ್ನು ಹೇಳುತ್ತದೆ ; ನಾಲ್ಕುನಾಲ್ಕಾಗಿದ್ದು (ಒಂದೊಂದೂ) ನಾಲ್ಕುಬಗೆಯಾಗಿರುತ್ತವೆ ಎಂದರ್ಥ.[1] (ನಾಲ್ಕೆಂದು) ಮೇಲೆ ಕಲ್ಪಿಸಿರುವ ಆ (ವ್ಯಾಹೃತಿಗಳು) ನಾಲ್ಕುನಾಲ್ಕಾಗಿರುವವೆಂದು ಮತ್ತೆ ಹೇಳಿರುವದು ಹಾಗೆಯೇ ಉಪಾಸನೆಮಾಡಬೇಕೆಂದು ನಿಯಮವನ್ನು ಮಾಡುವದಕ್ಕೆ.[2]

(ಭಾಷ್ಯ)

೩೬. ತಾಃ ಯಥೋಕ್ತಾಃ ವ್ಯಾಹೃತೀಃ ಯಃ ವೇದ, ಸ ವೇದ ವಿಜಾನಾತಿ । ಕಿಂ ತತ್ ? ಬ್ರಹ್ಮ । ನನು 'ತದ್ಬ್ರಹ್ಮ ಸ ಆತ್ಮಾ' ಇತಿ ಜ್ಞಾತೇ ಬ್ರಹ್ಮಣಿ ನ ವಕ್ತವ್ಯಮ್ ಅವಿಜ್ಞಾತವತ್ 'ಸ ವೇದ ಬ್ರಹ್ಮ' ಇತಿ । ನ । ತದ್ವಿಶೇಷವಿವಕ್ಷುತ್ವಾತ್ ಅದೋಷಃ ।

---

1. ಒಂದೊಂದೂ ವ್ಯಾಹೃತಿಯೂ ನಾಲ್ಕುನಾಲ್ಕು ವಿಧವಾಗಿವೆ ; ಅವು ನಾಲ್ಕು ಇರುವದರಿಂದ ಒಟ್ಟು ಹದಿನಾರು ಬಗೆಯಾಯಿತು ಎಂದಭಿಪ್ರಾಯ.

2. ವ್ಯಾಹೃತಿಗಳನ್ನು ಹೀಗೆಯೇ ಉಪಾಸನೆ ಮಾಡಬೇಕು ಎಂದು ವಿಧಿಸುವದಕ್ಕೆ.

ಸತ್ಯಂ ವಿಜ್ಞಾತಂ ಚತುರ್ಥವ್ಯಾಹೃತ್ಯಾತ್ಮಾ ಬ್ರಹ್ಮ ಇತಿ । ನ ತು ತದ್ವಿಶೇಷೋ ಹೃದಯಾದ್ಯನ್ತರುಸಲಭ್ಯತ್ವಂ ಮನೋಮಯತ್ವಾದಿಶ್ಚ 'ಶಾನ್ತಿಸಮೃದ್ಧಮ್' ಇತ್ಯೇವ-ಮನ್ತೋ ವಿಶೇಷಣವಿಶೇಷರೂಪೋ ಧರ್ಮಪೂಗೋ ವಿಜ್ಞಾಯತೇ ಇತಿ ತದ್ವಿವಕ್ಷಾ ಹಿ ಶಾಸ್ತ್ರಮ್ ಅವಿಜ್ಞಾತಮಿವ ಬ್ರಹ್ಮ ಮತ್ವಾ 'ಸ ವೇದ ಬ್ರಹ್ಮ' - ಇತ್ಯಾಹ । ಅತೋ ನ ದೋಷಃ । ಯೋ ಹಿ ವಕ್ಷ್ಯಮಾಣೇನ ಧರ್ಮಪೂಗೇನ ವಿಶಿಷ್ಟಂ ಬ್ರಹ್ಮವೇದ ಸ ವೇದ ಬ್ರಹ್ಮ - ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಈ ಮೇಲೆ ಹೇಳಿದ ವ್ಯಾಹೃತಿಗಳನ್ನು ಯಾವನು ಅರಿತುಕೊಳ್ಳುವನೋ[1] ಅವನು ಬ್ರಹ್ಮವನ್ನು ಅರಿತುಕೊಳ್ಳುವನು.

(ಆಕ್ಷೇಪಃ-) "ಅದು ಬ್ರಹ್ಮವು, ಅದು ಆತ್ಮನು" ಎಂದು ಬ್ರಹ್ಮವನ್ನು ಅರಿತುಕೊಂಡಮೇಲೂ ಅದನ್ನು ಅರಿತುಕೊಂಡಿಲ್ಲವೇನೋ ಎಂಬಂತೆ "ಅವನು ಬ್ರಹ್ಮವನ್ನು ಅರಿತುಕೊಳ್ಳುತ್ತಾನೆ" ಎಂದು ಹೇಳಬೇಕಾಗಿಲ್ಲವಲ್ಲ[2] !

(ಪರಿಹಾರಃ-) ಹಾಗಲ್ಲ. ಅದರ ವಿಶೇಷವನ್ನು ಹೇಳಬೇಕೆಂದಿರುವದರಿಂದ (ಇಲ್ಲಿ ಪುನರುಕ್ತಿದೋಷವಿಲ್ಲ). ನಾಲ್ಕನೆಯ ವ್ಯಾಹೃತಿಸ್ವರೂಪವೇ ಬ್ರಹ್ಮವು ಎಂದು ತಿಳಿಯಿತು, ನಿಜ. ಆದರೆ ಅದರ ವಿಶೇಷವಾದ ಹೃದಯದ ಒಳಗಡೆ ಕಂಡುಕೊಳ್ಳಬೇಕಾಗಿರುವಮ, ಮನೋಮಯತ್ವವು - ಮೊದಲಾಗಿ ಶಾಂತಿಸಮೃದ್ಧವಾಗಿ (ಅಮೃತವಾಗಿರುವದು) ಎಂಬವರೆಗಿನ ವಿಶೇಷಣವಿಶೇಷಗಳ ರೂಪವಾದ ಧರ್ಮಸಮೂಹವು (ಇನ್ನೂ) ತಿಳಿದುಬಂದಿರುವದಿಲ್ಲ. ಆದ್ದರಿಂದ ಅದನ್ನು ತಿಳಿಸಬೇಕೆಂದೇ ಶಾಸ್ತ್ರವು ಬ್ರಹ್ಮವು (ಇನ್ನೂ) ತಿಳಿದಂತಾಗಲಿಲ್ಲವೆಂಬಂತೆ ಭಾವಿಸಿಕೊಂಡು "ಅವನೇ ಬ್ರಹ್ಮವನ್ನು ಅರಿತುಕೊಳ್ಳುವನು" ಎಂದಿದೆ. ಆದ್ದರಿಂದ ದೋಷವಿಲ್ಲ. ಯಾವನು ಮುಂದೆ ಹೇಳಲಿರುವ ಧರ್ಮಸಮೂಹದಿಂದ ಕೂಡಿರುವ ಬ್ರಹ್ಮವನ್ನು ಅರಿತುಕೊಳ್ಳುವನೋ ಅವನೇ ಬ್ರಹ್ಮವನ್ನು ಅರಿತುಕೊಳ್ಳುವನು[3] ಎಂದು ಅಭಿಪ್ರಾಯ.

---

1. ಹೀಗೆ ಉಪಾಸನೆಮಾಡುವನೋ.

2. ಮಹಃ ಎಂಬುದನ್ನು ಬ್ರಹ್ಮವೆಂದೂ ಎಲ್ಲಾ ವ್ಯಾಹೃತಿಗಳನ್ನೂ ವ್ಯಾಪಿಸಿಕೊಂಡಿರುವದೆಂದೂ ಉಪಾಸನೆಮಾಡಬೇಕೆಂದು ಹೇಳಿಯೇ ಇದೆಯಲ್ಲ ! = ಎಂದು ಆಕ್ಷೇಪ.

3. ಈ ವ್ಯಾಹೃತಿಗಳನ್ನು ಯಾವನು ಉಪಾಸನೆಮಾಡುವನೋ ಅವನೇ ಮುಂದೆ ಹೇಳಿರುವ ವಿಶೇಷಣಗಳಿಂದ ಕೂಡಿದ ಬ್ರಹ್ಮವನ್ನು ಸರಿಯಾಗಿ ಉಪಾಸನೆಮಾಡಬಲ್ಲವನಾಗುವನು ಎಂದು ವಾಕ್ಯಾರ್ಥವೆಂದು ಅಭಿಪ್ರಾಯ.

ಐದು ಆರನೆಯ ಅನುವಾಕಗಳಲ್ಲಿ ಒಂದೇ ಉಪಾಸನೆಯನ್ನು ಹೇಳಿದೆ

(ಭಾಷ್ಯ)

೩೭. ಅತಃ ವಕ್ಷ್ಯಮಾಣೇನ ಅನುವಾಕೇನ ಏಕವಾಕ್ಯತಾ ಅಸ್ಯ । ಉಭಯೋರ್ಹಿ ಅನುವಾಕಯೋಃ ಏಕಮ್ ಉಪಾಸನಮ್ । ಲಿಙ್ಗಾಚ್ಚ । ''ಭೂರಿತ್ಯಗ್ನೌ ಪ್ರತಿತಿಷ್ಠತಿ'' ಇತ್ಯಾದಿಕಂ ಲಿಙ್ಗಮ್ ಉಪಾಸನೈಕತ್ವೇ । ವಿಧಾಯಕಾಭಾವಾಚ್ಚ । ನ ಹಿ 'ವೇದ', 'ಉಪಾಸಿತವ್ಯಃ' ಇತಿ ವಿಧಾಯಕಃ ಕಶ್ಚಿಚ್ಛಬ್ದೋಽಸ್ತಿ ವ್ಯಾಹೃತ್ಯನುವಾಕೇ । ''ತಾ ಯೋ ವೇದ'' ಇತಿ ಚ ವಕ್ಷ್ಯಮಾಣಾರ್ಥತ್ವಾತ್ ನೋಪಾಸನಾಭೇದಕಃ । ವಕ್ಷ್ಯಮಾಣಾರ್ಥತ್ವಂ ಚ ತದ್ವಿಶೇಷವಿವಕ್ಷುತ್ವಾತ್ ಇತ್ಯಾದಿನಾ ಉಕ್ತಮ್ ॥

(ಭಾಷ್ಯಾರ್ಥ)

ಆದ್ದರಿಂದ ಮುಂದೆ ಹೇಳಲಿರುವ ಅನುವಾಕಕ್ಕೂ ಈ (ಅನುವಾಕಕ್ಕೂ) ಏಕವಾಕ್ಯತೆ ಇರುತ್ತದೆ. ಏಕೆಂದರೆ ಎರಡು ಅನುವಾಕಗಳಲ್ಲಿಯೂ ಒಂದೇ ಉಪಾಸನೆ(ಯನ್ನೇ ಹೇಳಿರು)ತ್ತದೆ. ಲಿಂಗದಿಂದಲೂ (ಹೀಗೆಂದು ತಿಳಿಯಬೇಕು). ''ಭೂಃ ಎಂಬ ಅಗ್ನಿಯಲ್ಲಿ ನಿಲ್ಲುವನು'' ಎಂಬುದೇ ಮುಂತಾದ (ವಚನವು ಈ ಎರಡು ಅನುವಾಕಗಳಲ್ಲಿಯೂ ಹೇಳಿರುವ) ಉಪಾಸನೆಯು ಒಂದೇ ಎಂಬುದಕ್ಕೆ ಲಿಂಗ ವಾಗಿರುತ್ತದೆ.[1] ವಿಧಾನಮಾಡುವ (ಶಬ್ದವು) ಇಲ್ಲದಿರುವದರಿಂದಲೂ ಹೀಗೆಂದು ತಿಳಿಯಬೇಕು. 'ವೇದ' (ತಿಳಿಯಬೇಕು), 'ಉಪಾಸಿತವ್ಯಃ' (ಉಪಾಸನೆ ಮಾಡ ತಕ್ಕದ್ದು) ಎಂದು(ಮುಂತಾಗಿ) ವಿಧಾನಮಾಡುವ ಯಾವ ಶಬ್ದವೂ (ಈ) ವ್ಯಾಹೃತ್ಯನುವಾಕದಲ್ಲಿರುವುದೇ ಇಲ್ಲ.[2] ''ತಾ ಯೋ ವೇದ'' ಎಂದು (ವೇದ ಎಂಬ ಶಬ್ದವಿರುವದು) ಮುಂದೆ ಹೇಳುವ (ಉಪಾಸನೆಗೆ ಅಂಗ)ವಾಗಿರುವದರಿಂದ ಅದು ಉಪಾಸನೆಯನ್ನು ಬೇರ್ಪಡಿಸುವ (ಶಬ್ದ)ವಲ್ಲ.[3] ಅದು ಮುಂದಿನ (ಉಪಾ ಸನೆಗೆ

---

1. 'ತಾ ಯೋ ವೇದ' ಎಂಬ ವಾಕ್ಯದ ಅರ್ಥವು ಬೇರೆ ರೀತಿಯಲ್ಲಿ ಹೊಂದುವ ದಿಲ್ಲವಾದ್ದರಿಂದ ಎರಡು ಅನುವಾಕಗಳಲ್ಲಿಯೂ ಒಂದೇ ಉಪಾಸನೆಯನ್ನು ಹೇಳಿದೆ ಎಂಬುದು ಮಾತ್ರವಲ್ಲ ; ಈ ಅನುವಾಕದಲ್ಲಿ ಹೇಳಿರುವ ಅಗ್ನ್ಯಾದಿಸ್ವರೂಪವನ್ನು ಪಡೆಯುವನೆಂಬುದೂ ಇದಕ್ಕೇ ಒಂದು ಲಿಂಗ, ಗುರುತು.

2. ವಿಧಾನಮಾಡುವ ಶಬ್ದವಿದ್ದರೆ ಇದೇ ಒಂದು ಬೇರೆಯ ಉಪಾಸನೆಯೆಂದಾಗುತ್ತಿತ್ತು.

3. ಹಾಗಿದ್ದರೆ 'ವೇದ' ಎಂಬುದು ಈ ಅನುವಾಕಕ್ಕೆ, 'ಉಪಾಸ್ಯ' ಎಂಬುದು ಮುಂದಿನ ಅನುವಾಕಕ್ಕೆ - ಹೀಗೆ ಎರಡೂ ವಿಧಾಯಕಶಬ್ದಗಳಾಗುತ್ತಿದ್ದವು.

ಅಂಗ)ವೆಂಬುದನ್ನು ''ಆದರ ವಿಶೇಷವನ್ನು ಹೇಳಬೇಕೆಂದಿರುವದರಿಂದ'' ಎಂದು ಮುಂತಾದ (ವಾಕ್ಯ)ದಿಂದ ತಿಳಿಸಿಕೊಟ್ಟಿರುತ್ತೇವೆ.

ಅಂಗೋಪಾಸನೆಯ ಫಲ

(ಭಾಷ್ಯ)

೩೮. ಸರ್ವೇ ದೇವಾಃ ಅಸ್ಮೈ ಏವಂ ವಿದುಷೇ ಅಙ್ಗಭೂತಾಃ ಆವಹನ್ತಿ ಆನಯನ್ತಿ ಬಲಿಮ್ । ಸ್ವಾರಾಜ್ಯಪ್ರಾಪ್ತೌ ಸತ್ಯಾಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ದೇವತೆಗಳೆಲ್ಲರೂ ಇವನಿಗೆ ಎಂದರೆ ಹೀಗೆಂದು ಉಪಾಸನೆಮಾಡುವಾತನಿಗೆ ಅಂಗಗಳಾಗಿದ್ದುಕೊಂಡು (ಇವನಿಗೆ) ಸ್ವಾರಾಜ್ಯಪ್ರಾಪ್ತಿಯಾದಾಗ[1] ಕಾಣಿಕೆಯನ್ನು ತಂದುಕೊಡುತ್ತಾರೆ, ತಂದೊದಗಿಸುತ್ತಾರೆ ಎಂದರ್ಥ.

೬. ಮಹಃ ಎಂಬ ವ್ಯಾಹೃತಿರೂಪವಾದ ಬ್ರಹ್ಮದ ಉಪಾಸನೆ

ಸಂಬಂಧ

(ಭಾಷ್ಯ)

೩೯. ಭೂರ್ಭುವಃಸುವಃಸ್ವರೂಪಾ ಮಹಃ ಇತ್ಯೇತಸ್ಯ ವ್ಯಾಹೃತ್ಯಾತ್ಮನೋ ಬ್ರಹ್ಮಣಃ ಅಙ್ಗಾನ್ಯನ್ಯಾ ದೇವತಾಃ ಇತ್ಯುಕ್ತಮ್ । ಯಸ್ಯ ತಾಃ ಅಙ್ಗಭೂತಾಃ ತಸ್ಯ ವಿತಸ್ಯ ಬ್ರಹ್ಮಣಃ ಸಾಕ್ಷಾತ್ ಉಪಲಬ್ಧ್ಯರ್ಥಮ್ ಉಪಾಸನಾರ್ಥಂ ಚ ಹೃದಯಾಕಾಶಃ ಸ್ಥಾನಮುಚ್ಯತೇ ಶಾಲಗ್ರಾಮ ಇವ ವಿಷ್ಣೋಃ । ತಸ್ಮಿನ್ ಹಿ ತದ್ ಬ್ರಹ್ಮ ಉಪಾಸ್ಯಮಾನಂ ಮನೋಮಯತ್ವಾದಿಧರ್ಮವಿಶಿಷ್ಟಂ ಸಾಕ್ಷಾತ್ ಉಪಲಭ್ಯತೇ ಪಾಣಾವಿವ ಆಮಲಕಮ್ । ಮಾರ್ಗಶ್ಚ ಸರ್ವಾತ್ಮಭಾವಪ್ರತಿಪತ್ತ್ಯಯೇ ವಕ್ತವ್ಯಃ ಇತ್ಯನುವಾಕಃ ಆರಭ್ಯತೇ ॥

1. ಸ್ವಾರಾಜ್ಯವೆಂದರೆ ಬ್ರಹ್ಮಸಮಾನವಾದ ಐಶ್ವರ್ಯವು, ಸೂ.ಭಾ.೪-೪-೨೧ ; ಅದನ್ನು ಪಡೆದಾಗ ಇತರ ದೇವತೆಗಳು ಈಶ್ವರನಂತೆಯೇ ಇವನನ್ನು ಸೇವೆಮಾಡುವರು, ಮುಂದಿನ ಅನುವಾಕದಲ್ಲಿ ಹೇಳಿರುವ ಉಪಾಸನೆಗೆ ಬ್ರಹ್ಮಪ್ರಾಪ್ತಿಯೇ ಫಲವಾದ್ದರಿಂದ ದೇವತೋಪಾಸ್ಯತ್ವವೂ ಉಪಾಸಕನಿಗೆ ದೊರೆಯುವದು.

(ಭಾಷ್ಯಾರ್ಥ)

ಭೂಃ ಭುವಃ ಸುವಃ ಎಂಬ (ವ್ಯಾಹೃತಿಗಳ) ರೂಪದ ಮಿಕ್ಕ ದೇವತೆಗಳು ಮಹಃ ಎಂಬೀ ವ್ಯಾಹೃತಿಯ ರೂಪವಾದ ಬ್ರಹ್ಮಕ್ಕೆ ಅಂಗಗಳಾಗಿರುತ್ತಾರೆ ಎಂದು ಹೇಳಿದ್ದಾಯಿತು. ಯಾವ (ಬ್ರಹ್ಮಕ್ಕೆ) ಅವರು ಅಂಗವಾಗಿರುತ್ತಾರೋ ಆ ಈ ಬ್ರಹ್ಮವನ್ನು ನೇರಾಗಿ ಕಂಡುಕೊಳ್ಳುವದಕ್ಕೂ ಉಪಾಸನೆಮಾಡುವದಕ್ಕೂ[1] ವಿಷ್ಣುವಿಗೆ ಸಾಲಿಗ್ರಾಮದಂತೆ (ಇರುವ) ಹೃದಯಾಕಾಶವೆಂಬ ಸ್ಥಾನವನ್ನು ಈಗ ಹೇಳಲಾಗುತ್ತದೆ. ಏಕೆಂದರೆ ಆ ಬ್ರಹ್ಮವನ್ನು ಅಲ್ಲಿ ಉಪಾಸನೆಮಾಡಿದರೆ ಮನೋಮಯತ್ವಾದಿಗಳಿಂದ ಕೂಡಿದ್ದಾಗಿ ಅಂಗೈನೆಲ್ಲಿಯಂತೆ ನೇರಾಗಿ ಕಾಣಬರುತ್ತದೆ. ಮತ್ತು ಸರ್ವಾತ್ಮಭಾವವನ್ನು ಪಡೆದುಕೊಳ್ಳುವದಕ್ಕೆ ಮಾರ್ಗವನ್ನೂ[2] ಹೇಳಬೇಕಾಗಿದೆ. ಆದ್ದರಿಂದ ಈ ಅನುವಾಕವನ್ನು ಪ್ರಾರಂಭಿಸಿದೆ.

ಸ ಯ ಏಷೋಽನ್ತರ್ಹೃದಯ ಆಕಾಶಃ । ತಸ್ಮಿನ್ನಯಂ ಪುರುಷೋ ಮನೋಮಯಃ । ಅಮೃತೋ ಹಿರಣ್ಮಯಃ । ಅನ್ತರೇಣ ತಾಲುಕೇ । ಯ ಏಷ ಸ್ತನ ಇವಾವಲಮ್ಬತೇ । ಸೇನ್ದ್ರಯೋನಿಃ । ಯತ್ರಾಸೌ ಕೇಶಾನ್ತೋ ವಿವರ್ತತೇ । ವ್ಯಪೋಹ್ಯ ಶೀರ್ಷಕಪಾಲೇ । ಭೂರಿತ್ಯಗ್ನೌ ಪ್ರತಿತಿಷ್ಠತಿ । ಭುವ ಇತಿ ವಾಯೌ । ಸುವರಿತ್ಯಾದಿತ್ಯೇ । ಮಹ ಇತಿ ಬ್ರಹ್ಮಣಿ । ಆಪ್ನೋತಿ ಸ್ವಾರಾಜ್ಯಮ್ । ಆಪ್ನೋತಿ ಮನಸಸ್ಪತಿಮ್ । ವಾಕ್ಪತಿಶ್ಚಕ್ಷುಷ್ಪತಿಃ । ಶ್ರೋತ್ರಪತಿರ್ವಿಜ್ಞಾನಪತಿಃ । ಏತತ್ ತತೋ ಭವತಿ । ಆಕಾಶಶರೀರಂ ಬ್ರಹ್ಮ । ಸತ್ಯಾತ್ಮ ಪ್ರಾಣಾರಾಮಂ ಮನ ಆನನ್ದಮ್ । ಶಾನ್ತಿಸಮೃದ್ಧಮಮೃತಮ್ । ಇತಿ ಪ್ರಾಚೀನಯೋಗ್ಯೋಪಾಸ್ವ ॥೬॥

೬. ಹೃದಯದ ಒಳಗೆ ಯಾವ ಈ ಆಕಾಶವಿದೆಯೋ ಅದರಲ್ಲಿ ಆ ಈ ಮನೋಮಯನಾದ, ಅಮೃತನಾದ, ಹಿರಣ್ಮಯನಾದ ಪುರುಷನು (ಇರುವನು). ಎರಡು ದವಡೆಗಳ ನಡುವೆ - ಯಾವ ಇದು ಸ್ತನದಂತೆ ನೇತಾಡುತ್ತಿರುವದೋ ಇದರ ನಡುವೆ - ಎಲ್ಲಿ ಈ ಕೂದಲುಗಳ ಕೊನೆಯು ಇಬ್ಬಗೆ

---

1. ಉಪಾಸನೆಯ ಬಲದಿಂದ ತಾನೇ ಬ್ರಹ್ಮವೆಂಬ ಸಾಕ್ಷಾತ್ಕಾರವನ್ನು ಪಡೆಯುವದಕ್ಕೆ. ಸೂ. ಭಾ.೩-೩-೫೯.

2. ಸ್ಥಾನ, ವಿಶೇಷಣಗಳು - ಇವೇ ಅಲ್ಲದೆ ಉಪಾಸಕನು ಬ್ರಹ್ಮಲೋಕದ ಮಾರ್ಗವನ್ನೂ ಚಿಂತಿಸಬೇಕು. ಸೂ. ಭಾ. ೪-೨-೧೭.

ಯಾಗಿರುವದೋ (ಅಲ್ಲಿ) ತಲೆಬಿರುಡೆಯ ಕಪಾಲಗಳನ್ನು ಒಡೆದುಕೊಂಡು (ಹೊರಟಿರುವದಲ್ಲ), ಅದೇ ಇಂದ್ರನ ಯೋನಿಯು. ಭೂಃ ಎಂಬ ಅಗ್ನಿಯಲ್ಲಿ ನಿಲ್ಲುವನು ; ಭುವಃ ಎಂಬ ವಾಯುವಿನಲ್ಲಿ, ಸುವಃ ಎಂಬ ಆದಿತ್ಯನಲ್ಲಿ ; ಮಹಃ ಎಂಬ ಬ್ರಹ್ಮದಲ್ಲಿ (ನಿಲ್ಲುವನು). ಸ್ವಾರಾಜ್ಯವನ್ನು ಪಡೆದುಕೊಳ್ಳುವನು, ಮನಸ್ಸುಗಳ ಒಡೆಯನನ್ನು ಪಡೆದುಕೊಳ್ಳುವನು, ವಾಕ್ಕುಗಳಿಗೆ ಒಡೆಯನು, ಚಕ್ಷುಗಳಿಗೆ ಒಡೆಯನು, ಶ್ರೋತ್ರಗಳಿಗೆ ಒಡೆಯನು, ವಿಜ್ಞಾನಗಳಿಗೆ ಒಡೆಯನು. ಅದಕ್ಕಿಂತಲೂ (ಹೆಚ್ಚಿನ) ಇದೂ ಆಗುವನು, ಆಕಾಶಶರೀರವಾಗಿರುವ, ಸತ್ಯಾತ್ಮವಾದ, ಪ್ರಾಣಾರಾಮವಾದ, ಮನ ಆನಂದವಾಗಿರುವ, ಶಾಂತಿಸಮೃದ್ಧವಾಗಿರುವ, ಅಮೃತವಾಗಿರುವ (ಬ್ರಹ್ಮವು.) ಹೀಗೆಂದು ಎಲ್ಲೆ ಪ್ರಾಚೀನಯೋಗ್ಯನೆ, ಉಪಾಸನೆ ಮಾಡು.

ಹೃದಯಾಕಾಶದಲ್ಲಿರುವ ಬ್ರಹ್ಮ

(ಭಾಷ್ಯ)

೪೦. 'ಸಃ' ಇತಿ ವ್ಯತ್ಯಮ್ಯ "ಅಯಂ ಪುರುಷಃ" ಇತ್ಯನೇನ ಸಂಬಧ್ಯತೇ । ಯ ಏಷಃ ಅನ್ತರ್ಹೃದಯೇ ಹೃದಯಸ್ಯಾನ್ತಃ । ಹೃದಯಮ್ ಇತಿ ಪುಣ್ಡರೀಕಾಕಾರೋ ಮಾಂಸಪಿಣ್ಡಃ ಪ್ರಾಣಾಯತನಃ ಅನೇಕನಾಡೀಸುಷಿರಃ, ಊರ್ಧ್ವನಾಲಃ, ಅಧೋಮುಖಿಃ, ವಿಶಸ್ಯಮಾನೇ ಪಶೌ ಪ್ರಸಿದ್ಧಃ ಉಪಲಭ್ಯತೇ । ತಸ್ಯ ಅನ್ತಃ ಯ ಏಷ ಆಕಾಶಃ ಪ್ರಸಿದ್ಧ ಏವ ಕರಕಾಕಾಶವತ್ । ತಸ್ಮಿನ್ ಸೋಽಯಂ ಪುರುಷಃ - ಪುರಿ ಶಯನಾತ್, ಪೂರ್ಣಾ ವಾ ಭೂರಾದಯೋ ಲೋಕಾಃ ಯೇನ, ಇತಿ ಪುರುಷಃ - ಮನೋಮಯಃ । ಮನಃ ವಿಜ್ಞಾನಮ್ ; ಮನುತೇಜ್ಞಾನಕರ್ಮಣಾಃ । ತನ್ಮಯಃ ತತ್ಪ್ರಾಯಃ[1] । ತದುಪಲಭ್ಯತ್ವಾತ್ । ಮನುತೇ ಅನೇನ ಇತಿ ವಾ ಮನಃ, ಅನ್ತಃಕರಣಮ್ । ತದಭಿಮಾನೀ ತನ್ಮಯಃ ತಲ್ಲಿಙ್ಗೋ ವಾ । ಅಮೃತಃ ಅಮರಣ ಧರ್ಮಾ । ಹಿರಣ್ಮಯಃ ಜ್ಯೋತಿರ್ಮಯಃ ॥

(ಭಾಷ್ಯಾರ್ಥ)

ಸಃ (ಆ) ಎಂಬ (ಮಾತನ್ನು) ಕ್ರಮವನ್ನು ತಪ್ಪಿಸಿ 'ಅಯಂ ಪುರುಷಃ' (ಈ ಪುರುಷನು) ಎಂಬುದಕ್ಕೆ ಸಂಬಂಧಿಸಿಕೊಳ್ಳಬೇಕು. ಹೃದಯದೊಳಗೆ ಎಂದರೆ

---

1. ಈ ಮಾತು ವಾ॥ ಕಾ॥ ಪಾಠಗಳಲ್ಲಿ ಮಾತ್ರ ಇದೆ.

ಹೃದಯಮೊಳಗಡೆಯಲ್ಲಿ. ಹೃದಯವೆಂದರೆ ಕಮಲದ ಆಕಾರವುಳ್ಳದ್ದಾಗಿ, ಪ್ರಾಣಕ್ಕೆ ಆಶ್ರಯವಾಗಿ, ಅನೇಕ ನಾಡಿಗಳಿಂದಲೂ ರಂಧ್ರಗಳಿಂದಲೂ ಕೂಡಿದ್ದಾಗಿ ಮೇಲ್ಗಡೆಗೆ ನಾಳ, ಕೆಳಗಡೆಗೆ ಮುಖ (ಹೀಗೆ) ಇರುವದಾಗಿ (ಯಜ್ಞದ) ಪಶುವನ್ನು ಕೊಯ್ಯುವಾಗ ಪ್ರಸಿದ್ಧವಾಗಿ ಕಾಣುವ ಮಾಂಸಪಿಂಡವು. ಅದರ ಒಳಗಡೆಯಲ್ಲಿ ಯಾವ ಈ ಆಕಾಶ ವಿದೆಯೋ, ಕಮಂಡಲುವಿನೊಳಗಿನ ಆಕಾಶದಂತೆ ಪ್ರಸಿದ್ಧವಾದ[1] (ಯಾವ ಆಕಾಶ ವಿದೆಯೋ) ಅದರಲ್ಲಿ ಆ ಈ ಪುರುಷನು[2] (ಇರುವನು). ಪುರದಲ್ಲಿ ಇರುವದರಿಂದ, ಅಥವಾ ಭೂಃ ಮುಂತಾದ ಲೋಕಗಳು ಯಾವನಿಂದ ಪೂರ್ಣವಾಗಿರುವವೋ ಅವನಾದ್ದರಿಂದ, (ಇವನು) ಪುರುಷನೆನಿಸುವನು.[3] (ಇವನು) ಮನೋಮಯನು, ಮನಸ್ಸೆಂದರೆ ವಿಜ್ಞಾನವು ; ಅರಿಯುವದು ಎಂಬರ್ಥದ ಮನ್ ಧಾತುವಿನಿಂದ (ಈ ಶಬ್ದರೂಪವಾಗಿರುತ್ತದೆ). ತನ್ಮಯನಾಗಿರುತ್ತಾನೆ, ಎಂದರೆ ಅದರಿಂದ ಕಾಣಬರುತ್ತಾನೆ.[4] ಅಥವಾ ಯಾವದರಿಂದ ತಿಳಿದುಕೊಳ್ಳುವರೋ (ಆ) ಅಂತಃಕರಣಕ್ಕೆ ಮನಸ್ಸು ಎಂದು (ಇಲ್ಲಿ ಹೆಸರು) ; ಆ (ಅಂತಃಕರಣಕ್ಕೆ) ಅಭಿಮಾನಿಯಾಗಿರುತ್ತಾನಾದ್ದರಿಂದ[5] ಅಥವಾ ಆ (ಅಂತಃಕರಣವೆಂಬ) ಗುರುತುಳ್ಳವನಾದ್ದರಿಂದ[6] (ಮನೋಮಯನು).[7]

1. ಆಕಾಶವು ಸರ್ವಗತವಾಗಿದ್ದರೂ ಕಮಂಡಲುವಿನಲ್ಲಿ ಗೊತ್ತಾಗಿ ತೋರುವಂತೆ ಬ್ರಹ್ಮವು ಹೃದಯದೊಳಗೆ ಕಂಡುಬರುತ್ತದೆ - ಎಂದಭಿವ್ಯಾಯ.

2. ಮಹಃ ಎಂದರೆ ಬ್ರಹ್ಮವು ಎಂದು ಪರೋಕ್ಷವಾಗಿ ಹೇಳಿದ್ದ ಪುರುಷನು ಹೃದಯದಲ್ಲಿರುವ ಈ ಪುರುಷನೇ ಎಂದರ್ಥ.

3. ಶರೀರದಲ್ಲಿರುವ ಹೃದಯದಲ್ಲಿ ಉಪಾಸ್ಯನಾಗಿರುವದರಿಂದ - ಅಥವಾ ಆದಿತ್ಯ ರೂಪದಿಂದ ಸರ್ವಲೋಕಗಳನ್ನೂ ತುಂಬಿಕೊಂಡಿರುವನೆಂದು ಚಿಂತಿಸಬೇಕೆಂದು ಹಿಂದಿನ ಅನುವಾಕದಲ್ಲಿ ಹೇಳಿದವನಾದ್ದರಿಂದ - ಇವನು ಪುರುಷನು.

4 ಮನ-ಜ್ಞಾನೇ ಎಂಬ ಧಾತುವಿನಿಂದ ಮನಃ ಎಂಬ ಶಬ್ದವಾಗಿದೆ , ಜ್ಞಾನದಿಂದ ಎಂದರೆ ಉಪಾಸನೆಯಿಂದ ಸಾಕ್ಷಾತ್ಕೃತನಾಗುತ್ತಾನೆ.

5. ಅಪರಬ್ರಹ್ಮವಾದ ಹಿರಣ್ಯಗರ್ಭನು ಸಮಷ್ಟಿಯಾದ ಅಂತಃಕರಣಕ್ಕೆ ಅಭಿಮಾನಿ ; ಅವನನ್ನೇ ಇಲ್ಲಿ ವ್ಯಾಹೃತ್ಯಾತ್ಮನಾಗಿ ಉಪಾಸನೆಮಾಡಬೇಕೆಂದು ಹೇಳಿರುವದು. ಬೃ. ೫-೫, ೩-೪ ; ೫-೬-೧ ನೋಡಿ.

6. ಅಂತಃಕರಣದ ವ್ಯಾಪಾರಕ್ಕೆ ಆಶ್ರಯನಾಗಿರುವ ತನ್ನ ಆತ್ಮನು ಹಿರಣ್ಯಗರ್ಭನೇ ಎಂದು ಅಂತಃಕರಣದ ಗುರುತಿನಿಂದ ಉಪಾಸ್ಯನಾದವನು.

7 ಪರಮೇಶ್ವರನನ್ನು ಮನೋಮಯನೆನ್ನಬಹುದೆ ? ಎಂಬುದನ್ನು ಸೂ. ಭಾ. ೧-೨-೨ ರಲ್ಲಿ ಚರ್ಚಿಸಿದೆ.

ಅಮೃತನಾಗಿರುತ್ತಾನೆ, ಎಂದರೆ ಸಾವಿಲ್ಲದ್ದೆಂಬ ಧರ್ಮವುಳ್ಳವನು.[1] ಹಿರಣ್ಮಯನು ಎಂದರೆ ಜ್ಯೋತಿರ್ಮಯನು.[2]

ಬ್ರಹ್ಮಪ್ರಾಪ್ತಿಗೆ ದಾರಿ

(ಭಾಷ್ಯ)

೪೧. ತಸ್ಯ ವಿವಂಲಕ್ಷಣಸ್ಯ ಹೃದಯಾಕಾಶೇ ಸಾಕ್ಷಾತ್ಕೃತಸ್ಯ ವಿದುಷಃ ಆತ್ಮಭೂತಸ್ಯ ಇನ್ದ್ರಸ್ಯ ಈಶ್ವರರೂಪಸ್ಯ[3] ಪ್ರತಿಪತ್ತಯೇ ಮಾರ್ಗಃ ಅಭಿಧೀಯತೇ -

(ಭಾವಾರ್ಥ)

ಆ ಈ ಲಕ್ಷಣದ,[4] ಹೃದಯಾಕಾಶದಲ್ಲಿ ಸಾಕ್ಷಾತ್ಕಾರವಾಗಿ ಉಪಾಸಕನ ಸ್ವರೂಪವೇ ಆಗಿರುವ ಇಂದ್ರನ ಈಶ್ವರರೂಪವನ್ನು ಹೊಂದುವದಕ್ಕೆ ಮಾರ್ಗವನ್ನು[5] ಈಗ ಹೇಳಲಾಗುತ್ತದೆ.

(ಭಾಷ್ಯ)

೪೨. ಹೃದಯಾತ್ ಊರ್ಧ್ವಂ ಪ್ರವೃತ್ತಾ ಸುಷುಮ್ನಾ ನಾಮ ನಾಡೀ ಯೋಗ ಶಾಸ್ತ್ರೇಷು ಚ ಪ್ರಸಿದ್ಧಾ । ಸಾ ಚ ಅನ್ತರೇಣ ಮಧ್ಯೇ ಪ್ರಸಿದ್ಧೇ ತಾಲುಕೇ ತಾಲುಕಯೋಃ ಗತಾ । ಯಶ್ಚ ಏಷ ತಾಲುಕಯೋಃ ಮಧ್ಯೇ ಸ್ತನ ಇವ ಅವಲಮ್ಬತೇ ಮಾಂಸಖಿಣ್ಡಃ, ತಸ್ಯ ಚ ಅನ್ತರೇಣ - ಇತ್ಯೇತತ್ । ಯತ್ರ ಚ ಕೇಶಾನ್ತಃ । ಕೇಶಾನಾಮ್ ಅನ್ತಃ, ಅವಸಾನಂ ಮೂಲಂ ಕೇಶಾನ್ತಃ ವಿವರ್ತತೇ ವಿಭಾಗೇನ ವರ್ತತೇ । ಮೂರ್ಧ ಪ್ರದೇಶಃ - ಇತ್ಯರ್ಥಃ । ತಂ ದೇಶಂ ಪ್ರಾಪ್ಯ ತೇನ ಅನ್ತರೇಣ ತತ್ರ ವಿನಿಃಸೃತಾ । ವ್ಯಪೋಹ್ಯ ವಿಭಜ್ಯ ವಿದಾರ್ಯ ಶೀರ್ಷಕಪಾಲೇ ಶಿರಃಕಪಾಲೇ ವಿನಿರ್ಗತಾ ಯಾ, ಸಾ

1 ಹಿರಣ್ಯಗರ್ಭನು ಕಲ್ಪಾಂತಸ್ಥಾಯಿಯಾದ್ದರಿಂದ ಇತರಾಪೇಕ್ಷೆಯಿಂದ ಅಮೃತನು.

2. ಪರಮೇಶ್ವರನನ್ನು ಹಿರಣ್ಮಯನೆನ್ನಬಹುದೆ ? ಎಂಬುದನ್ನು ಸೂ. ಭಾ. ೧-೧-೨೦ ರಲ್ಲಿ ಚರ್ಚಿಸಿದೆ.

3. 'ಈಶ್ವರರೂಪಸ್ಯ' ಎಂಬುದು ವಾ ॥ ಪಾಠ. 'ಈದೃಶಸ್ವರೂಪಪ್ರತಿಪತ್ತಯೇ' ಎಂಬ ಆ ॥ ಪಾಠದಲ್ಲಿ ''ಇಂಥ ಸ್ವರೂಪವನ್ನು ಪಡೆದುಕೊಳ್ಳುವದಕ್ಕಾಗಿ'' ಎಂದು ಕನ್ನಡಿಸಬೇಕು.

4. ಹೃದಯಸ್ಥಾನವುಳ್ಳವನು, ಮನೋಮಯನು, ಅಮೃತನು, ಹಿರಣ್ಮಯನು - ಎಂಬ ವಿಶೇಷಣದ.

5. ನಾನೇ ಬ್ರಹ್ಮವೆಂದು ಸಾಕ್ಷಾತ್ಕಾರಮಾಡಿಕೊಂಡಬಳಿಕ ಮರಣಕಾಲದಲ್ಲಿ ಈ ಮಾರ್ಗದಿಂದ ಹೋಗಿ ಫಲವನ್ನು ಪಡೆಯಬೇಕೆಂಬ ನಿಯಮವುಂಟು. ಸೂ ಭಾ. ೪-೨-೧೭.

ಇನ್ದ್ರಯೋನಿಃ ಇನ್ದ್ರಸ್ಯ ಬ್ರಹ್ಮಣೋ ಯೋನಿಃ ಮಾರ್ಗಃ ಸ್ವರೂಪಪ್ರತಿಪತ್ತಿ ದ್ವಾರಮ್ - ಇತ್ಯರ್ಥಃ ॥

(ಭಾಷ್ಯಾರ್ಥ)

ಹೃದಯದಿಂದ ಮೇಲಕ್ಕೆ ಹಾಯ್ದಿರುವ ಸುಷುಮ್ನಾ[1] ಎಂಬ ನಾಡಿಯುಂಟು, (ಅದು) ಯೋಗಶಾಸ್ತ್ರಗಳಲ್ಲಿಯೂ ಪ್ರಸಿದ್ಧವಾಗಿರುತ್ತದೆ. ಅದು ಪ್ರಸಿದ್ಧವಾದ ದವಡೆಗಳ (ತಾಲುಕೇ = ತಾಲುಕಯೋಃ) ಅಂತರದಿಂದ ಎಂದರೆ ನಡುವೆಯಿಂದ (ಹೊರಟು)ಹೋಗಿರುತ್ತದೆ. ದವಡೆಗಳ ನಡುವೆ ಮೊಲೆಯಂತಿರುವ ಯಾವ ಜೋಲಾಡುತ್ತಿರುವ ಮಾಂಸಖಂಡವಿರುವದೋ ಅದರ ನಡುವೆಯೂ ಎಂದರ್ಥ. ಮತ್ತು ಕೇಶಾಂತವು ಎಂದರೆ ಕೂದಲುಗಳ ಅಂತವು, ಕೊನೆಗಾಣುವ (ಸ್ಥಲವು), ಬುಡವು, ಇಬ್ಬಗೆಯಾಗಿರುವದೋ[2] - ಎಂದರೆ ಮೂರ್ಧಪ್ರದೇಶವು ಎಂದರ್ಥ. ಆ ಸ್ಥಲವನ್ನು ಸೇರಿ ಆ ನಡುವೆಯಿಂದ ಅಲ್ಲಿಂದ ಮುಂದಕ್ಕೆ ಹೊರಟಿರುತ್ತದೆ. ತಲೆಬುರುಡೆಯ ಕಪಾಲಗಳನ್ನು, ತಲೆಬುರುಡೆಯ (ಎರಡು) ಹೋಳುಗಳನ್ನು ಒಡೆದು ಕೊಂಡು ವಿಂಗಡಿಸಿಕೊಂಡು ಸೀಳಿಕೊಂಡು ಹೊರಟಿರುವದೋ ಆ (ಸುಷುಮ್ನೆಯು) ಇಂದ್ರಯೋನಿಯು. ಇಂದ್ರನ ಎಂದರೆ ಬ್ರಹ್ಮದ, ಯೋನಿಯು, ಸ್ವರೂಪವನ್ನು ಪಡೆದುಕೊಳ್ಳುವದಕ್ಕೆ ಬಾಗಿಲು[3] - ಎಂದರ್ಥ.

ಉಪಾಸನೆಯ ಫಲ

(ಭಾಷ್ಯ)

ಳಕಿ. ತಯಾ ಏವಂವಿದ್ವಾನ್ ಮನೋಮಯಾತ್ಮದರ್ಶೀ ಮೂರ್ಧ್ನೋ ವಿನಿಷ್ಕ್ರಮ್ಯ ಅಸ್ಯ ಲೋಕಸ್ಯ ಅಧಿಷ್ಠಾತಾ ಭೂಃ ಇತಿ ವ್ಯಾಹೃತಿರೂಪೋ ಯೋಽಗ್ನಿಃ ಮಹತೋ ಬ್ರಹ್ಮಣೋಽಙ್ಗಭೂತಃ, ತಸ್ಮಿನ್ ಅಗ್ನೌ ಪ್ರತಿತಿಷ್ಠತಿ । ಅಗ್ನ್ಯಾತ್ಮನಾ ಇಮಂ

1. ಸುಷುಮ್ನಾನಾಡಿಯ ವಿಷಯಕ್ಕೆ ಕ. ಭಾ. ೨-೩-೧೬, ಪ್ರ. ಭಾ. ೩-೭, ಛಾಂ. ಭಾ. ೮-೬-೬ - ಇವುಗಳನ್ನು ನೋಡಿರಿ. ಈ ನಾಡಿಯು ಮನೋಮಯವಾದದ್ದು, ಕಣ್ಣಿಗೆ ಕಾಣುವದಿಲ್ಲ.

2. ಐತರೇಯೋಪನಿಷತ್ತಿನಲ್ಲಿ "ಸೀಮಾನಂ ವಿದಾರ್ಯ" ಎಂದು ವರ್ಣಿಸಿರುವದು ಇದನ್ನೇ.

3. ಸಾಯುವ ಕಾಲದಲ್ಲಿ ಉಪಾಸಕನಿಗೆ ಈ ನಾಡಿಯ ಮಾರ್ಗವು ದೊರೆತು ದೇವ ಯಾನವೆಂಬ ಮಾರ್ಗದ ಮೂಲಕ ಅಪರಬ್ರಹ್ಮಪ್ರಾಪ್ತಿಯಾಗುವದೆಂದು ಉಪನಿಷತ್ತುಗಳಲ್ಲಿ ವರ್ಣಿಸಿದೆ. "ನಾನು ಬ್ರಹ್ಮವು" ಎಂದು ಉಪಾಸನೆಮಾಡುವವರಿಗೆಲ್ಲ ಈ ಮಾರ್ಗವು ದೊರೆಯುವದೆಂದು ಬ್ರ. ಸೂ. ಭಾ. ೪-೩-೧ ರಲ್ಲಿ ನಿರ್ಣಯಮಾಡಿರುತ್ತದೆ. ಈ ಮಾರ್ಗದ ವರ್ಣನೆಯನ್ನೂ ಅದರ ವಿಷಯವಾದ ಚರ್ಚೆಯನ್ನೂ ಬ್ರ. ಸೂ. ೪-೩-೨ ರಿಂದ ೬ ರವರೆಗಿನ ಸೂತ್ರಗಳಲ್ಲಿ ಕಾಣಬಹುದು.

ಲೋಕಂ ಪ್ರಾಪ್ನೋತಿ ಇತ್ಯರ್ಥಃ । ತಥಾ ಭುವಃ ಇತಿ ದ್ವಿತೀಯಯಾಽಽಹೃತ್ಯಾತ್ಮನಿ ವಾಯೌ । ಪ್ರತಿತಿಷ್ಠತಿ ಇತ್ಯನುವರ್ತತೇ । ಸುವಃ ಇತಿ ತೃತೀಯಯಾಽಽಹೃತ್ಯಾತ್ಮನಿ ಆದಿತ್ಯೇ । ಮಹಃ ಇತಿ ಏಜಿಗ್ನಿ ಚತುರ್ಥ್ಯಾಽಽಹೃತ್ಯಾತ್ಮನಿ ಬ್ರಹ್ಮಣಿ ಪ್ರತಿತಿಷ್ಠತಿ । ತೇಷು ಆತ್ಮಭಾವೇನ ಸ್ಥಿತ್ವಾ ಆಪ್ನೋತಿ ಬ್ರಹ್ಮಭೂತಃ ಸ್ವಾರಾಜ್ಯಮ್ ಸ್ವರಾಡ್ಭಾವಮ್ । ಸ್ವಯಮೇವ ರಾಜಾ ಅಧಿಪತಿರ್ಭವತಿ ಏಜಿಗ್ನಿಭೂತಾನಾಂ ದೇವಾನಾಂ ಯಥಾ ಬ್ರಹ್ಮ । ದೇವಾಶ್ಚ ಸರ್ವೇ ಏಸ್ಮೈ ಬಲಿಮ್ ಆವಹನ್ತಿ ಏಜಿಗ್ನಿಭೂತಾಃ ಯಥಾ ಬ್ರಹ್ಮಣೇ । ಆಪ್ನೋತಿ ಮನಸಸ್ಪತಿಮ್ । ಸರ್ವೇಷಾಂ ಹಿ ಮನಸಾಂ ಪತಿಃ । ಸರ್ವಾತ್ಮಕತ್ವಾತ್ ಬ್ರಹ್ಮಣಃ । ಸರ್ವೈರ್ಹಿ ಮನೋಭಿಃ ತಸ್ಮಾನ್ಮತೇ । ತದಾಪ್ನೋತಿ ಏವಂ ವಿದ್ವಾನ್ । ಕಿಂ ಚ ವಾಕ್ಪತಿಃ ಸರ್ವಾಸಾಂ ವಾಚಾಂ ಪತಿರ್ಭವತಿ । ತಥೈವ ಚಕ್ಷುಷ್ಪತಿಃ ಚಕ್ಷುಷಾಂ ಪತಿಃ । ಶ್ರೋತ್ರಪತಿಃ ಶ್ರೋತ್ರಾಣಾಂ ಪತಿಃ । ವಿಜ್ಞಾನಪತಿಃ ವಿಜ್ಞಾನಾನಾಂ ಚ ಪತಿಃ । ಸರ್ವಾತ್ಮಕತ್ವಾತ್ ಸರ್ವಪ್ರಾಣಿನಾಂ ಕರಣೈಸ್ತದ್ವಾನ್ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಆ (ನಾಡಿಯಿಂದ) ಈ ರೀತಿಯಲ್ಲಿ ಉಪಾಸನೆಮಾಡಿದ ಮನೋಮಯಾತ್ಮನ ಉಪಾಸಕನು ಮೂರ್ಧಭಾಗದಿಂದ ಹೊರಟು ಈ ಲೋಕಕ್ಕೆ ಅಧಿಷ್ಠಾತೃವಾಗಿ ಭೂಃ ಎಂಬ ವ್ಯಾಹೃತಿರೂಪನಾದ ಯಾವ ಅಗ್ನಿಯು ಮಹತ್ತಾದ ಬ್ರಹ್ಮಕ್ಕೆ ಅಂಗವಾಗಿರುವನೋ ಆ ಅಗ್ನಿಯಲ್ಲಿ ನಿಲ್ಲುವನು ; ಅಗ್ನಿಯ ರೂಪದಿಂದ ಈ ಲೋಕವನ್ನು ವ್ಯಾಪಿಸಿಕೊಳ್ಳುವನು[1] ಎಂದರ್ಥ. ಇದರಂತೆ ಭುವಃ ಎಂಬ ಎರಡನೆಯ ವ್ಯಾಹೃತಿಯ ರೂಪನಾದ ವಾಯುವಿನಲ್ಲಿ 'ನಿಲ್ಲುವನು' ಎಂಬ (ಹಿಂದಿನ ಮಾತು) ಇಲ್ಲಿಗೂ ಸೇರಿರುತ್ತದೆ. ಸುವಃ ಎಂಬ ಮೂರನೆಯ ವ್ಯಾಹೃತಿಯ ರೂಪದ ಆದಿತ್ಯನಲ್ಲಿ (ನಿಲ್ಲುವನು) ; (ಆಮೇಲೆ) ಮಹಃ ಎಂಬ ಎಲ್ಲಕ್ಕೂ ಅಂಗಿಯಾಗಿರುವ[2] ನಾಲ್ಕನೆಯ ವ್ಯಾಹೃತಿರೂಪವಾದ ಬ್ರಹ್ಮದಲ್ಲಿ ನಿಲ್ಲುವನು.

ಅವುಗಳಲ್ಲಿ ಆತ್ಮಭಾವದಿಂದ[3] ಇದ್ದುಕೊಂಡು ಬ್ರಹ್ಮವೇ ಆಗಿ[4] ಸ್ವಾರಾಜ್ಯವನ್ನು ಎಂದರೆ ಸ್ವರಾಡ್ರೂಪವನ್ನು ಪಡೆದುಕೊಳ್ಳುವನು. (ಅವನು) ತಾನೇ ರಾಜನು, ಅಂಗವಾಗಿರುವ ದೇವತೆಗಳಿಗೆ ಬ್ರಹ್ಮದಂತೆ ಅಧಿಪತಿಯು, ಆಗುವನು. ಮತ್ತು ದೇವತೆ

1. ಅಂಗವಾದ ವ್ಯಾಹೃತಿಗಳ ಉಪಾಸನೆಯ ಫಲವನ್ನು ಪಡೆದುಕೊಂಡು ಕ್ರಮಕ್ರಮವಾಗಿ ಅಂಗಿಯಾದ ಮಹಃ ಎಂಬ ವ್ಯಾಹೃತಿಯ ಉಪಾಸನೆಯ ಫಲವನ್ನು ಪಡೆದುಕೊಳ್ಳುವನು ಎಂದು ಅಭಿಪ್ರಾಯ.

2. ಮಹಃ ಎಂಬ ವ್ಯಾಹೃತಿಯ ಅರ್ಥವಾಗಿರುವ ಸಗುಣಬ್ರಹ್ಮದ ಉಪಾಸನೆಯೇ ಇಲ್ಲಿ ಪ್ರಧಾನವು ; ಉಳಿದ ವ್ಯಾಹೃತಿಗಳ ಉಪಾಸನೆಗಳು ಅಂಗವು.

3. ತಾನೇ ಅವುಗಳಾಗಿ.

4 ಅಪರಬ್ರಹ್ಮದ ಸ್ವರೂಪವನ್ನೇ ಪಡೆದುಕೊಂಡು.

ಗಳೆಲ್ಲರೂ ಇವನಿಗೆ ಬ್ರಹ್ಮಕ್ಕೆ ಹೇಗೋ ಹಾಗೆ ಅಂಗಭೂತರಾಗಿ ಕಪ್ಪವನ್ನು ತಂದೊಪ್ಪಿಸುವರು, (ಅವನು) ಮನಸ್ಸುಗಳ ಒಡೆಯನನ್ನು ಪಡೆದುಕೊಳ್ಳುವನು. ಏಕೆಂದರೆ ಬ್ರಹ್ಮವು ಸರ್ವಾತ್ಮಕವಾಗಿರುವುದರಿಂದ ಎಲ್ಲಾ ಮನಸ್ಸುಗಳಿಗೂ (ಅದು) ಒಡೆಯನಾಗಿರುವದು, ಎಲ್ಲಾ ಮನಸ್ಸುಗಳಿಂದಲೂ ಅದು ಮನನಮಾಡುತ್ತಿರುವದು, ಅಲ್ಲವೆ ? ಈ ರೀತಿಯಲ್ಲಿ ಉಪಾಸನೆಮಾಡುವವನು ಆ (ಬ್ರಹ್ಮವನ್ನು) ಪಡೆದು ಕೊಳ್ಳುವನು ಮತ್ತು ವಾಕ್ಕುಗಳ ಒಡೆಯನು ಎಂದರೆ ಎಲ್ಲಾ ವಾಕ್ಕುಗಳಿಗೂ ಒಡೆಯನಾಗುವನು ; ಹಾಗೆಯೇ ಚಕ್ಷುಸ್ಸುಗಳಿಗೆ ಒಡೆಯನು, ಎಂದರೆ (ಎಲ್ಲಾ) ಚಕ್ಷುಸ್ಸುಗಳಿಗೂ ಒಡೆಯನಾಗುವನು. ಶ್ರೋತ್ರಗಳಿಗೆ ಪತಿಯು ಎಂದರೆ ಶ್ರೋತ್ರ[1] ಗಳೆ(ಲ್ಲಕ್ಕೂ) ಒಡೆಯ(ನಾಗುವನು). ವಿಜ್ಞಾನಗಳಿಗೆ ಪತಿಯು ಎಂದರೆ (ಎಲ್ಲಾ) ವಿಜ್ಞಾನಗಳಿಗೂ ಒಡೆಯನಾಗುವನು, ಸರ್ವಾತ್ಮನಾಗಿರುವದರಿಂದ ಪ್ರಾಣಿಗಳೆಲ್ಲದರ ಕರಣಗಳಿಂದಲೂ ಆಯಾ (ಕರಣ)ವುಳ್ಳವನಾಗುವನು ಎಂದರ್ಥ.

ವ್ಯಾಹೃತ್ಯಾತ್ಮನ ರೂಪಕಲ್ಪನೆ

(ಭಾಷ್ಯ)

ಳಳ. ಕಿಂ ಚ ತತೋಽಪ್ಯಧಿಕತರಮ್ ಏತದ್ ಭವತಿ । ಕಿಂ ತತ್ ? ಉಚ್ಯತೇ । ಆಕಾಶಶರೀರಮ್ ಆಕಾಶಃ ಶರೀರಂ ಅಸ್ಯ - ಆಕಾಶವದ್ವಾ ಸೂಕ್ಷ್ಮಂ ಶರೀರಮ್ ಅಸ್ಯ- ಇತ್ಯಾಕಾಶಶರೀರಮ್ । ಕಿಂ ತತ್ ? ಪ್ರಕೃತಂ ಬ್ರಹ್ಮ । ಸತ್ಯಾತ್ಮ ಸತ್ಯಂ ಮೂರ್ತಾ ಮೂರ್ತಮ್ ಅವಿತಥಸ್ವರೂಪಂ ವಾ[2] ಆತ್ಮಾ ಸ್ವಭಾವಃ ಅಸ್ಯ ತದಿದಂ ಸತ್ಯಾತ್ಮ । ಪ್ರಾಣಾರಾಮಂ ಪ್ರಾಣೇಷು ಆರಾಮಃ ಆರಮಣಮ್ ಆಕ್ರೀಡಾ ಯಸ್ಯ ತತ್ ಪ್ರಾಣಾ ರಾಮಮ್ । ಪ್ರಾಣಾನಾಂ ವಾ ಆರಾಮೋ ಯಸ್ಮಿನ್ ತತ್ ಪ್ರಾಣಾರಾಮಮ್ । ಮನಆನನ್ದಮ್ ಆನನ್ದಭೂತಂ ಸುಖಿಕೃದೇವ ಯಸ್ಯ ಮನಃ ತತ್ ಮನಆನನ್ದಮ್ । ಶಾನ್ತಿಸಮೃದ್ಧಮ್ । ಶಾನ್ತಿಃ ಉಪಶಮಃ । ಶಾನ್ತಿಶ್ಚ ತತ್ ಸಮೃದ್ಧಂ ಚ ಶಾನ್ತಿ ಸಮೃದ್ಧಮ್ । ಶಾನ್ತ್ಯಾ ವಾ ಸಮೃದ್ಧಂ ತತ್ ಉಪಲಭ್ಯತೇ ಇತಿ ಶಾನ್ತಿಸಮೃದ್ಧಮ್ । ಅಮೃತಮ್ ಅಮರಣಧರ್ಮಿ । ಏತಚ್ಚ ಅಧಿಕತರಂ ವಿಶೇಷಣಂ ತತ್ರೈವ 'ಮನೋಮಯಃ' ಇತ್ಯಾದೌ ದ್ರಷ್ಟವ್ಯಮ್ ॥

---

1. ಬ್ರಹ್ಮವನ್ನು ಪಡೆದುಕೊಳ್ಳುವದೆಂದರೆ ಎಲ್ಲಾ ಮನಸ್ಸುಗಳ, ಎಲ್ಲಾ ಚಕ್ಷುರಾದೀಂದ್ರಿಯಗಳ ಒಡೆಯನಾಗುವದು. ಈ ಸ್ವರಾಜ್ಯವು ಬ್ರಹ್ಮದಂತೆ ಜಗತ್ತನ್ನು ಸೃಷ್ಟಿಮಾಡುವ ರೂಪದ್ದಲ್ಲ ಅಣಿಮಾದ್ಯೈಶ್ವರ್ಯವೇ ; ಈಶ್ವರನ ಸಂಕಲ್ಪಕ್ಕೆ ಒಳಪಟ್ಟು ಈಶ್ವರನಿಗೆ ಸಮಾನವಾದ ಭೋಗಗಳನ್ನು ಪಡೆಯುವದೇ ಬ್ರಹ್ಮಸಾಯುಜ್ಯವು. ನೂ. ಭಾ. ೪-೪-೧೭ ರಿಂದ ೨೧ ನ್ನು ನೋಡಿ.

2. 'ಚ' ಎಂಬ ಆ॥ ವಾಶಂ॥ಂತ ಈ ವಾ॥ ಕಾ॥ ಪಾಠವು ಮೇಲು.

(ಭಾಷ್ಯಾರ್ಥ)

ಮತ್ತು ಅದಕ್ಕಿಂತಲೂ ಹೆಚ್ಚಾಗಿ ಇದೂ ಆಗುವದು. ಅದು ಯಾವದು ? ಎಂದರೆ ಹೇಳುತ್ತಾನೆ : ಆಕಾಶಶರೀರವು ; ಆಕಾಶವು ಇದಕ್ಕೆ ಶರೀರವು ಅಥವಾ ಆಕಾಶದಂತೆ ಇದರ ಶರೀರವು ಸೂಕ್ಷ್ಮವಾಗಿರುವದು ; ಆದ್ದರಿಂದ (ಇದು) ಆಕಾಶಶರೀರ ವೆನಿಸುವದು.[1] ಅದು ಯಾವದು ? ಎಂದರೆ ಪ್ರಕೃತವಾದ ಬ್ರಹ್ಮವೇ.[2] **ಸತ್ಯಾತ್ಮವಾದದ್ದು** ; ಸತ್ಯವು ಎಂದರೆ ಮೂರ್ತಾಮೂರ್ತವು[3] ಅಥವಾ ಸುಳ್ಳಲ್ಲದ[4] ಸ್ವರೂಪವು ; (ಇಂಥ ಸತ್ಯವು) ಇದಕ್ಕೆ ಆತ್ಮವು ಎಂದರೆ ಸ್ವಭಾವವು ; ಆದ್ದರಿಂದ ಆ ಇದಕ್ಕೆ ಸತ್ಯಾತ್ಮವೆಂದು ಹೆಸರು. **ಪ್ರಾಣಾರಾಮವು** : ಪ್ರಾಣಗಳಲ್ಲಿ[5] ಆರಾಮವು ಎಂದರೆ ಆರಮಣವು, ಕ್ರೀಡಿಸುತ್ತಿರುವುದು, ಯಾವದಕ್ಕಿರುವದೋ ಅದು ಪ್ರಾಣಾರಾಮವು ; ಅಥವಾ ಪ್ರಾಣಗಳ ಆರಾಮವು ಯಾವದರಲ್ಲಿರುವುದೋ[6] ಅದು ಪ್ರಾಣಾರಾಮವು. **ಮನಆನಂದವು** : ಆನಂದವಾಗಿರುವ ಎಂದರೆ ಸುಖವನ್ನುಂಟು ಮಾಡುತ್ತಲೇ[7] ಇರುವ ಮನಸ್ಸು ಯಾವದಕ್ಕಿರುವದೋ ಅದು ಮನಆನಂದವು. **ಶಾಂತಿಸಮೃದ್ಧವು** : ಶಾಂತಿ ಎಂದರೆ ಉಪಶಮವು ಶಾಂತಿಯೂ ಸಮೃದ್ಧವೂ ಆಗಿರುವದರಿಂದ[8] ಶಾಂತಿಸಮೃದ್ಧವು ; ಅಥವಾ ಶಾಂತಿಯಿಂದ ಸಮೃದ್ಧವಾಗಿರುವ ಅದು ಕಂಡುಬರುತ್ತದೆ[9]ಯಾದ್ದರಿಂದ ಶಾಂತಿಸಮೃದ್ಧವು. **ಅಮೃತವು** : ಸಾವಿಲ್ಲದ್ದೆಂಬ

---

1. ಆಕಾಶವು ಇದಕ್ಕೆ ಉಪಾಧಿಯು ; ಅಥವಾ ಸೂಕ್ಷ್ಮಭೂತಗಳೆಂಬ ಉಪಾಧಿಗಳುಳ್ಳದ್ದಾಗಿ ಅತೀಂದ್ರಿಯವಾಗಿರುವದು

2. ಮಹಃ ಎಂಬ ವ್ಯಾಹೃತ್ಯಾತ್ಮಕನಾದ ಹಿರಣ್ಯಗರ್ಭನೇ.

3. ಬೃ. ೨-೩ ರಲ್ಲಿ ಹೇಳಿರುವ ಸತ್ ಮತ್ತು ತ್ಯತ್ ಎಂಬ ಪದಗಳಿಂದ ಬೋಧಿತವಾಗಿರುವ ಪೃಥಿವ್ಯಾದಿಪಂಚಭೂತಗಳು ಇದಕ್ಕೆ ಉಪಾಧಿಯು.

4. ವ್ಯವಹಾರಿಕಸತ್ಯವಾದದ್ದು, ಶುಕ್ತಿರಜತಾದಿಗಳಂತೆ ಮಿಥ್ಯೆಯಲ್ಲದ್ದು. ಜೀವರಿಗೂ ಸತ್ಯರೂಪವೇ ಇದ್ದರೂ ಅದು ಬ್ರಹ್ಮಕ್ಕೆ ಇರುವಂಥ ನಿತ್ಯರೂಪವಲ್ಲ.

5. ಇಂದ್ರಿಯಗಳಲ್ಲಿ ಇಂದ್ರಿಯಗಳ ವ್ಯಾಪಾರವೆಲ್ಲ ಹಿರಣ್ಯಗರ್ಭನದೇ.

6. ಇಂದ್ರಿಯಗಳೆಲ್ಲ ಹಿರಣ್ಯಗರ್ಭನನ್ನಾಶ್ರಯಿಸಿಯೇ ವ್ಯಾಪಾರಮಾಡುವವು. ಆದ್ದರಿಂದಲೇ ಇವನನ್ನು ವಾಯು ಎಂದು ಶ್ರುತಿಯಲ್ಲಿ ಸಂಬೋಧಿಸಿದ್ದು.

7. ಸತ್ತ್ವಗುಣಪ್ರಧಾನವಾಗಿರುವದರಿಂದ ಯಾವಾಗಲೂ ಹಿರಣ್ಯಗರ್ಭನ ಮನಸ್ಸು ಆನಂದವನ್ನೇ ಉಂಟುಮಾಡುತ್ತಿರುವದು.

8. ಹಿರಣ್ಯಗರ್ಭನ ಮನಸ್ಸು ಸ್ವಚ್ಛವಾಗಿರುವದರಿಂದ ಶಾಂತವಾಗಿರುವದು, ಸಮಷ್ಟಿ ಜ್ಞಾನಕ್ರಿಯಾಶಕ್ತಿಗಳುಳ್ಳದ್ದಾದ್ದರಿಂದ ಸಮೃದ್ಧವಾಗಿರುವದು.

9. ಶಾಂತಿಯಿಂದ ಉಪಾಸನೆಮಾಡುವವರಿಗೆ ಮಾತ್ರ ಸಮೃದ್ಧವಾದ ಬ್ರಹ್ಮದ ಸಾಕ್ಷಾತ್ಕಾರವಾಗುತ್ತದೆ.

ಧರ್ಮವುಳ್ಳದ್ದು.[1] ಈ ಹೆಚ್ಚಿನ ವಿಶೇಷಣವನ್ನೂ 'ಮನೋಮಯಃ' ಮುಂತಾದ (ಧರ್ಮಗಳನ್ನು ಹೇಳಿರು)ವಲ್ಲಿಯೇ ಸೇರಿಸಿಕೊಂಡು (ಚಿಂತಿಸಬೇಕು).[2]

ಉಪಾಸನೆಯನ್ನು ಮಾಡಬೇಕೆಂಬ ಉಪದೇಶ

(ಭಾಷ್ಯ)

೪೫. ಇತಿ ಏವಂ ಮನೋಮಯತ್ವಾದಿಧರ್ಮ್ಯವಿಶಿಷ್ಟಂ ಯದ್ಧೋಕ್ತಂ ಬ್ರಹ್ಮ ಹೇ ಪ್ರಾಚೀನಯೋಗ್ಯ, ಉಪಾಸ್ಸ್ವ ಇತಿ ಆಚಾರ್ಯವಚನೋಕ್ತಿಃ ಆದರಾರ್ಥಾ ॥

(ಭಾಷ್ಯಾರ್ಥ)

ಹೀಗೆಂದು ಈ ರೀತಿಯಲ್ಲಿ ಮನೋಮಯತ್ವವೇ ಮುಂತಾದ ಧರ್ಮಗಳಿಂದ ಕೂಡಿರುವ ಮೇಲೆ ಹೇಳಿರುವ ಬ್ರಹ್ಮವನ್ನು ಎಲೈ ಪ್ರಾಚೀನಯೋಗ್ಯನೆ, ಉಪಾಸನೆಮಾಡು ಎಂದು ಆಚಾರ್ಯವಚನವನ್ನು ಹೇಳಿರುವದು ಆದರಕ್ಕಾಗಿ.[3]

೭. ಬ್ರಹ್ಮದ ಪಾಙ್ಕ್ತೋಪಾಸನೆ

ಅನುವಾಕದ ವಿಷಯ

(ಭಾಷ್ಯ)

೪೬. ಯದೇತದ್ ವ್ಯಾಹೃತ್ಯಾತ್ಮಕಂ ಬ್ರಹ್ಮ ಉಪಾಸ್ಯಮ್ ಉಕ್ತಮ್, ತಸ್ಯೈವ ಇದಾನೀಂ ಪೃಥಿವ್ಯಾದಿಪಾಙ್ಕ್ತಸ್ವರೂಪೇಣ ಉಪಾಸನಮ್ ಉಚ್ಯತೇ । ಪಞ್ಚ ಸಂಖ್ಯಾಯೋಗಾತ್ ಪಙ್ಕ್ತಿಚ್ಛನ್ದಃ ಸಂಪದ್ಯತೇ । ತತಃ ಪಾಙ್ಕ್ತತ್ವಂ ಸರ್ವಸ್ಯ । ಪಾಙ್ಕ್ತಶ್ಚ ಯಜ್ಞಃ । ಪಞ್ಚಪದಾ ಪಙ್ಕ್ತಿಃ (?) 'ಪಾಙ್ಕ್ತೋ ಯಜ್ಞಃ' (ತೈ. ಸಂ. ೧-೫-೨) ಇತಿ

1. ಕಾರ್ಯಬ್ರಹ್ಮಲೋಕವು ಪ್ರಲಯವಾಗುವವರೆಗೆ ಹಿರಣ್ಯಗರ್ಭತ್ವವು ಇರುವದರಿಂದಲೂ ಬಳಿಕ ಸಮ್ಯಗ್ಜ್ಞಾನದಿಂದ ಪರಮಾತ್ಮಸ್ವರೂಪದಲ್ಲಿಯೇ ಬೆರೆತುಹೋಗುವದರಿಂದಲೂ ಅಮೃತವು. ಸೂ. ಭಾ. ೪-೩-೧೦.

2. ಹಿಂದೆ ೪ ರಲ್ಲಿ ಮನೋಮಯಃ, ಅಮೃತಃ, ಹಿರಣ್ಮಯಃ - ಎಂಬ ವಿಶೇಷಣಗಳನ್ನು ಹೇಳಿತ್ತಷ್ಟೆ. ಅವುಗಳ ಜೊತೆಗೆ ಆಕಾಶಶರೀರಮ್ ಮುಂತಾದ ವಿಶೇಷಣಗಳನ್ನೂ ಸೇರಿಸಿಕೊಂಡು ಉಪಾಸನೆಮಾಡಬೇಕು. ಆ ಉಪಾಸನೆಗೆ ಅಂಥ ಬ್ರಹ್ಮಪ್ರಾಪ್ತಿಯೇ ಫಲವಾಗುವದು.

3. ಪ್ರಾಚೀನಯೋಗ್ಯನೆ, ಎಂದು ಶಿಷ್ಯನನ್ನು ಮಾಹಾಚಮಸ್ಯನು ಸಂಬೋಧಿಸಿರುವದು ಯೋಗ್ಯನಾದ ಶಿಷ್ಯನಿಗೆ ಉಪಾಸನೆಯಲ್ಲಿ ಅಧಿಕಾರವೆಂಬುದನ್ನು ತಿಳಿಸುವದರಮೂಲಕ ಆದರವನ್ನು ತಿಳಿಸುವದಕ್ಕೆ.

ಶ್ರುತೇಃ । ತೇನ ಯತ್ ಸರ್ವಂ ಲೋಕಾದಿ ಆತ್ಮಾನ್ತಂ ಚ ಪಾಙ್ಕ್ತಂ ಪರಿಕಲ್ಪಯತಿ ಯಜ್ಞಮೇವ ತತ್ ಪರಿಕಲ್ಪಯತಿ । ತೇನ ಯಜ್ಞೇನ ಪರಿಕಲ್ಪಿತೇನ ಪಾಙ್ಕ್ತಾತ್ಮಕಂ ಪ್ರಜಾಪತಿಮ್ ಅಭಿಸಂಪದ್ಯತೇ । ತತ್ ಕಥಂ ಪಾಙ್ಕ್ತಮ್ ವಾ ಇದಂ ಸರ್ವಮಿತಿ ? ಉಚ್ಯತ ಆಹ -

(ಭಾಷ್ಯಾರ್ಥ)

ವ್ಯಾಹೃತ್ಯಾತ್ಮನಂದು ಉಪಾಸನೆಮಾಡಬೇಕೆಂತ ಯಾವ ಈ ಬ್ರಹ್ಮವನ್ನು ಹೇಳಲಾಯಿತೋ ಅದೇ (ಬ್ರಹ್ಮವನ್ನು)[1] ಪೃಥಿವಿಯೇ ಮುಂತಾದ ಪಾಙ್ಕ್ತಸ್ವರೂಪದಿಂದ ಉಪಾಸನೆ(ಮಾಡಬೇಕೆಂದು) ಈಗ ಹೇಳಲಾಗುತ್ತದೆ. ಐದು ಎಂಬ ಸಂಖ್ಯೆಯ ಸಂಬಂಧವಿರುವದರಿಂದ ಪಙ್ಕ್ತಿ ಎಂಬ ಛಂದಸ್ಸಿನ (ಗುಣವನ್ನು) ಸಂಪಾದಿಸಿದಂತೆ ಆಗುತ್ತದೆ.[2] ಆದರಿಂದ ಎಲ್ಲವೂ ಪಾಙ್ಕ್ತವಾಗುತ್ತದೆ. ಮತ್ತು ಯಜ್ಞವೂ ಪಾಙ್ಕ್ತವೇ.[3] ಪಙ್ಕ್ತಿಯಲ್ಲಿ ಐದು ಪದಗಳಿರುವವು, (?) ''ಯಜ್ಞವು ಪಾಙ್ಕ್ತವು'' (ತೈ. ಸಂ. ೧-೫-೨) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು ಆದ್ದರಿಂದ ಲೋಕದಿಂದ ಹಿಡಿದು ಆತ್ಮನವರೆಗೆ ಎಲ್ಲವೂ ಪಾಙ್ಕ್ತವೆಂದು ಕಲ್ಪನೆಮಾಡಿದರೆ[4] (ಎಲ್ಲವೂ) ಯಜ್ಞವೆಂದೇ ಕಲ್ಪನೆಮಾಡಿದಂತೆ ಆಗುತ್ತದೆ. ಹಾಗೆ ಯಜ್ಞವನ್ನು ಕಲ್ಪನೆಮಾಡುವದರಿಂದ ಪಾಙ್ಕ್ತಾತ್ಮನಾದ ಪ್ರಜಾಪತಿಯನ್ನು[5] ಪಡೆದುಕೊಳ್ಳುತ್ತಾನೆ. ಆದ್ದರಿಂದ ಇದೆಲ್ಲವೂ ಪಾಙ್ಕ್ತವೆಂಬುದು ಹೇಗೆ ?[6] ಎಂದರೆ ಅದಕ್ಕೆ (ಶ್ರುತಿ) ಹೇಳುತ್ತದೆ :-

ಪೃಥಿವ್ಯನ್ತರಿಕ್ಷಂ ದ್ಯೌರ್ದಿಶೋಽವಾನ್ತರದಿಶಾಃ । ಅಗ್ನಿರ್ವಾಯುರಾದಿತ್ಯ ಶ್ಚನ್ದ್ರಮಾ ನಕ್ಷತ್ರಾಣಿ । ಆಪ ಓಷಧಯೋ ವನಸ್ಪತಯ ಆಕಾಶ ಆತ್ಮಾ । ಇತ್ಯಧಿಭೂತಮ್ । ಅಥಾಧ್ಯಾತ್ಮಮ್ । ಪ್ರಾಣೋ ವ್ಯಾನೋಽಪಾನ ಉದಾನಃ ಸಮಾನಃ । ಚಕ್ಷುಃ ಶ್ರೋತ್ರಂ ಮನೋ ವಾಕ್ ತ್ವಕ್ ।

1 ಆ ಸಗುಣಬ್ರಹ್ಮವನ್ನೇ

2. ಪಙ್ಕ್ತಿ ಎಂಬ ಛಂದಸ್ಸಿನಲ್ಲಿ ಎಂಟು ಅಕ್ಷರಗಳ ಐದು ಪಾದಗಳಿರುತ್ತವೆ ; ಆದ್ದರಿಂದ ಐದೈದು ಎಂದು ಕಲ್ಪನೆಮಾಡಿದರೆ ಎಲ್ಲವೂ ಪಙ್ಕ್ತಿಚ್ಛಂದಸ್ಸೆಂದು ಚಿಂತಿಸಿದಂತೆ ಆಯಿತು.

3. ಯಜ್ಞವು ಪತ್ನಿ. ಯಜಮಾನ, ಪುತ್ರ, ದೈವವಿತ್ತ, ಮಾನುಷವಿತ್ತ - ಎಂಬ ಐದರಿಂದ ಆಗತಕ್ಕದ್ದು

4 ಈ ಕಲ್ಪನೆಯ ರೂಪದ ಉಪಾಸನೆಯನ್ನೇ ಈಗ ವಿಧಿಸುತ್ತಿರುವದು.

5. ಎಲ್ಲವೂ ಯಜ್ಞವೆಂದು ಭಾವಿಸಿದರೆ ಎಲ್ಲವೂ ಪ್ರಜಾಪತಿಯೇ ಎಂದು ಭಾವಿಸಿದಂತೆ ಆಗುತ್ತದೆ ; ಆದರಿಂದ ಪ್ರಜಾಪತಿಸ್ವರೂಪವೇ ಪ್ರಾಪ್ತವಾಗುತ್ತದೆ.

6. ಐದೈದಾಗಿ ಹೇಗೆ ಭಾವಿಸಬೇಕು ?

ಚರ್ಮ ಮಾಗ್ಂಸಗ್ಂ ಸ್ನಾವಾಸ್ಥಿ ಮಜ್ಜಾ । ಏತದಧಿವಿಧಾಯ ಋಷಿರವೋಚತ್ । ಪಾಙ್ಕ್ತಂ ವಾ ಇದಗ್ಂ ಸರ್ವಮ್ । ಪಾಙ್ಕ್ತೇನೈವ ಪಾಙ್ಕ್ತಗ್ಂ ಸ್ಪೃಣೋತೀತಿ ॥೭॥

ಪೃಥಿವಿ, ಅಂತರಿಕ್ಷ, ದ್ಯುಲೋಕ, ದಿಕ್ಕುಗಳು, ಅವಾಂತರ ದಿಕ್ಕುಗಳು ; ಅಗ್ನಿ, ವಾಯು, ಆದಿತ್ಯ, ಚಂದ್ರ, ನಕ್ಷತ್ರಗಳು ; ಅಪ್ಪು, ಗಿಡಗಳು, ಮರಗಳು, ಆಕಾಶ, ಆತ್ಮ - ಇದು ಅಧಿಭೂತವು. ಇನ್ನು ಅಧ್ಯಾತ್ಮವು. ಪ್ರಾಣ, ವ್ಯಾನ, ಅಪಾನ, ಉದಾನ, ಸಮಾನ ; ಚಕ್ಷು, ಶ್ರೋತ್ರ, ಮನ, ವಾಕ್ಕು, ತ್ವಕ್ಕು ; ಚರ್ಮ, ಮಾಂಸ, ನರ, ಮೂಳೆ, ಕೊಬ್ಬು. ಇದನ್ನು ಹೀಗೇ ಇಟ್ಟುಕೊಂಡು ಋಷಿಯು ಹೇಳಿದನೇನೆಂದರೆ : ''ಇದೆಲ್ಲವೂ ಪಾಙ್ಕ್ತವೇ ; ಪಾಙ್ಕ್ತದಿಂದಲೇ ಪಾಙ್ಕ್ತವನ್ನು ಬಲಪಡಿಸುತ್ತಾನೆ.''

ಹೊರಗಿನ ಪಾಙ್ಕ್ತ್ರಯ

(ಭಾಷ್ಯ)

೪೭. ಪೃಥಿವೀ, ಅನ್ತರಿಕ್ಷಮ್, ದ್ಯೌಃ, ದಿಶಃ, ಅವಾನ್ತರದಿಶಾಃ - ಇತಿ ಲೋಕಪಾಙ್ಕ್ತಮ್ । ಅಗ್ನಿಃ, ವಾಯುಃ, ಆದಿತ್ಯಃ, ಚನ್ದ್ರಮಾಃ, ನಕ್ಷತ್ರಾಣಿ - ಇತಿ ದೇವತಾಪಾಙ್ಕ್ತಮ್ । ಆಪಃ, ಓಷಧಯಃ, ವನಸ್ಪತಯಃ, ಆಕಾಶಃ, ಆತ್ಮಾ - ಇತಿ ಭೂತಪಾಙ್ಕ್ತಮ್ । ಆತ್ಮಾ ಇತಿ ವಿರಾಟ್ । ಭೂತಾಧಿಕಾರಾತ್ । ಇತ್ಯಧಿಭೂತಮ್, ಇತಿ ಅಧಿಲೋಕಾಧಿದೈವತಪಾಙ್ಕ್ತದ್ವಯೋಪಲಕ್ಷಣಾರ್ಥಮ್ । ಲೋಕದೇವತಾಪಾಙ್ಕ್ತಯೋಶ್ಚ ಅಭಿಹಿತತ್ವಾತ್ ॥

(ಭಾಷ್ಯಾರ್ಥ)

ಪೃಥಿವಿ, ಅಂತರಿಕ್ಷ, ಸ್ವರ್ಗ, ದಿಕ್ಕುಗಳು, ಅವಾಂತರದಿಕ್ಕುಗಳು[1] - ಎಂಬುದು **ಲೋಕಪಾಙ್ಕ್ತವು**. ಅಗ್ನಿ, ವಾಯು, ಆದಿತ್ಯ, ಚಂದ್ರ, ನಕ್ಷತ್ರಗಳು - ಎಂಬುದು **ದೇವತಾಪಾಙ್ಕ್ತವು**. ನೀರು, ಗಿಡಗಳು, ಮರಗಳು, ಆಕಾಶ, ಆತ್ಮ - ಎಂಬುದು **ಭೂತಪಾಙ್ಕ್ತವು**. ಇಲ್ಲಿ ಆತ್ಮ ಎಂದರೆ **ವಿರಾಜನು**,[2] ಏಕೆಂದರೆ ಇದು ಭೂತಗಳ ಪ್ರಕರಣದಲ್ಲಿ (ಬಂದಿರುತ್ತದೆ). ''ಇದು ಅಧಿಭೂತವು'' ಎಂದು (ಶ್ರುತಿಯಲ್ಲಿ

---

1. ದಿಕ್ಕುಗಳ ನಡುನಡುವೆ ಇರುವ ವಿದಿಕ್ಕುಗಳು.

2. ಸಮಷ್ಟಿಸ್ಥೂಲೋಪಾಧಿಯು.

ಹೇಳಿರುವಮು), ಅಧಿಲೋಕ, ಅಧಿದೈವತ - ಈ ಎರಡು ಪಾಜ್ಯಗಳಿಗೂ ಉಪಲಕ್ಷಣಕ್ಕಾಗಿ :[1] ಏಕೆಂದರೆ ಲೋಕಗಳು, ದೇವತೆಗಳು - ಇವುಗಳ ಪಾಜ್ಯಗಳನ್ನೂ (ಇಲ್ಲಿ) ಹೇಳಿರುತ್ತದೆ

ಒಳಗಿನ ಪಾಜ್ಯತ್ರಯ

(ಭಾಷ್ಯ)

೪೮. ಅಥ ಅನನ್ತರಮ್ ಅಧ್ಯಾತ್ಮಂ ಪಾಜ್ಯತ್ರಯಮ್ ಉಚ್ಯತೇ - ಪ್ರಾಣಾದಿ ವಾಯುಪಾಜ್ಯಮ್ । ಚಕ್ಷುರಾದಿ ಇನ್ದ್ರಿಯಪಾಜ್ಯಮ್ । ಚರ್ಮಾದಿ ಧಾತುಪಾಜ್ಯಮ್ ॥

(ಭಾಷ್ಯಾರ್ಥ)

ಇನ್ನು ಅನಂತರದಲ್ಲಿ ಅಧ್ಯಾತ್ಮದ ಮೂರು ಪಾಜ್ಯವನ್ನು ಹೇಳಲಾಗುತ್ತದೆ : ಪ್ರಾಣವೇ ಮುಂತಾದದ್ದು **ವಾಯುಪಾಜ್ಯವು** ; ಚಕ್ಷುಸ್ಸೇ ಮುಂತಾದದ್ದು ಇಂದ್ರಿಯಪಾಜ್ಯವು ; ಚರ್ಮವೇ ಮುಂತಾದದ್ದು ಧಾತುಪಾಜ್ಯವು.[2]

ಪಾಜ್ಯೋಪಾಸನೆಯೂ ಅದರ ಫಲವೂ

(ಭಾಷ್ಯ)

೪೯. ಏತಾವದ್ ಹಿ ಇದಂ ಸರ್ವಮ್ । ಅಧ್ಯಾತ್ಮಂ ಬಾಹ್ಯಂ ಚ ಪಾಜ್ಯಮೇವ ಇತಿ ಏತತ್ ಏವಮ್ ಅಧಿವಿಧಾಯ ಪರಿಕಲ್ಪ್ಯ ಋಷಿಃ ವೇದಃ ಏತದ್ದರ್ಶನಸಂಪನ್ನೋ ವಾ ಕಶ್ಚಿದ್ ಋಷಿಃ ಅವೋಚತ್ ಉಕ್ತವಾನ್ । ಕಿಮಿತಿ ? ಆಹ - ಪಾಜ್ಯಂ ವಾ ಇದಂ ಸರ್ವಂ ಪಾಜ್ಯೇನೈವ ಆಧ್ಯಾತ್ಮಿಕೇನ ಸಂಖ್ಯಾಸಾಮಾನ್ಯಾತ್ ಪಾಜ್ಯಂ ಬಾಹ್ಯಂ ಸ್ಪೃಣೋತಿ ಬಲಯತಿ ಪೂರಯತಿ । ಏಕಾತ್ಮತಯಾ ಉಪಲಭತೇ - ಇತ್ಯೇತತ್ । ಏವಂ ಪಾಜ್ಯಮ್ ಇದಂ ಸರ್ವಮ್ ಇತಿ ಯೋ ವೇದ ಸ ಪ್ರಾಜಾಪತ್ಯಾತ್ಮೈವ ಭವತಿ - ಇತ್ಯರ್ಥಃ ॥

1. ಲೋಕಪಾಜ್ಯವನ್ನೂ ದೇವತಾಪಾಜ್ಯವನ್ನೂ ಸೇರಿಸಿಕೊಳ್ಳಬೇಕೆಂದು ತಿಳಿಸುವದಕ್ಕೆ ಉದಾಹರಣೆಯಾಗಿ.

2. ಧಾತುಗಳು ರಸವೇ ಮುಂತಾದ ಏಳೆಂದು ವೈದ್ಯಶಾಸ್ತ್ರದಲ್ಲಿ ರೂಢಿಯಾಗಿರುತ್ತದೆಯಾದರೂ ಸ್ಥೂಲವಾಗಿ ಕಾಣುವ ಚರ್ಮಾದಿಗಳು ಶರೀರವನ್ನು ಧಾರಣೆಮಾಡಿರುವವೆಂಬ ನಿಮಿತ್ತದಿಂದ ಅವುಗಳನ್ನೂ ಧಾತುಗಳೆಂದು ಇಲ್ಲಿ ಕರೆದಿದೆ ಎಂದು ತಿಳಿಯಬೇಕು.

(ಭಾಷ್ಯಾರ್ಥ)

ಇದೆಲ್ಲವೂ ಇಷ್ಟೇ (ಆಗಿರುತ್ತದೆ).[1] ಆಧ್ಯಾತ್ಮವೂ ಬಾಹ್ಯವೂ ಪಾಙ್ಕ್ತವೇ ಎಂದು ಇದನ್ನು ಹೀಗೆ ಇಟ್ಟುಕೊಂಡು ಎಂದರೆ ಪರಿಕಲ್ಪನೆಮಾಡಿಕೊಂಡು[2] ಋಷಿಯು ಎಂದರೆ ವೇದವು, ಅಥವಾ ಈ ದರ್ಶನದಿಂದ ಕೂಡಿದ[3] ಒಬ್ಬಾನೊಬ್ಬ ಋಷಿಯು ಹೇಳಿದನು, (ಹೀಗೆಂದು) ಹೇಳಿದವನಾದನು. ಏನೆಂದು ? ಎಂದರೆ (ಶ್ರುತಿ) ಹೇಳುತ್ತದೆ : ಇದೆಲ್ಲವೂ ಪಾಙ್ಕ್ತವೇ ; ಆಧ್ಯಾತ್ಮಿಕವಾದ ಪಾಙ್ಕ್ತದಿಂದಲೇ ಹೊರಗಿನ ಪಾಙ್ಕ್ತವನ್ನು-ಸಂಖ್ಯೆಯು (ಎರಡಕ್ಕೂ) ಸಮಾನವಾಗಿರುವದರಿಂದ[4] ಬಲಪಡಿಸುತ್ತಾನೆ ಅಥವಾ ಪೂರಣಗೊಳಿಸುತ್ತಾನೆ ಎಂದರೆ ಒಂದೇ ಎಂದು ಕಾಣುತ್ತಾನೆ[5] ಎಂದು ತಾತ್ಪರ್ಯ. ಹೀಗೆ ಇದೆಲ್ಲವೂ ಪಾಙ್ಕ್ತವು ಎಂದು ಯಾವಾತನು ಅರಿಯುತ್ತಾನೋ[6] ಆತನು ಪ್ರಜಾಪತಿಸ್ವರೂಪನೇ ಆಗುತ್ತಾನೆ[7] ಎಂದರ್ಥ.

೮. ಓಂಕಾರದ ಉಪಾಸನೆ

ಅನುವಾಕದ ವಿಷಯ

(ಭಾಷ್ಯ)

೫೦. ವ್ಯಾಹೃತ್ಯಾತ್ಮನೋ ಬ್ರಹ್ಮಣ ಉಪಾಸನಮ್ ಉಕ್ತಮ್ । ಅನನ್ತರಂ ಚ ಪಾಙ್ಕ್ತಸ್ವರೂಪೇಣ ತಸ್ಯೈವ ಉಪಾಸನಮ್ ಉಕ್ತಮ್ । ಇದಾನೀಂ ಸರ್ವೋಪಾಸನಾಙ್ಗ ಭೂತಸ್ಯ ಓಂಕಾರಸ್ಯ ಉಪಾಸನಂ ವಿಧಿತ್ಸ್ಯತೇ । ಪರಾಪರಬ್ರಹ್ಮದೃಷ್ಟ್ಯಾ ಹಿ ಉಪಾಸ್ಯಮಾನ ಓಂಕಾರಃ ಶಬ್ದಮಾತ್ರೋಽಪಿ ಪರಾಪರಬ್ರಹ್ಮಪ್ರಾಪ್ತಿಸಾಧನಂ ಭವತಿ । ಸ ಹಿ ಆಲಮ್ಬನಂ ಬ್ರಹ್ಮಣಃ ಪರಸ್ಯ ಅಪರಸ್ಯ ಚ ಪ್ರತಿಮೇವ ವಿಷ್ಣೋಃ । "ಏತೇನೈವ ಆಯತನೇನ ಏಕತರಮ್ ಅನ್ವೇತಿ" (ಪ್ರ. ೫-೨) ಇತಿ ಶ್ರುತೇಃ ॥

(ಭಾಷ್ಯಾರ್ಥ)

ವ್ಯಾಹೃತಿಸ್ವರೂಪವಾದ ಬ್ರಹ್ಮದ ಉಪಾಸನೆಯನ್ನು ಹೇಳಿದ್ದಾಯಿತು. ಆಮೇಲೆ

1. ಆಧ್ಯಾತ್ಮಿಕಪಾಙ್ಕ್ತ, ಆಧಿಭೌತಿಕಪಾಙ್ಕ್ತ - ಎಂಬ ಎರಡರಲ್ಲಿಯೇ ಅಡಕವಾಗಿರುತ್ತದೆ. 2. ಮನದಂದುಕೊಂಡು. 3. ಉಪಾಸನೆಯಿಂದ ಸಾಕ್ಷಾತ್ಕಾರವನ್ನು ಹೊಂದಿದ.

4. ಐದೈದಾಗಿರುವದು ಸಮಾನವಾದ್ದರಿಂದ.

5. ಆಧ್ಯಾತ್ಮಿಕವೂ ಬಾಹ್ಯವೂ ಒಂದೇ, ಎರಡೂ ಪಾಙ್ಕ್ತವೇ - ಎಂದು ಮನಗಾಣುತ್ತಾನೆ.

6. ಉಪಾಸನೆಮಾಡಿ ಸಾಕ್ಷಾತ್ಕಾರವನ್ನು ಪಡೆಯುತ್ತಾನೋ.

7. ಪಾಙ್ಕ್ತವಾದ ಜಗತ್ತೆಲ್ಲವೂ ಪ್ರಜಾಪತಿಯ ಶರೀರವಾಗಿರುವದರಿಂದ ತಾನೇ ಅವನೆಂಬ ಉಪಾಸನೆಯಿಂದ ಈ ಫಲವನ್ನು ಪಡೆಯುತ್ತಾನೆ.

ವಾಙ್ಮನ್ಸ್ವರೂಪದಿಂದ ಅದೇ ಬ್ರಹ್ಮದ ಉಪಾಸನೆಯನ್ನು ಹೇಳಿದ್ದಾಯಿತು. ಈಗ ಎಲ್ಲಾ ಉಪಾಸನೆಗೂ[1] ಅಂಗವಾಗಿರುವ ಓಂಕಾರದ ಉಪಾಸನೆಯನ್ನು ವಿಧಿಸಲಾಗುತ್ತದೆ. ಪರಬ್ರಹ್ಮ, ಅಪರಬ್ರಹ್ಮ - ಎಂಬ ದೃಷ್ಟಿಯಿಂದ ಓಂಕಾರವನ್ನು ಉಪಾಸನೆ ಮಾಡಿದರೆ (ಅದು) ಬರಿಯ ಶಬ್ದವೇ ಆದರೂ ಪರ ಅಥವಾ ಅಪರಬ್ರಹ್ಮವನ್ನು ಪಡೆಯುವುದಕ್ಕೆ ಸಾಧನವಾಗುತ್ತದೆ. ವಿಷ್ಣುವಿಗೆ ಪ್ರತಿಮೆ ಹೇಗೋ ಹಾಗೆ ಪರ ಬ್ರಹ್ಮಕ್ಕೂ ಅಪರಬ್ರಹ್ಮಕ್ಕೂ ಅದೇ ಆಲಂಬನವಾಗಿರುತ್ತದೆ.[2] ''ಇದೇ ಆಶ್ರಯದಿಂದ ಇವೆರಡರಲ್ಲಿ ಒಂದನ್ನು ಹೋಗಿ ಸೇರಿಕೊಳ್ಳುವನು.''[3] (ಪ್ರ.ಚ-೨) ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು) :-

ಓಮಿತಿ ಬ್ರಹ್ಮ । ಓಮಿತೀದಗ್ಂ ಸರ್ವಮ್ । ಓಮಿತ್ಯೇತದನುಕೃತಿ ಹ ಸ್ಮ ವಾ ಅಪ್ಯೋ ಶ್ರಾವಯೇತ್ಯಾಶ್ರಾವಯನ್ತಿ । ಓಮಿತಿ ಸಾಮಾನಿ ಗಾಯನ್ತಿ । ಓಗ್ಂಶೋಮಿತಿ ಶಸ್ತ್ರಾಣಿ ಶಗ್ಂಸನ್ತಿ । ಓಮಿತ್ಯಧ್ವರ್ಯುಃ ಪ್ರತಿಗರಂ ಪ್ರತಿಗೃಣಾತಿ । ಓಮಿತಿ ಬ್ರಹ್ಮಾ ಪ್ರಸೌತಿ । ಓಮಿತ್ಯಗ್ನಿ ಹೋತ್ರಮನುಜಾನಾತಿ । ಓಮಿತಿ ಬ್ರಾಹ್ಮಣಃ ಪ್ರವಕ್ಷ್ಯನ್ನಾಹ ಬ್ರಹ್ಮೋಪಾಪ್ನವಾನೀತಿ । ಬ್ರಹ್ಮೈವೋಪಾಪ್ನೋತಿ ॥ ೮ ॥

೮. ಓಂ ಎಂಬುದು ಬ್ರಹ್ಮವು. ಇದೆಲ್ಲವೂ ಓಂ ಎಂಬುದು. ಓಂ ಎಂಬುದು ಅನುಕೃತಿಯಲ್ಲವೆ ? ಮತ್ತು '' ಓಂ ಶ್ರಾವಯ'' ಎಂದ ಮೇಲೆ (ಮಂತ್ರವನ್ನು) ಹೇಳುತ್ತಾರೆ. ಓಂ ! ಎಂದು ಸಾಮಗಳನ್ನು ಗಾನ ಮಾಡುತ್ತಾರೆ. ಓಂ ಶೋ೦ ಎಂದು ಶಸ್ತ್ರಗಳನ್ನು ಶಂಸನಮಾಡುತ್ತಾರೆ. ಓಂ ! ಎಂದು ಅಧ್ವರ್ಯುವು ಪ್ರತಿಗರವನ್ನು

1 ಸಗುಣನಿರ್ಗುಣಬ್ರಹ್ಮಗಳ ಉಪಾಸನೆಗಳಿಗೂ ಎಂದರ್ಥ. ಈ ಅನುವಾಕದಲ್ಲಿ ಹೇಳಿರುವದು ಅಪರಬ್ರಹ್ಮದ ಉಪಾಸನೆ ; ಪ್ರಶ್ನ ೫-೫ ರಲ್ಲಿ ಹಿರಣ್ಯಗರ್ಭನ ವ್ಯಾಪ್ತಿಯ ದ್ವಾರದಿಂದ ಪರಮಾತ್ಮನ ದರ್ಶನವನ್ನು ಪಡೆಯುತ್ತಾರೆಂದು ಹೇಳಿದೆ.

2. ಪ್ರತೀಕವಾಗಿರುತ್ತದೆ. ಓಂಕಾರದ ಅರ್ಥವನ್ನು ಪರಿಶೀಲನೆಮಾಡಿದರೆ ಪರಮಾತ್ಮ ಜ್ಞಾನವೂ ಆಗುತ್ತದೆ. ಆದರೆ ಈ ವಲ್ಲಿಯಲ್ಲಿ ಜ್ಞಾನವು ಪ್ರಕೃತವಾಗಿಲ್ಲವಾದ್ದರಿಂದ ಅದನ್ನು ಇಲ್ಲಿ ಹೇಳಲಿಲ್ಲ. ಪ್ರತೀಕೋಪಾಸನೆಯ ವಿಚಾರಕ್ಕೆ ಸೂ. ಭಾ. ೪-೧-೪, ೫ ನೋಡಿ

3. ಇದು ಪ್ರತೀಕೋಪಾಸನೆಯಾದರೂ ಪರಾಪರಬ್ರಹ್ಮದ ಉಪಾಸನೆಯ ಅಂಗವಾಗಿರುವದರಿಂದಲೂ ಶ್ರುತಿವಚನಸಾಮರ್ಥ್ಯದಿಂದಲೂ ಪಂಚಾಗ್ನಿವಿದ್ಯೆಯೇ ಮುಂತಾದವುಗಳಿಂದ ಆಗುವಂತೆ ಇದರಿಂದಲೂ ಬ್ರಹ್ಮಪ್ರಾಪ್ತಿಯಾಗುತ್ತದೆ. ಸೂ. ಭಾ. ೪-೩-೧೫ ಉಪಸಂಹಾರ ವಾಕ್ಯವನ್ನು ನೋಡಿ.

ತಿರುಗಿ ಹೇಳುತ್ತಾನೆ. ಓಂ ! ಎಂದು ಬ್ರಹ್ಮನು ಅನುಮತಿಯನ್ನು ಕೊಡುತ್ತಾನೆ. ಓಂ ! ಎಂದು ಅಗ್ನಿಹೋತ್ರಕ್ಕೆ ಒಪ್ಪಿಗೆಯನ್ನು ಕೊಡುತ್ತಾನೆ. 'ಬ್ರಹ್ಮವನ್ನೇ (ನಾನು) ಪಡೆಯಬೇಕು' ಎಂದು ಬ್ರಾಹ್ಮಣನು ಪ್ರವಚನಮಾಡುವವನಾಗಿ ಓಂ ! ಎಂದು ಹೇಳುತ್ತಾನೆ, ಬ್ರಹ್ಮವನ್ನೇ ಪಡೆಯುತ್ತಾನೆ.

ಓಂಕಾರೋಪಾಸನೆಯ ವಿಧಿ

(ಭಾಷ್ಯ)

೫೧. ಓಮಿತಿ । ಇತಿಶಬ್ದಃ ಸ್ವರೂಪಪರಿಚ್ಛೇದಾರ್ಥಃ । ಓಂ ಇತ್ಯೇತತ್ ಶಬ್ದರೂಪಂ ಬ್ರಹ್ಮ ಇತಿ ಮನಸಾ ಧಾರಯೀತ್ ಉಪಾಸೀತ । ಯತಃ ಓಮಿತಿ ಇದಂ ಸರ್ವಮ್ । ಸರ್ವಂ ಹಿ ಶಬ್ದರೂಪಮ್ ಓಂಕಾರೇಣ ವ್ಯಾಪ್ತಮ್ । '' ತದ್ಯಥಾ ಶಜ್ಕುನಾ '' (ಛಾಂ.೨-೨೩-೩) ಇತಿ ಶ್ರುತ್ಯನ್ತರಾತ್ । ಅಭಿಧಾನತನ್ತ್ರಂ ಹಿ ಅಭಿಧೇಯಮ್ ಇತ್ಯತಃ ಇದಂ ಸರ್ವಮ್ ಓಂಕಾರಃ ಇತ್ಯುಚ್ಯತೇ ॥

(ಭಾಷ್ಯಾರ್ಥ)

'ಓಮಿತಿ' (ಎಂಬಲ್ಲಿ) ಇತಿ ಎಂಬ ಶಬ್ದವು (ಓಂಕಾರದ) ಸ್ವರೂಪವನ್ನು ಗೊತ್ತುಪಡಿಸುವದಕ್ಕೆ (ಪ್ರಯುಕ್ತವಾಗಿರುತ್ತದೆ). ಓಂ ಎಂಬೀ ಶಬ್ದರೂಪವು ಬ್ರಹ್ಮವು ಎಂದು ಮನಸ್ಸಿನಿಂದ ಭರಿಸಬೇಕು, ಉಪಾಸನೆಮಾಡಬೇಕು. ಏಕೆಂದರೆ ಇದೆಲ್ಲವೂ ಓಂಕಾರವೇ, ಎಂದರೆ ಶಬ್ದರೂಪವೆಲ್ಲವೂ ಓಂಕಾರದಿಂದಲೇ ವ್ಯಾಪ್ತವಾಗಿರುತ್ತದೆ.[1] ''ಹೇಗೆ ಎಲೆಯ ನಾಳದಿಂದ (ಎಲೆಗಳೆಲ್ಲ ವ್ಯಾಪ್ತವಾಗಿರುವವೋ)'' (ಛಾಂ. ೨-೨೩-೩) ಎಂಬ ಬೇರೊಂದು ಶ್ರುತಿಯು ಇದಕ್ಕೆ ಪ್ರಮಾಣವು. ಅಭಿಧಾನಕ್ಕೆ ಅಭಿಧೇಯವು ಅಧೀನವಾಗಿರುತ್ತದೆ ; ಆದ್ದರಿಂದ 'ಇದೆಲ್ಲವೂ ಓಂಕಾರವೇ' ಎಂದಿರುತ್ತದೆ.[2]

ಓಂಕಾರದ ಸ್ತುತಿ

(ಭಾಷ್ಯ)

೫೨. ಓಂಕಾರಸ್ತುತ್ಯರ್ಥಃ[3] ಉತ್ತರೋ ಗ್ರನ್ಥಃ । ಉಪಾಸ್ಯತ್ವಾತ್ ತಸ್ಯ । ಓಂ

1. ಓಂಕಾರದ ಕಾರ್ಯವಾಗಿರುತ್ತದೆ , ಓಂ ಎಂಬುದು ಸರ್ವವಾಚಕವು, ಮಿಕ್ಕ ಶಬ್ದಗಳು ಒಂದೊಂದು ವ್ಯಕ್ತಿಯನ್ನು ಮಾತ್ರ ಹೇಳುತ್ತವೆ.

2. ಎಲ್ಲವೂ ಓಂಕಾರವಾಚ್ಯವೇ ಎಂಬಭಿಪ್ರಾಯದಿಂದ ಹೀಗೆ ಹೇಳಿರುತ್ತದೆ.

3. 'ಸ್ತುತ್ಯರ್ಥಮ್' ಎಂದು ಆ।। ಕಾ।। ಪಾಠ

ಇತ್ಯೇತತ್ ಅನುಕೃತಿಃ ಅನುಕರಣಮ್ । 'ಕರೋಮಿ' 'ಯಾಸ್ಯಾಮಿ ಚ' ಇತಿ ಕೃತಮ್ ಉಕ್ತಮ್ ಓಂ ! ಇತ್ಯನುಕರೋತಿ ಅನ್ಯಃ । ಅತಃ ಓಂಕಾರೋಽನುಕೃತಿಃ । ಹ ಸ್ಮ ವೈ ಇತಿ ಪ್ರಸಿದ್ಧಾವದ್ಯೋತಕಾಃ । ಪ್ರಸಿದ್ಧಂ ಹಿ ಓಂಕಾರಸ್ಯ ಅನುಕೃತಿತ್ವಮ್ । ಅಪಿ ಚ 'ಓ ಶ್ರಾವಯ' ಇತಿ ಪ್ರೈಷಪೂರ್ವಕಮ್ ಆಶ್ರಾವಯನ್ತಿ ಪ್ರತಿಶ್ರಾವಯನ್ತಿ । ತಥಾ ಓಂ । ಇತಿ ಸಾಮಾನಿ ಗಾಯನ್ತಿ ಸಾಮಗಾಃ । ಓಂ ಶೋಂ ಇತಿ ಶಸ್ತ್ರಾಣಿ ಶಂಸನ್ತಿ ಶಸ್ತ್ರಶಂಸಿತಾರೋಽಪಿ । ತಥಾ ಓಂ ! ಇತಿ ಅಧ್ವರ್ಯುಃ ಪ್ರತಿಗರಂ ಪ್ರತಿಗೃಣಾತಿ । ಓಂ ! ಇತಿ ಬ್ರಹ್ಮಾ ಪ್ರಸೌತಿ, ಅನುಜಾನಾತಿ । ಓಂ ! ಇತಿ ಅಗ್ನಿಹೋತ್ರಮ್ ಅನು ಜಾನಾತಿ[1] । ಜುಹೋಮಿ ಇತ್ಯುಕ್ತಃ ಓಂ ! ಇತ್ಯೇವ ಅನುಜ್ಞಾಂ ಪ್ರಯಚ್ಛತಿ । ಓಂ ಇತ್ಯೇವ ಬ್ರಾಹ್ಮಣಃ ಪ್ರವಕ್ಷ್ಯನ್ ಪ್ರವಚನಂ ಕರಿಷ್ಯನ್ ಅಧ್ಯೇಷ್ಯಮಾಣಃ ಓಮಿತ್ಯೇವಾಹ ಓಮಿತಿ ಪ್ರತಿಪದ್ಯತೇ ಅಧ್ಯೇತುಮ್ ಇತ್ಯರ್ಥಃ । ಬ್ರಹ್ಮ ವೇದಮ್ ಉಪಾಪ್ನವಾನಿ ಇತಿ ಪ್ರಾಪ್ನುಯಾಂ ಗ್ರಹೀಷ್ಯಾಮಿ ಇತಿ । ಉಪಾಪ್ನೋತ್ಯೇವ ಬ್ರಹ್ಮ । ಅಥವಾ ಬ್ರಹ್ಮ ಪರಮಾತ್ಮಾನಮ್ ಉಪಾಪ್ನವಾನಿ ಇತಿ ಆತ್ಮಾನಂ ಪ್ರವಕ್ಷ್ಯನ್ ಪ್ರಾಪಯಿಷ್ಯನ್ ಓಂ ! ಇತ್ಯೇವಾಹ । ಸ ಚ ತೇನ ಓಂಕಾರೇಣ ಬ್ರಹ್ಮ ಪ್ರಾಪ್ನೋತ್ಯೇವ । ಓಂಕಾರಪೂರ್ವಂ ಪ್ರವೃತ್ತಾನಾಂ ಕ್ರಿಯಾಣಾಂ ಫಲವತ್ತ್ವಂ ಯಸ್ಮಾತ್, ತಸ್ಮಾತ್ ಓಂಕಾರಂ ಬ್ರಹ್ಮ ಇತ್ಯುಪಾಸೀತ ಇತಿ ವಾಕ್ಯಾರ್ಥಃ ॥

(ಭಾಷ್ಯಾರ್ಥ)

(ಇನ್ನು) ಮುಂದಿನ ಗ್ರಂಥವು ಓಂಕಾರವನ್ನು ಹೊಗಳುವದಕ್ಕೆ (ಬಂದಿರುತ್ತದೆ.) ಏಕೆಂದರೆ ಅದನ್ನೇ ಉಪಾಸನೆಮಾಡಬೇಕಾಗಿರುತ್ತದೆ.[2]

ಓಂ ಎಂಬುದು ಅನುಕೃತಿಯು ಎಂದರೆ ಅನುಕರಣವು. ಕೃತವನ್ನು ಎಂದರೆ ಒಬ್ಬನು ಹೇಳಿದ್ದನ್ನು 'ಓಂ ! ಮಾಡುತ್ತೇನೆ, ಹೋಗುತ್ತೇನೆ' ಎಂದು ಮತ್ತೊಬ್ಬನು ಅನುಕರಣಮಾಡುತ್ತಾನೆ.[3] ಆದ್ದರಿಂದ ಓಂಕಾರವು ಅನುಕೃತಿಯು, ಹ ಸ್ಮ ವೈ (ಎಂಬ ಅವ್ಯಯಗಳು) ಇದು ಪ್ರಸಿದ್ಧವೆಂಬುದನ್ನು ತೋರಿಸುತ್ತವೆ. ಓಂಕಾರವು ಅನುಕೃತಿ(ವಾಚಕ)ವೆಂಬುದು ಪ್ರಸಿದ್ಧವಲ್ಲವೆ ? (ಎಂದಭಿಪ್ರಾಯ). ಮತ್ತು ''ಓ

---

1. 'ಉಕ್ತಃ' ಎಂಬ ವಾ॥ ಕಾ॥ ಪಾಠಕ್ಕಿಂತ ಇದೇ ಮೇಲೆಂದು ತೋರುತ್ತದೆ.

2. ಯಾವದರ ಉಪಾಸನೆಯನ್ನು ವಿಧಿಸಿದೆಯೋ ಅದನ್ನು ಹೊಗಳುವದು ಯುಕ್ತ. ಇಲ್ಲಿ ಓಂಕಾರದ ಉಪಾಸನೆಯನ್ನು ವಿಧಿಸಿದೆ ; ಆದ್ದರಿಂದ ಅದನ್ನು ಹೊಗಳಿರುತ್ತದೆ.

3. ಹಾಗೇ ಆಗಲಿ ; ಹಾಗೇ ಮಾಡುತ್ತೇನೆ - ಎಂದು ತಿಳಿಸುವದಕ್ಕೆ 'ಓಂ !' ಎನ್ನುತ್ತಾನೆ.

ಶ್ರಾವಯ'' ಎಂಬ ಪ್ರೈಷಪೂರ್ವಕವಾಗಿ[1] (ಮಂತ್ರವನ್ನು) ಹೇಳುತ್ತಾರೆ, ಹಿಂತಿರುಗಿ ಅನ್ನುತ್ತಾರೆ. ಇದರಂತೆ ಸಾಮಗಾನಮಾಡುವವರು ಓಂ ! ಎಂದ (ಬಳಿಕವೇ) ಸಾಮವನ್ನು ಹಾಡುತ್ತಾರೆ. ಶಸ್ತ್ರವನ್ನು ಹೇಳುವವರು ಕೂಡ 'ಓಂ ಶೋಂ !'[2] ಎಂದು ಶಸ್ತ್ರಗಳನ್ನು ಹೇಳುತ್ತಾರೆ. ಹೀಗೆಯೇ ಓಂ ! ಎಂದು ಅಧ್ವರ್ಯುವು ಪ್ರತಿಗರವನ್ನು[3] ಪ್ರತಿಯಾಗಿ ಹೇಳುತ್ತಾನೆ. ಬ್ರಹ್ಮನು 'ಓಂ !' ಎಂದು ಒಪ್ಪಿಗೆಯನ್ನು ಕೊಡುತ್ತಾನೆ, ಒಪ್ಪುತ್ತಾನೆ.[4] ಓಂ ! ಎಂದು ಅಗ್ನಿಹೋತ್ರಕ್ಕೆ ಒಪ್ಪಿಗೆಯನ್ನು ಕೊಡುತ್ತಾನೆ ; ''ಹೋಮ ಮಾಡುತ್ತೇನೆ'' ಎಂದು ಹೇಳುತ್ತಲೂ ಓಂ ! ಎಂದೇ ಅನುಜ್ಞೆಯನ್ನು ಕೊಡುತ್ತಾನೆ.[5] ಬ್ರಾಹ್ಮಣನು 'ಪ್ರವಕ್ಷ್ಯನ್' ಪ್ರವಚನಮಾಡಬೇಕೆಂದು[6] ಅಧ್ಯಯನಮಾಡಬೇಕೆಂದು ಓಂ ! ಎಂದೇ ಹೇಳುತ್ತಾನೆ, 'ಓಂ !' ಎಂದೇ ಅಧ್ಯಯನಮಾಡುವದಕ್ಕೆ ಮೊದಲು ಮಾಡುತ್ತಾನೆ ಎಂದರ್ಥ. ಬ್ರಹ್ಮವನ್ನು ಎಂದರೆ ವೇದವನ್ನು ಪಡೆಯೋಣ, ಗ್ರಹಣ ಮಾಡೋಣ, ಎಂದು (ಓಂಕಾರೋಚ್ಚಾರಣದಿಂದ ಮೊದಲುಮಾಡುತ್ತಾನೆ. ಅವನು ಅದರಂತೆ) ಬ್ರಹ್ಮವನ್ನು ಪಡೆದೇ ಪಡೆಯುತ್ತಾನೆ. ಅಥವಾ ಬ್ರಹ್ಮವೆಂದರೆ ಪರಮಾತ್ಮನು ; (ಅವನನ್ನು) ಪಡೆಯುತ್ತೇನೆ ಎಂದು ತನ್ನನ್ನು (ಆ ಬ್ರಹ್ಮವನ್ನು)

---

1. ದರ್ಶಪೂರ್ಣಮಾಸವೇ ಮುಂತಾದ ಯಾಗಗಳಲ್ಲಿ ಯಜುರ್ವೇದೋಕ್ತಕರ್ಮವನ್ನು ಮಾಡುವ ಅಧ್ವರ್ಯುವು ಆಗ್ನೀಧ್ರನನ್ನು ''ಎಲೈ ಆಗ್ನೀಧ್ರನೆ, ದೇವತೆಗಳಿಗೆ ಹವಿಸ್ಸನ್ನು ಕೊಡುವ ಕಾಲವನ್ನು ತಿಳಿಸು'' ಎಂದು ಕೇಳುವದಕ್ಕೆ ''ಓ ಶ್ರಾವಯ'' ಎನ್ನುವನು. ಇದಕ್ಕೆ ಪ್ರೈಷವೆಂದು ಹೆಸರು. ಇಲ್ಲಿ 'ಓ' ಎಂಬುದು ಓಂಕಾರದ ರೂಪಾಂತರವು.

2. ಋಗ್ವೇದಿಯಾದ ಹೋತೃವು ನಿಷ್ಕೇವಲ್ಯವೇ ಮುಂತಾದ ಶಸ್ತ್ರಗಳನ್ನು ಹೇಳುವಲ್ಲಿ ಅಧ್ವರ್ಯುವಿನ ಅನುಜ್ಞೆಯನ್ನು ಬೇಡುವದಕ್ಕೆ ''ಅಧ್ವರ್ಯೋ ಶೋಂಸಾವೋಮ್'' ಎಂದು ಹೇಳುವನು. ಇಲ್ಲಿ ಮೊದಲು ಶೋಂ ಕೊನೆಯಲ್ಲಿ ಓಂ ಎಂದು ಇರುತ್ತದೆ. ಅಧ್ವರ್ಯುವೆ, ನಾವು ಶಂಸನವನ್ನು ಮಾಡೋಣವೆ ?'' - ಎಂದು ಮಂತ್ರದ ಅರ್ಥ.

3. ಅಧ್ವರ್ಯವು ಶಸ್ತ್ರವನ್ನು ಕೇಳಿ ಹೇಳುವ ''ಓಥಾಮೋದ ಇವ'' (ಎಲ್ಲೆ ನಮಗೆ ಶಸ್ತ್ರವನ್ನು ಕೇಳಿ ಬಹಳ ಸಂತೋಷವಾಯಿತು). ಎಂಬ ಪ್ರೋತ್ಸಾಹಕವಾಕ್ಯಕ್ಕೆ ಪ್ರತಿಗರವೆಂದು ಹೆಸರು.

4. ಇತರ ಋತ್ವಿಜರಿಗೆ ಅನುಜ್ಞೆಯನ್ನು ಕೊಡುತ್ತಾನೆ. ಇಲ್ಲಿ ''ಪ್ರೈಷಪೂರ್ವಕ ಮಾಶ್ರಾವಯತಿ'' ಎಂದು (ಆ।।) ಪಾಠದಲ್ಲಿ ಹೆಚ್ಚಾಗಿ ಬಿದ್ದಿದೆ.

5. ಬ್ರಹ್ಮನು ಅಗ್ನಿಹೋತ್ರವನ್ನು ಮಾಡಬಹುದೆಂದು ಕೊಡುವ ಅನುಜ್ಞೆಯೂ ಓಂಕಾರರೂಪವಾಗಿರುತ್ತದೆ.

6. 'ವಚ ಪರಿಭಾಷಣೇ' ಎಂಬ ಧಾತುವಿನಿಂದ ಪ್ರವಕ್ಷ್ಯನ್ ಎಂಬ ರೂಪವು ಬಂದಿದೆ ಎಂದು ಇಟ್ಟುಕೊಂಡಿದೆ.

ಮುಟ್ಟಿಸಿಕೊಳ್ಳುವದಕ್ಕಾಗಿ[1] 'ಓಂ ।' ಎಂದೇ ಹೇಳುತ್ತಾನೆ. ಮತ್ತು ಅವನು ಆ ಓಂಕಾರ(ದ ಉಚ್ಚಾರಣೆ)ಯಿಂದ ಬ್ರಹ್ಮವನ್ನು ಪಡೆದೇಪಡೆಯುತ್ತಾನೆ.

ಓಂಕಾರಪೂರ್ವಕವಾಗಿ ಪ್ರಾರಂಭಮಾಡಿದ ಕರ್ಮಗಳೆಲ್ಲವೂ ಸಫಲವಾಗುವ ವಲ್ಲವೆ. ಆದ್ದರಿಂದ ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು ಎಂದು (ಒಟ್ಟು)ವಾಕ್ಯದ ಅರ್ಥವು.

೯. ಕರ್ಮಗಳಿಗೆ ಆನರ್ಥಕ್ಯಪರಿಹಾರ

ಅನುವಾಕದ ವಿಷಯ

(ಭಾಷ್ಯ)

ಋಷಿ. ವಿಜ್ಞಾನಾದೇವ ಆಪ್ನೋತಿ ಸ್ವಾರಾಜ್ಯಮ್ (೪೩) ಇತ್ಯುಕ್ತತ್ವಾತ್ ಶ್ರೌತಸ್ಮಾರ್ತಾನಾಂ ಕರ್ಮಣಾಮ್ ಆನರ್ಥಕ್ಯಂ ಪ್ರಾಪ್ತಮ್ ಇತ್ಯತಃ ತನ್ಮಾ[2] ಪ್ರಾಪತ್ ಇತಿ ಕರ್ಮಣಾಂ ಪುರುಷಾರ್ಥಂ ಪ್ರತಿ ಸಾಧನತ್ವಪ್ರದರ್ಶನಾರ್ಥಃ ಇಹ ಉಪನ್ಯಾಸಃ ।।

(ಭಾಷ್ಯಾರ್ಥ)

ವಿಜ್ಞಾನದಿಂದಲೇ ಸ್ವಾರಾಜ್ಯವನ್ನು ಪಡೆಯುತ್ತಾನೆ (೪೩) ಎಂದು ಹೇಳಿದ್ದರಿಂದ **ಶ್ರೌತಸ್ಮಾರ್ತಕರ್ಮಗಳು** ವ್ಯರ್ಥವೆಂದಾಯಿತು. ಆದ್ದರಿಂದ ಹಾಗಾಗಬಾರದೆಂದು ಕರ್ಮಗಳು ಪುರುಷಾರ್ಥಕ್ಕೆ[3] ಸಾಧನವೆಂದು ತೋರಿಸಿಕೊಡುವದಕ್ಕಾಗಿ (ಅವನ್ನು) ಇಲ್ಲಿ[4] ಹೇಳಿರುತ್ತದೆ.

ಋತಂ ಚ ಸ್ವಾಧ್ಯಾಯಪ್ರವಚನೇ ಚ । ಸತ್ಯಂ ಚ ಸ್ವಾಧ್ಯಾಯಪ್ರವಚನೇ ಚ । ತಪಶ್ಚ ಸ್ವಾಧ್ಯಾಯಪ್ರವಚನೇ ಚ । ದಮಶ್ಚ ಸ್ವಾಧ್ಯಾಯಪ್ರವಚನೇ ಚ । ಶಮಶ್ಚ ಸ್ವಾಧ್ಯಾಯಪ್ರವಚನೇ ಚ । ಅಗ್ನಯಶ್ಚ ಸ್ವಾಧ್ಯಾಯ

1. 'ವಹ ಪ್ರಾಪಣೇ' ಎಂಬ ಧಾತುವಿನ ರೂಪವು ಪ್ರವಕ್ಷ್ಯನ್ ಎಂಬುದೆಂದು ಇಟ್ಟುಕೊಂಡು ಈ ಅರ್ಥವನ್ನು ಹೇಳಿದೆ. ಓಂಕಾರೋಚ್ಚಾರಣೆಯಿಂದ ಅಧ್ಯಯನಮಾಡುವವನಿಗೆ ವೇದವು ಒಳವಡುವದೆಂದು ಹಿಂದೆ ಹೇಳಿತ್ತು ; ಓಂಕಾರವನ್ನು ಉಚ್ಚರಿಸುವದರಿಂದ ಪ್ರೀತನಾದ ಪರಮೇಶ್ವರನು ಉಪಾಸಕನಿಗೆ ತನ್ನ ಸಾಯುಜ್ಯವನ್ನು ಕೊಡುವನು ಎಂದು ಈಗ ಹೇಳಿದೆ.

2. 'ಇತ್ಯೇತನ್ಮಾ' ಎಂದು ವಾ।। ಪಾಠ.

3. ಮೋಕ್ಷಕ್ಕೆ.

4. ವಿದ್ಯಾಪ್ರಕರಣದಲ್ಲಿ, ಕರ್ಮಕಾಂಡದಲ್ಲಿ ಹೇಳಿರುವದು ಮುಮುಕ್ಷುಗಳಲ್ಲದವರೂ ವರ್ಣಾಶ್ರಮಧರ್ಮಗಳನ್ನು ಮಾಡಬೇಕೆಂದು ತಿಳಿಸುವದಕ್ಕೆ. ಸೂ. ಭಾ. ೩-೪-೩೪.

ಪ್ರವಚನೇ ಚ । ಅಗ್ನಿಹೋತ್ರಂ ಚ ಸ್ವಾಧ್ಯಾಯಪ್ರವಚನೇ ಚ । ಅತಿಥಯಶ್ಚ ಸ್ವಾಧ್ಯಾಯಪ್ರವಚನೇ ಚ । ಮಾನುಷಂ ಚ ಸ್ವಾಧ್ಯಾಯ ಪ್ರವಚನೇ ಚ । ಪ್ರಜಾ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜನಶ್ಚ ಸ್ವಾಧ್ಯಾಯಪ್ರವಚನೇ ಚ । ಪ್ರಜಾತಿಶ್ಚ ಸ್ವಾಧ್ಯಾಯಪ್ರವಚನೇ ಚ । ಸತ್ಯಮಿತಿ ಸತ್ಯವಚಾ ರಾಥೀತರಃ । ತಪ ಇತಿ ತಪೋನಿತ್ಯಃ ಪೌರುಶಿಷ್ಟಿಃ । ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿ ತಪಸ್ತದ್ಧಿ ತಪಃ ॥೯॥

೯. ಋತುವೂ ಸ್ವಾಧ್ಯಾಯಪ್ರವಚನಗಳೂ ; ಸತ್ಯವೂ ಸ್ವಾಧ್ಯಾಯ ಪ್ರವಚನಗಳೂ ; ತಪಸ್ಸೂ ಸ್ವಾಧ್ಯಾಯಪ್ರವಚನಗಳೂ ; ದಮವೂ ಸ್ವಾಧ್ಯಾಯಪ್ರವಚನಗಳೂ ; ಶಮವೂ ಸ್ವಾಧ್ಯಾಯಪ್ರವಚನಗಳೂ ; ಅಗ್ನಿಗಳೂ ಸ್ವಾಧ್ಯಾಯಪ್ರವಚನಗಳೂ ; ಅಗ್ನಿಹೋತ್ರವೂ ಸ್ವಾಧ್ಯಾಯ ಪ್ರವಚನಗಳೂ ; ಅತಿಥಿಗಳೂ ಸ್ವಾಧ್ಯಾಯಪ್ರವಚನಗಳೂ ; ಮಾನುಷವೂ ಸ್ವಾಧ್ಯಾಯಪ್ರವಚನಗಳೂ ; ಪ್ರಜೆಯೂ ಸ್ವಾಧ್ಯಾಯಪ್ರವಚನಗಳೂ ; ಪ್ರಜನವೂ ಸ್ವಾಧ್ಯಾಯಪ್ರವಚನಗಳೂ ; ಪ್ರಜಾತಿಯೂ ಸ್ವಾಧ್ಯಾಯ ಪ್ರವಚನಗಳೂ ; 'ಸತ್ಯವು' ಎಂದು ಸತ್ಯವಚನದ ರಾಥೀತರನು ; 'ತಪಸ್ಸು' ಎಂದು ತಪೋನಿತ್ಯನಾದ ಪೌರುಶಿಷ್ಟಿಯು ; 'ಸ್ವಾಧ್ಯಾಯಪ್ರವಚನಗಳೇ' ಎಂದು ನಾಕಮೌದ್ಗಲ್ಯನು. ಅದೇ ತಪಸ್ಸು, ಅದೇ ತಪಸ್ಸು.

ಮುಮುಕ್ಷುವು ಮಾಡಬೇಕಾದ ಕರ್ಮಗಳು

(ಭಾಷ್ಯ)

೫೪. ಋತಮ್ ಇತಿ ವ್ಯಾಖ್ಯಾತಮ್ । ಸ್ವಾಧ್ಯಾಯಃ ಅಧ್ಯಯನಮ್ । ಪ್ರವಚನಮ್ ಅಧ್ಯಾಪನಂ, ಬ್ರಹ್ಮಯಜ್ಞೋ ವಾ । ಏತಾನಿ ಋತಾದೀನಿ 'ಅನುಷ್ಠೇಯಾನಿ' ಇತಿ ವಾಕ್ಯಶೇಷಃ । ಸತ್ಯಂ ಸತ್ಯವಚನಮ್ । ಯಥಾವ್ಯಾಖ್ಯಾತಾರ್ಥಂ ವಾ । ತಪಃ ಕೃಚ್ಛ್ರಾದಿ । ದಮಃ ಬಾಹ್ಯಕರಣೋಪಶಮಃ । ಶಮಃ ಅನ್ತಃಕರಣೋಪ ಶಮಃ । ಅಗ್ನಯಶ್ಚ ಆಧಾತವ್ಯಾಃ । ಅಗ್ನಿಹೋತ್ರಂ ಚ ಹೋತವ್ಯಮ್ । ಅತಿಥಯಶ್ಚ ಪೂಜ್ಯಾಃ । ಮಾನುಷಮ್ ಇತಿ ಲೌಕಿಕಃ ಸಂವ್ಯವಹಾರಃ ; ತಚ್ಚ ಯಥಾಪ್ರಾಪ್ತಮ್ ಅನುಷ್ಠೇಯಮ್ । ಪ್ರಜಾ ಚ ಉತ್ಪಾದ್ಯಾ । ಪ್ರಜನಶ್ಚ ಪ್ರಜನನಮ್ ; ಋತೌ

ಭಾರ್ಯಾಗಮನಮ್ ಇತ್ಯರ್ಥಃ । ಪ್ರಜಾತಿಃ ಪೌತ್ರೋತ್ಪತ್ತಿಃ । ಪುತ್ರೋ ನಿವೇಶಯಿತವ್ಯಃ ಇತ್ಯೇತತ್ ॥

(ಭಾಷ್ಯಾರ್ಥ)

ಋತವೆಂಬುದನ್ನು ಹಿಂದೆ (೧೪ರಲ್ಲಿ) ವಿವರಿಸಿದೆ. **ಸ್ವಾಧ್ಯಾಯವೆಂದರೆ** ವೇದವನ್ನು ಕಲಿಯುವದು. **ಪ್ರವಚನ** ಎಂದರೆ ವೇದವನ್ನು ಕಲಿಸುವದು, ಅಥವಾ **ಬ್ರಹ್ಮಯಜ್ಞವು**.[1] ಈ ಋತವೇ ಮುಂತಾದವುಗಳನ್ನು 'ಮಾಡತಕ್ಕದ್ದು' ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. **ಸತ್ಯ**ವೆಂದರೆ ಸತ್ಯವನ್ನು ನುಡಿಯುವದು, ಅಥವಾ ಹಿಂದೆ (೧೪ರಲ್ಲಿ) ವಿವರಿಸಿರುವ ಅರ್ಥವು (ಧರ್ಮವು). **ತಪಸ್ಸು** ಎಂದರೆ ಕೃಚ್ಛ್ರವೇ[2] ಮುಂತಾದದ್ದು. **ದಮ** ಎಂದರೆ ಹೊರಗಿನ ಕರಣಗಳನ್ನು ತಡೆದಿಟ್ಟುಕೊಳ್ಳುವದು, **ಶಮ**ವೆಂದರೆ ಒಳಗಿನ ಕರಣವನ್ನು ತಡೆದಿಟ್ಟುಕೊಳ್ಳುವದು.[3] **ಅಗ್ನಿ**ಗಳನ್ನು ಆಧಾನಮಾಡಬೇಕು ; **ಅಗ್ನಿಹೋತ್ರ**ವನ್ನೂ ಹೋಮಮಾಡಬೇಕು ; **ಅತಿಥಿ**ಗಳನ್ನೂ ಪೂಜಿಸಬೇಕು. **ಮಾನುಷ** ಎಂದರೆ ಲೌಕಿಕವ್ಯವಹಾರವು ; ಅದನ್ನೂ ಒದಗಿದಂತೆ ಮಾಡುತ್ತಿರಬೇಕು. **ಪ್ರಜೆ**ಯನ್ನು ಪಡೆಯಬೇಕು. **ಪ್ರಜನ**ವೆಂದರೆ ಪುತ್ರೋತ್ಪತ್ತಿಯನ್ನು ಮಾಡುವ ಯತ್ನವು ; ಋತುಕಾಲದಲ್ಲಿ ಭಾರ್ಯೆಯನ್ನು ಕೂಡುವದು ಎಂದರ್ಥ. **ಪ್ರಜಾತಿ** ಎಂದರೆ ಮೊಮ್ಮಗನನ್ನು ಪಡೆಯುವದು ; ಪುತ್ರನಿಗೆ ಮದುವೆಮಾಡಬೇಕು ಎಂದರ್ಥ.

ಮುಮುಕ್ಷುವಿನ ಕರ್ಮಗಳಲ್ಲಿ ಮುಖ್ಯವಾದವುಗಳು

(ಭಾಷ್ಯ)

ಜಜ್ಞ. ಸರ್ವೈರೇತೈಃ ಕರ್ಮಭಿರ್ಯುಕ್ತಸ್ಯಾಪಿ ಸ್ವಾಧ್ಯಾಯಪ್ರವಚನೇ ಯತ್ನತೋಽನುಷ್ಠೇಯೇ ಇತ್ಯೇವಮರ್ಥಂ ಸರ್ವೇಣ ಸಹ ಸ್ವಾಧ್ಯಾಯಪ್ರವಚನಗ್ರಹಣಮ್ । ಸ್ವಾಧ್ಯಾಯಾಧೀನಂ ಹಿ ಅರ್ಥಜ್ಞಾನಮ್ । ಅರ್ಥಜ್ಞಾನಾಯತ್ತಂ ಚ[4] ಪರಂ ಶ್ರೇಯಃ । ಪ್ರವಚನಂ ಚ ತದವಿಸ್ಮರಣಾರ್ಥಂ ಧರ್ಮಪ್ರವೃದ್ಧ್ಯರ್ಥಂ[5] ಚ ।

---

1. ದ್ವಿಜನು ಮಾಡಬೇಕಾಗಿರುವ ಪಂಚಮಹಾಯಜ್ಞಗಳಲ್ಲಿ ಒಂದು.

2. ಕೃಚ್ಛ್ರ, ಚಾಂದ್ರಾಯಣ - ಮುಂತಾದವುಗಳ ಲಕ್ಷಣವನ್ನು ಧರ್ಮಶಾಸ್ತ್ರಗಳಿಂದ ತಿಳಿದುಕೊಳ್ಳಬೇಕು.

3. ಕರ್ಮಗಳು ಬಾಹ್ಯಸಾಧನ, ಶಮಾದಿಗಳು ಅಂತರಂಗಸಾಧನ. ಸೂ. ಭಾ. ೩-೪-೨೭ ನ್ನು ನೋಡಿ.

4 'ಜ್ಞಾನಾಧೀನಂ ಚ' ಎಂದು ವಾ।। ಪಾಠ.

5. 'ಧರ್ಮವೃದ್ಧ್ಯರ್ಥಂ' ಎಂದು ವಾ।। ಪಾಠ.

ಅತಃ[1] ಸ್ವಾಧ್ಯಾಯಪ್ರವಚನಯೋರಾದರಃ ಕಾರ್ಯಃ । ಸತ್ಯಮಿತಿ ಸತ್ಯಮೇವ ಅನುಷ್ಠೇಯಮ್ ಇತಿ ಸತ್ಯವಚಾಃ । ಸತ್ಯಮೇವ ವಚೋ ಯಸ್ಯ ಸೋಽಯಂ ಸತ್ಯ ವಚಾಃ । ನಾಮ ವಾ ತಸ್ಯ । ರಾಥೀತರಃ ರಥೀತರಸಗೋತ್ರಃ[2] ರಾಥೀತರ ಆಚಾರ್ಯೋ ಮನ್ಯತೇ । ತಪಃ ಇತಿ ತಪ ಏವ ಕರ್ತವ್ಯಮ್ ಇತಿ ತಪೋನಿತ್ಯಃ ತಪಸಿ ನಿತ್ಯಃ ತಪಃ ಪರಃ । ತಪೋನಿತ್ಯ ಇತಿ ವಾ ನಾಮ । ಪೌರುಶಿಷ್ಟಿಃ ಪುರುಶಿಷ್ಟಸ್ಯ ಅಪತ್ಯಂ ಪೌರುಶಿಷ್ಟಿಃ ಆಚಾರ್ಯೋ ಮನ್ಯತೇ । ಸ್ವಾಧ್ಯಾಯಪ್ರವಚನೇ ಏವ ಅನುಷ್ಠೇಯೇ ಇತಿ ನಾಕೋ ನಾಮತಃ ಮುದ್ಗಲಸ್ಯ ಅಪತ್ಯಂ ಮೌದ್ಗಲ್ಯಃ ಆಚಾರ್ಯೋ ಮನ್ಯತೇ। ತದ್ ಹಿ ತಪಃ ತದ್ ಹಿ ತಪಃ । ಯಸ್ಮಾತ್ ಸ್ವಾಧ್ಯಾಯಪ್ರವಚನೇ ಏವ ತಪಃ ತಸ್ಮಾತ್ ತೇ ಏವ ಅನುಷ್ಠೇಯೇ ಇತಿ । ಉಕ್ತಾನಾಮಪಿ ಸತ್ಯತಪಃಸ್ವಾಧ್ಯಾಯಪ್ರವಚನಾನಾಂ ಪುನರ್ಗ್ರಹಣಮ್ ಆದರಾರ್ಥಮ್ ॥

(ಭಾಷ್ಯಾರ್ಥ)

ಈ ಎಲ್ಲಾ ಕರ್ಮಗಳಿಂದೊಡಗೂಡಿದ್ದರೂ ಸ್ವಾಧ್ಯಾಯಪ್ರವಚನಗಳನ್ನು ಯತ್ನಪೂರ್ವಕವಾಗಿ ಅನುಷ್ಠಾನಮಾಡಬೇಕು - ಎಂಬುದನ್ನು (ತಿಳಿಸುವ)ದಕ್ಕಾಗಿ ಪ್ರತಿಯೊಂದರ ಜೊತೆಗೂ ''ಸ್ವಾಧ್ಯಾಯ, ಪ್ರವಚನ'' ಇವುಗಳನ್ನು ಸೇರಿಸಿಕೊಂಡು ಹೇಳಿರುತ್ತದೆ. ಏಕೆಂದರೆ (ವೇದದ) ಅರ್ಥಜ್ಞಾನವು ಅಧ್ಯಯನವನ್ನು ಅವಲಂಬಿಸಿ ಕೊಂಡಿರುತ್ತದೆ[3] ; (ವೇದದ) ಅರ್ಥಜ್ಞಾನವನ್ನು ಪರಮ ಶ್ರೇಯಸ್ಸು[4] ಅವಲಂಬಿಸಿ ಕೊಂಡಿರುತ್ತದೆ. ಪ್ರವಚನವು ಆ (ವೇದವನ್ನು) ಮರೆಯದಿರುವದಕ್ಕಾಗಿ ಮತ್ತು ಧರ್ಮವು ಬೆಳೆಯುವದಕ್ಕಾಗಿ.[5] ಆದ್ದರಿಂದ ಸ್ವಾಧ್ಯಾಯ, ಪ್ರವಚನ - ಇವೆರಡರಲ್ಲಿ (ಹೆಚ್ಚಿನ) ಆದರವನ್ನು ಮಾಡಬೇಕು. 'ಸತ್ಯವು' ಎಂದು ಸತ್ಯವನ್ನೇ ಅನುಷ್ಠಾನ ಮಾಡಬೇಕು ಎಂದು ಸತ್ಯವಚನನಾದ - ಸತ್ಯವಾಗಿಯೇ ಇರುವ ವಾಕ್ಕುಳ್ಳವನು ಯಾವನೋ ಅಂಥವನಾದ್ದರಿಂದ ಸತ್ಯವಚ ಎನ್ನಿಸಿಕೊಂಡಿರುತ್ತಾನೆ ; ಅಥವಾ

1. 'ತತಃ' ಎಂದು ವಾ॥ ಪಾಠ.

2. 'ರಥೀತರಸ್ಯ ಗೋತ್ರಃ' ಎಂದು ಆ॥ ಪಾಠ.

3. ಅಧ್ಯಯನವನ್ನು ಮಾಡದೆ ಇರುವವನಿಗೆ ಅದರ ಅರ್ಥವಿಚಾರಕ್ಕೆ ಅವಕಾಶ ವಿರುವದಿಲ್ಲ.

4. ಮುಕ್ತಿ.

5 ಒಬ್ಬರೊಬ್ಬರಿಗೆ ವೇದವನ್ನು ಹೇಳಿಕೊಡುವದರಿಂದ ಧರ್ಮವು ಬೆಳೆಯುತ್ತದೆ.

ಸತ್ಯವಚನೆಂಬುದು ಅವನ ಹೆಸರು (ಎಂದಾದರೂ ಇಟ್ಟುಕೊಳ್ಳಬಹುದು).[1] ರಾಥೀತರನು, ರಥೀತರನಗೋತ್ರವನಾವ್ವರಿಂದ ರಾಥೀತರನೆನಿಸಿರುವ, (ರಾಥೀತರ ಎಂಬ) ಆಚಾರ್ಯನು ಅಭಿಪ್ರಾಯಪಡುತ್ತಾನೆ. 'ತಪಸ್ಸು' ಎಂದು ತಪಸ್ಸನ್ನೇ ಮಾಡಬೇಕು[2] ಎಂದು ತಪೋನಿತ್ಯನಾದ - ತಪಸ್ಸಿನಲ್ಲಿಯೇ ನಿತ್ಯನಾದ - ತಪಸ್ಸಿನಲ್ಲಿಯೇ ತತ್ಪರನಾಗಿರುವ, ಅಥವಾ ತಪೋನಿತ್ಯನೆಂಬ ಹೆಸರುಳ್ಳ - ಪುರುಶಿಷ್ಟನ ಮಗ ಪೌರುಶಿಷ್ಟಿ ಎಂಬ ಆಚಾರ್ಯನು ಅಭಿಪ್ರಾಯಪಡುತ್ತಾನೆ. ಸ್ವಾಧ್ಯಾಯ, ಪ್ರವಚನ - ಇವೆರಡೇ ಮಾಡಲ್ಪಡತಕ್ಕವುಗಳು - ಎಂದು ನಾಕ ಎಂಬ ಹೆಸರಿನ ಮುದ್ಗಲನ ಮಗನಾದ ಮೌದ್ಗಲ್ಯನೆಂಬ ಆಚಾರ್ಯನು ಅಭಿಪ್ರಾಯಪಡುತ್ತಾನೆ. ಏಕೆಂದರೆ ಅದೇ ತಪಸ್ಸು, ಅದೇ ತಪಸ್ಸು ; ಸ್ವಾಧ್ಯಾಯಪ್ರವಚನಗಳೇ ತಪಸ್ಸು. ಆದ್ದರಿಂದ ಅವೆರಡನ್ನೇ ಅನುಷ್ಠಾನಮಾಡಬೇಕು ಎಂದು (ಆತನ ಮತವು). ಹಿಂದೆಯೇ ಹೇಳಿರುವ ಸತ್ಯ, ತಪಸ್ಸು, ಸ್ವಾಧ್ಯಾಯಪ್ರವಚನಗಳು - ಇವನ್ನು (ಇಲ್ಲಿ) ಮತ್ತೂ ಹೇಳಿರುವದು ಆದರಕ್ಕಾಗಿ.[3]

೧೦. ತ್ರಿಶಂಕುವಿನ ಆರ್ಷದರ್ಶನ

ಅನುವಾಕದ ವಿಷಯ

(ಭಾಷ್ಯ)

೫೬. "ಅಹಂ ವೃಕ್ಷಸ್ಯ ರೇರಿವಾ" ಇತಿ ಸ್ವಾಧ್ಯಾಯಾರ್ಥೋ ಮನ್ತ್ರಾಮ್ನಾಯಃ । ಸ್ವಾಧ್ಯಾಯಶ್ಚ ವಿದ್ಯೋತ್ಪತ್ತ್ಯಯೇ । ಪ್ರಕರಣಾತ್ । ವಿದ್ಯಾರ್ಥಂ ಹಿ ಇದಂ ಪ್ರಕರಣಮ್ । ನ ಚ ಅನ್ಯಾರ್ಥತ್ವಮ್ ಅವಗಮ್ಯತೇ । ಸ್ವಾಧ್ಯಾಯೇನ ಚ ವಿಶುದ್ಧಸತ್ತ್ವಸ್ಯ ವಿದ್ಯೋತ್ಪತ್ತಿರವಕಲ್ಪತೇ ॥

---

1. ಸತ್ಯವನ್ನೇ ಅನುಸರಿಸಬೇಕು ಎಂದು ಉಪದೇಶಮಾಡುವ ಆಚಾರ್ಯನು ಆ ಉಪದೇಶದ ಅನುಭವವನ್ನು ಪಡೆದಿರುವನೆಂಬುದೇ ಸರಿಯಾದ್ದರಿಂದ ಮೊದಲನೆಯ ಅರ್ಥವೇ ಹೆಚ್ಚು ಒಪ್ಪುತ್ತದೆ. ಇದರಂತೆ ಮುಂದೆ ಬರುವ ತಪೋನಿತ್ಯನೆಂಬ ಹೆಸರನ್ನೂ ತಿಳಿಯಬೇಕು. ಇವು ಯೋಗರೂಢನಾಮಗಳಿರಬಹುದು.

2. ತಪಸ್ಸನ್ನೇ ಮುಖ್ಯವಾಗಿ ಮಾಡಬೇಕು ಎಂದರ್ಥ. ಸತ್ಯ, ಸ್ವಾಧ್ಯಾಯಪ್ರವಚನ - ಇವುಗಳ ವಿಷಯವನ್ನೂ ಹೀಗೆಯೇ ತಿಳಿಯಬೇಕು. ಇವುಗಳನ್ನು ಮುಮುಕ್ಷುವು ಪ್ರಧಾನವಾಗಿ ಅನುಷ್ಠಾನಮಾಡಬೇಕು ಎಂದರ್ಥ.

3. ಹಿಂದೆ ಹೇಳಿರುವ ಸಾಧನಗಳಲ್ಲಿ ಇವು ಮುಖ್ಯವೆಂದು ತಿಳಿಸುವದಕ್ಕಾಗಿ ; ಆದರಲ್ಲಿಯೂ ಸ್ವಾಧ್ಯಾಯಪ್ರವಚನಗಳನ್ನು ತಪಸ್ಸೆಂದು ಹೊಗಳಿರುವದರಿಂದ ಅವು ಎಲ್ಲಕ್ಕೂ ಮುಖ್ಯವಾದವು.

(ಭಾಷ್ಯಾರ್ಥ)

"ಅಹಂ ವೃಕ್ಷಸ್ಯ ರೇರಿವಾ" ಎಂಬ ಮಂತ್ರವನ್ನು (ಇಲ್ಲಿ) ಹೇಳಿರುವದು ಸ್ವಾಧ್ಯಾಯಕ್ಕಾಗಿ.[1] ಸ್ವಾಧ್ಯಾಯವು ಜ್ಞಾನವುಂಟಾಗುವದಕ್ಕೆ.[2] ಏಕೆಂದರೆ (ಇದು ಜ್ಞಾನದ) ಪ್ರಕರಣವಾಗಿರುತ್ತದೆ. ಈ ಪ್ರಕರಣವು ಜ್ಞಾನಕ್ಕಾಗಿಯೇ ; ಮತ್ತೊಂದು ಪ್ರಯೋಜನವು (ಇದಕ್ಕೆ ಇದೆ) ಎಂಬುದು ನಿಶ್ಚಿತವಾಗಿರುವದೂ ಇಲ್ಲ.[3] ಸ್ವಾಧ್ಯಾಯದಿಂದ ಸತ್ತ್ವಶುದ್ಧಿಯುಂಟಾದವನಿಗೆ ಜ್ಞಾನವುಂಟಾಗುವದೆಂಬುದು ಯುಕ್ತವಾಗಿರುತ್ತದೆ.

ಅಹಂ ವೃಕ್ಷಸ್ಯ ರೇರಿವಾ । ಕೀರ್ತಿಃ ಪೃಷ್ಠಂ ಗಿರೇರಿವ । ಊರ್ಧ್ವಪವಿತ್ರೋ ವಾಜಿನೀವ ಸ್ವಮೃತಮಸ್ಮಿ । ದ್ರವಿಣಗ್ಂ ಸವರ್ಚಸಮ್ । ಸುಮೇಧಾ ಅಮೃತೋಕ್ಷಿತಃ । ಇತಿ ತ್ರಿಶಙ್ಕೋರ್ವೇದಾನುವಚನಮ್ ॥೧೦॥

೧೦. "ನಾನು ವೃಕ್ಷವನ್ನು ಬೆಳೆಯಿಸತಕ್ಕವನು. (ನನ್ನ) ಕೀರ್ತಿಯು ಪರ್ವತದ ಮೇಲುಭಾಗದಂತೆ (ಎತ್ತರವಾಗಿದೆ). ಪವಿತ್ರವಾದ ಊರ್ಧ್ವವುಳ್ಳ ನಾನು ವಾಜಿಯಲ್ಲಿ ಹೇಗೋ ಹಾಗೆ ಒಳ್ಳೆಯ ಅಮೃತವಾಗಿರುತ್ತೇನೆ. ಕಾಂತಿಯಿಂದ ಕೂಡಿದ ದ್ರವ್ಯವಾಗಿರುತ್ತೇನೆ. ಒಳ್ಳೆಯ ಮೇಧೆಯುಳ್ಳವನು, ಅಮೃತನು, ಸವೆಯದವನು." ಹೀಗೆಂಬುದು ತ್ರಿಶಂಕುವಿನ ವೇದಾನುವಚನವು.

ಮಂತ್ರವು ಜ್ಞಾನವನ್ನು ಹೊರಪಡಿಸುವದು

(ಭಾಷ್ಯ)

೫೭. ಅಹಂ ವೃಕ್ಷಸ್ಯ ಉಚ್ಛ್ರೇದಾತ್ಮಕಸ್ಯ ಸಂಸಾರವೃಕ್ಷಸ್ಯ ರೇರಿವಾ ಪ್ರೇರಯಿತಾ ಅನ್ತರ್ಯಾಮ್ಯಾತ್ಮನಾ ಕೀರ್ತಿಃ ಖ್ಯಾತಿಃ ಗಿರೇಃ ಪೃಷ್ಠಮಿವ ಉಚ್ಛ್ರಿತಾ ಮಮ । ಊರ್ಧ್ವಪವಿತ್ರಃ ಊರ್ಧ್ವಂ ಕಾರಣಂ ಪವಿತ್ರಂ ಪಾವನಂ ಜ್ಞಾನಪ್ರಕಾಶ್ಯಂ[4] ಪರಂ ಬ್ರಹ್ಮ ಯಸ್ಯ ಸರ್ವಾತ್ಮನೋ ಮಮ ಸೋಽಹಮ್ ಊರ್ಧ್ವಪವಿತ್ರಃ । ವಾಜಿನೀವ

---

1. ಜಪಕ್ಕಾಗಿ. ಈ ಮಂತ್ರವನ್ನು ಬ್ರಹ್ಮಯಜ್ಞದಲ್ಲಿ ನಿತ್ಯವೂ ಜಪಿಸುವರು.

2. ಧ್ಯಾನವಾಗಲಿ, ಜ್ಞಾನವಾಗಲಿ ದಕ್ಕುವದಕ್ಕೆ ಸಹಾಯವಾಗುತ್ತದೆ.

3. 'ಇಷೇ ತ್ವಾ' ಮುಂತಾದ ಮಂತ್ರಗಳನ್ನು ಶಾಖಾಚ್ಛೇದವೇ ಮುಂತಾದವುಗಳಲ್ಲಿ ವಿನಿಯೋಗಿಸಿರುವಂತೆ ಈ ಮಂತ್ರವನ್ನು ವೇದದಲ್ಲಿ ಮತ್ತೇತಕ್ಕೂ ವಿನಿಯೋಗಿಸಿಲ್ಲ.

4. ಇದಾದಮೇಲೆ 'ಪವಿತ್ರಮ್' ಎಂಬ ಮಾತು ಆ।। ಪಾಠದಲ್ಲಿ ಹೆಚ್ಚಾಗಿದೆ.

ವಾಜವತೀವ । ವಾಜಮ್ ಅನ್ನಮ್ ; ತದ್ಧತಿ ಸವಿತರೀವ ಇತ್ಯರ್ಥಃ । ಯಥಾ ಸವಿತರಿ ಅಮೃತಮ್ ಆತ್ಮತತ್ತ್ವಂ ವಿಶುದ್ಧಂ ಪ್ರಸಿದ್ಧಂ ಶ್ರುತಿಸ್ಮೃತಿಶತೇಭ್ಯಃ, ಏವಂ ನು ಅಮೃತಂ ಶೋಭನಂ ವಿಶುದ್ಧಮ್ ಆತ್ಮತತ್ತ್ವಮ್ ಅಸ್ಮಿ ಭವಾಮಿ । ದ್ರವಿಣಂ ಧನಂ ಸವರ್ಚಸಂ ವೀಪ್ತಿಮತ್ ತದೇವ ಆತ್ಮತತ್ತ್ವಮ್ ಅಸ್ಮಿ ಇತ್ಯನುವರ್ತತೇ । ಬ್ರಹ್ಮಜ್ಞಾನಂ ವಾ ಆತ್ಮತತ್ತ್ವಪ್ರಕಾಶಕತ್ವಾತ್ ಸವರ್ಚಸಮ್ । ದ್ರವಿಣಮಿವ ದ್ರವಿಣಮ್ । ಮೋಕ್ಷಸುಖಹೇತುತ್ವಾತ್ । ಅಸ್ಮಿನ್ ಪಕ್ಷೇ ''ಪ್ರಾಪ್ತಂ ಮಯಾ'' ಇತ್ಯಧ್ಯಾಹಾರಃ ಕರ್ತವ್ಯಃ । ಸುಮೇಧಾಃ ಶೋಭನಾ ಮೇಧಾ ಸರ್ವಜ್ಞತ್ವಲಕ್ಷಣಾ ಯಸ್ಯ ಮಮ ಸೋಽಹಂ ಸುಮೇಧಾಃ । ಸಂಸಾರ ಸ್ವಿತ್ಯುತ್ಪತ್ತಿಸಂಹಾರ[1]ಕೌಶಲಯೋಗಾತ್ ಸುಮೇಧಸ್ತ್ವಮ್ । ಅತ ಏವ ಅಮೃತಃ ಅಮರಣಧರ್ಮಾ । ಅಕ್ಷಿತಃ ಅಕ್ಷೀಣಃ ಅವ್ಯಯಃ । ಅಕ್ಷತೋ ವಾ । ಅಮೃತೇನ ವಾ ಉಕ್ಷಿತಃ ಸಿಕ್ತಃ । ''ಅಮೃತೋಕ್ಷಿತೋಽಹಮ್'' (?) ಇತ್ಯಾದಿ ಬ್ರಾಹ್ಮಣಮ್ ॥

(ಭಾಷ್ಯಾರ್ಥ)

ನಾನು ವೃಕ್ಷವನ್ನು ಉಚ್ಛೇದಸ್ವಭಾವದ[2] ಸಂಸಾರವೆಂಬ ಮರವನ್ನು ಬೆಳೆಯಿಸ ತಕ್ಕವನು, ಅಂತರ್ಯಾಮಿಯಾಗಿ ಪ್ರೇರಿಸುವಾತನು.[3] ನನ್ನ ಕೀರ್ತಿಯು ಹೆಸರು ವಾಸಿಯು ಬೆಟ್ಟದ ಮೇಲುಭಾಗದಂತೆ[4] ಉನ್ನತವಾಗಿರುವದು ; ಊರ್ಧ್ವಪವಿತ್ರನು ; ಜ್ಞಾನದಿಂದ ಬೆಳಗಲ್ಪಡುವ ಪರಬ್ರಹ್ಮವೇ ಸರ್ವಾತ್ಮನಾದ ನನಗೆ (ಮೂಲರೂಪವಾಗಿರುವದರಿಂದ) ಊರ್ಧ್ವವು ಎಂದರೆ ಕಾರಣವು, ಪವಿತ್ರವು ಎಂದರೆ ಪಾವನವಾಗಿರುವದು ಯಾರಿಗೊ,[5] ಆ ನಾನು ಊರ್ಧ್ವಪವಿತ್ರನು. ವಾಜಿಯಲ್ಲಿ ಹೇಗೋ ಹಾಗೆ ಎಂದರೆ ವಾಜವುಳ್ಳದ್ದರಲ್ಲಿರುವಂತೆ - ವಾಜವೆಂದರೆ ಅನ್ನವು, ಅದನ್ನುಳ್ಳ ಸೂರ್ಯನಲ್ಲಿ ಎಂದರ್ಥ. ಹೇಗೆ ಸೂರ್ಯನಲ್ಲಿ ಅಮೃತವು ಎಂದರೆ ವಿಶುದ್ಧವಾದ ಆತ್ಮತತ್ತ್ವವು

---

1. 'ಉಪಸಂಹಾರ' ಎಂದು ಆ॥ ಪಾಠ ; ಇಲ್ಲಿ ಕೊಟ್ಟಿರುವದು ವಾ॥ ಕಾ॥ ಪಾಠ.

2. 'ವ್ರಶ್ಚೂ ಛೇದನೇ' ಎಂಬ ಧಾತುವಿನಿಂದ ವೃಕ್ಷಶಬ್ದವು ಬಂದಿರುತ್ತದೆ. ಸಂಸಾರವು ಜ್ಞಾನದಿಂದ ನಾಶವಾಗುವದೆಂದು ಈ ವಿಶೇಷಣದಿಂದ ಸೂಚಿತವಾಗಿರುತ್ತದೆ.

3. ಊರ್ಧ್ವಮೂಲವೆಂಬ ಕ. ೨-೩-೧, ಗೀ. ೧೫-೧ ವಿಶೇಷಣವನ್ನು ಇದಕ್ಕೆ ಹೋಲಿಸಿರಿ.

4. ಕೋಡುಗಲ್ಲಿನಂತೆ

5. ಊರ್ಧ್ವವೆಂದರೆ ಕಾರಣವು, ಮೂಲರೂಪವು ಪವಿತ್ರವಾಗಿದೆ ; ನಾನು ನಿಜವಾಗಿ ಅಪವಿತ್ರನಾದ ಸಂಸಾರಿಯಲ್ಲ.

ಇರುವದೆಂದು ನೂರಾರು ಶ್ರುತಿಸ್ಮೃತಿಗಳಿಂದ ಪ್ರಸಿದ್ಧವಾಗಿರುವ ಈ[1] ಇದರಂತೆ ಒಳ್ಳೆಯ ಅಮೃತವು ಎಂದರೆ ಮಂಗಲಕರವಾದ ವಿಶುದ್ಧವಾದ ಆತ್ಮತತ್ತ್ವವು ಆಗಿರುತ್ತೇನೆ, ಎಂದರೆ (ಶುದ್ಧಾಮೃತಸ್ವರೂಪ)ನಾಗಿರುವೆನು.[2] ಕಾಂತಿಯಿಂದ ಕೂಡಿದ ಬೆಳಬೆಳಗುವ ದ್ರವ್ಯವು ಎಂದರೆ ಧನವು, ಅದೇ ಆತ್ಮತತ್ತ್ವವು. 'ಅಸ್ಮಿ' (ಆಗಿರುತ್ತೇನೆ) ಎಂಬ (ಹಿಂದಿನ ವಾಕ್ಯದ ಕ್ರಿಯಾಪದವು ಇಲ್ಲಿಯೂ) ನೇರಿಕೊಳ್ಳುತ್ತದೆ. ಅಥವಾ ಬ್ರಹ್ಮಜ್ಞಾನವು ಆತ್ಮತತ್ತ್ವವನ್ನು ಬೆಳಗುವದರಿಂದ (ಅದನ್ನೇ ಇಲ್ಲಿ) ಕಾಂತಿಯಿಂದ ಕೂಡಿದ್ದು (ಎಂದು ಕರೆದಿದೆ ಎಂದಾದರೂ ಅರ್ಥಮಾಡಬಹುದು). ಮೋಕ್ಷಸುಖಕ್ಕೆ ಕಾರಣವಾಗಿರುವದರಿಂದ (ಅದು) ದ್ರವ್ಯದಂತೆ ಇರುತ್ತದೆ (ಎಂಬುದನ್ನು) ದ್ರವಿಣಮ್ (ಎಂಬ ಮಾತು ತಿಳಿಸುತ್ತದೆ). ಈ (ಎರಡನೆಯ) ಪಕ್ಷದಲ್ಲಿ 'ನನಗೆ ಸಿಕ್ಕಿತು' ಎಂದು ಅಧ್ಯಾಹಾರವನ್ನು ಮಾಡಿಕೊಳ್ಳಬೇಕು.[3] ಸುಮೇಧಾಃ ಒಳ್ಳೆಯ ಸರ್ವಜ್ಞತ್ವರೂಪವಾದ ಜ್ಞಾನವು ಯಾವ ನನಗೆ ಇರುವದೋ ಆ ನಾನು ಸುಮೇಧ(ನೆನಿಸಿರುವೆನು). ಸಂಸಾರದ ಇರವು, ಉಂಟಾಗುವಿಕೆ, ಅಡಗುವಿಕೆ - ಇವುಗಳನ್ನು (ಮಾಡುವ) ಜಾಣತನವಿರುವದರಿಂದ (ನನಗೆ) ಸುಮೇಧಸ್ತ್ವ(ವಿದೆ). ಆದ್ದರಿಂದಲೇ ಅಮೃತನು ಎಂದರೆ ಮರಣಧರ್ಮವಿಲ್ಲದವನು. ಅಕ್ಷಿತನು,[4] ಕ್ಷೀಣನಾಗದೆ ಇರುವವನು, ಸವೆಯದವನು. ಅಥವಾ 'ಅಕ್ಷತಃ' (ಎಂದರೆ) ಗಾಯವಾಗದವನು (ಎಂದಾದರೂ ಅರ್ಥಮಾಡಬಹುದು). ಅಥವಾ ಅಮೃತದಿಂದ ಉಕ್ಷಿತನಾದವನು[5] ಚಿಮುಕಿಸಲ್ಪಟ್ಟವನು (ಎಂದಾದರೂ ಶ್ರುತಿಗೆ ಅರ್ಥವನ್ನು ಮಾಡಬಹುದು). ''ಅಮೃತೋಕ್ಷಿತೋಽಹಮ್'' (?) 'ನಾನು ಅಮೃತದಿಂದ ಅಭಿಷಿಕ್ತನಾದವನು' ಎಂದು ಮುಂತಾಗಿರುವ ಬ್ರಾಹ್ಮಣವು[6] ಇದಕ್ಕೆ ಆಧಾರವು.

ಕರ್ಮವು ಜ್ಞಾನಕ್ಕೆ ಕಾರಣವು

(ಭಾಷ್ಯ)

೫೮. ಇತಿ ಏವಂ ತ್ರಿಶಙ್ಕೋಃ ಋಷೇಃ ಬ್ರಹ್ಮಭೂತಸ್ಯ ಬ್ರಹ್ಮವಿದಃ

1. ಈ ೧೬, ಪ್ರ. ೧-೮, ಮುಂ. ೧-೨-೧೨, ಛಾಂ. ೩ - ಮುಂತಾದ ಶ್ರುತಿಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

2. ಸೂರ್ಯನೆಂಬ ಉತ್ಕೃಷ್ಟವಾದ ಉಪಾಧಿಯಲ್ಲಿರುವ ತತ್ತ್ವವೇ ನನ್ನಲ್ಲಿರುವದು ಎಂದಭಿಪ್ರಾಯ. 3. ಆತ್ಮಜ್ಞಾನವು ದೊರೆತದ್ದರಿಂದ ನಾನು ಧನ್ಯನು.

4. ಅಮೃತಃ ಅಕ್ಷಿತಃ ಎಂದು ಪದಚ್ಛೇದ.

5. ''ಅಮೃತ ಉಕ್ಷಿತಃ'' ಎಂದು ಸಮಸ್ತಪದವಾಗಿಟ್ಟುಕೊಂಡು ಹೇಳಿದ ಅರ್ಥವಿದು.

6. ಈ ಬ್ರಾಹ್ಮಣವು ಯಾವದೆಂಬುದು ತಿಳಿಯದು.

ವೇದಾನುವಚನಮ್ । ವೇದಃ ವೇದನಮ್ ಆತ್ಮೈಕತ್ವವಿಜ್ಞಾನಮ್ । ತಸ್ಯಾಪ್ತಿಮ್ ಅನು ವಚನಮ್ ವೇದಾನುವಚನಮ್ । ಆತ್ಮನಃ ಕೃತಕೃತ್ಯತಾಪ್ರಖ್ಯಾಪನಾರ್ಥಂ ವಾಮದೇವವತ್ । ತ್ರಿಶಙ್ಕೋರಾರ್ಷೇಣ ದರ್ಶನೇನ ದೃಷ್ಟಃ ಮನ್ತ್ರಾಮ್ನಾಯಃ ಆತ್ಮವಿದ್ಯಾಪ್ರಕಾಶಕ ಇತ್ಯರ್ಥಃ । ಅಸ್ಯ ಚ ಜಪೋ ವಿದ್ಯೋತ್ಪತ್ತ್ಯರ್ಥೋಽವಗಮ್ಯತೇ[1] । "ಋತಂ ಚ" ಇತ್ಯಾದಿ ಕರ್ಮೋಪನ್ಯಾಸಾತ್[2] ಅನನ್ತರಂ ಚ ವೇದಾನುವಚನಪಾಠಾತ್ ವಿತದವಗಮ್ಯತೇ - ಏವಂ ಶ್ರೌತಸ್ಮಾರ್ತೇಷು ನಿತ್ಯೇಷು ಕರ್ಮಸು ಯುಕ್ತಸ್ಯ ನಿಷ್ಕಾಮಸ್ಯ ಪರಂ ಬ್ರಹ್ಮ ವಿವಿದಿಷೋಃ ಆರ್ಷಾಣಿ ದರ್ಶನಾನಿ ಪ್ರಾದುರ್ಭವನ್ತಿ ಆತ್ಮಾದಿವಿಷಯಾಣಿ ಇತಿ ॥

(ಭಾಷ್ಯಾರ್ಥ)

ಹೀಗೆಂದು ಈ ಪ್ರಕಾರವಾಗಿ **ತ್ರಿಶಂಕು** ಎಂಬ ಬ್ರಹ್ಮಸ್ವರೂಪವನ್ನು ಪಡೆದುಕೊಂಡ ಬ್ರಹ್ಮಜ್ಞಾನಿಯಾದ ಋಷಿಯ ವೇದಾನುವಚನವು. ವೇದ ಎಂದರೆ ತಿಳಿವು, ಆತ್ಮನು ಒಬ್ಬನೇ (ಸತ್ಯ) ಎಂಬ ಜ್ಞಾನ ; ಆ (ಜ್ಞಾನ)ವನ್ನು ಪಡೆದು ಕೊಂಡಮೇಲೆ ಹೇಳಿದ್ದು ವೇದಾನುವಚನವು. ತಾನು ಕೃತಕೃತ್ಯನೆಂದು ತಿಳಿಯಪಡಿಸುವದಕ್ಕಾಗಿ **ವಾಮದೇವನಂತೆ**[3] ತ್ರಿಶಂಕುವಿನ ಆರ್ಷದರ್ಶನದಿಂದ[4] ಆತ್ಮಜ್ಞಾನವನ್ನು ಬೆಳಗುವ ಈ ಮಂತ್ರಾಮ್ನಾಯವು ಕಂಡುಹಿಡಿಯಲ್ಪಟ್ಟಿತು - ಎಂದರ್ಥ.

ಇದನ್ನು ಜಪಮಾಡುವದು ವಿದ್ಯೋತ್ಪತ್ತಿ ಎಂಬ ಪ್ರಯೋಜನವುಳ್ಳದ್ದೆಂದು ನಿಶ್ಚಯಿಸಬೇಕಾಗಿದೆ.[5] 'ಋತಂ ಚ' ಎಂದು(ಮುಂತಾಗಿ) ಕರ್ಮಗಳನ್ನು ಉಪದೇಶ ಮಾಡಿದಬಳಿಕ[6] (ಈ) ವೇದಾನುವಚನವನ್ನು ಪಠಿಸಿರುವದರಿಂದ ಹೀಗೆಂದು ಗೊತ್ತಾಗುತ್ತದೆ. ಏಕೆಂದರೆ : ಈ ರೀತಿಯಲ್ಲಿ ಶ್ರೌತಸ್ಮಾರ್ತನಿತ್ಯಕರ್ಮಗಳನ್ನು ಮಾಡುವದರಲ್ಲಿ

1. 'ಅಧಿಗಮ್ಯತೇ' ಎಂದು ವಾ॥ ಪಾಠ.

2. 'ಧರ್ಮೋಪನ್ಯಾಸಾತ್' ಎಂದು ವಾ॥ ಪಾಠ.

3. ವಾಮದೇವನ ಆರ್ಷದರ್ಶನದ ವಚನವು ಐತರೇಯ (೨-೪), ಬೃಹದಾರಣ್ಯಕ (೧-೪-೧೦) - ಈ ಉಪನಿಷತ್ತುಗಳಲ್ಲಿ ಕಂಡುಬರುತ್ತದೆ.

4. ಧ್ಯಾನಮಗ್ನರಾದವರಿಗೆ ತಾನೇ ತೋರಿಕೊಳ್ಳುವ ಮಂತ್ರಜ್ಞಾನಕ್ಕೆ 'ಆರ್ಷದರ್ಶನ' ವೆಂದು ಹೆಸರು.

5. ವಿದ್ಯಾಪ್ರಕರಣದಲ್ಲಿ ಹೇಳಿರುವದು, ಮಂತ್ರಕ್ಕೆ ಮತ್ತೊಂದು ವಿನಿಯೋಗವಿಲ್ಲದಿರುವದು - ಈ ಕಾರಣಗಳಿಂದ ಈ ಪ್ರಯೋಜನವು ನಿಶ್ಚಿತವಾಗುತ್ತದೆ ಎಂದು ಮೇಲೆ ಹೇಳಿದೆ.

6. ಋತ, ಸತ್ಯ, ಸ್ವಾಧ್ಯಾಯ - ಮುಂತಾದವುಗಳನ್ನು ಮುಮುಕ್ಷುವಾದವನು ಅನುಷ್ಠಾನ ಮಾಡಬೇಕೆಂದು ಹೇಳಿದಮೇಲೆ ಈ ಮಂತ್ರಜಪವನ್ನು ವಿಧಿಸಿರುವದರಿಂದ ಇದಕ್ಕೆ ಆರ್ಷದರ್ಶನವೇ ಪ್ರಯೋಜನವೆಂದು ನಿಶ್ಚಯಿಸಬೇಕು.

ನಿರತನಾಗಿ ನಿಷ್ಕಾಮನಾಗಿ ಪರಬ್ರಹ್ಮವನ್ನು ತಿಳಿದುಕೊಳ್ಳಬೇಕೆಂದಿರುವಾತನಿಗೆ[1] ಆತ್ಮನೇ ಮುಂತಾದ[2] ವಿಷಯದ (ಈ ಬಗೆಯ) ಅರ್ಥದರ್ಶನಗಳು ಹೊರತೋರಿ ಕೊಳ್ಳುತ್ತವೆ.

೧೧. ಕರ್ಮಗಳನ್ನು ಅವಶ್ಯವಾಗಿ ಮಾಡಬೇಕು

ಅನುವಾಕದ ವಿಷಯ

(ಭಾಷ್ಯ)

೫೯. 'ವೇದಮನೂಚ್ಯ' ಇತ್ಯೇವಮಾದಿಕರ್ತವ್ಯೋಪದೇಶಾರಮ್ಭಃ[3] ಪ್ರಾಗ್ ಬ್ರಹ್ಮವಿಜ್ಞಾನಾತ್ ನಿಯಮೇನ ಕರ್ತವ್ಯಾನಿ ಶ್ರೌತಸ್ಮಾರ್ತಕರ್ಮಾಣಿ ಇತ್ಯೇವ ಮರ್ಥಃ । ಅನುಶಾಸನಶ್ರುತೇಃ ಪುರುಷಸಂಸ್ಕಾರಾರ್ಥತ್ವಾತ್ । ಸಂಸ್ಕೃತಸ್ಯ ಹಿ ವಿಶುದ್ಧಸತ್ತ್ವಸ್ಯ ಆತ್ಮಜ್ಞಾನಮ್ ಅಞ್ಜಸೈವ ಉತ್ಪದ್ಯತೇ । ''ತಪಸಾ ಕಲ್ಮಷಂ ಹನ್ತಿ ವಿದ್ಯಯಾಽಮೃತಮಶ್ನುತೇ'' (ಮನು. ೧೨-೧೦೪) ಇತಿ ಹಿ ಸ್ಮೃತಿಃ । ವಕ್ಷ್ಯತಿ ಚ ''ತಪಸಾ ಬ್ರಹ್ಮ ವಿಜಿಜ್ಞಾಸಸ್ವ'' (೩-೧) ಇತಿ । ಅತೋ ವಿದ್ಯೋತ್ಪತ್ತ್ಯರ್ಥಮ್ ಅನುಷ್ಠೇಯಾನಿ ಕರ್ಮಾಣಿ । 'ಅನುಶಾಸ್ತಿ' ಇತ್ಯನುಶಾಸನಶಬ್ದಾತ್ । ಅನುಶಾಸನಾತಿಕ್ರಮೇ ಹಿ ದೋಷೋತ್ಪತ್ತಿಃ । ಪ್ರಾಗುಪನ್ಯಾಸಾಚ್ಚ ಕರ್ಮಣಾಮ್ । ಕೇವಲಬ್ರಹ್ಮವಿದ್ಯಾರಮ್ಭಾಚ್ಚ ಪೂರ್ವಂ ಕರ್ಮಾಣಿ ಉಪನ್ಯಸ್ತಾನಿ । ಉದಿತಾಯಾಂ ಚ ವಿದ್ಯಾಯಾಮ್[4] ''ಅಭಯಂ ಪ್ರತಿಷ್ಠಾಂ ವಿನ್ದತೇ'' (೨-೭), ''ನ ಬಿಭೇತಿ ಕುತಶ್ಚನ'' (೨-೯), ''ಕಿಮಹಂ ಸಾಧು ನಾಕರವಮ್'' (೨-೯) - ಇತ್ಯೇವಮಾದಿನಾ ಕರ್ಮನೈಷ್ಕರ್ಮ್ಯಾತ್ಮ್ಯಂ ದರ್ಶಯಿಷ್ಯತಿ ಇತ್ಯತೋಽವಗಮ್ಯತೇ - ಪೂರ್ವೋಪಚಿತದುರಿತಕ್ಷಯದ್ವಾರೇಣ ವಿದ್ಯೋತ್ಪತ್ತ್ಯರ್ಥಾನಿ ಕರ್ಮಾಣಿ ಇತಿ । ಮನ್ತ್ರವರ್ಣಾಚ್ಚ ''ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ'' (ಈ. ಮಾ. ೧೪) ಇತಿ ॥

1. ಮಿಕ್ಕವರಿಗೆ ಆಶ್ರಮಕರ್ಮವನ್ನು ಮಾಡಿದಂತೆ ಆಗುತ್ತದೆ.

2. ಮುಂತಾದ ಎಂದರೆ ಹಿರಣ್ಯಗರ್ಭಸ್ವರೂಪ, ಧರ್ಮಸ್ವರೂಪ - ಮುಂತಾದವು. ಇಂಥ ಉತ್ತಮಪ್ರಯೋಜನವಿರುವದರಿಂದ ಮುಮುಕ್ಷುವಿಗೂ ಕರ್ಮಗಳು ಬೇಕು ಎಂದು ಒಟ್ಟಿಗರ್ಥ.

3. 'ಕರ್ತವ್ಯತೋಪದೇಶಾರಮ್ಭಃ' ಎಂದು ಮುದ್ರಿತಪುಸ್ತಕಗಳಲ್ಲಿದೆ ; 'ಕರ್ತವ್ಯೋಪದೇಶಾರಮ್ಭಃ' ಎಂದಿದ್ದರೇ ಸಾಕೆಂದು ತೋರುತ್ತದೆ.

4. 'ಬ್ರಹ್ಮವಿದ್ಯಾಯಾಮ್' ಎಂದು ವಾ॥ ಕಾ॥ ಗೋ॥ ಪಾಠ. ಅರ್ಥದಲ್ಲಿ ಏನೂ ಹೆಚ್ಚುಕಡಿಮೆಯಿಲ್ಲ.

(ಭಾಷ್ಯಾರ್ಥ)

'ವೇದಮನೂಚ್ಯ' ಮುಂತಾಗಿ ಕರ್ತವ್ಯವನ್ನು ಉಪದೇಶಿಸುವದಕ್ಕೆ ಮೊದಲು ಮಾಡಿರುವದು 'ಬ್ರಹ್ಮವಿಜ್ಞಾನವು (ಉಂಟಾಗುವ) ಮುಂಚೆ ಶ್ರೌತಸ್ಮಾರ್ತಕರ್ಮಗಳನ್ನು ನಿಯಮದಿಂದ ಮಾಡುತ್ತಲೇ ಇರಬೇಕು' - ಎಂಬ ಉದ್ದೇಶದಿಂದ. ಏಕೆಂದರೆ (ಇಲ್ಲಿ ಹೇಳಿರುವ) ಅನುಶಾಸನಶ್ರುತಿಗೆ ಪುರುಷಸಂಸ್ಕಾರವೇ ಪ್ರಯೋಜನವಾಗಿರುತ್ತದೆ. ಸಂಸ್ಕಾರವನ್ನು ಹೊಂದಿ ಸತ್ತ್ವಶುದ್ಧಿಯನ್ನು ಪಡೆದವನಿಗೇ ಅಲ್ಲವೆ, ಆತ್ಮಜ್ಞಾನವು ತಾನೇ[1] ಉಂಟಾಗುತ್ತದೆ ? ''ತಪಸ್ಸಿನಿಂದ ಕಲ್ಮಷವನ್ನು ನಾಶಗೊಳಿಸಿ ಕೊಳ್ಳುತ್ತಾನೆ, ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ'' (ಮನು. ೧೨-೧೦೪) ಎಂದು ಸ್ಮೃತಿಯಿರುತ್ತದೆ.[2] ''ತಪಸ್ಸಿನಿಂದ ಬ್ರಹ್ಮವನ್ನು ತಿಳಿಯಲಿಳಸುವನಾಗು'' (೩-೧) ಎಂದು ಮುಂದೆ (ಈ ಉಪನಿಷತ್ತಿನಲ್ಲಿ) ಹೇಳಿಯೂ ಇರುತ್ತದೆ.[3] ಆದ್ದರಿಂದ ಜ್ಞಾನವುಂಟಾಗುವದಕ್ಕಾಗಿ ಕರ್ಮಗಳನ್ನು ಮಾಡಬೇಕು. 'ಅಪ್ಪಣೆ ಮಾಡಬೇಕು' ಎಂದು ಅಪ್ಪಣೆ ಎಂಬ ಶಬ್ದವನ್ನು ಉಪಯೋಗಿಸಿರುವದರಿಂದಲೂ (ಹೀಗೆಂದು ತಿಳಿಯಬೇಕು) ; ಏಕೆಂದರೆ ಅಪ್ಪಣೆಯನ್ನು ಮೀರಿದರೆ ದೋಷವುಂಟಾಗುತ್ತದೆ.[4] ಕರ್ಮಗಳನ್ನು ಮೊದಲು ಹೇಳಿರುವದರಿಂದಲೂ (ಹೀಗೆ) ಕೇವಲ ಬ್ರಹ್ಮವಿದ್ಯೆಯನ್ನು[5] (ಹೇಳುವದಕ್ಕೆ) ಆರಂಭಿಸುವ ಮುಂಚೆ (ಇಲ್ಲಿ) ಕರ್ಮಗಳನ್ನು ಹೇಳಿರುತ್ತದೆ. ವಿದ್ಯೆಯು ಹುಟ್ಟಿದಮೇಲೋ ? - ಎಂದರೆ ''ಅಂಜಿಕೆಯಿಲ್ಲದ ಪ್ರತಿಷ್ಠೆಯನ್ನು ಹೊಂದುವನು'' (೨-೭), ''ಏತಕ್ಕೂ ಅಂಜುವದಿಲ್ಲ'' (೨-೯), ''ನಾನು ಏತಕ್ಕೆ ಪುಣ್ಯವನ್ನು ಮಾಡಲಿಲ್ಲ ? (ಎಂದು ಜ್ಞಾನಿಯು ತಪಿಸುವದಿಲ್ಲ)'' (೨-೯) - ಎಂಬುದೇ ಮುಂತಾದ (ವಚನ)ಗಳಿಂದ ಕರ್ಮಗಳು ಒಂದಿಷ್ಟೂ ಇರುವದಿಲ್ಲ

1. ಅಡ್ಡಿಯಿಲ್ಲದೆ ಉಂಟಾಗುತ್ತದೆ ; ಆದ್ದರಿಂದ ಜ್ಞಾನವುಂಟಾಗುವದಕ್ಕಾಗಿ ಕರ್ಮವನ್ನು ತಪ್ಪದೆ ಮಾಡಬೇಕು ಎಂಬ ನಿಯಮವು ವಿರ್ಪಡುತ್ತದೆ.

2. ''ತಪೋ ವಿದ್ಯಾ ಚ ವಿಪ್ರಸ್ಯ ನಿಶ್ಶ್ರೇಯಸಕರಂ ಪರಮ್'' ಎಂಬುದು ಪೂರ್ವಾರ್ಧ. ಇಲ್ಲಿ ತಪಸ್ಸೆಂದರೆ ಸ್ವಧರ್ಮಾಚರಣೆ.

3. ಭೃಗುವಲ್ಲಿಯ ಭಾಷ್ಯದಲ್ಲಿ ತಪಸ್ಸೆಂದರೆ ಮನಸ್ಸು, ಇಂದ್ರಿಯಗಳು - ಇವುಗಳ ಸಂಯಮವೆಂದು ಹೇಳಿದೆ. ಆ ಸಂಯಮವೂ ಸ್ವಧರ್ಮಾಚರಣೆಯಿಂದಲೇ ಉಂಟಾಗುವದೆಂಬ ಅಭಿಪ್ರಾಯದಿಂದ ಈ ವಾಕ್ಯವನ್ನು ಇಲ್ಲಿ ಉದಾಹರಿಸಿರಬಹುದೆಂದು ತೋರುತ್ತದೆ.

4. ಅನುಶಾಸ್ತಿ ಎಂದರೆ ಅಪ್ಪಣೆಮಾಡಬೇಕು ಎಂದು ಒಟ್ಟುಶಬ್ದದ ಅರ್ಥ.

5. ಕರ್ಮಸಂಬಂಧವಿಲ್ಲದ ಶುದ್ಧಬ್ರಹ್ಮಜ್ಞಾನವನ್ನು.

ವೆಂಬುದನ್ನು ಮುಂದೆ ತಿಳಿಸುತ್ತದೆಯಾದ್ದರಿಂದ[1] ಹಿಂದೆ ಕೂಡಿಹಾಕಿಕೊಂಡಿದ್ದ ಪಾಪವನ್ನು ಕ್ಷಯಗೊಳಿಸುವ ಮೂಲಕ ಕರ್ಮಗಳು ಜ್ಞಾನವುಂಟಾಗುವದಕ್ಕೆ (ಕಾರಣವಾಗುತ್ತವೆ) ಎಂದು ನಿಶ್ಚಿತವಾಗುತ್ತದೆ. ''ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ'' (ಈ. ಮಾ. ೧೪) ಎಂದು ಮಂತ್ರವರ್ಣವೂ[2] ಹೇಳುತ್ತದೆ.

ಕರ್ಮವನ್ನು ಎರಡುಸಲ ಉಪದೇಶಿಸಿರುವದರ ಉದ್ದೇಶ

(ಭಾಷ್ಯ)

೬೦. ಋತಾದೀನಾಂ ಪೂರ್ವತ್ರೋಪದೇಶಃ ಆನರ್ಥಕ್ಯಪರಿಹಾರಾರ್ಥಃ । ಇಹ ತು ಜ್ಞಾನೋತ್ಪತ್ತ್ಯರ್ಥತ್ವಾತ್ ಕರ್ತವ್ಯತಾನಿಯಮಾರ್ಥಃ ॥

(ಭಾಷ್ಯಾರ್ಥ)

ಋತವೇ ಮುಂತಾದವನ್ನು ಹಿಂದೆ (೯ನೆಯ ಅನುವಾಕದಲ್ಲಿ) ಉಪದೇಶಿಸಿರುವದು (ಕರ್ಮಗಳಿಗೆ) ಆನರ್ಥಕ್ಯವನ್ನು ಪರಿಹರಿಸುವದಕ್ಕೆ.[3] ಆದರೆ ಇಲ್ಲಿ (ಉಪದೇಶಿಸಿರುವದು ಅವುಗಳು) ಜ್ಞಾನವುಂಟಾಗುವದಕ್ಕೆ ಕಾರಣವಾಗಿರುವದರಿಂದ (ಅವನ್ನು) ಮಾಡಲೇಬೇಕು (ಎಂದು) ನಿಯಮಿಸುವದಕ್ಕೆ.[4]

ವೇದಮನೂಚ್ಯಾಚಾರ್ಯೋಽನ್ತೇವಾಸಿನಮನುಶಾಸ್ತಿ । ಸತ್ಯಂ ವದ । ಧರ್ಮಂ ಚರ । ಸ್ವಾಧ್ಯಾಯಾನ್ಮಾ ಪ್ರಮದಃ । ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತನ್ತುಂ ಮಾ ವ್ಯವಚ್ಛೇತ್ಸೀಃ । ಸತ್ಯಾನ್ನ ಪ್ರಮದಿತವ್ಯಮ್ । ಧರ್ಮಾನ್ನ ಪ್ರಮದಿತವ್ಯಮ್ । ಕುಶಲಾನ್ನ ಪ್ರಮದಿತವ್ಯಮ್ । ಭೂತ್ಯೈ ನ ಪ್ರಮದಿತವ್ಯಮ್ । ಸ್ವಾಧ್ಯಾಯ

1. ಕರ್ಮವು ಜ್ಞಾನದೊಡನೆ ಇರುವದಿಲ್ಲವೆಂದು ಮುಂದೆ ಹೇಳಿದೆ ; ಇದ್ದರಿಂದ ಅವಶ್ಯವಾಗಿ ಕರ್ಮವನ್ನು ಮಾಡಬೇಕೆಂದು ಹೇಳಿದೆ. ಆದ್ದರಿಂದ ಕರ್ಮಗಳು ಜ್ಞಾನೋತ್ಪತ್ತಿಯ ಮೂಲಕವಾಗಿಯೇ ಮೋಕ್ಷಕಾರಣವೆಂದು ಹೇಳಿದಂತೆ ಆಯಿತು. ಸೂ. ಭಾ. ೩-೪-೨೬.

2. ಈ ಮಂತ್ರದಲ್ಲಿ ಅವಿದ್ಯೆಯೆಂದರೆ ಶಾಸ್ತ್ರೀಯಕರ್ಮವು, ಮೃತ್ಯುವೆಂದರೆ ಪಾಪವು.

3. ಉಪಾಸನೆಯನ್ನೂ ನಿಷ್ಕಾಮಕರ್ಮವನ್ನೂ ಮಾಡಿದವರಿಗೆ ಕಾಲಾಂತರಮುಕ್ತಿಯು ದೊರೆಯುತ್ತದೆ, ಆ ಕರ್ಮವು ನಿರರ್ಥಕವಾಗುವದಿಲ್ಲ ಎಂದು ತಿಳಿಸುವದಕ್ಕೆ.

4. ಚಿತ್ತಶುದ್ಧಿಯ ಮೂಲಕವಾಗಿ ಸದ್ಯೋಮುಕ್ತಿಗೆ ಕಾರಣವಾದ ಜ್ಞಾನವುಂಟಾಗುವದರಿಂದ ಮಾಡಲೇಬೇಕೆಂದು ತಿಳಿಸುವದಕ್ಕೆ.

ಪ್ರವಚನಾಭ್ಯಾಂ ನ ಪ್ರಮದಿತವ್ಯಮ್ । ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್ । ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋ ಭವ । ಅತಿಥಿದೇವೋ ಭವ । ಯಾನ್ಯನವದ್ಯಾನಿ ಕರ್ಮಾಣಿ । ತಾನಿ ಸೇವಿತವ್ಯಾನಿ । ನೋ ಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿ ತ್ವಯೋಪಾಸ್ಯಾನಿ । ನೋ ಇತರಾಣಿ । ಯೇ ಕೇ ಚಾಸ್ಮಚ್ಛ್ರೇಯಾಗ್ಂಸೋ ಬ್ರಾಹ್ಮಣಾಃ । ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಮ್ । ಶ್ರದ್ಧಯಾ ದೇಯಮ್ । ಅಶ್ರದ್ಧಯಾಽ ದೇಯಮ್ । ಶ್ರಿಯಾ ದೇಯಮ್ । ಹ್ರಿಯಾ ದೇಯಮ್ । ಭಿಯಾ ದೇಯಮ್ । ಸಂವಿದಾ ದೇಯಮ್ । ಅಥ ಯದಿ ತೇ ಕರ್ಮವಿಚಿಕಿತ್ಸಾ ವಾ ವೃತ್ತವಿಚಿಕಿತ್ಸಾ ವಾ ಸ್ಯಾತ್ । ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮಕಾಮಾಃ ಸ್ಯುಃ । ಯಥಾ ತೇ ತತ್ರ ವರ್ತೇರನ್ । ತಥಾ ತತ್ರ ವರ್ತೇಥಾಃ । ಅಥಾಭ್ಯಾಖ್ಯಾತೇಷು । ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮಕಾಮಾಃ ಸ್ಯುಃ । ಯಥಾ ತೇ ತೇಷು ವರ್ತೇರನ್ । ತಥಾ ತೇಷು ವರ್ತೇಥಾಃ । ಏಷ ಆದೇಶಃ । ಏಷ ಉಪದೇಶಃ । ಏಷಾ ವೇದೋಪನಿಷತ್ । ಏತದನುಶಾಸನಮ್ । ಏವಮುಪಾಸಿತವ್ಯಮ್ । ಏವಮು ಚೈತದುಪಾಸ್ಯಮ್ ॥೧೧॥

೧೧. ವೇದವನ್ನು ಹೇಳಿಕೊಟ್ಟು ಆಚಾರ್ಯನು ಅಂತೇವಾಸಿಗೆ (ಹೀಗೆಂದು) ಅನುಶಾಸನಮಾಡಬೇಕು. ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು, ಸ್ವಾಧ್ಯಾಯವನ್ನು ಮರೆಯಬೇಡ. ಆಚಾರ್ಯನಿಗೆ ಪ್ರಿಯವಾದ ಧನವನ್ನು ತೆಗೆದಿಟ್ಟು ಪ್ರಜಾತಂತುವನ್ನು ಕಡಿದುಹೋಗಲೀಯದಿರು. ಸತ್ಯವನ್ನು ಮರೆಯಬಾರದು, ಧರ್ಮವನ್ನು ಮರೆಯಬಾರದು, ಕುಶಲವನ್ನು ಮರೆಯ ಬಾರದು, ಭೂತಿಯನ್ನು ಮರೆಯಬಾರದು. ಸ್ವಾಧ್ಯಾಯಪ್ರವಚನಗಳನ್ನು ಮರೆಯಬಾರದು. ಮಾತೃದೇವನಾಗಿರು, ಪಿತೃದೇವನಾಗಿರು, ಆಚಾರ್ಯ ದೇವನಾಗಿರು, ಅತಿಥಿದೇವನಾಗಿರು. ಯಾವ ಕರ್ಮಗಳು ನಿಂದಿತವಲ್ಲವೋ ಅವುಗಳನ್ನು ಸೇವಿಸಬೇಕು, ಉಳಿದವನ್ನು (ಸೇವಿಸ)ಬಾರದು. ಯಾವವು ನಮ್ಮ ಒಳ್ಳೆಯ ನಡತೆಗಳೋ ಅವುಗಳನ್ನು ನೀನು ಉಪಾಸನೆಮಾಡಬೇಕು, ಉಳಿದವನ್ನು (ಉಪಾಸನೆಮಾಡ)ಬಾರದು. ಯಾವಯಾವ ಬ್ರಾಹ್ಮಣರು-

ನಮಗಿಂತ ಉತ್ತಮರೋ ಅವರಿಗೆ ಆಸನವನ್ನು ಕೊಟ್ಟು, ನೀನು ಆದರ ಮಾಡಬೇಕು. ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಕೊಡಬಾರದು. ಶ್ರೀಯಿಂದ ಕೊಡಬೇಕು, ನಾಚಿಕೆಯಿಂದ ಕೊಡಬೇಕು, ಹೆದರಿಕೆಯಿಂದ ಕೊಡ ಬೇಕು. ತಿಳಿವಳಿಕೆಯಿಂದ ಕೊಡಬೇಕು. ಇನ್ನು ನಿನಗೆ ಕರ್ಮವಿಚಿಕಿತ್ಸೆಯಾಗಲಿ ವೃತ್ತವಿಚಿಕಿತ್ಸೆಯಾಗಲಿ ಉಂಟಾಗುವದಾದರೆ ಯಾರು ಅಲ್ಲಿ ಸಮ್ಮರ್ಶಿಗಳಾ ಗಿಯೂ ಯುಕ್ತರಾಗಿಯೂ ಅಯುಕ್ತರಾಗಿಯೂ ಅಲೂಕ್ಷರಾಗಿಯೂ ಧರ್ಮ ಕಾಮರಾಗಿಯೂ ಇರುವ ಬ್ರಾಹ್ಮಣರಿರುವರೋ ಅವರು ಹೇಗೆ ಅಲ್ಲಿ ವರ್ತಿಸುವರೋ ಹಾಗೆ ಅಲ್ಲಿ ವರ್ತಿಸು. ಇನ್ನು ಅಭ್ಯಾಖ್ಯಾತರ ವಿಷಯದಲ್ಲಿ ಯಾರು ಅಲ್ಲಿ ಸಮ್ಮರ್ಶಿಗಳಾಗಿಯೂ ಯುಕ್ತರಾಗಿಯೂ ಅಯುಕ್ತರಾಗಿಯೂ ಅಲೂಕ್ಷರಾಗಿಯೂ ಧರ್ಮಕಾಮರಾಗಿಯೂ ಇರುವ ಬ್ರಾಹ್ಮಣರಿರುವರೋ ಅವರು ಅವರಲ್ಲಿ ಹೇಗೆ ವರ್ತಿಸುವರೋ ಹಾಗೆ ಅವರಲ್ಲಿ ವರ್ತಿಸು. ಇದು ಆದೇಶವು, ಇದು ಉಪದೇಶವು, ಇದು ವೇದೋಪನಿಷತ್ತು, ಇದು ಅನುಶಾಸ ನವು ; ಹೀಗೆ ಉಪಾಸನೆಮಾಡತಕ್ಕದ್ದು, ಇದು ಹೀಗೆಯೇ ಉಪಾಸನೆ ಮಾಡತಕ್ಕದ್ದು.

(ಭಾಷ್ಯ)

೬೧. ವೇದಮ್ ಅನೂಚ್ಯ ಅಧ್ಯಾಪ್ಯ ಆಚಾರ್ಯಃ ಅನ್ತೇವಾಸಿನಂ ಶಿಷ್ಯಮ್ ಅನುಶಾಸ್ತಿ ಗ್ರನ್ಥಗ್ರಹಣಾತ್ ಅನು ಪಶ್ಚಾತ್ ಶಾಸ್ತಿ ತದರ್ಥಂ ಗ್ರಾಹಯತಿ ಇತ್ಯರ್ಥಃ । ಅತೋಽವಗಮ್ಯತೇ ಅಧೀತವೇದಸ್ಯ ಧರ್ಮಜಿಜ್ಞಾಸಾಮ್ ಅಕೃತ್ವಾ ಗುರುಕುಲಾತ್ ನ ಸಮಾವರ್ತಿತವ್ಯಮ್ ಇತಿ । "ಬುದ್ಧ್ವಾ ಕರ್ಮಾಣಿ ಚಾರಭೇತ್" (?) ಇತಿ ಸ್ಮೃತೇಶ್ಚ ॥

(ಭಾಷ್ಯಾರ್ಥ)

ವೇದವನ್ನು ಹೇಳಿಕೊಟ್ಟು, ಎಂದರೆ ಅಧ್ಯಯನಮಾಡಿಸಿ ಆಚಾರ್ಯನು ಅಂತೇವಾಸಿಗೆ ಎಂದರೆ ಶಿಷ್ಯನಿಗೆ (ಹೀಗೆಂದು) ಅನುಶಾಸನಮಾಡಬೇಕು. 'ಅನು' ಗ್ರಂಥವನ್ನು (ಶಿಷ್ಯನು) ಕಲಿತುಕೊಂಡಮೇಲೆ ಆ ಬಳಿಕ 'ಶಾಸ್ತಿ' ಅದರ ಅರ್ಥವನ್ನು ಕಲಿಸಬೇಕು[1] - ಎಂದರ್ಥ. ವೇದವನ್ನು ಅಧ್ಯಯನಮಾಡಿದವನು

1. 'ಅನುಶಾಸ್ತಿ' ಎಂಬುದನ್ನು ವಿಧಿಯಾಗಿ ಭಾವಿಸಬೇಕೆಂಬ ಭಾಷ್ಯಹೃದಯಕ್ಕನು ಗುಣವಾಗಿ ಕನ್ನಡಿಸಿದೆ. ಅನುಶಾಸ್ತಿ ಎಂಬುದರ ಅವಯವಾರ್ಥವಿದು.

ಧರ್ಮಜಿಜ್ಞಾಸೆಯನ್ನು ಮಾಡದೆ ಗುರುಕುಲದಿಂದ ಸಮಾವರ್ತನೆಮಾಡಬಾರದು[1] ಎಂದು ಇದರಿಂದ ನಿಶ್ಚಿತವಾಗುತ್ತದೆ.[2] ''ತಿಳಿದುಕೊಂಡು ಕರ್ಮಗಳನ್ನು ಆರಂಭಿಸ ಬೇಕು'' (?) ಎಂಬ ಸ್ಮೃತಿಯಿಂದಲೂ (ಹೀಗೆಂದು ನಿಶ್ಚಿತವಾಗುತ್ತದೆ).

ಸತ್ಯಾದಿಗಳನ್ನು ಅನುಷ್ಠಾನಮಾಡಬೇಕು

(ಭಾಷ್ಯ)

೬೨. ಕಥಮ್ ಅನುಶಾಸ್ತೀತಿ । ಅತ[3] ಆಹ - ಸತ್ಯಂ ವದ ಯಥಾ ಪ್ರಮಾಣಾವಗತಂ ವಕ್ತವ್ಯಮ್[4] ತತ್ ವದ । ತದ್ಯತ್ ಧರ್ಮಂ ಚರ । ಧರ್ಮಃ ಇತ್ಯನುಷ್ಠೇಯಾನಾಂ ಸಾಮಾನ್ಯವಚನಮ್ । ಸತ್ಯಾದಿವಿಶೇಷನಿರ್ದೇಶಾತ್ । ಸ್ವಾಧ್ಯಾಯಾತ್ ಅಧ್ಯಯನಾತ್ ಮಾ ಪ್ರಮದಃ ಪ್ರಮಾದಂ ಮಾ ಕಾರ್ಷೀಃ । ಆಚಾರ್ಯಾಯ ಆಚಾರ್ಯಾರ್ಥಂ ಪ್ರಿಯಮ್ ಇಷ್ಟಂ ಧನಮ್ ಆಹೃತ್ಯ ಆನೀಯ ದತ್ತ್ವಾ ವಿದ್ಯಾನಿಷ್ಪ್ರಯಾರ್ಥಮ್ ಆಚಾರ್ಯೇಣ ಚ ಅನುಜ್ಞಾತಃ ಅನುರೂಪಾನ್ ದಾರಾನ್ ಆಹೃತ್ಯ ಪ್ರಜಾತನ್ತುಂ ಪ್ರಜಾಸನ್ತಾನಂ ಮಾ ವ್ಯವಚ್ಛೇತ್ಸೀಃ ಪ್ರಜಾಸನ್ತತೇರ್ಮಾ ವ್ಯವಚ್ಛಿತ್ತಿರ್ನ ಕರ್ತವ್ಯಾ । ಅನುತ್ಪದ್ಯಮಾನೇಽಪಿ ಪುತ್ರೇ ಪುತ್ರಕಾಮ್ಯಾದಿ ಕರ್ಮಣಾ ತದುತ್ಪತ್ತೌ ಯತ್ನಃ ಕರ್ತವ್ಯಃ ಇತ್ಯಭಿಪ್ರಾಯಃ । ಪ್ರಜಾಪ್ರಜನ[5] ಪ್ರಜಾತಿತ್ರಯನಿರ್ದೇಶಸಾಮರ್ಥ್ಯಾತ್ । ಅನ್ಯಥಾ ಪ್ರಜನಶ್ಚ ಇತ್ಯೇತದೇಕಮೇವ ಅವಕ್ಷ್ಯತ್ । ಸತ್ಯಾತ್ ನ ಪ್ರಮದಿತವ್ಯಮ್ । ಪ್ರಮಾದೋ ನ ಕರ್ತವ್ಯಃ । ಸತ್ಯಾಚ್ಚ ಪ್ರಮದನಮ್ ಅನೃತಪ್ರಸಙ್ಗಃ । ಪ್ರಮಾದಶಬ್ದಸಾಮರ್ಥ್ಯಾತ್ ವಿಸ್ಮೃತ್ಯಾಪಿ

1. ವೇದವನ್ನು ಅಧ್ಯಯನಮಾಡಿದ ಬಳಿಕ ಸ್ನಾನಮಾಡಬೇಕು, ಗೃಹಸ್ಥನಾಗಬೇಕು - ಎಂದು (ಬೋ. ಗೃ. ೬-೧) ಸ್ಮೃತಿಗೆ ಅರ್ಥವನ್ನು ವಿಚಾರಮಾಡದೆಯೇ ಸ್ನಾನಮಾಡಬೇಕು - ಎಂದರ್ಥಮಾಡಬಾರದು. ಜೈ. ಸೂ. (ಶಾ. ಭಾ. ೧-೧-೧) ರಲ್ಲಿ ಅಥಶಬ್ದದ ಅರ್ಥ ವಿವರಣೆಯನ್ನು ನೋಡಿ.

2. ಏಕೆಂದರೆ ಅರ್ಥವಿಚಾರವನ್ನು ಮಾಡದೆ ಸ್ನಾತಕನಾಗುವದು ಈ ಶ್ರುತಿಗೆ ವಿರುದ್ಧವಾಗುತ್ತದೆ.

3. ವಾ।। ಪಾಠದಲ್ಲಿ ಈ ಮಾತು ಹೆಚ್ಚಾಗಿದೆ.

4. ಇಲ್ಲಿ 'ವಕ್ತವ್ಯಂ ಚ' ಎಂದು ವಾ।। ಪಾಠ.

5. 'ಪ್ರಜನನ' ಎಂದು ಆ।। ಪಾಠ ; ಭಾಷ್ಯದಲ್ಲಿಯೂ ಶ್ರುತಿಯನ್ನು ಹಿಡಿದು ಬರೆದಿದೆ ಎಂದು ತೋರುತ್ತದೆ.

ಅನೃತಂ ನ ವಕ್ತವ್ಯಮ್ ಇತ್ಯರ್ಥಃ ।[1] ಅನ್ಯಥಾ ಅಸತ್ಯವದನಪ್ರತಿಷೇಧ ಏವ ಸ್ಯಾತ್ । ಧರ್ಮಾತ್ ನ ಪ್ರಮದಿತವ್ಯಮ್ । ಧರ್ಮಶಬ್ದಸ್ಯ ಅನುಷ್ಠೇಯವಿಷಯತ್ವಾತ್ ಅನನುಷ್ಠಾನಂ ಪ್ರಮಾದಃ । ಸ ನ ಕರ್ತವ್ಯಃ । ಅನುಷ್ಠಾತವ್ಯ ಏವ ಧರ್ಮಃ ಇತಿ ಯಾವತ್ । ಏವಂ ಕುಶಲಾದ್ ಆತ್ಮರಕ್ಷಣಾರ್ಥಾತ್ ಕರ್ಮಣಃ ನ ಪ್ರಮದಿತವ್ಯಮ್ । ಭೂತಿಃ ವಿಭೂತಿಃ । ತಸ್ಯೈ ಭೂತ್ಯೈ ಭೂತ್ಯರ್ಥಾತ್ ಮಙ್ಗಲಯುಕ್ತಾತ್ ಕರ್ಮಣಃ ನ ಪ್ರಮದಿತವ್ಯಮ್ । ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಮ್ । ಸ್ವಾಧ್ಯಾಯಃ ಅಧ್ಯಯನಮ್, ಪ್ರವಚನಮ್ ಅಧ್ಯಾಪನಮ್ । ತಾಭ್ಯಾಂ ನ ಪ್ರಮದಿತವ್ಯಮ್[2] । ತೇ ಹಿ ನಿಯಮೇನ ಕರ್ತವ್ಯೇ ಇತ್ಯರ್ಥಃ । ತಥಾ ದೇವಪಿತೃ ಕಾರ್ಯಾಭ್ಯಾಂ ನ ಪ್ರಮದಿತವ್ಯಮ್ । ದೈವಪಿತ್ರ್ಯೇ ಕರ್ಮಣೇ ಕರ್ತವ್ಯೇ ।।

(ಭಾಷ್ಯಾರ್ಥ)

ಹೇಗೆ ಅನುಶಾಸನಮಾಡಬೇಕು ? ಎಂದರೆ (ಶ್ರುತಿ) ಹೇಳುತ್ತದೆ. ಸತ್ಯವನ್ನು ಹೇಳು ; ಪ್ರಮಾಣದಿಂದ ಹೇಗೆ ನಿಶ್ಚಿತವಾಗಿರುವದೋ ಹಾಗೆಯೇ ಹೇಳಬೇಕಷ್ಟೆ, ಅದನ್ನು ಹೇಳು. ಅದರಂತೆ ಧರ್ಮವನ್ನು ಆಚರಿಸು. ಇಲ್ಲಿ ಧರ್ಮ ಎಂಬುದು ಅನುಷ್ಠಾನಮಾಡಬೇಕಾದ (ಕರ್ಮಗಳ) ಸಾಮಾನ್ಯವನ್ನು ಹೇಳುವ ಮಾತು (ಎಂದು ಇಟ್ಟುಕೊಳ್ಳಬೇಕು). ಏಕೆಂದರೆ ಸತ್ಯವೇ ಮುಂತಾದ ವಿಶೇಷ(ಧರ್ಮಗಳನ್ನೂ ಇಲ್ಲಿ) ಹೇಳಿರುತ್ತದೆ.[3] ಸ್ವಾಧ್ಯಾಯವನ್ನು ಎಂದರೆ ಅಧ್ಯಯನಮಾಡುವದನ್ನು ಮರೆಯಬೇಡ, ತಪ್ಪಿಬಿಡಬೇಡ. ಆಚಾರ್ಯನಿಗೋಸ್ಕರ ಪ್ರಿಯವಾದ ಇಷ್ಟವಾದ ಧನವನ್ನು ವಿದ್ಯೆಯ ನಿಷ್ಕ್ರಯಕ್ಕಾಗಿ[4] ಆಹೃತ್ಯ ಎಂದರೆ (ಸಂಪಾದನೆಮಾಡಿ) ತಂದುಕೊಟ್ಟು, ಆಚಾರ್ಯನಿಂದ ಅನುಜ್ಞೆಯನ್ನೂ ಪಡೆದು ಅನುರೂಪಳಾದ[5] ಹೆಂಡತಿಯನ್ನು ತಂದುಕೊಂಡು (ಮದುವೆಯಾಗಿ) ಪ್ರಜಾತಂತುವನ್ನು ಎಂದರೆ ಪ್ರಜಾಸಂತಾನವನ್ನು

---

1. 'ಅನೃತವದನವಿಷಯೇ ದೋಷಶ್ರುತೇಶ್ಚ । ಯೋಽನೃತಂ ವದತಿ ಸಮೂಲೋ ವಾ ಏಷ ಪರಿಶುಷ್ಯತಿ' (ಪ್ರ. ೬-೧) ಇತಿ । 'ನ ಸತ್ಯಾತ್ ಪರಮೋ ಧರ್ಮೋ ನಾನೃತಾತ್ ಪಾತಕಂ ಪರಮ್' (?) ಇತಿ ಸ್ಮೃತೇಃ - ಎಂದು ಒಂದು ಪುಸ್ತಕದಲ್ಲಿ ಅಧಿಕವಾಗಿ ಪಾಠವಿದೆ.

2. 'ಸ್ವಾಧ್ಯಾಯಃ.....ಪ್ರಮದಿತವ್ಯಮ್' ಎಂಬ ಭಾಷ್ಯಭಾಗವು ವಾ।। ಪಾಠದಲ್ಲಿಲ್ಲ.

3. ಸತ್ಯವೇ ಮುಂತಾದವೂ ಧರ್ಮಗಳೇ. ಆದ್ದರಿಂದ ಇಲ್ಲಿ ಹೇಳದೆ ಇರುವ ಧರ್ಮಗಳನ್ನು 'ಧರ್ಮ' ಎಂಬ ಸಾಮಾನ್ಯವಚನದಿಂದ ಹೇಳಿದೆ - ಎಂದಿಟ್ಟುಕೊಳ್ಳಬೇಕು.

4. ಗುರುದಕ್ಷಿಣೆಯನ್ನು ಕೊಡುವದು ಕೃತಜ್ಞತಾಸೂಚಕವೂ ಅಲ್ಲದೆ ಗ್ರಹಿಸಿರುವ ವಿದ್ಯೆಯು ತನ್ನದಾಗುವದಕ್ಕೂ ಕಾರಣವಾಗುತ್ತದೆ.

5. ಗೌ. ಧ. ೧-೪-೧ ರ ಸೂಚನೆ.

ಕುಮುಹೋಗಲೀಯದಿರು, ಪ್ರಜಾಸಂತತಿಯನ್ನು ಕಡಿದುಹೋಗುವಂತೆ ಮಾಡ ಬಾರದು. ಮಗನು ಹುಟ್ಟದೆ ಇದ್ದರೂ ಅವನು ಹುಟ್ಟುವದಕ್ಕಾಗಿ ಪುತ್ರಕಾಮ್ಯವೇ ಮುಂತಾದ ಕರ್ಮಗಳಿಂದ ಅವನು ಹುಟ್ಟುವ ಪ್ರಯತ್ನವನ್ನು ಮಾಡಬೇಕು ಎಂದಭಿಪ್ರಾಯ. ಪ್ರಜೆ, ಪ್ರಜನ, ಪ್ರಜಾತಿ - ಎಂದು ಮೂರನ್ನೂ ಹೇಳಿರುವ (ಶಬ್ದದ) ಸಾಮರ್ಥ್ಯದಿಂದ[1] (ಹೀಗೆಂದು ಏರ್ಪಡುತ್ತದೆ). ಹೀಗೆಂಬ (ಅಭಿಪ್ರಾಯ) ವಿಲ್ಲದಿದ್ದರೆ[2] ಪ್ರಜನನವೆಂಬೀ ಒಂದನ್ನೇ (ಶ್ರುತಿಯು) ಹೇಳುತ್ತಿತ್ತು. ಸತ್ಯವನ್ನು ಮರೆಯಬಾರದು, (ಅದನ್ನು) ತಪ್ಪಕೂಡದು. ಸತ್ಯಕ್ಕೆ ತಪ್ಪುವದು ಎಂದರೆ ಸುಳ್ಳಿಗೂ ಎಡೆಯನ್ನು ಕೊಡುವದು. 'ಮರೆಯುವದು' ಎಂಬ (ಶಬ್ದದ) ಸಾಮರ್ಥ್ಯದಿಂದ ಮರೆತುಕೂಡ ಸುಳ್ಳನ್ನಾಡಬಾರದು ಎಂದು ಅರ್ಥ(ವಾಗುತ್ತದೆ). ಹಾಗಿಲ್ಲದಿದ್ದರೆ ಅಸತ್ಯವನ್ನು ಹೇಳುವದುಬೇಡ ಎಂದಿಷ್ಟೇ (ಹೇಳಿದಂತೆ) ಆಗುವದು. ಧರ್ಮವನ್ನು ಮರೆಯಬಾರದು. ಧರ್ಮವೆಂಬ ಮಾತು ಮಾಡತಕ್ಕದ್ದನ್ನು ಹೇಳುವದರಿಂದ[3] (ಅದನ್ನು) ಮಾಡದೆ ಇರುವದೇ ಮರೆಯುವದು. ಆ (ಮರೆವೆಯನ್ನು) ಮಾಡ ಬಾರದು, ಧರ್ಮವನ್ನು ಮಾಡುತ್ತಲೇ ಇರಬೇಕು ಎಂದು ತಾತ್ಪರ್ಯ. ಇದರಂತೆ ಕುಶಲವನ್ನು ಎಂದರೆ ತನ್ನನ್ನು ಕಾಪಾಡಿಕೊಳ್ಳುವದಕ್ಕೆ (ಮಾಡಬೇಕಾದ) ಕರ್ಮವನ್ನು ಮರೆಯಬಾರದು. ಭೂತಿ ಎಂದರೆ ಏಳಿಗೆ ; ಆ ಭೂತಿಗೆ ಎಂದರೆ ಏಳಿಗೆಗೆ ಬೇಕಾದ ಮಂಗಲಯುಕ್ತವಾದ ಕರ್ಮವನ್ನು ಮರೆಯಬಾರದು. ಸ್ವಾಧ್ಯಾಯಪ್ರವಚನಗಳನ್ನು ಮರೆಯಬಾರದು. ಸ್ವಾಧ್ಯಾಯವೆಂದರೆ ಅಧ್ಯಯನವು, ಪ್ರವಚನವೆಂದರೆ ಅಧ್ಯಯನ ಮಾಡಿಸುವದು ; ಅವುಗಳನ್ನು ಮರೆಯಬಾರದು. ಏಕೆಂದರೆ ಅವೆರಡೂ ನಿಯಮ ದಿಂದ ಮಾಡತಕ್ಕವುಗಳಾಗಿವೆ ಎಂದು ಅರ್ಥ. ಹಾಗೂ ದೇವಪಿತೃಕಾರ್ಯಗಳನ್ನು ಮರೆಯಬಾರದು ; ದೇವತೆಗಳ ಮತ್ತು ಪಿತೃಗಳ ಕರ್ಮಗಳನ್ನು ಮಾಡತಕ್ಕದ್ದೇ.

(ಭಾಷ್ಯ)

೬೩. ಮಾತೃದೇವಃ ಮಾತಾ ದೇವಃ ಯಸ್ಯ ಸ ತ್ವಂ ಮಾತೃದೇವಃ ಭವ ಸ್ಯಾಃ ।

1. ಒಂಭತ್ತನೆಯ ಅನುವಾಕದಲ್ಲಿ ಈ ಮೂರನ್ನೂ ಅನುಷ್ಠಾನಮಾಡಬೇಕೆಂದು ಹೇಳಿರುವದರಿಂದ ಅರ್ಥಾಪತ್ತಿಪ್ರಮಾಣದಿಂದ ಹೀಗೆಂದು ಏರ್ಪಡುತ್ತದೆ.

2. ಬರಿಯ ಪೌರುಷಯತ್ನವನ್ನು ಮಾಡಬೇಕು ಎಂಬುದೇ ಶ್ರುತಿಯ ಅಭಿಪ್ರಾಯ ವಾಗಿದ್ದರೆ.

3. 'ಅನುಷ್ಠೇಯವಿಶೇಷವಿಷಯತ್ವಾತ್' ಎಂಬ ವಾ॥ ಪಾಠವು 'ಅನುಷ್ಠೇಯಾನಾಂ ಸಾಮಾನ್ಯವಚನಮ್' ಎಂಬ ಹಿಂದಿನ ಭಾಷ್ಯಕ್ಕೆ ವಿರುದ್ಧ.

ಏವಂ ಪಿತೃದೇವಃ[1] ಆಚಾರ್ಯದೇವಃ ಅತಿಥಿದೇವಃ ಭವ । ದೇವತಾವತ್ ಉಪಾಸ್ಯಾ ಪತೇ ಇತ್ಯರ್ಥಃ । ಯಾನ್ಯಪಿ ಚ ಅನ್ಯಾನಿ ಅನವದ್ಯಾನಿ ಅನಿನ್ದಿತಾನಿ ಶಿಷ್ಟಾಚಾರ ಲಕ್ಷಣಾನಿ ಕರ್ಮಾಣಿ । ತಾನಿ ಸೇವಿತವ್ಯಾನಿ ಕರ್ತವ್ಯಾನಿ ತ್ವಯಾ । ನೋ ನ ಕರ್ತವ್ಯಾನಿ[2] ಇತರಾಣಿ ಸಾವದ್ಯಾನಿ ಶಿಷ್ಟಕೃತಾನ್ಯಪಿ । ಯಾನಿ ಅಸ್ಮಾಕಮ್ ಆಚಾರ್ಯಾಣಾಂ ಸುಚರಿತಾನಿ ಶೋಭನಚರಿತಾನಿ ಆಮ್ನಾಯಾದ್ಯವಿರುದ್ಧಾನಿ ತಾನ್ಯೇವ ತ್ವಯಾ ಉಪಾಸ್ಯಾನಿ ಆದೃಷ್ಟ್ಯರ್ಥಾನಿ ಅನುಷ್ಠೇಯಾನಿ ನಿಯಮೇನ ಕರ್ತವ್ಯಾನಿ ಇತಿ ಯಾವತ್[3] । ನೋ ಇತರಾಣಿ ವಿಪರೀತಾನಿ ಆಚಾರ್ಯಕೃತಾನ್ಯಪಿ ॥

(ಭಾಷ್ಯಾರ್ಥ)

ಮಾತೃದೇವನು, ತಾಯಿಯೇ ದೇವನು ಯಾರಿಗೋ ಆ ನೀನು ಮಾತೃದೇವನು ; (ಅಂಥ ಮಾತೃದೇವ)ನಾಗಿರು, ಇದ್ದುಕೊಂಡಿರು. ಇದರಂತೆ ಪಿತೃದೇವನು, ಆಚಾರ್ಯದೇವನು, ಅತಿಥಿದೇವನೂ ಆಗಿರು (ಎಂಬ ವಾಕ್ಯಗಳಿಗೂ ಅರ್ಥ). ಇವರುಗಳನ್ನು ದೇವತೆಯಂತೆ ಸೇವಿಸಬೇಕು ಎಂದರ್ಥ. (ಇದಲ್ಲದೆ) ಇನ್ನೂ ಯಾವ ಕರ್ಮಗಳು ಅನವದ್ಯವಾಗಿರುವವೋ ಎಂದರೆ ನಿಂದಿತವಲ್ಲದೆ ಇರುವವೋ ಶಿಷ್ಟರು ಆಚರಿಸುವರೆಂಬ ಪ್ರಮಾಣದಿಂದ (ಒಳ್ಳೆಯವೆಂದು) ತಿಳಿಯತಕ್ಕವಾಗಿರುವವೋ ಅವುಗಳನ್ನು ನೀನು ಸೇವಿಸಬೇಕು, ಮಾಡಬೇಕು, ಉಳಿದವುಗಳನ್ನು ಎಂದರೆ ನಿಂದಿತವಾಗಿರುವವನ್ನು ಶಿಷ್ಟರು ಮಾಡಿದರೂ ಅಲ್ಲ, ಮಾಡತಕ್ಕವಲ್ಲ.[4] ಆಚಾರ್ಯರಾಗಿರುವ ನಮ್ಮ ಒಳ್ಳೆಯ ನಡತೆಗಳು ಸರಿಯಾದ ನಡತೆಗಳು, ಯಾವವೋ, ವೇದವೇ ಮುಂತಾದವುಗಳಿಗೆ ವಿರುದ್ಧವಲ್ಲದ (ನಡತೆಗಳು) ಯಾವವೋ ಅವುಗಳನ್ನೇ ನೀನು ಉಪಾಸನೆಮಾಡಬೇಕು, ಎಂದರೆ ಅದೃಷ್ಟ(ಫಲ)ಕ್ಕಾಗಿ[5] ಅನುಷ್ಠಾನಮಾಡಬೇಕು, ನಿಯಮದಿಂದ ಮಾಡಬೇಕು ಎಂದು ತಾತ್ಪರ್ಯ. ಆಚಾರ್ಯರು ಮಾಡುವ ಕರ್ಮಗಳಾದರೂ (ಇದಕ್ಕೆ) ವಿರುದ್ಧವಾಗಿರುವ ಉಳಿದ ಕರ್ಮಗಳನ್ನು (ಮಾಡ) ತಕ್ಕದ್ದಲ್ಲ.

1. 'ಪಿತೃದೇವಃ ಭವ, ಆಚಾರ್ಯದೇವಃ ಭವ' ಎಂದು ವಾ॥ ಪಾಠ.

2. 'ಅಕರ್ತವ್ಯಾನಿ' ಎಂದು ಆ॥ ಪಾಠ.

3. 'ಇತ್ಯೇತತ್' ಎಂದು ವಾ॥ ಪಾಠ.

4. ಶಾಸ್ತ್ರನಿಷಿದ್ಧವಾದರೂ ಸದಾಚಾರವೆಂಬ ನೆಪದಿಂದ ಮಾಡಬಾರದು.

5. ಹೀಗೆ ಮಾಡಿದರೆ ಅದೃಷ್ಟವಾದ ಪರಲೋಕಸುಖವುಂಟಾಗುವದು ಎಂದು ಭಾವ.

ದೊಡ್ಡವರ ವಿಷಯದಲ್ಲಿ ವರ್ತನೆ

(ಭಾಷ್ಯ)

೬೪ ಯೇ ಕೇ ಚ ಅವಿಶೇಷಿತಾಃ ಆಚಾರ್ಯತ್ವಾದಿಧರ್ಮೈಃ ಅಸ್ಮತ್ ಅಸ್ಮತ್ತಃ ಶ್ರೇಯಾಂಸಃ ಪ್ರಶಸ್ಯತರಾಃ[1] ತೇ ಚ ಬ್ರಾಹ್ಮಣಾಃ, ನ ಕ್ಷತ್ರಿಯಾದಯಃ ತೇಷಾಮ್ ಆಸನೇನ ಆಸನದಾನಾದಿನಾ ತ್ವಯಾ ಪ್ರಶ್ವಸಿತವ್ಯಮ್ । ಪ್ರಶ್ವಸನಂ ಪ್ರಶ್ವಾಸಃ ಶ್ರಮಾಪನಯಃ । ತೇಷಾಂ ಶ್ರಮಃ ತ್ವಯಾ ಅಪನೇತವ್ಯಃ ಇತ್ಯರ್ಥಃ । ತೇಷಾಂ ವಾ[2] ಆಸನೇ ಗೋಷ್ಠೀನಿಮಿತ್ತೇ ಸಮುದಿತೇ ತೇಷು ನ ಪ್ರಶ್ವಸಿತವ್ಯಮ್ ಪ್ರಶ್ವಾಸೋಽಪಿ ನ ಕರ್ತವ್ಯಃ । ಕೇವಲಂ ತದುಕ್ತಸಾರಗ್ರಾಹಿಣಾ ಭವಿತವ್ಯಮ್ ।।

(ಭಾಷ್ಯಾರ್ಥ)

ಮತ್ತು ಯಾರು ಯಾರು, ಅವರು ಯಾರೇ ಆಗಿರಲಿ,[3] ಆಚಾರ್ಯತ್ವವೇ ಮುಂತಾದ ಗುಣಗಳಿಂದ 'ಅಸ್ಮತ್' ಎಂದರೆ ನಮಗಿಂತಲೂ ಹೆಚ್ಚು ಉತ್ತಮರೋ ಹೊಗಳತಕ್ಕವರಾಗಿರುವರೋ ಮತ್ತು ಕ್ಷತ್ರಿಯಾದಿಗಳಲ್ಲದೆ ಬ್ರಾಹ್ಮಣರೂ[4] (ಆಗಿರುವರೋ) ಅವರಿಗೆ ಆಸನದಿಂದ, ಎಂದರೆ ಆಸನವನ್ನು ಕೊಡುವದೇ ಮುಂತಾದದ್ದರಿಂದ, ಪ್ರಶ್ವಸನಮಾಡಬೇಕು. ಪ್ರಶ್ವಸನವೆಂದರೆ ಪ್ರಶ್ವಾಸವು, ಆಯಾಸವನ್ನು ಹೋಗಲಾಡಿಸುವದು. ಅವರ ಆಯಾಸವನ್ನು ನೀನು ಕಳೆಯಬೇಕು ಎಂದರ್ಥ. ಅಥವಾ ಅವರು ಸಂಭಾಷಣೆಗಾಗಿ ಆಸನದಲ್ಲಿ ಕುಳಿತಿರುವಾಗ[5] ಅವರ ಬಳಿಯಲ್ಲಿ (ನೀನು) ಉಸುರಬಾರದು. (ಕೊನೆಗೆ) ಉಸಿರನ್ನು ಕೂಡ ಬಿಡಬಾರದು ; ಸುಮ್ಮನೆ ಅವರು ಹೇಳುವದರ ಸಾರವನ್ನು ಗ್ರಹಿಸುವವಾಗಿರಬೇಕು.

---

1. 'ಪ್ರಶಸ್ತತರಾಃ' ಎಂದು ವಾ।। ಪಾಠ.

2. 'ತೇಷಾಂ ಚ' ಎಂದು ಆ।। ಪಾಠ.

3. 'ವಿಶೇಷಿತಾಃ' ಎಂದು ಮುದ್ರಿತಪುಸ್ತಕಪಾಠದಲ್ಲಿ 'ಧರ್ಮೈಃ' ಎಂಬ ಮುಂದಿನ ಪದದೊಡನೆ ಅನ್ವಯಿಸಿಕೊಂಡು 'ಗುಣಗಳಿಂದ ಕೂಡಿದವರಾಗಿ' ಎಂದು ಕನ್ನಡಿಸಬೇಕಾಗುವದು ; ಅದಕ್ಕಿಂತ ಈಗ ನಾವು ಕಲ್ಪಿಸಿರುವ ಪಾಠವು ಮೇಲು.

4. ಯಾರೇ ಆಗಲಿ ಗುಣವನ್ನು ಗ್ರಹಣಮಾಡಬೇಕು ; ಹೀಗೆ ಗೌರವವನ್ನು ತೋರಿಸುವಾಗ ವರ್ಣಾಶ್ರಮಧರ್ಮಕ್ಕೆ ಲೋಪವಿಲ್ಲದಂತೆಯೂ ನೋಡಿಕೊಳ್ಳಬೇಕು - ಎಂದರ್ಥ. ವಿತ್ತ, ಬಂಧು, ಕರ್ಮ, ಜಾತಿ, ವಿದ್ಯೆ, ವಯಸ್ಸು - ಇವುಗಳನ್ನು ಗೌರವಿಸಬೇಕು , ಆಗ ಮುಂದುಮುಂದಿನದು ಹಿಂದಿನದಕ್ಕಿಂತ ಪ್ರಬಲ (ಗೌ. ಧ. ೧-೭-೧೮).

5. 'ಆಸನೇನ ಪ್ರಶ್ವಸಿತವ್ಯಮ್', 'ಆಸನೇ ನ ಪ್ರಶ್ವಸಿತವ್ಯಮ್' ಎಂಬ ಪದಚ್ಛೇದಗಳಿಗನುಗುಣವಾಗಿ ಈ ಎರಡು ಅರ್ಥಗಳು. ಎರಡರಲ್ಲಿಯೂ ಶ್ರುತಿಗೆ ಸ್ವಾರಸ್ಯವುಂಟು.

ದಾನವನ್ನು ಅವಶ್ಯವಾಗಿ ಮಾಡಬೇಕು

(ಭಾಷ್ಯ)

೬೫. ಕಿಂ ಚ ಯತ್ಕಿಂಚಿತ್ ದೇಯಮ್ ತತ್ ಶ್ರದ್ಧಯೈವ ದಾತವ್ಯಮ್ ; ಅಶ್ರದ್ಧಯಾ ಅದೇಯಂ ನ ದಾತವ್ಯಮ್ । ಶ್ರಿಯಾ ವಿಭೂತ್ಯಾ ದೇಯಂ ದಾತವ್ಯಮ್ । ಹ್ರಿಯಾ ಲಜ್ಜಯಾ ಚ ದೇಯಮ್ । ಭಿಯಾ ಭೀತ್ಯಾ[1] ಚ ದೇಯಮ್ । ಸಂವಿದಾ ಚ । ಸಂವಿತ್ ಮಿತ್ರಾದಿಕಾರ್ಯಮ್ ॥

(ಭಾಷ್ಯಾರ್ಥ)

ಇದಲ್ಲದೆ ಕೊಡತಕ್ಕದ್ದು ಯಾವದಾದರೂ (ಇದ್ದರೆ) ಅದನ್ನು ಶ್ರದ್ಧೆಯಿಂದಲೇ ಕೊಡಬೇಕು ; ಅಶ್ರದ್ಧೆಯಿಂದ ಕೊಡತಕ್ಕದ್ದಲ್ಲ, ಕೊಡಬಾರದು.[2] ಶ್ರೀಯಿಂದ ವಿಭೂತಿಯಿಂದ ಕೊಡಬೇಕು, ಕೊಡತಕ್ಕದ್ದು.[3] ಹ್ರೀಯಿಂದ ಎಂದರೆ ನಾಚಿಕೆಯಿಂದಲೂ ಕೊಡಬೇಕು.[4] ಭೀತಿಯಿಂದ ಎಂದರೆ ಭಯದಿಂದಲೂ[5] ಕೊಡಬೇಕು. ಸಂವಿತ್ತಿನಿಂದ (ತಿಳಿವಳಿಕೆಯಿಂದ)ಲೂ ಕೊಡಬೇಕು ; ಇಲ್ಲಿ ಸಂವಿತ್ತೆಂದರೆ ಮಿತ್ರಾದಿಗಳ ಕಾರ್ಯವೆಂದು ತಿಳಿಯುವದು.[6]

ಕರ್ಮವಿಷಯದ ಸಂದೇಹಗಳನ್ನು ಬಗೆಹರಿಸಿಕೊಳ್ಳುವ ಬಗೆ

(ಭಾಷ್ಯ)

೬೬. ಅಥ ಏವಂ ವರ್ತಮಾನಸ್ಯ ಯದಿ ಕದಾಚಿತ್ ತೇ ತವ ಶ್ರೌತೇ ಸ್ಮಾರ್ತೇ ವಾ ಕರ್ಮಣಿ ವೃತ್ತೇ ವಾ ಆಚಾರಲಕ್ಷಣೇ ವಿಚಿಕಿತ್ಸಾ ಸಂಶಯಃ ಸ್ಯಾತ್ ಚೇತ್[7], ಯೇ ತತ್ರ ತಸ್ಮಿನ್ ದೇಶೇ ಕಾಲೇ ವಾ ಬ್ರಾಹ್ಮಣಾಃ ತತ್ರ ಕರ್ಮಾದೌ 'ಯುಕ್ತಾಃ'

---

1. "ಭಿಯಾ ಚ ಭಯೇನ ದೇಯಮ್" ಆ॥ ಪಾಠ.

2. ಗೀ. ೧೭-೨೮.

3. ತನ್ನ ಸಂಪತ್ತಿಗೆ ತಕ್ಕಂತೆ.

4. ನಾನು ಯಾವ ದಾನವನ್ನೂ ಮಾಡಲಿಲ್ಲವಲ್ಲ ! ಎಂಬ ನಾಚಿಕೆಯಿಂದ.

5. ದಾನವೆಂಬ ನಿತ್ಯಕರ್ಮವನ್ನು ಮಾಡದಿದ್ದರೆ ಸದ್ಗತಿಯಾಗಲಾರದೆಂಬ ಅಂಜಿಕೆಯಿಂದ.

6. "ಸಂವಿದಾ ಚ ಮೈತ್ರ್ಯಾದಿಕಾರ್ಯೇಣ" ಎಂಬ ವಾ॥ ಪಾಠಕ್ಕೆ-ಮಿತ್ರಾದಿಗಳ ಕಾರ್ಯವೆಂಬ ಭಾವನೆಯಿಂದ - ಎಂದರ್ಥ. ಮಿತ್ರರೇ ಮುಂತಾದವರಿಗೆ ಇಂಥ ಸಮಯದಲ್ಲಿ ದಾನಮಾಡತಕ್ಕದ್ದು ಯುಕ್ತ ಎಂದು. ಸಾತ್ತ್ವಿಕದಾನದ ವರ್ಣನೆಯನ್ನು ಗೀ. ೧೭-೨೦ ರಲ್ಲಿ ನೋಡಿ.

7. 'ಸ್ಯಾತ್' ಆ॥ 'ಸ್ಯಾತ್ ಭವೇತ್' ವಾ॥ -ಎರಿಬು ಪಾಠಗಳೂ ಉಂಟು.

ಇತಿ ವ್ಯವಹಿತೇನ ಸಂಬನ್ಧಃ ಕರ್ತವ್ಯಃ । ಸಂಮರ್ಶಿನಃ ವಿಚಾರಕ್ಷಮಾಃ ಯುಕ್ತಾಃ ಅಭಿಯುಕ್ತಾಃ ಕರ್ಮಣಿ ವೃತ್ತೇ ವಾ ಅಯುಕ್ತಾಃ ಅಪರಪ್ರಯುಕ್ತಾಃ ಅಲೂಕ್ಷಾಃ ಅರೂಕ್ಷಾಃ ಅಕ್ರೂರಮತಯಃ ಧರ್ಮಕಾಮಾಃ - ಅದೃಷ್ಟಾರ್ಥಿನಃ ಅಕಾಮಹತಾಃ - ಇತ್ಯೇತತ್, ನ್ಯಃ ಭವೇಯುಃ ; ತೇ ಬ್ರಾಹ್ಮಣಾಃ[1] ಯಥಾ ಯೇನ ಪ್ರಕಾರೇಣ ತತ್ರ ತಸ್ಮಿನ್ ಕರ್ಮಣಿ ವೃತ್ತೇ ವಾ ವರ್ತೇರನ್ ತಥಾ ತ್ವಮಪಿ ವರ್ತೇಥಾಃ ॥

(ಭಾಷ್ಯಾರ್ಥ)

ಇನ್ನು ಹೀಗೆ ಇರುವಲ್ಲಿ ನಿನಗೆ ಶ್ರೌತ(ಕರ್ಮದಲ್ಲಿ)ಯಾಗಲಿ, ಸ್ಮಾರ್ತಕರ್ಮದಲ್ಲಿಯಾಗಲಿ, ಆಚಾರರೂಪವಾದ ನಡತೆಯಲ್ಲಾಗಲಿ - ಯಾವಾಗಲಾದರೂ ವಿಚಿಕಿತ್ಸೆಯು ಎಂದರೆ ಸಂಶಯವು ಉಂಟಾಗುವದಾದರೆ, ಅಲ್ಲಿ ಎಂದರೆ ಆ ದೇಶದಲ್ಲಿ ಅಥವಾ (ಆ) ಕಾಲದಲ್ಲಿ ಯಾವ ಬ್ರಾಹ್ಮಣರು ಆ ಕರ್ಮಾದಿಗಳಲ್ಲಿ-'ಯುಕ್ತರಾಗಿ' ಎಂದು ದೂರವಾಗಿರುವ ಶಬ್ದದೊಡನೆ (ಇದಕ್ಕೆ) ಸಂಬಂಧವನ್ನು ಮಾಡಿಕೊಳ್ಳಬೇಕು[2] - ಸಂಮರ್ಶಿಗಳಾಗಿಯೂ ಎಂದರೆ ವಿಚಾರಮಾಡುವದರಲ್ಲಿ ಸಮರ್ಥರಾಗಿಯೂ, ಯುಕ್ತರಾಗಿಯೂ ಎಂದರೆ ಕರ್ಮದಲ್ಲಿ ಅಥವಾ ನಡತೆಯಲ್ಲಿ ನಿಪುಣರಾಗಿಯೂ, ಅಯುಕ್ತರಾಗಿಯೂ ಎಂದರೆ ಮತ್ತೊಬ್ಬರಿಂದ ಪ್ರೇರಿತರಾಗದವರಾಗಿಯೂ,[3] ಅಲೂಕ್ಷರಾಗಿಯೂ ಎಂದರೆ ರೂಕ್ಷರಲ್ಲದೆ ಕ್ರೂರವಾದ ಬುದ್ಧಿಯಿಲ್ಲದವರಾಗಿಯೂ ಅದೃಷ್ಟ(ಫಲ)ವನ್ನೇ ಬಯಸುವವರಾಗಿಯೂ ಆಸೆಯ ಹೊಡೆತವಿಲ್ಲದವರಾಗಿಯೂ[4] ಎಂದರ್ಥ. (ಇಂಥ ಯಾವ ಬ್ರಾಹ್ಮಣರು ಅಲ್ಲಿ) ಇರುವರೋ ಇರಬಹುದೋ ಆ ಬ್ರಾಹ್ಮಣರು ಅಲ್ಲಿ ಎಂದರೆ ಆ ಕರ್ಮದಲ್ಲಿ ಅಥವಾ ನಡತೆಯಲ್ಲಿ ಹೇಗೆ ಇರುವರೋ ಹಾಗೆಯೇ ನೀನೂ ಇರು.[5]

ಮಾತುಹೊತ್ತಿರುವವರಲ್ಲಿ ಸಂವ್ಯವಹಾರವು ಹೇಗಿರಬೇಕು ?

(ಭಾಷ್ಯ)

೬೭. ಅಥ ಅಭ್ಯಾಖ್ಯಾತೇಷು । ಅಭ್ಯಾಖ್ಯಾತಾ[6] ಅಭ್ಯುಕ್ತಾಃ ದೋಷೇಣ

1. ವಾ॥ ಪಾಠ. 2. ತತ್ರ ಯುಕ್ತಾಃ "ಆ ಕರ್ಮದಲ್ಲಿ ಅಥವಾ ವೃತ್ತದಲ್ಲಿ ನಿಪುಣರಾದವರು" - ಎಂದು ಸಂಬಂಧಮಾಡಿಕೊಳ್ಳಬೇಕು.

3. ತಾವೇ ಸ್ವತಂತ್ರವಾಗಿ ತಿಳಿದು ಪ್ರವರ್ತಿಸುವವರಾಗಿಯೂ.

4. ಕಾಮ್ಯಕರ್ಮಗಳನ್ನು ಬಿಟ್ಟು, ಪರಗತಿಯನ್ನು ಕೊಡುವ ಸತ್ಕರ್ಮಗಳಲ್ಲಿಯೇ ನಿರತರಾಗಿರುವವರಾಗಿಯೂ. 5 ಶಿಷ್ಟರ ಆಚಾರವನ್ನೇ ನೀನೂ ಅನುಸರಿಸು ಎಂದರ್ಥ.

6. ಈ ಮಾತು ವಾ॥ ಪಾಠದಲ್ಲಿದೆ , ಆ॥ ಪಾಠದಲ್ಲಿಲ್ಲ.

ಸಂದಿಹ್ಯಮಾನೇನ ಸಂಯೋಜಿತಾಃ ಕೇನಚಿತ್ । ತೇಷು ಚ ಯಥೋಕ್ತಂ ಸರ್ವಮ್ ಉಪನಯೇತ್ 'ಯೇ ತತ್ರ' ಇತ್ಯಾದಿ ॥

(ಭಾಷ್ಯಾರ್ಥ)

ಇನ್ನು ಅಭ್ಯಾಖ್ಯಾತರ ವಿಷಯದಲ್ಲಿ. 'ಅಭ್ಯಾಖ್ಯಾತರು' ಎಂದರೆ ಮಾತು ಹೊತ್ತವರು, ಯಾವುದೋ ಒಂದು ಸಂದೇಹಕ್ಕೆ ಆಸ್ಪದವಾದ ದೋಷವನ್ನು ಹೊರಿಸಲ್ಪಟ್ಟಿರುವವರು ; ಅವರ ವಿಷಯದಲ್ಲಿಯೂ 'ಯಾರು ಅಲ್ಲಿ' ಎಂದು ಮುಂತಾಗಿರುವ (ಗ್ರಂಥಭಾಗವನ್ನು) ಹಿಂದೆ ಹೇಳಿದಂತೆ ಎಲ್ಲವನ್ನೂ ಹೊಂದಿಸಿಕೊಳ್ಳಬೇಕು.[1]

ಉಪಸಂಹಾರ

(ಭಾಷ್ಯ)

೬೮. ಏಷಃ ಆದೇಶಃ ವಿಧಿಃ । ಏಷಃ ಉಪದೇಶಃ ಪುತ್ರಾದಿಭ್ಯಃ ಪಿತ್ರಾದೀನಾಮ್ । ಏಷಾ ವೇದೋಪನಿಷತ್ ವೇದರಹಸ್ಯಮ್ । ವೇದಾರ್ಥಃ ಇತ್ಯೇತತ್ । ಏತದೇವ ಅನುಶಾಸನಮ್ ಈಶ್ವರವಚನಮ್ ಸ್ಯಾತ್ಯ ವಿಧೇರುಕ್ತತ್ವಾತ್ ಸರ್ವೇಷಾಂ ವಾ ಪ್ರಮಾಣಭೂತಾನಾಮ್ ಅನುಶಾಸನಮೇತತ್ । ಯಸ್ಮಾದೇವಮ್, ತಸ್ಮಾತ್ ಏವಂ ಯಥೋಕ್ತಂ ಸರ್ವಮ್ ಉಪಾಸಿತವ್ಯಂ ಕರ್ತವ್ಯಮ್ । ಏವಮ್ ಉ ಚ ಏತತ್ ಉಪಾಸ್ಯಮ್ ಉಪಾಸ್ಯಮೇವ ಚ ಏತತ್, ನಾನುಪಾಸ್ಯಮ್ ಇತಿ ಆದರಾರ್ಥಂ ಪುನರ್ವಚನಮ್ ॥

(ಭಾಷ್ಯಾರ್ಥ)

ಇದು ಆದೇಶವು, ಎಂದರೆ ವಿಧಿಯು. ಇದು ಮಕ್ಕಳು ಮುಂತಾದವರಿಗೆ ತಂದೆಯೇ ಮುಂತಾದವರು (ಮಾಡತಕ್ಕ) ಉಪದೇಶವು. ಇದು ವೇದೋಪನಿಷತ್ತು ಎಂದರೆ ವೇದರಹಸ್ಯವು ; ವೇದಾರ್ಥವು ಎಂದರ್ಥ. ಇದೇ ಅನುಶಾಸನವು ಈಶ್ವರವಚನವು (ಎಂದರ್ಥ) ; ಏಕೆಂದರೆ 'ಆದೇಶ' ಎಂಬ ಮಾತಿನಿಂದ ಹೇಳಲ್ಪ

1. ನಿಪುಣರಾಗಿ ಸ್ವತಂತ್ರರಾಗಿ ಕ್ರೂರಿಗಳಲ್ಲದೆ ಧರ್ಮವನ್ನೇ ಬಯಸುತ್ತಾ ಇರುವ ಶಿಷ್ಟಾಚಾರಿಗಳಾದ ಬ್ರಾಹ್ಮಣರು ಅಂಥ ಸಂದಿಗ್ಧದೋಷವುಳ್ಳವರ ವಿಷಯದಲ್ಲಿ ಹೇಗೆ ನಡೆದುಕೊಳ್ಳುವರೋ ನೀನೂ ಅವರ ವಿಷಯದಲ್ಲಿ ಹಾಗೆಯೇ ನಡೆದುಕೊ - ಎಂದು ಹಿಂದಿನಂತೆಯೇ ಅರ್ಥಮಾಡಬೇಕು. ಇಲ್ಲಿ ಹೆಚ್ಚಿಗೆಯಾಗಿ ವ್ಯಾಖ್ಯಾನಮಾಡತಕ್ಕದ್ದು ಏನೂ ಇರುವದಿಲ್ಲ - ಎಂದು ಅಭಿಪ್ರಾಯ.

ತುವ ವಿಧಿಯನ್ನು (ಆಗಲೆ) ಹೇಳಿದ್ದಾಗಿದೆ.[1] ಅಥವಾ ಪ್ರಮಾಣರೂಪವಾಗಿರುವ ಎಲ್ಲರ[2] ಆಜ್ಞೆ ಇದು. ಹೀಗಿರುವದಲ್ಲ, ಈ ಕಾರಣದಿಂದ ಹೀಗೆ ಮೇಲೆ ಹೇಳಿದಂತೆ ಎಲ್ಲವನ್ನೂ ಉಪಾಸನೆಮಾಡಬೇಕು, ಎಂದರೆ ಮಾಡಬೇಕು. ಹೀಗೆಯೇ ಇದನ್ನು ಉಪಾಸನೆ ಮಾಡಬೇಕು ; ಇದನ್ನು 'ಉಪಾಸನೆಮಾಡಲೇಬೇಕು,[3] ಮಾಡದೆ ಇರಬಾರದು' ಎಂದು ಮತ್ತೆ ಹೇಳಿರುವದು ಆದರಕ್ಕಾಗಿ.[4]

1 ಆದೇಶ ಎಂದರೆ ವಿಧಿ ಎಂದು ಹೇಳಿದ್ದಾಗಿದೆ ; ಆದ್ದರಿಂದ 'ಅನುಶಾಸನ' ಎಂಬುದಕ್ಕೂ ಅದೇ ಅರ್ಥವನ್ನು ಮಾಡುವದು ಪುನರುಕ್ತಿಯಾಗುವದು.

2 ಎಲ್ಲರ ಎಂದರೆ ತಂದೆ, ಗುರು, ಋಷಿಗಳು - ಮುಂತಾದವರ ; ಅಥವಾ ಪ್ರಮಾಣಭೂತವಾದ ವೇದವೇ ಅಲ್ಲದೆ ಸ್ಮೃತಿಗಳೂ ತಿಳಿದವರೂ ಹೀಗೆಯೇ ಉಪದೇಶ ಮಾಡಿರುತ್ತಾರೆ - ಎಂದಾದರೂ ಅರ್ಥವನ್ನು ಮಾಡಬಹುದು.

3. ಏವಮ್ ಉ ಎಂದರೆ ಹೀಗೆಯೇ ಎಂದರ್ಥ ; ಉಪಾಸ್ಯಮ್ ಉ ಎಂದರೆ ಉಪಾಸನೆಮಾಡತಕ್ಕದ್ದೇ, ಬಿಡತಕ್ಕದ್ದಲ್ಲ ಎಂದರ್ಥ. ಹೀಗೆ ಎರಡು ಅರ್ಥವನ್ನೂ ತಗೆದುಕೊಳ್ಳಬಹುದು ಎಂದರ್ಥ.

4. ಸತ್ಯ, ಧರ್ಮ - ಮುಂತಾದವುಗಳನ್ನು ಅವಶ್ಯವಾಗಿ ಮಾಡಬೇಕು ಎಂದು ಮುಮುಕ್ಷುಗಳಿಗೆ ಆದರವನ್ನು ಹುಟ್ಟಿಸುವದಕ್ಕಾಗಿ.

ಶೀಕ್ಷಾವಲ್ಲಿಯ ಉಪಸಂಹಾರ

ವಿಚಾರಣೀಯ ವಿಷಯ

(ಭಾಷ್ಯ)

೬೯. ಅತ್ರ ಏತಚ್ಚಿನ್ತ್ಯತೇ ವಿದ್ಯಾಕರ್ಮಣೋರ್ವಿವೇಕಾರ್ಥಮ್ । ಕಿಂ ಕರ್ಮಭ್ಯ ಏವ ಕೇವಲೇಭ್ಯಃ ಪರಂ ಶ್ರೇಯಃ, ಉತ ವಿದ್ಯಾಸವ್ಯಪೇಕ್ಷೇಭ್ಯಃ, ಆಹೋಸ್ವಿತ್ ವಿದ್ಯಾಕರ್ಮಭ್ಯಾಂ ಸಂಹತಾಭ್ಯಾಮ್, ವಿದ್ಯಾಯಾ ವಾ ಕರ್ಮಾಪೇಕ್ಷಾಯಾಃ, ಉತ ಕೇವಲಾಯಾ ಏವ ವಿದ್ಯಾಯಾಃ ? - ಇತಿ ॥

(ಭಾಷ್ಯಾರ್ಥ)

ಈಗ ವಿದ್ಯೆ,[1] ಕರ್ಮ - ಇವುಗಳನ್ನು ವಿಂಗಡಿಸಿ ಅರಿಯುವದಕ್ಕಾಗಿ ಇದನ್ನು ವಿಚಾರಮಾಡಲಾಗುವದು : ಬರಿಯ ಕರ್ಮಗಳಿಂದಲೇ ಹೆಚ್ಚಿನ ಶ್ರೇಯಸ್ಸು[2] (ಉಂಟಾಗುವದೊ), ಅಥವಾ ವಿದ್ಯೆಯನ್ನು ಬಯಸುವ[3] (ಕರ್ಮಗಳಿಂದ ಉಂಟಾಗುವದೊ), ಇಲ್ಲದಿದ್ದರೆ ವಿದ್ಯೆ, ಕರ್ಮಗಳು - ಇವೆರಡೂ ಕೂಡಿದ (ಒಟ್ಟಿನಿಂದ ಉಂಟಾಗುವದೊ),[4] ಹಾಗಿಲ್ಲದಿದ್ದರೆ ಕರ್ಮಗಳನ್ನು ಬಯಸುವ[5] ವಿದ್ಯೆಯಿಂದ (ಉಂಟಾಗುವದೊ), ಅಥವಾ ಬರಿಯ ವಿದ್ಯೆಯಿಂದಲೇ (ಉಂಟಾಗುವದೊ) ?[6]

ಬರಿಯ ಕರ್ಮಗಳಿಂದ ಮೋಕ್ಷವಿಲ್ಲ

(ಭಾಷ್ಯ)

೭೦. ತತ್ರ ಕೇವಲೇಭ್ಯ ಏವ ಕರ್ಮಭ್ಯಃ ಸ್ಯಾತ್ । ಸಮಸ್ತವೇದಾರ್ಥಜ್ಞಾನವತಃ ಕರ್ಮಾಧಿಕಾರಾತ್ । "ವೇದಃ ಕೃತ್ಸ್ನೋಽಧಿಗನ್ತವ್ಯಃ ಸರಹಸ್ಯೋ ದ್ವಿಜನ್ಮನಾ ॥" (ಮನು. ೨-೧೬೫) ಇತಿ ಸ್ಮರಣಾತ್ । ಅಧಿಗಮಶ್ಚ ಸಹೋಪನಿಷದರ್ಥೇನಾತ್ಮ

---

1. ಇಲ್ಲಿ ವಿದ್ಯೆ ಎಂದರೆ ಉಪಾಸನೆ, ಜ್ಞಾನ - ಎರಡನ್ನೂ ಗ್ರಹಿಸಬೇಕು. ಪೂರ್ವಪಕ್ಷಗಳಲ್ಲಿ ಉಪಾಸನೆ ಎಂಬ ಅಭಿಪ್ರಾಯವಿದೆ ; ಸಿದ್ಧಾಂತದಲ್ಲಿ ಜ್ಞಾನವೆಂಬ ಅಭಿಪ್ರಾಯವಿದೆ.

2. ಮೋಕ್ಷವು.

3. ವಿದ್ಯೆ ಅಂಗ, ಕರ್ಮಗಳು ಅಂಗಿ - ಹೀಗೆ ಸೇರಿಕೊಂಡ ವಿದ್ಯಾಕರ್ಮಗಳಿಂದ.

4. ವಿದ್ಯೆಯಷ್ಟೇ·ಕರ್ಮಗಳೂ ಪ್ರಧಾನವಾಗಿ ಎರಡೂ ಸೇರಿಕೊಂಡ ಒಟ್ಟಿನಿಂದ.

5. ಕರ್ಮಗಳು ಅಂಗ, ವಿದ್ಯೆಯು ಅಂಗಿ - ಹೀಗೆ ಸೇರಿಕೊಂಡಿರುವ ವಿದ್ಯಾಕರ್ಮಗಳಿಂದ.

6. ಕರ್ಮದ ಸಂಬಂಧವೇ ಇಲ್ಲದ ವಿದ್ಯೆಯಿಂದ. ಇಲ್ಲಿ ವಿದ್ಯೆ ಎಂದರೆ ಸಿದ್ಧಾಂತಿಗೆ ಒಪ್ಪಾಗಿರುವ ಆತ್ಮಜ್ಞಾನವು.

ಜ್ಞಾನಾದಿನಾ । ''ವಿದ್ವಾನ್ ಯಜತೇ'' (?), ''ವಿದ್ವಾನ್ ಯಾಜಯತಿ'' (?) - ಇತಿ ಚ ವಿದುಷ ಏವ ಕರ್ಮಣ್ಯಧಿಕಾರಃ ಪ್ರದರ್ಶ್ಯತೇ ಸರ್ವತ್ರ । ''ಜ್ಞಾತ್ವಾ ಚಾನುಷ್ಠಾನಮ್'' (?) ಇತಿ ಚ । ಕೃತ್ಸ್ನಶ್ಚ ವೇದಃ ಕರ್ಮಾರ್ಥಃ ಇತಿ ಹಿ ಮನ್ಯಂತೇ ಕೇಚಿತ್ । ಕರ್ಮಭ್ಯಶ್ಚೇತ್ ಪರಂ ಶ್ರೇಯೋ ನಾವಾಪ್ಯತೇ ವೇದೋಽನರ್ಥಕಃ ಸ್ಯಾತ್ ॥

(ಭಾಷ್ಯಾರ್ಥ)

ಇವುಗಳಲ್ಲಿ[1] ಬರಿಯ ಕರ್ಮಗಳಿಂದಲೇ (ಮೋಕ್ಷವು) ಉಂಟಾದೀತು (ಎಂಬ ಪಕ್ಷವು ಮೊದಲು ತೋರುತ್ತದೆ). ಏಕೆಂದರೆ ಸಮಸ್ತ ವೇದಗಳ ಅರ್ಥವನ್ನೂ ಅರಿತುಕೊಂಡವನಿಗೇ ಕರ್ಮದಲ್ಲಿ ಅಧಿಕಾರವುಂಟಾಗುತ್ತದೆ.[2] ''ದ್ವಿಜನಾದವನು ರಹಸ್ಯಗಳಿಂದೊಡಗೂಡಿದ ವೇದವೆಲ್ಲವನ್ನೂ ಸಂಪಾದಿಸಿಕೊಳ್ಳಬೇಕು'' ಎಂಬ (ಮನು. ೨-೧೬೫) ಸ್ಮೃತಿಯು ಇದಕ್ಕೆ ಪ್ರಮಾಣವು. (ಇಲ್ಲಿ) ವೇದಸಂಪಾದನೆ ಎಂದರೆ ಉಪನಿಷತ್ತುಗಳ ಅರ್ಥವಾದ ಆತ್ಮಜ್ಞಾನವನ್ನೂ ಸೇರಿಸಿಕೊಂಡೇ (ಮಾಡ ತಕ್ಕದ್ದಾಗಿದೆ).[3] ''ತಿಳಿದವನು ಯಾಗಮಾಡಬೇಕು'' (?) (ಏಕೆಂದರೆ), ''ತಿಳಿದವನು ಯಾಗವನ್ನು ಮಾಡಿಸಬೇಕು''[4] (?) ಎಂದು ಜ್ಞಾನಿಗೆ ಕರ್ಮದಲ್ಲಿ ಅಧಿಕಾರವನ್ನು ಎಲ್ಲೆಲ್ಲಿಯೂ ಹೇಳಿರುತ್ತದೆ.[5] ''ಅರಿತುಕೊಂಡು ಅನುಷ್ಠಾನಮಾಡಬೇಕು'' (?) ಎಂದೂ (ವಚನವಿದೆ).[6] ವೇದವೆಲ್ಲವೂ ಕರ್ಮಕ್ಕಾಗಿಯೇ (ವಿಹಿತವಾಗಿರುವ) ದೆಂದೇ ಕೆಲವರು ಅಭಿಪ್ರಾಯಪಡುತ್ತಾರಲ್ಲವೆ ?[7] ಕರ್ಮಗಳಿಂದ ಹೆಚ್ಚಿನ ಶ್ರೇಯಸ್ಸು ದೊರೆಯದಿದ್ದರೆ ವೇದವು ನಿರರ್ಥಕ(ವೆಂದಾ)ದೀತು.[8]

---

1. ಮೇಲೆ ಹೇಳಿದ ಕರ್ಮ, ಜ್ಞಾನಾಪೇಕ್ಷಕರ್ಮ, ಜ್ಞಾನಕರ್ಮಗಳು, ಕರ್ಮಾಪೇಕ್ಷಜ್ಞಾನ, ಬರಿಯ ಜ್ಞಾನ - ಎಂದು ಮೋಕ್ಷಸಾಧನಗಳನ್ನು ವಿಕಲ್ಪಿಸುವ ಐದು ಪಕ್ಷಗಳಲ್ಲಿ.

2. ಸೂ ಭಾ. ೩-೪-೬ ರಲ್ಲಿ ಹೇಳಿರುವ ಪೂರ್ವಪಕ್ಷವಿದು.

3. ಛಾಂ. ೬-೧೫-೧ ಮುಂತಾದ ಶ್ರುತಿಗಳಲ್ಲದೆ ಸ್ಮೃತಿಗಳೂ ವೇದಾರ್ಥಜ್ಞಾನವೆಲ್ಲವನ್ನೂ ದ್ವಿಜರು ಸಂಪಾದಿಸಿಕೊಂಡೇ ಇರಬೇಕೆಂದು ಹೇಳುತ್ತವೆ ಎಂದರ್ಥ. ಸ್ಮೃತಿಯಲ್ಲಿ ರಹಸ್ಯದೊಡನೆ ಎಂದಿಷ್ಟೇ ಇದೆ, ಅರ್ಥಜ್ಞಾನವೆಂಬ ಮಾತು ಇಲ್ಲವಲ್ಲ ! ಎಂಬ ಆಕ್ಷೇಪಕ್ಕೆ ಪರಿಹಾರವಾಗಿ ಈ ಮಾತನ್ನು ಆಡಿದೆ.

4. ವೇದದಲ್ಲಿ ಕರ್ಮಪ್ರಸ್ತಾವದಲ್ಲಿ ಅನೇಕಸ್ಥಲಗಳಲ್ಲಿ ಈ ವಚನಗಳಿವೆ.

5. ಆದ್ದರಿಂದ ಅರ್ಥವಿಜ್ಞಾನವು ಅವಶ್ಯ. 6. ಇದು ಯಾವ ವಚನವೋ ತಿಳಿಯದು.

7. ಕರ್ಮಮೀಮಾಂಸಕರು. ಜೈ. ಸೂ. ೧-೨-೧, ಶಾ. ಭಾ. ೧-೧-೧ ಮುಂತಾದ ವಚನಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

8. ಈ ವಾಕ್ಯವು ವಾ॥ ಕಾ॥ ಪಾಠಗಳಲ್ಲಿಲ್ಲ.

(ಭಾಷ್ಯ)

೭೧. ನ । ನಿತ್ಯತ್ವಾನ್ಮೋಕ್ಷಸ್ಯ । ನಿತ್ಯೋ ಹಿ ಮೋಕ್ಷ ಇಷ್ಯತೇ । ಕರ್ಮ ಕಾರ್ಯಸ್ಯ ಚ ಅನಿತ್ಯತ್ವಂ ಪ್ರಸಿದ್ಧಂ ಲೋಕೇ । ಕರ್ಮಭಿಶ್ಚೇದ್ಧ್ರಿಯೇತ, ಅನಿತ್ಯಂ ಸ್ಯಾತ್ ; ತಚ್ಚ ಅನಿಷ್ಟಮ್ । "ತದ್ಯಥೇಹ ಕರ್ಮಜಿತೋ ಲೋಕಃ ಕ್ಷೀಯತೇ" (ಛಾಂ ೮-೧-೬) ಇತಿ ನ್ಯಾಯಾನುಗೃಹೀತಶ್ರುತಿವಿರೋಧಾತ್[1] । (ನನು)[2] ಕಾಮ್ಯ ಪ್ರತಿಷಿದ್ಧಯೋರನಾರಮ್ಭಾತ್ ; ಅರಬ್ಧಸ್ಯ ಚ ಕರ್ಮಣ ಉಪಭೋಗೇನ ಕ್ಷಯಾತ್, ನಿತ್ಯಾನುಷ್ಠಾನಾಚ್ಚ ಪ್ರತ್ಯವಾಯಾನುತ್ಪತ್ತೇಃ ಜ್ಞಾನನಿರಪೇಕ್ಷ ಏವ ಮೋಕ್ಷಃ - ಇತಿ ಚೇತ್ । ತಚ್ಚ ನ । ಕರ್ಮಶೇಷಸಂಭವಾತ್[3] ತನ್ನಿಮಿತ್ತಶರೀರಾನ್ತರೋತ್ಪತ್ತ್ಯಿ[4] ಪ್ರಾಪ್ನೋತಿ ಇತಿ ಪ್ರತ್ಯುಕ್ತಮ್ । ಕರ್ಮಶೇಷಸ್ಯ ಚ ನಿತ್ಯಾನುಷ್ಠಾನೇನ ಅವಿರೋಧಾತ್ ಕ್ಷಯಾನುಪಪತ್ತಿಃ ಇತಿ ಚ ॥

(ಭಾಷ್ಯಾರ್ಥ)

(ಇದು ಸರಿ)ಯಲ್ಲ. ಏಕೆಂದರೆ ಮೋಕ್ಷವು ನಿತ್ಯವಾಗಿರುತ್ತದೆ ; ಮೋಕ್ಷವು ನಿತ್ಯವೆಂಬುದು (ಎಲ್ಲರಿಗೂ) ಇಷ್ಟವಾಗಿದೆಯಷ್ಟೆ ? ಕರ್ಮದ ಕಾರ್ಯವು ಅನಿತ್ಯವಾಗಿರುವದೆಂಬುದೂ ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ಕರ್ಮಗಳಿಂದ ಮೋಕ್ಷ (ವುಂಟಾಗುವ)ದಾದರೆ (ಅದು) ಅನಿತ್ಯವಾಗುವದು ; ಅದಂತೂ (ಯಾರಿಗೂ) ಒಪ್ಪಿಲ್ಲ (ಕರ್ಮಗಳಿಂದ ನಿತ್ಯವಾದ ಮೋಕ್ಷವು ದೊರಕುವದೆಂಬುದು) "ಇಲ್ಲಿ ಕರ್ಮಗಳಿಂದ ಗೆದ್ದುಕೊಂಡ ಲೋಕವು ಹೇಗೆ ಕ್ಷಯವಾಗುತ್ತದೆಯೋ (ಹಾಗೆ ಅಲ್ಲಿ ಪುಣ್ಯದಿಂದ ಗಳಿಸಿದ ಲೋಕವೂ ಕ್ಷಯವಾಗುತ್ತದೆ.)" (ಛಾಂ. ೮-೧-೬) ಎಂಬ ಯುಕ್ತಿಯ ಬೆಂಬಲವುಳ್ಳ[5] ಶ್ರುತಿಗೆ ವಿರುದ್ಧ.

(ಆಕ್ಷೇಪ:-) ಕಾಮ್ಯಪ್ರತಿಷಿದ್ಧ(ಕರ್ಮ)ಗಳನ್ನು ಮಾಡದೆ ಇರುವದರಿಂದಲೂ ಫಲವನ್ನು ಕೊಟ್ಟಿರುವ ಕರ್ಮವು ಉಪಭೋಗದಿಂದಲೇ ಕ್ಷಯವಾಗುವದರಿಂದಲೂ ನಿತ್ಯಕರ್ಮವನ್ನು ಮಾಡುವದರಿಂದ ಪ್ರತ್ಯವಾಯವುಂಟಾಗದೆ ಇರುವದರಿಂದಲೂ ಜ್ಞಾನದ ಗೋಜಿಲ್ಲದೆಯೇ ಮೋಕ್ಷ(ವುಂಟಾಗಬಹುದಲ್ಲವೆ) ?

---

1. ಈ ಮಾತು ವಾ॥ ಪಾಠದಲ್ಲಿಲ್ಲ.

2. ಈ ಮಾತು ಆ॥ ಪಾಠದಲ್ಲಿಲ್ಲ.

3. 'ಶೇಷಕರ್ಮಾಸಂಭವಾತ್' ಎಂದು ಆ॥ ಪಾಠ

4. 'ತನ್ನಿಮಿತ್ತಾ ಶರೀರಾನ್ತರೋತ್ಪತ್ತಿಃ' ಎಂದು ವಾ॥ ಪಾಠ.

5. ಈ ವಾಕ್ಯವು ನಾವು ಮಾಡಿರುವಂತೆ ಅಧ್ಯಾಹಾರಮಾಡಿಕೊಂಡಲ್ಲದೆ ಸರಳವಾಗಿ ಅನ್ವಯಿಸುವದಿಲ್ಲ ; ಆದ್ದರಿಂದಲೋ ಏನೊ, ವಾ॥ ಕಾ॥ ಪಾಠದಲ್ಲಿ ಇದನ್ನು ಬಿಟ್ಟು ಬಿಟ್ಟಿದೆ.

(ಪರಿಹಾರ:-) ಇದೂ (ಸರಿ)ಯಲ್ಲ. ಏಕೆಂದರೆ (ಇನ್ನೂ) ಕರ್ಮಗಳು ಉಳಿದುಕೊಂಡಿರಬಹುದಾದ್ದರಿಂದ, ಅವುಗಳ ನಿಮಿತ್ತದಿಂದ ಮತ್ತೊಂದು ಶರೀರ ವುಂಟಾಗಬೇಕಾಗುವದೆಂದು ಇದಕ್ಕೆ (ಹಿಂದೆಯೇ) ಉತ್ತರವನ್ನು ಹೇಳಿದ್ದಾಗಿದೆ. ಉಳಿದಿರುವ ಕರ್ಮಕ್ಕೂ ನಿತ್ಯಕರ್ಮದ ಅನುಷ್ಠಾನಕ್ಕೂ ವಿರೋಧವಿಲ್ಲದಿರುವದರಿಂದ (ಕರ್ಮವು) ಕ್ಷಯವಾಗಲಾರದೆಂದೂ (ಹೇಳಿದ್ದಾಗಿದೆ).[1]

(ಭಾಷ್ಯ)

೭೨. ಯದುಕ್ತಂ ''ಸಮಸ್ತವೇದಾರ್ಥಜ್ಞಾನವತಃ ಕರ್ಮಾಧಿಕಾರಾತ್'' ಇತ್ಯಾದಿ । ತಚ್ಚ ನ । ಶ್ರುತಜ್ಞಾನವ್ಯತಿರೇಕಾತ್ ಉಪಾಸನಸ್ಯ । ಶ್ರುತಜ್ಞಾನಮಾತ್ರೇಣ ಹಿ ಕರ್ಮಣ್ಯಧಿಕ್ರಿಯತೇ, ನೋಪಾಸನಜ್ಞಾನಮ್[2] ಅಪೇಕ್ಷತೇ । ಉಪಾಸನಂ ಚ ಶ್ರುತಜ್ಞಾನಾತ್ ಅರ್ಥಾನ್ತರಂ ವಿಧೀಯತೇ ಮೋಕ್ಷಫಲಮ್ । ಅರ್ಥಾನ್ತರಪ್ರಸಿದ್ಧೇಶ್ಚ ಸ್ಯಾತ್, 'ಶ್ರೋತವ್ಯಃ' ಇತ್ಯುಕ್ತ್ವಾ ತದ್ವ್ಯತಿರೇಕೇಣ 'ಮನ್ತವ್ಯೋ ನಿದಿಧ್ಯಾಸಿತವ್ಯಃ' (ಬೃ. ೨-೪-೫) ಇತಿ ಯತ್ಸಾನ್ತರವಿಧಾನಾತ್ । ಮನನನಿದಿಧ್ಯಾಸನಯೋಶ್ಚ ಪ್ರಸಿದ್ಧಂ ಶ್ರವಣಜ್ಞಾನಾದರ್ಥಾನ್ತರತ್ವಮ್ ॥

(ಭಾಷ್ಯಾರ್ಥ)

''ಸಮಸ್ತವೇದಾರ್ಥವನ್ನೂ ಅರಿತುಕೊಂಡವನಿಗೇ ಕರ್ಮದಲ್ಲಿ ಅಧಿಕಾರ ವುಂಟಾಗುತ್ತದೆ'' ಎಂದುಮುಂತಾಗಿ (ಪೂರ್ವಪಕ್ಷಿಯಿಂದ) ಉಕ್ತವಾಗಿತ್ತಷ್ಟೆ ? ಅದೂ ಸರಿಯಲ್ಲ. ಏಕೆಂದರೆ ಉಪಾಸನೆಯ ಜ್ಞಾನವು ಶ್ರವಣಜ್ಞಾನಕ್ಕಿಂತ ಬೇರೆಯಾಗಿರುತ್ತದೆ.[3] ಶ್ರವಣಜ್ಞಾನಮಾತ್ರದಿಂದಲೇ ಕರ್ಮಕ್ಕೆ ಅಧಿಕಾರಿಯಾಗುತ್ತಾನೆಯೇ ಹೊರತು (ಆ ಅಧಿಕಾರಿಯು) ಉಪಾಸನೆಯನ್ನೇನೂ ಬಯಸುವದಿಲ್ಲ.[4] ಶ್ರವಣಜ್ಞಾನಕ್ಕಿಂತಲೂ ಉಪಾಸನೆಯು ಬೇರೆಯ (ಸಾಧನ)ವಾಗಿಯೇ ಮೋಕ್ಷವೆಂಬ

---

1. ಈ ವಲ್ಲಿಯ ೪ ಮತ್ತು ೫ನೆಯ ಭಾಷ್ಯಭಾಗಗಳನ್ನು ನೋಡಿರಿ.

2. 'ನೋಪಾಸನಮ್' ಎಂದು ಆ।। ಪಾಠ.

3. ಅಧ್ಯಯನವನ್ನು ಮಾಡಿದಮಾತ್ರಕ್ಕೆ ಕರ್ಮಕ್ಕೆ ಅಧಿಕಾರಿಯಾಗಬಹುದು ಎಂಬ ಸಮಾಧಾನವನ್ನು ಸೂ. ಭಾ. ೩-೪-೧೨ ರಲ್ಲಿ ಹೇಳಿದೆ. ಆತ್ಮಜ್ಞಾನವು ಕರ್ಮಕ್ಕೆ ಅವಶ್ಯವಿಲ್ಲವೆಂದೂ ಅಲ್ಲಿ ಹೇಳಿದೆ.

4. ಶ್ರವಣವು ಬೇಕೆಂದು ಒಪ್ಪಿದರೂ ಉಪಾಸನೆಯೇನೂ ಬೇಕಾಗುವದಿಲ್ಲವೆಂದು ಅಭಿಪ್ರಾಯ. ನಿಜವಾಗಿ ಆತ್ಮಶ್ರವಣವೂ ಕರ್ಮಕ್ಕೆ ಅಂಗವಲ್ಲ. ಏಕೆಂದರೆ ಆತ್ಮನು ಅಕರ್ತೃ ಎಂಬ ಜ್ಞಾನವು ಕರ್ತೃತ್ವಬುದ್ಧಿಯಿಂದ ಮಾಡಬೇಕಾದ ಕರ್ಮಕ್ಕೆ ಉಪಯೋಗವಿಲ್ಲ, ವಿರುದ್ಧವೂ ಆಗಿದೆ. ಗೀ. ಭಾ. ೨-೨೦, ಸೂ. ಭಾ. ೧-೧-೪, ೩-೪-೧೬.

ಫಲಕ್ಕಾಗಿ[1] ವಿಹಿತವಾಗಿರುತ್ತದೆ.[2] ಅದು (ಶ್ರವಣ)ಕ್ಕಿಂತ ಬೇರೊಂದು ಪದಾರ್ಥವೆಂದು ಪ್ರಸಿದ್ಧವಾಗಿರುವದರಿಂದಲೂ (ಹೀಗೆಂದು ತಿಳಿಯಬೇಕು).[3] 'ಶ್ರವಣಮಾಡಬೇಕು' ಎಂದು ಹೇಳಿ ಅದಕ್ಕಿಂತ ಬೇರೆಯಾಗಿ ''ಮನನಮಾಡಬೇಕು, ನಿದಿಧ್ಯಾಸನ ಮಾಡಬೇಕು'' (ಬೃ. ೨-೪-೫) ಎಂದು ಮತ್ತೆ ಬೇರೊಂದು ಯತ್ನವನ್ನು ವಿಧಾನ ಮಾಡುವದರಿಂದ[4] ಮನನನಿದಿಧ್ಯಾಸನಗಳು ಶ್ರವಣಜ್ಞಾನಕ್ಕಿಂತ ಬೇರೆ ಎಂಬುದು ಪ್ರಸಿದ್ಧವೂ ಆಗಿರುತ್ತದೆ.

ಜ್ಞಾನಾಪೇಕ್ಷಕರ್ಮದಿಂದಲೂ ಮೋಕ್ಷವಿಲ್ಲ

(ಭಾಷ್ಯ)

೭೩. ಏವಂ ತರ್ಹಿ ವಿದ್ಯಾಸವ್ಯಪೇಕ್ಷೇಭ್ಯಃ ಕರ್ಮಭ್ಯಃ ಸ್ಯಾನ್ಮೋಕ್ಷಃ । ವಿದ್ಯಾಸಹಿತಾನಾಂ ಚ ಕರ್ಮಣಾಂ ಭವೇತ್ ಕಾರ್ಯಾನ್ತರಾರಮ್ಭಸಾಮರ್ಥ್ಯಮ್ । ಯಥಾ ಸ್ವತೋ ಮರಣಜ್ವರಾದಿಕಾರ್ಯಾರಮ್ಭಸಾಮರ್ಥ್ಯಾನಾಮಪಿ[5] ವಿಷದಧ್ಯಾದೀನಾಂ ಮನ್ತ್ರಶರ್ಕರಾದಿಸಂಯುಕ್ತಾನಾಂ ಕಾರ್ಯಾನ್ತರಾರಮ್ಭಸಾಮರ್ಥ್ಯಮ್, ಏವಂ ವಿದ್ಯಾಸಹಿತೈಃ ಕರ್ಮಭಿರ್ಮೋಕ್ಷ ಆರಭ್ಯತೇ ಇತಿ ಚೇತ್ । ನ । ಆರಭ್ಯಸ್ಯ ಅನಿತ್ಯತ್ವಾತ್ ಇತ್ಯುಕ್ತೋ ದೋಷಃ । ವಚನಾತ್ ಆರಭ್ಯೋಽಪಿ ನಿತ್ಯ ಏವ ಇತಿ ಚೇತ್ । ನ । ಜ್ಞಾಪಕತ್ವಾದ್ ವಚನಸ್ಯ । ವಚನಂ ನಾಮ ಯಥಾಭೂತಸ್ಯಾರ್ಥಸ್ಯ ಜ್ಞಾಪಕಂ ನ ಅವಿದ್ಯಮಾನಸ್ಯ ಕರ್ತೃ । ನ ಹಿ ವಚನಶತೇನಾಪಿ ನಿತ್ಯಮ್ ಆರಭ್ಯತೇ, ಆರಬ್ಧಂ ವಾ ಅವಿನಾಶಿ ಭವೇತ್ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ:-) ಹಾಗಾದರೆ ವಿದ್ಯೆಯನ್ನು ಬಯಸುವ ಕರ್ಮಗಳಿಂದ ಮೋಕ್ಷ

1. 'ಮೋಕ್ಷಫಲಮ್' ಎಂಬುದನ್ನು 'ಉಪಾಸನಮ್' ಎಂಬುದಕ್ಕೆ ವಿಶೇಷಣವಾಗಿ ಮಾಡಿಕೊಳ್ಳಬೇಕು

2. ನಿದಿಧ್ಯಾಸನವು ವಿಹಿತವಾಗಿದೆ ಎಂದು ಇಲ್ಲಿ ಇಟ್ಟುಕೊಂಡಿದೆ. ಈ ಪಕ್ಷದಲ್ಲಿ ನಿದಿಧ್ಯಾಸನವೂ ಆತ್ಮದರ್ಶನಕ್ಕೆ ವಿಹಿತವಾಗಿರುವ ಸಾಧನವು. ಇದು ಸೂ. ಭಾ. ೪-೧-೧ ರಲ್ಲಿ ಸೂಚಿತವಾಗಿದೆ. ನಿದಿಧ್ಯಾಸನವೆಂದರೆ ವಿಜ್ಞಾನವೇ, ಆತ್ಮನ ಅರಿವೇ ಎಂಬ ಪಕ್ಷವು ಬೃ. ಭಾ. ೨-೪-೫ ಮತ್ತು ಬೃ. ವಾ. ೨-೪-೨೧೭ ರಿಂದ ೨೩೪ ರಲ್ಲಿ ಕಾಣುತ್ತದೆ.

3. ನಿದಿಧ್ಯಾಸನವೇ ಬೇರೆಯಾಗಿರುವಾಗ ಮನನನಿದಿಧ್ಯಾಸನಗಳಿಂದ ಆಗುವ ದರ್ಶನವು ಬೇರೆಯೆಂದೂ, ಕರ್ಮಕ್ಕೂ ಅದಕ್ಕೂ ಸಂಬಂಧವಿಲ್ಲವೆಂದೂ ಹೇಳತಕ್ಕದ್ದೇನು ?

4. ನಿದಿಧ್ಯಾಸನವಿಧಿಯು ಶ್ರುತ್ಯವಗತವೆಂದು ಭಾವ.

5. 'ಸಮರ್ಥಾನಾಮಪಿ' ಎಂದು ವಾ।। ಪಾಠ.

ವಾಗಬಹುದು. ವಿದ್ಯೆಯಿಂದೊಡಗೂಡಿದ ಕರ್ಮಗಳಿಗೆ ಮತ್ತೊಂದು (ಬಗೆಯ) ಕಾರ್ಯವನ್ನು ಉಂಟುಮಾಡುವ ಸಾಮರ್ಥ್ಯವುಂಟಾಗಲೂಬಹುದು. ಹೇಗೆ ವಿಷ, ಮೊಸರು - ಮುಂತಾದವುಗಳು ತಮ್ಮಮಟ್ಟಿಗೆ ಇರುವಾಗ ಸಾವು, ಜ್ವರ - ಮುಂತಾದ ಕಾರ್ಯವನ್ನುಂಟುಮಾಡುವ ಸಾಮರ್ಥ್ಯವುಳ್ಳವುಗಳಾಗಿದ್ದರೂ ಮಂತ್ರ, ಸಕ್ಕರೆ-ಮುಂತಾದವುಗಳೊಡನೆ ಸೇರಿದರೆ (ಅವಕ್ಕೆ) ಬೇರೊಂದು ಕಾರ್ಯವನ್ನುಂಟು ಮಾಡುವ ಸಾಮರ್ಥ್ಯವು (ಬರುವದೋ)[1] ಅದರಂತೆ ವಿದ್ಯೆಯೊಡನೆ ಸೇರಿದ ಕರ್ಮ ಗಳಿಂದ ಮೋಕ್ಷವು ಉಂಟಾಗಬಹುದಲ್ಲ !

(ಸಿದ್ಧಾಂತಿ:-) ಹಾಗಲ್ಲ. (ಏಕೆಂದರೆ) ಯಾವದು ಉಂಟಾಗತಕ್ಕದ್ದೋ (ಅದು) ಅನಿತ್ಯವಾಗಿರುವದು-ಎಂದು (ಈ ಪಕ್ಷದಲ್ಲಿ) ದೋಷವನ್ನು ಹಿಂದೆಯೇ[2] ಹೇಳಿದ್ದಾಗಿದೆ.

(ಪೂರ್ವಪಕ್ಷಿ:-) (ವೇದ)ವಚನದ (ಪ್ರಾಮಾಣ್ಯ)ದಿಂದ[3] ಉಂಟಾಗ ತಕ್ಕದ್ದೂ ನಿತ್ಯವೇ (ಆಗಬಹುದಲ್ಲ) !

(ಸಿದ್ಧಾಂತಿ:-) ಹಾಗಲ್ಲ. ಏಕೆಂದರೆ ವಚನವು **ಜ್ಞಾಪಕವಾಗಿರುತ್ತದೆ** ; ವಚನ ವೆಂಬುದು ಇರುವ ವಸ್ತುವನ್ನು ಇದ್ದಂತೆ ತಿಳಿಸತಕ್ಕದ್ದು, ಇಲ್ಲದ್ದನ್ನು ಉಂಟುಮಾಡ ತಕ್ಕದ್ದಲ್ಲ.[4] **ನೂರು ವಚನಗಳಿಂದಲೂ ನಿತ್ಯವನ್ನು ಉಂಟುಮಾಡುವದು ಆಗಲಾರದು, ಉಂಟಾದದ್ದು ನಾಶವಾಗತಕ್ಕದ್ದಲ್ಲವೆಂದೂ ಆಗಲಾರದು.**[5]

1. ಮೊಸರು, ವಿಷ - ಇವುಗಳೂ ತೃಪ್ತಿ, ಪುಷ್ಟಿ ಎಂಬ ಬೇರೊಂದು ಕಾರ್ಯವನ್ನು ಉಂಟುಮಾಡುವದು ಅನುಭವದಲ್ಲಿದೆ ಎಂದರ್ಥ. ಸೂ. ಭಾ. ೪-೧-೧೬, ಬೃ. ಭಾ. ೩-೩ ರ ಸಂಬಂಧಭಾಷ್ಯ - ಇವುಗಳಲ್ಲಿಯೂ ಈ ಯುಕ್ತಿಯನ್ನೊಡ್ಡುವ ಪೂರ್ವಪಕ್ಷವಿದೆ.

2. ಈ ವಲ್ಲಿಯ ೮ ನೆಯ ಭಾ. ಭಾ. ದಲ್ಲಿ.

3. ಶಾಸ್ತ್ರಕ್ಕೆ ವಿರುದ್ಧವಾಗಿ ಯುಕ್ತಿಯನ್ನು ಹೂಡಬಾರದು ಎಂದು ಪೂರ್ವಪಕ್ಷಿಯ ಭಾವ. ಜ್ಞಾನಕರ್ಮಸಮುಚ್ಚಯದಿಂದ ಬ್ರಹ್ಮಲೋಕವನ್ನು ಪಡೆದವನು ಸಂಸಾರಕ್ಕೆ ಮರಳಿ ಬರುವದಿಲ್ಲವೆಂದು ಛಾಂ. ೮-೧೫-೧ ಮುಂತಾದ ಶ್ರುತಿಗಳಲ್ಲಿದೆ. ಅದರ ಬಲದಿಂದ ಈ ಪೂರ್ವಪಕ್ಷವನ್ನು ಒಡ್ಡಿದೆ.

4. ಯಾವ ವಸ್ತುವನ್ನೂ ಹೊಸದಾಗಿ ಉಂಟುಮಾಡತಕದ್ದಲ್ಲ.

5. ವಚನವು ಅನುಭವಕ್ಕೆ ವಿರುದ್ಧವಾಗಿ ಹೇಳಿದರೆ ಅಪ್ರಮಾಣವೇ ಆಗುತ್ತದೆ. ಆದ್ದರಿಂದ ಅನುಭವವಿರುದ್ಧವಾಗಿ ವಚನಕ್ಕೆ ಅರ್ಥವನ್ನು ಕಲ್ಪಿಸಬಾರದು. ಪ್ರ. ಭಾ. ೬-೨, ಮಾಂ. ಕಾ. ಭಾ. ೨-೩೨ ; ಬೃ. ಭಾ. ೨-೧-೨೦, ೩-೯ ಉಪಸಂಹಾರ ; ಗೀ. ಭಾ. ೧೮-೬೬ ನೋಡಿ.

ಜ್ಞಾನಕರ್ಮಗಳ ಸಮಸಮುಚ್ಚಯದಿಂದಲೂ ಮೋಕ್ಷವಿಲ್ಲ

(ಭಾಷ್ಯ)

೭೪. ಏತೇನ ವಿದ್ಯಾಕರ್ಮಣೋಃ ಸಂಹತಯೋರ್ಮೋಕ್ಷಾರಮ್ಭಕತ್ವಂ ಪ್ರತ್ಯುಕ್ತಮ್ । ವಿದ್ಯಾಕರ್ಮಣೇ ಮೋಕ್ಷಪ್ರತಿಬನ್ಧಹೇತುನಿವರ್ತಕೇ ಇತಿ ಚೇತ್ । ನ । ಕರ್ಮಣಃ ಫಲಾನ್ತರದರ್ಶನಾತ್ । ಉತ್ಪತ್ತಿಸಂಸ್ಕಾರವಿಕಾರಾಪ್ತಯೋ[1] ಹಿ ಫಲಂ ಕರ್ಮಣೋ ದೃಶ್ಯತೇ । ಉತ್ಪತ್ತ್ಯಾದಿಫಲವಿಪರೀತಶ್ಚ ಮೋಕ್ಷಃ ॥

(ಭಾಷ್ಯಾರ್ಥ)

ಹೀಗೆಂದದ್ದರಿಂದ[2] ವಿದ್ಯಾಕರ್ಮಗಳು (ಸಮಪ್ರಧಾನವಾಗಿ) ಸೇರಿಕೊಂಡು ಮೋಕ್ಷವನ್ನುಂಟುಮಾಡುವವು ಎಂಬುದನ್ನೂ ತಿರಸ್ಕರಿಸಿದಂತೆಯೇ ಆಯಿತು.

(ಪೂರ್ವಪಕ್ಷಿ:-) ವಿದ್ಯಾಕರ್ಮಗಳು ಮೋಕ್ಷಕ್ಕೆ ಅಡ್ಡಿಯಾಗಿರುವ ಕಾರಣವನ್ನು ಹೋಗಲಾಡಿಸಬಹುದಲ್ಲ !?[3]

(ಸಿದ್ಧಾಂತಿ:-) ಹಾಗಲ್ಲ. ಏಕೆಂದರೆ ಕರ್ಮಕ್ಕೆ ಮತ್ತೊಂದು ಬಗೆಯ ಫಲವು ಕಂಡುಬರುತ್ತದೆ. ಹುಟ್ಟುವದು, ಸಂಸ್ಕಾರವನ್ನು ಹೊಂದುವದು, ವಿಕಾರವನ್ನು ಹೊಂದುವದು, (ಹೊಸದಾಗಿ) ಪಡೆಯುವದು - ಇವೇ ಕರ್ಮಕ್ಕೆ[4] ಫಲವೆಂದು ಕಂಡುಬರುತ್ತಿದೆ. ಆದರೆ ಮೋಕ್ಷವು (ಈ) ಹುಟ್ಟುವದೇ ಮುಂತಾದ ಫಲಕ್ಕೆ ವಿರುದ್ಧವಾಗಿರುತ್ತದೆ.[5]

(ಭಾಷ್ಯ)

೭೫. ಗತಿಶ್ರುತೇರಾಪ್ಯ ಇತಿ ಚೇತ್ । 'ಸೂರ್ಯದ್ವಾರೇಣ' (ಮುಂ. ೧-೨-೧೧) 'ತಯೋರ್ಧ್ವಮಾಯನ್' (ಕ. ೨-೩-೧೬, ಛಾಂ. ೮-೬-೬) ಇತ್ಯೇವಮಾದಿಗತಿ

1. "ಉತ್ಪತ್ತಿವಿಕಾರಸಂಸ್ಕಾರಾಪ್ತಯೋ ಹಿ" ಎಂದು ವಾ॥ ಪಾಠ.

2. ಉಂಟಾಗತಕ್ಕದ್ದು ನಿತ್ಯವೆಂಬುದು ಆಗಲಾರದು ಎಂದದ್ದರಿಂದ.

3. ಪಾಪವೇ ಮುಂತಾದ ಅಡ್ಡಿಗಳು ಹೋದರೆ ಮುಕ್ತಿಯು ತಾನೇ ಸಿದ್ಧವಾಗಿರುವದರಿಂದ ಅಪ್ರಯತ್ನವಾಗಿ ದೊರೆಯುತ್ತದೆ ; ವಿದ್ಯಾಕರ್ಮಗಳಿಂದ ಅದು ಹೊಸತಾಗಿ ಉಂಟಾಗುವದಲ್ಲವಾದ್ದರಿಂದ ಅದು ಅನಿತ್ಯವೆಂಬ ದೋಷವೂ ಬರುವದಿಲ್ಲ ಎಂದು ಭಾವ.

4. ಉತ್ಪತ್ತಿ ಮುಂತಾದವು ಕರ್ಮಕ್ಕೆ ಫಲವೆಂದು ಮೀಮಾಂಸಕರೂ ಒಪ್ಪಿರುತ್ತಾರೆ.

5. ಉತ್ಪತ್ತಿ ಮುಂತಾದವುಗಳು ಇಲ್ಲದ್ದರಿಂದ ಮುಕ್ತಿಯು ಕರ್ಮಕಾರ್ಯವಲ್ಲವೆಂಬುದನ್ನು **ಈ ಸಂಬಂಧಭಾಷ್ಯ**, ಮುಂ. ಭಾ. ೨-೧-೧೨, ಬೃ. ಭಾ. ೩-೩-೧ ಇವುಗಳಲ್ಲಿ ಪ್ರತಿಪಾದಿಸಿದೆ.

ಶ್ರುತಿಭ್ಯಃ ವ್ಯಾಪ್ಯೋ ಮೋಕ್ಷಃ ಇತಿ ಚೇತ್ । ನ । ಸರ್ವಗತತ್ವಾತ್ । ಗನ್ತೃಭಿಶ್ಚಾನನ್ಯತ್ವಾತ್[1] । ಆಕಾಶಾದಿಕಾರಣತ್ವಾತ್ ಸರ್ವಗತಂ ಬ್ರಹ್ಮ । ಬ್ರಹ್ಮಾದ್ಯತಿರಿಕ್ತಾಶ್ಚ ಸರ್ವೇ ವಿಜ್ಞಾನಾತ್ಮಾನಃ । ಅತೋ ನಾಪ್ಯೋ ಮೋಕ್ಷಃ । ಗನ್ತುರನ್ಯದ್ ವಿಭಿನ್ನ ದೇಶಂ ಚ[2] ಭವತಿ ಗನ್ತವ್ಯಮ್ । ನ ಹಿ ಯೇನೈವಾವ್ಯತಿರಿಕ್ತಂ ಯತ್ ತತ್ ತೇನ್ಯಂ ಗಮ್ಯತೇ[3] । ಅನನ್ಯತ್ವಪ್ರಸಿದ್ಧಿಶ್ಚ[4] "ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್" (೨-೭), "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ" (ಗೀ. ೧೩-೨) ಇತ್ಯೇವಮಾದಿಶ್ರುತಿ ಸ್ಮೃತಿಶತೇಭ್ಯಃ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ:-) ಗಮನ(ವನ್ನು ಹೇಳುವ) ಶ್ರುತಿಯ (ಪ್ರಮಾಣದಿಂದ ಮೋಕ್ಷವು) ಪಡೆಯತಕ್ಕದ್ದೇ (ಎಂದು ನಿಶ್ಚಯವಾಗುತ್ತದೆ). ಹೇಗೆಂದರೆ (ಆ ಕಲ್ಮಷರಹಿತರು) 'ಸೂರ್ಯನ ಮೂಲಕವಾಗಿ' (ಅಮೃತಪುರುಷನಿರುವಲ್ಲಿಗೆ ಹೋಗುವರು) (ಮುಂ. ೧-೨-೧೧), "ಆ (ನಾಡಿಯಿಂದ) ಮೇಲಕ್ಕೆ ಹೋಗುವವನು (ಅಮೃತತ್ವವನ್ನು ಹೊಂದುವನು)" (ಕ. ೨-೩-೧೬, ಛಾಂ. ೮-೬-೬) ಇವೇ ಮುಂತಾದ[5] ಗಮನ(ವನ್ನು ಹೇಳುವ) ಶ್ರುತಿ(ಪ್ರಮಾಣದಿಂದ) ಮೋಕ್ಷವು (ಹೋಗಿ) ಪಡೆಯತಕ್ಕದ್ದೇ (ಎಂದು ನಿಶ್ಚಯಿಸಬೇಕು).

(ಸಿದ್ಧಾಂತಿ:-) ಹಾಗಲ್ಲ. ಏಕೆಂದರೆ (ಬ್ರಹ್ಮವು) ಸರ್ವಗತವಾಗಿರುತ್ತದೆ, ಗಂತೃಗಳಿಗೆ ಅನನ್ಯವಾಗಿಯೂ ಇರುತ್ತದೆ. (ಇದರ ವಿವರ) :- ಬ್ರಹ್ಮವು ಆಕಾಶವೇ ಮುಂತಾದದ್ದಕ್ಕೂ[6] ಕಾರಣವಾಗಿರುವದರಿಂದ ಎಲ್ಲೆಲ್ಲಿಯೂ ಇರುವದಾಗಿರುತ್ತದೆ. ಯಾವ ವಿಜ್ಞಾನಾತ್ಮರುಗಳೂ ಬ್ರಹ್ಮಕ್ಕಿಂತ ಬೇರೆಯಾಗಿರುವದೂ ಇಲ್ಲ. ಆದ್ದರಿಂದ

1. 'ಗನ್ತೃಭ್ಯಶ್ಚ' ಎಂದು ವಾ॥ ಪಾಠ.

2. "ವಿಭಿನ್ನಂ ದೇಶಂ ಪ್ರತಿ" ಎಂಬ (ಆ॥) ಪಾಠಕ್ಕಿಂತ ಈ (ವಾ॥) ಪಾಠವು ಮೇಲು.

3. (ಆ॥) ಪಾಠದಲ್ಲಿ "ಗಮ್ಯತೇ ತತ್" ಎಂದು ಒಂದು 'ತತ್' ಹೆಚ್ಚಾಗಿದೆ.

4. 'ತದನನ್ಯತ್ವಸಿದ್ಧಿಶ್ಚ' ಎಂಬ ವಾ॥ ಪಾಠ ; 'ಅನನ್ಯತ್ವಪ್ರಸಿದ್ಧೇಶ್ಚ' ಎಂಬ ಆ॥ ಪಾಠಕ್ಕಿಂತಲೂ ಇದೇ ಉತ್ತಮ.

5. ' ಸೇನ್ಯಯೋನಿಃ' ಎಂದು ಈ ವಲ್ಲಿಯ ೬ನೆಯ ಅನುವಾಕದಲ್ಲಿದೆ ; ಪ್ರ. ೩-೭, ಛಾಂ. ೮-೬-೫ ಮುಂತಾದ ಕಡೆಗಳಲ್ಲಿ ಮೋಕ್ಷವನ್ನು ಒಂದು ಮಾರ್ಗದಿಂದ ಹೋಗಿ ಪಡೆಯಬೇಕೆಂದು ಹೇಳಿದೆ ಎಂದು ಪೂರ್ವಪಕ್ಷಿಯ ಭಾವ.

6. ಆಕಾಶಕ್ಕೂ ಕಾಲಕ್ಕೂ ಕಾರಣವಾಗಿರುವದರಿಂದ ಅದು ದೇಶಕಾಲಗಳಿಂದ ಮರೆಯಾಗಿಲ್ಲ.

ಮೋಕ್ಷವು ಪಡೆಯತಕ್ಕದ್ದಲ್ಲ.[1] ಹೋಗುವವನಿಗಿಂತ ಬೇರೆಯಾಗಿರುವುದೂ ಬೇರೆಯ ದೇಶದಲ್ಲಿರುವದೂ[2] ಹೋಗಿ (ಪಡೆಯ) ತಕ್ಕದ್ದಾಗಿರುತ್ತದೆ. ಯಾವದು ಯಾವದನ್ನು ಬಿಟ್ಟು ಬೇರೆಯಾಗಿರುವದಿಲ್ಲವೋ ಅದು ಅದೇ (ಮತ್ತೊಂದು ಕಡೆಗೆ) ಹೋಗಿ ಪಡೆಯತಕ್ಕದ್ದಾಗಿರುವದಿಲ್ಲವಷ್ಟೆ ?[3] ''ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕಿತು'' (೨-೬), ''ಕ್ಷೇತ್ರಜ್ಞನನ್ನು ನನ್ನನ್ನಾಗಿಯೇ ತಿಳಿ'' (ಗೀ. ೧೩-೨) ಮುಂತಾದ ನೂರಾರು ಶ್ರುತಿಗಳಿಂದಲೂ ಸ್ಮೃತಿಗಳಿಂದಲೂ (ಬ್ರಹ್ಮವು ಹೋಗಿ) ಪಡೆಯುವ ವಿಜ್ಞಾನಾತ್ಮರುಗಳಿಗಿಂತ) ಬೇರೆಯಲ್ಲವೆಂದು ಗೊತ್ತಾಗುತ್ತದೆ.

(ಭಾಷ್ಯ)

೭೬. ಗತ್ಯೈಶ್ವರ್ಯಾದಿಶ್ರುತಿವಿರೋಧಃ ಇತಿ ಚೇತ್ । ಅಥಾಪಿ ಸ್ಯಾತ್ ಯದ್ಯ ಪ್ರಾಪ್ಯೋ ಮೋಕ್ಷಃ ತದಾ ಗತಿಶ್ರುತೀನಾಮ್ 'ಸ ಏಕಧಾ' (ಛಾಂ ೭-೨೬-೨), '' ಸ ಯದಿ ಪಿತೃಲೋಕಕಾಮಃ'' (ಛಾಂ ೮-೨-೧)''ಸ್ತ್ರೀಭಿರ್ವಾ ಯಾನೈರ್ವಾ'' (ಛಾಂ. ೮-೧೨-೩) ಇತ್ಯಾದಿಶ್ರುತೀನಾಂ ಚ ಕೋಪಃ ಸ್ಯಾತ್ ಇತಿ ಚೇತ್ । ನ । ಕಾರ್ಯಬ್ರಹ್ಮವಿಷಯತ್ವಾತ್ ತಾಸಾಮ್ ಕಾರ್ಯೇ ಹಿ ಬ್ರಹ್ಮಣಿ ಸ್ತ್ರ್ಯಾದಯಃ ಸ್ಯುಃ, ಕಾರಣೇ 'ಏಕಮೇವಾದ್ವಿತೀಯಮ್' (ಛಾಂ. ೬-೨-೧), ''ಯತ್ರ ನಾನ್ಯತ್ ಪಶ್ಯತಿ'' (ಛಾಂ. ೭-೨೪-೧), ''ತತ್ ಕೇನ ಕಂ ಪಶ್ಯೇತ್'' (ಬೃ. ೨-೪-೧೪) ಇತ್ಯಾದಿಶ್ರುತಿಭ್ಯಃ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ:-) ಗತಿ, ಐಶ್ವರ್ಯ - ಮುಂತಾದವನ್ನು[4] (ಹೇಳುವ) ಶ್ರುತಿಗಳಿಗೆ ವಿರೋಧವಾಗುತ್ತದೆಯಲ್ಲ ! (ಇದರ ವಿವರ) :- ಇನ್ನೊಂದು (ಆಕ್ಷೇಪ)ವಿದೆ

---

1. ಆದ್ದರಿಂದ ಅದನ್ನು ಎಲ್ಲಿಗಾದರೂ ಹೋಗಿ ಪಡೆಯಬೇಕಾಗಿಲ್ಲ. ಬ್ರಹ್ಮವೇ ಮೋಕ್ಷಸ್ವರೂಪವಾಗಿರುವದರಿಂದ ಬ್ರಹ್ಮವು ಸರ್ವಗತವು ಎಂದುಮುಂತಾಗಿ ಹೇಳಿರುವದು ಅವ್ಯಕೃತವಲ್ಲವೆಂದು ತಿಳಿಯಬೇಕು. ಗತಿಶ್ರುತಿಗಳ ತಾತ್ಪರ್ಯವನ್ನು ಇಷ್ಟರಲ್ಲಿಯೇ ತಿಳಿಸಲಾಗುವದು.

2. ಹೋಗಿ ಪಡೆಯತಕ್ಕ ಗ್ರಾಮವು ಹೋಗುವವನಿಗಿಂತ ಬೇರೆಯಾಗಿರುತ್ತದೆ. ಬ್ರಹ್ಮಸ್ವರೂಪವು ಹೀಗಿಲ್ಲ. ಸೂ. ಭಾ. ೪-೩-೧೪.

3. ತಾನು ಇರುವೆಡೆಯಲ್ಲಿಯೇ ಇರುವದು ತನಗೆ ಪ್ರಾಪ್ಯವಾಗಿರುವದಿಲ್ಲ; ಉದಾಹರಣೆಗೆ ದ್ರವ್ಯವೂ ಗುಣವೂ ಒಂದೇ ಕಡೆಯಲ್ಲಿರುವದರಿಂದ ಅವು ಒಂದಕ್ಕೊಂದು ಪ್ರಾಪ್ಯವಲ್ಲ.

4. ಇಲ್ಲಿ 'ಮುಂತಾದದ್ದು' ಎಂದರೆ ನದಿಗಳು ಸಮುದ್ರವನ್ನು ಸೇರುವಂತೆ ಜೀವರು ಬ್ರಹ್ಮವನ್ನು ಸೇರುವರೆಂದು ಹೇಳುವ ವಿಭಾಗಶ್ರುತಿಗಳು, ಸೃಷ್ಟಿಶ್ರುತಿಗಳು, ಎಂದೂ ಅರ್ಥವನ್ನು ಮಾಡಬಹುದು ; ಆದರೆ ಮುಂದಿನ ಭಾಷ್ಯದಲ್ಲಿ ಈ ವಿಚಾರವಿಲ್ಲ.

ಮೋಕ್ಷವು (ಹೋಗಿ) ಪಡೆಯತಕ್ಕದ್ದಲ್ಲವಾದರೆ ಆಗ ಗಮನ(ವನ್ನು ಹೇಳುವ) ಶ್ರುತಿಗಳಿಗೂ, "ಆವನು ಒಂದು ಪ್ರಕಾರವಾಗಿರುವನು, (ಮೂರು ಪ್ರಕಾರವಾಗಿರುವನು)" (ಛಾಂ ೭-೨೬-೨), "ಆವನಿಗೆ ಪಿತೃಲೋಕವ ಆಸೆಯುಂಟಾದರೆ (ಸಂಕಲ್ಪದಿಂದಲೇ ಆವನ ಪಿತೃಗಳು ಬಂದು ತೋರಿಕೊಳ್ಳುವರು)" (ಛಾಂ. ೮-೨-೧), "ಸ್ತ್ರೀಯರೊಡನಾಗಲಿ ಯಾನಗಳೊಡನಾಗಲಿ (ಆಡುತ್ತಾ)" (ಛಾಂ. ೮-೧೨-೩) ಎಂಬುದೇ ಮುಂತಾದ ಶ್ರುತಿಗಳಿಗೂ ವಿರೋಧವಾಗುವದಲ್ಲ!

(ಸಿದ್ಧಾಂತ:-) ಹಾಗಲ್ಲ. ಏಕೆಂದರೆ ಆ (ಶ್ರುತಿಗಳು) ಕಾರ್ಯಬ್ರಹ್ಮದ ವಿಷಯವಾದವುಗಳಾಗಿವೆ. ಕಾರ್ಯಬ್ರಹ್ಮದಲ್ಲಿ[1] ಸ್ತ್ರೀಯರು ಮುಂತಾದವರು ಇರುವರೇ ಹೊರತು ಕಾರಣಬ್ರಹ್ಮದಲ್ಲಿ[2] (ಇರಲಾರರು). (ಇವೆಲ್ಲವೂ) "ಎರಡನೆಯದಿಲ್ಲದ ಒಂದೇ ಆದ (ಸತ್ತೇ ಆಗಿತ್ತು)" (ಛಾಂ. ೬-೨-೧), "ಎಲ್ಲಿ ಎರಡನೆಯದನ್ನು ಕಾಣುವದಿಲ್ಲವೋ (ಅದು ಭೂಮವು)" (ಛಾಂ. ೭-೨೪-೧), "ಎಲ್ಲಿ ಇವನಿಗೆ ಇದೆಲ್ಲವೂ ಆತ್ಮನೇ ಆಗಿರುವದೋ ಅಲ್ಲಿ ಏತರಿಂದ ಯಾರನ್ನು ಕಂಡಾನು ?" (ಬೃ. ೨-೪-೧೪) ಮುಂತಾದ ಶ್ರುತಿಗಳು (ಈ ಅಭಿಪ್ರಾಯಕ್ಕೆ) ಪ್ರಮಾಣವು.

ಜ್ಞಾನಕರ್ಮಗಳ ಸಮುಚ್ಚಯವು ಆಗುವಂತಿಲ್ಲ

(ಭಾಷ್ಯ)

೭೭. ವಿರೋಧಾಚ್ಚ ವಿದ್ಯಾಕರ್ಮಣೋಃ ಸಮುಚ್ಚಯಾನುಪಪತ್ತಿಃ । ಪ್ರವಿಲೀನ ಕರ್ತ್ರಾದಿಕಾರಕವಿಶೇಷತತ್ತ್ವವಿಷಯಾ[3] ಹಿ ವಿದ್ಯಾ ತದ್ವಿಪರೀತಕಾರಕಸಾಧ್ಯೇನ ಕರ್ಮಣಾ ವಿರುಧ್ಯತೇ । ನ ಹಿ ಏಕಂ ವಸ್ತು ಪರಮಾರ್ಥತಃ ಕರ್ತ್ರಾದಿವಿಶೇಷವತ್ ತಚ್ಚೂನ್ಯಂ ಚ ಇತಿ ಉಭಯಥಾ ದ್ರಷ್ಟುಂ ಶಕ್ಯತೇ । ಅವಶ್ಯಂ ಹಿ ಅನ್ಯತರತ್ ಮಿಥ್ಯಾ ಸ್ಯಾತ್ । ಅನ್ಯತರಸ್ಯ ಚ ಮಿಥ್ಯಾತ್ವಪ್ರಸಙ್ಗೇ ಯುಕ್ತಂ ಯತ್ ಸ್ವಾಭಾವಿಕಾ-ಜ್ಞಾನವಿಷಯಸ್ಯ ದ್ವೈತಸ್ಯ ಮಿಥ್ಯಾತ್ವಮ್ । "ಯತ್ರ ಹಿ ದ್ವೈತಮಿವ ಭವತಿ"

---

1. ಕಾರ್ಯಬ್ರಹ್ಮ, ಅಪರಬ್ರಹ್ಮ, ಸಗುಣಬ್ರಹ್ಮ, ಸವಿಶೇಷಬ್ರಹ್ಮ- ಇವೆಲ್ಲ ಬ್ರಹ್ಮಲೋಕದಲ್ಲಿರುವ ಹಿರಣ್ಯಗರ್ಭನ ಹೆಸರುಗಳು. ಇದೇ ಉಪಾಸ್ಯಬ್ರಹ್ಮ, ಸೂ. ಭಾ. ೧-೧-೧೨, ೪-೩-೭, ೪-೩-೧೪ ಇವುಗಳಲ್ಲಿ ಗಂತವ್ಯವಾದ ಕಾರ್ಯಬ್ರಹ್ಮವನ್ನು ವರ್ಣಿಸಿದೆ.

2. ಕಾರಣಬ್ರಹ್ಮ, ಪರಬ್ರಹ್ಮ, ನಿರ್ಗುಣಬ್ರಹ್ಮ, ನಿರ್ವಿಶೇಷಬ್ರಹ್ಮ - ಇವೆಲ್ಲ ಮುಖ್ಯವಾದ ಬ್ರಹ್ಮದ ಹೆಸರುಗಳು. ಅದನ್ನು ಅಸ್ಥೂಲಾದಿಶಬ್ದಗಳಿಂದ ನಿಷೇಧಮುಖವಾಗಿಯೇ ಶ್ರುತಿಯು ತಿಳಿಸುತ್ತದೆ ಅದರಲ್ಲಿ ಕಾರಣತ್ವವು ಸಾಪೇಕ್ಷವಾಗಿದೆ, ಪರಮಾರ್ಥವಾಗಿಲ್ಲ. ಸೂ. ಭಾ. ೪-೩-೧.

3 'ಪ್ರವಿಲೀನ' ಎಂಬುದರ ಬದಲು 'ಪ್ರಲೀನ' ಎಂದು ವಾ।। ಪಾಠ.

(ಬೃ ೨-೪-೧೪), ''ಮೃತ್ಯೋಃ ನ ಮೃತ್ಯುಮಾಪ್ನೋತಿ'' (ಕ. ೨-೧-೧೦. ಬೃ. ೪-೪-೧೯), ''ಅಥ ಯತ್ರಾನ್ಯತ್ ಪಶ್ಯತಿ ತದಲ್ಪಮ್'' (ಛಾಂ. ೭-೨೪-೧), ''ಆತ್ಮೈವಾನಾವಸ್ಯೋಽಹಮಸ್ಮಿ'' (ಬೃ. ೧-೪-೧೦), ''ಉದರಮನ್ತರಂ ಕುರುತೇ ಅಥ ತಸ್ಯ ಭಯಂ ಭವತಿ'' (೨-೭) - ಇತ್ಯಾದಿಶ್ರುತಿಶತೇಭ್ಯಃ । ನತ್ವತ್ವಂ ಚ ಏಕತ್ವಸ್ಯ । ''ಏಕಧೈವಾನುದ್ರಷ್ಟವ್ಯಮ್'' (ಬೃ. ೪-೪-೨೦), ''ಏಕಮೇವಾದ್ವಿತೀಯಮ್'' (ಛಾಂ. ೬-೨-೧), ''ಬ್ರಹ್ಮೈವೇದಗ್ಂ ಸರ್ವಮ್'' (?), ''ಆತ್ಮೈವೇದಗ್ಂ ಸರ್ವಮ್'' (ಛಾಂ. ೭-೨೫-೨) ಇತ್ಯಾದಿಶ್ರುತಿಭ್ಯಃ । ನ ಚ ಸಂಪ್ರದಾನಕಾರಕಭೇದಾದರ್ಶನೇ ಕರ್ಮ ಉಪಪದ್ಯತೇ । ಅನ್ಯತ್ವದರ್ಶನಾಪವಾದಾಶ್ಚ ವಿದ್ಯಾವಿಷಯೇ ಸಹಸ್ರಶಃ ಶ್ರೂಯನ್ತೇ । ಅತೋ ವಿರೋಧೋ ವಿದ್ಯಾಕರ್ಮಣೋಃ । ಅತಶ್ಚ ಸಮುಚ್ಚಯಾನುಪಪತ್ತಿಃ । ತತ್ರ ಯದುಕ್ತಂ ಸಂಹತಾಭ್ಯಾಂ ವಿದ್ಯಾಕರ್ಮಭ್ಯಾಂ ಮೋಕ್ಷಃ ಇತಿ ಅನುಪಪನ್ನಂ ತತ್ ॥

(ಭಾಷ್ಯಾರ್ಥ)

(ಒಂದೊಂದಕ್ಕೆ) ವಿರೋಧವಿರುವದರಿಂದ ವಿದ್ಯಾಕರ್ಮಗಳಿಗೆ ಸಮುಚ್ಚಯವೆಂಬುದು ಹೊಂದುವಹಾಗೂ ಇಲ್ಲ[1]. ವಿದ್ಯೆಯು ಕರ್ತೃವೇ ಮುಂತಾದ ಕಾರಕ ವಿಶೇಷಗಳು (ಎಲ್ಲವೂ) ಅಡಗಿರುವ ತತ್ತ್ವದ ವಿಷಯವಾದ್ದರಿಂದ[2] ಅದಕ್ಕೆ ವಿರುದ್ಧ (ಸ್ವಭಾವದ್ದಾಗಿ) ಕಾರಕಗಳಿಂದಲೇ ಉಂಟಾಗಬೇಕಾಗಿರುವ ಕರ್ಮಕ್ಕೆ ವಿರುದ್ಧವಾಗಿರುತ್ತದೆ. ಒಂದೇ ವಸ್ತುವನ್ನು ಪರಮಾರ್ಥವಾಗಿ ಕರ್ತೃವೇ ಮುಂತಾದ ವಿಶೇಷಗಳುಳ್ಳದ್ದೂ (ಆಗಿದೆ), ಅವುಗಳಿಲ್ಲದ್ದೂ (ಆಗಿದೆ) ಎಂದು ಎರಡು ಪ್ರಕಾರವಾಗಿ ಅರಿಯುವದು ಆಗುವಹಾಗಿಲ್ಲವಷ್ಟೆ ? ಇವೆರಡರಲ್ಲಿ ಒಂದು ಅವಶ್ಯವಾಗಿ ಮಿಥ್ಯೆಯಾಗಿರಲೇಬೇಕು.[3]

1. ಇದುವರೆಗೂ ವಿದ್ಯಾಕರ್ಮಗಳ ಸಮುಚ್ಚಯವು ಆಗಬಹುದೆಂದು ಇಟ್ಟುಕೊಂಡು ಆ ಸಮುಚ್ಚಯದಿಂದ ಮೋಕ್ಷವುಂಟಾಗಲಾರದೆಂದು ವಾದಿಸಿತ್ತು. ಈಗ ವಿದ್ಯಾಕರ್ಮಗಳು ಒಬ್ಬನಲ್ಲಿಯೇ ಒಂದೇ ಕಾಲಕ್ಕೆ ನೇರುವಹಾಗೆಯೇ ಇಲ್ಲವೆಂದು ವಾದಿಸಿದೆ. ಪೂರ್ವಪಕ್ಷಿಯ ಅಭಿಪ್ರಾಯದಲ್ಲಿ ವಿದ್ಯೆಯೆಂದರೆ ಉಪಾಸನೆ. ಅದರ ಸಮುಚ್ಚಯದಿಂದ ಅವರಬ್ರಹ್ಮ ಪ್ರಾಪ್ತಿಯಾಗುವದಾದರೂ ಮುಖ್ಯಬ್ರಹ್ಮಪ್ರಾಪ್ತಿರೂಪವಾದ ಮುಕ್ತಿಯಾಗಲಾರದೆಂದು ಸಿದ್ಧಾಂತಿ ಹೇಳಿದ್ದಾನೆ. ನಿಜವಾದ ವಿದ್ಯೆ ಎಂದರೆ ಬ್ರಹ್ಮದ ಜ್ಞಾನವೇ, ಅದರೊಡನೆ ಸಮುಚ್ಚಯವೇ ಆಗುವಂತಿಲ್ಲ - ಎಂದು ಈಗ ಹೇಳುತ್ತಿದ್ದಾನೆ.

2. ಬೃ. ೩-೫-೧, ಸೂ. ಭಾ. ೩-೪-೧೬ ಇವನ್ನು ನೋಡಿ.

3. ಕರ್ಮದಲ್ಲಿ - ಹೀಗೂ ಮಾಡಬಹುದು, ಹಾಗೂ ಮಾಡಬಹುದು - ಎಂದು ವಿಕಲ್ಪವಿರಬಹುದು ; ಆದರೆ ವಸ್ತುಜ್ಞಾನಗಳೆರಡು ವಿರುದ್ಧವಾಗಿದ್ದರೆ ಅವುಗಳಲ್ಲಿ ಒಂದು ಮಿಥ್ಯೆಯಾಗಿರಲೇಬೇಕು. ಸೂ. ಭಾ. ೧-೧-೨ ನೋಡಿ.

ಎರಡರಲ್ಲಿ ಒಂದು ಮಿಥ್ಯೆಯಾಗಿರಲೇಬೇಕಾಗಿಬಂದರೆ ಸ್ವಾಭಾವಿಕವಾದ[1] ಅಜ್ಞಾನ ದಿಂದ ತೋರುವ ದ್ವೈತವೇ ಮಿಥ್ಯೆ ಎಂಬುದು ಯುಕ್ತವಾಗುತ್ತದೆ.[2] ''ಎಲ್ಲಿ ದ್ವೈತದಂತೆ ಇರುವದೋ (ಅಲ್ಲಿ ಒಬ್ಬನು ಮತ್ತೊಬ್ಬನನ್ನು ಕಾಣುತ್ತಾನೆ)'' (ಬೃ. ೨-೪-೧೪), ''ಯಾವನು ಇಲ್ಲಿ ನಾನಾ ಇರುವಂತೆ ಕಾಣುವನೋ (ಅವನು) ಮೃತ್ಯುವಿನ ಮೇಲೆ ಮೃತ್ಯುವನ್ನು ಪಡೆಯುತ್ತಿರುವನು.'' (ಕ. ೨-೧-೧೦, ಬೃ. ೪-೪-೧೯), ''ಇನ್ನು ಎಲ್ಲಿ ಮತ್ತೊಂದನ್ನು ಕಾಣುವನೋ ಅದು ಅಲ್ಪವು.'' (ಛಾಂ. ೭-೨೪-೧), ''ಈ (ದೇವತೆ) ಬೇರೆ, ನಾನು ಬೇರೆ (ಎಂದು ತನಗಿಂತ ಬೇರೆಯಾದ ದೇವತೆಯನ್ನು ಉಪಾಸನೆಮಾಡುವವನು ಅರಿಯನು).'' (ಬೃ. ೧-೪-೧೦), ''ಸ್ವಲ್ಪವಾದರೂ ಭೇದವನ್ನು ಮಾಡಿಕೊಂಡರೆ (ಅವನಿಗೆ ಭಯವಾಗುತ್ತದೆ.)'' (೨-೭) - ಇವೇ ಮುಂತಾದ ನೂರಾರು ಶ್ರುತಿಗಳು ಇದಕ್ಕೆ ಪ್ರಮಾಣವು.[3] ಏಕತ್ವವು ಸತ್ಯ (ವಾಗಿರಬೇಕು ಎಂಬುದೂ ಯುಕ್ತವಾಗುತ್ತದೆ).[4] ''(ಈ ಅಪ್ರಮೇಯವಾದ ನಿತ್ಯ ವಸ್ತುವನ್ನು) ಒಂದೇ ರೂಪವಾದದ್ದಿಂದೇ ಕಂಡುಕೊಳ್ಳಬೇಕು'' (ಬೃ. ೪-೪-೨೦), ಎರಡನೆಯದಿಲ್ಲದ ಒಂದೇ'' (ಛಾಂ. ೬-೨-೧), ''ಇದೆಲ್ಲವೂ ಬ್ರಹ್ಮವೇ'' (?),[5] ''ಇದೆಲ್ಲವೂ ಆತ್ಮನೇ'' (ಛಾಂ. ೭-೨೫-೨)-ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು. ಸಂಪ್ರದಾನವೇ ಮುಂತಾದ ಕಾರಕವಿಶೇಷಗಳನ್ನು ಕಾಣದೆ ಇರುವಲ್ಲಿ ಕರ್ಮವು ಹೊಂದುವದೂ ಇಲ್ಲ ; ವಿದ್ಯಾವಿಷಯದಲ್ಲಿ ಮತ್ತೊಂದನ್ನು ಕಾಣುವದಿಲ್ಲ ವೆಂದು ಹೇಳುವ ಸಾವಿರಾರು (ಶ್ರುತಿಗಳೂ) ಇವೆ. ಆದ್ದರಿಂದ ವಿದ್ಯಾಕರ್ಮಗಳಿಗೆ

1. ಅವಿಚಾರದಶೆಯಲ್ಲಿ ಸ್ವಭಾವದಿಂದ ಇರುವ.

2. ಆದ್ದರಿಂದ ಮುಂದೆ ಹೇಳುವ ಶ್ರುತಿಗಳಿಗೆ ಯುಕ್ತಿಯ ಬೆಂಬಲವಿದೆ - ಎಂದು ಅಭಿಪ್ರಾಯ.

3 ದ್ವೈತವೇ ಸತ್ಯವಾಗಿದ್ದರೆ ಈ ಶ್ರುತಿಗಳು ದ್ವೈತದೃಷ್ಟಿಯನ್ನು ಹೀಗೆ ನಿಂದಿಸು ತ್ತಿರಲಿಲ್ಲವೆಂದು ಭಾವ.

4. ಏಕೆಂದರೆ ನಿರ್ದುಷ್ಟವಾದ ಶ್ರುತಿಯು ಏಕತ್ವವನ್ನು ಅವಧಾರಣಾಪೂರ್ವಕವಾಗಿ ಹೇಳುತ್ತಿದೆ.

5. ಮುಂಡಕದಲ್ಲಿ ''ಬ್ರಹ್ಮೈವೇದಂ ವಿಶ್ವಮ್'' ಎಂದಿದೆ. ಇಲ್ಲಿ 'ಸರ್ವಮ್' ಎಂದಿರುವದರಿಂದ ಇದು ಬೇರೊಂದು ಕಡೆಯಿರುವ ವಾಕ್ಯವೆಂದು ತೋರುತ್ತದೆ. ಗೀ. ಭಾ. ೧೩-೧೫, ಸೂ. ಭಾ ೧-೪-೨೨ ರಲ್ಲಿಯೂ ಈ ವಾಕ್ಯವನ್ನು ಉದಾಹರಿಸಿದೆ. ನೃಸಿಂಹೋತ್ತರ ತಾಪಿನಿಯಲ್ಲಿ ಈ ವಾಕ್ಯವಿದೆಯಾದರೂ ಆ ಉಪನಿಷತ್ತಿನ ಬೇರೆ ಯಾವ ವಾಕ್ಯವೂ ಪ್ರಸ್ಥಾನ ತ್ರಯಭಾಷ್ಯಗಳಲ್ಲಿ ಉದಾಹೃತವಾಗಿಲ್ಲ.

ವಿರೋಧ ಆದ್ದರಿಂದ[1] ಸಮುಚ್ಚಯವು ಹೊಂದುವದಿಲ್ಲ(ಪೆಂಪಾಯಿತು). ಹೀಗಿರುವಲ್ಲಿ ವಿದ್ಯಾಕರ್ಮಗಳಿರಡೂ (ಸಮವಾಗಿ) ಸೇರಿದರೆ (ಅವುಗಳ ಅನುಷ್ಠಾನದಿಂದ) ಮೋಕ್ಷವಾಗುವದೆಂದು (ಪೂರ್ವಪಕ್ಷದಲ್ಲಿ) ಹೇಳಿತ್ತಷ್ಟೆ, ಅದು ಅಯುಕ್ತವಾಗುತ್ತದೆ.[2]

ಆತ್ಮೈಕತ್ವಜ್ಞಾನವನ್ನು ತಿಳಿಸುವದಾದರೆ ಶ್ರುತಿಗೆ ಅಪ್ರಾಮಾಣ್ಯವೇನೂ ಇಲ್ಲ

(ಭಾಷ್ಯ)

೭೮. ವಿಹಿತತ್ವಾತ್ ಕರ್ಮಣಾಂ ಶ್ರುತಿವಿರೋಧ ಇತಿ ಚೇತ್ । ಯದಿ ಉಪಮೃದ್ಯ ಕರ್ತ್ರಾದಿಕಾರಕವಿಶೇಷಮ್ ಆತ್ಮೈಕತ್ವವಿಜ್ಞಾನಂ ವಿಧೀಯತೇ, ಸರ್ಪಾದಿಭ್ರಾನ್ತಿಜ್ಞಾನೋಪಮರ್ದಕರಜ್ಜ್ವಾದಿವಿಷಯವಿಜ್ಞಾನವತ್, ಪ್ರಾಪ್ತಃ ಕರ್ಮವಿಧಿಶ್ರುತೀನಾಂ ನಿರ್ವಿಷಯತ್ವಾದ್ವಿರೋಧಃ । ವಿಹಿತಾನಿ ಚ ಕರ್ಮಾಣಿ । ಸ ಚ ವಿರೋಧೋ ನ ಯುಕ್ತಃ । ಪ್ರಮಾಣತ್ವಾತ್ ಶ್ರುತೀನಾಮ್ ಇತಿ ಚೇತ್ । ನ । ಪುರುಷಾರ್ಥೋಪದೇಶಪರತ್ವಾತ್ ಶ್ರುತೀನಾಮ್ - ವಿದ್ಯೋಪದೇಶಪರಾ ತಾವತ್ ಶ್ರುತಿಃ ಸಂಸಾರಾತ್ ಪುರುಷೋ ಮೋಕ್ಷಯಿತವ್ಯ ಇತಿ ಸಂಸಾರಹೇತೋಃ ಅವಿದ್ಯಾಯಾಃ ವಿದ್ಯಯಾ ನಿವೃತ್ತಿಃ ಕರ್ತವ್ಯಾ ಇತಿ ವಿದ್ಯಾಪ್ರಕಾಶಕರ್ತೃತ್ವೇನ ಪ್ರವೃತ್ತಾ ಇತಿ ನ ವಿರೋಧಃ ॥

(ಭಾಷ್ಯಾರ್ಥ)

(ಆಕ್ಷೇಪಃ-) ಕರ್ಮಗಳನ್ನು (ವೇದದಲ್ಲಿ) ವಿಧಿಸುವದರಿಂದ (ಈ ನಿಮ್ಮ ಅಭಿಪ್ರಾಯವು) ಶ್ರುತಿಗೆ ವಿರುದ್ಧವಾಗಿರುತ್ತದೆ. (ಹೇಗೆಂದರೆ) ಕರ್ತೃವೇ ಮುಂತಾದ ಬೇರೆಬೇರೆಯ ಕಾರಕಗಳನ್ನು ಬಾಧಿಸಿ[3] - ಹಾವಿನ ಜ್ಞಾನವೇ ಮುಂತಾದ ಭ್ರಾಂತಿ

---

1. ಅತಶ್ಚ ಎಂಬಲ್ಲಿ ಚ ಶಬ್ದವು ಸಮುಚ್ಚಯವಾಚಿಯಲ್ಲ, ಏಕೆಂದರೆ ಹಿಂದೆ ಮತ್ತೆ ಯಾವ ಕಾರಣವನ್ನೂ ಹೇಳಿರುವದಿಲ್ಲ. ವಿದ್ಯಾಕರ್ಮಗಳಿಗೆ ವಿರೋಧವನ್ನು ಉಪಪಾದನೆ ಮಾಡಿದ ಬಳಿಕ ಮೊದಲು ಪ್ರತಿಜ್ಞೆಮಾಡಿದ್ದ ಸಮುಚ್ಚಯಾಭಾವವನ್ನು ಇಲ್ಲಿ ನಿಗಮನಮಾಡಿದೆ ಎನ್ನಬಹುದು.

2. ವಾ॥ ಪಾಠದಲ್ಲಿ ಈ ವಾಕ್ಯವು ಮುಂದಿನ ಪೂರ್ವಪಕ್ಷಕ್ಕೆ ಸೇರುವಂತೆ ಬರೆದಿದೆ ; "…. ವಿದ್ಯಾಕರ್ಮಭ್ಯಾಂ ಮೋಕ್ಷ ಇತ್ಯೇತದನುಪಪನ್ನಮ್ ಇತಿ, ತದಯುಕ್ತಮ್ ॥" ಆದರೆ ಆ॥ ಪಾಠವೇ ಸರಿಯೆಂತ ಕಾಣುತ್ತದೆ.

3. ಸತ್ಯವಲ್ಲವೆಂದು ಅಲ್ಲಗಳೆದು.

ಜ್ಞಾನವನ್ನು ಬಾಧಿಸುವ ಹಗ್ಗವೇ ಮುಂತಾದವುಗಳ ವಿಜ್ಞಾನದಂತೆ (ಇರುವ)-ಆತ್ಮೈಕತ್ವವಿಜ್ಞಾನವನ್ನು (ಶ್ರುತಿಯಲ್ಲಿ) ಹೇಳುವುದಾದರೆ ಕರ್ಮವನ್ನು ವಿಧಿಸುವ ಶ್ರುತಿಗಳಿಗೆ (ಯಾವ) ವಿಷಯವೂ ಇಲ್ಲವಾಗುವುದರಿಂದ[1] (ಈ ಅಭಿಪ್ರಾಯವು-ಆ ಶ್ರುತಿಗಳಿಗೆ) ವಿರುದ್ಧವೆಂದಾಗುವುದು. ಕರ್ಮಗಳನ್ನು (ಶ್ರುತಿಯಲ್ಲಿ) ವಿಧಿಸಿಯೂ ಇರುತ್ತದೆ. (ಎಲ್ಲಾ) ಶ್ರುತಿಗಳೂ ಪ್ರಮಾಣವಾಗಿರುವುದರಿಂದ ಈ ವಿರೋಧವು ಯುಕ್ತವಾಗುವುದಿಲ್ಲವಲ್ಲ !

(ಪರಿಹಾರ :-) ಹಾಗಲ್ಲ. ಏಕೆಂದರೆ ಪುರುಷಾರ್ಥವನ್ನು[2] ತಿಳಿಸಿಕೊಡುವುದರಲ್ಲಿಯೇ ಶ್ರುತಿಗಳಿಗೆ ತಾತ್ಪರ್ಯವಿರುತ್ತದೆ. (ಇದರ ವಿವರ) :- ಮೊದಲನೆಯದಾಗಿ ವಿದ್ಯೆಯನ್ನು ಉಪದೇಶಿಸುವುದರಲ್ಲಿ ತಾತ್ಪರ್ಯವುಳ್ಳ ಶ್ರುತಿಯು ಮನುಷ್ಯನನ್ನು ಸಂಸಾರದಿಂದ ಬಿಡುಗಡೆಮಾಡಿಸಬೇಕಾಗಿರುವುದರಿಂದ ಸಂಸಾರಕ್ಕೆ ಕಾರಣವಾಗಿರುವ ಅವಿದ್ಯೆಯನ್ನು ವಿದ್ಯೆಯಿಂದ ಹೋಗಲಾಡಿಸಬೇಕೆಂಬ (ಉದ್ದೇಶದಿಂದ) ವಿದ್ಯೆಯನ್ನು ಬೆಳಗಿ ತೋರುವುದಕ್ಕೆ ಹೊರಟಿರುತ್ತದೆ ; ಆದ್ದರಿಂದ (ಆ ಶ್ರುತಿಗೂ ನಮ್ಮ ಅಭಿಪ್ರಾಯಕ್ಕೂ) ವಿರೋಧವಿಲ್ಲ.[3]

(ಭಾಷ್ಯ)

೭೯. ಏವಮಪಿ ಕರ್ತ್ರಾದಿಕಾರಕಸದ್ಭಾವಪ್ರತಿಪಾದನಪರಂ ಶಾಸ್ತ್ರಂ ವಿರುಧ್ಯತ ಏವ ಇತಿ ಚೇತ್ । ನ । ಯಥಾಪ್ರಾಪ್ತಮೇವ ಕಾರಕಾಸ್ತಿತ್ವಮ್ ಉಪಾದಾಯ ಉಪಾತ್ತದುರಿತಕ್ಷಯಾರ್ಥಂ ಕರ್ಮಾಣಿ ವಿದಧತ್ ಶಾಸ್ತ್ರಂ ಮುಮುಕ್ಷೂಣಾಂ ಫಲಾರ್ಥಿನಾಂ ಚ ಫಲಸಾಧನಂ ನ ಕಾರಕಾಸ್ತಿತ್ವೇ ವ್ಯಾಪ್ರಿಯತೇ । ಉಪಚಿತದುರಿತ

---

1. ಜ್ಞಾನವಾಕ್ಯವು ಪ್ರಮಾಣವಾದರೆ ಕರ್ಮವಾಕ್ಯವು ಅಪ್ರಮಾಣವಾಗುವುದು ; ಬಂಧಮೋಕ್ಷಾದಿಭೇದವನ್ನೊಪ್ಪದೆ ಜ್ಞಾನವಾಕ್ಯವೂ ಹೊರಡಲಾರದಾದ್ದರಿಂದ ನಿಮ್ಮ ಮತದಲ್ಲಿ ಅದೂ ಅಪ್ರಮಾಣವಾಗುವುದು - ಎಂದು ಪೂರ್ವಪಕ್ಷಿಯ ಭಾವ. ಬೃ. ಭಾ. ೨-೧-೨೦ ರಲ್ಲಿ ಈ ಪೂರ್ವಪಕ್ಷವನ್ನೂ ಪರಿಹಾರವನ್ನೂ ವರ್ಣಿಸಿದೆ.

2. ಪುರುಷಾರ್ಥಕ್ಕೆ ಉಪಾಯವನ್ನು ಎಂದರ್ಥ. "ಪುರುಷಾರ್ಥೋಪಾಯೋವದೇಶ ಪರತ್ವಾತ್" ಎಂಬ ಪಾಠವಿದ್ದರೆ ಪ್ರಕೃತಕ್ಕೆ ಅನುಕೂಲ ಇಂಥ ಫಲಕ್ಕೆ ಇಂಥ ಸಾಧನವಿದೆ ಎಂದು ತಿಳಿಸುವುದೇ ಶ್ರುತಿಗೆ ಬೇಕಾದದ್ದು ಇದು ಕರ್ಮವಾಕ್ಯಕ್ಕೂ ಜ್ಞಾನವಾಕ್ಯಕ್ಕೂ ಸಮಾನವಾಗಿದ ಬೃ. ಭಾ. ಅವತರಣಿಕೆಯನ್ನು ನೋಡಿರಿ.

3. ದ್ವೈತವು ಅವಿದ್ಯಾಕೃತವಾಗಿರುವುದರಿಂದ ಅದನ್ನು ಶ್ರುತಿಯು ಅಲ್ಲಗಳೆಯುತ್ತದೆ. ಆದ್ದರಿಂದ ಐಕ್ಯವೇ ತತ್ತ್ವವೆಂದು ಬೋಧಿಸುವ ನಮ್ಮ ಸಿದ್ಧಾಂತವು ಆ ಶ್ರುತಿಗೆ ವಿರುದ್ಧವಲ್ಲ.

ಪ್ರತಿಪನ್ನಸ್ಯ ಹಿ ವಿದ್ಯೋತ್ಪತ್ತಿರ್ನಾವಕಲ್ಪತೇ । ತತ್ಸದ್ಭಾವೇ ಚ ವಿದ್ಯೋತ್ಪತ್ತಿಃ ಸ್ಯಾತ್ । ತತಶ್ಚ ಅವಿದ್ಯಾನಿವೃತ್ತಿಃ, ತತಃ ಆತ್ಯನ್ತಿಕಃ ಸಂಸಾರೋಪರಮಃ ॥

(ಭಾಷ್ಯಾರ್ಥ)

(ಶಂಕೆ :-) ಇದನ್ನೊಪ್ಪಿದರೂ ಕರ್ತೃತ್ವೇ ಮುಂತಾದ ಕಾರಕಗಳು ಇವೆ ಎಂದು ತಿಳಿಸುವದಕ್ಕೆ ಹೊರಟಿರುವ ಶಾಸ್ತ್ರಕ್ಕೆ (ಈ ಅಭಿಪ್ರಾಯವು) ವಿರುದ್ಧವೇ ಆಗುವದಿಲ್ಲವೆ ?[1]

(ಪರಿಹಾರ :-) ಇಲ್ಲ. (ಏಕೆಂದರೆ) ಕಾರಕಗಳಿವೆ ಎಂದು ಲೋಕಸಿದ್ಧವಾಗಿರುವದನ್ನೇ[2] ಇಟ್ಟುಕೊಂಡು (ಹಿಂದೆ) ಕೂಡಿಹಾಕಿಕೊಂಡಿರುವ ಪಾಪವನ್ನು ನಾಶಗೊಳಿಸುವದಕ್ಕಾಗಿ[3] ಮುಮುಕ್ಷುಗಳಿಗೆ (ನಿತ್ಯ)ಕರ್ಮಗಳನ್ನೂ ಫಲವನ್ನು ಬಯಸುವವರಿಗೆ ಫಲಸಾಧನವನ್ನೂ[4] ವಿಧಿಸುವದರಿಂದ (ಕರ್ಮ)ಶಾಸ್ತ್ರವು ಕಾರಕಗಳು (ನಿಜವಾಗಿ) ಇರುವವೆಂದು (ತಿಳಿಸುವ) ವ್ಯಾಪಾರವನ್ನೂ ಮಾಡುವದಿಲ್ಲ.[5] ಯಾವನಲ್ಲಿ ಪಾಪವೆಂಬ ಅಡ್ಡಿಯು ಹೆಚ್ಚಾಗಿರುವದೋ ಅವನಿಗೆ ಜ್ಞಾನವು ಉಂಟಾಗಲಾರದು; ಅದು ನಾಶವಾದರೆ ಜ್ಞಾನವುಂಟಾಗುವದು.[6] ಅದರಿಂದ[7] ಅವಿದ್ಯೆಯು ಹೋಗುವದು ; ಅದರಿಂದ[8] ಸಂಸಾರವು ಆತ್ಯಂತಿಕವಾಗಿ ಇಲ್ಲವಾಗುವದು.

1 ಕಾರಕಗಳು ಇಲ್ಲವೆಂಬುದು ಶ್ರುತಿಯ ಅಭಿಪ್ರಾಯವಾದರೆ ಕರ್ಮವನ್ನು ವಿಧಿಸಬಾರದಾಗುವದಲ್ಲ ! - ಎಂದು ಭಾವ.

2. ಆತ್ಮಜ್ಞಾನವಿಲ್ಲದ ಸಾಮಾನ್ಯಜನರಿಗೆ ಕರ್ತ್ರಾದಿಕಾರಕಗಳು ನಿಜವಾಗಿರುವವೆಂಬ ತಿಳಿವಳಿಕೆಯಿರುವದು ; ಆ ತಿಳಿವಳಿಕೆಯನ್ನು ಹಾಗೆಯೇ ಇಟ್ಟುಕೊಂಡು ಕರ್ಮಗಳನ್ನು ಶಾಸ್ತ್ರವು ವಿಧಿಸಿರುತ್ತದೆ.

3. ನಿತ್ಯಕರ್ಮಕ್ಕೆ ಫಲವಿಲ್ಲ, ಅದನ್ನು ಮಾಡದಿದ್ದರೆ ಪ್ರತ್ಯವಾಯವುಂಟು - ಎಂಬ ಮೀಮಾಂಸಕರ ಪಕ್ಷವು ಸಿದ್ಧಾಂತಿಗಳಿಗೆ ಒಪ್ಪಿಲ್ಲ.

4. ಕಾಮ್ಯಕರ್ಮಗಳನ್ನೂ ಎಂದರ್ಥ. ಕಾಮ್ಯಕರ್ಮಗಳನ್ನು ಆಯಾ ಫಲಕ್ಕಾಗಿಯೂ ನಿತ್ಯಕರ್ಮಗಳನ್ನು ಪಾಪಕ್ಷಯಕ್ಕಾಗಿಯೂ ವಿಧಿಸಿರುತ್ತದೆ. ಹಿಂದೆ ಸಂಬಂಧಭಾಷ್ಯದಲ್ಲಿಯೇ ಇದನ್ನು ತಿಳಿಸಿದೆ.

5. ಕರ್ಮವನ್ನು ವಿಧಿಸುವ-ಎಂದರೆ ಇಂಥ ಫಲಕ್ಕೆ ಇಂಥದ್ದು ಸಾಧನ ಎಂದು ತಿಳಿಸುವ-ವ್ಯಾಪಾರವೊಂದಲ್ಲದೆ ಕಾರಕಗಳು ಸತ್ಯವೆಂದು ತಿಳಿಸುವ ಮತ್ತೊಂದು ವ್ಯಾಪಾರವೂ ಕರ್ಮವಾಕ್ಯಕ್ಕೆ ಇರಲಾರದು. ಒಂದು ವಾಕ್ಯಕ್ಕೆ ಒಂದರ್ಥದಲ್ಲಿಯೇ ತಾತ್ಪರ್ಯ.

6. ಪಾಪವೇ ಜ್ಞಾನೋತ್ಪತ್ತಿಗೆ ಇರುವ ಅಡ್ಡಿ.

7. ಜ್ಞಾನವುಂಟಾಗುವದರಿಂದ

8. ಅವಿದ್ಯೆಯು ಹೋಗುವದರಿಂದ.

ಜ್ಞಾನವು ಕರ್ಮದ ಹಂಗಿಲ್ಲದೆ ಮುಕ್ತಿಯನ್ನು ಕೊಡುತ್ತದೆ

(ಭಾಷ್ಯ)

೮೦. ಅಪಿ ಚ ಅನಾತ್ಮದರ್ಶಿನೋ ಹಿ ಅನಾತ್ಮವಿಷಯಃ ಕಾಮಃ । ಕಾಮಯಮಾನಶ್ಚ ಕರೋತಿ ಕರ್ಮಾಣಿ । ತತಸ್ತತ್ಫಲೋಪಭೋಗಾಯ ಶರೀರಾದ್ಯುಪಾದಾನಲಕ್ಷಣಃ ಸಂಸಾರಃ । ತದ್ವ್ಯತಿರೇಕೇಣ ಆತ್ಮೈಕತ್ವದರ್ಶಿನೋ ವಿಷಯಾಭಾವಾತ್ ಕಾಮಾನುಪಪತ್ತಿಃ । ಆತ್ಮನಿ ಚ ಅನನ್ಯತ್ವಾತ್ ಕಾಮಾನುಪಪತ್ತೌ ಸ್ವಾತ್ಮನ್ಯವಸ್ಥಾನಂ ಮೋಕ್ಷಃ । ಇತ್ಯತೋಽಪಿ ವಿದ್ಯಾಕರ್ಮಣೋರ್ವಿರೋಧಃ । ವಿರೋಧಾದೇವ ಚ ವಿದ್ಯಾ ಮೋಕ್ಷಂ ಪ್ರತಿ ನ ಕರ್ಮಾಣ್ಯಪೇಕ್ಷತೇ ॥

(ಭಾಷ್ಯಾರ್ಥ)

ಇದೂ ಅಲ್ಲದೆ ಯಾವನು ಅನಾತ್ಮವನ್ನು ಕಾಣುತ್ತಿರುವನೋ ಅವನಿಗೆ ಅನಾತ್ಮದಲ್ಲಿ ಬಯಕೆಯುಂಟಾಗುತ್ತದೆ. (ಹಾಗೆ ಅವುಗಳನ್ನು) ಬಯಸಿ (ಅವನು) ಕರ್ಮಗಳನ್ನು ಮಾಡುತ್ತಾನೆ. ಅದರಿಂದ ಆ (ಕರ್ಮಗಳ) ಫಲವನ್ನು ಅನುಭವಿಸುವದಕ್ಕಾಗಿ ಶರೀರವೇ ಮುಂತಾದವನ್ನು ಪಡೆಯುವದೆಂಬ ಸಂಸಾರವು (ಅವನಿಗಾಗುತ್ತದೆ). ಇದಕ್ಕೆ ಬದಲಾಗಿ ಆತ್ಮನು ಒಬ್ಬನೇ ಎಂದು ಅರಿತುಕೊಂಡಾತನಿಗೆ ವಿಷಯವೇ ಇಲ್ಲದ್ದರಿಂದ ಆಶೆಯುಂಟಾಗುವದಕ್ಕೆ ಕಾರಣವಿರುವದಿಲ್ಲ.[1] (ಆತ್ಮನು ತನಗಿಂತ) ಬೇರೆಯಾಗಿಲ್ಲವಾದ್ದರಿಂದ ಆತ್ಮನ ವಿಷಯದಲ್ಲಿ ಕಾಮವುಂಟಾಗುವದಕ್ಕೆ ಕಾರಣವಿರುವದಿಲ್ಲವಾದ್ದರಿಂದ **ತನ್ನ ಆತ್ಮನಲ್ಲಿ ನೆಲೆನಿಲ್ಲುವದೆಂಬ ಮೋಕ್ಷ(ವುಂಟಾಗುವದು)**. ಈ ಕಾರಣದಿಂದಲೂ[2] ವಿದ್ಯಾಕರ್ಮಗಳಿಗೆ (ಒಂದಕ್ಕೊಂದಕ್ಕೆ) ವಿರೋಧ (ವಿರುತ್ತದೆ). (ಹೀಗೆ) ವಿರೋಧವಿರುವದರಿಂದಲೇ ವಿದ್ಯೆಯು ಮೋಕ್ಷ(ವೆಂಬ ಫಲವನ್ನು ಕೊಡುವದಕ್ಕೆ) ಕರ್ಮಗಳ (ಸಹಾಯ)ವನ್ನು ಕೋರುವಹಾಗಿಲ್ಲ.

ಕರ್ಮಗಳು ವಿದ್ಯೋತ್ಪತ್ತಿಗೆ ಕಾರಣ

(ಭಾಷ್ಯ)

೮೧. ಸ್ವಾತ್ಮಲಾಭೇ ತು ಪೂರ್ವೋಪಚಿತದುರಿತಪ್ರತಿಬನ್ಧಾಪನಯನದ್ವಾರೇಣ

1. ಮುಂ. ಭಾ. ೩-೨-೨.

2. ಎರಡನೆಯದೊಂದನ್ನು ಕಾಣುವದು, ಕಾಣದಿರುವದು ; ಕಾಮದಿಂದ ಹುಟ್ಟುವದು, ಕಾಮವನ್ನು ತೊಲಗಿಸುವದು ; ಸಂಸಾರಕ್ಕೆ ಕಾರಣವಾಗಿರುವದು, ಮೋಕ್ಷಕ್ಕೆ ಕಾರಣವಾಗಿರುವದು - ಹೀಗೆ ಸ್ವರೂಪ, ಹೇತು, ಫಲ - ಈ ಮೂರರಿಂದಲೂ ವಿದ್ಯೆಗೂ ಕರ್ಮಕ್ಕೂ ವಿರೋಧ.

ವಿದ್ಯಾಹೇತುತ್ವಂ ಪ್ರತಿಪದ್ಯನ್ತೇ ಕರ್ಮಾಣಿ ನಿತ್ಯಾನಿ । ಇತ್ಯತ ಏವ ಅಸ್ಮಿನ್ ಪ್ರಕರಣೇ ಉಪನ್ಯಸ್ತಾನಿ ಕರ್ಮಾಣಿ ಇತ್ಯವೋಚಾಮ । ಏವಂ ಚ ಅವಿರೋಧಃ ಕರ್ಮವಿಧಿ ಶ್ರುತೀನಾಮ್ ।। ಅತಃ ಕೇವಲಾಯಾ ಏವ ವಿದ್ಯಾಯಾಃ ಪರಂ ಶ್ರೇಯಃ ಇತಿ ಸಿದ್ಧಮ್ ।।

(ಭಾಷ್ಯಾರ್ಥ)

ಆದರೆ ಹಿಂದೆ ಕೂಡಿಕೊಂಡಿರುವ ಪಾಪವೆಂಬ ಅಡ್ಡಿಯನ್ನು ತೊಲಗಿಸುವ ಮೂಲಕ ನಿತ್ಯಕರ್ಮಗಳು ವಿದ್ಯೆಯು ಹುಟ್ಟುವದಕ್ಕೆ ಕಾರಣತ್ವವನ್ನು ಪಡೆದಿರುತ್ತವೆ ; ಆದ್ದರಿಂದಲೇ ಈ ಪ್ರಕರಣದಲ್ಲಿ ಕರ್ಮಗಳನ್ನು ಹೇಳಿರುತ್ತದೆ - ಎಂದು ಹಿಂದೆ[1] ಹೇಳಿರುತ್ತೇವೆ. ಹೀಗಿರುವದರಿಂದಲೂ ಕರ್ಮವನ್ನು ವಿಧಿಸುವ ಶ್ರುತಿಗಳಿಗೂ (ನಮ್ಮ ಅಭಿಪ್ರಾಯಕ್ಕೂ) ವಿರೋಧವಿರುವದಿಲ್ಲ.

ಆದ್ದರಿಂದ ಕೇವಲ ವಿದ್ಯೆಯಿಂದಲೇ ಪರಮಶ್ರೇಯಸ್ಸು (ಉಂಟಾಗುತ್ತದೆ) ಎಂದು ಸಿದ್ಧವಾಯಿತು.[2]

ಜ್ಞಾನವುಂಟಾಗುವದಕ್ಕೆ ಗಾರ್ಹಸ್ಥ್ಯಕರ್ಮವೇ ಬೇಕೆಂಬುದಿಲ್ಲ

(ಭಾಷ್ಯ)

೮೨. ಏವಂ ತರ್ಹಿ ಆಶ್ರಮಾನ್ತರಾನುಪಪತ್ತಿಃ । ಕರ್ಮನಿಮಿತ್ತತ್ವಾದ್ ವಿದ್ಯೋತ್ಪತ್ತೇಃ । ಗಾರ್ಹಸ್ಥ್ಯೇ ಚ ವಿಹಿತಾನಿ ಕರ್ಮಾಣಿ ಇತ್ಯೈಕಾಶ್ರಮ್ಯಮೇವ । ಅತಶ್ಚ ಯಾವಜ್ಜೀವಾದಿಶ್ರುತಯೋಽನುಕೂಲತರಾಃ[3] । ನ । ಕರ್ಮಾನೇಕತ್ವಾತ್ । ನ ಹಿ ಅಗ್ನಿಹೋತ್ರಾದೀನ್ಯೇವ ಕರ್ಮಾಣಿ । ಬ್ರಹ್ಮಚರ್ಯಂ ತಪಃ ಸತ್ಯವದನಂ[4] ಶಮಃ ದಮಃ

1. ಆತ್ಮೈಕತ್ವವನ್ನು ತಿಳಿಸುವದೇ ಶ್ರುತಿಯ ಅಭಿಪ್ರಾಯವಾಗಿದ್ದರೆ ಕರ್ಮವನ್ನೇಕೆ ಶ್ರುತಿಯಲ್ಲಿ ಹೇಳಿದೆ ? - ಎಂಬ ಆಕ್ಷೇಪಕ್ಕೆ ಉತ್ತರವಿದು. ಕರ್ಮವನ್ನು ಆತ್ಮೈಕತ್ವಜ್ಞಾನದ ಉತ್ಪತ್ತಿಗಾಗಿಯೇ ಹೇಳಿದೆಯಾದ್ದರಿಂದ ವಿರೋಧವಿಲ್ಲ.

2. ಕರ್ಮಸಾಧ್ಯವಾದದ್ದು ಅನಿತ್ಯವಾಗಿರುವದರಿಂದಲೂ ಕರ್ಮಕ್ಕೂ ಜ್ಞಾನಕ್ಕೂ ವಿರೋಧವಿರುವದರಿಂದ ಅವೆರಡರ ಸಮುಚ್ಚಯವು ಹೊಂದುವಹಾಗಿಲ್ಲವಾದ್ದರಿಂದಲೂ ಜ್ಞಾನವುಂಟಾಗುವದಕ್ಕೆ ಮಾತ್ರ ಕರ್ಮವು ಕಾರಣವಾಗಿರುವದರಿಂದಲೂ ಉಂಟಾದ ಜ್ಞಾನವು ಮುಕ್ತಿಯನ್ನು ಕೊಟ್ಟೇತೀರುವದರಿಂದಲೂ ಬರಿಯ ಜ್ಞಾನದಿಂದಲೇ ಮುಕ್ತಿ ಎಂಬುದು ಸಿದ್ಧಾಂತ. ಸೂ. ಭಾ. ೩-೪-೧ ; ೩-೪-೧೫, ೧೬ ; ೩-೪-೨೫.

3. 'ಅನುಕೂಲತರಾಃ ಸ್ಯುಃ' ಎಂದು ವಾ।। ಪಾಠ.

4. 'ಸತ್ಯವಚನಮ್' ವಾ।। ಪಾಠ.

ಅಹಿಂಸಾ ಇತ್ಯೇವಮಾದೀನ್ಯಪಿ ಕರ್ಮಾಣಿ ಇತರಾಶ್ರಮಪ್ರಸಿದ್ಧಾನಿ ವಿದ್ಯೋತ್ಪತ್ತೌ ಸಾಧಕತಮಾನಿ ಅಸಙ್ಕೀರ್ಣತ್ವಾತ್ ವಿದ್ಯಸ್ತೇ, ಧ್ಯಾನಧಾರಣಾದಿಲಕ್ಷಣಾನಿ ಚ । ವಕ್ಷ್ಯತಿ ಚ "ತಪಸಾ ಬ್ರಹ್ಮ ವಿಜಿಜ್ಞಾಸಸ್ವ" (೩-೨) ಇತಿ । ಜನ್ಮಾನ್ತರಕೃತಕರ್ಮಭ್ಯಶ್ಚ ಪ್ರಾಗಪಿ ಗಾರ್ಹಸ್ಥ್ಯಾದ್ ವಿದ್ಯೋತ್ಪತ್ತಿಸಂಭವಾತ್ ಕರ್ಮಾರ್ಥತ್ವಾಚ್ಚ ಗಾರ್ಹಸ್ಥ್ಯಸ್ಯ ಪ್ರತಿಪತ್ತೇಃ ಕರ್ಮಸಾಧ್ಯಾಯಾಂ ಚ ವಿದ್ಯಾಯಾಂ ಸತ್ಯಾಂ ಗಾರ್ಹಸ್ಥ್ಯಪ್ರತಿಪತ್ತಿರನರ್ಥಿಕೈವ । ಲೋಕಾರ್ಥತ್ವಾಚ್ಚ ಪುತ್ರಾದೀನಾಮ್ ಪುತ್ರಾದಿಸಾಧ್ಯೇಭ್ಯಶ್ಚ ಅಯಂ ಲೋಕಃ, ಪಿತೃಲೋಕಃ, ದೇವಲೋಕ ಇತ್ಯೇತೇಭ್ಯೋ ವ್ಯಾವೃತ್ತಕಾಮಸ್ಯ ನಿತ್ಯಸಿದ್ಧಾತ್ಮಲೋಕದರ್ಶಿನಃ[1] ಕರ್ಮಣಿ ಪ್ರಯೋಜನಮ್ ಅಪಶ್ಯತಃ ಕಥಂ ಪ್ರವೃತ್ತಿರುಪಪದ್ಯತೇ ? ಪ್ರತಿಪನ್ನಗಾರ್ಹಸ್ಥ್ಯನ್ಯಾಪಿ ವಿದ್ಯೋತ್ಪತ್ತೌ ವಿದ್ಯಾಪರಿಪಾಕಾತ್ ವಿರಕ್ತಸ್ಯ ಕರ್ಮಸು ಪ್ರಯೋಜನಮ್ ಅಪಶ್ಯತಃ ಕರ್ಮಭ್ಯೋ ನಿವೃತ್ತಿರೇವ ಸ್ಯಾತ್ । "ಪ್ರವ್ರಜಿಷ್ಯನ್ ವಾ ಅರೇಽಹಮಸ್ಮಾತ್ ಸ್ಥಾನಾದಸ್ಮಿ" (ಬೃ. ೪-೫-೨) ಇತ್ಯೇವಮಾದಿಶ್ರುತಿಲಿಙ್ಗದರ್ಶನಾತ್ ॥

(ಭಾಷ್ಯಾರ್ಥ)

(ಪೂರ್ವಪಕ್ಷ :-) ಹೀಗಾದರೆ ಬೇರೆಯ ಆಶ್ರಮವೆಂಬುದೇ ಹೊಂದುವದಿಲ್ಲ ; ಏಕೆಂದರೆ ವಿದ್ಯೆಯು ಕರ್ಮವೆಂಬ ನಿಮಿತ್ತದಿಂದಲೇ ಉಂಟಾಗುತ್ತದೆ. ಗೃಹಸ್ಥಾಶ್ರಮ(ವಿಷಯ)ದಲ್ಲಿಯೇ ಕರ್ಮಗಳನ್ನು ವಿಧಿಸಿರುತ್ತದೆಯಾದ್ದರಿಂದ ಒಂದೇ ಆಶ್ರಮವು[2] ಎಂದಾಯಿತು. ಈ ಪಕ್ಷಕ್ಕೆ 'ಬದುಕಿರುವವರೆಗೂ (ಅಗ್ನಿಹೋತ್ರವನ್ನು ಮಾಡಬೇಕು)'[3] ಎಂಬುದೇ ಮುಂತಾದ ಶ್ರುತಿಗಳು ಹೆಚ್ಚು ಅನುಕೂಲವಾಗಿಯೂ ಇರುತ್ತವೆ.

(ಸಿದ್ಧಾಂತಿ :-) ಹಾಗಲ್ಲ. ಏಕೆಂದರೆ ಕರ್ಮಗಳು ಅನೇಕ(ವಿಧ)ವಾಗಿರುತ್ತವೆ. ಅಗ್ನಿಹೋತ್ರವೇ ಮುಂತಾದವುಗಳಮಟ್ಟಿಗೆ ಕರ್ಮವೆಂದೇನೂ ಇಲ್ಲ. ಬೇರೆಯ ಆಶ್ರಮಗಳಲ್ಲಿ ಪ್ರಸಿದ್ಧವಾಗಿರುವ ಬ್ರಹ್ಮಚರ್ಯ, ತಪಸ್ಸು, ಸತ್ಯವನ್ನೇ ನುಡಿಯುವದು,

1. 'ನಿತ್ಯಸಿದ್ಧಾತ್ಮದರ್ಶಿನಃ' ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವೇ ಉತ್ತಮ.

2. "ಗಾರ್ಹಸ್ಥ್ಯವನ್ನು ಶ್ರುತಿಯು ಪ್ರತ್ಯಕ್ಷವಾಗಿ ವಿಧಿಸಿರುವದರಿಂದ ಆಶ್ರಮವು ಒಂದೇ ಎಂದು ಆಚಾರ್ಯರು ಹೇಳುತ್ತಾರೆ" (ಗೌ. ಧ. ೧-೩-೩೬) ಎಂಬ ಧರ್ಮಸೂತ್ರವನ್ನವಲಂಬಿಸಿ ಪೂರ್ವಪಕ್ಷಿ ಹೊರಟಿರುತ್ತಾನೆ ಸಂನ್ಯಾಸವೂ ಶ್ರುತಿಯಲ್ಲಿದೆ ಎಂಬುದಕ್ಕೆ ಸೂ. ಭಾ. ೩-೪-೧೮, ೧೯, ೨೦ನ್ನು ನೋಡಿರಿ.

3. ಈ ಶ್ರುತಿಯು ಋಗ್ವೇದದ ಬ್ರಾಹ್ಮಣದಲ್ಲಿದೆ ಎಂದು ಶಾ. ಭಾ. ೨-೪-೪ ರಲ್ಲಿದೆ.

ಶಮ, ದಮ, ಅಹಿಂಸೆ[1] - ಇವೇ ಮುಂತಾದ (ಕರ್ಮ)ಗೆಳೂ ಧ್ಯಾನ, ಧಾರಣ - ಮುಂತಾದ ರೂಪದ (ಕರ್ಮಗಳೂ) ಇರುತ್ತವೆ. (ಅವು ಹಿಂಸಾದಿ)ಗಳಿಂದ ಕೂಡಿರದೆ ಇರುವದರಿಂದ[2] ವಿದ್ಯೆಯುಂಟಾಗುವದಕ್ಕೆ (ಅಗ್ನಿಹೋತ್ರಾದಿಗಳಿಗಿಂತಲೂ) ಹೆಚ್ಚು ಸಾಧಕವಾಗಿರುತ್ತವೆ.[3] (ಆದ್ದರಿಂದಲೇ) ಮುಂದೆ "ತಪಸ್ಸಿನಿಂದ ಬ್ರಹ್ಮವನ್ನು ತಿಳಿಯಲಿಕ್ಕನು" (೩-೨) ಎಂದು (ಶ್ರುತಿಯು) ಹೇಳಿಯೂ ಇರುತ್ತದೆ.[4] ಬೇರೆಯ ಜನ್ಮದಲ್ಲಿ ಮಾಡಿದ ಕರ್ಮಗಳಿಂದ[5] ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಮುಂಚೆಯೇ[6] ವಿದ್ಯೆಯು ಉಂಟಾಗಬಹುದಾಗಿರುವದರಿಂದಲೂ ಗಾರ್ಹಸ್ಥ್ಯವನ್ನು ಸ್ವೀಕರಿಸುವದು ಕರ್ಮಕ್ಕಾಗಿಯೇ[7] ಆಗಿರುವದರಿಂದಲೂ ಕರ್ಮದಿಂದ ಆಗಬೇಕಾಗಿರುವ ವಿದ್ಯೆಯು (ಇದ್ದೇ)ಇರುವಾಗ (ಮತ್ತೆ ಅದಕ್ಕಾಗಿ) ಗಾರ್ಹಸ್ಥ್ಯವನ್ನು ಸ್ವೀಕರಿಸುವದು ವ್ಯರ್ಥವೇ ನರಿ. ಪುತ್ರನೇ ಮುಂತಾದವು ಈ ಲೋಕವೇ ಮುಂತಾದ (ಫಲಗಳನ್ನು ಬಯಸುವವನಿಗೆ ಸಾಧಕವಾಗಿವೆ). (ಇದಲ್ಲದೆ) ಪುತ್ರನೇ ಮುಂತಾದವುಗಳಿಂದ ಆಗಬೇಕಾಗಿರುವ ಈ ಲೋಕ, ಪಿತೃಲೋಕ, ದೇವಲೋಕ - ಎಂಬಿವುಗಳ ಆಸೆಯನ್ನು

1. ಬ್ರಹ್ಮಚರ್ಯ, ತಪಸ್ಸು, ಸತ್ಯ - ಇವುಗಳನ್ನು ಛಾಂ. ತೈ. ಮುಂ. ಮುಂತಾದ ಶ್ರುತಿಗಳಲ್ಲಿ ವಿಧಿಸಿದೆ , ಶಮದಮಾದಿಗಳನ್ನು ಬೃ. ದಲ್ಲಿ ಹೇಳಿದೆ ; ಅಹಿಂಸೆಯನ್ನು ಛಾಂ. ಮುಂತಾದ ಶ್ರುತಿಗಳಲ್ಲಿ ಹೇಳಿದೆ.

2. ಗೃಹಸ್ಥನಿಗೆ ಹಿಂಸಾದಿಗಳು ಅನಿವಾರ್ಯ. ಪ್ರ. ಭಾ. ೧-೧೬ನ್ನು ನೋಡಿ.

3. ಅಗ್ನಿಹೋತ್ರಾದಿಗಳು ಹೊರಗಿನ ಸಾಧನ, ಇವು ಅಂತರಂಗಸಾಧನ. ಸೂ. ಭಾ. ೩-೪-೨೭.

4. ಅಗ್ನಿಹೋತ್ರಾದಿಗಳಿಗಿಂತ ಬೇರೆಯಾದ ತಪಸ್ಸನ್ನು ಬ್ರಹ್ಮಜ್ಞಾನಕ್ಕೆ ಸಾಧನವಾಗಿ ಹೇಳಿರುತ್ತದೆ.

5 ಈ ಜನ್ಮದಲ್ಲಿ ಮಾಡಿದ ಕರ್ಮಗಳಿಂದಲೇ ಚಿತ್ತಶುದ್ಧಿಯಾಗಿ ಜ್ಞಾನವುಂಟಾಗಬೇಕೆಂಬ ನಿಯಮವೇನೂ ಇಲ್ಲ. ವಾಮದೇವಾದಿಗಳಂತೆ ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳಿಂದಲೂ ಜ್ಞಾನವುಂಟಾಗಬಹುದು. ಕೇ.ಭಾ.ಭಾ. ೮೬, ಸೂ.ಭಾ. ೪-೧-೧೫, ೪-೧-೧೮, ಗೀ.ಭಾ. ೩-೪.

6. ಬ್ರಹ್ಮಚರ್ಯದಲ್ಲಿಯೇ. ಆದ್ದರಿಂದಲೇ ಜಾಬಾಲಶ್ರುತಿಯಲ್ಲಿ ಬ್ರಹ್ಮಚರ್ಯದಿಂದಲೂ ಸಂನ್ಯಾಸಾಶ್ರಮಕ್ಕೆ ಹೋಗಬಹುದೆಂದು ಹೇಳಿದೆ.

7. ಜ್ಞಾನಕಾರಣವಾಗಿರುವ ಕರ್ಮಕ್ಕಾಗಿಯೇ, ಮುಮುಕ್ಷುಗಳ ವಿಷಯವೇ ಇಲ್ಲಿ ಪ್ರಕೃತವಾಗಿರುವದರಿಂದ ಜ್ಞಾನಿಗಳಾದ ಬ್ರಹ್ಮಚಾರಿಗಳಿಗೆ ಗೃಹಸ್ಥಾಶ್ರಮಸ್ವೀಕಾರವು ಅನವಶ್ಯ ಎಂದು ಈ ವಾಕ್ಯಕ್ಕೆ ಆಶಯ.

ತೊರೆದು ನಿತ್ಯಸಿದ್ಧವಾಗಿರುವ ಆತ್ಮಲೋಕವನ್ನೇ ಕಂಡುಕೊಂಡಿರುವವನಿಗೆ[1] ಕರ್ಮದಲ್ಲಿ (ಯಾವ) ಪ್ರಯೋಜನವೂ ಕಾಣದಿರುವದರಿಂದ (ಅವನು ಕರ್ಮದಲ್ಲಿ) ತೊಡಗುವದೆಂಬುದು ಹೇಗೆ ಹೊಂದೀತು ? ಗೃಹಸ್ಥಾಶ್ರಮವನ್ನು ಸ್ವೀಕರಿಸಿರುವವನಿಗೆ ಕೂಡ ವಿದ್ಯೆಯುಂಟಾದರೆ ವಿದ್ಯೆಯ ಪರಿಪಾಕದಿಂದ[2] ವೈರಾಗ್ಯವುಂಟಾಗಲು ಕರ್ಮಗಳಲ್ಲಿ (ಯಾವ) ಪ್ರಯೋಜನವೂ ಕಾಣದಿರುವದರಿಂದ (ಅವನೂ) ಕರ್ಮಗಳಿಂದ ಹಿಂದಿರುಗಲೇಬೇಕಾಗುವದು.[3] ''ಎಲೆ (ಮೈತ್ರೇಯಿ), ನಾನು ಈ ಸ್ಥಾನದಿಂದ ಹೊರಟು ಹೋಗಿ (ಸಂನ್ಯಾಸಿಯಾಗುವವ)ನಿರುತ್ತೇನೆ'' (ಬೃ. ೪-೫-೨) ಎಂಬುದೇ ಮುಂತಾದ ಶ್ರುತಿಯಲ್ಲಿ ಕಾಣುವ ಲಿಂಗವು (ಇದಕ್ಕೆ ಪ್ರಮಾಣವು).

ಶ್ರುತಿಯಲ್ಲಿ ಕರ್ಮವನ್ನು ಬಹಳವಾಗಿ ಹೇಳಿರುವದೇಕೆ ?

(ಭಾಷ್ಯ)

೪೩. ಕರ್ಮ ಪ್ರತಿ ಶ್ರುತೇರ್ಯತ್ನಾಧಿಕ್ಯದರ್ಶನಾತ್ ಅಯುಕ್ತಮ್ ಇತಿ ಚೇತ್ - ಅಗ್ನಿಹೋತ್ರಾದಿಕರ್ಮ ಪ್ರತಿ ಶ್ರುತೇರಧಿಕೋ ಯತ್ನಃ । ಮಹಾಂಶ್ಚ ಕರ್ಮಣಿ ಆಯಾಸಃ । ಅನೇಕಸಾಧನಸಾಧ್ಯತ್ವಾದಗ್ನಿಹೋತ್ರಾದೀನಾಮ್ । ತಪೋಬ್ರಹ್ಮಚರ್ಯಾದೀನಾಂ ಚ ಇತರಾಶ್ರಮಕರ್ಮಣಾಂ ಗಾರ್ಹಸ್ಥ್ಯೇಽಪಿ ಸಮಾನತ್ವಾತ್ । ಅಲ್ಪಸಾಧನಾಪೇಕ್ಷತ್ವಾಚ್ಚ ಇತರೇಷಾಂ ನ ಯುಕ್ತಸ್ತುಲ್ಯವದ್ವಿಕಲ್ಪಃ ಆಶ್ರಮಿಭಿಸ್ತಸ್ಯ ಇತಿ ಚೇತ್ । ನ । ಜನ್ಮಾನ್ತರಕೃತಾನುಗ್ರಹಾತ್ । ಯದುಕ್ತಂ ಕರ್ಮಣಿ ಶ್ರುತೇರಧಿಕೋ ಯತ್ನಃ - ಇತ್ಯಾದಿ । ನಾಸೌ ದೋಷಃ ।. ಯತೋ ಜನ್ಮಾನ್ತರಕೃತಮಪಿ ಅಗ್ನಿಹೋತ್ರಾದಿಲಕ್ಷಣಂ ಕರ್ಮ ಬ್ರಹ್ಮಚರ್ಯಾದಿಲಕ್ಷಣಂ ಚ ಅನುಗ್ರಾಹಕಂ ಭವತಿ ವಿದ್ಯೋತ್ಪತ್ತಿಂ ಪ್ರತಿ । ಯೇನ[4] ಜನ್ಮನ್ಯೇವ ವಿರಕ್ತಾ ದೃಶ್ಯನ್ತೇ ಕೇಚಿತ್ । ಕೇಚಿತ್ತು

1. ಬೃ. ೧-೫-೧೬ ರಲ್ಲಿ ಹೇಳಿರುವ ಪುತ್ರ, ಕರ್ಮ, ಉಪಾಸನೆ - ಎಂಬಿವು ಲೋಕಕ್ಕೆ ಸಾಧನಗಳು. ಜ್ಞಾನಿಯು ಆತ್ಮನಿಗಿಂತ ಬೇರೆಯಾದ ಲೋಕವನ್ನು ಬಯಸುವದಿಲ್ಲ, ಬೃ. ೪-೪-೨೨, ಕೇ. ಭಾ. ಅವ, ೫ನೆಯ ಭಾ. ಭಾ. ವನ್ನು ನೋಡಿ. ·

2. ವಿಕ್ಷೇಪಹೇತುಗಳಿಲ್ಲದೆ ಜ್ಞಾನವು ಐಕಾತ್ಮ್ಯದಲ್ಲಿಯೇ ನಿಲ್ಲುವದು ವಿದ್ಯೆಯ ಪರಿಪಾಕವು. 'ವಿದ್ಯಾಪರಿಪಾಕಾತ್' ಎಂಬ ಮಾತನ್ನು 'ವಿದ್ಯಾಪರಿಪಾಕಹೇತೋಃ' (ವಿದ್ಯೆಯು ಪರಿಪಾಕವಾಗಲೆಂಬ ಕಾರಣದಿಂದ) ಎಂದು ಅರ್ಥಮಾಡಿ 'ನಿವೃತ್ತಿರೇವ ಸ್ಯಾತ್' (ಹಿಂತಿರುಗಲೇಬೇಕಾಗುವದು) ಎಂಬುದಕ್ಕೂ ಅನ್ವಯಿಸಬಹುದು ; ಏಕೆಂದರೆ ಸಂನ್ಯಾಸವು ವಿದ್ಯೆಯ ಪರಿಪಾಕಕ್ಕೆ ಅಂಗವೆಂದು ಸೂ. ಭಾ. ೩-೪-೨೦, ಗೀ. ಭಾ. ೧೮-೫೫ರಲ್ಲಿ ಹೇಳಿದೆ.

3. ಸಂನ್ಯಾಸಿಯಾಗಬೇಕಾಗುವದು.

4. ''ಯೇನ ಚ'' ಎಂದು ವಾ।। ಪಾಠ.

ಕರ್ಮಸು ಪ್ರವೃತ್ತಾ ಅವಿರಕ್ತಾ ವಿದ್ಯಾವಿದ್ವೇಷಿಣಃ । ತಸ್ಮಾತ್ ಜನ್ಮಾನ್ತರಕೃತ ಸಂಸ್ಕಾರೇಭ್ಯೋ ವಿರಕ್ತಾನಾಮ್ ಆಶ್ರಮಾನ್ತರಪ್ರತಿಪತ್ತಿರೇವ ಇಷ್ಯತೇ ॥

(ಭಾಷ್ಯಾರ್ಥ)

(ಪೂರ್ವಪಕ್ಷ :-) ಕರ್ಮದ ವಿಷಯಕ್ಕೆ ಶ್ರುತಿಯಲ್ಲಿ ಹೆಚ್ಚಿನ ಪ್ರಯತ್ನವು ಕಾಣಬರುವದರಿಂದ (ನಿಮ್ಮ ಪಕ್ಷವು) ಯುಕ್ತವಲ್ಲ. (ಹೇಗೆಂದರೆ :-) ಅಗ್ನಿ ಹೋತ್ರವೇ ಮುಂತಾದ ಕರ್ಮದ ವಿಷಯಕ್ಕೆ ಶ್ರುತಿಯಲ್ಲಿ ಹೆಚ್ಚಿನ ಪ್ರಯತ್ನವು (ಕಂಡುಬರುತ್ತದೆ). ಮತ್ತು ಕರ್ಮವನ್ನು (ಮಾಡುವದರಲ್ಲಿ) ಬಹಳ ಆಯಾಸವೂ ಆಗುತ್ತದೆ[1] ; ಏಕೆಂದರೆ ಅಗ್ನಿಹೋತ್ರವೇ ಮುಂತಾದವುಗಳು ಆಗಬೇಕಾದರೆ ಅನೇಕ ಸಾಧನಗಳು ಬೇಕಾಗುವವು. ಮಿಕ್ಕ ಆಶ್ರಮಗಳಲ್ಲಿ (ರುವವರ) ಕರ್ಮಗಳಾದ ತಪಸ್ಸು, ಬ್ರಹ್ಮಚರ್ಯ - ಮುಂತಾದವು ಗೃಹಸ್ಥಾಶ್ರಮಕ್ಕೂ ಸಮಾನವಾಗಿರುತ್ತವೆ.[2] ಉಳಿದ (ಸಾಧನ)ಗಳನ್ನು ಮಾಡುವದಕ್ಕೆ ಕೆಲವು ಸಾಧನಗಳೇ ಸಾಕು.[3] (ಆದ್ದರಿಂದ ಮಿಕ್ಕ) ಆಶ್ರಮಿಗಳಂತೆಯೇ (ಗೃಹಸ್ಥನು) ಎಂದು ವಿಕಲ್ಪಿಸುವದು ಸರಿಯಾಗುವದಿಲ್ಲವಲ್ಲ !

(ಸಿದ್ಧಾಂತಿ :-) ಹಾಗಲ್ಲ. ಏಕೆಂದರೆ ಇನ್ನೊಂದು ಜನ್ಮದಲ್ಲಿ[4] ಮಾಡಿದ (ಕರ್ಮದಿಂದಲೂ) ಅನುಗ್ರಹವಾಗುತ್ತದೆ. "ಕರ್ಮದ ವಿಷಯಕ್ಕೆ ಶ್ರುತಿಯಲ್ಲಿ ಹೆಚ್ಚಿನ ಪ್ರಯತ್ನವು (ಕಂಡುಬರುತ್ತದೆ)" ಎಂದುಮುಂತಾಗಿ (ಪೂರ್ವಪಕ್ಷಿ) ಹೇಳಿದ್ದನಷ್ಟೆ ; ಅದೇನೂ (ನಮ್ಮ ಪಕ್ಷದಲ್ಲಿ) ದೋಷವಾಗುವದಿಲ್ಲ. ಏಕೆಂದರೆ ಇನ್ನೊಂದು ಜನ್ಮದಲ್ಲಿ ಮಾಡಿದ ಅಗ್ನಿಹೋತ್ರವೇ ಮುಂತಾದ ರೂಪದ ಕರ್ಮವೂ ಬ್ರಹ್ಮ ಚರ್ಯವೇ ಮುಂತಾದ ರೂಪದ ಕರ್ಮವೂ ವಿದ್ಯೆಯು ಉಂಟಾಗುವದಕ್ಕೆ ಅನು ಗ್ರಾಹಕವಾಗಿರುತ್ತದೆ. ಹೀಗಿರುವದರಿಂದಲೇ ಕೆಲವರು ಹುಟ್ಟಿದಂದಿನಿಂದಲೇ ವಿರಕ್ತರಾಗಿರುವದು ಕಂಡುಬರುತ್ತದೆ ; ಆದರೆ ಮತ್ತೆ ಕೆಲವರು ಕರ್ಮಗಳಲ್ಲಿ ತೊಡಗಿ,

---

1. ಆಯಾಸವಿಲ್ಲದೆ ಸಿದ್ಧವಾಗುವ ವಿಷಯಕ್ಕೆ ಆಯಾಸಬಹುಲವಾದ ಕರ್ಮವನ್ನು ವೇದವು ವಿಧಿಸಲಾರದೆಂದು ಭಾವ. ತಂ. ವಾ. ೧-೩-೮ ಪುಟ ೨೮೭ರಲ್ಲಿ ಬರೆದಿರುವದನ್ನೂ ಇದನ್ನೂ ಹೋಲಿಸಿರಿ.

2. ಗೃಹಸ್ಥನ ತಪಸ್ಸು ಮುಂತಾದವು ಉಳಿದ ಆಶ್ರಮಗಳಲ್ಲಿರುವಷ್ಟು ಪೂರ್ಣ ವಲ್ಲವೆಂಬುದನ್ನು ಪೂರ್ವಪಕ್ಷಿಯು ಕಡೆಗಣಿಸಿದ್ದಾನೆ.

3. ಬ್ರಹ್ಮಚರ್ಯಾದಿಗಳಿಗೆ ಹೆಚ್ಚಿನ ಪ್ರಯತ್ನವೇ ಬೇಕೆಂಬುದನ್ನು ಪೂರ್ವಪಕ್ಷಿ ಕಡೆ ಗಣಿಸಿದ್ದಾನೆ.

4. ಭಾ. ಭಾ. ೮೨ನ್ನೂ ಅದರ ಅನುವಾದಕ್ಕೆ ಪುಟ ೧೦೩ರಲ್ಲಿ ಕೊಟ್ಟಿರುವ ೪ನೆಯ ಟಿಪ್ಪಣಿಯನ್ನೂ ನೋಡಿ.

ವೈರಾಗ್ಯವಿಲ್ಲದವರಾಗಿ, ಜ್ಞಾನವನ್ನು ಪಡೆಯುತ್ತಾ (ಇರುವದು ಕಂಡುಬರುತ್ತದೆ).[1] ಆದ್ದರಿಂದ ಬೇರೊಂದು ಜನ್ಮದಲ್ಲಿ ಮಾಡಿಕೊಂಡಿರುವ ಸಂಸ್ಕಾರಗಳಿಂದ ವಿರಕ್ತರಾಗಿರುವವರಿಗೆ ಬೇರೆಯ ಆಶ್ರಮವೇ[2] ಬೇಕಾಗುತ್ತದೆ.

(ಭಾಷ್ಯ)

ಅಳ. ಕರ್ಮಫಲಬಾಹುಲ್ಯಾಚ್ಚ । ಪುತ್ರಸ್ವರ್ಗಬ್ರಹ್ಮವರ್ಚಸಾದಿಲಕ್ಷಣಸ್ಯ ಕರ್ಮಫಲಸ್ಯ ಅಸಂಖ್ಯೇಯತ್ವಾತ್ ತತ್ ಪ್ರತಿ ಚ ಪುರುಷಾಣಾಂ ಕಾಮಬಾಹುಲ್ಯಾತ್ ತದರ್ಥಃ ಶ್ರುತೇರಧಿಕೋ ಯತ್ನಃ ಕರ್ಮಸು ಉಪಪದ್ಯತೇ । ಆಶಿಷಾಂ ಬಾಹುಲ್ಯದರ್ಶನಾತ್ ''ಇದಂ ಮೇ ಸ್ಯಾತ್, ಇದಂ ಮೇ ಸ್ಯಾತ್'' ಇತಿ । ಉಪಾಯತ್ವಾಚ್ಚ - ಉಪಾಯಭೂತಾನಿ ಹಿ ಕರ್ಮಾಣಿ ವಿದ್ಯಾಂ ಪ್ರತಿ ಇತ್ಯವೋಚಾಮ । ಉಪಾಯೇ ಚ ಅಧಿಕೋ ಯತ್ನಃ ಕರ್ತವ್ಯಃ, ನ ಉಪೇಯೇ ॥

(ಭಾಷ್ಯಾರ್ಥ)

ಕರ್ಮಫಲಗಳು ಬಹಳವಾಗಿರುವದರಿಂದಲೂ[3] (ಕರ್ಮದಲ್ಲಿ ಶ್ರುತಿಗೆ ಹೆಚ್ಚಿನ ಯತ್ನವಿರುವದು ಸರಿಯಾಗಿದೆ). ಪುತ್ರ, ಸ್ವರ್ಗ, ಬ್ರಹ್ಮವರ್ಚಸ್ಸು - ಮುಂತಾದ ರೂಪದ ಕರ್ಮಫಲವೂ ಲೆಕ್ಕವಿಲ್ಲದಷ್ಟು ಇರುವದರಿಂದಲೂ ಅದಕ್ಕಾಗಿ ಮನುಷ್ಯರಿಗೆ (ಉಂಟಾಗುವ) ಕಾಮಗಳೂ ಬಹಳವಾಗಿರುವದರಿಂದಲೂ ಅದಕ್ಕಾಗಿ ಶ್ರುತಿಯಲ್ಲಿ ಹೆಚ್ಚಿನ ಪ್ರಯತ್ನವನ್ನು (ಮಾಡಿರುವದು) ಸರಿಯಾಗಿರುತ್ತದೆ. ಏಕೆಂದರೆ ''ಇದು ನನಗೆ ಆಗಲಿ ! ಇದು ನನಗೆ ಆಗಲಿ !'' ಎಂದು ಆಸೆಗಳು ಬಹಳವಾಗಿರುವದು ಕಂಡುಬರುತ್ತದೆ.[4] (ಕರ್ಮವು) ಸಾಧನವಾಗಿರುವದರಿಂದಲೂ[5]

---

1. ಈ ದೃಷ್ಟಿಭೇದಕ್ಕೆ ಪೂರ್ವಜನ್ಮಸಂಸ್ಕಾರವಲ್ಲದೆ ಮತ್ತೇನನ್ನು ಕಾರಣವಾಗಿ ಹೇಳಬಹುದು ?

2. ಸಂನ್ಯಾಸವೇ.

3. ಕರ್ಮದ ವಿಷಯಕ್ಕೆ ಶ್ರುತಿಯು ಬಹಳ ಯತ್ನವನ್ನು ಮಾಡಿದೆ - ಎಂಬುದು ಕಾಮ್ಯ ಕರ್ಮದ ವಿಷಯವೊ ? ನಿತ್ಯಕರ್ಮದ ವಿಷಯವೊ ? ಕಾಮ್ಯಕರ್ಮಗಳ ವಿಷಯದಲ್ಲಾದರೆ ಕಾಮಗಳು ಬಹಳವಾಗಿರುವದರಿಂದ ಕರ್ಮಗಳೂ ಶ್ರುತಿಯಲ್ಲಿ ಹೆಚ್ಚಾಗಿರುವದು ಸ್ವಾಭಾವಿಕವಾಗಿದೆ. ಅಷ್ಟುಮಾತ್ರದಿಂದ ಕರ್ಮವೇ ಮೋಕ್ಷಕ್ಕೆ ಸಾಧನವೆಂದೇನೂ ವಿಧಿಸಬೇಕಾಗಿಲ್ಲ ಎಂದು ಭಾವ.

4. ಆಸೆಗಳಿಗೆ ತಕ್ಕಂತೆ ಫಲಗಳನ್ನೂ ಕರ್ಮಗಳನ್ನೂ ಶ್ರುತಿ ಹೇಳುತ್ತದೆ. ತೈ. ಸಂ. ೧-೯-೧ ನೋಡಿ.

5. ಇದು ನಿತ್ಯಕರ್ಮಗಳ ವಿಷಯವಾದ ಆಕ್ಷೇಪಕ್ಕೆ ಪರಿಹಾರ. ಹಿಂದೆ ೩೨ರಲ್ಲಿ ನಿತ್ಯಕರ್ಮವನ್ನು ವಿಧಿಸಿರುವ ಶ್ರುತಿಯ ಬಲದಿಂದ ಗೃಹಸ್ಥಾಶ್ರಮವೊಂದೇ ಮೋಕ್ಷಕ್ಕೆ ಬೇಕಾದ ಸಾಧನ ಎಂಬ ಪೂರ್ವಪಕ್ಷವನ್ನು ಖಂಡಿಸಿತ್ತು. ಈಗ ಕರ್ಮವೊಂದೇ ಮುಕ್ತಿಗೆ ಸಾಧನ ಎಂಬ ಪೂರ್ವಪಕ್ಷವನ್ನು ಖಂಡಿಸಿದೆ.

(ಇದು ಯುಕ್ತವಾಗಿರುತ್ತದೆ.) ಕರ್ಮಗಳು ವಿದ್ಯೆಗೆ ಸಾಧನವಾಗಿರುತ್ತವೆಯೆಂದ ಲ್ಲವೆ, ನಾವು (ಹಿಂದೆ) ಹೇಳಿರುವದು ? ಸಾಧನದ ವಿಷಯದಲ್ಲಿ ಹೆಚ್ಚಿನ ಯತ್ನ ವನ್ನು ಮಾಡತಕ್ಕದ್ದು (ಸರಿಯೇ) .ಹೊರತು ಸಾಧ್ಯವಾದವ್ಯರ ವಿಷಯದಲ್ಲಿ (ಮಾಡತಕ್ಕದ್ದು ಯುಕ್ತವಾಗುವದಿಲ್ಲ).

ಶ್ರವಣಾದಿಗಳು ವಿದ್ಯೆಗೆ ಸಾಕ್ಷಾತ್ಸಾಧನ

(ಭಾಷ್ಯ)

ಅಜ. ಕರ್ಮನಿಮಿತ್ತತ್ವಾದ್ ವಿದ್ಯಾಯಾಃ, ಯತ್ನಾನ್ತರಾನರ್ಥಕ್ಯಮ್ ಇತಿ ಚೇತ್ । ಕರ್ಮಭ್ಯ ಏವ ಪೂರ್ವೋಪಚಿತದುರಿತಪ್ರತಿಬನ್ಧಕ್ಷಯಾತ್ ವಿದ್ಯಾ ಉತ್ಪದ್ಯತೇ ಚೇತ್ ಕರ್ಮಭ್ಯಃ ಪೃಥಕ್ ಉಪನಿಷಚ್ಛ್ರವಣಾದಿಯತ್ನೋಽನರ್ಥಕಃ ಇತಿ ಚೇತ್ । ನ । ನಿಯಮಾಭಾವಾತ್ । ನ ಹಿ ಪ್ರತಿಬನ್ಧಕ್ಷಯಾದೇವ ವಿದ್ಯಾ ಉತ್ಪದ್ಯತೇ । ನ ತು ಈಶ್ವರಪ್ರಸಾದತಪೋಧ್ಯಾನಾದ್ಯನುಷ್ಠಾನಾತ್ - ಇತಿ ನಿಯಮೋಽಸ್ತಿ । ಅಹಿಂಸಾಬ್ರಹ್ಮಚರ್ಯಾದೀನಾಂ ಚ ವಿದ್ಯಾಂ ಪ್ರತ್ಯುಪಕಾರಕತ್ವಾತ್ । ಸಾಕ್ಷಾದೇವ ಚ ಕಾರಣತ್ವಾತ್ ಶ್ರವಣಮನನನಿದಿಧ್ಯಾಸನಾನಾಮ್ ॥

(ಭಾಷ್ಯಾರ್ಥ)

(ಪೂರ್ವಪಕ್ಷ :-) ವಿದ್ಯೆಗೆ ಕರ್ಮವೇ ಕಾರಣವಾಗಿರುವದರಿಂದ ಬೇರೆಯ ಯತ್ನವನ್ನು ಮಾಡುವದು ವ್ಯರ್ಥ. (ಇದರ ವಿವರ :-) ಕರ್ಮಗಳಿಂದಲೇ ಹಿಂದೆ ಕೂಡಿಹಾಕಿಕೊಂಡಿರುವ ಪಾಪವೆಂಬ ಅಡ್ಡಿಯನ್ನು ನಾಶಗೊಳಿಸುವದರಿಂದಲೇ ವಿದ್ಯೆಯು ಹುಟ್ಟುವದಾದರೆ ಕರ್ಮಗಳಿಗಿಂತ ಬೇರೆಯಾದ ಉಪನಿಷತ್ತುಗಳ ಶ್ರವಣವೇ ಮುಂತಾದ ಯತ್ನವು ವ್ಯರ್ಥ.

(ಸಿದ್ಧಾಂತ :-) ಹಾಗಲ್ಲ. ಏಕೆಂದರೆ ನಿಯಮವೇನೂ ಇಲ್ಲ. ಅಡ್ಡಿಯನ್ನು ನಾಶಗೊಳಿಸುವದರಿಂದಲೇ ವಿದ್ಯೆಯು ಹುಟ್ಟುವದೇ ಹೊರತು ಈಶ್ವರಪ್ರಸಾದ ದಿಂದಾಗಲಿ, ತಪಸ್ಸು, ಧ್ಯಾನ - ಮುಂತಾದವುಗಳ[1] ಅನುಷ್ಠಾನದಿಂದಲಾಗಲಿ (ಹುಟ್ಟು ವದಿಲ್ಲ) ಎಂಬ ನಿಯಮವೇನೂ ಇರುವದಿಲ್ಲ. ಏಕೆಂದರೆ ಅಹಿಂಸೆ, ಬ್ರಹ್ಮಚರ್ಯ -

1. ಈಶ್ವರಪ್ರಸಾದವು ಸಾಧನಗಳಿಗೆಲ್ಲ ಫಲವನ್ನು ಕೊಡಿಸುವ ದ್ವಾರವು. ಕರ್ಮವು ಈ ಜನ್ಮದ್ದಾಗಿರಲಿ, ಹಿಂದಿನ ಜನ್ಮದ್ದಾಗಿರಲಿ, ಪ್ರತಿಬಂಧಕ್ಷಯದ್ವಾರದಿಂದ ಜ್ಞಾನಕಾರಣವು. ಅಹಿಂಸೆಯೇ ಮುಂತಾದವುಗಳು ಅಧರ್ಮವೇ ಮುಂತಾದವುಗಳನ್ನು ತೊಲಗಿಸುವ ಮೂಲಕವೂ ಜ್ಞಾನಪರಿಪಾಕವನ್ನುಂಟುಮಾಡುವ ಮೂಲಕವೂ ಜ್ಞಾನನಿಷ್ಠೆಗೆ ಕಾರಣವು.

ಮುಂತಾದವೂ ವಿದ್ಯೆಗೆ ಉಪಕಾರಕವಾಗಿರುತ್ತವೆ. ಶ್ರವಣ, ಮನನ, ನಿದಿಧ್ಯಾಸನಗಳು ನೇರಾಗಿಯೇ[1] ಸಾಧನವಾಗಿರುತ್ತವೆ.

(ಭಾಷ್ಯ)

೮೭. ಅತಃ ಸಿದ್ಧಾನ್ಯಾಶ್ರಮಾನ್ತರಾಣಿ । ಸರ್ವೇಷಾಂ ಚಾಧಿಕಾರೋ ವಿದ್ಯಾಯಾಮ್ । ಪರಂ ಚ ಶ್ರೇಯಃ ಕೇವಲಾಯಾ ವಿದ್ಯಾಯಾ ಏವ ಇತಿ ಸಿದ್ಧಮ್ ॥

(ಭಾಷ್ಯಾರ್ಥ)

ಆದ್ದರಿಂದ ಬೇರೆಯ ಆಶ್ರಮಗಳೂ (ಇವೆಯೆಂದು) ಸಿದ್ಧವಾಯಿತು.[2] ಎಲ್ಲರಿಗೂ[3] ವಿದ್ಯೆಯಲ್ಲಿ ಅಧಿಕಾರವಿದೆಯೆಂದೂ ಹೆಚ್ಚಿನ ಶ್ರೇಯಸ್ಸು ಬರಿಯ ವಿದ್ಯೆಯಿಂದಲೇ[4] ಎಂದೂ ಸಿದ್ಧವಾಯಿತು.

೧೨. ಶಾಂತಿಪಾಠ

ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ । ಶಂ ನ ಇನ್ದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಾಮೇವ ಪ್ರತ್ಯಕ್ಷಂ ಬ್ರಹ್ಮಾವಾದಿಷಮ್ । ಋತಮವಾದಿಷಮ್ । ಸತ್ಯಮವಾದಿಷಮ್ । ತನ್ಮಾಮಾವೀತ್ । ತದ್ವಕ್ತಾರಮಾವೀತ್ । ಆವೀನ್ಮಾಮ್ । ಆವೀದ್ವಕ್ತಾರಮ್ । ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥

೧೨. ನಮಗೆ ಮಿತ್ರನು ಸುಖ(ವನ್ನುಂಟುಮಾಡಲಿ) ! ವರುಣನು ಸುಖ(ವನ್ನುಂಟುಮಾಡಲಿ) ! ಅರ್ಯಮನು ಸುಖ(ವನ್ನುಂಟುಮಾಡು

---

1. ಶ್ರವಣಾದಿಗಳಿಗೆ ಜ್ಞಾನವೇ ಫಲವೆಂಬುದು ಲೋಕದಲ್ಲಿ ಕಂಡಿದೆ. ಸಾಧನಗಳ ತಾರತಮ್ಯದ ವಿಷಯಕ್ಕೆ ಬೃ. ಭಾ. ೧-೪, ಸೂ. ಭಾ. ೩-೪-೫೧, ೪-೧-೧೮, ಗೀ. ಭಾ. ೧೦-೧೦, ೧೦-೧೧, ೧೮-೪೫, ೪೭ ನೋಡಿ.

2. ಸೂ. ಭಾ. ೩-೪-೨೦.

3. ಎಲ್ಲಾ ಆಶ್ರಮಿಗಳಿಗೂ ಸೂ. ಭಾ. ೩-೪-೨೦, ಮುಂ ಸಂಬಂಧ ಭಾ., ಗೀ. ಭಾ. ೧೮-೪೫.

4. ಸೂ. ಭಾ. ೩-೪-೧, ೩-೪-೧೭.

ವವನಾಗಲಿ) ! ಇಂದ್ರನೂ ಬೃಹಸ್ಪತಿಯೂ ಸುಖ(ವನ್ನುಂಟುಮಾಡಲಿ) ! ಉರು ಕ್ರಮನಾದ ವಿಷ್ಣುವು ನಮಗೆ ಸುಖ(ವನ್ನುಂಟುಮಾಡಲಿ) ! ಬ್ರಹ್ಮಕ್ಕೆ ನಮಸ್ಕಾರ । ವಾಯುವೆ, ನಿನಗೆ ನಮಸ್ಕಾರ ! ನೀನೇ ಪ್ರತ್ಯಕ್ಷಬ್ರಹ್ಮ ವಾಗಿರುತ್ತೀಯೆ. ನೀನೇ ಪ್ರತ್ಯಕ್ಷಬ್ರಹ್ಮವೆಂದೆನು, ಋತವೆಂದೆನು, ಸತ್ಯ ವೆಂದೆನು. ಅದು ನನ್ನನ್ನು ಕಾಪಾಡಿತು, ಅದು ಹೇಳಿಕೊಡುವಾತನನ್ನು ಕಾಪಾಡಿತು ; ನನ್ನನ್ನು ಕಾಪಾಡಿತು, ಹೇಳಿಕೊಡುವಾತನನ್ನು ಕಾಪಾಡಿತು.

ಓಂ ಶಾನ್ತಿ ! ಶಾನ್ತಿ ! ಶಾನ್ತಿ ![1]

1. ಈ ಶಾಂತಿಪಾಠವು ವೈದಿಕರ ಪಾಠಕ್ರಮದಲ್ಲಿ ಶೀಕ್ಷಾವಲ್ಲಿಯ ಕೊನೆಯಲ್ಲಿರುತ್ತದೆಯಾದರೂ ಅರ್ಥಕ್ರಮದಲ್ಲಿ ಮುಂದೆ ಆನಂದವಲ್ಲಿಯಲ್ಲಿ ಹೇಳುವ ಬ್ರಹ್ಮವಿದ್ಯೆಗೋಸ್ಕರವಾಗಿ ಬಂದಿದೆ - ಎಂದು ಆ ವಲ್ಲಿಯ ಸಂಬಂಧಭಾಷ್ಯದಲ್ಲಿ ಬರೆದಿದೆ. ಇಲ್ಲಿ "ಅತೀತವಿದ್ಯಾಪ್ರಾಪ್ಯುಪಸರ್ಗಶಮನಾರ್ಥಂ ಶಾನ್ತಿಂ ಪಠತಿ - ಶಂ ನೋ ಮಿತ್ರ ಇತಿ (ಇತ್ಯಾದಿ) । ವ್ಯಾಖ್ಯಾತ ಮೇತತ್ ಪೂರ್ವಮ್ ।।" ಎಂಬ ಎರಡು ವಾಕ್ಯಗಳನ್ನು ಭಾಷ್ಯವೆಂದು ಮುದ್ರಿತಪುಸ್ತಕಗಳಲ್ಲಿ ತೋರಿಸಿದ್ದರೂ ಅನೇಕ ಮೂಲಕೋಶಗಳಲ್ಲಿ ಇವು ಕಂಡುಬಂದಿರುವದಿಲ್ಲವಾಗಿ ಅವನ್ನು ನಾವು ಗ್ರಂಥಶರೀರದಲ್ಲಿ ಸೇರಿಸಿಲ್ಲ. ಆನಂದವಲ್ಲಿಯ ಶಾಂತಿಪಾಠದ ಭಾಷ್ಯವನ್ನೂ ಅದರ ಟಿಪ್ಪಣಿಯನ್ನೂ ನೋಡಿರಿ.

ಆ ನಂ ದ ವ ಲ್ಲಿ

ಅ ವ ತ ರ ಣಿ ಕೆ

(ಭಾಷ್ಯ)

೮೭. 'ಶಂ ನೋ ಮಿತ್ರಃ' ಇತ್ಯಾದ್ಯತೀತವಿದ್ಯಾಪ್ರಾಪ್ಯುವಸರ್ಗಪ್ರಶಮನಾರ್ಥಾ ಶಾನ್ತಿಃ ಪಠಿತಾ । ಇದಾನೀಂ ತು ವಕ್ಷ್ಯಮಾಣಬ್ರಹ್ಮವಿದ್ಯಾಪ್ರಾಪ್ಯುವಸರ್ಗೋಪಶಮನಾರ್ಥಾ ಶಾನ್ತಿಃ ಪಠ್ಯತೇ 'ಶಂ ನೋ ಮಿತ್ರಃ' ಇತಿ, 'ಸಹ ನಾವವತು' ಇತಿ ಚ ॥[1]

(ಭಾಷ್ಯಾರ್ಥ)

'ಶಂ ನೋ ಮಿತ್ರಃ' (೧೭) ಎಂದುಮುಂತಾಗಿರುವ ಶಾಂತಿಯನ್ನು ಹಿಂದಿನ ವಿದ್ಯೆಯನ್ನು[2] ಪಡೆಯುವದಕ್ಕೆ (ಇರಬಹುದಾದ) ಅಡ್ಡಿಗಳು ನಾಶವಾಗುವದಕ್ಕಾಗಿ[3] ಹೇಳಿದ್ದಾಯಿತು. ಈಗಲಾದರೋ ಮುಂದೆ ಹೇಳಲಿರುವ ಬ್ರಹ್ಮವಿದ್ಯೆಯನ್ನು[4] ಪಡೆಯುವದಕ್ಕೆ (ಇರಬಹುದಾದ) ಅಡ್ಡಿಗಳು ನಾಶವಾಗುವದಕ್ಕಾಗಿ 'ಶಂ ನೋ ಮಿತ್ರಃ' ಎಂದೂ 'ಸಹ ನಾವವತು' ಎಂದೂ ಶಾಂತಿಯನ್ನು ಹೇಳಲಾಗುತ್ತದೆ.

1. ಇಲ್ಲಿಯವರೆಗಿನ ಭಾಷ್ಯಭಾಗವು ವಾ॥ ಪಾಠದಲ್ಲಿ ಹೀಗಿದೆ :- ''ಅತೀತವಿದ್ಯಾಪ್ರಾಪ್ಯುಪಸರ್ಗಪ್ರಶಮನಾರ್ಥಾ ಶಾನ್ತಿಃ ಪಠಿತಾ । ಇದಾನೀಂ ತು ವಕ್ಷ್ಯಮಾಣಬ್ರಹ್ಮವಿದ್ಯಾಪ್ರಾಪ್ಯುವಸರ್ಗಪ್ರಶಮನಾರ್ಥಾ ಶಾನ್ತಿಃ ಪಠ್ಯತೇ 'ಸಹ ನಾವವತು' ಇತಿ ॥ 'ಶಂ ನೋ ಮಿತ್ರಃ ಇತ್ಯಾದಿಃ' ಎಂದಿದ್ದರೆ ಸುಖವಾಗಿ ಅನ್ವಯವಾಗುತ್ತದೆ.

2. ಟೀಕಾಕಾರರ ಮತದಲ್ಲಿ 'ಶಂ ನೋ ಮಿತ್ರಃ' ಎಂಬ ಶೀಕ್ಷಾವಲ್ಲಿಯ ಕೊನೆಯಲ್ಲಿರುವ ಶಾಂತಿಯು ಪರಾಪರಬ್ರಹ್ಮಗಳೆರಡರ ವಿದ್ಯೆಗಾಗಿ ; 'ಸಹ ನಾವವತು' ಎಂಬುದು ಬರಿಯ ಪರಬ್ರಹ್ಮವಿದ್ಯೆಗಾಗಿ ; ಆದರೆ ಭಾಷ್ಯಕಾರರು 'ಶಂ ನೋ ಮಿತ್ರಃ' ಎಂದು ಶೀಕ್ಷಾವಲ್ಲಿಯ ಮೊದಲಿರುವ ಶಾಂತಿಯು ಅಪರಬ್ರಹ್ಮವಿದ್ಯೆಗೆ, ಕೊನೆಯಲ್ಲಿರುವದು ಪರವಿದ್ಯೆಗೆ - ಎಂದು ವಿಭಾಗಮಾಡಿದ್ದಾರೆ.

3. 'ಅಡ್ಡಿಗಳು ನಾಶವಾಗುವದಕ್ಕಾಗಿ' ಎಂದದ್ದರಿಂದ ಇದು ಶೀಕ್ಷಾವಲ್ಲಿಯ ಮೊದಲಿನ ಶಾಂತಿಯೇ ಎಂದು ಸ್ಪಷ್ಟವಾಗುತ್ತದೆ. ಏಕೆಂದರೆ ಎರಡನೆಯ ಶಾಂತಿಯಲ್ಲಿ 'ಆವೀತ್' (ಕಾಪಾಡಿತು) ಎಂದು ವಿದ್ಯಾಪ್ರಾಪ್ತಿಯಾದ ಸೂಚನೆಯನ್ನು ಮಾಡಿದೆ.

4. ಬ್ರಹ್ಮಾತ್ಮಜ್ಞಾನವನ್ನು.

೧. ಶಾಂತಿಪಾಠ

ಓಂ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ। ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ । ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ೧ ॥

೧. ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ ! ನಮ್ಮಿಬ್ಬರನ್ನೂ ಜೊತೆಯಲ್ಲಿ ಭೋಗಪಡಿಸಲಿ ! ಜೊತೆಯಲ್ಲಿ (ನಾವಿಬ್ಬರೂ) ವೀರ್ಯವನ್ನು ಮಾಡುವಂತಾಗಲಿ ! ತೇಜಸ್ವಿಗಳಾದ ನಮ್ಮಿಬ್ಬರ ಅಧ್ಯಯನವಾಗಲಿ ! (ನಾವು) ದ್ವೇಷಮಾಡದೆ ಇರುವಂತಾಗಲಿ !

ಓಂ ಶಾಂತಿ ! ಶಾಂತಿ ! ಶಾಂತಿ !

(ಭಾಷ್ಯ)

೮೮. "ಶಂ ನೋ ಮಿತ್ರಃ" ಇತ್ಯಾದಿ ಪೂರ್ವವತ್ ಸ್ಪಷ್ಟಮ್ । ಸಹ ನಾವವತು ! ನೌ ಶಿಷ್ಯಾಚಾರ್ಯೌ ನಹ್ಯೇವ ಅವತು ರಕ್ಷತು । ಸಹ ನೌ ಭುನಕ್ತು ಭೋಜಯತು । ಸಹ ವೀರ್ಯಂ ವಿದ್ಯಾದಿನಿಮಿತ್ತಂ ಸಾಮರ್ಥ್ಯಂ ಕರವಾವಹೈ ನಿರ್ವರ್ತಯಾವಹೈ । ತೇಜಸ್ವಿನೌ ತೇಜಸ್ವಿನೋಃ ಆವಯೋಃ ಅಧೀತಮ್ ಸ್ವಧೀತಮ್ ಅಸ್ತು ಅರ್ಥಜ್ಞಾನಯೋಗ್ಯಮ್ ಅಸ್ತು ಇತ್ಯರ್ಥಃ । ಮಾ ವಿದ್ವಿಷಾವಹೈ । ವಿದ್ಯಾಗ್ರಹಣನಿಮಿತ್ತಂ ಶಿಷ್ಯಸ್ಯ ಆಚಾರ್ಯಸ್ಯ ವಾ ಪ್ರಮಾದಕೃತಾತ್ ಅನ್ಯಾಯಾತ್ ವಿದ್ವೇಷಃ ಪ್ರಾಪ್ತಃ । ತಚ್ಛಮನಾಯ ಇಯಮ್ ಆಶೀಃ - ಮಾ ವಿದ್ವಿಷಾವಹೈ ಇತಿ । ಮೈವ (ನೌ) ಇತರೇತರಂ ವಿದ್ವೇಷಮ್ ಆಪದ್ಯಾವಹೈ । ಶಾನ್ತಿಃ ಶಾನ್ತಿಃ ಶಾನ್ತಿಃ ಇತಿ ತ್ರಿರ್ವಚನಮ್ ಉಕ್ತಾರ್ಥಮ್ ॥

(ಭಾಷ್ಯಾರ್ಥ)

'ಶಂ ನೋ ಮಿತ್ರಃ' ಮುಂತಾದದ್ದು ಹಿಂದಿನಂತೆಯೇ (ವ್ಯಾಖ್ಯಾನಮಾಡಿಕೊಳ್ಳ ಬಹುದಾಗಿರುವದರಿಂದ) ಸ್ಪಷ್ಟವಾಗಿರುತ್ತದೆ.

'ಸಹ ನಾವವತು' (ಎಂಬುದರ ಅರ್ಥವೇನೆಂದರೆ :-) ನೌ - ಶಿಷ್ಯಾಚಾರ್ಯರಾದ ನಮ್ಮಿಬ್ಬರನ್ನೂ ಜೊತೆಯಲ್ಲಿಯೇ 'ಅವತು' - ಕಾಪಾಡಲಿ ! ನಮ್ಮಿಬ್ಬರನ್ನೂ ಜೊತೆಯಲ್ಲಿ ಭುನಕ್ತು - ಭೋಗಪಡಿಸಲಿ ![1] ಜೊತೆಯಲ್ಲಿ ವೀರ್ಯವನ್ನು

1. ಜ್ಞಾನದ ಫಲವನ್ನು ಅನುಭವಿಸುವಂತೆ ಮಾಡಲಿ !

ಎಂದರೆ ವಿದ್ಯೆಯೇ ಮುಂತಾದ[1] ನಿಮಿತ್ತದಿಂದ (ಉಂಟಾದ) ನಾಮಶೂರ್ಖತನವನ್ನು (ನಾವಿಬ್ಬರೂ) ಮಾಡುವಂತಾಗಲಿ ![2] ತೇಜಸ್ವಿನೌ-ತೇಜಸ್ವಿನೋಃ ತೇಜೋವಂತರಾದ ನಮ್ಮಿಬ್ಬರ ಅಧ್ಯಯನವು ಚೆನ್ನಾಗಿ ಅಧ್ಯಯನಮಾಡಿದ್ದು ಆಗಲಿ, ಅರ್ಥವನ್ನರಿಯುವದಕ್ಕೆ ತಕ್ಕದ್ದಾಗಲಿ ![3] ನಾವಿಬ್ಬರೂ ದ್ವೇಷಮಾಡದೆ ಇರುವಂತಾಗಲಿ ! ವಿದ್ಯೆಯನ್ನು ಗ್ರಹಿಸುವ ನಿಮಿತ್ತದಿಂದ ಶಿಷ್ಯನ ಅಥವಾ ಆಚಾರ್ಯನ ಪ್ರಮಾದದಿಂದ ಉಂಟಾಗುವ , ಅನ್ಯಾಯದಿಂದ ದ್ವೇಷವುಂಟಾಗಬಹುದು, ಅದನ್ನು ತೊಲಗಿಸುವದಕ್ಕಾಗಿ ''ನಾವಿಬ್ಬರೂ ದ್ವೇಷಮಾಡದೆ ಇರುವಂತಾಗಲಿ'' ! ಎಂಬೀ ಹಾರೈಕೆಯನ್ನು (ತೋರ್ಪಡಿಸಿಕೊಂಡಿರುತ್ತದೆ). ನಾವಿಬ್ಬರೂ ಒಬ್ಬರೊಬ್ಬರಲ್ಲಿ ಎಂದಿಗೂ ದ್ವೇಷವನ್ನು ಹೊಂದದೆ ಇರುವಂತಾಗಲಿ ![4]- (ಎಂದರ್ಥ). 'ಶಾಂತಿ ! ಶಾಂತಿ ! ಶಾಂತಿ !' ಎಂದು ಮೂರು ಸಲ ಹೇಳಿರುವದರ ಅರ್ಥವನ್ನು ಹಿಂದೆಯೇ[5] ಹೇಳಿದ್ದಾಗಿರುತ್ತದೆ.

(ಭಾಷ್ಯ)

ಆ. **ವಕ್ಷ್ಯಮಾಣವಿದ್ಯಾವಿಘ್ನಪ್ರಶಮನಾರ್ಥಾ ಚೇಯಂ ಶಾನ್ತಿಃ । ಅವಿಘ್ನೇನ ಆತ್ಮವಿದ್ಯಾಪ್ಯಾಪ್ತಿರಾಶಾಸ್ಯತೇ, ತನ್ಮೂಲಂ ಹಿ ಪರಂ ಶ್ರೇಯಃ ಇತಿ ॥**

(ಭಾಷ್ಯಾರ್ಥ)

ಮುಂದೆ ಹೇಳಲಾಗುವ ವಿದ್ಯೆಯ ಅಡ್ಡಿಗಳನ್ನು ನಾಶಗೊಳಿಸುವದಕ್ಕೆ ಈ ಶಾಂತಿಯನ್ನು ಹೇಳಿರುತ್ತದೆ. ಯಾವ ಅಡ್ಡಿಯೂ ಇಲ್ಲದೆ ಆತ್ಮವಿದ್ಯೆಯು ದೊರಕಲೆಂದು (ಇಲ್ಲಿ) ಹಾರೈಸಿರುತ್ತದೆ ; ಏಕೆಂದರೆ ಹೆಚ್ಚಿನ ಶ್ರೇಯಸ್ಸಿಗೆ ಅದೇ[6] ಕಾರಣವಾಗಿರುತ್ತದೆ.

1. ವಿದ್ಯೆ, ಅದರಿಂದಾಗುವ ಆನಂದ ಮುಂತಾದ.

2. ಗುರುಶಿಷ್ಯರಿಬ್ಬರೂ ಸೇರಿದರೇ ಫಲವುಂಟಾಗುವದು ಎಂದು ಭಾವ.

3. ''ತೇಜಸ್ವಿನೋಃ ಅಧೀತಂ ತೇಜಸ್ವಿ ಅಸ್ತು'' (ತೇಜಸ್ವಿಗಳಾದ ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ !) ಎಂದು ಟೀಕಾನಮ್ಮತವಾದ ಅನ್ವಯ. ಈ ಶಾಂತಿಗೆ ಕಠೋಪನಿಷತ್ತಿನ ಭಾಷ್ಯದಲ್ಲಿ ಮಾಡಿರುವ ವ್ಯಾಖ್ಯಾನವನ್ನು ನೋಡಿರಿ.

4. ಗುರುವು ಪರಮೇಶ್ವರನಿಗಿಂತ ಬೇರೆಯಲ್ಲ ; ಆತನ ಮನಸ್ಸಿಗೆ ಸಮಾಧಾನವುಂಟಾದ ಹೊರತು ವಿದ್ಯೆಯು ಸಫಲವಾಗಲಾರದು. (ತೈ. ವಾ.)

5. ಭಾ. ಭಾ. ೧೩ರಲ್ಲಿ.

6. 'ಬ್ರಹ್ಮವು ನಮ್ಮೆಲ್ಲರ ಆತ್ಮನು' ಎಂಬ ವಿದ್ಯೆಯಿಂದಲೇ ಪರಮಶ್ರೇಯಸ್ಸಾಗುವದು. ಆ ವಿದ್ಯೆಗೆ ಅಡ್ಡಿಯಿರುವವರೆಗೆ ನಿಜವಾದ ಮುಕ್ತಿಯಿಲ್ಲ. ಆದ್ದರಿಂದ ''ಅಪರ ವಿದ್ಯೆಯಾದ ಉಪಾಸನೆಯನ್ನು ಕೊಟ್ಟು ಬ್ರಹ್ಮವು ನನ್ನನ್ನು ಕಾಪಾಡಿದೆ ; ಇನ್ನು ಮುಖ್ಯ

೧. ಬ್ರಹ್ಮವಿದ್ಯೆಯ ಸಾರ

ಈ ವಲ್ಲಿಯ ಸಂಬಂಧ

(ಭಾಷ್ಯ)

೯೦. ಸಂಹಿತಾದಿವಿಷಯಾಣಿ ಕರ್ಮಭಿರವಿರುದ್ಧಾನಿ ಉಪಾಸನಾನಿ ಉಕ್ತಾನಿ । ಅನನ್ತರಂ ಚ ಅನ್ತಃಸೋಪಾಧಿಕಾತ್ಮದರ್ಶನಮ್ ಉಕ್ತಂ ವ್ಯಾಹೃತಿದ್ವಾರೇಣ ಸ್ವಾರಾಜ್ಯಫಲಮ್ । ನ ಚೈತಾವತಾ ಅಶೇಷತಃ ಸಂಸಾರಬೀಜಸ್ಯ ಉಪಮರ್ದನಮ್ ಅಸ್ತಿ - ಇತ್ಯತಃ ಅಶೇಷೋಪದ್ರವಬೀಜಸ್ಯ ಅಜ್ಞಾನಸ್ಯ ನಿವೃತ್ತ್ಯರ್ಥಮ್ ವಿಧೂತಸರ್ವೋಪಾಧಿವಿಶೇಷಾತ್ಮದರ್ಶನಾರ್ಥಮ್ ಇದಮಾರಭ್ಯತೇ ''ಬ್ರಹ್ಮವಿದಾಪ್ನೋತಿ ಪರಮ್'' ಇತ್ಯಾದಿ ॥

(ಭಾಷ್ಯಾರ್ಥ)

ಸಂಹಿತೆಯೇ ಮುಂತಾದ ವಿಷಯವಾಗಿ ಕರ್ಮಕ್ಕೆ ವಿರುದ್ಧವಲ್ಲದ ಉಪಾಸನೆಗಳನ್ನು ಹೇಳಿದ್ದಾಯಿತು. ಆಮೇಲೆ ವ್ಯಾಹೃತಿಗಳ ಮೂಲಕವಾಗಿ ತನ್ನೊಳಗೇ ಉಪಾಧಿಗಳಿಂದೊಡಗೂಡಿದ ಆತ್ಮನನ್ನು (ಧ್ಯಾನಮಾಡಿ) ಸ್ವಾರಾಜ್ಯವೆಂಬ ಫಲವನ್ನು (ಪಡೆದುಕೊಳ್ಳುವ) ಉಪಾಸನೆಯನ್ನು ಹೇಳಿದ್ದಾಯಿತು. ಆದರೆ ಇಷ್ಟು ಮಾತ್ರದಿಂದ **ಸಂಸಾರಬೀಜವು**[1] ಒಂದಿಷ್ಟೂ ಉಳಿಯದೆ[2] ನಾಶವಾಗುವದಿಲ್ಲವಾದ್ದರಿಂದ ಎಲ್ಲಾ ಕಷ್ಟಗಳಿಗೂ ಕಾರಣವಾಗಿರುವ **ಅಜ್ಞಾನವನ್ನು** ತೊಲಗಿಸುವದಕ್ಕಾಗಿ ಎಲ್ಲಾ ಉಪಾಧಿವಿಶೇಷಗಳನ್ನೂ ಕೊಡವಿಹಾಕಿರುವ ಆತ್ಮನನ್ನು ಕಂಡುಕೊಳ್ಳುವ ಪ್ರಯೋಜನಕ್ಕಾಗಿ[3] ಈ ''ಬ್ರಹ್ಮವಿದಾಪ್ನೋತಿ ಪರಮ್'' ಮುಂತಾದ (ಗ್ರಂಥಭಾಗವನ್ನು) ಪ್ರಾರಂಭಿಸಿರುತ್ತದೆ.

ಮುಕ್ತಿಗೆ ಕಾರಣವಾಗಿರುವ ಪರಬ್ರಹ್ಮವಿದ್ಯೆಯನ್ನು ಎಡರಿಲ್ಲದಂತೆ ಮಾಡಿ ಕಾಪಾಡಲಿ !'' ಎಂದು ಇಲ್ಲಿ ಬೇಡಿಕೊಂಡಿದೆ - ಎಂದಭಿಪ್ರಾಯ.

1. ಅಜ್ಞಾನವು, ಇದರ ಸ್ವರೂಪವನ್ನು ಇಷ್ಟರಲ್ಲಿಯೆ ವರ್ಣಿಸಲಾಗುವದು.

2. ಬ್ರಹ್ಮಲೋಕಕ್ಕೆ ಹೋಗಿ 'ಮಹಃ' ಎಂಬ ವ್ಯಾಹೃತಿರೂಪವಾದ ಅಪರಬ್ರಹ್ಮವನ್ನು ಪಡೆದುಕೊಂಡರೂ ಸಂಸಾರಬೀಜವು ತೀರ ಹೋಗಿರುವದಿಲ್ಲ. ಅಪರಬ್ರಹ್ಮರೂಪವಾದ ಫಲವು ಒಂದು ಕಲ್ಪದವರೆಗೆ ಇರುವದರಿಂದ ನಿತ್ಯವೆಂದು ಕರೆಯಿಸಿಕೊಳ್ಳುತ್ತದೆಯಾದರೂ ಅದೂ ಅವಿದ್ಯಾಭೂಮಿಯಲ್ಲಿಯೇ ಇರುತ್ತದೆ.

3. ನಿರುಪಾಧಿಕನಾದ ಅದ್ವಿತೀಯಾತ್ಮನೇ ಪರಬ್ರಹ್ಮವು ; ಈ ಬ್ರಹ್ಮವನ್ನು ಕಂಡುಕೊಂಡರೇ ಪರಮಶ್ರೇಯಸ್ಸು ಎಂದು ತಿಳಿಸುವದಕ್ಕಾಗಿ.

೫ವಿದ್ಯಾ ನಿವೃತ್ತಿಯೇ ಬ್ರಹ್ಮವಿದ್ಯೆಯ ಪ್ರಯೋಜನ

(ಭಾಷ್ಯ)

ಪ್ರಯೋಜನಂ ಚ ಅಸ್ಯಾ ಬ್ರಹ್ಮವಿದ್ಯಾಯಾ ಅವಿದ್ಯಾ ನಿವೃತ್ತಿಃ, ತತಶ್ಚ ಆತ್ಯನಿಕ್ತಃ ಸಂಸಾರಾಭಾವಃ । ವಕ್ಷ್ಯತಿ ಚ ''ವಿದ್ವಾನ್ ನ ಬಿಭೇತಿ ಕುತಶ್ಚನ'' (೨-೯) ಇತಿ । ಸಂಸಾರನಿಮಿತ್ತೇ ಚ ಸತಿ ''ಅಭಯಂ ಪ್ರತಿಷ್ಠಾಂ[1] ವಿನ್ದತೇ'' (೨-೭) ಇತ್ಯನುಪಪನ್ನಮ್ । ''ಕೃತಾಕೃತೇ ಪುಣ್ಯಪಾಪೇ ನ ತಪತಃ'' (೨-೯) ಇತಿ ಚ । ಅತೋಽವಗಮ್ಯತೇ ಅಸ್ಮಾತ್ ವಿಜ್ಞಾನಾತ್ ಸರ್ವಾತ್ಮ ಬ್ರಹ್ಮವಿಷಯಾತ್ ಆತ್ಯನ್ತಿಕಃ ಸಂಸಾರಾಭಾವಃ ಇತಿ । ಸ್ವಯಮೇವ ಚ ಪ್ರಯೋಜನಮ್ ಆಹ - ''ಬ್ರಹ್ಮವಿದಾಪ್ನೋತಿ ಪರಮ್'' ಇತಿ ಆದಾವೇವ ಸಂಬನ್ಧ ಪ್ರಯೋಜನಜ್ಞಾಪನಾರ್ಥಮ್ । ನಿಜ್ಞಾತಯೋರ್ಹಿ ಸಮ್ಬನ್ಧಪ್ರಯೋಜನ-ಯೋಃ, ವಿದ್ಯಾಶ್ರವಣಗ್ರಹಣಧಾರಣಾಭ್ಯಾಸಾರ್ಥಂ ಪ್ರವರ್ತತೇ । ಶ್ರವಣಾದಿ ಪೂರ್ವಕಂ ಹಿ ವಿದ್ಯಾಫಲಮ್ । ''ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ'' (ಬೃ. ೨-೪-೫) ಇತ್ಯಾದಿಶ್ರುತ್ಯನ್ತರೇಭ್ಯಃ ॥

(ಭಾಷ್ಯಾರ್ಥ)

ಮತ್ತು ಈ ಬ್ರಹ್ಮವಿದ್ಯೆಯ ಪ್ರಯೋಜನವು ಅವಿದ್ಯಾನಿವೃತ್ತಿಯು, ಮತ್ತು ಅದರಿಂದ ಸಂಪೂರ್ಣವಾದ ಸಂಸಾರಾಭಾವವು.[2] (ಆದ್ದರಿಂದಲೇ) ಮುಂದೆ (ಶ್ರುತಿಯು) ''ಬ್ರಹ್ಮದ ಆನಂದವನ್ನು ತಿಳಿದವನು ಏತಕ್ಕೂ ಅಂಜುವದಿಲ್ಲ'' (೨-೯) ಎಂದು ಹೇಳುವದು. ಸಂಸಾರಕ್ಕೆ ನಿಮಿತ್ತ(ವಾದ[3] ಅಜ್ಞಾನವು) ಇರುತ್ತಿರುವಲ್ಲಿ ''ಅಂಜಿಕೆಯಿಲ್ಲದ ನಿಲುಗಡೆಯನ್ನು ಹೊಂದುತ್ತಾನೆ'' (೨-೭) ಎಂದೂ ''ಮಾಡಿದ ಮತ್ತು ಮಾಡದೆ ಇರುವ ಪಾಪಪುಣ್ಯಗಳು ತಪಿಸುವದಿಲ್ಲ'' (೨-೯)[4]

1. 'ಪ್ರತಿಷ್ಠಾಂ ಚ' ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠ ಉತ್ತಮ.

2. ಸಂಸಾರವು ಅವಿದ್ಯೆಯಿಂದ ತೋರುತ್ತಿರುವದರಿಂದ ಅವಿದ್ಯೆಯು ಹೋದರೇ ಅದು ತೀರ ಇಲ್ಲದಂತಾಗುವದು.

3. ಸಂಸಾರಬೀಜವೆಂದರೆ ಸಂಸಾರನಿಮಿತ್ತವೇ ಎಂದು ಸ್ಪಷ್ಟವಾಗಿ ಇಲ್ಲಿ ಹೇಳಿದಂತೆ ಆಯಿತು.

4. ಶ್ರುತಿಯ ಅರ್ಥವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಅಜ್ಞರಿಗೆ ಆಗುತ್ತಲೇ ಇರುವ ಅಂಜಿಕೆ, ಪಶ್ಚಾತ್ತಾಪ - ಮುಂತಾದವು ಆತ್ಮಜ್ಞಾನಿಗೆ ಆಗುವದಿಲ್ಲವೆಂದು ಶ್ರುತಿಯು ಹೇಳುವದರಿಂದ ಜ್ಞಾನವು ಅಜ್ಞಾನವನ್ನು ತೀರ ತೊಲಗಿಸುತ್ತದೆ ಎಂದು ಸಿದ್ಧವಾಗುತ್ತದೆ.

ಎಂದೂ (ಮುಂದೆ ಹೇಳಿರುವಂತೆಯೂ) ಹೊಂದುವಹಾಗಿಲ್ಲ. ಆದ್ದರಿಂದ ಎಲ್ಲರ ಆತ್ಮನಾಗಿರುವ (ಈ) ಬ್ರಹ್ಮದ ವಿಷಯವಾದ ವಿಜ್ಞಾನದಿಂದ ಸಂಸಾರವು ತೀರ ಇಲ್ಲವಾಗುವುದೆಂದು ನಿಶ್ಚಯವಾಗುತ್ತದೆ. ''ಬ್ರಹ್ಮವಿದನು ಪರವನ್ನು ಪಡೆದು ಕೊಳ್ಳುತ್ತಾನೆ'' ಎಂದು (ಬ್ರಹ್ಮವಿದ್ಯೆಯ) ಸಂಬಂಧವನ್ನೂ ಪ್ರಯೋಜನವನ್ನೂ ತಿಳಿಸಿಕೊಡುವುದಕ್ಕಾಗಿ ಶ್ರುತಿಯು ತಾನೇ ಪ್ರಯೋಜನವನ್ನು[1] ಮೊದಲೇ ಹೇಳಿರುತ್ತದೆ. ಸಂಬಂಧಪ್ರಯೋಜನಗಳು[2] ತಿಳಿದೇ ಅಲ್ಲವೆ, ವಿದ್ಯೆಯ ಶ್ರವಣ, ಗ್ರಹಣ, ತನ್ನಲ್ಲಿಟ್ಟುಕೊಳ್ಳುವದು - ಇವುಗಳನ್ನು ಅಭ್ಯಾಸಮಾಡುವದಕ್ಕೆ (ಮುಮುಕ್ಷುವು) ಮುಂದುವರಿಯುತ್ತಾನೆ ? ಶ್ರವಣಾದಿಗಳ ಮೂಲಕವೇ ಅಲ್ಲವೆ, ವಿದ್ಯೆಯೆಂಬ ಫಲ(ವುಂಟಾಗುವದು) ?[3] ''(ಆತ್ಮನನ್ನೇ) ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು'' (ಬೃ. ೨-೪-೫) ಮುಂತಾದ ಬೇರೆಯ ಶ್ರುತಿಗಳು ಇದಕ್ಕೆ ಪ್ರಮಾಣವು.

ಬ್ರಹ್ಮವಿದಾಪ್ನೋತಿ ಪರಮ್ । ತದೇಷಾಽಭ್ಯುಕ್ತಾ । ಸತ್ಯಂ ಜ್ಞಾನಮನನ್ತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ ॥೧॥

೧. ಬ್ರಹ್ಮವಿದನು ಪರವನ್ನು ಪಡೆದುಕೊಳ್ಳುತ್ತಾನೆ. ಅಲ್ಲಿ ಇದು ಹೇಳಲ್ಪಟ್ಟಿರುತ್ತದೆ. ಸತ್ಯವೂ ಜ್ಞಾನವೂ ಅನಂತವೂ (ಆದದ್ದು) ಬ್ರಹ್ಮವು. ಗುಹೆಯಲ್ಲಿ ಪರಮವ್ಯೋಮದಲ್ಲಿ ಇಡಲ್ಪಟ್ಟಿರುವ (ಅದನ್ನು) ಯಾವಾತನು ಅರಿತುಕೊಳ್ಳುವನೋ ಅವನು ಎಲ್ಲಾ ಕಾಮಗಳನ್ನೂ ಒಮ್ಮೆಗೇ ವಿಪಶ್ಚಿತ್ತಾದ ಬ್ರಹ್ಮವಾಗಿ ಪಡೆದುಕೊಳ್ಳುತ್ತಾನೆ.[4]

---

1. ಅಜ್ಞಾನವು ಹೋಗುವುದರ ಮೂಲಕ ಸಂಸಾರನಾಶವಾಗುವದೆಂಬ ಪ್ರಯೋಜನವನ್ನು.

2. ಸಂಬಂಧಪ್ರಯೋಜನಗಳಿರುವ ಗ್ರಂಥವನ್ನೇ ಶ್ರೋತೃಗಳು ಶ್ರವಣಮಾಡುವದಕ್ಕೆ ತೊಡಗುತ್ತಾರೆ - ಎಂದು ಶ್ಲೋಕವಾರ್ತಿಕಕಾರರು ಹೇಳುತ್ತಾರೆ.

3. ಶ್ರವಣಾದಿಗಳೇ ಆತ್ಮಜ್ಞಾನಕ್ಕೆ ನೇರಾದ ಕಾರಣವೆಂದು ಶ್ರುತಿಯಲ್ಲಿದೆ ; ಆತ್ಮಜ್ಞಾನದಿಂದಾಗುವ ಪ್ರಯೋಜನವನ್ನು ತಿಳಿದಹೊರತು ಶ್ರವಣದಲ್ಲಿ ಯಾರೂ ತೊಡಗಲಾರರು.

4. ಈ ವಲ್ಲಿಯಲ್ಲಿರುವ ಅನುವಾಕಗಳನ್ನು ಅರ್ಥಕ್ಕನುಸಾರವಾಗಿ ಖಂಡಗಳಾಗಿ ಒಡೆದು ಕೊಂಡಿದೆ. ಅನುವಾಕಸಂಖ್ಯೆಗಳನ್ನು ಮಾತ್ರ ವೈದಿಕಪಾಠದಂತೆಯೇ ಕೊಟ್ಟಿದೆ.

ಈ ವಲ್ಲಿಯ ಅರ್ಥದ ಸೂತ್ರವಾಕ್ಯ

(ಭಾಷ್ಯ)

೯೨. ಬ್ರಹ್ಮವಿತ್ । ಬ್ರಹ್ಮ ಇತಿ ವಕ್ಷ್ಯಮಾಣಲಕ್ಷಣಮ್ । ಬೃಹತ್ತ್ವಾತ್ ಬ್ರಹ್ಮ । ತದ್ ವೇತ್ತಿ ವಿಜಾನಾತಿ ಇತಿ ಬ್ರಹ್ಮವಿತ್ । ಆಪ್ನೋತಿ ಪ್ರಾಪ್ನೋತಿ ಪರಂ ನಿರತಿಶಯಂ ತದೇವ ಬ್ರಹ್ಮ ಪರಮ್ । ನ ಹಿ ಅನ್ಯಸ್ಯ ವಿಜ್ಞಾನಾತ್ ಅನ್ಯಸ್ಯ ಪ್ರಾಪ್ತಿಃ । ಸ್ಪಷ್ಟಂ ಚ ಶ್ರುತ್ಯನ್ತರಂ ಬ್ರಹ್ಮಪ್ರಾಪ್ತಿಮೇವ ಬ್ರಹ್ಮವಿದೋ ದರ್ಶಯತಿ " ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ" (ಮುಂ. ೩-೨-೯) ಇತ್ಯಾದಿ ॥

(ಭಾಷ್ಯಾರ್ಥ)

ಬ್ರಹ್ಮವಿತ್ ಎಂಬಲ್ಲಿ ಬಹ್ಮ ಎಂದರೆ ಮುಂದೆ ಹೇಳುವ ಲಕ್ಷಣವುಳ್ಳದ್ದು.[1] ಅತ್ಯಂತವಾಗಿ ದೊಡ್ಡದಾಗಿರುವದರಿಂದ (ಅದು) ಬ್ರಹ್ಮ (ವೆನಿಸುತ್ತದೆ). ಅದನ್ನು ಅರಿತಿರುತ್ತಾನೆ, ತಿಳಿದುಕೊಂಡಿರುತ್ತಾನೆ ; ಆದ್ದರಿಂದ (ಅವನಿಗೆ) ಬ್ರಹ್ಮವಿತ್ (ಎಂದು ಹೆಸರು. ಅವನು) ಪರಂ ಎಂದರೆ ಮಿಗಿಲಿಲ್ಲದ್ದನ್ನು ಪಡೆದುಕೊಳ್ಳುತ್ತಾನೆ. (ಇಲ್ಲಿ) ಅದೇ ಬ್ರಹ್ಮ (ವನ್ನೇ) ಪರವೆಂದು (ಕರೆದಿದೆ) ; ಏಕೆಂದರೆ ಒಂದರ ಜ್ಞಾನದಿಂದ ಇನ್ನೊಂದರ ಪ್ರಾಪ್ತಿಯಾಗಲಾರದು.[2] ಬೇರೊಂದು ಶ್ರುತಿಯಲ್ಲಿ ಬ್ರಹ್ಮವನ್ನರಿತವನಿಗೆ ಬ್ರಹ್ಮ ಪ್ರಾಪ್ತಿಯೇ (ಫಲವೆಂದು) "ಯಾವನಾದರೆ ಆ ಪರಮಬ್ರಹ್ಮವನ್ನು ತಿಳಿದುಕೊಳ್ಳುತ್ತಾನೆಯೋ ಅವನು ಬ್ರಹ್ಮವೇ ಆಗುತ್ತಾನೆ" (ಮುಂ. ೩-೨-೯) ಎಂದು ಮುಂತಾದ (ವಾಕ್ಯದಿಂದ) ಸ್ಪಷ್ಟವಾಗಿ (ತಿಳಿಸಿಯೂ ಇರುತ್ತದೆ).

ಬ್ರಹ್ಮದ ಪ್ರಾಪ್ತಿಯೆಂಬುದು ಗೌಣ

(ಭಾಷ್ಯ)

೯೩. ನನು ಸರ್ವಗತಂ ಸರ್ವಸ್ಯ ಚಾತ್ಮಭೂತಂ[3] ಬ್ರಹ್ಮ ವಕ್ಷ್ಯತಿ । ಅತೋ ನಾಪ್ಯಮ್ । ಆಪ್ತಿಶ್ಚ ಅನ್ಯಸ್ಯಾನ್ಯೇನ ಪರಿಚ್ಛಿನ್ನಸ್ಯ ಚ ಪರಿಚ್ಛಿನ್ನೇನ ದೃಷ್ಟಾ ।

---

1. ಸತ್ಯ, ಜ್ಞಾನ, ಆನಂತ - ಎಂಬ ಲಕ್ಷಣವುಳ್ಳದ್ದು.

2. ಬ್ರಹ್ಮವು ವೇದ್ಯ, ಬ್ರಹ್ಮವಿದ್ಯೆಯು ಸಾಧನ, ಬ್ರಹ್ಮವೇತ್ತನು ಆತ್ಮ, ಪರಬ್ರಹ್ಮ ಪ್ರಾಪ್ತಿಯು ವೇದನದ ಫಲ - ಎಂದು ಲಕ್ಷಣಾರ್ಥವಾಗುತ್ತದೆ. ಆದರೆ ಬ್ರಹ್ಮವೂ ಪರವೂ ಬೇರೆ ಬೇರೆ ಎಂದಾದರೆ ಒಂದನ್ನು ತಿಳಿದದ್ದರಿಂದ ಮತ್ತೊಂದು ಪ್ರಾಪ್ತವಾಗುವದು - ಎಂದು ವೇದವು ಅಯುಕ್ತವಾಗಿ ಹೇಳುತ್ತದೆ - ಎಂದಾಗುತ್ತದೆ.

3. 'ಸರ್ವಸ್ಯಾತ್ಮಭೂತಂ' ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.

ಅಪರಿಚ್ಛಿನ್ನಂ ಸರ್ವಾತ್ಮಕಂ ಚ ಬ್ರಹ್ಮ[1] ಇತ್ಯತಃ ಪರಿಚ್ಛಿನ್ನವತ್ ಅನಾತ್ಮವಚ್ಚ ತಸ್ಯಾಪ್ತಿಃ ಅನುಪಪನ್ನಾ । ನಾಯಂ ದೋಷಃ । ಕಥಮ್ ? ದರ್ಶನಾದರ್ಶನಾಪೇಕ್ಷತ್ವಾತ್ ಬ್ರಹ್ಮಣಃ ಆಪ್ಯನಾಪ್ಯೋಃ । ಪರಮಾರ್ಥತೋ ಬ್ರಹ್ಮರೂಪಸ್ಯಾಪಿ ಸತಃ ಅಸ್ಯ ಜೀವಸ್ಯ ಭೂತಮಾತ್ರಾಕೃತಬಾಹ್ಯಪರಿಚ್ಛಿನ್ನಾನ್ನಮಯಾದ್ಯಾತ್ಮದರ್ಶಿನಃ, ತದಾಸಕ್ತಚೇತಸಃ, ಪ್ರಕೃತಸಂಖ್ಯಾಪೂರಣಸ್ಯ ಆತ್ಮನೋಽವ್ಯವಹಿತಸ್ಯಾಪಿ ಬಾಹ್ಯ ಸಂಖ್ಯೇಯವಿಷಯಾಸಕ್ತಚಿತ್ತತಯಾ ಸ್ವರೂಪಾಭಾವದರ್ಶನವತ್, ಪರಮಾರ್ಥ ಬ್ರಹ್ಮಸ್ವರೂಪಾಭಾವದರ್ಶನಲಕ್ಷಣಯಾ ಅವಿದ್ಯಯಾ ಅನ್ನಮಯಾ ದೀನ್ ಬಾಹ್ಯಾನ್ ಅನಾತ್ಮನಃ ಆತ್ಮತ್ವೇನ ಪ್ರತಿಪನ್ನತ್ವಾತ್, ಅನ್ನಮಯಾದ್ಯನಾತ್ಮಭ್ಯೋ 'ನಾನ್ಯೋಽಹಮಸ್ಮಿ' ಇತ್ಯಭಿಮನ್ಯತೇ । ಏವಮ್ ಅವಿದ್ಯಯಾ ಆತ್ಮಭೂತಮಪಿ ಬ್ರಹ್ಮ ಅನಾಪ್ತಂ ಸ್ಯಾತ್ । ತಸ್ಯ ಏವಮವಿದ್ಯಯಾ ಅನಾಪ್ತಬ್ರಹ್ಮಸ್ವರೂಪಸ್ಯ ಪ್ರಕೃತಸಂಖ್ಯಾಪೂರಣಸ್ಯ ಆತ್ಮನೋವಿದ್ಯಯಾ ಅನಾಪ್ತಸ್ಯ ಸತಃ ಕೇನಚಿತ್ ಸ್ಮಾರಿತಸ್ಯ ಪುನಸ್ತಸ್ಯೈವ ವಿದ್ಯಯಾ ಆಪ್ತಿರ್ಯಥಾ, ತಥಾ ಶ್ರುತ್ಯುಪದಿಷ್ಟಸ್ಯ ಸರ್ವಾತ್ಮಬ್ರಹ್ಮಣಃ ಆತ್ಮತ್ವದರ್ಶನೇನ ವಿದ್ಯಯಾ ತದಾಪ್ತಿರುಪಪದ್ಯತೇ ಏವ ॥

(ಭಾಷ್ಯಾರ್ಥ)

(ಆಕ್ಷೇಪ :-) ಬ್ರಹ್ಮವು ಎಲ್ಲೆಲ್ಲಿಯೂ ಇರುವದೆಂದೂ ಎಲ್ಲರಿಗೂ ಆತ್ಮನೆಂದೂ (ಶ್ರುತಿಯು) ಮುಂದೆ ಹೇಳುತ್ತದೆ. ಆದ್ದರಿಂದ (ಅದು) ಆಪ್ಯವಲ್ಲ. ಒಬ್ಬನನ್ನು (ಅಥವಾ ಒಂದನ್ನು) ಮತ್ತೊಬ್ಬನು ಅಥವಾ, ಒಂದು ಅಳತೆಗೆ ಸಿಕ್ಕಿರುವ ವಸ್ತುವನ್ನು ಇನ್ನೊಂದು ಅಳತೆಗೆ ಸಿಕ್ಕಿರುವ ವಸ್ತು, ಪಡೆಯುವದೆಂಬುದು ಕಂಡಿರುತ್ತದೆ. ಆದರೆ ಬ್ರಹ್ಮವು ಅಳತೆಗೆ ಸಿಕ್ಕದೆ ಇರುವದು, ಮತ್ತು ಎಲ್ಲದರ ಆತ್ಮನಾಗಿಯೂ ಇರುವದು, ಹೀಗಿರುವದರಿಂದ ಅದು ಅಳತೆಗೆ ಸಿಕ್ಕಿರುವದೋ ಎಂಬಂತೆ, ಮತ್ತು ಅದು ತನಗಿಂತ ಬೇರೆಯೋ ಎಂಬಂತೆ, ಅದನ್ನು ಪಡೆಯುವ ದೆಂಬುದು ಹೊಂದುವದಿಲ್ಲವಲ್ಲ !

(ಪರಿಹಾರ :-) ಇದೇನೂ ತಪ್ಪಲ್ಲ. ಹೇಗೆಂದರೆ ಬ್ರಹ್ಮವನ್ನು ಪಡೆಯುವದು ಅಥವಾ ಪಡೆಯದಿರುವದು-ಇವುಗಳು ದರ್ಶನ ಅಥವಾ ಅದರ್ಶನ ಇವುಗಳನ್ನು ಅವಲಂಬಿಸಿರುತ್ತವೆ. ನಿಜವಾಗಿ ಈ ಜೀವನು ಬ್ರಹ್ಮರೂಪನೇ ಆಗಿರುತ್ತಿದ್ದರೂ ಭೂತಮಾತ್ರೆಗಳಿಂದ[2] ಆಗಿರುವ ಹೊರಗಿನ ಪರಿಚ್ಛಿನ್ನವಾದ ಅನ್ನಮಯಕೋಶವೇ

1. 'ಯದ್ ಬ್ರಹ್ಮ' ಎಂಬ ಕಾ॥ ಪಾಠದಲ್ಲಿ ಯದ್ ಹೆಚ್ಚು.

2. ಭೂತಾವಯವಗಳಿಂದ ; ಅನ್ನಮಯಾದಿಗಳು ಭೌತಿಕವೆಂದು ತಿಳಿಸುವದಕ್ಕಾಗಿ ಈ ವಿಶೇಷಣವನ್ನು ಕೊಟ್ಟಿದೆ.

ಮುಂತಾದವನ್ನು ತಾನೆಂದು ತಿಳಿದುಕೊಂಡು ಅವುಗಳಲ್ಲಿ ಆಸಕ್ತಿಯುಳ್ಳ ಚಿತ್ತ ವ್ಯಕ್ತಿಯಾಗಿ, ಪ್ರಕೃತಸಂಖ್ಯೆಯನ್ನು ಪೂರಣಮಾಡುವ[1] ತಾನು (ತನಗೆ) ನಡುವೆ ಏನೇನೂ ಇಲ್ಲದೆ ಇದ್ದರೂ ಹೊರಗಿನ ಎಣಿಸಬೇಕಾದ ವಿಷಯಗಳಲ್ಲಿ[2] ಆಸಕ್ತಿಯುಳ್ಳ ಚಿತ್ತವ್ಯಕ್ತಿಯಾಗಿರುವದರಿಂದ ತಾನೇ ಇಲ್ಲವೆಂದು ಅರಿಯುವಂತೆ, ಪರಮಾರ್ಥವಾದ ಬ್ರಹ್ಮಸ್ವರೂಪವೇ ಇಲ್ಲವೆಂದುಭಾವಿಸುವ ಅವಿದ್ಯೆಯಿಂದ ಅನ್ನಮಯವೇ ಮುಂತಾದ ಹೊರಗಿನ ಅನಾತ್ಮಗಳನ್ನು ಆತ್ಮನೆಂದು ಭಾವಿಸಿಕೊಂಡಿರುವದರಿಂದ ಅನ್ನಮಯವೇ ಮುಂತಾದ ಅನಾತ್ಮಗಳಿಗಿಂತ ನಾನು ಬೇರೆಯಲ್ಲ-ಎಂದು (ಅವುಗಳಲ್ಲಿ) ಅಭಿಮಾನಪಡುತ್ತಿರುತ್ತಾನೆ. ಹೀಗೆ ತನ್ನ ಸ್ವರೂಪವೇ ಆಗಿರುವದಾದರೂ ಬ್ರಹ್ಮವು ಅವಿದ್ಯೆಯಿಂದ ಪಡೆಯಲ್ಪಡದ್ದಾಗುವದು. ಹೀಗೆ ಅವಿದ್ಯೆಯಿಂದ ಬ್ರಹ್ಮಸ್ವರೂಪವನ್ನು ಪಡೆಯದೆ ಇರುವ ಆತ್ಮನು, ಪ್ರಕೃತಸಂಖ್ಯೆಯನ್ನು ಪೂರಣಮಾಡುವ ತಾನೇ ಅವಿದ್ಯೆಯಿಂದ ಅಪ್ರಾಪ್ತನಾಗಿದ್ದು ಯಾರೋ ನೆನಪಿಗೆ ತಂದುಕೊಟ್ಟಾಗ ಮತ್ತೆ ಅವನೇ ಹೇಗೆ ವಿದ್ಯೆಯಿಂದ ಆಪ್ತನಾಗುವನೋ[3] ಹಾಗೆ ಶ್ರುತಿಯಲ್ಲಿ ಉಪದೇಶಮಾಡಿರುವ ಎಲ್ಲರ ಆತ್ಮನಾದ ಬ್ರಹ್ಮವನ್ನು ತನ್ನ (ಸ್ವರೂಪ)ವೆಂದು ಕಂಡುಕೊಳ್ಳುವದೆಂಬ ವಿದ್ಯೆಯಿಂದ ಅದನ್ನು ಪಡೆ(ದಂತೆ ಆಗು)ವದು ಯುಕ್ತವಾಗಿಯೇ ಇದೆ.

ಸೂತ್ರವಾಕ್ಯದ ವಿವರಣೆಯ ಖಯಕ್ಕು ಏತಕ್ಕೆ ?

(ಭಾಷ್ಯ)

೯೪. ''ಬ್ರಹ್ಮವಿದಾಪ್ನೋತಿ ಪರಮ್'' ಇತಿ ವಾಕ್ಯಂ ಸೂತ್ರಭೂತಂ ಸರ್ವಸ್ಯ ವಲ್ಲ್ಯರ್ಥಸ್ಯ । 'ಬ್ರಹ್ಮವಿದಾಪ್ನೋತಿ ಪರಮ್' ಇತ್ಯನೇನ ವಾಕ್ಯೇನ ವೇದ್ಯತಯಾ ಸೂತ್ರಿತಸ್ಯ ಬ್ರಹ್ಮಣಃ ಅನಿರ್ಧಾರಿತಸ್ವರೂಪವಿಶೇಷಸ್ಯ ಸರ್ವತೋ ವ್ಯಾವೃತ್ತಸ್ವರೂಪವಿಶೇಷಸಮರ್ಪಣಸಮರ್ಥಸ್ಯ ಲಕ್ಷಣಸ್ಯ ಅಭಿಧಾನೇನ ಸ್ವರೂಪನಿರ್ಧಾರಣಾಯ,

---

1. ಹತ್ತೆಂಬ ಸಂಖ್ಯೆಯನ್ನು ಪೂರಣಮಾಡುವ ಎಂದರೆ ಹತ್ತನೆಯವನಾದ.

2. ಒಂಬತ್ತು ಜನರಲ್ಲಿ.

3. ಹತ್ತುಜನ ದಾರಿಹೋಕರು ನದಿಯನ್ನು ದಾಟಿದ ಬಳಿಕ ತಾವೆಲ್ಲರೂ ಈಚೆಯ ದಡಕ್ಕೆ ಬಂದೆವೋ ಇಲ್ಲವೋ ಎಂದು ನೋಡುವದಕ್ಕೆ ಹೊರಟು ಒಬ್ಬೊಬ್ಬನೂ ತನ್ನನ್ನು ಬಿಟ್ಟು ಮಿಕ್ಕವರನ್ನೇ ಎಣಿಸುತ್ತಾ ಬಂದದ್ದರಿಂದ ಹತ್ತನೆಯವನೊಬ್ಬನು ನದಿಯಲ್ಲಿ ಮುಳುಗಿಹೋಗಿರಬೇಕೆಂದು ಭಾವಿಸಿಕೊಂಡು ದುಃಖಪಡುತ್ತಿದ್ದರಂತೆ. ಆಗ ಅಲ್ಲಿಗೆ ಬಂದ ಒಬ್ಬ ವಿವೇಕಿಯು, 'ನೀನೇ ಹತ್ತನೆಯವನು' ಎಂದು ಅವರಲ್ಲಿ ಎಲ್ಲರಿಗೂ ತಿಳಿಸಿ ಅವರ ಮೂಢತನವನ್ನು ಕೊಲಗಿಸಿದನಂತೆ. ಶ್ರುತಿವಾಕ್ಯದಿಂದ ಆಗುವ ಬ್ರಹ್ಮಾತ್ಮತ್ವಪ್ರಾಪ್ತಿಯು ಇಂಥದ್ದೇ ಎಂದು ಭಾವ. ಮುಂ. ಭಾ. ೧-೧-೫ 'ಅಧಿಗಮ್ಯತೇ' ಎಂಬುದರ ವ್ಯಾಖ್ಯಾನವನ್ನು ನೋಡಿ.

ಅವಿಶೇಷೇಣ ಚ ಉಕ್ತವೇದನಸ್ಯ ಬ್ರಹ್ಮಣೋ ವಕ್ಷ್ಯಮಾಣಲಕ್ಷಣಸ್ಯ ವಿಶೇಷೇಣ ಪ್ರತ್ಯಗಾತ್ಮತಯಾ ಅನನ್ಯರೂಪೇಣ ವಿಜ್ಞೇಯತ್ವಾಯ, ಬ್ರಹ್ಮವಿದ್ಯಾಫಲಂ ಚ ಬ್ರಹ್ಮವಿದೋ ಯತ್ ಪರಬ್ರಹ್ಮಪ್ರಾಪ್ತಿಲಕ್ಷಣಮುಕ್ತಮ್, ಸ ಸರ್ವಾತ್ಮಭಾವಃ ಸರ್ವಸಂಸಾರಧರ್ಮಾತೀತಬ್ರಹ್ಮಸ್ವರೂಪತ್ವಮೇವ ನಾನ್ಯತ್ ಇತ್ಯೇತತ್ಪ್ರದರ್ಶನಾಯ ಚ ಏಷಾ ಋಗುದಾಹ್ರಿಯತೇ 'ತದೇಷಾಽಭ್ಯುಕ್ತಾ' ಇತಿ ॥

(ಭಾಷ್ಯಾರ್ಥ)

''ಬ್ರಹ್ಮವಿದಾಪ್ನೋತಿ ಪರಮ್'' (ಬ್ರಹ್ಮವಿದನು ಪರವನ್ನು ಪಡೆದುಕೊಳ್ಳುತ್ತಾನೆ) ಎಂಬ ವಾಕ್ಯವು (ಈ) ವಲ್ಲಿಯ[1] ಅರ್ಥಕ್ಕೆಲ್ಲ ಸೂತ್ರವಾಗಿರುತ್ತದೆ. 'ಬ್ರಹ್ಮವಿದನು ಪರವನ್ನು ಪಡೆದುಕೊಳ್ಳುತ್ತಾನೆ' ಎಂಬೀ ವಾಕ್ಯದಿಂದ ಅರಿತುಕೊಳ್ಳಬೇಕೆಂದು ಸೂತ್ರದಲ್ಲಿ ಹೇಳಿರುವ ಬ್ರಹ್ಮದ ಸ್ವರೂಪವು ಇಂಥದ್ದು ಎಂದು ಗೊತ್ತಾಗಿ ಹೇಳದೆ ಇರುವದರಿಂದ ಅದಕ್ಕೆ ಮತ್ತೆಲ್ಲದಕ್ಕಿಂತಲೂ ಬೇರೆಯಾಗಿರುವ ಗೊತ್ತಾದ ಸ್ವರೂಪವನ್ನು ತಿಳಿಸಿಕೊಡುವ ಲಕ್ಷಣವನ್ನು ಹೇಳಿ (ಅದರ) ಸ್ವರೂಪವನ್ನು ಗೊತ್ತುಪಡಿಸುವದಕ್ಕಾಗಿಯೂ, ಬ್ರಹ್ಮವನ್ನು ಅರಿತುಕೊಳ್ಳಬೇಕೆಂದು ಸಾಮಾನ್ಯವಾಗಿ ಹೇಳಿರುವ ಮುಂದೆ ಹೇಳುವ ಲಕ್ಷಣದ ಬ್ರಹ್ಮವನ್ನು ವಿಶೇಷವಾಗಿ ಎಂದರೆ ನಮ್ಮೊಳಗಿನ ಆತ್ಮನೇ (ನಮಗಿಂತ) ಬೇರೆಯಲ್ಲ ಎಂದು ಅರಿತುಕೊಳ್ಳಬೇಕೆಂದು (ತಿಳಿಸುವ) ದಕ್ಕಾಗಿಯೂ ಮತ್ತು ಬ್ರಹ್ಮವಿದ್ಯೆಯ ಫಲವು ಬ್ರಹ್ಮಜ್ಞಾನಿಗೆ ಆಗುವ ಪರ ಬ್ರಹ್ಮಪ್ರಾಪ್ತಿರೂಪವೆಂದು ಯಾವದನ್ನು ಹೇಳಲಾಯಿತೋ ಆ ಸರ್ವಾತ್ಮಭಾವವೆಂಬುದು ಯಾವ ಸಂಸಾರಧರ್ಮವೂ ಇಲ್ಲದ ಬ್ರಹ್ಮಸ್ವರೂಪವನ್ನು (ಪಡೆದುಕೊಳ್ಳುವದೇ ಹೊರತು) ಮತ್ತೇನೂ ಅಲ್ಲ ಎಂಬುದನ್ನು ತಿಳಿಸುವದಕ್ಕಾಗಿಯೂ 'ತದೇಷಾಭ್ಯುಕ್ತಾ' ಎಂಬ ಈ ಋಕ್ಕನ್ನು ಉದಾಹರಿಸಲಾಗುವದು[2] :-

ಬ್ರಹ್ಮದ ಲಕ್ಷಣ

(ಭಾಷ್ಯ)

೯೫. ತತ್ ತಸ್ಮಿನ್ನೇವ ಬ್ರಾಹ್ಮಣವಾಕ್ಯೋಕ್ತೇ ಅರ್ಥೇ ಏಷಾ ಋಕ್ ಅಭ್ಯುಕ್ತಾ

1. ಈ ವಲ್ಲಿಗೆ 'ಬ್ರಹ್ಮವಲ್ಲಿ', 'ಆನಂದವಲ್ಲಿ', 'ಬ್ರಹ್ಮಾನಂದವಲ್ಲಿ' ಎಂದು ಬೇರೆ ಬೇರೆಯ ಹೆಸರುಗಳಿವೆ ; ಭಾಷ್ಯಾನುಸಾರವಾಗಿ ನಾವು 'ಆನಂದವಲ್ಲಿ' ಎಂದೇ ಕರೆದಿರುತ್ತೇವೆ.

2. ಬ್ರಹ್ಮ ವಿದ್ ಆಪ್ನೋತಿ ಪರಮ್ - ಎಂಬ ನಾಲ್ಕು ಮಾತುಗಳಲ್ಲಿ ಬ್ರಹ್ಮ ಎಂದರೆ ಲಕ್ಷಣವಾಕ್ಯದಲ್ಲಿ ಹೇಳಿರುವಂತೆ ಸತ್ಯಜ್ಞಾನಾನಂತಸ್ವರೂಪವಾದದ್ದು ; ವೇದನ ಎಂದರೆ ತನ್ನ ಆತ್ಮನೇ ಎಂದು ಅರಿತುಕೊಳ್ಳುವದು ; ಪರಮ್ ಆಪ್ನೋತಿ ಎಂದರೆ ಸರ್ವಾತ್ಮವಾದ ಬ್ರಹ್ಮ ಸ್ವರೂಪನೇ ಆಗುವದು - ಎಂಬ ವಿವರವನ್ನು ಋಕ್ಕಿನಲ್ಲಿ ಕೊಟ್ಟಿದೆ ಎಂದು ಅಭಿಪ್ರಾಯ.

ಆಮ್ನಾತಾ । ''ಸತ್ಯಂ ಜ್ಞಾನಮನನ್ತಂ ಬ್ರಹ್ಮ'' ಇತಿ ಬ್ರಹ್ಮಣೋ ಲಕ್ಷಣಾರ್ಥಂ ವಾಕ್ಯಮ್ । ಸತ್ಯಾದೀನಿ ಹಿ ತ್ರೀಣಿ ವಿಶೇಷಣಾರ್ಥಾನಿ ಪದಾನಿ ವಿಶೇಷ್ಯಸ್ಯ ಬ್ರಹ್ಮಣಃ । ವಿಶೇಷ್ಯಂ ಬ್ರಹ್ಮ । ವಿವಕ್ಷಿತತ್ವಾದ್ ವೇದ್ಯತಯಾ । ವಿಶೇಷಣವಿಶೇಷ್ಯತ್ವಾದೇವ ಸತ್ಯಾದೀನಿ ವಿಕವಿಭಕ್ತ್ಯನ್ತಾನಿ ಪದಾನಿ ಸಮಾನಾಧಿಕರಣಾನಿ । ಸತ್ಯಾದಿಭಿಸ್ತ್ರಿಭಿರ್ವಿಶೇಷಣೈರ್ವಿಶೇಷ್ಯಮಾಣಂ ಬ್ರಹ್ಮ ವಿಶೇಷ್ಯಾನ್ತರೇಭ್ಯೋ ನಿರ್ಧಾರ್ಯತೇ । ಏವಂ ಹಿ ತಜ್ಜ್ಞಾತಂ ಭವತಿ ಯದನ್ಯೇಭ್ಯೋ ನಿರ್ಧಾರಿತಮ್ ಯಥಾ ಲೋಕೇ 'ನೀಲಂ ಮಹತ್ ಸುಗನ್ಧಿ ಉತ್ಪಲಮ್' ಇತಿ ॥

(ಭಾಷ್ಯಾರ್ಥ)

ಅಲ್ಲಿ ಎಂದರೆ ಅದೇ ಬ್ರಾಹ್ಮಣವಾಕ್ಯೋಕ್ತವಾದ ವಿಷಯದಲ್ಲಿ ಈ ಋಕ್ಕು ಹೇಳಲ್ಪಟ್ಟಿರುವದು ಎಂದರೆ ಪಠಿಸಲ್ಪಟ್ಟಿರುವದು. ''ಸತ್ಯಂ ಜ್ಞಾನ ಮನನ್ತಂ ಬ್ರಹ್ಮ'' ಎಂಬುದು ಬ್ರಹ್ಮದ ಲಕ್ಷಣಕ್ಕಾಗಿ ಕೊಟ್ಟಿರುವ ವಾಕ್ಯವು. ಏಕೆಂದರೆ ಸತ್ಯವೇ ಮುಂತಾದ ಮೂರು ಪದಗಳು ವಿಶೇಷ್ಯವಾದ ಬ್ರಹ್ಮದ ವಿಶೇಷಣವನ್ನು (ತಿಳಿಸುವ)ದಕ್ಕಾಗಿ (ಬಂದಿರುತ್ತವೆ). ಬ್ರಹ್ಮವು ವಿಶೇಷ್ಯವು, ಏಕೆಂದರೆ ಅದನ್ನೇ ಅರಿಯತಕ್ಕದ್ದೆಂದು ಹೇಳುವದರಲ್ಲಿ ಶ್ರುತಿಯ ತಾತ್ಪರ್ಯವಿರುತ್ತದೆ. (ಹೀಗೆ) ವಿಶೇಷಣವಿಶೇಷ್ಯಭಾವವಿರುವದರಿಂದಲೇ ಸತ್ಯವೇ ಮುಂತಾದ ಪದಗಳು ಒಂದೇ ವಿಭಕ್ತ್ಯಂತವಾಗಿದ್ದುಕೊಂಡು ಸಮಾನಾಧಿಕರಣವಾಗಿರುತ್ತವೆ.[1] ಸತ್ಯವೇ ಮುಂತಾದ ಮೂರುವಿಶೇಷಣಗಳಿಂದ ವಿಶೇಷಿಸಲ್ಪಡುವದರಿಂದ ಬ್ರಹ್ಮವನ್ನು ಬೇರೆಯ ವಿಶೇಷ್ಯಗಳಿಂದ (ಬೇರ್ಪಡಿಸಿ) ಗೊತ್ತುಪಡಿಸಿ (ದಂತೆ ಆಗಿ)ರುತ್ತದೆ. ಹೀಗೆಯೇ ಅಲ್ಲವೆ, ಯಾವದನ್ನು ಮಿಕ್ಕ (ವಿಶೇಷ್ಯಗಳಿಂದ ಬೇರ್ಪಡಿಸಿ) ನಿಶ್ಚಯಿಸಿದೆಯೋ ಅದರ ಜ್ಞಾನವುಂಟಾಗುವದು ?[2] ಉದಾಹರಣೆಗೆ ''ನೀಲವೂ ದೊಡ್ಡದೂ ಸುವಾಸನೆಯುಳ್ಳದ್ದೂ (ಆಗಿರುವದು) ಉತ್ಪಲವು'' ಎಂಬ ಲೌಕಿಕವಾಕ್ಯದಲ್ಲಿ (ಹೀಗೆ ವಸ್ತುಜ್ಞಾನವಾಗುತ್ತದೆ).

ಲಕ್ಷ್ಯಲಕ್ಷಣಭಾವದ ಸ್ವರೂಪ

(ಭಾಷ್ಯ)

೯೬. ನನು ವಿಶೇಷ್ಯಂ ವಿಶೇಷಣಾನ್ತರಂ ವ್ಯಭಿಚರದ್ ವಿಶೇಷ್ಯತೇ । ಯಥಾ

---

1. ಒಂದು ಪದಾರ್ಥವನ್ನು ಆಶ್ರಯಿಸಿ ಅದನ್ನೇ ಹೇಳುವದಕ್ಕೆ ಹೊರಟುವಾಗಿವೆ.

2. 'ತಜ್ಜ್ಞಾತಂ ಭವತಿ' ಎಂಬ ವಾ॥ ಕಾ॥ ಪಾಠದಲ್ಲಿ 'ಅದು ಜ್ಞಾತವಾಗುತ್ತದೆ, ಅರಿಯಲ್ಪಡುತ್ತದೆ' ಎಂದು ಕನ್ನಡಿಸಬೇಕಾಗುವದು.

ನೀಲಂ ರಕ್ತಂ ಚೋತ್ಪಲಮ್ ಇತಿ । ಯದಾ ಹಿ ಅನೇಕಾನಿ ದ್ರವ್ಯಾಣಿ ಏಕಜಾತೀಯಾನಿ ಅನೇಕವಿಶೇಷಣಯೋಗೀನಿ ಚ, ತದಾ ವಿಶೇಷಣಸ್ಯ ಅರ್ಥವತ್ತ್ವಮ್ । ನ ಹಿ (ತು ?) ಏಕಸ್ಮಿನ್ನೇವ ವಸ್ತುನಿ, ವಿಶೇಷಣಾನ್ತರಾಯೋಗಾತ್ । ಯಥಾ 'ಅಸಾವೇಕ ಆದಿತ್ಯಃ' ಇತಿ । ತಥಾ ಏಕಮೇವ ಬ್ರಹ್ಮ ನ ಬ್ರಹ್ಮಾನ್ತರಾಣಿ, ಯೇಭ್ಯೋ ವಿಶೇಷ್ಟೇತ ನೀಲೋತ್ಪಲವತ್ । ನ । ಲಕ್ಷಣಾರ್ಥತ್ವಾದ್ವಿಶೇಷಣಾನಾಮ್ । ನಾಯಂ ದೋಷಃ । ಕಸ್ಮಾತ್ ? ಯಸ್ಮಾತ್ ಲಕ್ಷಣಾರ್ಥಪ್ರಧಾನಾನಿ ವಿಶೇಷಣಾನಿ, ನ ವಿಶೇಷಣಪ್ರಧಾನಾನ್ಯೇವ । ಕಃ ಪುನರ್ಲಕ್ಷಣಲಕ್ಷ್ಯಯೋರ್ವಿಶೇಷಣವಿಶೇಷ್ಯಯೋರ್ವಾ ವಿಶೇಷಃ ಇತಿ ? ಉಚ್ಯತೇ । ಸಮಾನಜಾತೀಯೇಭ್ಯ ಏವ ನಿವರ್ತಕಾನಿ ವಿಶೇಷಣಾನಿ ವಿಶೇಷ್ಯಸ್ಯ । ಲಕ್ಷಣಂ ತು ಸರ್ವತ ಏವ । ಯಥಾ 'ಅವಕಾಶಪ್ರದಾತ್ರೇ ಆಕಾಶಮ್' ಇತಿ । ಲಕ್ಷಣಾರ್ಥಂ ಚ ವಾಕ್ಯಮ್ ಇತ್ಯವೋಚಾಮ ॥

(ಭಾಷ್ಯಾರ್ಥ)

(ಆಕ್ಷೇಪ :-) ವಿಶೇಷ್ಯವು ಇನ್ನೊಂದು ವಿಶೇಷಣವನ್ನೂ ಪಡೆಯುವದಕ್ಕೆ ಹೋಗುವಹಾಗಿದ್ದರೆ (ಅದಕ್ಕೆ) ವಿಶೇಷಣವನ್ನು ಕೊಡುತ್ತಾರೆ. ಉದಾಹರಣೆಗೆ ಉತ್ಪಲವು ನೀಲವೂ ಕೆಂಪೂ (ಆಗಿರುತ್ತದೆ) ; ಆದ್ದರಿಂದ (ಅದಕ್ಕೆ ವಿಶೇಷಣವನ್ನು ಕೊಡಬಹುದು). ಯಾವಾಗ ಒಂದೇ ಜಾತಿಗೆ ಸೇರಿದಂತೆ ಅನೇಕ ದ್ರವ್ಯಗಳು (ಇರುವವೋ), ಅನೇಕವಿಶೇಷಣಗಳ ಸಂಬಂಧವುಳ್ಳವುಗಳಾಗಿಯೂ ಇರುವವೋ ಆಗ ವಿಶೇಷಣ(ವನ್ನು ಕೊಟ್ಟಿದ್ದು) ಸಾರ್ಥಕವಾಗುತ್ತದೆ. ಆದರೆ ಒಂದೇ ವಸ್ತುವಿನಲ್ಲಿ (ಹೀಗೆ ವಿಶೇಷಣವನ್ನು ಕೊಡುವದು ಸಾರ್ಥಕವಾಗುವ)ದಿಲ್ಲ, ಏಕೆಂದರೆ ಅದಕ್ಕೆ ಮತ್ತೊಂದು ವಿಶೇಷಣದ ಸಂಬಂಧವಿರುವದಿಲ್ಲ. ಉದಾಹರಣೆಗೆ ಈ (ನಾವು ನೋಡುವ) ಸೂರ್ಯನು ಒಬ್ಬನೇ (ಆಗಿರುವ)ದರಿಂದ (ಅವನಿಗೆ ವಿಶೇಷಣವನ್ನು ಕೊಡುವದರಿಂದ ಪ್ರಯೋಜನವಿಲ್ಲ). ಹೀಗೆಯೇ ಬ್ರಹ್ಮವು ಒಂದೇ, ಬೇರೆಯ ಬ್ರಹ್ಮಗಳಿಲ್ಲ ; (ಹಾಗೆ) ಇದ್ದಿದ್ದರೆ (ಈ ಬ್ರಹ್ಮವನ್ನು) ನೀಲೋತ್ಪಲದಂತೆ ಅವುಗಳಿಂದ ವಿಂಗಡಿಸಿ ವಿಶೇಷಣದಿಂದ ತಿಳಿಸಬಹುದಾಗಿತ್ತು.

(ಪರಿಹಾರ :-) ಹಾಗಲ್ಲ. ಏಕೆಂದರೆ ಈ ವಿಶೇಷಣಗಳು ಲಕ್ಷಣವನ್ನು (ತಿಳಿಸುವದ)ಕ್ಕಾಗಿ ಬಂದಿರುತ್ತವೆ. (ಇದರ ವಿವರ :-) ಇದೇನೂ ತಪ್ಪಲ್ಲ ; ಏಕೆಂದರೆ (ಈ) ವಿಶೇಷಣಗಳಿಗೆ ಲಕ್ಷಣವೆಂಬ ಪ್ರಯೋಜನವು ಮುಖ್ಯವೇ ಹೊರತು (ಬರಿಯ) ವಿಶೇಷಣವನ್ನು ಹೇಳುವದೇ ಮುಖ್ಯವಲ್ಲ.

(ಪ್ರಶ್ನೆ :-) ಹಾಗಾದರೆ ಲಕ್ಷಣಲಕ್ಷ್ಯಗಳಿಗೂ ವಿಶೇಷಣವಿಶೇಷ್ಯಗಳಿಗೂ ಹೆಚ್ಚುಕಡಿಮೆಯೇನು ?

(ಉತ್ತರ :-) ಹೇಳುತ್ತೇವೆ (ಕೇಳಿ) : ವಿಶೇಷಣಗಳು ವಿಶೇಷ್ಯವನ್ನು ಸಮಾನಜಾತೀಯವಾದ (ಮಿಕ್ಕ ವಸ್ತುಗಳಿಂದ) ಮಾತ್ರವೇ ಬೇರ್ಪಡಿಸುವವು.[1] ಲಕ್ಷಣವಾದರೋ (ಮಿಕ್ಕ) ಎಲ್ಲಾ (ವಸ್ತು)ಗಳಿಂದಲೂ (ಬೇರ್ಪಡಿಸುವದು). ಉದಾಹರಣೆಗೆ 'ಅವಕಾಶವನ್ನು ಕೊಡುವದು ಆಕಾಶವು' (ಎಂಬುದು ಲಕ್ಷಣವನ್ನು ಹೇಳುವ ವಾಕ್ಯವು)[2]. (ಪ್ರಕೃತ)ವಾಕ್ಯವು ಲಕ್ಷಣ(ವನ್ನು ಹೇಳುವದ)ಕ್ಕಾಗಿ (ಬಂದಿದೆ) ಎಂದು (ನಾವು ಆಗಲೇ) ಹೇಳಿರುತ್ತೇವೆ.[3]

ಸತ್ಯವೇ ಮುಂತಾದ ಪ್ರತಿಯೊಂದೂ ಬ್ರಹ್ಮದ ಲಕ್ಷಣ

(ಭಾಷ್ಯ)

೯೭. ಸತ್ಯಾದಿಶಬ್ದಾಃ ನ ಪರಸ್ಪರಂ ಸಂಬಧ್ಯನ್ತೇ । ಪರಾರ್ಥತ್ವಾತ್ । ವಿಶೇಷ್ಯಾರ್ಥಾ ಹಿ ತೇ । ಅತಃ ಏಕೈಕೋ ವಿಶೇಷಣಶಬ್ದಃ ಪರಸ್ಪರನಿರಪೇಕ್ಷಃ ಬ್ರಹ್ಮಶಬ್ದೇನ ಸಂಬಧ್ಯತೇ ''ಸತ್ಯಂ ಬ್ರಹ್ಮ, ಜ್ಞಾನಂ ಬ್ರಹ್ಮ, ಅನನ್ತಂ ಬ್ರಹ್ಮ'' ಇತಿ ॥

(ಭಾಷ್ಯಾರ್ಥ)

ಸತ್ಯವೇ ಮುಂತಾದ ಶಬ್ದಗಳು ಒಂದಕ್ಕೊಂದಕ್ಕೆ ಸಂಬಂಧಪಟ್ಟಿರುವದಿಲ್ಲ. ಏಕೆಂದರೆ (ಅವು) ಮತ್ತೊಂದಕ್ಕಾಗಿ (ಬಂದಿರುತ್ತವೆ). ವಿಶೇಷ್ಯಕ್ಕಾಗಿಯಲ್ಲವೆ, ಆ (ಶಬ್ದ)ಗಳು (ಪ್ರಯೋಗವಾಗಿರುವದು) ? ಆದ್ದರಿಂದ (ಇವುಗಳಲ್ಲಿ) ಒಂದೊಂದು ಶಬ್ದವೂ ಒಂದೊಂದರ ಅಪೇಕ್ಷೆಯಿಲ್ಲದೆ ಬ್ರಹ್ಮಶಬ್ದದೊಡನೆ ಸಂಬಂಧವುಳ್ಳದ್ದಾಗಿರುತ್ತದೆ. (ಹೇಗೆಂದರೆ) 'ಸತ್ಯವಾದದ್ದು ಬ್ರಹ್ಮವು', ಜ್ಞಾನವಾದದ್ದು ಬ್ರಹ್ಮವು', 'ಅನಂತವಾದದ್ದು ಬ್ರಹ್ಮವು' - ಎಂದು (ನೇರಾಗಿ ಸಂಬಂಧವುಳ್ಳದ್ದಾಗಿರುತ್ತದೆ.)[4]

1. ಉದಾಹರಣೆಗೆ 'ನೀಲವಾಗಿರುವ ಉತ್ಪಲವು' ಎಂಬಲ್ಲಿ ನೀಲವೆಂಬ ವಿಶೇಷಣವು ಕೆಂಪಾಗಿರುವ ಉತ್ಪಲವಲ್ಲ ಎಂಬುದನ್ನು ತಿಳಿಸುತ್ತದೆ.

2. ಇಲ್ಲಿ ಅವಕಾಶವನ್ನು ಕೊಡುವದೆಂಬ ಧರ್ಮವು ಆಕಾಶವನ್ನು ಬಿಟ್ಟರೆ ಮಿಕ್ಕ ಯಾವ ಪದಾರ್ಥದಲ್ಲಿಯೂ ಇರುವದಿಲ್ಲ.

3. ಆದ್ದರಿಂದ 'ಸತ್ಯಜ್ಞಾನಾನಂತವಾದ ಬ್ರಹ್ಮವು' ಎಂಬಲ್ಲಿ ಸತ್ಯವಲ್ಲದ ಬ್ರಹ್ಮದಿಂದ ಬೇರ್ಪಡಿಸುವದಕ್ಕೆ ಬಂದಿಲ್ಲ ; ಸತ್ಯವಲ್ಲದ್ದು ಬ್ರಹ್ಮವಲ್ಲ ಎಂದೇ ತಿಳಿಸಿರುತ್ತದೆ.

4. ಆದ್ದರಿಂದ ಸತ್ಯ, ಜ್ಞಾನ, ಅನಂತ - ಎಂಬುದು ಒಂದೊಂದೂ ಬ್ರಹ್ಮದ ಅಸಾಧಾರಣಸ್ವರೂಪವು.

ಸತ್ಯವೆಂಬ ವಿಶೇಷಣದ ಅರ್ಥ

(ಭಾಷ್ಯ)

೯೮. 'ಸತ್ಯಮ್' ಇತಿ ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ನ ವ್ಯಭಿಚರತಿ ತತ್ ಸತ್ಯಮ್, ಯದ್ರೂಪೇಣ ನಿಶ್ಚಿತಂ ಯತ್ ತದ್ರೂಪಂ ವ್ಯಭಿಚರತ್ 'ಅನೃತಮ್' ಇತ್ಯುಚ್ಯತೇ । ಅತೋ ವಿಕಾರೋಽನೃತಮ್ । "ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್" (ಛಾಂ. ೬-೧-೪) ಏವಂ 'ಸದೇವ ಸತ್ಯಮ್' ಇತ್ಯವಧಾರಣಾತ್ । ಅತಃ ಸತ್ಯಂ ಬ್ರಹ್ಮ ಇತಿ ವಿಕಾರಾತ್ ನಿವರ್ತಯತಿ ॥

(ಭಾಷ್ಯಾರ್ಥ)

'ಸತ್ಯಮ್' ಎಂಬುದರ (ಅರ್ಥವೇನೆಂದರೆ :-) ಯಾವ ರೂಪದಿಂದ (ಇರುವದೆಂದು) ಯಾವದು ಗೊತ್ತಾಗಿದ್ದು ಆ ರೂಪವನ್ನು ಬಿಟ್ಟುಹೋಗದೆ ಇರುವದೋ, ಅದು ಸತ್ಯವು.[1] ಯಾವ ರೂಪದಿಂದ (ಕೂಡಿರುವದೆಂದು) ಯಾವದು ಗೊತ್ತಾಗಿದ್ದು ಆ ರೂಪವನ್ನು ಬಿಟ್ಟುಹೋಗುವದೋ, ಅದು ಅನೃತವು.

ಆದ್ದರಿಂದ ಕಾರ್ಯವಾದದ್ದು ಅನೃತವು.[2] ಏಕೆಂದರೆ (ಶ್ರುತಿಯಲ್ಲಿ) "ವಿಕಾರವು ಹೆಸರು (ಮಾತ್ರ), ಮಾತಿನ ಕಾರ್ಯವು ; ಮಣ್ಣು ಎಂಬುದೇ ಸತ್ಯವು" (ಛಾಂ. ೬-೧-೪), ಇದರಂತೆ 'ಸತ್ತೇ ಸತ್ಯವು'[3] ಎಂದು ಅವಧಾರಣೆ ಮಾಡಿರುತ್ತದೆ. ಆದ್ದರಿಂದ 'ಸತ್ಯವಾದ ಬ್ರಹ್ಮವು' ಎಂಬ (ವಾಕ್ಯವು) ಬ್ರಹ್ಮವನ್ನು ಕಾರ್ಯದಿಂದ ಬೇರೆ ಎಂದು ತಿಳಿಸುತ್ತದೆ.

ಜ್ಞಾನವೆಂಬ ವಿಶೇಷಣದ ಅರ್ಥ

(ಭಾಷ್ಯ)

೯೯. ಅತಃ ಕಾರಣತ್ವಂ ಪ್ರಾಪ್ತಂ ಬ್ರಹ್ಮಣಃ । ಕಾರಣಸ್ಯ ಚ ಕಾರಕತ್ವಮ್

---

1. ಇಂಥ ರೂಪದ್ದೆಂದು ನಿಶ್ಚಿತವಾದ ಬಳಿಕ ಆ ರೂಪವನ್ನು ಮಾರ್ಪಡಿಸಿಕೊಳ್ಳದೆ ಇರುವದು ಸತ್ಯವಸ್ತು. ಸತ್ಯವೆಂದರೆ ವ್ಯವಹಾರದಲ್ಲಿ ಮಾತ್ರ ಸತ್ಯವಾಗಿರುವದೆಂದು ತೋರುವದಲ್ಲ, ಎಂದೆಂದಿಗೂ ಸತ್ಯವೇ ಆಗಿರುವದು. ವ್ಯಾವಹಾರಿಕವಾದ ಅಪರಬ್ರಹ್ಮವನ್ನು ಭಾ. ಭಾ. ೪೪ ರಲ್ಲಿ ವರ್ಣಿಸಿದೆ ; ಆದರೆ ಇದು ಪರಮಾರ್ಥಸತ್ಯವು.

2. ಏಕೆಂದರೆ ಕಾರ್ಯರೂಪವು ಕಾರಣಕ್ಕಿಂತ ಬೇರೆಯಾಗಿ ನಿಜವಾಗಿರುವದಿಲ್ಲ.

3. ಛಾಂ. ೬-೪-೪ ; ೬-೮-೭ ಇವನ್ನು ನೋಡಿರಿ. 'ತತ್ ಸತ್ಯಮ್' ಎಂಬ ಶ್ರುತಿಯ ಅರ್ಥವನ್ನು ಇಲ್ಲಿ ಉದಾಹರಿಸಿರುತ್ತದೆ.

ವಸ್ತುತ್ವಾತ್ ಮೃದ್ವತ್ ಅಚಿದ್ರೂಪತಾ ಚ ವ್ಯಾಪ್ತಾ । ಅತಃ ಇದಮುಚ್ಯತೇ 'ಜ್ಞಾನಂ ಬ್ರಹ್ಮ' ಇತಿ । ಜ್ಞಾನಂ ಜ್ಞಪ್ತಿಃ ಅವಬೋಧಃ । ಭಾವಸಾಧನೋ ಜ್ಞಾನಶಬ್ದಃ ; ಬ್ರಹ್ಮವಿಶೇಷಣತ್ವಾತ್ ಸತ್ಯಾನನ್ತಾಭ್ಯಾಂ ಸಹ । ನ ಹಿ ಸತ್ಯತಾ ಅನನ್ತತಾ ಚ ಜ್ಞಾನಕರ್ತೃತ್ವೇ ಸತಿ ಉಪಪದ್ಯತೇ । ಜ್ಞಾನಕರ್ತೃತ್ವೇನ ಹಿ ವಿಕ್ರಿಯಮಾಣಂ ಕಥಂ ಸತ್ಯಂ ಭವೇತ್ ಅನನ್ತಂ ಚ ? ಯದ್ ಹಿ ನ ಕುತಶ್ಚಿತ್ ಪ್ರವಿಭಜ್ಯತೇ ತತ್ ಅನನ್ತಮ್ । ಜ್ಞಾನಕರ್ತೃತ್ವೇ ಚ ಜ್ಞೇಯ ಜ್ಞಾನಾಭ್ಯಾಂ ಪ್ರವಿಭಕ್ತಮ್ ಇತಿ ಅನನ್ತತಾ ನ ಸ್ಯಾತ್ । "ಯತ್ರ ..... ನಾನ್ಯದ್ ವಿಜಾನಾತಿ ಸ ಭೂಮಾ, ಅಥ ಯತ್ರ..... ಅನ್ಯದ್ ವಿಜಾನಾತಿ ತದಲ್ಪಮ್" (ಛಾಂ. ೭-೨೪-೧) ಇತಿ ಶ್ರುತ್ಯನ್ತರಾತ್ ॥

(ಭಾಷ್ಯಾರ್ಥ)

ಆದ್ದರಿಂದ ಬ್ರಹ್ಮವು ಕಾರಣವೆಂದಾಯಿತು ; ಕಾರಣವು ಕಾರಕವೆಂದೂ ವಸ್ತುವಾಗಿರುವದರಿಂದ ಮಣ್ಣಿನಂತೆ ಜಡರೂಪವೆಂದೂ ಆಯಿತು.[1] ಆದ್ದರಿಂದ ಈ 'ಜ್ಞಾನಂ ಬ್ರಹ್ಮ' ಎಂಬ (ವಾಕ್ಯ)ವನ್ನು ಹೇಳಿರುತ್ತದೆ. ಜ್ಞಾನವೆಂದರೆ ಜ್ಞಪ್ತಿ ಅರಿವು. ಜ್ಞಾನಶಬ್ದವು ಇಲ್ಲಿ ಭಾವಾರ್ಥದಲ್ಲಿ[2] (ಪ್ರಯುಕ್ತವಾಗಿರುತ್ತದೆ). ಏಕೆಂದರೆ ಸತ್ಯ, ಅನಂತ - ಎಂಬ ಎರಡರೊಡನೆಯೇ ಈ (ಶಬ್ದವನ್ನು) ಬ್ರಹ್ಮಕ್ಕೆ ವಿಶೇಷಣವಾಗಿ (ಪ್ರಯೋಗಿಸಿರುತ್ತದೆ). ಜ್ಞಾನಕ್ಕೆ ಕರ್ತೃ ಎಂದರೆ (ಬ್ರಹ್ಮವು) ಸತ್ಯವೆಂಬುದಾಗಲಿ ಅನಂತವೆಂಬುದಾಗಲಿ, ಹೊಂದುವದೇ ಇಲ್ಲ ; ಏಕೆಂದರೆ ಜ್ಞಾನಕ್ಕೆ ಕರ್ತೃವಾಗಿ ಮಾರ್ಪಡುತ್ತಿರುವದು ಹೇಗೆತಾನೆ ಸತ್ಯವೂ ಅನಂತವೂ ಆದೀತು ? ಯಾವದು ಮತ್ತೆ ಯಾವದರಿಂದಲೂ ವಿಂಗಡವಾಗದೆ ಇರುವದೋ ಅದೇ ಅಲ್ಲವೆ, ಅನಂತವೆಂಬುದು ? (ಬ್ರಹ್ಮವು) ಜ್ಞಾನ(ಕ್ರಿಯೆಗೆ) ಕರ್ತೃ ಎಂದಾದರೆ (ಅದು) ಜ್ಞೇಯ, ಜ್ಞಾನ - (ಈ) ಎರಡರಿಂದಲೂ ವಿಂಗಡವಾಗಿರುತ್ತದೆಯಾದ್ದರಿಂದ ಅನಂತವಾಗಲಾರದು. "ಎಲ್ಲಿ.....ಮತ್ತೊಂದನ್ನು ಅರಿಯುವದಿಲ್ಲವೋ ಅದೇ ಭೂಮವು ;[3] ಇನ್ನು ಎಲ್ಲಿ.....ಮತ್ತೊಂದನ್ನು ಅರಿಯು

---

1. ಕಾರಣವು ಕಾರ್ಯವನ್ನುಂಟುಮಾಡುವ ಕ್ರಿಯೆಗೆ ಆಶ್ರಯವೋ, ಕರಣವೋ, ಅಪಾದಾನವೋ, ಆಗಿರುತ್ತದೆ. ಮತ್ತು ಕಾರ್ಯರೂಪದಿಂದ ಅದು ಮಾರ್ಪಡುವದಾದರೆ ಜಡವೂ ಆಗಿರುತ್ತದೆ.

2. ಜ್ಞಾನ ಎಂದರೆ ಜ್ಞಾನವೆಂಬ ಕ್ರಿಯೆ, ಅದರ ಕರ್ತೃ, ಕರ್ಮ, ಅಥವಾ ಕರಣ- ಎಂಬ ಮಾಲ್ಕು ಅರ್ಥಗಳೂ ಆಗಬಹುದು. ಇಲ್ಲಿ ಫಲರೂಪವಾದ ಅರಿವು ಎಂಬುದೇ ಅರ್ಥ.

3. ಅನಂತವಾದದ್ದು, ಬ್ರಹ್ಮವು.

ತ್ತಾನೋ ಅದು ಅಲ್ಪವು''[1] (ಛಾಂ. ೭-೨೪-೧) ಎಂಬ ಬೇರೆ ಒಂದು ಶ್ರುತಿಯು ಇದಕ್ಕೆ ಪ್ರಮಾಣವು.

(ಭಾಷ್ಯ)

೧೦೦. ನ 'ಅನ್ಯತ್' ವಿಜಾನಾತಿ ಇತಿ ವಿಶೇಷಪ್ರತಿಷೇಧಾತ್ ಆತ್ಮಾನಂ ವಿಜಾನಾತಿ ಇತಿ ಚೇತ್ । ನ । ಭೂಮಲಕ್ಷಣವಿಧಿಪರತ್ವಾತ್ ವಾಕ್ಯಸ್ಯ । ''ಯತ್ರ ನಾನ್ಯತ್ ಪಶ್ಯತಿ'' (ಛಾಂ. ೭-೨೪-೧) ಇತ್ಯಾದಿ ಭೂಮ್ನೋ ಲಕ್ಷಣ ವಿಧಿಪರಂ ವಾಕ್ಯಮ್ । ಯಥಾ ಪ್ರಸಿದ್ಧಮೇವ ಅನ್ಯೋಽನ್ಯತ್ ಪಶ್ಯತಿ ಇತ್ಯೇತದುಪಾದಾಯ ಯತ್ರ ತನ್ನಾಸ್ತಿ ಸ ಭೂಮಾ ಇತಿ ಭೂಮಸ್ವರೂಪಂ ತತ್ರ ಜ್ಞಾಪ್ಯತೇ । ಅನ್ಯಗ್ರಹಣಸ್ಯ ಪ್ರಾಪ್ತಪ್ರತಿಷೇಧಾರ್ಥತ್ವಾತ್ ನ ಸ್ವಾತ್ಮನಿ ಕ್ರಿಯಾಸ್ತಿತ್ವಪರಂ ವಾಕ್ಯಮ್ । ಸ್ವಾತ್ಮನಿ ಚ ಭೇದಾಭಾವಾತ್ ವಿಜ್ಞಾನಾನುಪಪತ್ತಿಃ । ಆತ್ಮನಶ್ಚ ವಿಜ್ಞೇಯತ್ವೇ ಜ್ಞಾತೃಭಾವಪ್ರಸಙ್ಗಃ । ಜ್ಞೇಯತ್ವೇ ನೈವ ವಿನಿಯುಕ್ತತ್ವಾತ್ । ಏಕ ಏವಾತ್ಮಾ ಜ್ಞೇಯತ್ವೇನ ಜ್ಞಾತೃತ್ವೇನ ಚ ಉಭಯಥಾ ಭವತಿ ಇತಿ ಚೇತ್ । ನ ಯುಗಪತ್, ಅನಂಶತ್ವಾತ್ । ನ ಹಿ ನಿರವಯವಸ್ಯ ಯುಗಪತ್ ಜ್ಞೇಯಜ್ಞಾತೃತ್ವೋಪಪತ್ತಿಃ । ಆತ್ಮನಶ್ಚ ಘಟಾದಿವದ್ ವಿಜ್ಞೇಯತ್ವೇ ಜ್ಞಾನೋಪದೇಶಾನರ್ಥಕ್ಯಮ್ । ನ ಹಿ ಘಟಾದಿವತ್ ಪ್ರಸಿದ್ಧಸ್ಯ ಜ್ಞಾನೋಪದೇಶೋಽರ್ಥವಾನ್ ॥

(ಭಾಷ್ಯಾರ್ಥ)

(ಆಕ್ಷೇಪ :-) 'ಮತ್ತೊಂದನ್ನು' ಅರಿಯುವದಿಲ್ಲವೋ-ಎಂದು ಗೊತ್ತಾಗಿರುವ (ಮಿಕ್ಕದ್ದನ್ನು) ಅಲ್ಲಗಳೆಯುವದರಿಂದ ತನ್ನನ್ನು ಅರಿತುಕೊಳ್ಳುತ್ತಾನೆ (ಎಂದರ್ಥವನ್ನು ಮಾಡಬೇಕಲ್ಲವೆ) ?

(ಪರಿಹಾರ :-) ಹಾಗಲ್ಲ. ಏಕೆಂದರೆ (ಈ) ವಾಕ್ಯವು ಭೂಮದ ಲಕ್ಷಣವನ್ನು ತಿಳಿಸುವದರಲ್ಲಿ ತಾತ್ಪರ್ಯವುಳ್ಳದ್ದಾಗಿರುತ್ತದೆ. ''ಎಲ್ಲಿ ಮತ್ತೊಂದನ್ನು ಕಾಣುವದಿಲ್ಲವೋ'' (ಛಾಂ. ೭-೨೪-೧) ಎಂದುಮುಂತಾಗಿರುವ ವಾಕ್ಯವು ಭೂಮದ ಲಕ್ಷಣವನ್ನು (ತಿಳಿಸುವದರಲ್ಲಿ) ತಾತ್ಪರ್ಯವುಳ್ಳದ್ದು. ಒಬ್ಬನು ಮತ್ತೊಂದನ್ನು ಕಾಣುತ್ತಾನೆ - ಎಂದು (ಲೋಕದಲ್ಲಿ) ಪ್ರಸಿದ್ಧವಾಗಿರುವದನ್ನೇ ಇಟ್ಟುಕೊಂಡು ಎಲ್ಲಿ ಅದು ಇಲ್ಲವೋ ಅದು ಭೂಮವು ಎಂದು ಭೂಮದ ಸ್ವರೂಪವನ್ನು ಆ (ವಾಕ್ಯದಲ್ಲಿ) ತಿಳಿಸಲಾಗಿದೆ. ಮತ್ತೊಂದು ಎಂಬ (ಮಾತನ್ನು) ಪ್ರಯೋಗಿಸಿರು

1. ಅಳತೆಯುಳ್ಳದ್ದು, ನಾಶವಾಗುವದು.

ವದು (ಲೋಕದಲ್ಲಿ) ಗೊತ್ತಿರುವದನ್ನೇ ನಿಷೇಧಮಾಡುವದಕ್ಕೋಸ್ಕರವಾಗಿರುವದರಿಂದ (ಈ) ವಾಕ್ಯಕ್ಕೆ ತನ್ನ ಆತ್ಮನಲ್ಲಿ (ಅರಿಯುವದೆಂಬ) ಕ್ರಿಯೆಯುಂಟು - ಎಂಬುದನ್ನು (ಹೇಳುವ)ದರಲ್ಲಿ ತಾತ್ಪರ್ಯವಿರುವದಿಲ್ಲ.[1] ಇದಲ್ಲದೆ ತನ್ನ ಆತ್ಮನಲ್ಲಿ ಭೇದವು ಇಲ್ಲದಿರುವದರಿಂದಲೂ (ತನ್ನನ್ನು ತಾನು) ಅರಿಯುವದೆಂಬುದು ಹೊಂದುವದಿಲ್ಲ. ಆತ್ಮನು ಅರಿಯಲ್ಪಡುವನಾವರೆ ಅರಿಯುವಾತನೇ ಇಲ್ಲವಾಗುವದು ; ಏಕೆಂದರೆ (ಆತ್ಮನು) ಅರಿಯಲ್ಪಡುವವನಾಗಿ ವಿನಿಯೋಗವಾಗಿಬಿಟ್ಟಿರುತ್ತಾನೆ.

(ಆಕ್ಷೇಪ :-) ಒಬ್ಬನೇ ಆತ್ಮನು ಜ್ಞೇಯನಾಗಿಯೂ ಜ್ಞಾತೃವಾಗಿಯೂ ಎರಡು (ರೂಪ)ದಿಂದಲೂ ಇರಬಹುದಲ್ಲವೆ ?[2]

(ಪರಿಹಾರ :-) (ಹಾಗೆ) ಒಂದೇ ಕಾಲಕ್ಕೆ ಆಗಲಾರದು ; ಏಕೆಂದರೆ (ಆತ್ಮನಲ್ಲಿ) ಯಾವ ಅವಯವಗಳೂ ಇರುವದಿಲ್ಲ. ನಿರವಯವನಾದ (ಒಬ್ಬನೇ ಆತ್ಮನಿಗೆ) ಒಂದೇ ಕಾಲದಲ್ಲಿ ಜ್ಞೇಯತ್ವವೂ ಜ್ಞಾತೃತ್ವವೂ ಇರಲೇ ಆರದು. ಮತ್ತು ಆತ್ಮನು ಗಡಿಗೆಯೇ ಮುಂತಾದವುಗಳಂತೆ ಜ್ಞೇಯವಾಗಿದ್ದರೆ (ಶ್ರುತಿಯಲ್ಲಿ) ಜ್ಞಾನವನ್ನು ಉಪದೇಶಿಸಿರುವದು ವ್ಯರ್ಥವಾಗುತ್ತದೆ. ಏಕೆಂದರೆ ಗಡಿಗೆಯೇ ಮುಂತಾದವುಗಳಂತೆ ಪ್ರಸಿದ್ಧವಾಗಿರುವದರ ವಿಷಯದಲ್ಲಿ ಜ್ಞಾನೋಪದೇಶವು ಸಪ್ರಯೋಜನವಾಗಿರುವದಿಲ್ಲ,[3] ಅಲ್ಲವೆ ?

(ಭಾಷ್ಯ)

೧೦೧. ತಸ್ಮಾತ್ ಜ್ಞಾತೃತ್ವೇ ಸತಿ ಆನನ್ತ್ಯಾನುಪಪತ್ತಿಃ । ಸನ್ಮಾತ್ರತ್ವಂ ಚ ಅನುಪಪನ್ನಂ ಜ್ಞಾನಕರ್ತೃತ್ವಾದಿವಿಶೇಷವತ್ತ್ವೇ ಸತಿ । ಸನ್ಮಾತ್ರತ್ವಂ ಚ ಸತ್ಯತ್ವಮ್ ''ತತ್ ಸತ್ಯಮ್'' (ಛಾಂ. ೬-೮-೭) ಇತಿ ಶ್ರುತ್ಯನ್ತರಾತ್ । ತಸ್ಮಾತ್ ಸತ್ಯಾನನ್ತಶಬ್ದಾಭ್ಯಾಂ ಸಹ ವಿಶೇಷಣತ್ವೇನ ಜ್ಞಾನಶಬ್ದಸ್ಯ ಪ್ರಯೋಗಾತ್ ಭಾವಸಾಧನೋ ಜ್ಞಾನಶಬ್ದಃ । ''ಜ್ಞಾನಂ ಬ್ರಹ್ಮ'' ಇತಿ ಕರ್ತೃತ್ವಾದಿಕಾರಕನಿವೃತ್ತ್ಯರ್ಥಂ ಮೃದಾದಿವದಚಿದ್ರೂಪತಾನಿವೃತ್ತ್ಯರ್ಥಂ ಚ ಪ್ರಯುಜ್ಯತೇ ॥

---

1. ಏಕೆಂದರೆ ಒಂದು ವಾಕ್ಯಕ್ಕೆ ಎರಡು ತಾತ್ಪರ್ಯವಿರುವದಿಲ್ಲ.

2 ಐ. ಒಂದನೆಯ ಅಧ್ಯಾಯದ ಉಪಸಂಹಾರವನ್ನು ನೋಡಿ. ಇದು ಮೀಮಾಂಸಕರ ಪಕ್ಷವು.

3. ಪ್ರತ್ಯಕ್ಷಾದಿಗಳಿಂದ ತಿಳಿಯುವ ಜ್ಞೇಯವಾಗಿದ್ದರೆ ಎಂದರ್ಥ. ಅಥವಾ ಜ್ಞಾತೃವಿಗೆ ಉಪದೇಶವಿರಬಹುದು ; ಜ್ಞೇಯಕ್ಕೆ ವ್ಯರ್ಥ. ಜ್ಞೇಯನಾದ ಆತ್ಮನಿಗೆ ಉಪದೇಶವೇಕೆ ? - ಎಂದಾದರೂ ಅಭಿಪ್ರಾಯವಿರಬಹುದು.

(ಭಾಷ್ಯಾರ್ಥ)

ಆದ್ದರಿಂದ (ಬ್ರಹ್ಮವು) ಜ್ಞಾತೃವೆಂದಾದರೆ (ಅದು) ಅನಂತವೆಂಬುದು ಹೊಂದುವದಿಲ್ಲ. ಮತ್ತು ಜ್ಞಾನಕರ್ತೃತ್ವವೇ ಮುಂತಾದ ವಿಶೇಷಗಳುಳ್ಳದ್ದಾದರೆ (ಅದು) ಬರಿಯ ಸತ್ತೇ ಎಂಬುದೂ ಹೊಂದುವದಿಲ್ಲ. ಸತ್ಯವೆಂದರೆ ಬರಿಯ ಸತ್ತಾಗಿರುವದೇ ; ''ಅದು ಸತ್ಯವು'' (ಛಾಂ. ೬-೮-೭) ಎಂಬ ಬೇರೊಂದು ಶ್ರುತಿಯು (ಇದಕ್ಕೆ ಪ್ರಮಾಣವಾಗಿರುತ್ತದೆ). ಆದ್ದರಿಂದ ಸತ್ಯ, ಅನಂತ - ಎಂಬೀ ಎರಡು ಶಬ್ದಗಳೊಡನೆ (ಬ್ರಹ್ಮಕ್ಕೆ) ವಿಶೇಷಣವಾಗಿ ಜ್ಞಾನಶಬ್ದವನ್ನು ಪ್ರಯೋಗಮಾಡಿರುವದರಿಂದ ಜ್ಞಾನಶಬ್ದವು ಭಾವಾರ್ಥದಲ್ಲಿ (ಪ್ರತ್ಯಯವನ್ನು ಪಡೆದು) ಹುಟ್ಟಿದ್ದಾಗಿದೆ. ಕರ್ತೃತ್ವವೇ ಮುಂತಾದ ಕಾರಕಗಳಲ್ಲವೆಂದು ಹೇಳುವದಕ್ಕೂ ಮಣ್ಣು ಮುಂತಾದವುಗಳಂತೆ ಜಡರೂಪವಲ್ಲವೆನ್ನುವದಕ್ಕೂ 'ಜ್ಞಾನವು ಬ್ರಹ್ಮವು' ಎಂದು (ಸಮಾನಾಧಿಕರಣವಾಗಿ) ಪ್ರಯೋಗವನ್ನು ಮಾಡಿರುತ್ತದೆ.

ಅನಂತವೆಂಬ ವಿಶೇಷಣದ ಅರ್ಥ

(ಭಾಷ್ಯ)

೧೦೨. 'ಜ್ಞಾನಂ ಬ್ರಹ್ಮ' ಇತಿ ವಚನಾತ್ ಪ್ರಾಪ್ತಮ್ ಅನ್ತವತ್ತ್ವಮ್, ಲೌಕಿಕಸ್ಯ ಜ್ಞಾನಸ್ಯ ಅನ್ತವತ್ತ್ವದರ್ಶನಾತ್ । ಅತಃ ತನ್ನಿವೃತ್ತ್ಯರ್ಥಮಾಹ - 'ಅನನ್ತಮ್' ಇತಿ ॥

(ಭಾಷ್ಯಾರ್ಥ)

'ಜ್ಞಾನವು ಬ್ರಹ್ಮವು' ಎಂದು ಹೇಳಿದ್ದರಿಂದ (ಬ್ರಹ್ಮವು) ಅಂತವುಳ್ಳದ್ದೆಂದು ಆಯಿತು ; ಏಕೆಂದರೆ ಲೌಕಿಕಜ್ಞಾನಕ್ಕೆ ಅಂತರವಿರುವದೆಂದು ಕಂಡುಬರುತ್ತದೆ.[1] ಆದ್ದರಿಂದ ಅದನ್ನು ಪರಿಹರಿಸುವದಕ್ಕಾಗಿ 'ಅನಂತವು' ಎಂಬ (ವಿಶೇಷಣವನ್ನು) ಹೇಳಿರುತ್ತದೆ.

ಬ್ರಹ್ಮವು ಶೂನ್ಯವಲ್ಲ

(ಭಾಷ್ಯ)

೧೦೩. ಸತ್ಯಾದೀನಾಮ್ ಅನೃತಾದಿಧರ್ಮನಿವೃತ್ತಿಪರತ್ವಾತ್, ವಿಶೇಷ್ಯಸ್ಯ ಬ್ರಹ್ಮಣಃ ಉತ್ಪಲಾದಿವತ್ ಅಪ್ರಸಿದ್ಧತ್ವಾತ್.....

1. ಜ್ಞಾನವು ಒಂದು ಕಾಲದಲ್ಲಿ ಹುಟ್ಟಿ ಆಮೇಲೆ ನಾಶವಾಗುವದೆಂಬುದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಬ್ರಹ್ಮವು ಜ್ಞಾನವಾದರೆ ಅನಿತ್ಯವೆಂದಾಯಿತು.

"ಮೃಗತೃಷ್ಣಾಂಭಸಿ ಸ್ನಾತಃ ಖಿಪುಷ್ಪಕೃತಶೇಖರಃ ।
ಏಷ ವನ್ಧ್ಯಾಸುತೋ ಯಾತಿ ಶಶಶೃಙ್ಗಧನುರ್ಧರಃ ।।"[1]

- ಇತಿವತ್ ಶೂನ್ಯಾರ್ಥತೈವ ಪ್ರಾಪ್ತಾ ಸತ್ಯಾದಿವಾಕ್ಯಸ್ಯ ಇತಿ ಚೇತ್ । ನ । ಲಕ್ಷಣಾರ್ಥತ್ವಾತ್ । ವಿಶೇಷಣತ್ವೇಽಪಿ ಸತ್ಯಾದೀನಾಂ ಲಕ್ಷಣಾರ್ಥಪ್ರಾಧಾನ್ಯಮ್ ಇತ್ಯವೋಚಾಮ । ಶೂನ್ಯೇ ಹಿ ಲಕ್ಷ್ಯೇ ಅನರ್ಥಕಂ ಲಕ್ಷಣವಚನಮ್ । ಅತಃ[2] ಲಕ್ಷಣಾರ್ಥತ್ವಾತ್ ಮನ್ಯಾಮಹೇ ನ ಶೂನ್ಯಾರ್ಥತಾ ಇತಿ ।।

(ಭಾಷ್ಯಾರ್ಥ)

(ಶಂಕೆ :-) ಸತ್ಯವೇ ಮುಂತಾದ (ಶಬ್ದಗಳಿಗೆ) ಅನೃತವೇ ಮುಂತಾದ ಧರ್ಮಗಳನ್ನು ಅಲ್ಲಗಳೆಯುವದರಲ್ಲಿಯೇ ತಾತ್ಪರ್ಯವಿರುವದರಿಂದಲೂ ವಿಶೇಷ್ಯವಾದ ಬ್ರಹ್ಮವು ಉತ್ಪಲವೇ ಮುಂತಾದವುಗಳಂತೆ ಪ್ರಸಿದ್ಧವಲ್ಲದೆ ಇರುವದರಿಂದಲೂ "ಬಿಸಿಲುಕುದುರೆಯ ನೀರಿನಲ್ಲಿ ಸ್ನಾನಮಾಡಿಕೊಂಡು ಆಕಾಶದ ಹೂಗಳನ್ನು ಜುಟ್ಟಿನಲ್ಲಿ ಮುಡಿದುಕೊಂಡು, ಇಗೊ, ಈ ಬಂಜೆಯ ಮಗನು ಮೊಲದ ಕೊಂಬಿನ ಬಿಲ್ಲನ್ನು ಹಿಡಿದುಕೊಂಡು ಹೋಗುತ್ತಿದಾನೆ" ಎಂಬ (ವಾಕ್ಯಕ್ಕಿರುವ)ಂತೆ ಈ 'ಸತ್ಯ' ಮುಂತಾದ ವಾಕ್ಯಕ್ಕೆ ಶೂನ್ಯವೇ ಅರ್ಥವೆಂದಾಯಿತಲ್ಲ ![3]

(ಪರಿಹಾರ :-) ಹಾಗಲ್ಲ. ಏಕೆಂದರೆ (ಇಲ್ಲಿ) ಲಕ್ಷಣವೇ ಪ್ರಯೋಜನವಾಗಿರುತ್ತದೆ. ಸತ್ಯವೇ ಮುಂತಾದ ಶಬ್ದಗಳು ವಿಶೇಷಣಗಳೇ ಆಗಿರುತ್ತವೆಯಾದರೂ ಅವಕ್ಕೆ ಲಕ್ಷಣವೆಂಬ ಪ್ರಯೋಜನವೇ ಮುಖ್ಯವಾಗಿರುತ್ತದೆ ಎಂದು (ಹಿಂದೆ)[4] ಹೇಳಿರುತ್ತೇವೆ. ಲಕ್ಷ್ಯವಾದದ್ದು ಶೂನ್ಯವಾಗಿದ್ದರೆ ಲಕ್ಷಣವಾಕ್ಯವು ವ್ಯರ್ಥವಾಗುತ್ತಿತ್ತು.[5] ಆದ್ದ

---

1. ಈ ಶ್ಲೋಕವು ಎಲ್ಲಿಯದೆಂಬುದು ತಿಳಿಯಲಿಲ್ಲ.

2. 'ಅತಃ' ಎಂಬ ಮಾತು ಆ।। ಪಾಠದಲ್ಲಿಲ್ಲ ; ಕಾ।। ವಾ।। ಪಾಠಗಳಲ್ಲಿದೆ.

3. ಪ್ರತಿಯೊಂದು ಶಬ್ದವೂ ಒಂದರ ಅಭಾವವನ್ನೇ ಹೇಳುತ್ತದೆ - ಎಂದು ಬೌದ್ಧರು ಹೇಳುತ್ತಾರೆ. ಇದಕ್ಕೆ ಅಪೋಹವಾದವೆಂದು ಹೆಸರು. ಸತ್ಯವೆಂದರೆ ಅನೃತದ ಅಭಾವ ; ಜ್ಞಾನವೆಂದರೆ ಅಜ್ಞಾನದ ಅಭಾವ ; ಅನಂತವೆಂದರೆ ಅಂತವುಳ್ಳದ್ದರ ಅಭಾವ. ಹೀಗೆ ಒಂದೊಂದು ವಿಶೇಷಣವೂ ಶೂನ್ಯವನ್ನೇ ಹೇಳುತ್ತದೆ. ಬ್ರಹ್ಮಶಬ್ದವು ಯಾವ ಪದಾರ್ಥವನ್ನೂ ಹೇಳುವದೇ ಇಲ್ಲ ; ಏಕೆಂದರೆ ಲೋಕದಲ್ಲಿ ಬ್ರಹ್ಮವೆಂಬ ವಸ್ತುವೇ ಇಲ್ಲ. ಆದ್ದರಿಂದ ಯಾವ ವಸ್ತುವನ್ನೂ ಹೇಳಿದಂತೆ ಆಗಲಿಲ್ಲವಲ್ಲ ! - ಎಂದು ಶಂಕೆ.

4. ೯೬ ನೆಯ ಭಾ. ಭಾ. ದಲ್ಲಿ.

5. ಲಕ್ಷಣವು ಏತರದ್ದು ? - ಎಂಬ ಆಶಂಕೆ ಇದ್ದೇ ಇರುವದರಿಂದ ಇಲ್ಲಿರುವದು ಲಕ್ಷಣವಾಕ್ಯವಾಗಿರುವದರಿಂದಲೇ ಲಕ್ಷ್ಯವು ಇರಬೇಕೆಂದು ವಿರ್ಪಡುತ್ತದೆ ಎಂದು ಭಾವ. ಶೂನ್ಯವಾದ ವಿಶೇಷ್ಯಕ್ಕೆ ಶೂನ್ಯವಿಶೇಷಣವು ಸೇರಿ ಲಕ್ಷಣವಾಕ್ಯವಾಗಲಾರದು.

ರಿಂದ ಲಕ್ಷಣವೇ (ಇಲ್ಲಿ) ಪ್ರಯೋಜನವಾಗಿರುವದರಿಂದ (ವಾಕ್ಯಕ್ಕೆ) ಶೂನ್ಯವೇ ಅರ್ಥವೆಂಬುದು (ಸರಿ)ಯಲ್ಲ ಎಂದು ನಮ್ಮ ಅಭಿಪ್ರಾಯವು.

(ಭಾಷ್ಯ)

೧೦೪. ವಿಶೇಷಣಾರ್ಥತ್ವೇಽಪಿ ಚ ಸತ್ಯಾದೀನಾಂ ಸ್ವಾರ್ಥಾಪರಿತ್ಯಾಗ ಏವ । ಶೂನ್ಯಾರ್ಥತ್ವೇ ಹಿ ಸತ್ಯಾದಿಶಬ್ದಾನಾಂ ವಿಶೇಷ್ಯನಿಯನ್ತೃತ್ವಾನುಪಪತ್ತಿಃ । ಸತ್ಯಾದ್ಯರ್ಥೈರರ್ಥವತ್ತ್ವೇ ತು ತದ್ವಿಪರೀತಧರ್ಮವದ್ಭ್ಯೋ ವಿಶೇಷ್ಯೇಭ್ಯೋ ಬ್ರಹ್ಮಣೋ ವಿಶೇಷ್ಯಸ್ಯ ನಿಯನ್ತೃತ್ವಮ್ ಉಪಪದ್ಯತೇ । ಬ್ರಹ್ಮಶಬ್ದೋಽಪಿ ಸ್ವಾರ್ಥೇನ ಅರ್ಥವಾನೇವ । ತತ್ರ ಅನನ್ತಶಬ್ದೋಽನ್ತವತ್ತ್ವಪ್ರತಿಷೇಧದ್ವಾರೇಣ ವಿಶೇಷಣಮ್ । ಸತ್ಯಜ್ಞಾನಶಬ್ದೌ ತು ಸ್ವಾರ್ಥಸಮರ್ಪಣೇನೈವ ವಿಶೇಷಣೇ ಭವತಃ ॥

(ಭಾಷ್ಯಾರ್ಥ)

ಸತ್ಯವೇ ಮುಂತಾದ (ಶಬ್ದಗಳು) ವಿಶೇಷಣವೆಂಬ ಪ್ರಯೋಜನಕ್ಕಾಗಿ (ಪ್ರಯೋಗಿಸಲ್ಪಟ್ಟಿವೆ) ಎಂಬ ಪಕ್ಷದಲ್ಲಿಯೂ (ಅವುಗಳು) ತಮ್ಮ ಅರ್ಥವನ್ನು ಬಿಡುವಹಾಗೇ ಇಲ್ಲ.[1] ಏಕೆಂದರೆ ಸತ್ಯವೇ ಮುಂತಾದ ಶಬ್ದಗಳಿಗೆ ಶೂನ್ಯವೇ ಅರ್ಥವಾದರೆ ಅವು ವಿಶೇಷ್ಯವನ್ನು ಗೊತ್ತುಪಡಿಸಲೇ ಆರವು. ಆದರೆ (ಅವಕ್ಕೆ) ಸತ್ಯವೇ ಮುಂತಾದ ಅರ್ಥಗಳು ಇವೆ - ಎಂಬ ಪಕ್ಷದಲ್ಲಿಯೋ ಎಂದರೆ ಆ (ಅರ್ಥಗಳಿಗೆ) ವಿರುದ್ಧವಾದ ಧರ್ಮಗಳುಳ್ಳ ವಿಶೇಷ್ಯಗಳಿಂದ ಬ್ರಹ್ಮವೆಂಬ ವಿಶೇಷ್ಯವನ್ನು (ಬೇರ್ಪಡಿಸಿ) ಗೊತ್ತುಪಡಿಸುವದೆಂಬುದು ಹೊಂದುತ್ತದೆ.[2] ಬ್ರಹ್ಮಶಬ್ದಕ್ಕೂ ತನ್ನ ಅರ್ಥವಿರುವದರಿಂದ (ಅದೂ) ಅರ್ಥವಂತ(ಶಬ್ದವಾಗಿ)ಯೇ ಇರುತ್ತದೆ.[3] ಈ (ವಿಶೇಷಣಗಳೊಳಗೆ) ಅನಂತ ಎಂಬ ಮಾತು ಅಂತವುಳ್ಳದ್ದಾಗಿರುವಿಕೆ (ಎಂಬ ಧರ್ಮವನ್ನು) ಅಲ್ಲಗಳೆಯುವ ಮೂಲಕವಾಗಿ (ಬ್ರಹ್ಮಕ್ಕೆ) ವಿಶೇಷಣವಾಗಿರುತ್ತದೆ.

1. ವಿಶೇಷಣವೆಂದರೆ ತನ್ನ ಅರ್ಥಕ್ಕೆ ವಿರುದ್ಧವಾದ ಅರ್ಥವನ್ನು ತೊಲಗಿಸುವದೆ ; ಹೀಗಿರುವಾಗ ಸತ್ಯವೇ ಮುಂತಾದ ಶಬ್ದಗಳು ತಮ್ಮ ಅರ್ಥವನ್ನು ಹೇಳದ ವಿರುದ್ಧಾರ್ಥದ ಅಭಾವವನ್ನು ಹೇಳುವದಾದರೂ ಹೇಗೆ ?

2. ವಿಶೇಷಣಕ್ಕೆ ಶೂನ್ಯವೇ ಅರ್ಥವಾದರೆ ಯಾವ ಅರ್ಥವನ್ನೂ ಹೇಳದ ಶಬ್ದವು ವಿಶೇಷ್ಯದ ನಿಯಾಮಕವಾಗುವದು ಹೇಗೆ ? ಆದ್ದರಿಂದಲೂ ಸತ್ಯಾದಿಗಳಿಗೆ ಅರ್ಥವಿದೆ.

3. ವಿಶೇಷಣಗಳನ್ನು ಹೇಳುವ ಶಬ್ದಗಳು ಅರ್ಥವುಳ್ಳವಾಗಿರುವಂತೆ ವಿಶೇಷ್ಯವನ್ನು ಹೇಳುವ ಬ್ರಹ್ಮಶಬ್ದವೂ ಅರ್ಥವುಳ್ಳದ್ದಾಗಿದೆ. ಬ್ರಹ್ಮ ಎಂದರೆ ದೊಡ್ಡದು ಎಂದು ಲೋಕದಲ್ಲಿ ಅದಕ್ಕೆ ಅರ್ಥವು ಪ್ರಸಿದ್ಧವಾಗಿಯೇ ಇದೆ.

ಸತ್ಯ, ಜ್ಞಾನ-ಎಂಬ ಶಬ್ದಗಳಿರಲು ಮಾತ್ರ ತಮ್ಮ ತಮ್ಮ ಅರ್ಥವನ್ನು ಸಮರ್ಪಣೆ ಮಾಡುವದರಿಂದಲೇ[1] ವಿಶೇಷಣಗಳಾಗಿರುತ್ತವೆ.

ಆತ್ಮನೇ ಬ್ರಹ್ಮವು

(ಭಾಷ್ಯ)

೧೦೫. "ತಸ್ಮಾದ್ವಾ ಏತಸ್ಮಾದಾತ್ಮನಃ" (೨-೧) ಇತಿ ಬ್ರಹ್ಮಣ್ಯೇವ ಆತ್ಮಶಬ್ದಪ್ರಯೋಗಾತ್ ವೇದಿತುರಾತ್ಮಾ ಬ್ರಹ್ಮ । "ಏತಮಾನನ್ದಮಯಮಾತ್ಮಾನ ಮುಪಸಙ್ಕ್ರಾಮತಿ" (೧-೪) ಇತಿ ಚ ಆತ್ಮತಾಂ ದರ್ಶಯತಿ । ತತ್ಪ್ರವೇಶಾಚ್ಚ । "ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್" (೨-೬) ಇತಿ ಚ ತಸ್ಯೈವ ಜೀವರೂಪೇಣ ಶರೀರೇ ಪ್ರವೇಶಂ ದರ್ಶಯತಿ । ಅತೋ ವೇದಿತುಃ ಸ್ವರೂಪಂ ಬ್ರಹ್ಮ ॥

(ಭಾಷ್ಯಾರ್ಥ)

"ಆ ಈ ಆತ್ಮನಿಂದಲೇ (೨-೧) ಎಂದು ಬ್ರಹ್ಮದಲ್ಲಿಯೇ ಆತ್ಮಶಬ್ದವನ್ನು ಪ್ರಯೋಗಮಾಡಿರುವದರಿಂದ ಅರಿಯುವಾತನ ಆತ್ಮನೇ ಬ್ರಹ್ಮವು. "ಈ ಆನಂದ ಮಯನೆಂಬ ಆತ್ಮನನ್ನು ಉಪಸಂಕ್ರಮಿಸುತ್ತಾನೆ" (೨-೪) ಎಂದೂ (ಬ್ರಹ್ಮವು) ಆತ್ಮನೆಂದು[2] ಶ್ರುತಿಯು ತಿಳಿಸುತ್ತದೆ. ಅದರ ಪ್ರವೇಶ(ವನ್ನು ಹೇಳಿರುವ)ದರಿಂದಲೂ ಆತ್ಮನೇ ಬ್ರಹ್ಮವು. "ಅದನ್ನು ಸೃಷ್ಟಿಸಿ ಅದನ್ನೇ ಪ್ರವೇಶಿಸಿದನು" (೨-೬) ಎಂಬ (ವಾಕ್ಯದಿಂದ)ಲೂ ಅದೇ (ಬ್ರಹ್ಮವೇ) ಜೀವರೂಪದಿಂದ ಶರೀರವನ್ನು ಹೊಕ್ಕಿತು ಎಂದು ತಿಳಿಸುತ್ತದೆ. ಆದ್ದರಿಂದ ಅರಿಯುವಾತನ ಆತ್ಮನೇ ಬ್ರಹ್ಮವು.[3]

1. ವಿಶೇಷ್ಯವಾದ ಬ್ರಹ್ಮವು ಸತ್ಯರೂಪವಾದದ್ದು, ಜ್ಞಾನರೂಪವಾದದ್ದು - ಎಂದು ತಿಳಿಸುವದೇ ಶಬ್ದದ ಕೃತ್ಯ ; 'ಅನೃತವಲ್ಲ', 'ಜಡವಲ್ಲ' ಎಂಬುದು ಆರ್ಥಿಕ. ಆದ್ದರಿಂದ 'ವಾಕ್ಯವು ಶೂನ್ಯವನ್ನು ಹೇಳುತ್ತದೆ' ಎಂಬುದು ಸರಿಯಲ್ಲ.

2. ಆನಂದಮಯಾತ್ಮನು ಭೋಕ್ತೃಸ್ವರೂಪನು ; ಅವನನ್ನು ಉಪಸಂಕ್ರಮಿಸುತ್ತಾನೆ ಎಂದು ಹೇಳುವದರ ಮೂಲಕ ಬ್ರಹ್ಮಪ್ರಾಪ್ತಿಯನ್ನು ಹೇಳುವದರಿಂದ ಆತ್ಮನೇ ಬ್ರಹ್ಮ.

3. ಆತ್ಮನೇ ಬ್ರಹ್ಮವು ಎಂಬುದು ಇಲ್ಲಿ ಏಕೆ ಬಂದಿರುವದೆಂಬುದು ಭಾಷ್ಯದಲ್ಲಿ ಸ್ಪಷ್ಟವಾಗಿಲ್ಲ. ಆನಂತ್ಯವನ್ನು ಸ್ಥಾಪಿಸುವದಕ್ಕೆ ಎಂದು ವಾರ್ತಿಕವ್ಯಾಖ್ಯಾನದಲ್ಲಿದೆ ; ಆನಂತ್ಯವೆಂದರೆ ಐಕ್ಯವೇ ಎಂಬುದನ್ನು ತಿಳಿಸುವದಕ್ಕೆ ಎಂದು ಉಪನಿಷದ್ವ್ಯಾಖ್ಯಾನದಲ್ಲಿದೆ. ಬ್ರಹ್ಮಶಬ್ದವು ಅರ್ಥವುಳ್ಳ ಶಬ್ದವಾಗಿರುವದರಿಂದ ಮಾತ್ರವೇ ಅಲ್ಲದೆ ಬ್ರಹ್ಮವು ಆತ್ಮನೇ ಆಗಿರುವದರಿಂದಲೂ ಬ್ರಹ್ಮವು ಶೂನ್ಯವಲ್ಲ ಎಂದು ಪ್ರಕೃತಕ್ಕೆ ಇದನ್ನು ಹೊಂದಿಸಿಕೊಳ್ಳುವದು ಯುಕ್ತವೆಂದು ತೋರುತ್ತದೆ. ಸೂ.ಭಾ. ೧-೧-೧ರಲ್ಲಿ ಬ್ರಹ್ಮದ ಪ್ರಸಿದ್ಧಿಯನ್ನು ಕುರಿತ ಚರ್ಚೆಯನ್ನು ನೋಡಿ.

ಬ್ರಹ್ಮವು ಜ್ಞಾತೃವೂ ಅಲ್ಲ, ವೃತ್ತಿಜ್ಞಾನವೂ ಅಲ್ಲ

(ಭಾಷ್ಯ)

೧೦೬. ಏವಂ ತರ್ಹಿ ಆತ್ಮತ್ವಾತ್ ಜ್ಞಾನಕರ್ತೃತ್ವಮ್ । ಅತ್ಮಾ ಜ್ಞಾತಾ ಇತಿ ಹಿ ಪ್ರಸಿದ್ಧಮ್ । "ಸೋಽಕಾಮಯತ" (೨-೬) ಇತಿ ಚ ಕಾಮಿನೋ ಜ್ಞಾನ ಕರ್ತೃತ್ವಪ್ರಸಿದ್ಧಿಃ । ಅತೋ ಜ್ಞಾನಕರ್ತೃತ್ವಾತ್ ಜ್ಞಪ್ತಿರ್ಬ್ರಹ್ಮ ಇತ್ಯಯುಕ್ತಮ್ । ಅನಿತ್ಯತ್ವಪ್ರಸಙ್ಗಾಚ್ಚ । ಯದಿ ನಾಮ ಜ್ಞಪ್ತಿರ್ಜ್ಞಾನಮ್ ಇತಿ ಭಾವರೂಪತಾ ಬ್ರಹ್ಮಣಃ, ತಥಾಪಿ ಅನಿತ್ಯತ್ವಂ ಪ್ರಸಜ್ಯೇತ । ಪಾರತನ್ತ್ರ್ಯಂ ಚ । ಧಾತ್ವರ್ಥಾನಾಂ ಕಾರಯಿತೃಪೇಕ್ಷತ್ವಾತ್ । ಜ್ಞಾನಂ ಚ ಧಾತ್ವರ್ಥಃ । ಅತೋಽಸ್ಯ ಅನಿತ್ಯತ್ವಮ್ ಪರತನ್ತ್ರತಾ ಚ । ನ । ಸ್ವರೂಪಾವ್ಯತಿರೇಕೇಣ ಕಾರ್ಯತ್ವೋಪಚಾರಾತ್ । ಆತ್ಮನಃ ಸ್ವರೂಪಂ ಜ್ಞಪ್ತಿಃ, ನ ತತೋ ವ್ಯತಿರಿಚ್ಯತೇ । ಅತೋ ನಿತ್ಯೈವ । ತಥಾಪಿ ಬುದ್ಧೇರುಪಾಧಿ ಲಕ್ಷಣಾಯಾಃ ಚಕ್ಷುರಾದಿದ್ವಾರೈರ್ವಿಷಯಾಕಾರೇಣ ಪರಿಣಾಮಿನ್ಯಾಃ ಯೇ ಶಬ್ದಾದ್ಯಾ ಕಾರಾವಭಾಸಾಃ ತೇ ಆತ್ಮವಿಜ್ಞಾನಸ್ಯ ವಿಷಯಭೂತಾಃ ಉತ್ಪದ್ಯಮಾನಾ ಏವ ಆತ್ಮ ವಿಜ್ಞಾನೇನ ವ್ಯಾಪ್ತಾ ಉತ್ಪದ್ಯನ್ತೇ । ತಸ್ಮಾತ್ ಆತ್ಮವಿಜ್ಞಾನಾವಭಾಸ್ಯಾಶ್ಚ[1] ತೇ ವಿಜ್ಞಾನ ಶಬ್ದವಾಚ್ಯಾಶ್ಚ ಧಾತ್ವರ್ಥಭೂತಾಃ ಆತ್ಮನ ಏವ ಧರ್ಮಾಃ ವಿಕ್ರಿಯಾರೂಪಾಃ ಇತ್ಯವಿವೇಕಿಭಿಃ ಪರಿಕಲ್ಪ್ಯನ್ತೇ । ಯತ್ತು ಬ್ರಹ್ಮಣೋ ವಿಜ್ಞಾನಮ್, ತತ್ ಸವಿತೃ ಪ್ರಕಾಶವತ್ ಅಗ್ನ್ಯುಷ್ಣವಚ್ಚ ಬ್ರಹ್ಮಸ್ವರೂಪಾವ್ಯತಿರಿಕ್ತಂ ಸ್ವರೂಪಮೇವ ತತ್ । ನ ತತ್ ಕಾರಣಾನ್ತರಸವ್ಯಪೇಕ್ಷಮ್ । ನಿತ್ಯಸ್ವರೂಪತ್ವಾತ್ । ಸರ್ವಭಾವಾನಾಂ ಚ ತೇನಾ ವಿಭಕ್ತದೇಶಕಾಲತ್ವಾತ್ ಕಾಲಾಕಾಶಾದಿಕಾರಣತ್ವಾತ್ ನಿರತಿಶಯಸೂಕ್ಷ್ಮತ್ವಾಚ್ಚ ನ ತಸ್ಯ ಅನ್ಯದ್ ಅವಿಜ್ಞೇಯಂ ಸೂಕ್ಷ್ಮಂ ವ್ಯವಹಿತಂ ವಿಪ್ರಕೃಷ್ಟಂ ಭೂತಂ ಭವತ್ ಭವಿಷ್ಯದ್ ವಾ ಅಸ್ತಿ । ತಸ್ಮಾತ್ ಸರ್ವಜ್ಞಂ ಬ್ರಹ್ಮ । ಮನ್ತ್ರವರ್ಣಾಚ್ಚ ; "ಅಪಾಣೇಪಾದೋ ಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ । ಸ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ ತಮಾಹುರಗ್ರ್ಯಂ ಪುರುಷಂ ಮಹಾನ್ತಮ್" (ಶ್ವೇ. ೩-೧೯) ಇತಿ । "ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾನ್ನ ತು ತದ್ದ್ವಿತೀಯಮಸ್ತಿ ।" (ಬೃ. ೪-೩-೩೦) ಇತ್ಯಾದಿಶ್ರುತೇಶ್ಚ । ವಿಜ್ಞಾತೃಸ್ವರೂಪಾ ವ್ಯತಿರೇಕಾತ್ ಕರಣಾದಿನಿಮಿತ್ತಾನಪೇಕ್ಷತ್ವಾಚ್ಚ ಬ್ರಹ್ಮಣೋ ಜ್ಞಾನಸ್ವರೂಪತ್ವೇಽಪಿ ನಿತ್ಯತ್ವಪ್ರಸಿದ್ಧಿಃ । ಅತೋ ನೈವ ಧಾತ್ವರ್ಥಸ್ತತ್ । ಅಕ್ರಿಯಾರೂಪತ್ವಾತ್ । ಅತ ಏವ ಚ ನ ಜ್ಞಾನಕರ್ತೃ ॥

1. "ಆತ್ಮವಿಜ್ಞಾನಾವಭಾಸಾಶ್ಚ" ಎಂದು ಆ॥ ಪಾಠ.

(ಭಾಷ್ಯಾರ್ಥ)

(ಆಕ್ಷೇಪ :-) ಹೀಗಾದರೆ (ಬ್ರಹ್ಮವು) ಆತ್ಮನಾಗಿರುವದರಿಂದ ಜ್ಞಾನ ಕರ್ತೃವೆಂದಾಯಿತು. ಆತ್ಮನು ಜ್ಞಾತೃವೆಂದಲ್ಲವೆ, ಪ್ರಸಿದ್ಧವಾಗಿದೆ ? "ಅವನು ಕಾಮಿಸಿದನು" (೨-೬) ಎಂಬ (ಶ್ರುತಿಯಿಂದಲೂ) ಕಾಮಿಯಾಗಿರುವ ಬ್ರಹ್ಮವು ಜ್ಞಾನಕರ್ತೃವೆಂದು ಸಿದ್ಧವಾಗುತ್ತದೆ.[1] ಆದ್ದರಿಂದ ಜ್ಞಾನಕರ್ತೃವಾಗಿರುವದರಿಂದ ಬ್ರಹ್ಮವು ಜ್ಞಪ್ತಿ ಎಂದು (ಶ್ರುತಿಗೆ ಅರ್ಥಮಾಡಿದ್ದು)[2] ಸರಿಯಲ್ಲ.[3] ಬ್ರಹ್ಮವು ಅನಿತ್ಯವಾಗುವದರಿಂದಲೂ ಈ ಅರ್ಥವು ಸರಿಯಲ್ಲ. ಹೇಗೆಂದರೆ :- ಒಂದು ವೇಳೆ ಜ್ಞಾನವೆಂದರೆ ಜ್ಞಪ್ತಿಯು ಎಂದು ಅರ್ಥಮಾಡಿ ಬ್ರಹ್ಮವು ಭಾವರೂಪವೆಂದು ಇಟ್ಟುಕೊಂಡರೂ ಅದು ಅನಿತ್ಯವು ಎಂದಾಗುತ್ತದೆ ; ಅದು ಪರತಂತ್ರವೆಂದೂ (ಆಗುತ್ತದೆ). ಏಕೆಂದರೆ ಧಾತುವಿನ ಅರ್ಥವಾದ ಕ್ರಿಯೆಗಳು ಕಾರಕಗಳನ್ನು ಬಯಸುತ್ತವೆ.[4] ಜ್ಞಾನವೆಂಬುದು ಧಾತುವಿನ ಅರ್ಥವಾಗಿರುತ್ತದೆ ; ಆದ್ದರಿಂದ ಇದು ಅನಿತ್ಯವೆಂದೂ ಪರತಂತ್ರವೆಂದೂ ಆಯಿತು.

(ಪರಿಹಾರ :-) ಹಾಗಲ್ಲ. ಆದು ಬ್ರಹ್ಮದ ಸ್ವರೂಪಕ್ಕಿಂತ ಬೇರೆಯಲ್ಲವಾದ್ದರಿಂದ ಅದು ಕಾರ್ಯವೆಂದು ಉಪಚಾರಕ್ಕೆ ಕರೆದಿರುತ್ತದೆ.[5] ಜ್ಞಪ್ತಿ ಎಂಬುದು ಆತ್ಮನ ಸ್ವರೂಪವೇ ಹೊರತು ಅದಕ್ಕಿಂತ ಬೇರೆಯಾಗಿರುವದಿಲ್ಲ. ಆದ್ದರಿಂದ (ಅದು) ನಿತ್ಯವೇ (ಆಗಿರುತ್ತದೆ). ಹೀಗಿದ್ದರೂ ಉಪಾಧಿರೂಪವಾದ ಬುದ್ಧಿಯು[6] ಚಕ್ಷುರಿಂದ್ರಿಯವೇ ಮುಂತಾದವುಗಳ ಮೂಲಕ (ಹೊರಟು) ವಿಷಯಗಳ ಆಕಾರವಾಗಿ ಪರಿಣಮಿಸುವಾಗ ಅದಕ್ಕೆ ಯಾವ ಶಬ್ದಾದಿಗಳ ಆಕಾರವಾಗಿ ತೋರುವ (ಪ್ರತ್ಯಯಗಳಿರುವವೋ)[7] ಅವು

---

1. ವಿಜ್ಞಾನಾತ್ಮನಾದ ಜೀವನೇ ಬ್ರಹ್ಮ ಎಂದು ಪೂರ್ವಪಕ್ಷಿ ತಿಳಿದಿರುತ್ತಾನೆ.

2. ೯೯ ನೆಯ ಭಾ. ಭಾ. ದಲ್ಲಿ.

3. "ಜ್ಞಾನಂ ಬ್ರಹ್ಮ" ಎಂದರೆ ಜ್ಞಾನವುಳ್ಳದ್ದು ಬ್ರಹ್ಮವು ಎಂದೇ ಅರ್ಥಮಾಡಬೇಕೆಂದು ಭಾವ.

4. ಕಾರಕಗಳಿಲ್ಲದೆ ಕ್ರಿಯೆಗಳು ಹುಟ್ಟುವದಿಲ್ಲ.

5. ನಿತ್ಯವಾದ ಬ್ರಹ್ಮದ ಸ್ವರೂಪವು ಮುಖ್ಯಾರ್ಥದಲ್ಲಿ ಕಾರ್ಯವಾಗಲಾರದು , ಏಕೆಂದರೆ ಸ್ವರೂಪವು ಹುಟ್ಟುವದಲ್ಲ.

6. ಅಂತಃಕರಣವು. ಆತ್ಮನು ಅಂತಃಕರಣವೆಂಬ ಉಪಾಧಿಯಿಂದಲೇ ಜ್ಞಾತೃವೆನಿಸಿರುತ್ತಾನೆ.

7. ಈ ಪ್ರತಿಯೊಂದು ಪ್ರತ್ಯಯವೂ ಅಂತಃಕರಣದ ಧರ್ಮವಾದರೂ ಬೆಂಕಿಯಿಂದ ಕಾಸಿದ ಕಬ್ಬಿಣವು ಕೆಂಪಗೆ ಕಾಣಿಸುವಂತೆಯೂ ಸುಡುವಂತೆಯೂ ಜ್ಞಾನರೂಪನಾದ ಆತ್ಮನ ಸನ್ನಿಧಿಯಿಂದ ಜ್ಞಾನವೇ ಎಂಬಂತೆ ತೋರುತ್ತಿರುವದು. ನಿಜವಾಗಿ ಇದು ಜ್ಞಾನಾಭಾಸ, ಜ್ಞಾನದಂತೆ ತೋರುವದು, ಜ್ಞಾನವಲ್ಲ.

ಆತ್ಮವಿಜ್ಞಾನಕ್ಕೆ ವಿಷಯವಾಗಿ ಹುಟ್ಟುವಾಗಲೇ ಆತ್ಮವಿಜ್ಞಾನದಿಂದ ವ್ಯಾಪ್ತವಾಗಿ ಹುಟ್ಟುತ್ತವೆ. ಆದ್ದರಿಂದ ಆತ್ಮವಿಜ್ಞಾನದಿಂದ ಬೆಳಗುವವೂ[1] ವಿಜ್ಞಾನವೆಂಬ ಶಬ್ದಕ್ಕೆ ವಾಚ್ಯವಾದವೂ ಆಗಿರುವ ಧಾತ್ವರ್ಥಗಳಾದ ಆ ಪ್ರತ್ಯಯಗಳು ಆತ್ಮನಿಗೇ ಸೇರಿದ ವಿಕಾರರೂಪವಾದ ಧರ್ಮಗಳು ಎಂದು[2] ಅವಿವೇಕಿಗಳು ಕಲ್ಪಿಸಿರುತ್ತಾರೆ. ಆದರೆ ಯಾವದು ಬ್ರಹ್ಮದ ವಿಜ್ಞಾನವೋ ಅದು ಸೂರ್ಯನ ಬೆಳಕಿನಂತೆಯೂ ಬೆಂಕಿಯ ಬಿಸಿಯಂತೆಯೂ ಬ್ರಹ್ಮದ ಸ್ವರೂಪಕ್ಕಿಂತ ಬೇರೆಯಲ್ಲ, ಅದು (ಅದರ) ಸ್ವರೂಪವೇ (ಆಗಿರುತ್ತದೆ). ಅದು ಮತ್ತೊಂದು ಕಾರಣವನ್ನು ಬಯಸುವದಿಲ್ಲ, ಏಕೆಂದರೆ ನಿತ್ಯವಾಗಿರುತ್ತದೆ. ಯಾವ ಪದಾರ್ಥಗಳೂ ಅದಕ್ಕಿಂತ ಬೇರೆಯಾದ ದೇಶದಲ್ಲಾಗಲಿ ಕಾಲದಲ್ಲಾಗಲಿ ಇರುವಹಾಗಿಲ್ಲವಾದ್ದರಿಂದಲೂ[3] ಕಾಲ, ಆಕಾಶ - ಮುಂತಾದವುಗಳಿಗೆ (ಅದು) ಕಾರಣವಾಗಿರುವದರಿಂದಲೂ[4] ಮಿಗಿಲಿಲ್ಲದಷ್ಟು ಸೂಕ್ಷ್ಮವಾಗಿರುವದರಿಂದಲೂ[5] ಅದಕ್ಕೆ ಅರಿಯಲಾಗದ, ಸೂಕ್ಷ್ಮವಾದ, ನಡುವೆ ವ್ಯವಧಾನವುಳ್ಳ, ದೂರವಿರುವ, ಹಿಂದಿನ ಕಾಲದ ಅಥವಾ ಈಗಿನ ಕಾಲದ, ಅಥವಾ ಮುಂದಿನ ಕಾಲದ ಬೇರೊಂದು (ವಸ್ತು ಯಾವದೂ) ಇರುವದಿಲ್ಲ.[6] ಆದ್ದರಿಂದ ಬ್ರಹ್ಮವು ಸರ್ವಜ್ಞವು. "ಕೈಕಾಲುಗಳಿಲ್ಲದೆ ವೇಗವಾಗಿ ನಡೆಯುವನು, ಹಿಡಿದುಕೊಳ್ಳುವನು ; ಕಣ್ಣಿಲ್ಲದೆ ನೋಡುವನು, ಆತನು ಕಿವಿಯಿಲ್ಲದೆ ಕೇಳುವನು, ಆತನೇ ಅರಿಯತಕ್ಕದ್ದನ್ನೆಲ್ಲ ಅರಿಯುತ್ತಾನೆ, ಆದರೆ ಆತನನ್ನು ಅರಿಯುವವನು (ಮತ್ತೊಬ್ಬನು) ಇಲ್ಲ. ಆತನನ್ನೇ 'ಮೊದಲಿನ ಪುರುಷನು, ಮಹಾಂತನು' ಎನ್ನುವರು." (ಶ್ವೇ. ೩-೧೯) ಎಂಬ ಮಂತ್ರವರ್ಣವೂ, "ಅರಿಯುವಾತನ ಅರಿವಿಗೆ ಲೋಪವೆಂಬುದಿಲ್ಲ, ಏಕೆಂದರೆ (ಅದು) ವಿನಾಶವಾಗುವದಿಲ್ಲ. ಆದರೆ (ಅಲ್ಲಿ ತನಗಿಂತ ಬೇರೆಯಾದ) ಎರಡನೆಯ ವಸ್ತುವಿಲ್ಲ" (ಬೃ. ೪-೩-೩೦) ಮುಂತಾದ ಶ್ರುತಿಗಳೂ ಇದಕ್ಕೆ ಪ್ರಮಾಣವು. (ಹೀಗೆ)

---

1. "ಆತ್ಮವಿಜ್ಞಾನಾವಭಾಸಾಶ್ಚ" ಎಂಬ ಆ॥ ಪಾಠದಲ್ಲಿ 'ಆತ್ಮವಿಜ್ಞಾನದಂತೆ ತೋರುವವುಗಳೂ' ಎಂದು ಕನ್ನಡಿಸಿಕೊಳ್ಳಬೇಕು.

2. ಆತ್ಮನ ಧರ್ಮಗಳಾದ ಜ್ಞಾನಗಳು ಹುಟ್ಟಿ ನಾಶವಾಗುತ್ತವೆ ಎಂದು.

3. ಏಕೆಂದರೆ ದೇಶಕಾಲಗಳನ್ನೆಲ್ಲ ಅದು ವ್ಯಾಪಿಸಿಕೊಂಡಿರುತ್ತದೆ.

4 ಆದ್ದರಿಂದ ಕಾಲಾಕಾಶಾದಿಗಳನ್ನೂ ಅದು ಬೆಳಗಬಲ್ಲದು.

5. ಆದ್ದರಿಂದ ಅತ್ಯಂತಸೂಕ್ಷ್ಮವಾದ ವಸ್ತುಗಳನ್ನೂ ಅರಿಯಬಲ್ಲದು.

6. 'ವ್ಯವಧಾನವುಳ್ಳ' ಎಂದರೆ ಕಾಲದಿಂದ ಹಿಂದೆ ಅಥವಾ ಮುಂದೆ ಇರುವ ಎಂದರ್ಥ. 'ದೂರವಿರುವ' ಎಂದರೆ ದೇಶದಿಂದ ಸಂಬಂಧಪಡದ ಎಂದರ್ಥ. ಬ್ರಹ್ಮದ ಸ್ವರೂಪಜ್ಞಾನವು ಅಂತಃಕರಣದ ವೃತ್ತಿರೂಪವಾದ ಜ್ಞಾನಕ್ಕಿಂತ ಅತ್ಯಂತ ವಿಲಕ್ಷಣವೆಂಬುದನ್ನು ಇಲ್ಲಿರುವ ವಿಶೇಷಣಗಳು ತಿಳಿಸುತ್ತವೆ.

ಅರಿಯುವಾತನ ಸ್ವರೂಪಕ್ಕಿಂತ (ಜ್ಞಾನವು) ಬೇರೆಯಾಗಿಲ್ಲವಾದ್ದರಿಂದಲೂ ಕರಣಗಳೇ ಮುಂತಾದ ನಿಮಿತ್ತವನ್ನು ಬಯಸುವದಿಲ್ಲವಾದ್ದರಿಂದಲೂ ಬ್ರಹ್ಮವು ಜ್ಞಾನಸ್ವರೂಪವು ಎಂದರೂ (ಅದು) ನಿತ್ಯವೆಂದು ಸಿದ್ಧವಾಗುತ್ತದೆ. ಆದ್ದರಿಂದ ಅದು ಧಾತ್ವರ್ಥವಲ್ಲವೇ ಅಲ್ಲ.[1] ಏಕೆಂದರೆ ಅದು ಕ್ರಿಯಾರೂಪವಲ್ಲದ್ದಾಗಿದೆ. ಆದ್ದರಿಂದ ಜ್ಞಾನ(ಕ್ರಿಯೆಯ) ಕರ್ತೃವೂ ಅಲ್ಲ.[2]

ಬ್ರಹ್ಮಸ್ವರೂಪವು ಶಬ್ದಕ್ಕೆ ನಿಲುಕದು

(ಭಾಷ್ಯ)

೧೦೭ ತಸ್ಮಾದೇವ ಚ ನ ಜ್ಞಾನಶಬ್ದವಾಚ್ಯಮಪಿ ತದ್ ಬ್ರಹ್ಮ । ತಥಾಪಿ ತದಾಭಾಸವಾಚಕೇನ ಬುದ್ಧಿಧರ್ಮವಿಷಯೇಣ ಜ್ಞಾನಶಬ್ದೇನ ತಲ್ಲಕ್ಷ್ಯತೇ । ನ ತು ಉಚ್ಯತೇ । ಶಬ್ದಪ್ರವೃತ್ತಿಹೇತುಜಾತ್ಯಾದಿಧರ್ಮರಹಿತತ್ವಾತ್ । ತಥಾ ಸತ್ಯಶಬ್ದೇನಾಪಿ । ಸರ್ವವಿಶೇಷಪ್ರತ್ಯಸ್ತಮಿತಸ್ವರೂಪತ್ವಾದ್ ಬ್ರಹ್ಮಣಃ । ಬಾಹ್ಯಸತ್ತಾಸಾಮಾನ್ಯವಿಷಯೇಣ ಸತ್ಯಶಬ್ದೇನ ಲಕ್ಷ್ಯತೇ "ಸತ್ಯಂ ಬ್ರಹ್ಮ" ಇತಿ । ನ ತು ಸತ್ಯಶಬ್ದವಾಚ್ಯಮೇವ ಬ್ರಹ್ಮ । ಏವಂ ಸತ್ಯಾದಿಶಬ್ದಾಃ ಇತರೇತರ ಸನ್ನಿಧೌ[3] ಅನ್ಯೋನ್ಯನಿಯಮ್ಯನಿಯಾಮಕಾಃ ಸನ್ತಃ ಸತ್ಯಾದಿಶಬ್ದವಾಚ್ಯಾತ್ ತನ್ನಿವರ್ತಕಾಃ ಬ್ರಹ್ಮಣೋ ಲಕ್ಷಣಾರ್ಥಾಶ್ಚ ಭವನ್ತಿ ; ಇತ್ಯತಃ ಸಿದ್ಧಂ "ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ" (೨-೪), "ಅನಿರುಕ್ತೇಽನಿಲಯನೇ" (೨-೭) ಇತಿ ಚ ಅವಾಚ್ಯತ್ವಂ ನೀಲೋತ್ಪಲ ವತ್ ಅವಾಕ್ಯಾರ್ಥತ್ವಂ ಚ ಬ್ರಹ್ಮಣಃ ॥

(ಭಾಷ್ಯಾರ್ಥ)

ಆದ್ದರಿಂದಲೇ ಆ ಬ್ರಹ್ಮವು ಜ್ಞಾನಶಬ್ದದ ವಾಚ್ಯಾರ್ಥವೂ ಅಲ್ಲ. ಹಾಗಿದ್ದರೂ ಆ (ಆತ್ಮನ) ಆಭಾಸಕ್ಕೆ ವಾಚಕವಾಗಿಯೂ[4] ಬುದ್ಧಿಯ ಧರ್ಮವನ್ನು

1. ಆದ್ದರಿಂದ ಪರತಂತ್ರವೂ ಅಲ್ಲ.

2. ಏಕೆಂದರೆ ಜ್ಞಾತೃವಾದ ಜೀವನಂತೆ ತನ್ನ ಸ್ವರೂಪಕ್ಕಿಂತ ಬೇರೆಯಾದ ಜ್ಞಾನಕ್ಕೆ ಆಶ್ರಯವಲ್ಲ.

3. "ಇತರೇತರಸಂನಿಧಾನಾತ್" ಎಂದು ವಾ॥ ಕಾ॥ ಪಾಠ.

4. ಚಿದಾಭಾಸಯುಕ್ತವಾಗಿರುವ ಅಂತಃಕರಣವೃತ್ತಿಯು ಜ್ಞಾನ ಎಂಬ ಶಬ್ದಕ್ಕೆ ವಾಚ್ಯ ವಾಗಿರುತ್ತದೆ.

ವಿಷಯೀಕರಿಸುವದಾಗಿಯೂ ಇರುವ 'ಜ್ಞಾನ' ಎಂಬ ಶಬ್ದದಿಂದ ಅದು ಲಕ್ಷಿತವಾಗಿರುತ್ತದೆ.[1] ಆದರೆ (ಅದಕ್ಕೆ) ವಾಚ್ಯವಾಗಿರುವದಿಲ್ಲ, ಏಕೆಂದರೆ ಶಬ್ದ ಪ್ರವೃತ್ತಿಗೆ ನಿಮಿತ್ತವಾದ ಜಾತಿಯೇ ಮುಂತಾದ ಯಾವ ಧರ್ಮವೂ (ಅದರಲ್ಲಿ) ರುವದಿಲ್ಲ.[2] ಇದರಂತೆ ಸತ್ಯಶಬ್ದಕ್ಕೂ (ಅದು ವಾಚ್ಯವಲ್ಲ, ಲಕ್ಷ್ಯವಾಗಿರುತ್ತದೆ). ಬ್ರಹ್ಮವು ಎಲ್ಲಾ ಬಗೆಯ ವಿಶೇಷಗಳೂ ಮರೆಯಾಗಿರುವ ಸ್ವರೂಪವಾದ್ದರಿಂದ ಹೊರಗಿನ ಸತ್ತಾಸಾಮಾನ್ಯವನ್ನು[3] ತಿಳಿಸುವ ಸತ್ಯಶಬ್ದದಿಂದ ಲಕ್ಷಿತವಾಗಿ "ಸತ್ಯವಾದದ್ದು ಬ್ರಹ್ಮವು" ಎನಿಸಿಕೊಳ್ಳುತ್ತದೆ ; ಅಷ್ಟೇ ಹೊರತು ಬ್ರಹ್ಮವು ಸತ್ಯ ಶಬ್ದಕ್ಕೆ ವಾಚ್ಯವೇ (ಎನ್ನುವದ)ಕ್ಕಿಲ್ಲ.

ಈ ರೀತಿಯಲ್ಲಿ ಸತ್ಯವೇ ಮುಂತಾದ ಶಬ್ದಗಳು ಒಂದೊಂದೂ (ಮಿಕ್ಕವುಗಳ) ಸನ್ನಿಧಿಯಲ್ಲಿರುವದರಿಂದ[4] ಒಂದಕ್ಕೊಂದು ನಿಯಮ್ಯವಾಗಿಯೂ ನಿಯಾಮಕವಾಗಿಯೂ ಇರುವವುಗಳಾಗಿ ಸತ್ಯವೇ ಮುಂತಾದ (ಶಬ್ದಗಳ) ವಾಚ್ಯಾರ್ಥಗಳಿಂದ ಆ (ಬ್ರಹ್ಮವನ್ನು) ಬೇರ್ಪಡಿಸುತ್ತಾ[5] ಬ್ರಹ್ಮದ ಲಕ್ಷಣವನ್ನು (ತಿಳಿಸುವ) ಪ್ರಯೋಜನವನ್ನು(ಒಟ್ಟುಮಾಡುವ)ವಾಗಿರುತ್ತವೆ. ಹೀಗಿರುವದರಿಂದ "ಯಾವದರಿಂದ ವಾಕ್ಕುಗಳು ಮನಸ್ಸಿನೊಡನೆ (ಅದನ್ನು) ಹೊಂದಲಾರದೆ ಹಿಂದಿರುಗುವವೋ" (೨-೪), "ನಿರ್ವಚನಮಾಡಿ ಹೇಳಲಾಗದ (ತನಗೆ ಮತ್ತೊಂದು) ಆಸರೆಯಿಲ್ಲದ (ಬ್ರಹ್ಮದಲ್ಲಿ ಅಭಯಪ್ರತಿಷ್ಠೆಯನ್ನು ಹೊಂದುತ್ತಾನೆ)" (೨-೭) -

1. ಜ್ಞಾನಾಭಾಸಕ್ಕೆ ಮೂಲವಾಗಿರುವದರಿಂದ ಇದನ್ನು ಲಕ್ಷಣೆಯಿಂದ ಜ್ಞಾನವೆಂದೇ ಕರೆಯುವರು.

2. ಜಾತಿ, ದ್ರವ್ಯ, ಗುಣ, ಕ್ರಿಯೆ, ಸಂಬಂಧ - ಎಂಬ ಧರ್ಮಗಳು. ಮಾಂ ಭಾ. ೭, ಕೇ ಭಾ. ೧-೩, ಗೀ. ಭಾ. ೧೩-೧೨.

3. ದ್ರವ್ಯಗುಣಕರ್ಮಗಳಲ್ಲಿ ಸತ್ತಾಸಾಮಾನ್ಯ (ಇರವು) ಎಂಬ ಜಾತಿ ಇರುವದೆಂದು ವೈಶೇಷಿಕರು ಬಗೆಯುತ್ತಾರೆ.

4. ಜ್ಞಾನ, ಅನಂತ ಎಂಬ ಶಬ್ದಗಳ ಸನ್ನಿಧಿಯಲ್ಲಿರುವದರಿಂದ ಕಾರಣತ್ವವಾಗಲಿ ಜಡರೂಪವಾಗಲಿ ಇಲ್ಲದ ಕೂಟಸ್ಥಸತ್ಯ ಎಂಬ ಅರ್ಥವನ್ನು 'ಸತ್ಯಶಬ್ದವು ತಿಳಿಸುತ್ತದೆ ತನ್ನ ವಾಚ್ಯಾರ್ಥವಾದ ಸತ್ತಾಸಾಮಾನ್ಯವಲ್ಲವೆಂದೂ ತಿಳಿಸುತ್ತದೆ ಸತ್ಯ, ಅನಂತ - ಇವುಗಳ ಸನ್ನಿಧಿಯಿಂದ ಜ್ಞಾನವು ತನ್ನ ವಾಚ್ಯವಾದ ಅನಿತ್ಯಜ್ಞಾನದಿಂದ ಬೇಪಡಿಸಿ ಜ್ಞಪ್ತಿಮಾತ್ರವೆಂದು ತಿಳಿಸುತ್ತದೆ. ಸತ್ಯಜ್ಞಾನಶಬ್ದಗಳ ಸನ್ನಿಧಿಯಿಂದ ಅನಂತವೆಂಬುದು ತನ್ನ ವಾಚ್ಯಾರ್ಥವಾದ ಕಾಲಾದಿಗಳನ್ನು ಮೀರಿದ ಅದ್ವಿತೀಯ ವಸ್ತು ಎಂದು ತಿಳಿಸುತ್ತದೆ.

5. ವಾಚ್ಯಾರ್ಥಕ್ಕಿಂತ ಬ್ರಹ್ಮವು ಬೇರೆ ಎಂದು ತಿಳಿಸುತ್ತಾ.

ಎಂಬ (ಶ್ರುತಿಯಲ್ಲಿರುವಂತೆ) ಬ್ರಹ್ಮವು ಅವಾಚ್ಯವೆಂದೂ ನೀಲೋತ್ಪಲದಂತೆ ವಾಕ್ಯಾರ್ಥವಲ್ಲವೆಂದೂ[1] ಸಿದ್ಧವಾಗುತ್ತದೆ.

ಬ್ರಹ್ಮವನ್ನು ಹೇಗೆ ಅರಿತುಕೊಳ್ಳಬೇಕು ?

(ಭಾಷ್ಯ)

೧೦೮. ತದ್ ಯಥಾವ್ಯಾಖ್ಯಾತಂ ಬ್ರಹ್ಮ ಯೋ ವೇದ ವಿಜಾನಾತಿ ನಿಹಿತಂ ಸ್ಥಿತಂ ಗುಹಾಯಾಮ್ । ಗೂಹತೇಃ ಸಂವರಣಾರ್ಥಸ್ಯ, ನಿಗೂಢಾಃ ಅಸ್ಯಾಂ ಜ್ಞಾನಜ್ಞೇಯಜ್ಞಾತೃಪದಾರ್ಥಾಃ ಇತಿ **ಗುಹಾ** ಬುದ್ಧಿಃ । ಗೂಢೌ ಅಸ್ಯಾಂ ಭೋಗಾಪವರ್ಗೌ ಪುರುಷಾರ್ಥೌ ಇತಿ ವಾ ; **ತಸ್ಯಾಂ ಪರಮೇ ಪ್ರಕೃಷ್ಟೇ ವ್ಯೋಮನ್ ವ್ಯೋಮ್ನಿ ಆಕಾಶೇ ಅವ್ಯಾಕೃತಾಖ್ಯೇ** । ತದ್ ಹಿ ಪರಮಂ ವ್ಯೋಮ ''ಏತಸ್ಮಿನ್ ನು ಖಲ್ವಕ್ಷರೇ ಗಾರ್ಗ್ಯಾಕಾಶಃ'' (ಬೃ. ೩-೮-೧೧) ಇತಿ ಅಕ್ಷರಸಂನಿಕರ್ಷಾತ್ । ''ಗುಹಾಯಾಂ ವ್ಯೋಮ್ನಿ'' ಇತಿ ವಾ ಸಾಮಾನಾಧಿಕರಣ್ಯಾತ್ **ಅವ್ಯಾಕೃತಾಕಾಶಮೇವ ಗುಹಾ** । ತತ್ರಾಪಿ ನಿಗೂಢಾಃ ಸರ್ವೇ ಪದಾರ್ಥಾಃ ತ್ರಿಷು ಕಾಲೇಷು । ಕಾರಣತ್ವಾತ್, ಸೂಕ್ಷ್ಮತರತ್ವಾಚ್ಚ ತಸ್ಮಿನ್ ಅನ್ತಃ ನಿಹಿತಂ ಬ್ರಹ್ಮ । **ಹಾರ್ದಮೇವ ತು ಪರಮಂ ವ್ಯೋಮ ಇತಿ ನ್ಯಾಯ್ಯಮ್** । ವಿಜ್ಞಾನಾಜ್ಞಾತ್ವೇನ ವ್ಯೋಮ್ನೋ ವಿವಕ್ಷಿತತ್ವಾತ್ । ''ಯೋ ವೈ ಸ ಬಹಿರ್ಧಾ ಪುರುಷಾದಾಕಾಶಃ'', ''ಯೋ ವೈ ಸೋಽನ್ತಃಪುರುಷ ಆಕಾಶಃ'', ''ಯೋಽಯಮನ್ತರ್ಹೃದಯ ಆಕಾಶಃ'' (ಛಾಂ. ೩-೧೨-೭, ೮,೯) - ಇತಿ ಶ್ರುತ್ಯನ್ತರಾತ್ ಪ್ರಸಿದ್ಧಂ ಹಾರ್ದಸ್ಯ ವ್ಯೋಮ್ನಃ ಪರಮತ್ವಮ್ । ತಸ್ಮಿನ್ ಹಾರ್ದೇ ವ್ಯೋಮ್ನಿ ಯಾ ಬುದ್ಧಿರ್ಗುಹಾ ತಸ್ಯಾಂ ನಿಹಿತಂ ಬ್ರಹ್ಮ । ತದ್ವೃತ್ತ್ಯಾ[2] ವಿವಿಕ್ತತಯಾ ಉಪಲಭ್ಯತೇ ಇತಿ । ನ ಹಿ ಅನ್ಯಥಾ ವಿಶಿಷ್ಟದೇಶಕಾಲಸಂಬನ್ಧೋಽಸ್ತಿ ಬ್ರಹ್ಮಣಃ । ಸರ್ವಗತತ್ವಾತ್ ನಿರ್ವಿಶೇಷತ್ವಾಚ್ಚ ॥

1. ನೀಲತ್ವ, ಉತ್ಪಲತ್ವ - ಎಂಬ ಎರಡು ಧರ್ಮಗಳ ಸಂಸರ್ಗವನ್ನು 'ನೀಲಮ್, ಉತ್ಪಲಮ್' ಎಂಬ ವಾಕ್ಯವು ಹೇಳುವಂತೆ ಸತ್ಯತ್ವವೇ ಮುಂತಾದ ಮೂರು ಧರ್ಮಗಳ ಸೇರುವೆಯ ಸಂಬಂಧವನ್ನು 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' ಎಂಬ ವಾಕ್ಯವು ಹೇಳುವದಿಲ್ಲ ; ಅಥವಾ ಅನೀಲ, ಅನುತ್ಪಲಗಳಿಂದ ಭಿನ್ನವೆಂದು ನೀಲೋತ್ಪಲವಾಕ್ಯವು ಹೇಳುವಂತೆ ಭೇದವನ್ನೂ ಈ ವಾಕ್ಯವು ಹೇಳುವದಿಲ್ಲ. ಆದ್ದರಿಂದ ಬ್ರಹ್ಮವು ಅವಾಕ್ಯಾರ್ಥವು.

2. ''ತದ್ವ್ಯಾವೃತ್ತ್ಯಾ'' ಎಂದು ವಾ॥ ಕಾ॥ ಪಾಠ.

(ಭಾಷ್ಯಾರ್ಥ)

ಮೇಲೆ ವಿವರಿಸಿದ[1] ಆ ಬ್ರಹ್ಮವನ್ನು ಯಾವನು ಗುಹೆಯಲ್ಲಿ (ಆಕಾಶದಲ್ಲಿ) ನಿಹಿತವಾಗಿರುವದೆಂದು - ಇದೆ ಎಂದು ಅರಿತುಕೊಳ್ಳುವನೋ, ಅನುಭವಕ್ಕೆ ತಂದು ಕೊಳ್ಳುವನೋ ಎಂದು ಅರ್ಥ. 'ಗುಹೂ ಸಂವರಣೇ' ಎಂಬ 'ಮುಚ್ಚು' ಎಂಬರ್ಥದ ಗುಹೂ ಧಾತುವಿನಿಂದ (ಬಂದಿರುವ ರೂಪವಿದು). ಇದರಲ್ಲಿ ಜ್ಞಾನ, ಜ್ಞೇಯ, ಜ್ಞಾತೃ - ಎಂಬ ಪದಾರ್ಥಗಳು ಅಡಗಿಕೊಂಡಿರುವವು [2]; ಆದ್ದರಿಂದ ಗುಹೆ ಎಂದರೆ (ಈ) ಬುದ್ಧಿಯೇ. ಅಥವಾ ಇದರಲ್ಲಿ ಭೋಗ, ಅಪವರ್ಗ[3] - ಈ ಎರಡೂ ಗೂಢವಾಗಿರುವವು[4] ಎಂಬ (ಕಾರಣದಿಂದ)ಲಾದರೂ (ಬುದ್ಧಿಯು ಗುಹೆ ಎನಿಸಿರುವದು). ಆ ಬುದ್ಧಿಯಲ್ಲಿರುವ ಪರಮವಾದ ಎಂದರೆ ಅತ್ಯುತ್ತಮವಾದ (ವ್ಯೋಮನ್ - ವ್ಯೋಮ್ನಿ) ವ್ಯೋಮದಲ್ಲಿ ಎಂದರೆ ಅವ್ಯಾಕೃತವೆಂಬ ಆಕಾಶದಲ್ಲಿ (ಎಂದರ್ಥ). ಏಕೆಂದರೆ "ಗಾರ್ಗಿಯೆ, ಈ ಅಕ್ಷರದಲ್ಲಿಯೇ ಅಲ್ಲವೆ, ಆಕಾಶವು (ಓತವಾಗಿಯೂ ಪ್ರೋತವಾಗಿಯೂ ಇದೆ) ಎಂದು (ಬೃ. ೩-೮-೧೧ರಲ್ಲಿ) ಹೇಳಿರುವಂತೆ ಅದು ಅಕ್ಷರಕ್ಕೆ ಸಮೀಪವಾಗಿರುತ್ತದೆ.[5] 'ಗುಹೆ ಎಂಬ ವ್ಯೋಮದಲ್ಲಿ' ಎಂದು ಸಾಮಾನಾಧಿಕರಣ್ಯವನ್ನು ಅಂಗೀಕರಿಸಿ ಅವ್ಯಾಕೃತಾಕಾಶವೇ ಗುಹೆ[6] (ಎಂದಾದರೂ ಅರ್ಥಮಾಡಬಹುದು.) ಆ (ಅವ್ಯಾಕೃತದಲ್ಲಿಯೂ) ಎಲ್ಲಾ ಪದಾರ್ಥಗಳೂ ಮೂರು ಕಾಲಗಳಲ್ಲಿಯೂ ಅಡಕವಾಗಿರುವವು ; ಏಕೆಂದರೆ ಅದು (ಎಲ್ಲಕ್ಕೂ)ಕಾರಣವಾಗಿ

1. ಸತ್ಯಜ್ಞಾನಾನಂತವೆಂದು ಹೇಳಿದ.

2. ಏಕೆಂದರೆ ಈ ಮೂರೂ ಅಲ್ಲಿ ತಿಳಿಯಬರುವವು. ಗೀ. ಭಾ. ೧೩-೧೭.

3. ಅಪವರ್ಗವೆಂದರೆ ಮುಕ್ತಿ.

4. ಬುದ್ಧಿಯೇ ಎಂದರೆ ಅಂತಃಕರಣವೇ ಬಂಧಮೋಕ್ಷಗಳಿಗೆ ಕಾರಣ.

5. "ವ್ಯಾಕೃತವಾದ ಜಗತ್ತು ಏತರಲ್ಲಿ ಹೆಣೆದುಕೊಂಡಿರುವದು ?" ಎಂಬ ಪ್ರಶ್ನೆಗೆ "ಆಕಾಶದಲ್ಲಿ" ಎಂದು ಉತ್ತರವನ್ನು ಕೊಟ್ಟು ಬಳಿಕ "ಆಕಾಶವು ಏನನ್ನು ಆಶ್ರಯಿಸಿಕೊಂಡಿದೆ ?" ಎಂದು ಗಾರ್ಗಿ ಕೇಳಲು ಯಾಜ್ಞವಲ್ಕ್ಯರು "ಅಕ್ಷರದಲ್ಲಿ" ಎಂದು ಉತ್ತರವನ್ನು ಕೊಟ್ಟಿರುತ್ತಾರೆ. ಆದ್ದರಿಂದ ಭೂತಾಕಾಶಕ್ಕಿಂತಲೂ ಅವ್ಯಾಕೃತಾಕಾಶವು ಬ್ರಹ್ಮಕ್ಕೆ ಹತ್ತಿರವೆಂದಾಯಿತು.

6. 'ಗುಹಾಯಾಂ ವ್ಯೋಮನ್' ಎಂಬ ಮಾತುಗಳು ಬೇರೆಬೇರೆಯ ಪದಾರ್ಥಗಳನ್ನು ತಿಳಿಸುತ್ತವೆ ಎಂದು ಇಟ್ಟುಕೊಂಡು ಅರ್ಥವನ್ನು ಮಾಡಿತ್ತು ; ಈಗ ಅವುಗಳಿರಡೂ ಒಂದೇ ವಸ್ತುವನ್ನು ಹೇಳುತ್ತವೆ ಎಂದು ಇಟ್ಟುಕೊಂಡು ಅವ್ಯಾಕೃತಗುಹೆ ಎಂಬ ಆಕಾಶದಲ್ಲಿ ಎಂದು ಅರ್ಥವನ್ನು ಮಾಡಿರುತ್ತದೆ.

ರುತ್ತದೆ, ಮತ್ತು (ಎಲ್ಲಕ್ಕಿಂತಲೂ) ಸೂಕ್ಷ್ಮವಾಗಿರುತ್ತದೆ. ಆ (ಗುಹೆಯಲ್ಲಿ) ಬ್ರಹ್ಮವು ಇಡಲ್ಪಟ್ಟಿರುತ್ತದೆ (ಎಂದರ್ಥ).[1]

ಆದರೆ (ಇಲ್ಲಿ) 'ಪರಮವಾದ ವ್ಯೋಮ' ಎಂಬುದು ಹೃದಯದ (ಆಕಾಶವೇ) ಎಂಬುದು ಯುಕ್ತ ; ಏಕೆಂದರೆ (ಈ) ವ್ಯೋಮವನ್ನು ಅರಿವಿಗೆ ಅಂಗವಾಗಿ[2] ಹೇಳ ಬೇಕೆಂದು (ಶ್ರುತಿಯು) ಹೊರಟಿರುತ್ತದೆ. ''(ಆ ಬ್ರಹ್ಮವಿದ್ಯೆಯಲ್ಲಿ) ಅದು ಶರೀರದ-ಹೊರಗೆ ಯಾವ ಆಕಾಶವಿದೆಯೋ ಅದೇ'' ''ಶರೀರದ ಒಳಗೆ ಯಾವ ಆಕಾಶವಿದೆಯೋ ಅದೇ'', ಹೃದಯದೊಳಗೆ ಯಾವ ಆಕಾಶವಿದೆಯೋ (ಅದೇ ಬ್ರಹ್ಮ)'' (ಛಾಂ. ೩-೧೨-೭, ೮, ೯) ಎಂಬ ಬೇರೊಂದು ಶ್ರುತಿಯ ಪ್ರಮಾಣ ದಿಂದ ಹೃದಯದ ವ್ಯೋಮವು ಪರಮವಾಗಿದೆ[3] ಎಂದು ಪ್ರಸಿದ್ಧವಾಗಿರು ತ್ತದೆ(ಯಲ್ಲವೆ) ? ಆ ಹೃದಯದ ವ್ಯೋಮದಲ್ಲಿ ಯಾವ ಬುದ್ಧಿ ಎಂಬ ಗುಹೆ ಯುಂಟೋ ಅದರಲ್ಲಿ ಬ್ರಹ್ಮವು ಇಡಲ್ಪಟ್ಟಿರುತ್ತದೆ. ಅದರ ವೃತ್ತಿಯಿಂದ ವಿಂಗಡ ವಾಗಿ[4] ತಿಳಿಯಬರುತ್ತದೆಯಾದ್ದರಿಂದ (ಅದರಲ್ಲಿಡಲ್ಪಟ್ಟಿದೆ ಎಂದು ಹೇಳಿದೆ). ಹಾಗಲ್ಲದೆ ಇದ್ದರೆ ಬ್ರಹ್ಮಕ್ಕೆ ಒಂದಾನೊಂದು ಗೊತ್ತಾದ ದೇಶದ ಅಥವಾ ಕಾಲದ ಸಂಬಂಧವು ಇರುವಹಾಗೆಯೇ ಇಲ್ಲ ; ಏಕೆಂದರೆ ಅದು ಎಲ್ಲೆಲ್ಲಿಯೂ ಇದ್ದು ಕೊಂಡಿರುತ್ತದೆ, ಯಾವ ವಿಶೇಷಗಳೂ ಇಲ್ಲದ್ದಾಗಿರುತ್ತದೆ.[5]

---

1. ಅವ್ಯಾಕೃತವು ಕಾರಣವು ; ಅದರಿಂದಾಚೆಗೆ ನೋಡಿದರೆ ಕಾರ್ಯಕಾರಣಗಳೆರಡನ್ನೂ ಮೀರಿದ ಬ್ರಹ್ಮವು ಉಳಿಯುವದು ಎಂದರ್ಥ.

2. ಬ್ರಹ್ಮವನ್ನು ಅರಿತುಕೊಳ್ಳುವದು ಹೇಗೆ ? - ಎಂಬುದನ್ನು ತಿಳಿಸುವಾಗ ಪ್ರತ್ಯಕ್ಷಕ್ಕೆ ಬರುವದನ್ನೇ ತಿಳಿಸಬೇಕು. ಅವ್ಯಾಕೃತದಲ್ಲಿದೆ ಎಂದರೆ ಕಾರಣವೇ ಪರೋಕ್ಷವಾಗಿರುವದ ರಿಂದ ಬ್ರಹ್ಮವೂ ಪರೋಕ್ಷವೆಂದಾಗುತ್ತದೆ.

3. ಛಾಂದೋಗ್ಯದಲ್ಲಿ ಹೃದಯಾಕಾಶವನ್ನು ಬ್ರಹ್ಮವೆಂದು ಉಪಾಸನೆಮಾಡುವದಕ್ಕೆ ಕಾರಣವನ್ನು ಹೇಳುವಾಗ ಆ ಆಕಾಶವು ಎಲ್ಲಕ್ಕೂ ಉತ್ಕೃಷ್ಟವೆಂದು ತಿಳಿಸಿದೆ.

4. 'ನಿಹಿತಮ್' ಎಂದರೆ 'ಬುದ್ಧಿವೃತ್ತಿಯಿಂದ ತಿಳಿಯಬರುವದು' ಎಂದು ಅರ್ಥ ಮಾಡದೆ, ಇಡಲ್ಪಟ್ಟಿರುವದು, ಇರುವದು - ಎಂದು ಅಕ್ಷರಾರ್ಥವನ್ನೇ ಇಟ್ಟುಕೊಂಡರೆ ಸರ್ವಗತವೂ ನಿರ್ವಿಶೇಷವೂ ಆದದ್ದು ಹೃದಯದಲ್ಲಿದೆ, ಒಂದು ಗೊತ್ತಾದ ವಿಶೇಷವುಳ್ಳದ್ದು ಎಂದು ಶ್ರುತಿಯು ತನಗೆ ತಾನೇ ವಿರುದ್ಧವಾಗಿ ಹೇಳಿದಂತೆ ಆಗುತ್ತದೆ ಎಂದಭಿಪ್ರಾಯ. ಮುಂ. ಭಾ. ೨-೨-೬ ರಲ್ಲಿ 'ಬ್ರಹ್ಮಪುರೇ' ಎಂಬುದರ ವ್ಯಾಖ್ಯಾನವನ್ನು ನೋಡಿ.

5. ಪರಮೇ ವ್ಯೋಮನ್ ಗುಹಾಯಾಂ ನಿಹಿತಮ್ - ಉತ್ಕೃಷ್ಟವಾದ ಹೃದಯ ವೆಂಬ ವ್ಯೋಮದಲ್ಲಿರುವ ಬುದ್ಧಿ ಎಂಬ ಗುಹೆಯಲ್ಲಿ ಸಾಕ್ಷಿಯಾಗಿ ತಿಳಿಯಬರುತ್ತದೆ - ಎಂದು ಅನ್ವಯಮಾಡಿಕೊಳ್ಳಬೇಕೆಂದು ಭಾವ. ಕೇ. ಭಾ. ಭಾ. ೫೨-೫೩. 'ಪ್ರತಿಬೋಧವಿದಿತಮ್' ಎಂಬುದರ ವಿವರವನ್ನು ನೋಡಿರಿ.

ಬ್ರಹ್ಮಜ್ಞಾನದ ಫಲ

(ಭಾಷ್ಯ)

ಗರ್ಭ. ಸಃ ಏವಂ ಬ್ರಹ್ಮ ವಿಜಾನನ್ ಕಿಮ್ ಇತಿ ? ಆಹ - ಅಶ್ನುತೇ ಭುಙ್ಕ್ತೇ ಸರ್ವಾನ್ ನಿರವಶೇಷಾನ್[1] ಕಾಮಾನ್ (ಕಾಮ್ಯ)[2] ಭೋಗಾನ್ ಇತ್ಯರ್ಥಃ । ಕಿಮ್ ಅಸ್ಮದಾದಿವತ್ ಪುತ್ರಸ್ವರ್ಗಾದೀನ್ ಪರ್ಯಾಯೇಣ ? ನೇತ್ಯಾಹ -ಸಹ ಯುಗಪತ್ ವಿಕಕ್ಷಣೋಪಾರೂಢಾನೇವ ವಿಕಯಾ ಉಪಲಬ್ಧ್ಯಾ ಸವಿತೃಪ್ರಕಾಶ ವನ್ನಿತ್ಯಯಾ ಬ್ರಹ್ಮಸ್ವರೂಪಾವ್ಯತಿರಿಕ್ತಯಾ ಯಾಮ್ ಅವೋಚಾಮ 'ಸತ್ಯಂ ಜ್ಞಾನಮನನ್ತಮ್' ಇತಿ । ವಿತತ್ ತದುಚ್ಯತೇ 'ಬ್ರಹ್ಮಣಾ ಸಹ' ಇತಿ । ಬ್ರಹ್ಮ ಭೂತೋ ವಿದ್ವಾನ್ ಬ್ರಹ್ಮಸ್ವರೂಪೇಣೈವ ಸರ್ವಾನ್ ಕಾಮಾನ್ ಸಹ ಅಶ್ನುತೇ । ನ ಯಥಾ ಉಪಾಧಿಕೃತೇನ ಸ್ವರೂಪೇಣ ಆತ್ಮನೋ[3] ಜಲಸೂರ್ಯಕಾದಿವತ್ ಪ್ರತಿಬಿಮ್ಬಭೂತೇನ ಸಾಂಸಾರಿಕೇಣ ಧರ್ಮಾದಿನಿಮಿತ್ತಾಪೇಕ್ಷಾನ್ ಚಕ್ಷುರಾದಿ ಕರಣಾಪೇಕ್ಷಾಂಶ್ಚ ಕಾಮಾನ್ ಪರ್ಯಾಯೇಣ ಅಶ್ನುತೇ ಲೋಕಃ, ಕಥಂ ತರ್ಹಿ ? ಯಥೋಕ್ತೇನ ಪ್ರಕಾರೇಣ ಸರ್ವಜ್ಞೇನ ಸರ್ವಗತೇನ ಸರ್ವಾತ್ಮನಾ ನಿತ್ಯ ಬ್ರಹ್ಮಾತ್ಮಸ್ವರೂಪೇಣ ಧರ್ಮಾದಿನಿಮಿತ್ತಾನಪೇಕ್ಷಾನ್ ಚಕ್ಷುರಾದಿಕರಣ ನಿರಪೇಕ್ಷಾಂಶ್ಚ ಸರ್ವಾನ್ ಕಾಮಾನ್ ಸಹೈವ ಅಶ್ನುತೇ ಇತ್ಯರ್ಥಃ । ವಿಪಶ್ಚಿತಾ ಮೇಧಾವಿನಾ ಸರ್ವಜ್ಞೇನ । ತದ್ ಹಿ ವೈಪಶ್ಚಿತ್ಯಮ್ ಯತ್ ಸರ್ವಜ್ಞತ್ವಮ್ । ತೇನ ಸರ್ವಜ್ಞಸ್ವರೂಪೇಣ ಬ್ರಹ್ಮಣಾ ಅಶ್ನುತೇ ಇತಿ । ಇತಿಶಬ್ದೋ ಮನ್ತ್ರಪರಿ ಸಮಾಪ್ತ್ಯರ್ಥಃ ॥

(ಭಾಷ್ಯಾರ್ಥ)

ಅವನು ಎಂದರೆ ಹೀಗೆ[4] ಬ್ರಹ್ಮವನ್ನು ಅರಿಯುವಾತನು. '(ಅರಿಯುವಾತನು) ಏನು ? ಎಂದರೆ (ಶ್ರುತಿ) ಹೇಳುತ್ತದೆ. (ಅವನು) ಎಲ್ಲಾ ಒಂದೂ ಉಳಿಯದಂತೆ ಕಾಮಗಳನ್ನು ಎಂದರೆ (ಎಲ್ಲಾ) ಬಯಸತಕ್ಕ ಭೋಗಗಳನ್ನು ಪಡೆದುಕೊಳ್ಳುತ್ತಾನೆ, ಅನುಭವಿಸುತ್ತಾನೆ ಎಂದರ್ಥ. ನಮ್ಮಂಥವರು[5] ಮಕ್ಕಳು, ಸ್ವರ್ಗ - ಮುಂತಾದ

1. 'ನಿರವಶಿಷ್ಯಾನ್' ಆ॥ ಪಾಠ.
2. ಕಾಮ್ಯ ಎಂಬ ಮಾತು ವಾ॥ ಪಾಠದಲ್ಲಿ ಮಾತ್ರ ಇದೆ.
3. 'ಆತ್ಮನಾ' ಎಂಬ ಆ॥ ಪಾಠಕ್ಕಿಂತ ಈ ವಾ॥ ಕಾ॥ ಪಾಠವೇ ಉತ್ತಮ.
4. ಬುದ್ಧಿಗೆ ಸಾಕ್ಷಿಯಾಗಿರುವದರಿಂದ ಅರಿಯುವಾತನ ಆತ್ಮನೇ ಎಂದು.
5 ಜ್ಞಾನಿಗಳಲ್ಲದ ಎಲ್ಲಾ ಜೀವರುಗಳೂ.

(ಭೋಗ)ಗಳನ್ನು (ಅನುಭವಿಸುವಂತೆ) ಒಂದೊಂದಾಗಿ ಅನುಭವಿಸುತ್ತಾನೇನು ? - ಎಂದರೆ (ಶ್ರುತಿಯು) ಇಲ್ಲ (ಎಂದು ಉತ್ತರವನ್ನು) ಹೇಳುತ್ತದೆ. ಸಹ ಎಂದರೆ ಒಂದೇ ಕಾಲದಲ್ಲಿ ಒಂದೇ ಕ್ಷಣದಲ್ಲಿ ಸೇರಿರುವ (ಕಾಮ)ಗಳನ್ನೇ ಒಂದೇ ಅರಿವಿನಿಂದ, ಯಾವದನ್ನು (ಹಿಂದೆ) ''ಸತ್ಯಂ ಜ್ಞಾನಮನನ್ತಮ್'' ಎಂದು ಹೇಳಿದ್ದೆವೋ[1] (ಆ) ಸೂರ್ಯನ ಬೆಳಕಿನಂತೆ ನಿತ್ಯವಾಗಿರುವ ಬ್ರಹ್ಮಸ್ವರೂಪಕ್ಕಿಂತ ಬೇರೆಯಲ್ಲದ[2] ಒಂದೇ ಅರಿವಿನಿಂದ (ಅನುಭವಿಸುತ್ತಾನೆ). ''ಬ್ರಹ್ಮಣಾ ಸಹ'' (ಬ್ರಹ್ಮವಾಗಿ ಒಮ್ಮೆಗೇ) ಎಂಬುದರ ಅರ್ಥವಿದು.[3] ಜ್ಞಾನಿಯು ಬ್ರಹ್ಮವಾಗಿ ಬ್ರಹ್ಮಸ್ವರೂಪದಿಂದಲೇ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಪಡೆದುಕೊಳ್ಳುತ್ತಾನೆ. ಉಪಾಧಿಯಿಂದಾಗಿದ್ದು ಜಲಸೂರ್ಯಕವೇ[4] ಮುಂತಾದ್ದರಂತೆ ಆತ್ಮನ ಪ್ರತಿಬಿಂಬವಾಗಿರುವ ಸಂಸಾರಿಸ್ವರೂಪದಿಂದ ಧರ್ಮವೇ ಮುಂತಾದ ನಿಮಿತ್ತಗಳನ್ನು ಬಯಸುವ ಮತ್ತು ಚಕ್ಷುರಾದೀಂದ್ರಿಯಗಳನ್ನು ಬಯಸುವ[5] ಕಾಮಗಳನ್ನು ಒಂದೊಂದಾಗಿ ಜನರು ಹೇಗೆ ಅನುಭವಿಸುತ್ತಾರೋ ಹಾಗಲ್ಲ. ಮತ್ತೆ ಹೇಗೆ ? - ಎಂದರೆ ಹಿಂದೆ ಹೇಳಿದ ಸರ್ವಜ್ಞವೂ ಸರ್ವಗತವೂ ಸರ್ವಾತ್ಮವೂ ಆಗಿರುವ ನಿತ್ಯವಾದ ಬ್ರಹ್ಮಸ್ವರೂಪದಿಂದ ಧರ್ಮವೇ ಮುಂತಾದ ನಿಮಿತ್ತಗಳನ್ನು ಬಯಸದ ಮತ್ತು ಚಕ್ಷುರಾದೀಂದ್ರಿಯಗಳನ್ನು ಬಯಸದ ಎಲ್ಲಾ ಕಾಮಗಳನ್ನೂ ಒಂದೇ ಕಾಲದಲ್ಲಿಯೇ ಅನುಭವಿಸುತ್ತಾನೆ ಎಂದರ್ಥ. ವಿಪಶ್ಚಿತನಾದ ಎಂದರೆ ಜ್ಞಾನಿನಾದ, ಸರ್ವಜ್ಞ

1. ಜ್ಞಾನವೆಂದರೆ ಜ್ಞಪ್ತಿಯು, ಅದು ಬ್ರಹ್ಮಸ್ವರೂಪವೇ ಎಂದು ಹಿಂದೆ ಭಾ. ಭಾ. ೯೯ ರಲ್ಲಿ ಹೇಳಿತ್ತು.

2. ವೃತ್ತಿಜ್ಞಾನವಾಗಿದ್ದರೆ ವಿಷಯದ ಆಕಾರವಾಗಿ ಮಾರ್ಪಡಬೇಕಾಗಿತ್ತು ; ಬ್ರಹ್ಮಸ್ವರೂಪವೇ ಆಗಿರುವದರಿಂದ ಇದು ನಿತ್ಯವಾಗಿದೆ.

3. ಬ್ರಹ್ಮದೊಡನೆ ಎಂದರ್ಥವಲ್ಲ ; ಏಕೆಂದರೆ ಇದು ಭೇದವನ್ನೊಪ್ಪುವ ಉಪಾಸನಾ ಪ್ರಕರಣವಲ್ಲ.

4. ನೀರಿನಲ್ಲಿ ಕಾಣುವ ಸೂರ್ಯನ ಪ್ರತಿಬಿಂಬ. ಈ ದೃಷ್ಟಾಂತವನ್ನು ಜೀವನಿಗೆ ಭಾಷ್ಯದಲ್ಲಿ ಆಗಾಗ್ಗೆ ಕೊಡುವದುಂಟು ಜೀವತ್ವವು ಕಲ್ಪಿತವೆಂದೂ ಜೀವನು ನಿಜವಾಗಿ ಬ್ರಹ್ಮಕ್ಕಿಂತ ಬೇರೆಯಲ್ಲವೆಂದೂ ಇದರಿಂದ ಸ್ಫುಟವಾಗುತ್ತದೆ. ಪ್ರ. ಭಾ. ೪-೧೦, ಗೀ. ಭಾ. ೧೫-೭, ಸೂ. ಭಾ. ೨-೩-೪೬, ೨-೩-೫೦, ೩-೨-೧೮. ಛಾಂ. ಭಾ. ೬-೩-೨, ಬೃ. ಭಾ. ೧-೪-೭.

5. ಜೀವನು ಹಿಂದೆ ತಾನು ಮಾಡಿದ ಕರ್ಮಕ್ಕನುಗುಣವಾಗಿ ತನ್ನ ಕರಣಗಳನ್ನು ಉಪಯೋಗಿಸಿಕೊಂಡೇ ಫಲವನ್ನುಣ್ಣಬೇಕಾಗಿರುವದರಿಂದ ಒಂದೊಂದಾಗಿಯೇ ಭೋಗಗಳನ್ನು ಅನುಭವಿಸಬೇಕು.

ರೂಪವಾದ ; ಏಕೆಂದರೆ ಸರ್ವಜ್ಞವಾಗಿರುವದೇ ಜ್ಞಾನತನವು.[1] ಆ ಸರ್ವಜ್ಞ ಸ್ವರೂಪವಾದ ಬ್ರಹ್ಮವಾಗಿ (ಕಾಮಗಳನ್ನೆಲ್ಲ ಒಮ್ಮೆಗೇ) ಪಡೆದುಕೊಳ್ಳತ್ತಾನೆ ಎಂದು (ಅರ್ಥ). ಇತಿಶಬ್ದವನ್ನು ಉಪಯೋಗಿಸಿರುವದು ಮಂತ್ರವು (ಇಲ್ಲಿಗೆ) ಮುಗಿಯಿತೆಂದು ತಿಳಿಸುವದಕ್ಕೆ.

೨. ಬ್ರಹ್ಮದ ಆನಂತ್ಯ

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೧೧೦. ಸರ್ವ ಏವ ವಲ್ಲ್ಯರ್ಥೋ ''ಬ್ರಹ್ಮವಿದಾಪ್ನೋತಿ ಪರಮ್'' ಇತಿ ಬ್ರಾಹ್ಮಣವಾಕ್ಯೇನ ಸೂತ್ರಿತಃ । ಸ ಚ ಸೂತ್ರಿತೋಽರ್ಥಃ ಸಂಕ್ಷೇಪತೋ ಮಂತ್ರೇಣ ವ್ಯಾಖ್ಯಾತಃ । ಪುನಸ್ತಸ್ಯೈವ ವಿಸ್ತರೇಣ ಅರ್ಥನಿರ್ಣಯಃ ಕರ್ತವ್ಯಃ ಇತಿ ಉತ್ತರಃ ತದ್ವೃತ್ತಿಸ್ಥಾನೀಯೋ ಗ್ರನ್ಥಃ ಆರಭ್ಯತೇ ''ತಸ್ಮಾದ್ವಾ ಏತಸ್ಮಾತ್'' ಇತ್ಯಾದಿಃ ॥

(ಭಾಷ್ಯಾರ್ಥ)

(ಈ) ಇಡಿಯ ವಲ್ಲಿಯ ಅರ್ಥವನ್ನು ''ಬ್ರಹ್ಮವನ್ನು ಬಲ್ಲವನು ಪರವನ್ನು ಪಡೆದುಕೊಳ್ಳುತ್ತಾನೆ'' ಎಂಬ **ಬ್ರಾಹ್ಮಣವಾಕ್ಯ**[2]ದಿಂದ ಸೂತ್ರರೂಪವಾಗಿ ಹೇಳಲಾಗಿದೆ. ಆ ಸೂತ್ರಿತವಾದ ವಿಷಯವನ್ನು ('ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' ಎಂಬ) ಮಂತ್ರದಿಂದ ಸಂಕ್ಷೇಪವಾಗಿ ವಿವರಿಸಿದ್ದಾಗಿದೆ.[3] ಮತ್ತೂ ಅದರ[4] ಅರ್ಥವನ್ನೇ ವಿಸ್ತಾರವಾಗಿ ನಿರ್ಣಯಮಾಡಬೇಕಾಗಿರುವದರಿಂದ ಮುಂದಿನ ಅದರ ಮೇಲಿನ ವೃತ್ತಿಯಂತಿರುವ[5] - ''ತಸ್ಮಾದ್ವಾ ಏತಸ್ಮಾತ್'' ಮುಂತಾದ ಗ್ರಂಥವನ್ನು ಆರಂಭಿಸುತ್ತದೆ.

---

1. ಯಾವ ಜ್ಞಾನವು ಸ್ವಲ್ಪ ವಿಷಯಗಳನ್ನೇ ಬೆಳಗುವದೋ, ಅದೂ ಕ್ರಮಕ್ರಮವಾಗಿ ಬೆಳಗುವದೋ, ಅದು ನಿಜವಾದ ಜ್ಞಾನವಲ್ಲ. ಆದ್ದರಿಂದ ಸರ್ವಜ್ಞವಾದ ಬ್ರಹ್ಮಚೈತನ್ಯವನ್ನು 'ವಿಪಶ್ಚಿತ್' ಎಂದು ಕರೆದಿದೆ - ಎಂದರ್ಥ.

2. ಬ್ರಹ್ಮಾನಂದವಲ್ಲಿಯು ತೈತ್ತಿರೀಯಬ್ರಾಹ್ಮಣಕ್ಕೆ ಸೇರಿದ್ದು

3. ಮಂತ್ರವನ್ನು ಉದಾಹರಿಸಿ ಸ್ಪಷ್ಟಗೊಳಿಸಿದೆ.

4. ಸೂತ್ರವಾಕ್ಯದ.

5. ಭಾಷ್ಯದಂತಿರುವ. ಸೂತ್ರವಾಕ್ಯಕ್ಕಿಂತ ಮಂತ್ರವು ವಿಸ್ತಾರವಾಗಿದೆ ; ಮುಂದಿನ ಗ್ರಂಥಭಾಗವು ಇನ್ನೂ ವಿಸ್ತಾರವಾಗಿ ಅದನ್ನು ವಿವರಿಸುತ್ತದೆ.

ಬ್ರಹ್ಮವು ಅನಂತವೆಂಬುದು ಹೇಗೆ ?

(ಭಾಷ್ಯ)

೧೧೧. ತತ್ರ ಚ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" ಇತ್ಯುಕ್ತಂ ಮನ್ತ್ರಾದೌ । ತತ್ ಕಥಂ ಸತ್ಯಂ (ಜ್ಞಾನಮ್)[1] ಅನನ್ತಂ ಚೇತಿ ? ಅತ ಆಹ ತತ್ರ[2] ತ್ರಿವಿಧಂ ಹಿ ಆನನ್ತ್ಯಮ್ ದೇಶತಃ, ಕಾಲತಃ, ವಸ್ತುತಶ್ಚ ಇತಿ । ತದ್ ಯಥಾ ದೇಶತೋಽನನ್ತ ಆಕಾಶಃ । ನ ಹಿ ದೇಶತಃ ತಸ್ಯ ಪರಿಚ್ಛೇದೋಽಸ್ತಿ । ನ ತು ಕಾಲತಶ್ಚ ಆನನ್ತ್ಯಮ್ ವಸ್ತುತಶ್ಚ ಆಕಾಶಸ್ಯ । ಕಸ್ಮಾತ್ ? ಕಾರ್ಯತ್ವಾತ್ । ನೈವಂ ಬ್ರಹ್ಮಣಃ ಆಕಾಶವತ್ ಕಾಲತೋಽಪಿ ಅನ್ತವತ್ತ್ವಮ್ । ಅಕಾರ್ಯತ್ವಾತ್ । ಕಾರ್ಯಂ ಹಿ ವಸ್ತು ಕಾಲೇನ ಪರಿಚ್ಛಿದ್ಯತೇ । ಅಕಾರ್ಯಂ ಚ ಬ್ರಹ್ಮ । ತಸ್ಮಾತ್ ಕಾಲತೋಽಪ್ಯಾನನ್ತ್ಯಮ್ । ತಥಾ ವಸ್ತುತಃ । ಕಥಂ ಪುನಃ ವಸ್ತುತಃ ಆನನ್ತ್ಯಮ್ ? ಸರ್ವಾನನ್ಯತ್ವಾತ್ । ಭಿನ್ನಂ ಹಿ ವಸ್ತು ವಸ್ತ್ವನ್ತರಸ್ಯ ಅನ್ಯೋ ಭವತಿ । ವಸ್ತ್ವನ್ತರಬುದ್ಧಿರ್ಹಿ ಪ್ರಸಕ್ತಾದ್[3] ವಸ್ತ್ವನ್ತರಾತ್ ನಿವರ್ತತೇ. ಯತೋ ಯಸ್ಯ ಬುದ್ಧೇರ್ನಿವೃತ್ತಿಃ ಸ ತಸ್ಯಾನ್ತಃ । ತದ್ ಯಥಾ ಗೋತ್ವಬುದ್ಧಿಃ ಅಶ್ವತ್ವಾತ್ ನಿವರ್ತತೇ ಇತಿ ಅಶ್ವತ್ವಾನ್ತಂ ಗೋತ್ವಮ್ ಇತಿ ಅನ್ತವದೇವ ಭವತಿ । ಸ ಚ ಅನ್ತಃ ಭಿನ್ನೇಷು ವಸ್ತುಷು ದೃಷ್ಟಃ । ನೈವಂ ಬ್ರಹ್ಮಣೋ ಭೇದಃ । ಅತೋ ವಸ್ತುತೋಽಪಿ ಆನನ್ತ್ಯಮ್ ॥

(ಭಾಷ್ಯಾರ್ಥ)

ಅದರಲ್ಲಿಯೂ ಮಂತ್ರದ ಮೊದಲಿನಲ್ಲಿ ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ ಆಗಿರುವದೆಂದು ಹೇಳಿದೆ(ಯಷ್ಟೈ); ಅದು ಸತ್ಯವೂ (ಜ್ಞಾನವೂ) ಅನಂತವೂ ಎಂಬುದು ಹೇಗೆ ? - ಎಂಬುದಕ್ಕೆ (ಈ ಉತ್ತರವನ್ನು ಶ್ರುತಿ) ಹೇಳುತ್ತದೆ.[4] ಇವುಗಳಲ್ಲಿ[5] ಆನನ್ತ್ಯವೆಂಬುದು ದೇಶದಿಂದ, ಕಾಲದಿಂದ, ವಸ್ತುವಿನಿಂದ

---

1. 'ಜ್ಞಾನಮ್' ಎಂಬ ಮಾತು ವಾ॥ ಪಾಠದಲ್ಲಿಲ್ಲ. ಈ ಭಾಷ್ಯಭಾಗದಲ್ಲಿ ಜ್ಞಾನದ ವಿಚಾರವನ್ನು ಮಾಡಿಲ್ಲವೆಂಬ ಕಾರಣದಿಂದ ಬರೆದವರು ಇದನ್ನು ಕೈಬಿಟ್ಟಿರುವರೋ ಮೂಲಭಾಷ್ಯದಲ್ಲಿಯೇ ಅದು ಇರಲಿಲ್ಲವೋ, ತಿಳಿಯದು. ಸತ್ಯಾನಂತಗಳ ವಿಚಾರವು ಜ್ಞಾನಕ್ಕೂ ಉಪಲಕ್ಷಣವೆಂದು ಭಾವಿಸುವದಕ್ಕೂ ಬರುತ್ತದೆ.

2. ಈ ಮಾತು ವಾ॥ ಪಾಠದಲ್ಲಿಲ್ಲ.

3. 'ಪ್ರಸಕ್ತಾ' ಎಂದು ಆ॥ ಪಾಠ.

4. ಸೃಷ್ಟಿಶ್ರುತಿಗೆ ಬ್ರಹ್ಮಸ್ವರೂಪವನ್ನು ತಿಳಿಸುವದರಲ್ಲಿಯೇ ತಾತ್ಪರ್ಯ ; ಸೃಷ್ಟಿಯಲ್ಲಿ ತಾತ್ಪರ್ಯವಿಲ್ಲ ಎಂದು ಭಾವ. ಸೂ. ಭಾ. ೧-೪-೧೪, ೪-೩-೧೪.

5. ಸತ್ಯತ್ವ, ಜ್ಞಾನತ್ವ, ಆನಂತ್ಯ - ಎಂಬ ಮೂರರಲ್ಲಿ.

ಎಂದು ಮೂರು ಬಗೆಯಾಗಿರುತ್ತದೆ. ಅದು ಹೇಗೆಂದರೆ, ಆಕಾಶವು ದೇಶದಿಂದ ಅನಂತವಾಗಿರುತ್ತದೆ ; ಏಕೆಂದರೆ ದೇಶದಿಂದ ಅದಕ್ಕೆ (ಇಷ್ಟೇಂಬ) ಎಳತೆ ಇರುವ ದಿಲ್ಲ.[1] ಆದರೆ ಆಕಾಶಕ್ಕೆ ಕಾಲದಿಂದಲೂ ವಸ್ತುವಿನಿಂದಲೂ ಆನಂತ್ಯವಿರುವದಿಲ್ಲ. ಏಕೆಂದರೆ ಅದು ಕಾರ್ಯವಾಗಿರುತ್ತದೆ.[2] (ಆದರೆ) ಹೀಗೆ ಆಕಾಶದಂತೆ ಬ್ರಹ್ಮವು ಕಾಲದಿಂದಲೂ ಅಂತವುಳ್ಳದ್ದಾಗಿರುವದಿಲ್ಲ ; ಏಕೆಂದರೆ ಅದು ಕಾರ್ಯವಲ್ಲ.[3] ಕಾರ್ಯವಾದ ವಸ್ತುವೇ ಅಲ್ಲವೆ, ಕಾಲದಿಂದ (ಎಲ್ಲಿಗೆ ಮುಗಿಯಿತೆಂಬ) ಎಳತೆಯುಳ್ಳದ್ದಾಗಿರುತ್ತದೆ ? ಆದರೆ ಬ್ರಹ್ಮವು ಕಾರ್ಯವಲ್ಲ. ಆದ್ದರಿಂದ (ಬ್ರಹ್ಮಕ್ಕೆ) ಕಾಲದಿಂದಲೂ ಆನಂತ್ಯವಿದೆ. ಹಾಗೆಯೇ ವಸ್ತುವಿನಿಂದಲೂ (ಆನಂತ್ಯವಿದೆ). ಇನ್ನು (ಬ್ರಹ್ಮಕ್ಕೆ) ವಸ್ತುವಿನಿಂದ ಆನಂತ್ಯ(ವಿದೆ) ಎಂಬುದು ಹೇಗೆ ? (ಎಂದು ಕೇಳಿದರೆ), ಅದು ಎಲ್ಲದರೊಡನೆಯೂ ಅನನ್ಯವಾಗಿರುವದರಿಂದ. (ತಾನೇ) ಬೇರೆಯಾಗಿರುವ ವಸ್ತುವೇ ಮತ್ತೊಂದು ವಸ್ತುವಿನ ಅಂತವಾಗುತ್ತದೆ. (ಅದು) ಮತ್ತೊಂದು ವಸ್ತು ಎಂಬ ಬುದ್ಧಿಯೇ ಪ್ರಸಕ್ತವಾದ ಮತ್ತೊಂದು ವಸ್ತುವನ್ನು[4] ಬಿಟ್ಟುಹೋಗುವದು. ಯಾವ (ವಸ್ತು)ವಿನ ಬುದ್ಧಿಯು ಯಾವ (ವಸ್ತು)ವನ್ನುಬಿಟ್ಟು ಹೋಗುವದೋ ಅದು ಅದರ ಅಂತವು. ಅದು ಹೇಗೆಂದರೆ, ಎತ್ತೆಂಬ ಬುದ್ಧಿಯು ಕುದುರೆಯನ್ನು ಬಿಟ್ಟುಹೋಗುತ್ತದೆ ; ಆದ್ದರಿಂದ ಗೋತ್ವ ಎಂಬುದು ಅಶ್ವತ್ವದಲ್ಲಿ ಕೊನೆಗಾಣುವದರಿಂದ (ಅದು) ಅಂತವುಳ್ಳದ್ದೇ ಆಗಿರುತ್ತದೆ. ಇಂಥ ಅಂತವೆಂಬುದು ಬೇರೆ(ಬೇರೆ)ಯಾಗಿರುವ ವಸ್ತುಗಳಲ್ಲಿ(ರುವದು) ಕಂಡುಬರುತ್ತದೆ.[5] (ಆದರೆ) ಹಾಗೆ ಬ್ರಹ್ಮಕ್ಕೆ ಭೇದವಿರುವದಿಲ್ಲ.[6] ಆದ್ದರಿಂದ (ಅದಕ್ಕೆ) ವಸ್ತುವಿನಿಂದಲೂ ಆನಂತ್ಯ(ವಿದೆ).

---

1. ಆಕಾಶವು ಇಂಥಲ್ಲಿ ಇಲ್ಲ ಎಂಬುದಿಲ್ಲ, ಅದು ಸರ್ವಗತವಾಗಿದೆ.

2. ಆಕಾಶಕ್ಕೂ ಉತ್ಪತ್ತಿಯುಂಟೆಂಬುದು ಸೂ. ಭಾ. ೨-೩-೬ ರಲ್ಲಿ ಉಪಪಾದಿತವಾಗಿದೆ.

3. ಬ್ರಹ್ಮವು ಕಾರ್ಯವಲ್ಲವೆಂಬುದನ್ನು ಸೂ. ಭಾ. ೨-೩-೭ ರಲ್ಲಿ ನಿರ್ಣಯಿಸಿದೆ. ಕಾರ್ಯವು ತನ್ನ ರೂಪದಿಂದ ಹುಟ್ಟುವ ಮುಂಚೆಯೂ ನಾಶವಾದಬಳಿಕವೂ ಇರುವದಿಲ್ಲವಾದ್ದರಿಂದ ಅದಕ್ಕೆ ಕಾಲದಿಂದ ಅಂತವುಂಟು.

4. ೪ll ಪಾಠಕ್ಕೆ ''ಪ್ರಸಕ್ತವಾದ 'ಮತ್ತೊಂದು ವಸ್ತು' ಎಂಬ ಬುದ್ಧಿಯೇ ಇನ್ನೊಂದನ್ನು ಬಿಟ್ಟುಹೋಗುತ್ತದೆ'' ಎಂದು ಅರ್ಥ.

5. ಎತ್ತೆಂಬುದು ಅಶ್ವಾದಿಪ್ರಾಣಿಗಳಲ್ಲಿ ಒಂದೂ ಅಲ್ಲ, ಮನುಷ್ಯದೇವಾದಿಗಳೂ ಅಲ್ಲ, ಜಡವಸ್ತುಗಳೂ ಅಲ್ಲ, ಗೋತ್ವಬುದ್ಧಿಯು ಅನೇಕ ವಸ್ತುಗಳಲ್ಲಿ ಉಂಟಾಗುವದಿಲ್ಲವಾದ್ದರಿಂದ ಗೋತ್ವಕ್ಕೆ ವಸ್ತುವಿನಿಂದ ಅಂತವುಂಟು. ಹೀಗೆಯೇ ಮಿಕ್ಕ ಭಿನ್ನ ವಸ್ತುಗಳಿಗೂ ಅರಿಯಬೇಕು.

6. ಬ್ರಹ್ಮವು ಎಲ್ಲಕ್ಕೂ ಕಾರಣವಾಗಿರುವದರಿಂದ ಅದೇ ಎಲ್ಲವೂ ಆಗಿರುತ್ತದೆ.

(ಭಾಷ್ಯ)

೧೧೨. ಕಥಂ ಪುನಃ ಸರ್ವಾನನ್ಯತ್ವಂ ಬ್ರಹ್ಮಣ ಇತಿ ? ಉಚ್ಯತೇ । ಸರ್ವವಸ್ತುಕಾರಣತ್ವಾತ್ । ಸರ್ವೇಷಾಂ ಹಿ ವಸ್ತೂನಾಂ ಕಾಲಾಕಾಶಾದೀನಾಂ ಕಾರಣಂ ಬ್ರಹ್ಮ । ಕಾರ್ಯಾಪೇಕ್ಷಯಾ ವಸ್ತುತೋಽನ್ಯವತ್ತ್ವಮ್ ಇತಿ ಚೇತ್ । ನ । ಅನ್ಯತತ್ವಾತ್ ಕಾರ್ಯವಸ್ತುನಃ । ನ ಹಿ ಕಾರಣವ್ಯತಿರೇಕೇಣ ಕಾರ್ಯಂ ನಾಮ ವಸ್ತುತೋಽಸ್ತಿ ಯತಃ ಕಾರಣಬುದ್ಧಿರ್ವಿನಿವರ್ತೇತ । ''ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್'' (ಛಾಂ. ೬-೧-೪) ಏವಂ 'ಸದೇವ ಸತ್ಯಮ್' ಇತಿ ಶ್ರುತ್ಯನ್ತರಾತ್ ॥

(ಭಾಷ್ಯಾರ್ಥ)

ಇನ್ನು ಬ್ರಹ್ಮವು ಎಲ್ಲದರೊಡನೆಯೂ ಅನನ್ಯವಾಗಿರುತ್ತದೆ ಎಂಬುದು ಹೇಗೆ ? - ಎಂದರೆ ಹೇಳುತ್ತೇವೆ (ಕೇಳಿ). ಅದು ಎಲ್ಲಾ ವಸ್ತುಗಳಿಗೂ ಕಾರಣವಾಗಿರುವದರಿಂದ (ಎಲ್ಲದರೊಡನೆಯೂ ಅನನ್ಯವಾಗಿದೆ). ಬ್ರಹ್ಮವು ಕಾಲ, ಆಕಾಶ - ಮುಂತಾದ[1] ಎಲ್ಲಾ ವಸ್ತುಗಳಿಗೂ ಕಾರಣವಾಗಿರುತ್ತದೆ.

(ಆಕ್ಷೇಪ :-) (ಹಾಗಾದರೆ) ಕಾರ್ಯಕ್ಕೆ ಹೋಲಿಸಿದರೆ (ಬ್ರಹ್ಮವು) ಅಂತ ವುಳ್ಳ(ದ್ದೆಂದಾಯಿತಲ್ಲ) !

(ಪರಿಹಾರ :-) ಹಾಗಲ್ಲ. ಏಕೆಂದರೆ ಕಾರ್ಯವೆಂಬ ವಸ್ತು ಅನೃತವಾಗಿರುತ್ತದೆ. ಕಾರಣಕ್ಕಿಂತ ಬೇರೆಯಾಗಿ ಕಾರ್ಯವೆಂಬುದು ನಿಜವಾಗಿ ಇರುವದೇ ಇಲ್ಲ ; ಹಾಗಿದ್ದರೆತಾನೆ ಅದರಿಂದ ಕಾರಣಬುದ್ಧಿಯು (ಅದನ್ನು ಬಿಟ್ಟು) ಹೋದೀತು ?[2] ''ವಿಕಾರವು ಬರಿಯ ಹೆಸರು, ಮಾತಿನ ಕಾರ್ಯವು ; ಮಣ್ಣು ಎಂಬುದೇ ಸತ್ಯವು''

ಆದ್ದರಿಂದ ಇದು ಬ್ರಹ್ಮವಲ್ಲ ಎಂಬ ಬುದ್ಧಿ ಯಾವ ವಸ್ತುವಿನಲ್ಲಿಯೂ ತಿಳಿದವರಿಗೆ ಉಂಟಾಗುವದಿಲ್ಲ. ಆದ್ದರಿಂದ ಅದಕ್ಕೆ ವಸ್ತುವಿನಿಂದಲೂ ಅಂತವಿಲ್ಲ

1. ಕಾಲ, ಆಕಾಶ - ಮುಂತಾದವುಗಳೆಲ್ಲವೂ ಕಾರ್ಯವಾಗಬಹುದೆನ್ನುವದಕ್ಕೆ ಅವು ವಿಭಕ್ತವಾಗಿರುವದೇ ಹೇತುವೆಂದು ಸೂ. ಭಾ. ೨-೩-೭ ರಲ್ಲಿ ಹೇಳಿದೆ. ಕಾಲವೂ ಕಾರ್ಯವೆಂದದ್ದರಿಂದ ತಾರ್ಕಿಕರು ಹೇಳುವಂತೆ ಕಾರ್ಯನಿಯತಪೂರ್ವವೃತ್ತಿಯಾದದ್ದು ಕಾರಣವೆಂಬುದನ್ನು ಒಪ್ಪುವದಿಲ್ಲವೆಂದಂತೆಯೇ ಆಯಿತು

2. ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮಕ್ಕಿಂತ ಬೇರೆಯಾಗಿರುವದಿಲ್ಲವೆಂಬುದನ್ನು ಸೂ ಭಾ. ೨-೧-೧೪ ರಲ್ಲಿ ಸ್ಪಷ್ಟಗೊಳಿಸಿದೆ. ಈ ವಾದವನ್ನು ವಿವರ್ತವಾದ ಎನ್ನುತ್ತಾರೆ.

(ಭಾ. ಭಾ. ೬-೧-೪) : ಇವರಂತೆ "ಸತ್ತ್ವೇ ಸತ್ಯವ್" ಎಂಬ ಬೇರೊಂದು ಶ್ರುತಿಯೂ ಇದಕ್ಕೆ ಪ್ರಮಾಣವು.[1]

(ಭಾಷ್ಯ)

೧೧೩. ತಸ್ಮಾತ್ ಆಕಾಶಾದಿಕಾರಣತ್ವಾತ್ ದೇಶತಸ್ತ್ವಪದನನ್ತಂ ಬ್ರಹ್ಮ । ಆಕಾಶೋ ಹಿ ಅನನ್ತಃ ಇತಿ ಪ್ರಸಿದ್ಧಂ ದೇಶತಃ । ತಸ್ಯೇದಂ ಕಾರಣಮ್ । ತಸ್ಮಾತ್ ಸಿದ್ಧಂ ದೇಶತ ಆತ್ಮನ ಆನನ್ತ್ಯಮ್ ! ನ ಹಿ ಅಸರ್ವಗತಾತ್ ಸರ್ವಗತಮ್ ಉತ್ಪದ್ಯಮಾನಂ ಲೋಕೇ ಕಿಂಚಿದ್ ದೃಶ್ಯತೇ । ಅತೋ ನಿರತಿಶಯಮ್ ಆತ್ಮನ ಆನನ್ತ್ಯಂ ದೇಶತಃ । ತಥಾ ಅಕಾರ್ಯತ್ವಾತ್ ಕಾಲತಃ ತದ್ಭಿನ್ನವಸ್ತ್ವನ್ತರಾಭಾವಾಚ್ಚ ವಸ್ತುತಃ ಅತ ಏವ ನಿರತಿಶಯಸತ್ಯತ್ವಮ್ ॥

(ಭಾಷ್ಯಾರ್ಥ)

ಆದ್ದರಿಂದ ಆಕಾಶವೇ ಮುಂತಾದದ್ದಕ್ಕೂ ಕಾರಣವಾಗಿರುವದರಿಂದ ಮೊದಲನೆಯದಾಗಿ ಬಹ್ಮವು ದೇಶದಿಂದ ಅನಂತ(ವೆಂದಾಯಿತು). ಆಕಾಶವು ದೇಶದಿಂದ ಅನಂತವೆಂಬುದು ಪ್ರಸಿದ್ಧವಾಗಿದೆಯಷ್ಟೆ ? ಅದಕ್ಕೆ ಈ (ಬ್ರಹ್ಮವು) ಕಾರಣವು ಆದ್ದರಿಂದ ದೇಶದಿಂದ ಆತ್ಮನಿಗೆ ಆನಂತ್ಯವು ಸಿದ್ಧವಾಯಿತು. ಸರ್ವಗತವಲ್ಲದ್ದರಿಂದ ಸರ್ವಗತವಾದದ್ದು ಯಾವದೂ ಉಂಟಾಗುವದು ಕಂಡಿಲ್ಲವೇ ಇಲ್ಲ.[2] ಆದ್ದರಿಂದ ಆತ್ಮನಿಗೆ ದೇಶದಿಂದ ಆನಂತ್ಯವು ಮಿಗಿಲಿಲ್ಲದಂಥದ್ದು (ಎಂದಾಗುತ್ತದೆ). ಹಾಗೂ (ಅದು) ಕಾರ್ಯವಲ್ಲದ್ದರಿಂದ ಕಾಲದಿಂದ (ಆನಂತ್ಯವೂ ಸಿದ್ಧವಾಗುತ್ತದೆ). ಅದಕ್ಕಿಂತ ಬೇರೆಯಾದ ಮತ್ತೊಂದು ವಸ್ತುವಿಲ್ಲದ್ದರಿಂದ ವಸ್ತುವಿನಿಂದ (ಆನಂತ್ಯವೂ ಸಿದ್ಧವಾಗುತ್ತದೆ). ಆದ್ದರಿಂದಲೇ[3] (ಬ್ರಹ್ಮಕ್ಕೆ) ಮಿಗಿಲಿಲ್ಲದ ಸತ್ಯತ್ವವೂ ಸಿದ್ಧವಾಯಿತು.

1. ಈ ಶ್ರುತಿಯನ್ನು ಹಿಂದೆ ಭಾ. ಭಾ. ೯೮ ರಲ್ಲಿ ಬ್ರಹ್ಮವು ಸತ್ಯವೆಂಬುದಕ್ಕೆ ಪ್ರಮಾಣವಾಗಿ ಉದಾಹರಿಸಿತ್ತು. ಈಗ ಕಾರ್ಯವು ಅಸತ್ಯ, ಕಾರಣಕ್ಕಿಂತ ಬೇರೆಯಾಗಿ ಇಲ್ಲ-ಎಂಬುದಕ್ಕೆ ಪ್ರಮಾಣವಾಗಿ ಉದಾಹರಿಸಿದೆ.

2. ಪರಿಚ್ಛಿನ್ನವಾದ ಕಾರಣದಿಂದ ಪರಿಚ್ಛಿನ್ನವಸ್ತುಗಳೇ ಹುಟ್ಟುವದು ಕಂಡಿದೆ ; ಅಪರಿಚ್ಛಿನ್ನವಸ್ತುಗಳು ಹುಟ್ಟಿದ್ದನ್ನು ನಾವು ಕಂಡಿಲ್ಲ. ಸರ್ವಗತವಾದ ಆಕಾಶಾದಿಗಳು ಬ್ರಹ್ಮದಿಂದ ಹುಟ್ಟುವವೆಂದು ಶ್ರುತಿಯು ಹೇಳುವದರಿಂದ ಬ್ರಹ್ಮವು ಎಲ್ಲಕ್ಕಿಂತಲೂ ಸರ್ವಗತವಾಗಿ ಅನಂತವಾಗಿರಬೇಕೆಂದು ಸಿದ್ಧವಾಗುತ್ತದೆ. ಎಂದರ್ಥ.

3. ಅನಂತವಾದ ನಿರವಯವವಾದ ಬ್ರಹ್ಮಕ್ಕೆ ವಿಕಾರವಿರಲಾರದಾದ್ದರಿಂದಲೇ.

ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಮ್ಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಪೃಥಿವ್ಯಾ ಓಷಧಯಃ । ಓಷಧೀಭ್ಯೋಽನ್ನಮ್ । ಅನ್ನಾತ್ ಪುರುಷಃ ॥೨॥

೨. ಆ ಈ ಆತ್ಮನಿಂದಲೇ ಆಕಾಶವು ಉಂಟಾಯಿತು. ಆಕಾಶದಿಂದ ವಾಯು ; ವಾಯುವಿನಿಂದ ಅಗ್ನಿ ; ಅಗ್ನಿಯಿಂದ ಅಪ್ಪು ; ಅಪ್ಪಿನಿಂದ ಪೃಥ್ವಿ ; ಪೃಥ್ವಿಯಿಂದ ಓಷಧಿಗಳು ; ಓಷಧಿಗಳಿಂದ ಅನ್ನವು ; ಅನ್ನದಿಂದ ಪುರುಷನು.

ಸೃಷ್ಟಿಕ್ರಮ

(ಭಾಷ್ಯ)

೧೧೪. ತಸ್ಮಾತ್ ಇತಿ ಮೂಲವಾಕ್ಯಸೂತ್ರಿತಂ ಬ್ರಹ್ಮ ಪರಾಮೃಶ್ಯತೇ । ಏತಸ್ಮಾತ್ ಇತಿ ಮನ್ತ್ರವಾಕ್ಯೇನ ಅನನ್ತರಂ ಯಥಾಲಕ್ಷಿತಮ್ । ಯದ್ ಬ್ರಹ್ಮ ಆದೌ ಬ್ರಾಹ್ಮಣವಾಕ್ಯೇನ ಸೂತ್ರಿತಮ್, ಯಚ್ಚ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' ಇತಿ ಅನನ್ತರಮೇವ ಲಕ್ಷಿತಮ್, ತಸ್ಮಾತ್ ಏತಸ್ಮಾತ್ ಬ್ರಹ್ಮಣಃ । ಆತ್ಮನಃ ಆತ್ಮಶಬ್ದವಾಚ್ಯಾತ್ । ಆತ್ಮಾ ಹಿ ತತ್ ಸರ್ವಸ್ಯ । "ತತ್ ಸತ್ಯಂ ಸ ಆತ್ಮಾ" (ಛಾಂ. ೬-೮-೭) ಇತಿ ಶ್ರುತ್ಯನ್ತರಾತ್ । ಅತೋ ಬ್ರಹ್ಮ ಆತ್ಮಾ । ತಸ್ಮಾತ್ ಏತಸ್ಮಾತ್ ಬ್ರಹ್ಮಣಃ ಆತ್ಮಸ್ವರೂಪಾತ್ ಆಕಾಶಃ ಸಂಭೂತಃ ಸಮುತ್ಪನ್ನಃ । ಆಕಾಶೋ ನಾಮ ಶಬ್ದಗುಣಃ, ಅವಕಾಶಕರೋ ಮೂರ್ತದ್ರವ್ಯಾಣಾಮ್ । ತಸ್ಮಾತ್ ಆಕಾಶಾತ್ ಸ್ವೇನ ಸ್ಪರ್ಶಗುಣೇನ ಪೂರ್ವೇಣ ಚ ಆಕಾಶಗುಣೇನ[1] ಶಬ್ದೇನ ದ್ವಿಗುಣಃ ವಾಯುಃ । 'ಸಂಭೂತಃ' ಇತ್ಯನುವರ್ತತೇ । ವಾಯೋಶ್ಚ ಸ್ವೇನ ರೂಪಗುಣೇನ ಪೂರ್ವಾಭ್ಯಾಂ ಚ ತ್ರಿಗುಣಃ ಅಗ್ನಿಃ 'ಸಂಭೂತಃ' । ಅಗ್ನೇಃ ಸ್ವೇನ ರಸಗುಣೇನ ಪೂರ್ವೈಶ್ಚ ತ್ರಿಭಿಃ ಚತುರ್ಗುಣಾ ಆಪಃ 'ಸಂಭೂತಾಃ' । ಅದ್ಭ್ಯಃ ಸ್ವೇನ ಗನ್ಧಗುಣೇನ ಪೂರ್ವೈಶ್ಚ ಚತುರ್ಭಿಃ ಪಞ್ಚಗುಣಾ ಪೃಥಿವೀ 'ಸಂಭೂತಾ' । ಪೃಥಿವ್ಯಾಃ ಓಷಧಯಃ । ಓಷಧೀಭ್ಯಃ ಅನ್ನಮ್ । ಅನ್ನಾತ್ ರೇತೋರೂಪೇಣ ಪರಿಣತಾತ್ ಪುರುಷಃ ಶಿರಃ-

(ಭಾಷ್ಯಾರ್ಥ)

'ಆ' ಎಂಬ (ಮಾತಿನಿಂದ) ಮೂಲವಾಕ್ಯದಲ್ಲಿ ಸೂತ್ರಿತವಾಗಿರುವ ಬ್ರಹ್ಮವನ್ನು

1. ಇದು ವಾ॥ ಪಾಠ ; 'ಕಾರಣಗುಣೇನ' ಎಂದು ಆ॥ ಪಾಠ.

ಪರಾಮರ್ಶಿಸಿರುತ್ತದೆ 'ಈ' ಎಂಬ (ಮಾತಿನಿಂದ) ಆ ಬಳಿಕ ಲಕ್ಷಣವನ್ನು ಹೇಳಿದ ಬ್ರಹ್ಮವನ್ನು ಪರಾಮರ್ಶಿಸಿರುತ್ತದೆ. ಯಾವ ಬ್ರಹ್ಮವು ಮೊದಲು ಬ್ರಾಹ್ಮಣದ ವಾಕ್ಯದಿಂದ[1] ಸೂತ್ರಿತವಾಗಿತ್ತೋ, ಮತ್ತು ಯಾವದು ಸತ್ಯಂ ಜ್ಞಾನಮನಂತಂ ಬ್ರಹ್ಮ'' ಎಂಬ (ಮಂತ್ರದಿಂದ) ಆ ಬಳಿಕವೇ ಲಕ್ಷಣದಿಂದ ಹೇಳಲ್ಪಟ್ಟಿತೋ - ಆ ಈ ಬ್ರಹ್ಮದಿಂದ[1] (ಎಂದರ್ಥ). ಆತ್ಮನಃ ಎಂದರೆ ಆತ್ಮಶಬ್ದಕ್ಕೆ ವಾಚ್ಯವಾಗಿರುವ ಬ್ರಹ್ಮದಿಂದ[2] (ಎಂದರ್ಥ). ಏಕೆಂದರೆ ಅದು ಎಲ್ಲಕ್ಕೂ ಆತ್ಮನೇ ಆಗಿರುತ್ತದೆ. ''ಅದು ಸತ್ಯವು ; ಅದೇ ಆತ್ಮವು'' (ಛಾಂ. ೬-೮-೭) ಎಂಬ ಬೇರೊಂದು ಶ್ರುತಿಯು ಇದಕ್ಕೆ ಪ್ರಮಾಣವು. ಆದ್ದರಿಂದ ಬ್ರಹ್ಮವು ಆತ್ಮನು. ಆ ಈ ಆತ್ಮಸ್ವರೂಪವಾದ ಬ್ರಹ್ಮದಿಂದ **ಆಕಾಶವು** 'ಉಂಟಾಯಿತು', ಹುಟ್ಟಿತು. ಆಕಾಶವೆಂದರೆ ಶಬ್ದವೆಂಬ ಗುಣವುಳ್ಳದ್ದಾಗಿ ಮೂರ್ತದ್ರವ್ಯಗಳಿಗೆ ಅವಕಾಶವನ್ನುಂಟುಮಾಡುವ (ಭೂತವು).[3] ಆ ಆಕಾಶದಿಂದ[4] ತನ್ನ ಸ್ಪರ್ಶಗುಣದಿಂದಲೂ ಹಿಂದಿನ ಆಕಾಶಗುಣವಾದ ಶಬ್ದದಿಂದಲೂ[5] (ಕೂಡಿ) ಎರಡು ಗುಣವುಳ್ಳ ವಾಯು 'ಉಂಟಾಯಿತು' ಎಂದು (ಹಿಂದಿನ ಶಬ್ದವು ಇಲ್ಲಿಗೂ) ಸೇರಿಕೊಳ್ಳುತ್ತದೆ. ಮತ್ತು (ಆ) ವಾಯುವಿನಿಂದ ತನ್ನದಾದ ರೂಪಗುಣದಿಂದಲೂ ಹಿಂದಿನ ಎರಡು ಗುಣಗಳಿಂದಲೂ ಕೂಡಿ ಮೂರು ಗುಣವುಳ್ಳ ಅಗ್ನಿ 'ಉಂಟಾಯಿತು'. ಅಗ್ನಿಯಿಂದ ತನ್ನದಾದ ರಸಗುಣದಿಂದಲೂ ಹಿಂದಿನ ಮೂರು (ಗುಣ)ಗಳಿಂದಲೂ ನಾಲ್ಕು ಗುಣಗಳುಳ್ಳ ಅಪ್ಪು 'ಉಂಟಾಯಿತು'. ಅಪ್ಪಿನಿಂದ ತನ್ನದಾದ ಗಂಧಗುಣದಿಂದಲೂ ಹಿಂದಿನ ನಾಲ್ಕು (ಗುಣ)ಗಳಿಂದಲೂ (ಕೂಡಿ) ಐದು ಗುಣಗಳುಳ್ಳ ಪೃಥ್ವಿಯು 'ಉಂಟಾಯಿತು'. ಪೃಥ್ವಿಯಿಂದ ಓಷಧಿಗಳು,[6] ಓಷಧಿಗಳಿಂದ ಅನ್ನವು ; ಅನ್ನದಿಂದ (ಅದು) ರೇತಸ್ಸಿನ ರೂಪ

---

1. ''ಬ್ರಹ್ಮವಿದಾಪ್ನೋತಿ ಪರಮ್'' ಎಂಬ ವಾಕ್ಯದಿಂದ.

2. ಬ್ರಹ್ಮವು ಆತ್ಮಶಬ್ದಕ್ಕೆ ವಾಚ್ಯವೆಂಬುದೂ ಪರಮಸಿದ್ಧಾಂತವಲ್ಲ , ಏಕೆಂದರೆ ಅದರಲ್ಲಿ ಜಾತಿಯೇ ಮುಂತಾದ ಪ್ರವೃತ್ತಿನಿಮಿತ್ತಗಳಿರುವದಿಲ್ಲ. ಭಾ. ಭಾ. ೧೦೭ನ್ನು ನೋಡಿರಿ ಅವಾಚ್ಯವಾದ ಆತ್ಮವಸ್ತುವನ್ನು ಆತ್ಮಾದಿಶಬ್ದಗಳು ಹೇಗೆ ತಿಳಿಸುವವೆಂಬುದನ್ನು ಛಾಂ. ಭಾ. ೬-೨-೩ ರಲ್ಲಿ ವಿವರಿಸಿದೆ.

3. ಅದು ಏನೂ ಇಲ್ಲದ್ದೆಂಬ ಅಭಾವರೂಪವಲ್ಲ.

4. ಆಕಾಶಾದಿಗಳು ವಾಯ್ವಾದಿಗಳಿಗೆ ಕಾರಣವೆನ್ನುವಾಗ ಬ್ರಹ್ಮವೇ ಆಯಾ ರೂಪದಿಂದ ಆಯಾ ಭೂತಗಳನ್ನು ಸೃಷ್ಟಿಸುತ್ತದೆ ಎಂದರ್ಥ. ಸೂ. ಭಾ. ೨-೩-೧೬.

5. ಮುಂ. ಭಾ. ೨-೧-೩, ಪ್ರ. ಭಾ. ೬-೪ ರಲ್ಲಿಯೂ ಈ ಪ್ರಕ್ರಿಯೆ ಇದೆ.

6. ಮರ, ಗಿಡ, ಪೈರುಪಚ್ಚೆ - ಮುಂತಾದವು.

ದಿಂದ ಪರಿಣಾಮವಾದ ಒಳಿಕ ಪುರುಷನು, ಎಂದರೆ ತಲೆ ಕೈ ಮುಂತಾದ ಆಕಾರ ವುಳ್ಳ (ಮನುಷ್ಯನು[1] ಹುಟ್ಟಿದನು).

೩. ಅನ್ನಮಯಾತ್ಮ

ಅನ್ನಮಯಾತ್ಮನ ವರ್ಣನೆ

ಸ ವಾ ಏಷ ಪುರುಷೋಽನ್ನರಸಮಯಃ । ತಸ್ಯೇದಮೇವ ಶಿರಃ । ಅಯಂ ದಕ್ಷಿಣಃ ಪಕ್ಷಃ । ಅಯಮುತ್ತರಃ ಪಕ್ಷಃ । ಅಯಮಾತ್ಮಾ । ಇದಂ ಪುಚ್ಛಂ ಪ್ರತಿಷ್ಠಾ ॥೩॥

೩. ಅದೇ ಈ ಪುರುಷನು ಅನ್ನರಸಮಯನು. ಅವನಿಗೆ ಇದೇ ತಲೆ ; ಇದು ದಕ್ಷಿಣಪಕ್ಷವು ; ಇದು ಉತ್ತರಪಕ್ಷವು ; ಇದು ಆತ್ಮನು ; ಇದು ಪುಚ್ಛವು, ಪ್ರತಿಷ್ಠೆಯು.

(ಭಾಷ್ಯ)

೧೧೫. ಸ ವೈ ಏಷ ಪುರುಷಃ ಅನ್ನರಸಮಯಃ ಅನ್ನರಸವಿಕಾರಃ ಪುರುಷಾಕೃತಿಭಾವಿತಂ ಹಿ ''ಸರ್ವೇಭ್ಯೋಽಙ್ಗೇಭ್ಯಸ್ತೇಜಸ್ಸಂಭೂತಂ'' ರೇತೋ ಬೀಜಮ್ । ತಸ್ಮಾತ್ ಯೋ ಜಾಯತೇ ಸೋಽಪಿ ತಥಾ ಪುರುಷಾಕೃತಿರೇವ ಸ್ಯಾತ್ । ಸರ್ವಜಾತಿಷು ಜಾಯಮಾನಾನಾಂ ಜನಕಾಕೃತಿನಿಯಮದರ್ಶನಾತ್ ॥

(ಭಾಷ್ಯಾರ್ಥ)

ಅದೇ ಈ ಪುರುಷನು ಅನ್ನರಸಮಯನು, ಅನ್ನರಸದ ಕಾರ್ಯವು.[2] ಪುರುಷಾಕೃತಿಭಾವಿತವಾಗಿಯೇ ಅಲ್ಲವೆ, ರೇತಸ್ಸೆಂಬ ಬೀಜವು ''ಎಲ್ಲಾ ಅಂಗಗಳಿಂದಲೂ ತೇಜಸ್ಸಾಗಿ ವುಂಟಾಗುತ್ತದೆ'' ?[3] ಆದ್ದರಿಂದ ಯಾವನು ಹುಟ್ಟುತ್ತಾನೋ ಅವನೂ ಹಾಗೆಯೇ ಪುರುಷಾಕೃತಿಯುಳ್ಳವನೇ ಆಗುವನು. ಏಕೆಂದರೆ ಯಾವ ಜಾತಿಗಳಲ್ಲಿಯೇ

1. ಪುರುಷನೆಂದರೆ 'ಗಂಡಸು' ಎಂದು ಅರ್ಥವಲ್ಲ.

2. ರಸ, ರಕ್ತ, ಮಾಂಸ. ಮೇದಸ್ಸು, ಅಸ್ಥಿ, ಮಜ್ಜೆ - ಈ ಕ್ರಮದಿಂದ ಪರಿಣಾಮ ವಾಗಿ ರೇತಸ್ಸುಂಟಾಗಿ ಅದರಿಂದ ಶರೀರವು ವರ್ಧಿಸುತ್ತದೆ.

3. ರೇತಸ್ಸು ರಸಾದಿಕ್ರಮದಿಂದ ಉಂಟಾಗುತ್ತದೆ ಎಂಬುದಕ್ಕೆ ಐ. ೨-೧-೧೪ ರ ಪ್ರಮಾಣದ ಸೂಚನೆ.

ಆಗಲಿ ಹುಟ್ಟುವ ಪ್ರಾಣಿಗಳು (ಹುಟ್ಟಿಸಿದ) ತಂದೆಯ ಆಕೃತಿಯುಳ್ಳವುಗಳಾಗಿಯೇ ಇರುವವೆಂಬ ನಿಯಮವು ಕಂಡುಬರುತ್ತದೆ.

ಅನ್ನಮಯಪ್ರಾಣಿಗಳಲ್ಲಿ ಪುರುಷನ ವಿಶೇಷ

(ಭಾಷ್ಯ)

೧೧೬. ಸರ್ವೇಷಾಮಪಿ ಅನ್ನರಸವಿಕಾರತ್ವೇ ಬ್ರಹ್ಮವಂಶ್ಯತ್ವೇ ಚ ಅವಿಶಿಷ್ಟೇ ಕಸ್ಮಾತ್ ಪುರುಷ ಏವ ಗೃಹ್ಯತೇ ? ಪ್ರಾಧಾನ್ಯಾತ್ । ಕಿಂ ಪುನಃ ಪ್ರಾಧಾನ್ಯಮ್ ? ಕರ್ಮ ಜ್ಞಾನಾಧಿಕಾರಃ । ಪುರುಷ ಏವ ಹಿ ಶಕ್ತತ್ವಾತ್ ಅರ್ಥಿತ್ವಾತ್, ಅಪರ್ಯುದಸ್ತತ್ವಾಚ್ಚ (ಅರ್ಥೀ ವಿದ್ವಾನ್ ಸಮರ್ಥಃ)[1] ಕರ್ಮಜ್ಞಾನಯೋರಧಿಕ್ರಿಯತೇ । ''ಪುರುಷೇ ತ್ವೇವಾವಿಸ್ತರಾಮಾತ್ಮಾ ಸ ಹಿ ಪ್ರಜ್ಞಾನೇನ ಸಂಪನ್ನತಮೋ ವಿಜ್ಞಾತಂ ವದತಿ ವಿಜ್ಞಾತಂ ಪಶ್ಯತಿ ವೇದ ಶ್ವಸ್ತನಂ ವೇದ ಲೋಕಾಲೋಕೌ ಮರ್ತ್ಯೇನಾಮೃತಮೀಪ್ಸತೀತ್ಯೇವಂ (ಮೀಪ್ಸತ್ಯೇವಂ) ಸಂಪನ್ನಃ । ಅಥೇತರೇಷಾಂ ಪಶೂನಾಮಶನಾಪಿಪಾಸೇ ಏವಾಭಿ ವಿಜ್ಞಾನಂ....'' (ಐ. ಆ. ೨-೩-೨) ಇತ್ಯಾದಿ ಶ್ರುತ್ಯನ್ತರದರ್ಶನಾತ್ ॥

(ಭಾಷ್ಯಾರ್ಥ)

(ಪ್ರಶ್ನೆ :-) ಎಲ್ಲಾ (ಪ್ರಾಣಿಗಳೂ ಸಮವಾಗಿಯೇ) ಅನ್ನರಸದ ಕಾರ್ಯವಾಗಿರುವಲ್ಲಿ ಮತ್ತು (ಎಲ್ಲರೂ) ಸಮವಾಗಿಯೇ ಬ್ರಹ್ಮವಂಶದವರಾಗಿರುವಲ್ಲಿ ಪುರುಷನನ್ನೇ (ಈ ಮಂತ್ರದಲ್ಲಿ) ಹಿಡಿದು (ಹೇಳಿರುವದು) ಏತಕ್ಕೆ) ?

(ಉತ್ತರ :-) (ಅವನ) ಮುಖ್ಯತ್ವದಿಂದ.

(ಪ್ರಶ್ನೆ :-) (ಅವನ) ಮುಖ್ಯತ್ವವಾದರೂ ಏನು ?

(ಉತ್ತರ :-) ಕರ್ಮಜ್ಞಾನಗಳಲ್ಲಿ ಅವನಿಗಿರುವ ಅಧಿಕಾರವು. ಶಕ್ತನಾಗಿರುವದರಿಂದಲೂ ಫಲವನ್ನು ಬಯಸುವದರಿಂದಲೂ ನಿಷೇಧ ಮಾಡಿಲ್ಲವಾದ್ದರಿಂದಲೂ ಪುರುಷನೇ ಅರ್ಥಿಯೂ ಬಲ್ಲವನೂ ಸಮರ್ಥನೂ ಆಗಿರುವದರಿಂದ[2] ಕರ್ಮಜ್ಞಾನಗಳಿಗೆ ಅಧಿಕಾರಿಯಾಗಿರುತ್ತಾನೆ.[3] ''ಆದರೆ

---

1. ಕಂಸದಲ್ಲಿರುವ ಈ ಭಾಗವು ವಾ॥ ಪಾಠದಲ್ಲಿಲ್ಲ ; ಇಲ್ಲದಿದ್ದರೂ ಹಿಂದಿನ ವಾಕ್ಯಭಾಗದಿಂದಲೇ ಬೇಕಾದ ಅಭಿಪ್ರಾಯವು ತೋರುತ್ತದೆ.

2. ಈ ಭಾಗವು ಇಲ್ಲದಿದ್ದರೂ ಸಾಗುತ್ತದೆ.

3. ಜೈ. ಸೂ. ೬-೧೨-೫ ರಿಂದ ೪೨ ರ ವರೆಗಿನ ಸೂತ್ರಭಾಷ್ಯದಲ್ಲಿ ಕರ್ಮಾಧಿಕಾರವನ್ನು ವಿಚಾರಮಾಡಿದೆ. ಇಲ್ಲಿ ಹೇಳಿರುವದು ವೈದಿಕಶಕ್ತಿಯು. ಜ್ಞಾನಕ್ಕೂ ಕರ್ಮದಂತೆಯೇ ಅಧಿಕಾರವಿಚಾರವನ್ನು ಸೂ. ಭಾ. ೧-೧-೧, ೧-೩-೩೩ ರಿಂದ ೩೮, ೩-೪-೩೬ - ಮುಂತಾದ ಕಡೆಗಳಲ್ಲಿ ಮಾಡಿದೆ. ಜ್ಞಾನವೆಂದರೆ ಉಪಾಸನೆ ಮತ್ತು ಜ್ಞಾನ - ಎರಡನ್ನೂ ಇಟ್ಟುಕೊಳ್ಳಬೇಕು.

ಪುರುಷನಲ್ಲಿಯೇ ಆತ್ಮನು ಹೆಚ್ಚಾಗಿ ಪ್ರಕಟವಾಗಿರುತ್ತಾನೆ ; ಏಕೆಂದರೆ ಅವನು ಮಿಗಿಲಿಲ್ಲದಷ್ಟು ಪ್ರಜ್ಞಾನದಿಂದ ಕೂಡಿದವನಾಗಿರುತ್ತಾನೆ, ಅರಿತು ಮಾತ ನಾಡುತ್ತಾನೆ, ಅರಿತು ನೋಡುತ್ತಾನೆ. ನಾಳೆಯದನ್ನು ಬಲ್ಲನು, ಲೋಕಾಲೋಕ ಗಳನ್ನು ಬಲ್ಲನು, ಮರ್ತ್ಯದಿಂದ ಅಮೃತವನ್ನು ಪಡೆಯಲೆಳಿಸುತ್ತಾನೆ. ಇಂಥ (ಗುಣಗಳಿಂದ) ಕೂಡಿದವನು.[1] ಇನ್ನು ಮಿಕ್ಕ ಪಶುಗಳಿಗೆ ಹಸಿವು ಬಾಯಾರಿಕೆ ಗಳೇ ಅರಿವು...'' (ಐ. ಆ. ೨-೩-೨) ಎಂದು ಮುಂತಾಗಿ ಬೇರೊಂದು ಶ್ರುತಿ ಯಲ್ಲಿ ಹೇಳಿರುತ್ತದೆ.

(ಭಾಷ್ಯ)

೧೧೭. ಸ ಹಿ ಪುರುಷಃ ಇಹ ವಿದ್ಯಯಾ ಅನ್ತರತಮಂ ಬ್ರಹ್ಮ ಸಂಕ್ರಾಮ ಯಿತುಮ್ ಇಷ್ಟಃ । ತಸ್ಯ ಚ ಬಾಹ್ಯಾಕಾರವಿಶೇಷೇಷು ಅನಾತ್ಮಸು ಆತ್ಮಭಾವಿತಾ ಬುದ್ಧಿಃ ವಿನಾ ಆಲಮ್ಬನವಿಶೇಷಂ[2] ಕಂಚಿತ್ ಸಹಸಾ ಅನ್ತರತಮಪ್ರತ್ಯಗಾತ್ಮವಿಷಯಾ ನಿರಾಲಮ್ಬನಾ ಚ ಕರ್ತುಮಶಕ್ಯಾ ಇತಿ ದೃಷ್ಟಶರೀರಾತ್ಮಸಾಮಾನ್ಯಕಲ್ಪನಯಾ ಶಾಖಾಚನ್ದ್ರನಿದರ್ಶನವತ್ ಅನ್ತಃ ಪ್ರವೇಶಯನ್ ಆಹ - ತಸ್ಯ ಇದಮೇವ ಶಿರಃ । ತಸ್ಯ ಅಸ್ಯ ಪುರುಷಸ್ಯ ಅನ್ನರಸಮಯಸ್ಯ ಇದಮೇವ ಶಿರಃ ಪ್ರಸಿದ್ಧಮ್ । ಪ್ರಾಣಮಯಾದಿಷು ಅಶಿರಸಾಂ ಶಿರಸ್ತ್ವದರ್ಶನಾತ್ ಇಹಾಪಿ ತತ್ಪ್ರಸಙ್ಗೋ ಮಾ ಭೂತ್ ಇತಿ ''ಇದಮೇವ ಶಿರಃ'' ಇತ್ಯುಚ್ಯತೇ । ಏವಂ ಪಕ್ಷಾದಿಷು ಯೋಜನಾ । ಅಯಂ ದಕ್ಷಿಣೋ ಬಾಹುಃ ಪೂರ್ವಾಭಿಮುಖಸ್ಯ ದಕ್ಷಿಣಃ ಪಕ್ಷಃ । ಅಯಂ ಸವ್ಯೋ ಬಾಹುಃ ಉತ್ತರಃ ಪಕ್ಷಃ । ಅಯಂ ಮಧ್ಯಮೋ ದೇಹಭಾಗಃ ಆತ್ಮಾ ಅಙ್ಗಾನಾಮ್ ''ಮಧ್ಯಂ ಹ್ಯೇಷಾಮಙ್ಗಾನಾಮಾತ್ಮಾ'' (ಐ. ಆ. ೨-೩-೫) ಇತಿ ಶ್ರುತೇಃ । 'ಇದಮ್' ಇತಿ ನಾಭೇರಧಸ್ತಾತ್ ಯದಙ್ಗಂ ತತ್ ಪುಚ್ಛಂ ಪ್ರತಿಷ್ಠಾ । ಪ್ರತಿತಿಷ್ಠತಿ ಅನಯಾ ಇತಿ ಪ್ರತಿಷ್ಠಾ ಪುಚ್ಛಮಿವ ಪುಚ್ಛಮ್ । ಅಧೋಲಮ್ಬನಸಾಮಾನ್ಯಾತ್ । ಯಥಾ ಗೋಃ ಪುಚ್ಛಮ್ । ಏತತ್ ಪ್ರಕೃತ್ಯ ಉತ್ತರೇಷಾಂ ಪ್ರಾಣಮಯಾದೀನಾಂ ರೂಪ ಕತ್ವಸಿದ್ಧಿಃ । ಮೂಷಾನಿಷಿಕ್ತದ್ರುತತಾಮ್ರಪ್ರತಿಮಾವತ್ ॥

(ಭಾಷ್ಯಾರ್ಥ)

ಆ ಪುರುಷನನ್ನೇ ಇಲ್ಲಿ ಜ್ಞಾನದಿಂದ ಅತ್ಯಂತವಾಗಿ (ಅವನ) ಒಳಗೇ ಇರುವ

---

1. ಮರ್ತ್ಯವಾದ ಕರ್ಮೋಪಾಸನೆಗಳಿಂದ ಅಮೃತವನ್ನು ಎಂದರೆ ಬಹುಕಾಲವಿರುವ ಫಲವನ್ನು ಪಡೆಯುವದಕ್ಕೂ ಮಿಥ್ಯಾರೂಪವಾದ ವ್ಯಕ್ತಿಜ್ಞಾನದಿಂದ ಸತ್ಯವಾದ ಅಮೃತತ್ವವನ್ನು ಪಡೆಯುವದಕ್ಕೂ ಯತ್ನಿಸುತ್ತಾನೆ.

2. ''ಅನಾಲಮ್ಬ್ಯ ವಿಶೇಷಂ'' ಎಂದು ಆ।। ಪಾಠ.

ಬ್ರಹ್ಮವನ್ನು ಸೇರಿಸಬೇಕೆಂದು (ಶ್ರುತಿಯು) ಅಭಿಪ್ರಾಯಪಟ್ಟಿರುತ್ತದೆ. ಮತ್ತು ಹೊರಗಿನ ಬೇರೆಬೇರೆಯ ಆಕಾರಗಳಲ್ಲಿ (ಅವು) ಅನಾತ್ಮವಾಗಿದ್ದರೂ ಆತ್ಮ ನೆಂಬ ಭಾವನೆಯಿಂದ ತುಂಬಿರುವ, ಅವನ ಬುದ್ಧಿಯನ್ನು ಯಾವದಾದ ರೊಂದು ಗೊತ್ತಾದ ಆಲಂಬನೆಯಿಲ್ಲದೆ[1] ತಟ್ಟನೆ ಎಲ್ಲಕ್ಕೂ ಒಳಗಿರುವ ಪ್ರತ್ಯ ಗಾತ್ಮನನ್ನೇ ವಿಷಯವಾಗಿಸಿಕೊಂಡು (ಬೇರೆ) ಯಾವ ವಿಷಯವೂ ಇಲ್ಲದಂತೆ ಮಾಡುವದು ಆಗಲಾರದಾದ್ದರಿಂದ[2] (ಈಗ ಅವನ ಅನುಭವದಲ್ಲಿ) ಕಂಡಿರುವ ಶರೀರವೆಂಬ ಆತ್ಮನಿಗೆ ಸಾದೃಶ್ಯವನ್ನು ಕಲ್ಪಿಸಿ ಕೊಂಬೆಯ ಚಂದ್ರನನ್ನು ತೋರಿಸು ವಂತೆ[3] ಒಳಕ್ಕೆ ಹೊಗಿಸುವದಕ್ಕಾಗಿ (ವೇದವು) "ಅವನಿಗೆ ಇದೇ ತಲೆ" (ಎಂದು ಮುಂತಾಗಿ) ಹೇಳುತ್ತಿದೆ.

'ಅವನಿಗೆ ಎಂದರೆ ಅನ್ನರಸಮಯನಾದ ಪುರುಷನಿಗೆ ; ಇದೇ ಎಂದರೆ (ಎಲ್ಲರಿಗೂ) ಗೊತ್ತಿರುವ (ಈ ತಲೆಯೇ) ತಲೆ. (ಮುಂದೆ) ಪ್ರಾಣಮಯನೇ ಮುಂತಾದ (ಆತ್ಮರು)ಗಳ ವಿಷಯದಲ್ಲಿ ತಲೆಯಲ್ಲದವುಗಳನ್ನು[4] ತಲೆಯೆಂದು (ಕರೆದಿರುವದು) ಕಂಡುಬರುವದರಿಂದ ಇಲ್ಲಿಯೂ ಹಾಗೆಯೇ ಎಂದಾಗಬಾರದು ಎಂಬ ಉದ್ದೇಶದಿಂದ 'ಇದೇ ತಲೆ' ಎಂದಿರುತ್ತದೆ. ಹೀಗೆಯೇ ಪಕ್ಷವೇ ಮುಂತಾದವು ಗಳ (ವಿಷಯ)ದಲ್ಲಿಯೂ ಹೊಂದಿಸಿಕೊಳ್ಳಬೇಕು. ಇದು (ಎಂದರೆ) ಪೂರ್ವಕ್ಕೆ ಎದುರಾಗಿರುವವನ (ಈ) ಬಲತೋಳು ದಕ್ಷಿಣಪಕ್ಷವು ; ಇದು ಎಂದರೆ ಎಡ ತೋಳು ಉತ್ತರಪಕ್ಷವು ; ಈ ನಡುವಿನ ದೇಹಭಾಗವು ಅಂಗಗಳಿಗೆ ಆತ್ಮನು. "ಈ ಅಂಗಗಳಿಗೆ ನಡುವಿನದೇ ಆತ್ಮನು" (ಐ. ಆ. ೨-೩-೫) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಇದು ಎಂದರೆ ಹೊಕ್ಕುಳಿನ ಕೆಳಭಾಗದಲ್ಲಿರುವ ಅಂಗವಿದೆ

---

1. ಕುಂಟನಿಗೆ ಊರುಗೋಲೆಂಬ ಆಲಂಬನೆಯು ಬೇಕಾಗಿರುವಂತೆ ಸಾಮಾನ್ಯರಿಗೆ ಆತ್ಮಬುದ್ಧಿಯನ್ನು ಮಾಡುವದಕ್ಕೆ ಶರೀರವೇ ಮುಂತಾದ ಯಾವದಾದರೊಂದು ಆಲಂಬನೆಬೇಕು. ಆದ್ದರಿಂದ ಅನ್ನಮಯಾದಿಗಳಲ್ಲಿ ಆತ್ಮಬುದ್ಧಿಯನ್ನು ಅಧ್ಯಾರೋಪಿಸಿದೆ ಎಂದು ಭಾವ. "ಅನಾಲಮ್ಬ್ಯ ವಿಶೇಷಂ ಕಂಚಿತ್" ಎಂಬ ಆII ಪಾಠಕ್ಕೆ 'ಯಾವದಾದರೊಂದು ವಿಶೇಷವನ್ನು ಅವಲಂಬಿಸದೆ' ಎಂದು ಅರ್ಥ.

2. ಆತ್ಮನು ವಿಷಯನಲ್ಲವಾದ್ದರಿಂದ ವಿಷಯವಾದದ್ದೊಂದನ್ನು ಆರೋಪಿಸಿಕೊಳ್ಳದೆ ನೇರಾಗಿ ಆತ್ಮನನ್ನು ಅರಿಯುವದು ಸಾಮಾನ್ಯರಿಗೆ ಆಗಲಾರದು.

3. ಕೊಂಬೆಯ ತುದಿಯನ್ನು ತೋರಿಸಿ ಅದರ ಮೂಲಕ ಚಂದ್ರನನ್ನು ತೋರಿಸುವಂತೆ ಅನ್ನಮಯಾದಿಕೋಶಗಳ ಮೂಲಕ ಆತ್ಮನನ್ನು ತಿಳಿಸಬೇಕಾಗಿದೆ. ಚಂದ್ರನಿಗೆ ಕೊಂಬೆಯ ಸೋಂಕು ಇಲ್ಲದಿರುವಂತೆ ಆತ್ಮನಿಗೂ ಕೋಶಗಳ ಸಂಬಂಧವು ಇರುವದಿಲ್ಲ.

4. ಪ್ರಾಣ, ಯಜುಸ್ಸು - ಮುಂತಾದವುಗಳನ್ನು ಮುಂದೆ ತಲೆ ಎಂದಿದೆ.

ಯಲ್ಲ, ಅದು ಪುಚ್ಛವು ; ಪ್ರತಿಷ್ಠೆಯು. ಇದರಿಂದ (ಮನುಷ್ಯನು) ನಿಲ್ಲುತ್ತಾನಾದ್ದರಿಂದ (ಇದಕ್ಕೆ) 'ಪ್ರತಿಷ್ಠೆ' ಎಂದು ಹೆಸರು ; ಪುಚ್ಛದಂತೆ ಇರುವದಾದ್ದರಿಂದ (ಇದನ್ನು) ಪುಚ್ಛ(ವೆಂದು ಕರೆದಿದೆ) ; ಎತ್ತಿನ ಬಾಲದಂತೆ ಕೆಳಕ್ಕೆ ಇಳಿಯಬಿದ್ದಿರುವದೆಂಬ ಸಾದೃಶ್ಯದಿಂದ (ಇದು ಪುಚ್ಛವು).[1] ಈ (ಅನ್ನಮಯಾತ್ಮನನ್ನು) ಮೂಲವಾಗಿಟ್ಟುಕೊಂಡು ಇನ್ನುಮುಂದೆ ಬರುವ ಪ್ರಾಣಮಯನೇ ಮುಂತಾದವರಿಗೂ (ತಲೆಯೇ ಮುಂತಾದವು)ಗಳನ್ನು ಕಲ್ಪಿಸಿರುವದರಿಂದ ರೂಪಕವು ಸಿದ್ಧವಾಗುತ್ತದೆ. ಮೂಸೆಯಲ್ಲಿ ಸುರಿದಿರುವ ಕರಗಿದ ತಾಮ್ರದ ಪ್ರತಿಮೆಯು (ಹೇಗೆ ಅದೇ ಆಕಾರವನ್ನು ತಳೆಯುವುದೋ) ಅದರಂತೆ.[2]

ಅನ್ನಮಯಾತ್ಮನ ಮಹಿಮೆ

ತದಪ್ಯೇಷ ಶ್ಲೋಕೋ ಭವತಿ ॥೪॥
(ಇತಿ ಪ್ರಥಮೋಽನುವಾಕಃ)

೪. ಅದೇ (ವಿಷಯದಲ್ಲಿಯೇ) ಈ ಶ್ಲೋಕವಿರುವದು :
(ಒಂದನೆಯ ಅನುವಾಕವು ಮುಗಿಯಿತು)[3]

ಅನ್ನಾದ್ಧ್ಯೇವ ಪ್ರಜಾಃ ಪ್ರಜಾಯನ್ತೇ । ಯಾಃ ಕಾಶ್ಚ ಪೃಥಿವೀಗ್ಂ ಶ್ರಿತಾಃ ।
ಅಥೋ ಅನ್ನೇನೈವ ಜೀವನ್ತಿ । ಅಥೈನದಪಿ ಯನ್ತ್ಯನ್ತತಃ । ಅನ್ನಗ್ಂ
ಹಿ ಭೂತಾನಾಂ ಜ್ಯೇಷ್ಠಮ್ । ತಸ್ಮಾತ್ ಸರ್ವೌಷಧಮುಚ್ಯತೇ । ಸರ್ವಂ
ವೈ ತೇಽನ್ನಮಾಪ್ನುವನ್ತಿ । ಯೇಽನ್ನಂ ಬ್ರಹ್ಮೋಪಾಸತೇ । ಅನ್ನಗ್ಂ

---

1. ಪಕ್ಷ, ಪುಚ್ಛ - ಮುಂತಾದವುಗಳನ್ನು ಕೊಟ್ಟು ಹಕ್ಕಿಯ ಆಕೃತಿಯನ್ನು ಕಲ್ಪಿಸಿರುತ್ತದೆ ಎಂದೂ ಹೇಳಬಹುದು. ಐ. ಆ. ೧-೪-೨ ನ್ನು ಹೋಲಿಸಿರಿ.

2. ಕರಗಿದ ತಾಮ್ರಕ್ಕೆ ಆಕಾರವಿಲ್ಲದಿದ್ದರೂ ಮೂಸೆಯ ಆಕಾರವನ್ನು ಅದು ಹೊಂದುವಂತೆ ಪ್ರಾಣಮಯಾದಿಗಳಿಗೆ ತಲೆ ಮುಂತಾದ ಅವಯವಗಳಿಲ್ಲದಿದ್ದರೂ ದೇಹವನ್ನನುಸರಿಸಿ ಅವುಗಳಿಗೂ ಕಲ್ಪಿಸಿರುತ್ತದೆ. ಆತ್ಮನು ಅನ್ನಮಯನಿಗಿಂತ ಬೇರೆಯಾಗಿರುವಂತೆ ಅವುಗಳಿಗಿಂತಲೂ ಬೇರೆ ಎಂಬುದೇ ಶ್ರುತಿಯ ಅಭಿಪ್ರಾಯ.

3. ಅನುವಾಕಗಳನ್ನು ಅಧ್ಯಯನಮಾಡುವವರು ಹೀಗೆ ವಿಂಗಡಿಸಿಕೊಂಡಿರುತ್ತಾರೆ ಆದರೆ ಈ ವಿಭಾಗದ ವಿಷಯಕ್ಕೆ ಭಾಷ್ಯವಾರ್ತಿಕಗಳಲ್ಲಿ ಏನೂ ಹೇಳಿಲ್ಲ ; ವಿಭಾಗವು ಅರ್ಥಕ್ಕೂ ಹೊಂದುವದಿಲ್ಲ. ಆದ್ದರಿಂದ ನಾವು ಅರ್ಥಕ್ಕನುಗುಣವಾಗಿಯೇ ವಲ್ಲಿಯನ್ನು ವಿಂಗಡಿಸಿಕೊಂಡು ಬರೆಯುತ್ತಾ ಬಂದಿದೇವೆ.

ಹಿ ಭೂತಾನಾಂ ಜ್ಯೇಷ್ಠಮ್ । ತಸ್ಮಾತ್ ಸರ್ವೌಷಧಮುಚ್ಯತೇ । ಅನ್ನಾದ್ಭೂತಾನಿ ಜಾಯನ್ತೇ । ಜಾತಾನ್ಯನ್ನೇನ ವರ್ಧನ್ತೇ । ಅದ್ಯತೇಽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತ ಇತಿ ॥೧॥

೧. ಅನ್ನದಿಂದಲೇ ಪ್ರಜೆಗಳು ಹುಟ್ಟುತ್ತವೆ ; ಯಾವ ಯಾವ (ಪ್ರಜೆಗಳು) ಭೂಮಿಯನ್ನಾಶ್ರಯಿಸಿರುವವೋ (ಅವೆಲ್ಲ) ಇನ್ನು ಅನ್ನ ದಿಂದಲೇ ಜೀವಿಸಿರುತ್ತವೆ. ಮತ್ತು ಇದನ್ನೇ ಕಡೆಯಲ್ಲಿ ಒಳಹೊಗುತ್ತವೆ. ಅನ್ನವೇ ಭೂತಗಳಲ್ಲಿ ಹಿರಿಯದಲ್ಲವೆ ? ಆದ್ದರಿಂದ ಎಲ್ಲಕ್ಕೂ ಔಷಧ ವೆನಿಸುತ್ತದೆ. ಯಾರು ಅನ್ನವನ್ನು ಬ್ರಹ್ಮವೆಂದು ಉಪಾಸನೆಮಾಡುವರೋ ಅವರು ಅನ್ನವೆಲ್ಲವನ್ನೂ ಪಡೆದುಕೊಳ್ಳುತ್ತಾರೆ. ಅನ್ನವೇ ಭೂತಗಳಲ್ಲಿ ಹಿರಿಯದಲ್ಲವೆ ? ಆದ್ದರಿಂದ ಎಲ್ಲಕ್ಕೂ ಔಷಧವೆನಿಸುತ್ತದೆ. ಅನ್ನದಿಂದ ಭೂತಗಳು ಹುಟ್ಟುತ್ತವೆ ; ಹುಟ್ಟಿದವು ಅನ್ನದಿಂದ ಬೆಳೆಯುತ್ತವೆ. ತಿನ್ನಲ್ಪಡುತ್ತದೆ ಮತ್ತು ಭೂತಗಳನ್ನು ತಿನ್ನುತ್ತದೆ ; ಆದ್ದರಿಂದ ಅದು ಅನ್ನವೆನಿಸುತ್ತದೆ.

(ಭಾಷ್ಯ)

೧೧೮. ತತ್ ತಸ್ಮಿನ್ನೇವ ಅರ್ಥೇ ಬ್ರಾಹ್ಮಣೋಕ್ತೇ ಅನ್ನಮಯಾತ್ಮಪ್ರಕಾಶಕಃ ಏಷ ಶ್ಲೋಕಃ ಮನ್ತ್ರಃ ಭವತಿ ॥

(ಭಾಷ್ಯಾರ್ಥ)

ಅಲ್ಲಿ ಎಂದರೆ ಬ್ರಾಹ್ಮಣದಲ್ಲಿ ಹೇಳಿರುವ ಅದೇ ವಿಷಯದಲ್ಲಿ ಅನ್ನಮಯಾತ್ಮನನ್ನು ತಿಳಿಸುವ ಈ ಶ್ಲೋಕವು ಎಂದರೆ ಮಂತ್ರವು ಇರುವದು.

(ಭಾಷ್ಯ)

೧೧೯. ಅನ್ನಾತ್ ರಸಾದಿಭಾವಪರಿಣತಾತ್ । ವೈ ಇತಿ ಸ್ಮರಣಾರ್ಥಃ । ಪ್ರಜಾಃ ಸ್ಥಾವರಜಙ್ಗಮಾತ್ಮಕಾಃ ಪ್ರಜಾಯನ್ತೇ । ಯಾಃ ಕಾಶ್ಚ ಅವಿಶಿಷ್ಯಾಃ ಪೃಥಿವೀಂ ಶ್ರಿತಾಃ ಪೃಥಿವೀಮ್ ಆಶ್ರಿತಾಃ, ತಾಃ ಸರ್ವಾ ಅನ್ನಾದೇವ ಪ್ರಜಾಯನ್ತೇ ಅಥೋ ಅಪಿ ಜಾತಾಃ ಅನ್ನೇನೈವ ಜೀವನ್ತಿ ಪ್ರಾಣಾನ್ ಧಾರಯನ್ತಿ । ವರ್ಧನ್ತೇ ಇತ್ಯರ್ಥಃ । ಅಥ ಅಪಿ ಏನತ್ ಅನ್ನಮ್ ಅಪಿಯನ್ತಿ ಅಪಿಗಚ್ಛನ್ತಿ । ಅಪಿಶಬ್ದಃ ಪ್ರತಿಶಬ್ದಾರ್ಥೇ ಅನ್ನಂ ಪ್ರತಿ ಪ್ರಲೀಯನ್ತೇ ಇತ್ಯರ್ಥಃ । ಅನ್ತತಃ ಅನ್ತೇ

ಜೀವನಲಕ್ಷಣಾಯಾ ವ್ಯದ್ವೀಃ ಪರಿಸಮಾಪ್ತೌ । ಕಸ್ಮಾತ್ ? ಅನ್ನಂ ಹಿ ಯಸ್ಮಾತ್ ಭೂತಾನಾಂ ಪ್ರಾಣಿನಾಂ ಜ್ಯೇಷ್ಠಂ ಪ್ರಥಮಜಮ್ । ಅನ್ನಮಯಾದೀನಾಂ ಹಿ ಇತರೇಷಾಂ ಭೂತಾನಾಂ ಕಾರಣಮ್ ಅನ್ನಮ್ । ಅತಃ ಅನ್ನಪ್ರಭವಾಃ ಅನ್ನಜೀವನಾಃ ಅನ್ನಪ್ರಲಯಾಶ್ಚ ಸರ್ವಾಃ ಪ್ರಜಾಃ । ಯಸ್ಮಾಚ್ಚ ಏವಮ್ ತಸ್ಮಾತ್ ಸರ್ವೌಷಧಮ್ ಸರ್ವಪ್ರಾಣಿನಾಂ ದೇಹದಾಹಪ್ರಶಮನಮ್ ಅನ್ನಮ್ ಉಚ್ಯತೇ ॥

(ಭಾಷ್ಯಾರ್ಥ)

ರಸವೇ ಮುಂತಾದ ರೂಪದಿಂದ ಪರಿಣಮಿಸುವ[1] ಅನ್ನದಿಂದ, ವೈ ಎಂಬುದು ನೆನಪಿಗೆ ತಂದುಕೊಡುವ ಅರ್ಥದ (ನಿಪಾತವು). ಪ್ರಜೆಗಳು ಸ್ಥಾವರ, ಜಂಗಮ - (ಈ) ರೂಪವಾಗಿರುವ (ಪ್ರಾಣಿಗಳು ಅನ್ನದಿಂದಲೇ ಹುಟ್ಟುತ್ತವೆ). ಯಾವ ಯಾವ (ಪ್ರಜೆಗಳು), ಇಂಥವೆಂಬ ನಿಯಮವಿಲ್ಲದೆ (ಯಾವಯಾವವು) ಪೃಥಿವಿಯಲ್ಲಿರುವವೋ ಪೃಥಿವಿಯನ್ನಾಶ್ರಯಿಸಿಕೊಂಡಿರುವವೋ ಅವೆಲ್ಲ ಅನ್ನದಿಂದಲೇ ಹುಟ್ಟುತ್ತವೆ. ಅಥೋ (ಇನ್ನು ಎಂದರೆ) ಮತ್ತು ಹುಟ್ಟಿದವು ಅನ್ನದಿಂದಲೇ ಜೀವಿಸಿರುತ್ತವೆ. ಪ್ರಾಣವನ್ನು ಧರಿಸಿರುತ್ತವೆ ; ಬೆಳೆಯುತ್ತಿರುತ್ತವೆ - ಎಂದರ್ಥ. ಅಥ (ಮತ್ತು) ಇದಲ್ಲದೆ ಇದನ್ನು (ಈ) ಅನ್ನವನ್ನು (ಅಪಿಯನ್ತಿ-ಅಪಿಗಚ್ಛನ್ತಿ) ಕುರಿತು ಹೋಗುತ್ತವೆ. (ಇಲ್ಲಿ) ಅಪಿ ಎಂಬ ಶಬ್ದಕ್ಕೆ ಪ್ರತಿ ಎಂಬ ಶಬ್ದದ ಅರ್ಥವಿರುತ್ತದೆ. ಅನ್ನದಲ್ಲಿ ಹೋಗಿ ಅಡಗುತ್ತವೆ ಎಂದರ್ಥ. ಕಡೆಯಲ್ಲಿ ಎಂದರೆ ಕೊನೆಯಲ್ಲಿ ಜೀವನರೂಪದ ಬೆಳವಣಿಗೆಯು ಮುಗಿದ ಮೇಲೆ (ಅಡಗುತ್ತವೆ). ಅದೇಕೆ ? ಎಂದರೆ (ಹೇಳಲಾಗುತ್ತದೆ) 'ಹಿ' ಏಕೆಂದರೆ ಅನ್ನವು ಭೂತಗಳಿಗೆ ಎಂದರೆ ಪ್ರಾಣಿಗಳಿಗೆ ಹಿರಿಯದು, (ಅವುಗಳಿಗಿಂತ) ಮೊದಲು ಹುಟ್ಟಿರುವದು.[2] ಅನ್ನಮಯವೇ ಮುಂತಾದ ಉಳಿದ ಭೂತಗಳಿಗೆ ಅನ್ನವು ಕಾರಣವಲ್ಲವೆ ? ಆದ್ದರಿಂದ ಎಲ್ಲಾ ಪ್ರಜೆಗಳೂ ಅನ್ನದಿಂದ ಹುಟ್ಟಿ ಅನ್ನದಿಂದ ಬದುಕಿಕೊಂಡಿದ್ದು ಅನ್ನದಲ್ಲಿಯೇ ಅಡಗುವವು. ಹೀಗಿರುವದಲ್ಲವೆ ? ಆದಕಾರಣ[3]

1. ಅನ್ನವು ರಸಾದಿರೂಪವಾಗಿ ಪರಿಣಮಿಸಿ ರೇತಸ್ಸಾಗಿ ಶರೀರವಾಗುತ್ತದೆ. ಐ. ಭಾ. ೨-೧, ಛಾಂ. ಭಾ. ೬-೫-೧.

2. ಮೊದಲು ಹುಟ್ಟಿದಕಾರಣವಾದ್ದರಿಂದ ಅದರಿಂದ ಬಂದು, ಅದರಲ್ಲಿದ್ದು, ಅದರಲ್ಲಿಯೇ ಭೂತಗಳು ಅಡಗುತ್ತವೆ.

3. ಮಣ್ಣಿನಿಂದಾಗುವ ಗೋಡೆಗೆ ಮಣ್ಣನ್ನು ಮೆತ್ತಿಯೇ ಸರಿಪಡಿಸಬೇಕಾಗಿರುವಂತೆ ಅನ್ನದಿಂದಾಗಿರುವ ದೇಹದ ದಾಹವನ್ನು ಅನ್ನದಿಂದಲೇ ಅಡಗಿಸಬೇಕು.

ಅನ್ನವು ಸರ್ವೌಷಧವು, ಎಲ್ಲಾ ಪ್ರಾಣಿಗಳಿಗೂ ದೇಹವನ್ನು ಸುಡುವ (ಹಸಿವನ್ನು) ಶಾಂತಿಗೊಳಿಸತಕ್ಕದ್ದು ಎನಿಸಿರುತ್ತದೆ.

(ಭಾಷ್ಯ)

೧೨೦. ಅನ್ನಬ್ರಹ್ಮವಿದಃ ಫಲಮುಚ್ಯತೇ । ಸರ್ವಂ ವೈ ತೇ (ಅನ್ನಂ ?) ಸಮಸ್ತಮ್ ಅನ್ನಜಾತಮ್ ಆಪ್ನುವನ್ತಿ । ಕೇ ? ಯೇ ಅನ್ನಂ ಬ್ರಹ್ಮ ಯಥೋಕ್ತಮ್ ಉಪಾಸತೇ । ಕಥಮ್ ? 'ಅನ್ನಜಃ, ಅನ್ನಾತ್ಮಾ, ಅನ್ನಪ್ರಲಯೋಽಹಮ್ । ತಸ್ಮಾತ್ ಅನ್ನಂ ಬ್ರಹ್ಮ' ಇತಿ । ಕುತಃ ಪುನಃ ಸರ್ವಾನ್ನಪ್ರಾಪ್ತಿಫಲಮ್ ಅನ್ನಾತ್ಮೋಪಾಸನಮ್ ಇತಿ ? ಉಚ್ಯತೇ । ಅನ್ನಂ ಹಿ ಭೂತಾನಾಂ ಜ್ಯೇಷ್ಠಮ್ । ಭೂತೇಭ್ಯಃ ಪೂರ್ವಮುತ್ಪನ್ನತ್ವಾತ್[1] ಜ್ಯೇಷ್ಠಂ ಹಿ ಯಸ್ಮಾತ್, ತಸ್ಮಾತ್ ಸರ್ವೌಷಧಮುಚ್ಯತೇ । ತಸ್ಮಾತ್ ಉಪಪನ್ನಾ (ಸರ್ವಾ)ನ್ನಾತ್ಮೋಪಾಸಕಸ್ಯ ಸರ್ವಾನ್ನಪ್ರಾಪ್ತಿಃ । ''ಅನ್ನಾದ್ ಭೂತಾನಿ ಜಾಯನ್ತೇ । ಜಾತಾನ್ಯನ್ನೇನ ವರ್ಧನ್ತೇ'' ಇತಿ ಉಪಸಂಹಾರಾರ್ಥಂ ಪುನರ್ವಚನಮ್ ॥

(ಭಾಷ್ಯಾರ್ಥ)

ಅನ್ನಬ್ರಹ್ಮವನ್ನು ಬಲ್ಲವನಿಗೆ ಫಲವನ್ನು (ಈಗ) ಹೇಳಲಾಗುತ್ತದೆ. ಅವರು ಎಲ್ಲಾ (ಅನ್ನವನ್ನೂ) ಎಂದರೆ ಒಟ್ಟು ಅನ್ನಸಮೂಹವನ್ನೇ ಪಡೆದು ಕೊಳ್ಳುತ್ತಾರೆ. ಯಾರು ? ಯಾರು ಅನ್ನವನ್ನು ಮೇಲೆ ಹೇಳಿದಂತೆ ಬ್ರಹ್ಮವೆಂದು ಉಪಾಸನೆಮಾಡುತ್ತಾರೋ,[2] ಅವರು. ಹೇಗೆಂದರೆ ''ನಾನು ಅನ್ನದಿಂದ ಹುಟ್ಟಿ, ಅನ್ನಸ್ವರೂಪನಾಗಿ, ಅನ್ನದಲ್ಲಿ ಅಡಗುವೆನು ; ಆದ್ದರಿಂದ ಅನ್ನವು ಬ್ರಹ್ಮವು.'' (ಹೀಗೆ) ಅನ್ನಾತ್ಮನನ್ನು[3] ಉಪಾಸನೆಮಾಡಿದರೆ ಸರ್ವಾನ್ನವೂ ದೊರೆಯುವದೆಂಬ ಫಲವಾಗುವದಕ್ಕೆ ಕಾರಣವೇನು ? ಎಂದರೆ (ಶ್ರುತಿ) ಹೇಳುತ್ತದೆ. (ಏಕೆಂದರೆ) ಅನ್ನವೇ ಭೂತಗಳಿಗೆ ಹಿರಿಯದಲ್ಲವೆ ? - ಭೂತಗಳಿಗಿಂತ ಮೊದಲು

1. ''ನಿಷ್ಪನ್ನತ್ವಾತ್'' ಆ॥ ಪಾಠ.

2. ಇಲ್ಲಿ ಅನ್ನಾದಿಗಳನ್ನು ಉಪಾಸನೆಮಾಡಬೇಕೆಂದು ವಿಧಿಸಿರುವದು ಮುಖ್ಯವಲ್ಲ, ಏಕೆಂದರೆ ಇದು ಜ್ಞಾನಪ್ರಕರಣ. ಆದ್ದರಿಂದ ಅನ್ನಾದಿಗಳ ಉಪಾಸನೆಯನ್ನು ಫಲಕೀರ್ತನದಿಂದ ಹೊಗಳಿ ಕ್ರಮಕ್ರಮವಾಗಿ ಆತ್ಮಜ್ಞಾನಕ್ಕೆ ಅಣಿಮಾಡಿದೆ ಎಂದು ಹೇಳಬೇಕು. ಆದರೂ ಶ್ರುತಿಯ ಪ್ರಾಮಾಣ್ಯದಿಂದ ಆಯಾ ಅವಾಂತರಫಲಗಳೂ ಆಗಬಹುದಾಗಿದೆ ; ಅಥವಾ ಬೇರೊಂದು ಶ್ರುತಿಯಲ್ಲಿ ವಿಧಿಸಿರುವ ಉಪಾಸನೆಯನ್ನು ಇಲ್ಲಿ ಅನುವಾದಮಾಡಿಕೊಂಡಿದೆ ಎಂದಾದರೂ ಕಲ್ಪಿಸಬಹುದು.

3. ವಿರಾಟ್ಪುರುಷನನ್ನು.

ಅನ್ನವು ಉಂಟಾಗಿರುವದರಿಂದ ಹಿರಿಯದು. 'ಹಿ' ಎಂದರೆ ಯಾವ ಕಾರಣದಿಂದ (ಹಿರಿಯದೋ) ಆದಕಾರಣ ಎಲ್ಲಕ್ಕೂ ಔಷಧವೆನಿಸಿರುತ್ತದೆ. ಆದ್ದರಿಂದ (ಸರ್ವ?) ಅನ್ನಾತ್ಮನನ್ನು ಉಪಾಸನೆಮಾಡುವಾತನಿಗೆ ಸರ್ವಾನ್ನವೂ ದೊರೆಯುವದು ಯುಕ್ತವಾಗಿರುತ್ತದೆ. "ಅನ್ನದಿಂದ ಭೂತಗಳು ಹುಟ್ಟುತ್ತವೆ ; ಹುಟ್ಟಿದವು ಅನ್ನದಿಂದ ಬೆಳೆಯುತ್ತವೆ" ಎಂದು ಮತ್ತೆ ಹೇಳಿರುವದು ಉಪ ಸಂಹಾರಕ್ಕಾಗಿ.[1]

(ಭಾಷ್ಯ)

೧೨೧. ಇದಾನೀಮ್ ಅನ್ನನಿರ್ವಚನಮ್ ಉಚ್ಯತೇ । ಅದ್ಯತೇ ಭುಜ್ಯತೇ ಚೈವ ಯದ್ ಭೂತೈರನ್ನಮ್[2] ಅತ್ತಿ ಚ ಭೂತಾನಿ ಸ್ವಯಮ್, ತಸ್ಮಾತ್ ಭೂತೈರ್ಭುಜ್ಯಮಾನತ್ವಾತ್, ಭೂತಭೋಕ್ತೃತ್ವಾಚ್ಚ ಅನ್ನಂ ತತ್ ಉಚ್ಯತೇ । ಇತಿಶಬ್ದಃ ಪ್ರಥಮಕೋಶಪರಿಸಮಾಪ್ತ್ಯರ್ಥಃ ॥

(ಭಾಷ್ಯಾರ್ಥ)

ಈಗ ಅನ್ನ (ಎಂಬ ಶಬ್ದದ) ನಿರ್ವಚನವನ್ನು (ಶ್ರುತಿಯು) ಹೇಳುತ್ತದೆ. ಅನ್ನವು ಯಾವ ಕಾರಣದಿಂದ ಭೂತಗಳಿಂದ 'ಅದ್ಯತೇ' ತಿನ್ನಲ್ಪಡುತ್ತಲೂ ಎಂದರೆ ಭೋಗಿಸಲ್ಪಡುತ್ತಲೂ ಇದೆಯೋ, ಮತ್ತು ಆ ತಾನು ಭೂತಗಳನ್ನೂ ತಿನ್ನುತ್ತದೆಯೋ, ಆ ಕಾರಣದಿಂದ - ಎಂದರೆ ಭೂತಗಳಿಂದ ಅನುಭವಿಸಲ್ಪಡುತ್ತಿರುವದರಿಂದಲೂ[3] - ಅದು 'ಅನ್ನ' ಎನಿಸಿಕೊಂಡಿರುತ್ತದೆ. 'ಇತಿ' ಎಂಬ ಶಬ್ದವು ಮೊದಲನೆಯ ಕೋಶದ[4] (ವಿವರವು) ಮುಗಿಯಿತೆಂದು ತಿಳಿಸುವದಕ್ಕೆ.

1 ಪ್ರಕೃತವಾಗಿರುವದು ಅನ್ನಮಯಾತ್ಮನ ವರ್ಣನೆ ; ಉಪಾಸನೆಯ ವಿಚಾರವು ಬಂದಿರುವದು ಅದರ ಮಹಿಮೆಯನ್ನು ತಿಳಿಸುವದಕ್ಕಾಗಿ. ಆದ್ದರಿಂದ ಪ್ರಕೃತವಾದ ಅನ್ನಮಯನು ವಿರಾಡ್ರೂಪದಿಂದ ಭೂತಗಳ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣನಾಗಿರುತ್ತಾನೆ ಎಂದು ಉಪಸಂಹಾರ ಮಾಡಿರುತ್ತದೆ ಭೂತಗಳೆಂದರೆ ಸ್ಥೂಲಶರೀರೋಪಾಧಿಯ ಜೀವರುಗಳು.

2. "ಅನ್ನಮ್" ಎಂಬ ಮಾತು ಮಾ।। ಪಾಠದಲ್ಲಿಲ್ಲ ; ಇಲ್ಲದಿದ್ದರೂ ಸಾಗುತ್ತದೆ.

3. ಪ್ರಾಣಿಗಳು ಬದುಕಿರುವಾಗ ಅನ್ನವನ್ನು ತಿನ್ನುತ್ತವೆ ; ಸಾಯುವಾಗ ಅವನ್ನು ಅನ್ನವೇ ತಿನ್ನುತ್ತದೆ.

4. ನಿಜವಾಗಿ ದೇಹವೇ ಅನ್ನಮಯವು ; ಆದರೂ ಅಜ್ಞಾನದಿಂದ ತಾವೇ ಅನ್ನಮಯರೆಂದು ಸಾಮಾನ್ಯರು ಭಾವಿಸುತ್ತಾರೆ. ಇದನ್ನನುಸರಿಸಿ ಅನ್ನಮಯಕೋಶವನ್ನು ಇಲ್ಲಿ ಆತ್ಮನೆಂದು ಅಧ್ಯಾರೋಪದೃಷ್ಟಿಯಿಂದ ಕರೆದಿದೆ.

೪. ಪ್ರಾಣಮಯಾತ್ಮ

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೧೨೨. ಅನ್ನಮಯಾದಿಭ್ಯಃ ಆನನ್ದಮಯಾನ್ತೇಭ್ಯಃ ಆತ್ಮಭ್ಯಃ ಅಭ್ಯನ್ತರತಮಂ ಬ್ರಹ್ಮ ವಿದ್ಯಯಾ ಪ್ರತ್ಯಗಾತ್ಮತ್ವೇನ ದಿದರ್ಶಯಿಷು ಶಾಸ್ತ್ರಮ್ ಅವಿದ್ಯಾಕೃತಪಞ್ಚಕೋಶಾಪನಯನೇನ ಅನೇಕತುಷಕೋದ್ರವಪಿತುಷೀಕರಣೇನೇವ ತದನ್ತರ್ಗತತಣ್ಡುಲಾನ್ ಪ್ರಸ್ತೌತಿ 'ತಸ್ಮಾದ್ವಾ ಏತಸ್ಮಾದನ್ನರಸಮಯಾತ್' ಇತ್ಯಾದಿ ॥

(ಭಾಷ್ಯಾರ್ಥ)

ಅನ್ನಮಯನು ಮೊದಲಾಗಿ ಆನಂದಮಯನವರೆಗಿನ ಆತ್ಮರುಗಳಿಗಿಂತ[1] ತೀರ ಒಳಗಿರುವ ಬ್ರಹ್ಮವನ್ನು ಅವಿದ್ಯಾಕಲ್ಪಿತವಾದ ಐದು ಕೋಶಗಳನ್ನೂ ತೆಗೆದು ಹಾಕಿ - ಅನೇಕ ಹೊಟ್ಟಿರುವ ಪೊರೆಗಳುಳ್ಳ ಕೋದ್ರವವನ್ನು[2] ಹೊಟ್ಟು ಕಳಚಿ ಅದರೊಳಗಿನ ಅಕ್ಕಿಯ ಕಾಳನ್ನು (ತೋರಿಸುವಂತೆ) - ವಿದ್ಯೆಯಿಂದ[3] ಒಳಗಿನ ಆತ್ಮನೆಂದು ತೋರಿಸಬೇಕೆಂದು ಶಾಸ್ತ್ರವು ''ತಸ್ಮಾದ್ವಾ ಏತಸ್ಮಾದನ್ನರಸಮಯಾತ್'' ಎಂದುಮುಂತಾಗಿ ಪ್ರಾರಂಭಿಸಿರುತ್ತದೆ ;

ತಸ್ಮಾದ್ವಾ ಏತಸ್ಮಾದನ್ನರಸಮಯಾತ್ ।
ಅನ್ಯೋಽನ್ತರ ಆತ್ಮಾ ಪ್ರಾಣಮಯಃ । ತೇನೈಷ ಪೂರ್ಣಃ ।

೨. ಆ ಈ ಅನ್ನರಸಮಯನಾದ ಆತ್ಮನಿಗಿಂತಲೂ[4] ಒಳಗಿನ ಇನ್ನೊಬ್ಬ ಪ್ರಾಣಮಯನಾದ ಆತ್ಮ(ನಿರುವನು). ಆತನಿಂದ ಇವನು ತುಂಬಿಕೊಂಡಿರುವನು.

1. ಆತ್ಮರೆಂದು ಸಾಮಾನ್ಯರು ಭಾವಿಸಿರುವವುಗಳಿಗಿಂತ.

2. ನವಣೆ, ಬರಗು - ಮುಂತಾದ ಜಾತಿಯ ಕೀಳುಧಾನ್ಯವನ್ನು.

3. ವಿದ್ಯೆಯಿಂದ ಆತ್ಮನೆಂದು ತಿಳಿದುಬರುವನೇ ನಿಜವಾದ ಆತ್ಮನು ; ಮಿಕ್ಕೆಲ್ಲರೂ ಕಲ್ಪಿತಾತ್ಮರು.

4. ''ತಸ್ಮಾದ್ ವಾ'' ಎಂಬಲ್ಲಿ ಪ್ರಸಿದ್ಧಾರ್ಥವನ್ನು ಹೇಳುವ 'ವೈ' ಎಂಬ ಮಾತನ್ನು ಕನ್ನಡಿಸಿಲ್ಲ. ಮುಂದೂ ಹೀಗೆಯೇ.

ಪ್ರಾಣಮಯಾತ್ಮನ ವರ್ಣನೆ

(ಭಾಷ್ಯ)

೧೨೩. ತಸ್ಮಾತ್ ವೈ ಏತಸ್ಮಾತ್ ಯಥೋಕ್ತಾತ್ ಅನ್ನರಸಮಯಾತ್ ಪಿಣ್ಡಾತ್ ಅನ್ಯಃ ವ್ಯತಿರಿಕ್ತಃ ಅನ್ತರಃ ಅಭ್ಯನ್ತರಃ ಆತ್ಮಾ ಪಿಣ್ಡವದೇವ ಮಿಥ್ಯಾಪರಿಕಲ್ಪಿತಃ ಆತ್ಮತ್ವೇನ । ಪ್ರಾಣಮಯಃ ಪ್ರಾಣಃ ವಾಯುಃ ತನ್ಮಯಃ ತತ್ಪ್ರಾಯಃ । ತೇನ ಪ್ರಾಣಮಯೇನ ಏಷಃ ಅನ್ನರಸಮಯಃ ಆತ್ಮಾ ಪೂರ್ಣಃ ವಾಯುನಾ ಇವ ದೃತಿಃ । ಸ ವೈ ಏಷ ಪ್ರಾಣಮಯಃ ಆತ್ಮಾ ಪುರುಷವಿಧ ಏವ ಪುರುಷಾಕಾರ ಏವ ಶಿರಃಪಕ್ಷಾದಿಭಿಃ । ಕಿಂ ಸ್ವತ ಏವ ? ನೇತ್ಯಾಹ - ಪ್ರಸಿದ್ಧಂ ತಾವತ್ ಅನ್ನರಸಮಯಸ್ಯ ಆತ್ಮನಃ ಪುರುಷವಿಧತ್ವಮ್ । ತಸ್ಯ ಅನ್ನರಸಮಯಸ್ಯ ಪುರುಷವಿಧತಾಂ ಪುರುಷಾಕಾರತಾಮ್[1] ಅನು ಅಯಂ ಪ್ರಾಣಮಯಃ ಪುರುಷವಿಧಃ ಮೂಷಾನಿಷಿಕ್ತಪ್ರತಿಮಾವತ್, ನ ಸ್ವತ ಏವ । ಏವಂ ಪೂರ್ವಸ್ಯ ಪೂರ್ವಸ್ಯ ಪುರುಷವಿಧತಾಮ್ ಅನು ಉತ್ತರೋತ್ತರಃ ಪುರುಷವಿಧೋ ಭವತಿ । ಪೂರ್ವಃ ಪೂರ್ವಶ್ಚ ಉತ್ತರೋತ್ತರೇಣ ಪೂರ್ಣಃ ॥

(ಭಾಷ್ಯಾರ್ಥ)

ಆ ಈ ಮೇಲೆ ಹೇಳಿರುವ ಅನ್ನರಸಮಯನಾಗಿರುವ ಶರೀರಕ್ಕಿಂತಲೂ ಇನ್ನೊಬ್ಬ ಬೇರೆಯಾದ ಒಳಗಿನ ಇನ್ನೂ ಒಳಗಿರುವ ಆತ್ಮನು, ಶರೀರದಂತೆಯೇ ಆತ್ಮನೆಂದು ತಪ್ಪಾಗಿ ಕಲ್ಪಿತನಾಗಿರುವವನು, ಪ್ರಾಣಮಯನಾದವನು - ಪ್ರಾಣವೆಂದರೆ ವಾಯು, ತನ್ಮಯನಾಗಿರುವವನು - ಎಂದರೆ ಅದೇ ಹೆಚ್ಚಾಗಿರುವವನು. ಆ ಪ್ರಾಣಮಯನಿಂದ ಇವನು ; (ಈ) ಅನ್ನರಸಮಯನಾದ ಆತ್ಮನು ತುಂಬಿಕೊಂಡಿರುವನು ; ತಿದಿಯು ಗಾಳಿಯಿಂದ (ತುಂಬಿಕೊಂಡಿರು)ವಂತೆ (ತುಂಬಿಕೊಂಡಿರುವನು), ಆ ಈ ಪ್ರಾಣಮಯನಾದ ಆತ್ಮನು ಪುರುಷವಿಧನೇ, ಪುರುಷಾಕಾರನಾಗಿಯೇ ತಲೆ, ಪಕ್ಷ - ಮುಂತಾದವುಗಳಿಂದ (ಕೂಡಿಯೇ) ಇರುತ್ತಾನೆ. ತಾನೇ (ಸ್ವತಂತ್ರವಾಗಿ ಪುರುಷವಿಧ)ನಾಗಿರುತ್ತಾನೇನು ? - ಎಂದರೆ 'ಇಲ್ಲ' ಎಂದು (ಶ್ರುತಿಯು ಮುಂದಿನ ವಾಕ್ಯವನ್ನು) ಹೇಳಿರುತ್ತದೆ. ಅನ್ನರಸಮಯನಾದ ಆತ್ಮನು ಪುರುಷವಿಧವಾಗಿರುತ್ತಾನೆಂಬುದಂತೂ ಪ್ರಸಿದ್ಧ(ವಾಗಿಯೇ ಇದೆ). ಆ ಅನ್ನರಸಮಯ(ನಾದ ಆತ್ಮನ) ಪುರುಷವಿಧತ್ವವನ್ನು ಎಂದರೆ ಪುರುಷಾಕಾರತ್ವವನ್ನು ಅನುಸರಿಸಿ ಈ ಪ್ರಾಣಮಯನು ಪುರುಷವಿಧನಾಗಿರು

---

1. "ಪುರುಷವಿಧತಾ, ತಾಮ್ ಅನು" ಎಂಬ ವಾ|| ಪಾಠಕ್ಕಿಂತ ಇದೇ ಉತ್ತಮ.

ತ್ತಾನೆ, ಮೂಸೆಯಲ್ಲಿ ಸುರಿದ (ಕರಗಿಸಿದ ತಾಮ್ರದ) ಪ್ರತಿಮೆಯಂತೆ (ಅದೇ ಆಕಾರದಲ್ಲಿರುತ್ತಾನೆ),[1] ತಾನೇ (ಪುರುಷಾಕಾರ)ನಲ್ಲ,[2] ಇದೇ ರೀತಿಯಲ್ಲಿ ಹಿಂದು ಹಿಂದಿನ (ಆತ್ಮನ) ಪುರುಷವಿಧತ್ವವನ್ನು ಅನುಸರಿಸಿ ಮುಂದುಮುಂದಿನ (ಆತ್ಮನು) ಪುರುಷವಿಧನಾಗಿರುತ್ತಾನೆ ಮತ್ತು ಹಿಂದು ಹಿಂದಿನ (ಆತ್ಮನು) ಮುಂದಿನ ಆತ್ಮನಿಂದ ತುಂಬಿಕೊಂಡಿರುತ್ತಾನೆ.

ಪ್ರಾಣಮಯಾತ್ಮನ ಅವಯವಗಳು

ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಪ್ರಾಣ ಏವ ಶಿರಃ । ವ್ಯಾನೋ ದಕ್ಷಿಣಃ ಪಕ್ಷಃ । ಅಪಾನ ಉತ್ತರಃ ಪಕ್ಷಃ । ಆಕಾಶ ಆತ್ಮಾ । ಪೃಥಿವೀ ಪುಚ್ಛಂ ಪ್ರತಿಷ್ಠಾ ॥೩॥

೩. ಆ ಈತನು ಪುರುಷವಿಧನಾಗಿಯೇ (ಇರುವನು). ಆತನ ಪುರುಷ ವಿಧತ್ವವನ್ನು ಅನುಸರಿಸಿ ಇವನು ಪುರುಷವಿಧ(ನಾಗಿರುತ್ತಾನೆ). ಅವನಿಗೆ ಪ್ರಾಣವೇ ತಲೆ ; ವ್ಯಾನವು ದಕ್ಷಿಣಪಕ್ಷ ; ಅಪಾನವು ಉತ್ತರಪಕ್ಷ ; ಆಕಾಶವು ಆತ್ಮ ; ಪೃಥಿವಿಯು ಪುಚ್ಛವು, ಪ್ರತಿಷ್ಠೆಯು.

(ಭಾಷ್ಯ)

೧೨೪. ಕಥಂ ಪುನಃ ಪುರುಷವಿಧತಾ ಅಸ್ಯ ಇತಿ ? ಉಚ್ಯತೇ । ತಸ್ಯ ಪ್ರಾಣ ಮಯಸ್ಯ ಪ್ರಾಣ ಏವ ಶಿರಃ । ಪ್ರಾಣಮಯಸ್ಯ ವಾಯುವಿಕಾರಸ್ಯ ಪ್ರಾಣಃ ಮುಖನಾಸಿಕಾನಿಸ್ಸರಣೋ ವೃತ್ತಿವಿಶೇಷಃ ಶಿರಃ ಇತಿ ಕಲ್ಪ್ಯತೇ[3] ವಚನಾತ್ । ಸರ್ವತ್ರ ವಚನಾದೇವ ಪಕ್ಷಾದಿಕಲ್ಪನಾ । ವ್ಯಾನಃ ವ್ಯಾನವೃತ್ತಿಃ ದಕ್ಷಿಣಃ ಪಕ್ಷಃ । ಅಪಾನಃ ಉತ್ತರಃ ಪಕ್ಷಃ । ಆಕಾಶಃ ಆತ್ಮಾ । ಯ ಆಕಾಶಸ್ಥೋ ವೃತ್ತಿ ವಿಶೇಷಃ ಸಮಾನಾಖ್ಯಃ ಸ ಆತ್ಮೇವ ಆತ್ಮಾ । ಪ್ರಾಣವೃತ್ಯಧಿಕಾರಾತ್ । ಮಧ್ಯಸ್ಥ ತ್ವಾತ್ ಇತರಾಃ ಪರ್ಯನ್ತಾ ವೃತ್ತೀರಪೇಕ್ಷ್ಯ ಆತ್ಮಾ । "ಮಧ್ಯಂ ಹ್ಯೇಷಾಮಙ್ಗಾನಾ

1. ಭಾ. ಭಾ. ೧೧೭ ರಲ್ಲಿ ಈ ದೃಷ್ಟಾಂತ ವಿವರವನ್ನು ಟಿಪ್ಪಣಿಯಲ್ಲಿ ವಿವರಿಸಿದೆ.

2. ಪ್ರಾಣಮಯಾದಿಗಳಿಗೇ ಸ್ವಂತವಾದ ಪುರುಷಾಕಾರವು ಇಲ್ಲದ ಮೇಲೆ ನಿಜವಾದ ಆತ್ಮನಿಗೆ ಇಲ್ಲವೆಂದು ಹೇಳುವದೇನಿದೆ ? - ಎಂದು ಭಾವ.

3. 'ಏವ ಪರಿಕಲ್ಪ್ಯತೇ' ಎಂದು ಆ।। ಪಾಠ.

ಮಾತ್ಮಾ'' (ಐ. ಆ. ೨-೩-೫) ಇತಿ ಶ್ರುತಿಪ್ರಸಿದ್ಧಂ ಮಧ್ಯಸ್ಥಸ್ಯ ಆತ್ಮತ್ವಮ್ । ಪೃಥಿವೀ ಪುಚ್ಛಂ ಪ್ರತಿಷ್ಠಾ । 'ಪೃಥಿವೀ' ಇತಿ ವೃಥಿವೀದೇವತಾ ಆಧ್ಯಾತ್ಮಿಕಸ್ಯ ಪ್ರಾಣಸ್ಯ ಧಾರಯಿತ್ರೀ । ಸ್ಥಿತಿಹೇತುತ್ವಾತ್ । ''ಸೈಷಾ ಪುರುಷಸ್ಯಾಪಾನಮವಷ್ಟಭ್ಯ'' (ಪ್ರ. ೩-೪) ಇತಿ ಹಿ ಶ್ರುತ್ಯನ್ತರಮ್ । ಅನ್ಯಥಾ ಉದಾನವೃತ್ತ್ಯಾ ಊರ್ಧ್ವಗಮನಸಮ್, ಗುರುತ್ವಾತ್ ಪತನಂ ವಾ ಸ್ಯಾತ್ ಶರೀರಸ್ಯ । ತಸ್ಮಾತ್ ಪೃಥಿವೀದೇವತಾ ಪುಚ್ಛಂ ಪ್ರತಿಷ್ಠಾ ಪ್ರಾಣಮಯಸ್ಯ ಆತ್ಮನಃ ॥

(ಭಾಷ್ಯಾರ್ಥ)

ಇವನಿಗೆ ಪುರುಷನ ಆಕಾರವಿದೆ ಎಂಬುದಾದರೂ ಹೇಗೆ ? - ಎಂದರೆ (ಶ್ರುತಿ) ಹೇಳುತ್ತದೆ :- ''ಆ ಪ್ರಾಣಮಯನಿಗೆ ಪ್ರಾಣವೇ ತಲೆ''. ಪ್ರಾಣಮಯನಾದ ವಾಯುವಿನ ಕಾರ್ಯವಾಗಿರುವ ಆ (ಆತ್ಮನಿಗೆ) ಪ್ರಾಣವು ಎಂದರೆ ಬಾಯಿ ಮತ್ತು ಮೂಗು ಇವುಗಳೊಳಗಿಂದ ಹೊರಗೆ ಬರುತ್ತಿರುವ (ಪ್ರಾಣದ) ಒಂದಾನೊಂದು ವೃತ್ತಿಯು ತಲೆ ಎಂದು ವಚನದ ಪ್ರಾಮಾಣ್ಯದಿಂದ ಕಲ್ಪಿಸಲಾಗಿದೆ.[1] (ಇನ್ನುಮುಂದೆ) ಎಲ್ಲಾ ಸಂದರ್ಭಗಳಲ್ಲಿಯೂ ಪಕ್ಷಪೇಮುಂತಾದವುಗಳನ್ನು ಕಲ್ಪಿಸಿರುವದು ವಚನ(ಬಲ)ದಿಂದಲೇ ಆಗಿರುತ್ತದೆ ವ್ಯಾನವು ಎಂದರೆ ವ್ಯಾನವೃತ್ತಿಯು ದಕ್ಷಿಣಪಕ್ಷವು ; ಅಪಾನವು ಉತ್ತರಪಕ್ಷವು. ಆಕಾಶವು ಆತ್ಮನು, ಎಂದರೆ ಸಮಾನವೆಂಬ ಹೆಸರಿನ ಯಾವ ಒಂದಾನೊಂದು ವೃತ್ತಿಯು ಆಕಾಶದಲ್ಲಿರುವದೋ[2] ಅದು ಆತ್ಮನಂತೆ ಇರುವದರಿಂದ ಆತ್ಮನು. ವ್ಯಾನವೃತ್ತಿಗಳನ್ನು ಕುರಿತ ಪ್ರಕರಣದಲ್ಲಿರುವದರಿಂದ (ಇಲ್ಲಿ ಆಕಾಶವೆಂದರೆ ಸಮಾನವೆಂದೇ ಅರ್ಥವನ್ನು ಮಾಡಬೇಕು). (ಆಚೆಗೂ ಈಚೆಗೂ) ನೆರೆಯಲ್ಲಿರುವ ಮಿಕ್ಕ ವೃತ್ತಿಗಳಿಗೆ ಹೋಲಿಸಿದರೆ (ಇದು) ನಡುವೆ ಇರುವದರಿಂದ[3] ಆತ್ಮ(ಸೆನಿಸುತ್ತದೆ). ''ಈ ಅಂಗಗಳ ನಡುವೆಯೇ ಆತ್ಮನು'' (ಐ. ಆ. ೨-೩-೫) ಎಂದು (ಹೇಳಿರುವದರಿಂದ) ನಡುವೆ ಇರುವದು ಆತ್ಮನೆಂಬುದು ಶ್ರುತಿಪ್ರಸಿದ್ಧ

---

1. ಅನ್ನಮಯನಂತೆ ಪ್ರಾಣಮಯಾದಿಗಳಿಗೆ ಪ್ರಸಿದ್ಧವಾದ ತಲೆ, ಪಕ್ಷ - ಮುಂತಾದ ವಿಲ್ಲ. ಇವನ್ನು ಚೆನ್ನಾಗಿ ಚಿಂತನೆಮಾಡುವದರಿಂದ ಮುಂದುಮುಂದಿನ ಒಳಗಿನ ಆತ್ಮನನ್ನು ಅರಿತುಕೊಳ್ಳುವದಕ್ಕೆ ಸಹಾಯವಾಗುತ್ತದೆ. (ತೈ. ವಾ.೨-೨-೪೪)

2. ಮಂಚಿಕೆಯು ಕೂಗುತ್ತದೆ ಎಂದರೆ ಮಂಚಿಕೆಯ ಮೇಲಿರುವವನು ಕೂಗುತ್ತಾನೆ - ಎಂದು ಅರ್ಥವಾಗುವಂತೆ ಲಕ್ಷಣಾವೃತ್ತಿಯಿಂದ ಸಮಾನವೃತ್ತಿಗೆ ಆಕಾಶವೆಂದು ಹೆಸರು ಎಂದಭಿಪ್ರಾಯ.

3. ಪ್ರ ೩-೫ನ್ನು ನೋಡಿ.

ವಾಗಿರುತ್ತದೆ. ಪೃಥಿವಿಯು ಪುಚ್ಛವು, ಪ್ರತಿಷ್ಠೆಯು. 'ಪೃಥಿ ಎಂದರೆ (ಇಲ್ಲಿ) ಪೃಥಿವೀದೇವತೆ ; (ಇದು) ಆಧ್ಯಾತ್ಮಿಕವಾದ ಪ್ರಾಣವನ್ನು ಹಿಡಿದಿಟ್ಟಿರುವ ವಾಗಿದೆ, ಏಕೆಂದರೆ (ಇದು ಎಲ್ಲವೂ) ನಿಂತಿರುವದಕ್ಕೆ ಕಾರಣವಾಗಿರುತ್ತದೆ. "ಆ ಈ (ಪೃಥಿವೀದೇವತೆಯು) ಪುರುಷನ ಅಪಾನವೃತ್ತಿಯನ್ನು ಹಿಡಿದೆಳೆದು ಕೊಂಡು (ಇರುತ್ತದೆ)" (ಪ್ರ. ೩-೮) ಎಂದಲ್ಲವೆ, ಬೇರೊಂದು ಶ್ರುತಿಯಲ್ಲಿದೆ ? ಹಾಗಿಲ್ಲದೆ ಇದ್ದರೆ ಉದಾನವೃತ್ತಿಯಿಂದ ಶರೀರವು ಮೇಲಕ್ಕೆ ಹೋಗಿ ಬಿಡುವದೋ ಅಥವಾ ಭಾರದಿಂದ ಕೆಳಕ್ಕೆ ಬೀಳುವದೋ ಆಗಿಬಿಡುತ್ತಿತ್ತು.[1] ಆದ್ದರಿಂದ ಪೃಥಿವೀದೇವತೆಯು ಪ್ರಾಣಮಯಾತ್ಮನಿಗೆ ಮೇಲಕ್ಕೆತ್ತಿ ಹಿಡಿದು ಕೊಂಡಿರುವ ಪುಚ್ಛವು.

ಪ್ರಾಣಮಯಾತ್ಮನ ಮಹಿಮೆ

ತದಪ್ಯೇಷ ಶ್ಲೋಕೋ ಭವತಿ ॥೪॥

(ಇತಿ ದ್ವಿತೀಯೋಽನುವಾಕಃ)

೪. ಅದೇ (ವಿಷಯದಲ್ಲಿ) ಈ ಶ್ಲೋಕವಿರುವದು :-

(ಎರಡನೆಯ ಅನುವಾಕವು ಮುಗಿಯಿತು)

ಪ್ರಾಣಂ ದೇವಾ ಅನು ಪ್ರಾಣನ್ತಿ । ಮನುಷ್ಯಾಃ ಪಶವಶ್ಚ ಯೇ । ಪ್ರಾಣೋ ಹಿ ಭೂತಾನಾಮಾಯುಃ । ತಸ್ಮಾತ್ ಸರ್ವಾಯುಷ-ಮುಚ್ಯತೇ । ಸರ್ವಮೇವ ತ ಆಯುರ್ಯನ್ತಿ । ಯೇ ಪ್ರಾಣಂ ಬ್ರಹ್ಮೋಪಾಸತೇ । ಪ್ರಾಣೋ ಹಿ ಭೂತಾನಾಮಾಯುಃ । ತಸ್ಮಾತ್ ಸರ್ವಾಯುಷಮುಚ್ಯತ ಇತಿ ॥೧॥

೧. 'ಪ್ರಾಣವನ್ನು ಅನುಸರಿಸಿ ದೇವತೆಗಳು ಜೀವಿಸಿರುವರು. ಮನುಷ್ಯರೂ ಪಶುಗಳೂ ಯಾವಯಾವವಿರುವವೋ (ಅವೂ ಹಾಗೆಯೇ). ಪ್ರಾಣವೇ ಭೂತಗಳಿಗೆ ಆಯಸ್ಸು ; ಆದ್ದರಿಂದ ಸರ್ವಾಯುಷವೆನಿಸಿರುತ್ತದೆ. ಯಾರು ಪ್ರಾಣವನ್ನು ಬ್ರಹ್ಮವೆಂದು ಉಪಾಸನೆಮಾಡುವರೋ ಅವರು ಇಡಿಯ 'ಆಯುಸ್ಸನ್ನೇ ಹೊಂದುತ್ತಾರೆ. ಪ್ರಾಣನೇ ಭೂತಗಳಿಗೆ ಆಯುಸ್ಸು ; ಆದ್ದರಿಂದ ಸರ್ವಾಯುಷವೆನಿಸಿರುತ್ತದೆ.

---

1. ಪ್ರಶ್ನಭಾಷ್ಯದಲ್ಲಿರುವ ಪ್ರಾಣವೃತ್ತಿಗಳ ವಿವರಣೆಯನ್ನು ಇದಕ್ಕೆ ಹೋಲಿಸಿರಿ.

(ಭಾಷ್ಯ)

೧೨ಜ. ತತ್ ತಸ್ಮಿನ್ನೇವಾರ್ಥೇ ಪ್ರಾಣಮಯಾತ್ಮವಿಷಯಃ ಏಷ ಶ್ಲೋಕಃ ಭವತಿ :-

(ಭಾಷ್ಯಾರ್ಥ)

ಅಲ್ಲಿ ಎಂದರೆ ಅದೇ ವಿಷಯದಲ್ಲಿ ಪ್ರಾಣಮಯಾತ್ಮನನ್ನು ಕುರಿತ ಈ ಮಂತ್ರವು ಇರುತ್ತದೆ :-

(ಭಾಷ್ಯ)

೧೨ಟ. ಪ್ರಾಣಂ ದೇವಾ ಅನು ಪ್ರಾಣನ್ತಿ । ದೇವಾಃ ಅಗ್ನ್ಯಾದಯಃ ಪ್ರಾಣಂ ವಾಯ್ವಾತ್ಮಾನಂ ಪ್ರಾಣನಶಕ್ತಿಮನ್ತಮ್ ಅನು ತದಾತ್ಮಭೂತಾಃ ಸನ್ತಃ ಪ್ರಾಣನ್ತಿ ಪ್ರಾಣನಕರ್ಮ ಕುರ್ವನ್ತಿ, ಪ್ರಾಣನಕ್ರಿಯಯಾ ಕ್ರಿಯಾವನ್ತೋ ಭವನ್ತಿ । ಅಧ್ಯಾತ್ಮಾಧಿಕಾರಾತ್ ದೇವಾಃ ಇನ್ದ್ರಿಯಾಣಿ ಪ್ರಾಣಮ್ ಅನು ಪ್ರಾಣನ್ತಿ ಮುಖ್ಯ ಪ್ರಾಣಮ್ ಅನು ಚೇಷ್ಟನ್ತೇ ಇತಿ ವಾ । ತಥಾ ಮನುಷ್ಯಾಃ ಪಶವಶ್ಚ ಯೇ ತೇ ಪ್ರಾಣನಕರ್ಮಣ್ಯೈವ ಚೇಷ್ಟ್ಯಾವನ್ತೋ ಭವನ್ತಿ ॥

(ಭಾಷ್ಯಾರ್ಥ)

"ಪ್ರಾಣನನ್ನು ಅನುಸರಿಸಿ ದೇವತೆಗಳು ಜೀವಿಸಿರುವರು". ದೇವತೆಗಳು ಎಂದರೆ ಅಗ್ನಿಯೇ ಮುಂತಾದವರು ಪ್ರಾಣನನ್ನು ಎಂದರೆ ಪ್ರಾಣನಶಕ್ತಿಯಿಂದ ಕೂಡಿರುವ[1] **ವಾಯ್ವಾತ್ಮನನ್ನು** ಅನುಸರಿಸಿ ಅವನ ಸ್ವರೂಪವನ್ನೇ ಹೊಂದಿದವ ರಾಗಿ ಜೀವಿಸಿರುವರು, ಪ್ರಾಣನ ಎಂಬ ಕ್ರಿಯೆಯನ್ನು ಮಾಡುತ್ತಾರೆ, ಪ್ರಾಣನ ವೆಂಬ ಕ್ರಿಯೆಯಿಂದ ಕ್ರಿಯಾವಂತರಾಗಿರುತ್ತಾರೆ.[2] ಅಥವಾ ಈ ಪ್ರಕರಣವು ಅಧ್ಯಾತ್ಮ (ವಿಷಯಗಳನ್ನು) ಕುರಿತದ್ದಾಗಿರುವದರಿಂದ '**ದೇವತೆಗಳು ಎಂದರೆ ಇಂದ್ರಿಯ ಗಳು** ಪ್ರಾಣವನ್ನು ಅನುಸರಿಸಿ ಜೀವಿಸಿರುವವು, ಮುಖ್ಯಪ್ರಾಣವನ್ನು ಅನುಸರಿಸಿ (ತಮ್ಮ) ವ್ಯಾಪಾರವನ್ನು ಮಾಡುತ್ತವೆ' ಎಂದಾದರೂ (ಅರ್ಥವನ್ನು ಮಾಡಬಹುದು)[3]

1. ವಾಯುವು ಅಥವಾ ಸೂತ್ರಾತ್ಮನು ಕ್ರಿಯಾಶಕ್ತಿಯಿಂದ ಕೂಡಿರುವನು. ಬೃ. ೩-೭-೨.

2. ದೇವತೆಗಳ ಸಮಷ್ಟಿಯೇ ಪ್ರಾಣನು ಅಥವಾ ವಾಯು. ಆದ್ದರಿಂದ ವಾಯ್ವಾತ್ಮ ರೂಪದಿಂದಲೇ ಅವರ ವ್ಯಾಪಾರವು ನಡೆಯುತ್ತಿರುವದು.

3. ಅಧ್ಯಾತ್ಮವಾಗಿ ವಾಗಾದಿಗಳಾಗಿರುವ ದೇವತೆಗಳೇ ಅಧಿದೈವವಾಗಿ ಅಗ್ನ್ಯಾದಿ ಗಳಾಗಿರುವರು. ಬೃ. ೧-೩-೧೨ ರಿಂದ ೧೫ರವರೆಗಿನ ಗ್ರಂಥವನ್ನು ನೋಡಿರಿ.

ಹಾಗೂ ಯಾವಯಾವ ಮನುಷ್ಯರಿರುವರೋ ಪಶುಗಳಿರುವವೋ ಅವೆಲ್ಲ ಪ್ರಾಣನ ಕರ್ಮದಿಂದಲೇ ವ್ಯಾಪಾರವಂತವಾಗಿರುತ್ತವೆ.[1]

(ಭಾಷ್ಯ)

೧೨೭. ಅತಶ್ಚ ನಾನ್ನಮಯೇನೈವ ಪರಿಚ್ಛಿನ್ನೇನ ಆತ್ಮನಾ ಆತ್ಮವನ್ತಃ ಪ್ರಾಣಿನಃ, ಕಿಂ ತರ್ಹಿ ತದನ್ತರ್ಗತೇನ[2] ಪ್ರಾಣಮಯೇನಾಪಿ ಸಾಧಾರಣೇನೈವ ಸರ್ವಪಿಣ್ಡ ವ್ಯಾಪಿನಾ ಆತ್ಮವನ್ತೋ ಮನುಷ್ಯಾದಯಃ । ಏವಂ ಮನೋಮಯಾದಿಭಿಃ ಪೂರ್ವ ಪೂರ್ವವ್ಯಾಪಿಭಿಃ ಉತ್ತರೋತ್ತರೈಃ ಸೂಕ್ಷ್ಮೈಃ ಆನನ್ದಮಯಾನ್ತೈಃ ಆಕಾಶಾದಿ ಭೂತಾರಬ್ಧೈಃ ಅವಿದ್ಯಾಕೃತೈಃ ಆತ್ಮವನ್ತಃ ಸರ್ವೇ ಪ್ರಾಣಿನಃ । ತಥಾ ಸ್ವಾಭಾವಿಕೇ ನಾಪಿ ಆಕಾಶಾದಿಕಾರಣೇನ ನಿತ್ಯೇನ ಅವಿಕೃತೇನ ಸತ್ಯಜ್ಞಾನಾನನ್ತಲಕ್ಷಣೇನ ಪ್ರಣ್ಚಕೋಶಾತಿಗೇನ ಸರ್ವಾತ್ಮನಾ ಆತ್ಮವನ್ತಃ । ಸ ಹಿ ಪರಮಾರ್ಥತ ಆತ್ಮಾ ಸರ್ವೇಷಾಮ್ ಇತ್ಯೇತದಪಿ ಅರ್ಥಾತ್ ಉಕ್ತಂ ಭವತಿ ॥

(ಭಾಷ್ಯಾರ್ಥ)

ಹೀಗಿರುವದರಿಂದಲೇ[3] ಪ್ರಾಣಿಗಳು ಅಳತೆಯ ಕಟ್ಟುಳ್ಳ[4] ಬರಿಯ ಅನ್ನ ಮಯನಿಂದಲೇ ಆತ್ಮವಂತರಾಗಿಲ್ಲ, ಮತ್ತೇನೆಂದರೆ ಆ (ಅನ್ನಮಯನ) ಒಳಗಿರುವ (ಎಲ್ಲರಿಗೂ) ಸಾಧಾರಣನಾಗಿ[5] ಎಲ್ಲಾ ಶರೀರಗಳನ್ನೂ ವ್ಯಾಪಿಸಿಕೊಂಡಿರುವ ಪ್ರಾಣಮಯನಿಂದಲೂ ಮನುಷ್ಯಾದಿಗಳು ಆತ್ಮವಂತರಾಗಿರುವರು. ಇದರಂತೆ ಹಿಂದು ಹಿಂದಿನ (ಆತ್ಮನನ್ನು) ವ್ಯಾಪಿಸಿಕೊಂಡಿರುವ ಮುಂದುಮುಂದಿನ ಸೂಕ್ಷ್ಮವಾಗಿರುವ ಮನೋಮಯನೇ ಮೊದಲಾಗಿ ಆನಂದಮಯನವರೆಗಿರುವ ಆಕಾಶಾದಿಭೂತಗಳಿಂದ

1. ಪ್ರಾಣನ ಬಲದಿಂದಲೇ ಮನುಷ್ಯಾದಿಗಳ ಶರೀರೇಂದ್ರಿಯಸಂಘಾತಗಳು ಕೆಲಸ ಮಾಡುತ್ತಿರುವವು ಎಂದರ್ಥ.

2. "ತದನ್ತರ್ಗತಪ್ರಾಣಮಯೇನಾಪಿ" ಎಂದು ವಾ॥ ಪಾಠ.

3. ಎಲ್ಲಾ ಶರೀರಿಗಳೂ ಪ್ರಾಣಮಯನ ಅಧೀನರಾಗಿ ವ್ಯಾಪಾರಮಾಡುತ್ತ ಅವನಿಂದ ವ್ಯಾಪ್ತರಾಗಿರುವದರಿಂದಲೇ.

4. ' ಒಬ್ಬೊಬ್ಬರಿಗೆ ಒಂದೊಂದು ಅನ್ನಮಯವಾದ ಶರೀರವಿರುವದರಿಂದ ಅನ್ನಮಯಾತ್ಮನು ಅಳತೆಗೆ ಸಿಕ್ಕಿರುತ್ತಾನೆ, ಇವನು ಸರ್ವಸಾಧಾರಣನಲ್ಲ.

5. ಪ್ರಾಣಮಯನು ಅನ್ನಮಯಶರೀರದಿಂದಲೇ ಆಕಾರವುಳ್ಳವನಂತೆ ತೋರುವನು ; ಆದರೆ ನಿಜವಾಗಿ ಅವನಿಗೆ ಇಷ್ಟೆಂಬ ಅಳತೆಯಿಲ್ಲ ; ಅವನು ಎಲ್ಲಾ ಪ್ರಾಣಿಗಳಿಗೂ ಸಾಧಾರಣನಾಗಿರುತ್ತಾನೆ.

ಆಗಿರುವ ಅವಿದ್ಯಾಕಲ್ಪಿತವಾದ[1] (ಆತ್ಮರು)ಗಳಿಂದಲೂ ಪ್ರಾಣಿಗಳಿಲ್ಲ ಆತ್ಮವಂತರಾಗಿರುವವು. ಹಾಗೂ ಸ್ವಾಭಾವಿಕವಾಗಿರುವ[2] ಆಕಾಶವೇ ಮುಂತಾದವುಗಳಿಗೆ ಕಾರಣವಾಗಿರುವ ನಿತ್ಯನಾದ ಯಾವ ವಿಕಾರವೂ ಇಲ್ಲದ ಸರ್ವಗತನಾಗಿರುವ ಐದು ಕೋಶಗಳನ್ನೂ ಮೀರಿರುವ ಎಲ್ಲರಿಗೂ ಆತ್ಮನಾಗಿರುವ ಸತ್ಯಜ್ಞಾನಾನಂತವೆಂಬ ಲಕ್ಷಣವುಳ್ಳ (ಬ್ರಹ್ಮದಿಂದ) ಆತ್ಮವಂತವಾಗಿರುವವು. ಏಕೆಂದರೆ ಆ (ಆತ್ಮನೇ) ನಿಜವಾಗಿ ಎಲ್ಲರಿಗೂ ಆತ್ಮನಾಗಿರುವನು ಎಂಬುದನ್ನೂ (ಶಬ್ದದ) ಅರ್ಥ(ವಶ)ದಿಂದ ಹೇಳಿದಂತೆಯೇ ಆಯಿತು.[3]

(ಭಾಷ್ಯ)

೧೨೮. ಪ್ರಾಣಂ ದೇವಾ ಅನು ಪ್ರಾಣನ್ತಿ ಇತ್ಯುಕ್ತಮ್ । ತತ್ ಕಸ್ಮಾದಿತಿ ? ಉಚ್ಯತೇ-ಪ್ರಾಣೋ ಹಿ ಯಸ್ಮಾತ್ ಭೂತಾನಾಂ ಆಯುಃ ಜೀವನಮ್ । ''ಯಾವದ್ಧ್ಯಸ್ಮಿನ್ಶರೀರೇ ಪ್ರಾಣೋ ವಸತಿ ತಾವದಾಯುಃ'' (ಕೌ. ೩-೨) ಇತಿ ಶ್ರುತ್ಯನ್ತರಾತ್ । ತಸ್ಮಾತ್ ಸರ್ವಾಯುಷಮ್ ಸರ್ವೇಷಾಮ್ ಆಯುಃ ಸರ್ವಾಯುಃ । ಸರ್ವಾಯುರೇವ ಸರ್ವಾಯುಷಮ್ ಇತಿ ಉಚ್ಯತೇ । ಪ್ರಾಣಾಪಗಮೇ ಮರಣ ಪ್ರಸಿದ್ಧೇಃ ಪ್ರಸಿದ್ಧಂ ಹಿ ಲೋಕೇ ಸರ್ವಾಯುಷ್ಟ್ವಂ ಪ್ರಾಣಸ್ಯ ॥

(ಭಾಷ್ಯಾರ್ಥ)

ಪ್ರಾಣವನ್ನು ಅನುಸರಿಸಿ ದೇವತೆಗಳು ಜೀವಿಸಿರುವರು ಎಂದು ಹೇಳಲಾಯಿತಲ್ಲ, ಅದೇಕೆ ? - ಎಂದರೆ (ಶ್ರುತಿ) ಹೇಳುತ್ತದೆ :- ಏಕೆಂದರೆ ಭೂತಗಳಿಗೆ ಎಂದರೆ ಪ್ರಾಣಿಗಳಿಗೆ ಪ್ರಾಣವೇ ಆಯುಸ್ಸು, ಎಂದರೆ ಬದುಕು(ವ ಸಾಧನವು). ''ಎಲ್ಲಿಯವರೆಗೆ ಈ ಶರೀರದಲ್ಲಿ ಪ್ರಾಣವು ಇರುತ್ತದೆಯೋ ಅಲ್ಲಿಯವರೆಗೇ ಆಯುಸ್ಸು'' (ಕೌ. ೩-೨) ಎಂಬ ಮತ್ತೊಂದು ಶ್ರುತಿಯು ಇದಕ್ಕೆ ಪ್ರಮಾಣವು. ಆದ್ದರಿಂದ (ಅದು) ಸರ್ವಾಯುಷವು. ಸರ್ವರ ಆಯುಸ್ಸು ಸರ್ವಾಯುಸ್ಸು ;

1. ಆನಂದಮಯನವರೆಗಿನ ಆತ್ಮರುಗಳಲ್ಲಿ ಹಿಂದಿನದಕ್ಕಿಂತ ಮುಂದಿನದು ಸೂಕ್ಷ್ಮವೂ ವ್ಯಾಪಕವೂ ಆಗಿರುವದರಿಂದ ಆತ್ಮನು. ಆದರೆ ನಿಜವಾಗಿ ಅದು ಆತ್ಮನಲ್ಲ, ತಪ್ಪುತಿಳಿವಳಿಕೆಯಿಂದ ಆತ್ಮನೆಂದು ತೋರುತ್ತಿರುತ್ತದೆ. ಗೀ. ಭಾ. ೧೩-೧೭ರಲ್ಲಿ ''ಪರಮಾತ್ಮಾ'' ಎಂಬುದರ ವ್ಯಾಖ್ಯಾನವನ್ನು ನೋಡಿ. ''ಆನಂದಮಯ'' ಎಂಬುದು ಕಾರಣಾವಿದ್ಯೆಯೆಂದು ಹೇಳುವ ಕೆಲವರು ವೇದಾಂತಿಗಳ ಅಭಿಪ್ರಾಯವು ಇಲ್ಲಿರುವ ಭಾಷ್ಯಕ್ಕೆ ವಿರುದ್ಧವಾಗಿದೆ ಎಂಬುದು ಸ್ಪಷ್ಟ.

2. ಸ್ವರೂಪವೇ ಆಗಿರುವ.

3. ಏಕೆಂದರೆ ಕಲ್ಪಿತವಾದದ್ದಕ್ಕೆ ಅಧಿಷ್ಠಾನವೊಂದಿರಲೇಬೇಕು.

ಸರ್ವಾಯುಸ್ಸೇ ಸರ್ವಾಯುಷವು[1] ಎಂದು ಎನಿಸಿಕೊಳ್ಳುತ್ತದೆ ಪ್ರಾಣವು ಹೋದರೆ ಸಾವು ಸಿದ್ಧವಾಗಿರುವದೆಂಬ ಕಾರಣದಿಂದ ಪ್ರಾಣವು ಸರ್ವಾಯುಸ್ಸೆಂದು ಲೋಕದಲ್ಲಿ ಪ್ರಸಿದ್ಧವಾಗಿದೆಯಲ್ಲವೆ ?[2]

(ಭಾಷ್ಯ)

೧೨೯. ಅತಃ ಅಸ್ಮಾತ್ ಬಾಹ್ಯಾತ್ ಅಸಾಧಾರಣಾತ್ ಅನ್ನಮಯಾತ್ ಆತ್ಮನಃ ಅಪಕ್ರಮ್ಯ ಅನ್ತಃ ಸಾಧಾರಣಂ ಪ್ರಾಣಮಯಮ್ ಆತ್ಮಾನಮ್ ಬ್ರಹ್ಮ ಉಪಾಸತೇ ಯೇ "ಅಹಮಸ್ಮಿ ಪ್ರಾಣಃ ಸರ್ವಭೂತಾನಾಮ್ ಆತ್ಮಾ ಆಯುಃ ಜೀವನ ಹೇತುತ್ವಾತ್" ಇತಿ ತೇ ಸರ್ವಮೇವ ಆಯುಃ ಅಸ್ಮಿನ್ ಲೋಕೇ ಯನ್ತಿ । ನಾಪ ಮೃತ್ಯುನಾ ಮ್ರಿಯನ್ತೇ ಪ್ರಾಕ್ ಪ್ರಾಪ್ತಾದಾಯುಷಃ ಇತ್ಯರ್ಥಃ । ಶತಂ ವರ್ಷಾಣಿ ಇತಿ ತು ಯುಕ್ತಮ್ । 'ಸರ್ವಮಾಯುಃ' (?)[3] ಇತಿ ಶ್ರುತಿಪ್ರಸಿದ್ಧೇಃ । ಕಿಂ ಕಾರಣಮ್ ? ಪ್ರಾಣೋ ಹಿ ಭೂತಾನಾಮ್ ಆಯುಃ ತಸ್ಮಾತ್ ಸರ್ವಾಯುಷಮುಚ್ಯತ ಇತಿ । ಯೋ ಯದ್ಗುಣಂ ಬ್ರಹ್ಮ ಉಪಾಸ್ತೇ ಸ ತದ್ಗುಣಭಾಗ್ ಭವತಿ ಇತಿ ವಿದ್ಯಾಫಲಪ್ರಾಪ್ತೇಃ ಹೇತ್ವರ್ಥಃ ಪುನರ್ವಚನಂ "ಪ್ರಾಣೋ ಹಿ" ಇತ್ಯಾದಿ ॥

(ಭಾಷ್ಯಾರ್ಥ)

ಆದ್ದರಿಂದ ಈ ಹೊರಗಿನ ಸಾಧಾರಣನಲ್ಲದ ಅನ್ನಮಯನಾದ ಆತ್ಮನನ್ನು ಬಿಟ್ಟು (ಇವನ) ಒಳಗೆ (ಎಲ್ಲರಿಗೂ) ಸಾಧಾರಣನಾಗಿರುವ ಪ್ರಾಣಮಯನೆಂಬ ಆತ್ಮನನ್ನು ಬ್ರಹ್ಮವೆಂದು ಯಾರು ಉಪಾಸನೆಮಾಡುತ್ತಾರೋ "ಎಲ್ಲಾ ಭೂತಗಳಿಗೂ ಆತ್ಮನಾದ ಪ್ರಾಣನು ನಾನು, (ಎಲ್ಲರಿಗೂ) ಬದುಕಿರುವದಕ್ಕೆ ಕಾರಣವಾಗಿರುವದರಿಂದ ಆಯುಸ್ಸು (ಆಗಿರುತ್ತೇನೆ)" ಎಂದು (ಉಪಾಸನೆಮಾಡುತ್ತಾರೋ) ಅವರು ಎಲ್ಲಾ ಆಯುಸ್ಸನ್ನೂ (ಈ) ಲೋಕದಲ್ಲಿ ಪಡೆದುಕೊಳ್ಳುತ್ತಾರೆ. (ತಾವು) ಪಡೆದುಕೊಂಡಿರುವ ಆಯುಸ್ಸಿಗಿಂತ ಮುಂಚೆಯೇ ಅಪಮೃತ್ಯುವಿನಿಂದ ಸಾಯುವದಿಲ್ಲ[4] ಎಂದರ್ಥ. ಆದರೆ (ಇಲ್ಲಿ) ನೂರುವರ್ಷಗಳ (ಆಯು

1. ಸರ್ವಾಯುಃ ಎಂಬುದಕ್ಕೆ ಸ್ವಾರ್ಥದಲ್ಲಿ ಪ್ರತ್ಯಯವು ಸೇರಿ ಸರ್ವಾಯುಷಮ್ ಎಂದು ಶಬ್ದರೂಪವಾಗಿದೆ ಎಂದರ್ಥ.

2. ಹೀಗೆ ಲೋಕಪ್ರಸಿದ್ಧವಾದ ವಿಷಯವಿದೆಂಬುದನ್ನು 'ಹಿ' ಎಂಬ ಮಾತು ತಿಳಿಸುತ್ತದೆ ಎಂದು ಭಾವ.

3. "ಸರ್ವಮಾಯುರೇತಿ" ಎಂದು ವಾ॥ ಪಾಠ.

4. ಕರ್ಮಾನುಸಾರವಾಗಿ ಪಡೆದುಕೊಂಡಿರುವಷ್ಟು ಆಯುಸ್ಸು ದೊರಕುತ್ತದೆ ; ಅಧರ್ಮಾದಿಗಳಿಂದ ಕಡಿಮೆಯಾಗಿ ಅಪಮೃತ್ಯುವಿಗೆ ತುತ್ತಾಗುವದಿಲ್ಲ.

ಸ್ಸನ್ನೂ ಪಡೆದುಕೊಳ್ಳುತ್ತಾರೆ) ಎಂದು (ಅರ್ಥಮಾಡುವದು ಹೆಚ್ಚು) ಯುಕ್ತವಾಗಿರುತ್ತದೆ. ಏಕೆಂದರೆ "ಇಡಿಯ ಆಯುಸ್ಸು" (?) ಎಂದು ಶ್ರುತಿಪ್ರಸಿದ್ಧವಾಗಿರುತ್ತದೆ.[1] (ಪ್ರಾಣೋಪಾಸಕರು ಇಡಿಯ ಆಯುಸ್ಸನ್ನು ಪಡೆದುಕೊಳ್ಳುತ್ತಾರೆಂಬುದಕ್ಕೆ) ಕಾರಣವೇನು ? (ಎಂದರೆ) "ಪ್ರಾಣವೇ ಭೂತಗಳಿಗೆ ಆಯುಸ್ಸು ; ಆದ್ದರಿಂದ (ಅದು) ಸರ್ವಾಯುಷವೆನಿಸಿರುತ್ತದೆ". ಯಾವನು ಯಾವ ಗುಣದಿಂದ ಕೂಡಿದ್ದೆಂದು ಬ್ರಹ್ಮವನ್ನು ಉಪಾಸನೆಮಾಡುವನೋ ಅವನು ಆ ಗುಣವನ್ನು ಹೊಂದುವನು ಎಂಬ (ನ್ಯಾಯದಿಂದ)[2] ಉಪಾಸನೆಯ ಫಲವು ದೊರಕುವ ಕಾರಣವನ್ನು(ತಿಳಿಸುವ)ದಕ್ಕಾಗಿ "ಪ್ರಾಣೋ ಹಿ" ಮುಂತಾದ ವಾಕ್ಯವನ್ನು ಮತ್ತೊಮ್ಮೆ ಹೇಳಿರುತ್ತದೆ.

ಪ್ರಾಣಮಯಾತ್ಮಪ್ರಕರಣದ ಉಪಸಂಹಾರ

ತಸ್ಮೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ ॥೨॥

೨. ಆ ಹಿಂದಿನವನಿಗೆ ಇವನೇ ಶಾರೀರನಾದ ಆತ್ಮನು.

(ಭಾಷ್ಯ)

೧೩೦. ತಸ್ಯ ಪೂರ್ವಸ್ಯ ಅನ್ನಮಯಸ್ಯ ಏಷ ಏವ ಶರೀರೇ ಅನ್ನಮಯೇ ಭವಃ ಶಾರೀರಃ ಆತ್ಮಾ । ಕಃ ? ಯ ಏಷ ಪ್ರಾಣಮಯಃ ॥

(ಭಾಷ್ಯಾರ್ಥ)

ಆ ಹಿಂದಿನ ಅನ್ನಮಯನಿಗೆ ಇವನೇ ಅನ್ನಮಯವಾದ ಶರೀರದಲ್ಲಿರುವದರಿಂದ ಶಾರೀರನಾದ ಆತ್ಮನು. (ಇವನು ಎಂದರೆ) ಯಾರು ? - ಎಂದರೆ ಯಾವ ಈ ಪ್ರಾಣಮಯನಿದಾನಲ್ಲ, (ಇವನೇ).[3]

---

1. ಪುರುಷನಿಗೆ ನೂರು ವರ್ಷವು ಆಯುಸ್ಸು ಎಂದು ತೈತ್ತಿರೀಯ, ಐತರೇಯ - ಮುಂತಾದ ಬ್ರಾಹ್ಮಣಗಳಲ್ಲಿ ವಾಕ್ಯಗಳಿವೆ. "ಸರ್ವಮಾಯುಃ" ಎಂದು ಒಂದು ಶ್ರುತಿವಚನವಿದೆಯೋ ಇಲ್ಲವೋ ತಿಳಿಯದು. ಛಾ. ಭಾ. ೨-೧೨-೨ ನೋಡಿ.

2. ಅವನನ್ನು ಹೇಗೆ ಹೇಗೆ ಉಪಾಸನೆಮಾಡುವರೋ ಹಾಗೆಹಾಗೆ ಫಲವಾಗುವದು ಎಂದು ಶತಪಥಬ್ರಾಹ್ಮಣದಲ್ಲಿದೆ.

3. ಯಾವನು ಹಿಂದಿನವನಿಗೆ ಆತ್ಮನೋ ಅವನೇ ಇವನಿಗೂ ಆತ್ಮನು ; ಎಲ್ಲರಿಗೂ ಪರಮಾರ್ಥವಾದ ಆತ್ಮನೇ ಎಂಬ ಅರ್ಥವನ್ನು ವ್ಯಾಖ್ಯಾನಕಾರರು ತೆಗೆದಿರುತ್ತಾರೆ.

೫. ಮನೋಮಯಾತ್ಮ

ಮನೋಮಯಾತ್ಮನ ವರ್ಣನೆ

ತಸ್ಮಾದ್ ವಾ ಏತಸ್ಮಾತ್ ಪ್ರಾಣಮಯಾತ್ । ಅನ್ಯೋಽನ್ತರ ಆತ್ಮಾ ಮನೋಮಯಃ । ತೇನೈಷ ಪೂರ್ಣಃ ॥೩॥

೩. ಆ ಈ ಪ್ರಾಣಮಯನಿದಾನಲ್ಲ, ಇವನಿಗಿಂತ ಇನ್ನೊಬ್ಬ ಮನೋಮಯನಾದ ಒಳಗಿನ ಆತ್ಮ(ನಿರುವನು). ಆತನಿಂದ ಇವನು ತುಂಬಿರುವನು.

(ಭಾಷ್ಯ)

೧೩೧. 'ತಸ್ಮಾದ್ವಾ ಏತಸ್ಮಾತ್ ' ಇತಿ ಉಕ್ತಾರ್ಥಮ್ ಅನ್ಯತ್ । 'ಅನ್ಯೋಽನ್ತರ ಆತ್ಮಾ ಮನೋಮಯಃ'' । ಮನ ಇತಿ ಸಙ್ಕಲ್ಪಾದ್ಯಾತ್ಮಕಮ್ ಅನ್ತಃಕರಣಮ್ । ತನ್ಮಯಃ ಮನೋಮಯಃ । ಯಥಾ ಅನ್ನಮಯಃ । ಸೋಽಯಂ ಪ್ರಾಣಮಯಸ್ಯ ಅಭ್ಯನ್ತರ ಆತ್ಮಾ ॥

(ಭಾಷ್ಯಾರ್ಥ)

''ಆ ಈ (ಪ್ರಾಣಮಯನಿದಾನಲ್ಲ), ಇವನಿಗಿಂತ'' ಎಂಬ ಮಿಕ್ಕ ವಾಕ್ಯಕ್ಕೆ ಅರ್ಥವನ್ನು ಹಿಂದೆಯೇ ಹೇಳಿದೆ. ''ಇನ್ನೊಬ್ಬ ಮನೋಮಯನಾದ ಒಳಗಿನ ಆತ್ಮನು'' ಎಂಬಲ್ಲಿ ಮನಸ್ಸೆಂದರೆ ಸಂಕಲ್ಪವೇ ಮುಂತಾದ ರೂಪದಲ್ಲಿರುವ[1] ಅಂತಃಕರಣವು. ತನ್ಮಯನಾಗಿರುವದರಿಂದ (ಇವನು) ಮನೋಮಯ(ನೆನಿಸುತ್ತಾನೆ). 'ಅನ್ನಮಯ' ಎಂಬಂತೆಯೇ[2] (ಇದನ್ನು ಅರಿಯಬೇಕು). ಆ ಈ (ಮನೋಮಯನು) ಪ್ರಾಣಮಯನಿಗೆ ಒಳಗಿನ ಆತ್ಮನು.

ಮನೋಮಯಾತ್ಮನ ಅವಯವಗಳು

ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ

1. ಸಂಕಲ್ಪವಿಕಲ್ಪಗಳೆಂಬ ವೃತ್ತಿಗಳಿಂದೊಡಗೂಡಿದ ಎಂದರ್ಥ. ಅಂತಃಕರಣಕ್ಕೆ ಬೇರೆ ಬೇರೆಯ ವೃತ್ತಿಗಳಿಂದ ಬೇರೆಬೇರೆಯ ಹೆಸರುಗಳು ಬರುತ್ತವೆ.

2. ಅನ್ನಮಯನೆಂದರೆ ಅನ್ನವಿಕಾರವಾಗಿರುವಂತೆ, ಮನೋಮಯನು, ಮನೋವಿಕಾರರೂಪನು ; ಅವನಂತೆ ಇವನೂ ಅವಿದ್ಯಾಕಲ್ಪಿತನಾದ ಆತ್ಮನು.

ಪುರುಷವಿಧಃ । ತಸ್ಯ ಯಜುರೇವ ಶಿರಃ । ಋಗ್‌ದಕ್ಷಿಣಃ ಪಕ್ಷಃ । ಸಾಮೋತ್ತರಃ ಪಕ್ಷಃ । ಆದೇಶ ಆತ್ಮಾ । ಅಥರ್ವಾಙ್ಗಿರಸಃ ಪುಚ್ಛಂ ಪ್ರತಿಷ್ಠಾ ॥೪॥

೪. ಆ ಈತನು ಪುರುಷವಿಧನಾಗಿಯೇ ಇರುವನು. ಆತನ ಪುರುಷ ವಿಧತ್ವವನ್ನು ಅನುಸರಿಸಿ ಇವನು ಪುರುಷವಿಧ(ನಾಗಿರುತ್ತಾನೆ). ಅವನಿಗೆ ಯಜುಸ್ಸೇ ತಲೆ ; ಋಕ್ಕು ದಕ್ಷಿಣಪಕ್ಷವು ; ಸಾಮವು ಉತ್ತರಪಕ್ಷವು ; ಆದೇಶವು ಆತ್ಮ ; ಅಥರ್ವಾಂಗಿರಸವು ಪುಚ್ಛವು, ಪ್ರತಿಷ್ಠೆಯು.

(ಭಾಷ್ಯ)

೧೩-೨. ತಸ್ಯ ಯಜುರೇವ ಶಿರಃ । ಯಜುಃ ಇತಿ ಅನಿಯತಾಕ್ಷರಪಾದಾವ ಸಾನೋ ಮನ್ತ್ರವಿಶೇಷಃ । ತಜ್ಜಾತೀಯವಚನೋ ಯಜುಃಶಬ್ದಃ । ತಸ್ಯ ಶಿರಸ್ತ್ವಂ ಪ್ರಾಧಾನ್ಯಾತ್ । ಪ್ರಾಧಾನ್ಯಂ ಚ ಯಾಗಾದೌ ಸಂನಿಪತ್ಯೋಪಕಾರಕತ್ವಾತ್ । ಯಜುಷಾ ಹಿ ಹವಿರ್ದೀಯತೇ ಸ್ವಾಹಾಕಾರಾದಿನಾ । ವಾಚನಿಕೀ ವಾ ಶಿರ ಆದಿ ಕಲ್ಪನಾ ಸರ್ವತ್ರ । ಮನಸೋ ಹಿ ಸ್ಥಾನಪ್ರಯತ್ನನಾದಸ್ವರವರ್ಣಪದವಾಕ್ಯ ವಿಷಯಾ ತತ್ಸಂಕಲ್ಪಾತ್ಮಿಕಾ ತದ್ಭಾವಿತಾ ವೃತ್ತಿಃ ಶ್ರೋತ್ರಾದಿಕರಣದ್ವಾರಾ ಯಜುಃಸಂಕೇತವಿಶಿಷ್ಟಾ ಯಜುಃ ಇತ್ಯುಚ್ಯತೇ । ಏವಮ್ ಋಕ್, ಏವಂ ಸಾಮ । ಏವಂ ಚ ಮನೋವೃತ್ತಿತ್ವೇ ಮನ್ತ್ರಾಣಾಮ್ ವೃತ್ತಿರೇವ ಆವರ್ತ್ಯತೇ ಇತಿ ಮಾನಸೋ ಜಪಃ ಉಪಪದ್ಯತೇ । ಅನ್ಯಥಾ ಅವಿಷಯತ್ವಾತ್ ಮನ್ತ್ರೋ ನಾವರ್ತಯಿತುಂ ಶಕ್ಯಃ ಘಟಾದಿವತ್ ಇತಿ ಮಾನಸೋ ಜಪೋ ನೋಪಪದ್ಯತೇ । ಮನ್ತ್ರಾವೃತ್ತಿಶ್ಚ ಚೋದ್ಯತೇ ಬಹುಶಃ ಕರ್ಮಸು ॥

(ಭಾಷ್ಯಾರ್ಥ)

ಅವನಿಗೆ ಯಜುಸ್ಸೇ ತಲೆ, ಯಜುಸ್ಸು ಎಂದರೆ ಇಷ್ಟೆಂಬ ಅಕ್ಷರಗಳ ನಿಯಮವಿಲ್ಲದೆ ಇರುವ ಪಾದದಲ್ಲಿ ಕೊನೆಗಾಣುವ ಒಂದಾನೊಂದು ಮಂತ್ರವು, (ಇಲ್ಲಿ) ಯಜುಸ್ಸು ಎಂಬ ಶಬ್ದವು ಆ (ಮಂತ್ರದ) ಜಾತಿಗೆ[1] (ಸೇರಿದ ಮಂತ್ರ ಗಳನ್ನು) ಹೇಳುತ್ತದೆ. ಆ (ಯಜುಸ್ಸು) ತಲೆಯೆಂದಿರುವದು (ಅದಕ್ಕಿರುವ)

1. 'ಯಜುಃ' ಎಂಬ ಏಕವಚನವನ್ನು ಉಪಯೋಗಿಸಿರುವದು ಒಂದಾನೊಂದು ಗೊತ್ತಾದ ಯಜುಸ್ಸನ್ನು ತಿಳಿಸುವದಕ್ಕಲ್ಲ ; ಯಜುಸ್ಸಿನ ಜಾತಿಯ ಮಂತ್ರಗಳನ್ನೆಲ್ಲ ತಿಳಿಸುವ ದಕ್ಕೆ ಎಂದರ್ಥ.

ಮುಖ್ಯತ್ವದಿಂದ. (ಆ) ಮುಖ್ಯತ್ವವೆಂಬುದೂ (ಯಜುಸ್ಸು) ಯಾಗಾದಿಗಳಲ್ಲಿ ನೇರಾಗಿ[1] ಉಪಯೋಗವಾಗುವದರಿಂದ (ಉಂಟಾದದ್ದು) ; ಏಕೆಂದರೆ ಸ್ವಾಹಾಕಾರವೇ ಮುಂತಾದವುಗಳಿಂದ[2] ಹವಿಸ್ಸನ್ನು ಯಜುಸ್ಸಿನಿಂದಲೇ ಕೊಡುತ್ತಾರೆ. ಅಥವಾ ವಚನಬಲದಿಂದಲೇ ಎಲ್ಲಾ ಕಡೆಯಲ್ಲಿಯೂ ತಲೆ ಮುಂತಾದವುಗಳನ್ನು ಕಲ್ಪಿಸಿರುತ್ತದೆ (ಎಂದಾದರೂ ಇಟ್ಟುಕೊಳ್ಳಬಹುದು). ಸ್ಥಾನ, ಪ್ರಯತ್ನ, ನಾದ, ಸ್ವರ, ವರ್ಣ, ಪದ, ವಾಕ್ಯ - ಇವುಗಳ ವಿಷಯವಾದ ಅವುಗಳ ಸಂಕಲ್ಪರೂಪವಾದ ಆ ಭಾವನೆಯಿಂದ ಕೂಡಿದ ಮನಸ್ಸಿನ ವೃತ್ತಿಯೇ[3] ಶ್ರೋತ್ರವೇ ಮುಂತಾದ ಕರಣಗಳ ದ್ವಾರವಾಗಿ ಯಜುಸ್ಸು ಎಂಬ ಸಂಕೇತದಿಂದ ಕೂಡಿದ್ದಾಗಿ ಯಜುಸ್ಸು ಎನಿಸುತ್ತದೆ. ಋಕ್ಕೆಂಬುದೂ ಹೀಗೆಯೇ, ಸಾಮವೆಂಬುದೂ ಹೀಗೆಯೇ.[4] ಹೀಗೆ ಮಂತ್ರಗಳು ಮನೋವೃತ್ತಿಗಳಾಗಿರುವದರಿಂದಲೇ[5] ವೃತ್ತಿಯನ್ನು ಮಾತ್ರ ಆವರ್ತನೆಮಾಡಬಹುದಾದ್ದರಿಂದ (ಅವುಗಳನ್ನು) ಮನಸ್ಸಿನಲ್ಲಿ ಜಪಮಾಡಬಹುದು ಎಂಬುದು ಹೊಂದುತ್ತದೆ. ಹಾಗಿಲ್ಲದಿದ್ದರೆ[6] ಮಂತ್ರವು ಗಡಿಗೆಯೇ ಮುಂತಾದವುಗಳಂತೆ ಆವರ್ತನೆ ಮಾಡುವದಕ್ಕೆ ಬರುವಹಾಗಿಲ್ಲವಾದ್ದರಿಂದ (ಮಂತ್ರಗಳ) ಮಾನಸಜಪ ಎಂಬುದೇ ಹೊಂದದೆ ಹೋಗುತ್ತದೆ.

1. ಸಂನಿಪತ್ಯೋಪಕಾರಕವೆಂದರೆ ನೇರಾಗಿ ಉಪಯೋಗವಾಗುವದು ; ಆರಾದುಪಕಾರಕವೆಂದರೆ ಪರಂಪರೆಯಿಂದ ಉಪಯೋಗವಾಗುವದು. ಹವಿರ್ದಾನಕ್ಕೆ ಯಜುಸ್ಸೇ ನೇರಾಗಿ ಉಪಯೋಗವಾಗುತ್ತದೆ.

2. ಮುಂತಾದ ಎಂದರೆ 'ಸ್ವಧಾ', 'ವಷಟ್' ಇವುಗಳು.

3. ಶಬ್ದವಾದ ಯಜುಸ್ಸು ಮನೋಮಯನಿಗೆ ತಲೆ ಎಂಬುದು ಹೇಗೆ ? - ಎಂಬ ಶಂಕೆಗೆ ಸಮಾಧಾನವಿದು. ಆಯಾ ಯಜುಸ್ಸನ್ನುಚ್ಚರಿಸುವ ಮುಂಚೆ ಅದರ ಸಮಾನವಾದ ವೃತ್ತಿಯಾಗುತ್ತದೆ ; ಬಳಿಕ ಕಂಠಾದಿಸ್ಥಾನಗಳಿಂದ ನಾದ, ಸ್ವರ ಇವುಗಳಿಂದ ಕೂಡಿದ ವರ್ಣಗಳೂ, ಅವುಗಳ ಸಂಯೋಗದಿಂದ ಪದಗಳೂ, ಪದಗಳು ಸೇರಿ ವಾಕ್ಯವೂ ಹೊರತೋರಿಕೊಂಡು ಶ್ರೋತ್ರೇಂದ್ರಿಯಕ್ಕೆ ವಿಷಯವಾಗುವವು. ವೃತ್ತಿಯೇ ಮೊದಲು ಉಂಟಾಗುವದರಿಂದ ಅದನ್ನೇ ಇಲ್ಲಿ "ಯಜುಸ್ಸು" ಎಂದು ಕರೆದಿದೆ.

4. ಗೊತ್ತಾದ ಇಂತಿಷ್ಟು ವರ್ಣಗಳ ಇಂತಿಷ್ಟು ಪಾದಗಳುಳ್ಳದ್ದು ಋಕ್ಕು ; ಗೀತರೂಪವಾಗಿರುವ ಋಕ್ಕು ಸಾಮವು. ಇವೆರಡಕ್ಕೂ ಯಜುಸ್ಸಿನಂತೆ ವೃತ್ತಿಯೇ ಮೂಲವಾಗಿರುವದರಿಂದ ಇವುಗಳನ್ನು ಮನೋಮಯನ ಪಕ್ಷಗಳೆಂದು ಕರೆದಿದೆ ಎಂದರ್ಥ.

5. ವೃತ್ತಿಗಳು ನಮ್ಮ ಅಧೀನವಾಗಿರುವದರಿಂದ ಅವನ್ನು ಎಷ್ಟು ಸಲವಾದರೂ ಉಂಟುಮಾಡಿಕೊಳ್ಳಬಹುದು ; ಅಷ್ಟರಿಂದಲೇ ಮಂತ್ರದ ಜಪವಾದಂತಾಗುತ್ತದೆ.

6. ಮಂತ್ರವು ಹೊರಗಿನ ಶಬ್ದಮಾತ್ರವಾಗಿದ್ದರೆ.

ಆದರೆ ಕರ್ಮಗಳಲ್ಲಿ ಮಂತ್ರಗಳನ್ನು ಆವೃತ್ತಿಮಾಡಬೇಕು ಎಂದು ಬಹುವಾಗಿ ವಿಧಿಸಿರುತ್ತದೆ.[1]

(ಭಾಷ್ಯ)

೧೩೩. ಅಕ್ಷರವಿಷಯಸ್ಮೃತ್ಯಾವೃತ್ತ್ಯಾ ಮನ್ತ್ರಾವೃತ್ತಿಃ ಸ್ಯಾತ್ ಇತಿ ಚೇತ್ । ನ । ಮುಖ್ಯಾರ್ಥಾಸಂಭವಾತ್, "ತ್ರಿಃ ಪ್ರಥಮಾಮನ್ವಾಹ ತ್ರಿರುತ್ತಮಾಮ್" (ತೈ. ಸಂ. ೨-೫-೭) ಇತಿ ಋಗಾವೃತ್ತಿಃ ಶ್ರೂಯತೇ । ತತ್ರ ಋಚೋಽವಿಷಯತ್ವೇ ತದ್ವಿಷಯಸ್ಮೃತ್ಯಾವೃತ್ತೌ ಚ ಕ್ರಿಯಮಾಣಾಯಾಮ್ "ತ್ರಿಃ ಪ್ರಥಮಾಮನ್ವಾಹ" (ತೈ. ಸಂ.) ಇತಿ ಋಗಾವೃತ್ತಿರ್ಮುಖ್ಯೋಽರ್ಥಶ್ಚೋದಿತಃ ಪರಿತ್ಯಕ್ತಃ ಸ್ಯಾತ್ । ತಸ್ಮಾತ್ ಮನೋವೃತ್ಯುಪಾಧಿಪರಿಚ್ಛಿನ್ನಂ ಮನೋವೃತ್ತಿನಿಷ್ಠಮ್ ಆತ್ಮಚೈತನ್ಯಮ್ ಅನಾದಿನಿಧನಂ ಯಜುಃಶಬ್ದವಾಚ್ಯಮ್ ಆತ್ಮವಿಜ್ಞಾನಂ ಮನ್ತ್ರಾಃ ಇತಿ ॥

(ಭಾಷ್ಯಾರ್ಥ)

(ಶಂಕೆ :-) (ಮಂತ್ರದ) ಅಕ್ಷರಗಳ[2] ವಿಷಯದ ಸ್ಮೃತಿಯನ್ನು, ಆವರ್ತನ ಮಾಡುವದರಿಂದ(ಲೇ) ಮಂತ್ರದ ಆವೃತ್ತಿಯು ಆಗಬಹುದಲ್ಲ !

(ಪರಿಹಾರ :-) ಆಗಲಾರದು. ಏಕೆಂದರೆ (ಆಗ) ಮುಖ್ಯಾರ್ಥವನ್ನು (ತೆಗೆದುಕೊಂಡಂತೆ) ಆಗುವದಿಲ್ಲ. "ಮೊದಲನೆಯ ಋಕ್ಕನ್ನು ಮೂರುಸಲ ಜಪಿಸಲಿ, ಕೊನೆಯದನ್ನು ಮೂರುಸಲ (ಜಪಿಸಲಿ) !" (ತೈ. ಸಂ. ೨-೫-೭) ಎಂದು ಋಕ್ಕನ್ನು ಆವರ್ತನೆಮಾಡಬೇಕೆಂದು ಶ್ರುತಿಯಲ್ಲಿ (ಹೇಳಿ)ದೆ. ಅಲ್ಲಿ ಋಕ್ಕು (ಆವೃತ್ತಿಗೆ) ವಿಷಯವಲ್ಲವೆಂದಿಟ್ಟುಕೊಂಡು ಅದರ ವಿಷಯವಾದ ಸ್ಮೃತಿಯ ಆವೃತ್ತಿಯನ್ನೇ ಮಾಡುವದಾದರೆ "ಮೊದಲನೆಯ (ಋಕ್ಕನ್ನು) ಮೂರುಸಲ ಜಪಿಸಲಿ !" (ತೈ. ಸಂ) ಎಂದು ಋಕ್ಕನ್ನೇ ಆವರ್ತನೆಮಾಡಬೇಕೆಂದು ವಿಧಿಸಿರುವ ಮುಖ್ಯಾರ್ಥವನ್ನು ಬಿಟ್ಟಂತೆ ಆಗುವದು. **ಆದಕಾರಣ ಮನೋವೃತ್ತಿಯೆಂಬ ಉಪಾಧಿಗೆ ಕಟ್ಟುಬಿದ್ದಿರುವ ಮನೋವೃತ್ತಿಯಲ್ಲಿರುವ, ಆದ್ಯಂತಗಳಿಲ್ಲದ,**

1. ಮಂತ್ರಗಳನ್ನು ಜಪಮಾಡಬೇಕು ಎಂದು ಕರ್ಮಗಳಲ್ಲಿ ವಿಧಿಸಿರುವದು ಮಂತ್ರಗಳೆಂದರೆ ವೃತ್ತಿಗಳೆಂದು ಇಟ್ಟುಕೊಂಡ ಹೊರತು ಹೊಂದುವದಿಲ್ಲ ಎಂದರ್ಥ. ಮಾನಸ ಜಪವು ಶಬ್ದೋಚ್ಚಾರಣೆಗಿಂತ ಹೆಚ್ಚಿನದೆಂಬ ಸ್ಮೃತಿಗೂ ಈ ಅಭಿಪ್ರಾಯದಿಂದ ಬೆಂಬಲವು ದೊರಕುತ್ತದೆ ಎಂದು ತಿಳಿಯಬೇಕು.

2. ಮಾತುಗಳ.

ಆತ್ಮಚೈತನ್ಯವೇ[1] 'ಯಜುಸ್ಸು' ಎಂಬ ಶಬ್ದದಿಂದ ಹೇಳಲ್ಪಡುತ್ತದೆ, ಆ ಆತ್ಮ ವಿಜ್ಞಾನವೇ ಮಂತ್ರಗಳು ಎಂದು (ನಿಶ್ಚಯಿಸಬೇಕು).[2]

(ಭಾಷ್ಯ)

೧೩೪. ಏವಂ ಚ ನಿತ್ಯತ್ವೋಪಪತ್ತಿರ್ವೇದಾನಾಮ್ । ಅನ್ಯಥಾ ವಿಷಯತ್ವೇ ರೂಪಾದಿವತ್ ಅನಿತ್ಯತ್ವಂ ಚ ಸ್ಯಾತ್ । ನೈತದ್ ಯುಕ್ತಮ್ । "ಸರ್ವೇ ವೇದಾ ಯತ್ಪೈಕಂ ಭವನ್ತಿ । ಸ ಮಾನಸೀನ ಆತ್ಮಾ" (ತೈ. ಆ. ೩-೧೧-೧) ಇತಿ ಚ ಶ್ರುತಿಃ ನಿತ್ಯಾತ್ಮನಾ ಏಕತ್ವಂ ಬ್ರುವತೀ ಋಗಾದೀನಾಂ ನಿತ್ಯತ್ವೇ ಸಮಞ್ಜಸಾ ಸ್ಯಾತ್ । "ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ" (ಋಗ್ವೇ. ೨-೩-೨೧, ಶ್ವೇ. ೪-೮) ಇತಿ ಚ ಮನ್ತ್ರವರ್ಣಃ ॥

(ಭಾಷ್ಯಾರ್ಥ)

ಮತ್ತು ಹೀಗೆ (ಒಪ್ಪಿದರೇ) ವೇದಗಳು ನಿತ್ಯವೆಂಬುದು ಹೊಂದುತ್ತದೆ. ಹಾಗಿಲ್ಲದೆ (ಅವು) ವಿಷಯವೆಂದಾದರೆ[3] ರೂಪವೇ ಮುಂತಾದವುಗಳಂತೆ (ಅವು) ಅನಿತ್ಯವೆಂದೂ ಆಗಿಬಿಡುವವು. ಅದು ಸರಿಯಲ್ಲ. "ಎಲ್ಲಾ ವೇದಗಳೂ ಯಾವನಲ್ಲಿ ಒಂದಾಗುವವೋ....ಅವನೇ (ಜನರ) ಮನಸ್ಸಿನಲ್ಲಿರುವ ಆತ್ಮನು" (ತೈ. ಆ. ೩-೧೧-೧) ಎಂದು (ವೇದಗಳಿಗೆ) ನಿತ್ಯನಾದ ಆತ್ಮನೊಡನೆ ಐಕ್ಯವನ್ನು ಹೇಳುವ ಶ್ರುತಿಯು ಋಗಾದಿಗಳು ನಿತ್ಯವಾದರೇ ಸಮಂಜಸವಾಗುತ್ತದೆ.[4] "ಯಾವದರಲ್ಲಿ ಎಲ್ಲಾ ದೇವತೆಗಳೂ ಕುಳಿತಿರುವರೋ ಆ ನಾಶರಹಿತವಾದ ಪರಮಾಕಾಶದಲ್ಲಿ ಋಕ್ಕುಗಳಿರುವವು"

1. ಹಿಂದೆ ಯಜುಸ್ಸು, ಋಕ್ಕು - ಮುಂತಾದವುಗಳು ವೃತ್ತಿಗಳು ಎಂದು ಹೇಳಿದ್ದರೂ ಚಿದ್ರೂಪತ್ವವಾಗಿಯೇ ಅವಕ್ಕೆ ಆ ಹೆಸರು ಸಲ್ಲುತ್ತದೆ ; ಆದ್ದರಿಂದ ಅವು ನಿಜವಾಗಿ ಚಿದ್ರೂಪವೇ ಆಗಿರುವವೆಂದು ತಿಳಿಯಬೇಕು ಎಂದು ಭಾವ.

2. ಆದ್ದರಿಂದಲೇ ಅವುಗಳಿಗೆ ಪ್ರಾಮಾಣ್ಯವು ಬರುತ್ತದೆ. ಯಾವ ವೃತ್ತಿಯಾದರೂ ಚಿದ್ರೂಪವೇ ಆಗಿರುತ್ತದೆಯಾದರೂ ಮಿಕ್ಕ ವೃತ್ತಿಗಳು ತಮ್ಮ ತಮ್ಮ ವಿಷಯವನ್ನು ಬೆಳಗುವದಕ್ಕೆ ಎದ್ದವುಗಳಾಗಿವೆ. ಆದರೆ ವೇದರೂಪವಾದ ವೃತ್ತಿಯು ಆತ್ಮನನ್ನು ತಿಳಿಸುವದಕ್ಕೆ ಬಂದಿರುತ್ತದೆ ಎಂಬ ವಿಶೇಷವಿದೆ.

3. ಬರಿಯ ಜಡವಾದ ಶಬ್ದವೆಂದಾದರೆ.

4. ಇಲ್ಲವಾದರೆ ಅನಿತ್ಯವಾದ ವೇದಗಳಿಗೆ ನಿತ್ಯನಾದ ಆತ್ಮನೊಡನೆ ಐಕ್ಯವನ್ನು ಹೇಳುವದು ಸರಿಯಾಗುವದಿಲ್ಲ.

(ಶ್ವೇ. ೪-೮, ಋ. ೨-೩-೨೧) ಎಂಬ ಮಂತ್ರವರ್ಣವೂ (ಸಮಂಜಸವಾಗುತ್ತದೆ).[1]

(ಭಾಷ್ಯ)

೧೩೫. ಆದೇಶಃ ಅತ್ರ ಬ್ರಾಹ್ಮಣಮ್ । ಆದೇಷ್ಟವ್ಯವಿಶೇಷಾನ್ ಆದಿಶತಿ[2] ಇತಿ । ಅಥರ್ವಣಾ ಅಂಜ್ಗಿರಸಾ ಚ ದೃಷ್ಟಾ, ಮನ್ತ್ರಾಃ ಬ್ರಾಹ್ಮಣಂ ಚ ಶಾನ್ತಿಕ ಪೌಷ್ಟಿಕಾದಿಪ್ರತಿಷ್ಠಾಹೇತುಕರ್ಮಪ್ರಧಾನತ್ವಾತ್ ಪುಚ್ಛಂ ಪ್ರತಿಷ್ಠಾ ॥

(ಭಾಷ್ಯಾರ್ಥ)

'ಆದೇಶವು' ಎಂದರೆ ಇಲ್ಲಿ ಬ್ರಾಹ್ಮಣವು ; ಯಾವ ಯಾವ (ಕರ್ಮಗಳನ್ನು) ಅಪ್ಪಣೆಮಾಡಿ (ವಿಧಿಸ)ಬೇಕೋ ಅವುಗಳನ್ನು ಅಪ್ಪಣೆಮಾಡುತ್ತದೆಯಾದ್ದರಿಂದ (ಅದಕ್ಕೆ) 'ಆದೇಶ' ಎಂದು ಹೆಸರು. 'ಅಥರ್ವಾಜ್ಗಿರಸಃ' (ಎಂದರೆ) ಅರ್ಥವನೂ ಅಂಗಿರಸ್ಸೂ ಕಂಡುಹಿಡಿದಿರುವ ಮಂತ್ರಗಳೂ ಬ್ರಾಹ್ಮಣವೂ ಶಾಂತಿಯನ್ನೂ ಪುಷ್ಟಿಯನ್ನೂ (ಕೊಡುವ ಕರ್ಮಗಳೇ) ಮುಂತಾದ ಪ್ರತಿಷ್ಠೆಗೆ ಹೇತುವಾಗಿರುವ ಕರ್ಮಗಳೇ (ಅವಕ್ಕೆ) ಮುಖ್ಯವಾಗಿರುವದರಿಂದ ಅವು 'ಪುಚ್ಛವು, ಪ್ರತಿಷ್ಠೆಯು' (ಎಂದಿದೆ).

ಮನೋಮಯಾತ್ಮನ ಮಹಿಮೆ

ತದಪ್ಯೇಷ ಶ್ಲೋಕೋ ಭವತಿ ॥೫॥

(ಇತಿ ತೃತೀಯೋಽನುವಾಕಃ)

೫. ಅದೇ ವಿಷಯದಲ್ಲಿ ಈ ಶ್ಲೋಕವಿರುವದು :-

(ಮೂರನೆಯ ಅನುವಾಕವು ಮುಗಿಯಿತು)

ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ । ಆನನ್ದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕದಾಚನೇತಿ ॥೧॥

೧. ಯಾವದರಿಂದ ವಾಕ್ಕುಗಳು ಮನಸ್ಸಿನೊಡನೆ (ಅದನ್ನು) ಮುಟ್ಟದೆ ಹಿಂತಿರುಗುವವೋ, (ಆ) ಬ್ರಹ್ಮದ ಆನಂದವನ್ನು ಅರಿತುಕೊಂಡವನು ಎಂದಿಗೂ ಹೆದರುವದಿಲ್ಲ.

1. ಋಕ್ಕುಗಳೂ ಪರಮಾಕಾಶರೂಪವಾದ ಆತ್ಮನೂ ಒಂದೆಂದು ಈ ಮಂತ್ರದಲ್ಲಿ ಹೇಳಿರುತ್ತದೆ.

2. "ಅತಿದೇಷ್ಟವ್ಯಾನ್ ಅತಿಶಿಶತಿ" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಉತ್ತಮ.

(ಭಾಷ್ಯ)

೧೩೬. ತದಪಿ ಏಷ ಶ್ಲೋಕಃ ಭವತಿ ಸೋಮಯಾತ್ಮ ಪ್ರಕಾಶಕಃ ಪೂರ್ವವತ್, 'ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ' ಇತ್ಯಾದಿ ॥

(ಭಾಷ್ಯಾರ್ಥ)

ಅದೇ ವಿಷಯದಲ್ಲಿ ಈ ಮನೋಮಯಾತ್ಮನನ್ನು ತಿಳಿಸಿಕೊಡುವ ಶ್ಲೋಕವು ಇರುವದು. (ಇದನ್ನು) ಹಿಂದಿನಂತೆಯೇ (ವ್ಯಾಖ್ಯಾನಮಾಡಬೇಕು). 'ಯಾವದರಿಂದ ವಾಕ್ಕುಗಳು ಮನಸ್ಸಿನೊಡನೆ (ಅದನ್ನು) ಮುಟ್ಟಲಾರದೆ ಹಿಂತಿರುಗುವವೋ ಮುಂತಾದ (ಮಂತ್ರದ ಅರ್ಥವು ಸ್ಪಷ್ಟವಾಗಿರುತ್ತದೆ).[1]

ಮನೋಮಯಾತ್ಮಪ್ರಕರಣದ ಉಪಸಂಹಾರ

ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ ॥೨॥

೨. ಆ ಹಿಂದಿನವನಿಗೆ ಇವನೇ ಶಾರೀರನಾದ ಆತ್ಮನು.

(ಭಾಷ್ಯ)

೧೩೭..ತಸ್ಯ ಪೂರ್ವಸ್ಯ ಪ್ರಾಣಮಯಸ್ಯ ಏಷ ಏವ ಆತ್ಮಾ ಶಾರೀರಃ । ಶರೀರೇ ಪ್ರಾಣಮಯೇ ಭವಃ ಶಾರೀರಃ । ಕಃ ? ಯ ಏಷ ಮನೋಮಯಃ ॥

(ಭಾಷ್ಯಾರ್ಥ)

ಆ ಹಿಂದಿನ ಪ್ರಾಣಮಯನಿಗೆ ಇವನೇ ಶಾರೀರನಾದ ಆತ್ಮನು. ಪ್ರಾಣಮಯನೆಂಬ ಶರೀರದಲ್ಲಿರುವದರಿಂದ (ಇವನು) ಶಾರೀರ(ನೆನಿಸುವನು). ಯಾರು ? ಎಂದರೆ ಯಾವ ಈ ಮನೋಮಯನಿರುವನಲ್ಲ, (ಇವನೇ).

೬. ವಿಜ್ಞಾನಮಯಾತ್ಮ

ವಿಜ್ಞಾನಮಯಾತ್ಮನ ವರ್ಣನೆ

ತಸ್ಮಾದ್ವಾ ಏತಸ್ಮಾನ್ಮನೋಮಯಾತ್ । ಅನ್ಯೋಽನ್ತರ ಆತ್ಮಾ ವಿಜ್ಞಾನಮಯಃ । ತೇನೈಷ ಪೂರ್ಣಃ ॥೩॥

1. "ಅಪ್ರಾಪ್ಯ ಮನಸಾ ಸಹ ಇತ್ಯಾದಿಃ" ಎಂಬ ಪಾಠದಲ್ಲಿ "ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ" ಮುಂತಾದ ಶ್ಲೋಕವು ಇದೆ - ಎಂದು

೫. ಆ ಈ ಮನೋಮಯನಿದಾನಲ್ಲ, ಇವನಿಗಿಂತ ಇನ್ನೊಬ್ಬ ವಿಜ್ಞಾನ ಮಯನಾದ ಒಳಗಿನ ಆತ್ಮ (ನಿರುವನು). ಆತನಿಂದ ಇವನು ತುಂಬಿರುವನು.

(ಭಾಷ್ಯ)

೧೩೮. ತಸ್ಮಾದ್ವಾ ಏತಸ್ಮಾತ್ ಇತ್ಯಾದಿ ಪೂರ್ವವತ್ । ಅನ್ಯೋಽನ್ತರ ಆತ್ಮಾ ವಿಜ್ಞಾನಮಯಃ । ಮನೋಮಯಸ್ಯ ಅಭ್ಯನ್ತರೋ ವಿಜ್ಞಾನಮಯಃ । ಮನೋಮಯೋ ವೇದಾತ್ಮಾ ಉಕ್ತಃ । ವೇದಾರ್ಥವಿಷಯಾ ಬುದ್ಧಿಃ ನಿಶ್ಚಯಾತ್ಮಿಕಾ ವಿಜ್ಞಾನಮ್ । ತಚ್ಚ ಅಧ್ಯವಸಾಯಲಕ್ಷಣಮ್ ಅನ್ತಃಕರಣಸ್ಯ ಧರ್ಮಃ । ತನ್ಮಯಃ ನಿಶ್ಚಯವಿಜ್ಞಾನೈಃ ಪ್ರಮಾಣಸ್ವರೂಪೈಃ ನಿರ್ವರ್ತಿತ ಆತ್ಮಾ ವಿಜ್ಞಾನ ಮಯಃ । ಪ್ರಮಾಣವಿಜ್ಞಾನಪೂರ್ವಕೋ ಹಿ ಯಜ್ಞಾದಿಃ ತಾಯತೇ । ಯಜ್ಞಾದಿ ಹೇತುತ್ವಂ ಚ ವಕ್ಷ್ಯತಿ ಶ್ಲೋಕೇನ ॥

(ಭಾಷ್ಯಾರ್ಥ)

"ತಸ್ಮಾದ್ವಾ ಏತಸ್ಮಾತ್" (ಆ ಈ ಮನೋಮಯನಿದಾನಲ್ಲ, ಇವನಿಗಿಂತ ಎಂದುಮುಂತಾಗಿರುವ (ವಾಕ್ಯವನ್ನು) ಹಿಂದಿನಂತೆಯೇ[1] (ಅರ್ಥಮಾಡಿಕೊಳ್ಳ ಬೇಕು). "(ಇವನಿಗಿಂತ) ಇನ್ನೊಬ್ಬ ವಿಜ್ಞಾನಮಯನಾದ ಒಳಗಿನ ಆತ್ಮ (ನಿರು ವನು)." ಮನೋಮಯನ ಒಳಗೆ ಇರುವವನು ವಿಜ್ಞಾನಮಯನು. ಮನೋಮಯ ನಾದ ವೇದಾತ್ಮನನ್ನು ಹಿಂದೆ ಹೇಳಿರುತ್ತದೆ(ಯಷ್ಟೆ)? ವೇದಾರ್ಥವಿಷಯದಲ್ಲಿ (ಉಂಟಾಗುವ) ನಿಶ್ಚಯರೂಪವಾದ ಬುದ್ಧಿಗೆ ವಿಜ್ಞಾನವೆಂದು ಹೆಸರು. ಆ (ವಿಜ್ಞಾನವು) ನಿಶ್ಚಯರೂಪವಾಗಿರುವದರಿಂದ ಅಂತಃಕರಣದ ಧರ್ಮವಾಗಿರುತ್ತದೆ. ತನ್ಮಯನಾಗಿರುವ ಎಂದರೆ ಪ್ರಮಾಣಸ್ವರೂಪವಾದ ನಿಶ್ಚಯವಿಜ್ಞಾನಗಳಿಂದ ಉಂಟಾಗಿರುವ ಆತ್ಮನು ವಿಜ್ಞಾನಮಯ(ನೆನಿಸುತ್ತಾನೆ).[2] ಏಕೆಂದರೆ ಪ್ರಮಾಣ ವಿಜ್ಞಾನವನ್ನಿಟ್ಟುಕೊಂಡೇ ಅಲ್ಲವೆ, ಯಜ್ಞವೇ ಮುಂತಾದ (ಕರ್ಮವನ್ನು)

ಕನ್ನಡಿಸಬೇಕಾಗುವದು. ಮನಸ್ಸಿಗೂ ಇಂದ್ರಿಯಗಳಿಗೂ ವಿಷಯಗಳು ಗೋಚರವಾಗುತ್ತವೆಯೇ ಹೊರತು ಅವು ತಮಗೆ ತಾವೇ ಗೋಚರವಾಗಲಾರವು. ಆದ್ದರಿಂದ ಮನೋಮಯಾತ್ಮನು ಮನಸ್ಸಿಗೂ ವಾಗಾದಿಗಳಿಗೂ ಅವಿಷಯನೆಂದು ಮಂತ್ರದಲ್ಲಿ ವರ್ಣಿಸಿದೆ.

1 ಮನೋಮಯನಿಗಿಂತ ಸೂಕ್ಷ್ಮವಾಗಿ ಅವನನ್ನು ವ್ಯಾಪಿಸಿಕೊಂಡು ಅವನಂತೆಯೇ ಪುರುಷಾಕಾರನಾಗಿರುವ ಆತ್ಮನು ವಿಜ್ಞಾನಮಯನು ಎಂದು ಅರ್ಥಮಾಡಬೇಕು.

2. ವೇದರೂಪವಾದ ವ್ಯಕ್ತಿಗಳಿಂದ ಆಗಿರುವವನು ಮನೋಮಯನು ; ವೇದಾರ್ಥವನ್ನು ನಿಶ್ಚಯಿಸುವ ವಿಜ್ಞಾನಗಳಿಂದ ಆಗಿರುವವನು ವಿಜ್ಞಾನಮಯನು.

ಮಾಡುತ್ತಾರೆ ? (ವಿಜ್ಞಾನವು) ಯಜ್ಞವೇ ಮುಂತಾದದ್ದಕ್ಕೆ ಕಾರಣವಾಗಿರುವ ವೆಂಬುದನ್ನು ಮುಂದೆ ಶ್ಲೋಕದಿಂದ ಹೇಳಿಯೂ ಇರುತ್ತದೆ.

ವಿಜ್ಞಾನಮಯಾತ್ಮನ ಅವಯವಗಳು

ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಶ್ರದ್ಧೈವ ಶಿರಃ । ಋತಂ ದಕ್ಷಿಣಃ ಪಕ್ಷಃ । ಸತ್ಯಮುತ್ತರಃ ಪಕ್ಷಃ । ಯೋಗ ಆತ್ಮಾ । ಮಹಃ ಪುಚ್ಛಂ ಪತಿಷ್ಠಾ ॥೪॥

೪. ಆ ಈತನು ಪುರುಷವಿಧನಾಗಿಯೇ (ಇರುವನು). ಅವನ ಪುರುಷ ವಿಧತ್ವವನ್ನು ಅನುಸರಿಸಿ ಇವನು ಪುರುಷವಿಧ(ನಾಗಿರುತ್ತಾನೆ). ಅವನಿಗೆ ಶ್ರದ್ಧೆಯೇ ತಲೆ ; ಋತವು ದಕ್ಷಿಣಪಕ್ಷವು ; ಸತ್ಯವು ಉತ್ತರಪಕ್ಷವು ; ಯೋಗವು ಆತ್ಮ ; 'ಮಹಃ' (ಎಂಬುದು) ಪುಚ್ಛವು, ಪ್ರತಿಷ್ಠೆಯು.

(ಭಾಷ್ಯ)

೧೩೯. ನಿಶ್ಚಯವಿಜ್ಞಾನವತೋ ಹಿ ಕರ್ತವ್ಯೇಷು ಅರ್ಥೇಷು ಪೂರ್ವಂ ಶ್ರದ್ಧಾ ಉತ್ಪದ್ಯತೇ[1] । ಸಾ ಸರ್ವಕರ್ತವ್ಯಾನಾಂ ಪ್ರಾಥಮ್ಯಾತ್ ಶಿರ ಇವ ಶಿರಃ । ಋತಸತ್ಯೇ ಯಥಾವ್ಯಾಖ್ಯಾತೇ ಏವ । ಯೋಗಃ ಯುಕ್ತಿಃ ಸಮಾಧಾನಮ್ ಆತ್ಮೈವ[2] ಆತ್ಮಾ । ಆತ್ಮವತೋ ಹಿ ಯುಕ್ತಸ್ಯ ಸಮಾಧಾನವತಃ ಅಜ್ಞಾನೀವ ಶ್ರದ್ಧಾದೀನಿ ಯಥಾರ್ಥಪ್ರತಿಪತ್ತಿಕ್ಷಮಾಣಿ ಭವನ್ತಿ । ತಸ್ಮಾತ್ ಸಮಾಧಾನಂ ಯೋಗಃ ಆತ್ಮಾ ವಿಜ್ಞಾನಮಯಸ್ಯ । ಮಹಃ ಪುಚ್ಛಂ ಪ್ರತಿಷ್ಠಾ । ಮಹಃ ಇತಿ ಮಹತ್ತತ್ತ್ವಂ ಪ್ರಥಮಜಮ್ । "ಮಹದ್ಯಕ್ಷಂ ಪ್ರಥಮಜಮ್"[3] (ಬೃ. ೫-೪-೧) ಇತಿ ಶ್ರುತ್ಯನ್ತರಾತ್ ಪುಚ್ಛಂ ಪ್ರತಿಷ್ಠಾ ಕಾರಣತ್ವಾತ್ । ಕಾರಣಂ ಹಿ ಕಾರ್ಯಾಣಾಂ ಪ್ರತಿಷ್ಠಾ । ಯಥಾ ವೃಕ್ಷವೀರುಧಾಂ ಪೃಥಿವೀ । ಸರ್ವಬುದ್ಧಿ ವಿಜ್ಞಾನಾನಾಂ ಚ ಮಹತ್ತತ್ತ್ವಂ ಕಾರಣಮ್ । ತೇನ ತತ್ ವಿಜ್ಞಾನಮಯಸ್ಯ ಆತ್ಮನಃ ಪ್ರತಿಷ್ಠಾ ॥

1. "ಉಪಪದ್ಯತೇ" ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವೇ ಉತ್ತಮ.
2. "ಆತ್ಮೈವ" ಎಂದು ವಾ॥ ಪಾಠ ; ಆದರೆ ಈ ಆ॥ ಪಾಠವೇ ಸರಿ.
3. "ಪ್ರಥಮಜಂ ವೇದ" ಎಂದು ವಾ॥ ಪಾಠ ; ಅದೂ ಆಗಬಹುದು.

(ಭಾಷ್ಯಾರ್ಥ)

(ವೇದದರ್ಥದ) ನಿಶ್ಚಯವಾದ ವಿಜ್ಞಾನವನ್ನುಂಟುಮಾಡಿಕೊಂಡಿರುವವನಿಗೆ ಮಾಡಬೇಕಾದ ಪದಾರ್ಥಗಳಲ್ಲಿ ಮೊದಲು ಶ್ರದ್ಧೆಯು ಉಂಟಾಗುತ್ತದೆಯಲ್ಲವೆ ? ಆ (ಶ್ರದ್ಧೆಯು) ಮಾಡಬೇಕಾದ (ಕ್ರಿಯೆಗಳಿಗೆ)ಲ್ಲ ಮೊದಲು (ಉಂಟಾಗಬೇಕಾಗಿರುವದರಿಂದ ಈ ವಿಜ್ಞಾನಮಯನಿಗೆ) ತಲೆಯಂತಿರುವದರಿಂದ[1] ತಲೆ (ಎನಿಸುತ್ತದೆ.) ಋತ, ಸತ್ಯ - ಇವುಗಳೆರಡೂ ಹಿಂದೆ[2] ವಿವರಿಸಿದವುಗಳೇ (ಆಗಿರುತ್ತವೆ). ಯೋಗವೆಂದರೆ ಕೂಡಿಸುವಿಕೆ. (ಮನಸ್ಸನ್ನು) ಸಮಾಧಾನ (ದಲ್ಲಿಟ್ಟುಕೊಳ್ಳುವದು. ಅದು) ಆತ್ಮನಂತೆ ಇರುವದರಿಂದ[3] ಆತ್ಮನು (ಎನಿಸುತ್ತದೆ. ಮನಸ್ಸನ್ನು) ಕೂಡಿಸಿಕೊಂಡು ಆತ್ಮವಂತನಾಗಿರುವ ಸಮಾಧಾನವಂತನಿಗೆ ಶ್ರದ್ಧಾದಿಗಳು ಅಂಗಗಳಂತೆ ಇದ್ದದ್ದನ್ನು ಇದ್ದಂತೆ ಅರಿಯುವದಕ್ಕೆ ಶಕ್ತವಾಗುತ್ತವೆ.[4] ಆದ್ದರಿಂದ ಸಮಾಧಾನರೂಪವಾದ ಯೋಗವು ವಿಜ್ಞಾನಮಯನ ಆತ್ಮವು. 'ಮಹಃ' (ಎಂಬುದು) ಪುಚ್ಛವು, ಪ್ರತಿಷ್ಠೆಯು - (ಎಂಬಲ್ಲಿ) ಮಹಃ ಎಂದರೆ ಮೊದಲು ಹುಟ್ಟಿದ ಮಹತ್ತತ್ತ್ವವು.[5] ''(ಯಾವನು) ಮೊದಲು ಹುಟ್ಟಿದ ದೊಡ್ಡಯಕ್ಷನನ್ನು (ಅರಿತುಕೊಳ್ಳುವನೋ)'' (ಬೃ. ೫-೪-೧) ಎಂಬ ಬೇರೊಂದು ಶ್ರುತಿಯು ಇದಕ್ಕೆ ಪ್ರಮಾಣವು. (ಆ ಮಹತ್ತು ವಿಜ್ಞಾನಮಯನ) ಪುಚ್ಛವು, ಪ್ರತಿಷ್ಠೆಯು. ಏಕೆಂದರೆ (ಅದು ಇದಕ್ಕೆ) ಕಾರಣವಾಗಿರುತ್ತದೆ. ಕಾರಣವೇ ಅಲ್ಲವೆ, ಕಾರ್ಯಗಳಿಗೆ ಪ್ರತಿಷ್ಠೆ(ಯಾಗಿರುವದು) ? ಉದಾಹರಣೆಗೆ (ಕಾರಣವಾದ)

1. ವಚನಬಲದಿಂದಲೇ ತಲೆ ಮುಂತಾದವನ್ನು ಕಲ್ಪಿಸಬಹುದಾದರೂ ಯುಕ್ತಿಯನ್ನೂ ಜೋಡಿಸಬಹುದು ಎಂದು ಹಿಂದಿನ ಕೋಶಗಳ ವಿವರಣೆಯಲ್ಲಿ ಹೇಳಿದ್ದು ಇದಕ್ಕೂ ಅನ್ವಯಿಸುತ್ತದೆ.

2. ಶೀಕ್ಷಾವಲ್ಲಿಯ ಶಾಂತಿಮಂತ್ರ ಭಾ. ಭಾ. ೧ಳರಲ್ಲಿ.

3. ನಡುವಿನ ಶರೀರಭಾಗದಂತೆ ಇರುವದರಿಂದ ಎಂದರ್ಥ. ಮನಸ್ಸಮಾಧಾನವಿಲ್ಲದೆ ಶ್ರದ್ಧಾದಿಗಳಾಗಲಿ ಶ್ರದ್ಧಾದಿಗಳಿಲ್ಲದೆ ಮಾಡತಕ್ಕದ್ದರ ನಿಶ್ಚಯವಾಗಲಿ ಆಗುವಹಾಗಿಲ್ಲ ಕ. ಭಾ. ೧-೨-೪ ನ್ನು ನೋಡಿ.

4. ಆತ್ಮನ ಅಧೀನವಾಗಿ ಅಂಗಗಳು ಕೆಲಸಮಾಡುವಂತೆ ಸಮಾಧಾನವುಳ್ಳವನಿಗೆ ಅಧೀನವಾಗಿ ಶ್ರದ್ಧಾದಿಗಳು ಕೆಲಸಮಾಡಿ ಮಾಡಬೇಕಾದ ಕರ್ಮದ ಸ್ವರೂಪವನ್ನು ಸರಿಯಾಗಿ ತಿಳಿಯುವದಕ್ಕೆ ಅನುಕೂಲವಾಗುತ್ತವೆ. ಇದರಂತೆ ಸಮಾಧಾನವು ವಿಚಾರಕ್ಕೂ ಅವಶ್ಯವಾಗಿರುತ್ತದೆ.

5. ಇದೇ ಪ್ರಾಣನೆಂಬ ಅಪರಬ್ರಹ್ಮವಾದ ಹಿರಣ್ಯಗರ್ಭನ ಬುದ್ಧಿ. ಪ್ರ. ಭಾ. ೫-೨, ಕ. ಭಾ. ೧-೩-೧೦, ಸೂ. ಭಾ. ೧-೪-೩.

ಭೂಮಿಯು (ಕಾರ್ಯವಾದ) ಮರ (ಗಿಡ) ಬಳ್ಳಿಗಳಿಗೆ (ಒತ್ತಾಸೆಯಾಗಿರುತ್ತದೆ). ಬುದ್ಧಿಯು ಎಲ್ಲಾ ವಿಜ್ಞಾನಗಳಿಗೂ ಮಹತ್ತತ್ತ್ವವು ಕಾರಣವಾಗಿರುತ್ತದೆ ; ಆದ್ದರಿಂದ ಆ (ಮಹತ್ತು) ವಿಜ್ಞಾನಮಯನೆಂಬ ಆತ್ಮನಿಗೆ ಪ್ರತಿಷ್ಠೆಯು.

ವಿಜ್ಞಾನಮಯಾತ್ಮನ ಮಹಿಮೆ

ತದಪ್ಯೇಷ ಶ್ಲೋಕೋ ಭವತಿ ॥೫॥

(ಇತಿ ಚತುರ್ಥೋಽನುವಾಕಃ)

೫. ಅದೇ ವಿಷಯದಲ್ಲಿ ಈ ಶ್ಲೋಕವಿರುವದು :-

(ನಾಲ್ಕನೆಯ ಅನುವಾಕವು ಮುಗಿಯಿತು)

ವಿಜ್ಞಾನಂ ಯಜ್ಞಂ ತನುತೇ । ಕರ್ಮಾಣಿ ತನುತೇಽಪಿ ಚ । ವಿಜ್ಞಾನಂ ದೇವಾಃ ಸರ್ವೇ । ಬ್ರಹ್ಮ ಜ್ಯೇಷ್ಠಮುಪಾಸತೇ । ವಿಜ್ಞಾನಂ ಬ್ರಹ್ಮ ಚೇದ್ವೇದ । ತಸ್ಮಾಚ್ಚೇನ್ನ ಪ್ರಮಾದ್ಯತಿ । ಶರೀರೇ ಪಾಪ್ಮನೋ ಹಿತ್ವಾ । ಸರ್ವಾನ್ ಕಾಮಾನ್ತ್ಸಮಶ್ನುತ ಇತಿ ॥೧॥

೧. ವಿಜ್ಞಾನವು ಯಜ್ಞವನ್ನು ಮಾಡುತ್ತದೆ, ಕರ್ಮಗಳನ್ನೂ ಮಾಡುತ್ತದೆ. ವಿಜ್ಞಾನವನ್ನೇ ದೇವತೆಗಳೆಲ್ಲರೂ ಜ್ಯೇಷ್ಠವಾದ ಬ್ರಹ್ಮವೆಂದು ಉಪಾಸನೆಮಾಡುತ್ತಾರೆ. ವಿಜ್ಞಾನವನ್ನು ಬ್ರಹ್ಮವೆಂದು ತಿಳಿಯುತ್ತಾನಾದರೆ, ಅದರಿಂದ ಪ್ರಮಾದವನ್ನು ಮಾಡುವದಿಲ್ಲವಾದರೆ, ಶರೀರದಲ್ಲಿ ಪಾಪಗಳನ್ನು ಬಿಟ್ಟು ಸರ್ವಕಾಮಗಳನ್ನೂ ಪಡೆಯುತ್ತಾನೆ.

(ಭಾಷ್ಯ)

೧೪೦. ತದಪ್ಯೇಷ ಶ್ಲೋಕೋ ಭವತಿ ಪೂರ್ವವತ್ । ಯಥಾ ಅನ್ನಮಯಾದೀನಾಂ ಬ್ರಾಹ್ಮಣೋಕ್ತಾನಾಂ ಪ್ರಕಾಶಕಾಃ ಶ್ಲೋಕಾಃ, ಏವಂ ವಿಜ್ಞಾನಮಯಸ್ಯಾಪಿ ॥

(ಭಾಷ್ಯಾರ್ಥ)

"ಅದೇ ವಿಷಯದಲ್ಲಿ ಈ ಶ್ಲೋಕವಿರುವದು" (ಎಂಬುದಕ್ಕೆ) ಹಿಂದಿನಂತೆ (ವ್ಯಾಖ್ಯಾನಮಾಡಬೇಕು). ಹೇಗೆ ಬ್ರಾಹ್ಮಣದಲ್ಲಿ ಹೇಳಿದ ಅನ್ನಮಯನೇ ಮುಂತಾದವುಗಳನ್ನು ತಿಳಿಸುವ ಶ್ಲೋಕಗಳು (ಹಿಂದೆ ಬಂದಿರುವವೋ) ಹಾಗೆಯೇ ವಿಜ್ಞಾನಮಯನನ್ನು (ತಿಳಿಸುವದಕ್ಕೂ ಶ್ಲೋಕವು ಬಂದಿದೆ ಎಂಡರ್ಥ).

(ಭಾಷ್ಯ)

೧೪೧. ವಿಜ್ಞಾನಂ ಯಜ್ಞಂ ತನುತೇ । ವಿಜ್ಞಾನವಾನ್ ಹಿ ಯಜ್ಞಂ ತನೋತಿ ಶ್ರದ್ಧಾದಿಪೂರ್ವಕಮ್ । ಅತೋ ವಿಜ್ಞಾನಸ್ಯ ಕರ್ತೃತ್ವಂ 'ತನುತೇ' ಇತಿ । ಕರ್ಮಾಣಿ ಚ ತನುತೇ । ಯಸ್ಮಾದ್ ವಿಜ್ಞಾನಕರ್ತೃಕಂ ಸರ್ವಮ್, ತಸ್ಮಾದ್ ಯುಕ್ತಂ ವಿಜ್ಞಾನಮಯ ಆತ್ಮಾ ಬ್ರಹ್ಮ ಇತಿ । ಕಿಂ ಚ ವಿಜ್ಞಾನಂ ಬ್ರಹ್ಮ ಸರ್ವೇ ದೇವಾಃ ಇನ್ದ್ರಾದಯಃ ಜ್ಯೇಷ್ಠಂ ಪ್ರಥಮಜತ್ವಾತ್, ಸರ್ವ ಪ್ರವೃತ್ತೀನಾಂ[1] ವಾ ತತ್ಪೂರ್ವಕತ್ವಾತ್, ಪ್ರಥಮಜಂ ವಿಜ್ಞಾನಂ ಬ್ರಹ್ಮ ಉಪಾಸತೇ ಧ್ಯಾಯನ್ತಿ । ತಸ್ಮಿನ್ ವಿಜ್ಞಾನಮಯೇ ಬ್ರಹ್ಮಣಿ ಅಭಿಮಾನಂ ಕೃತ್ವಾ ಉಪಾಸತೇ ಇತ್ಯರ್ಥಃ । ತನ್ಮಾತ್ ತೇ ಮಹತೋ ಬ್ರಹ್ಮಣಃ ಉಪಾಸನಾತ್ ಜ್ಞಾನೈಶ್ವರ್ಯವನ್ತೋ ಭವನ್ತಿ ॥

(ಭಾಷ್ಯಾರ್ಥ)

"ವಿಜ್ಞಾನವು ಯಜ್ಞವನ್ನು ಮಾಡುತ್ತದೆ." ವಿಜ್ಞಾನವುಳ್ಳಾತನಲ್ಲವೆ, ಶ್ರದ್ಧೆಯೇ ಮುಂತಾದವುಗಳಿಂದ (ಕೂಡಿ) ಯಜ್ಞವನ್ನು ಮಾಡುತ್ತಾನೆ ? ಆದ್ದರಿಂದ '(ಯಜ್ಞವನ್ನು) ಮಾಡುತ್ತದೆ' ಎಂದು ವಿಜ್ಞಾನಕ್ಕೆ (ಯಜ್ಞಕ್ರಿಯೆಯ) ಕರ್ತೃತ್ವವನ್ನು ಹೇಳಿರುತ್ತದೆ.[2] ಮತ್ತು (ಅದು ಮಿಕ್ಕ) ಕರ್ಮಗಳನ್ನೂ[3] ಮಾಡುತ್ತದೆ. (ಹೀಗೆ) ಎಲ್ಲವೂ ವಿಜ್ಞಾನವೆಂಬ ಕರ್ತೃವುಳ್ಳದ್ದಾಗಿರುವದರಿಂದ, ವಿಜ್ಞಾನಮಯನಾದ ಆತ್ಮನು ಬ್ರಹ್ಮವು ಎಂಬುದು ಯುಕ್ತವಾಗಿರುತ್ತದೆ. ಮತ್ತು ವಿಜ್ಞಾನವೆಂಬ ಬ್ರಹ್ಮವನ್ನು ದೇವತೆಗಳೆಲ್ಲರೂ ಎಂದರೆ ಇಂದ್ರನೇ ಮೊದಲಾದವರು ಜ್ಯೇಷ್ಠವಾದ (ಬ್ರಹ್ಮವೆಂದು) ಮೊದಲು (ಸೃಷ್ಟಿಯಲ್ಲಿ) ಹುಟ್ಟಿರುವದರಿಂದ[4] ಅಥವಾ ಎಲ್ಲಾ ಪ್ರವೃತ್ತಿಗಳೂ ಆ (ವಿಜ್ಞಾನದ ಮೂಲಕ

1. "ವೃತ್ತೀನಾಂ" ಎಂಬ ವಾ|| ಪಾಠಕ್ಕಿಂತ ಈ ಆ|| ಪಾಠವೇ ಉತ್ತಮ.

2 ವಿಜ್ಞಾನವು ಕರಣವಾಗಿದ್ದರೂ "ಲೇಖನಿಯು ಬರೆಯುತ್ತದೆ" ಎಂಬಂತೆ ಅದನ್ನು ಕರ್ತೃವಾಗಿ ಉಪಚಾರಕ್ಕೆ ಹೇಳಿರುವದೇಕೆಂದರೆ ವಿಜ್ಞಾನವುಳ್ಳವರೇ ಕರ್ಮವನ್ನು ಮಾಡುತ್ತಾರಾದ್ದರಿಂದ. ಸೂ.ಭಾ. ೨-೩-೩೭.

3. ಯಜ್ಞವಲ್ಲದ ಶಾಸ್ತ್ರೀಯಕರ್ಮಗಳನ್ನೂ, ಲೌಕಿಕಕರ್ಮಗಳನ್ನೂ ಮಾಡುವದಕ್ಕೂ ವಿಜ್ಞಾನವೇ ಬೇಕಾದರೂ ಇಲ್ಲಿ ಶಾಸ್ತ್ರೀಯಕರ್ಮಗಳೇ ವಿವಕ್ಷಿತ.

4. ಹಿರಣ್ಯಗರ್ಭನು ಸೃಷ್ಟಿಯಲ್ಲಿ ಮೊದಲು ಹುಟ್ಟಿದವನು. ಅವನ ಉಪಾಧಿಯಾದ ಮಹತ್ತತ್ತ್ವವೆಂಬ ಸಮಷ್ಟಿಬುದ್ಧಿಯು ಮೊದಲು ಹುಟ್ಟಿದ್ದೆಂಬ ಕಾರಣದಿಂದಲೇ ಅವನು ಪ್ರಥಮಜನೆನಿಸಿರುತ್ತಾನೆ.

ವಾಗಿಯೇ) ಉಂಟಾಗುವದರಿಂದ[1] ಮೊದಲು ಹುಟ್ಟಿರುವ ವಿಜ್ಞಾನವನ್ನು ಬ್ರಹ್ಮವಾಗಿ ಉಪಾಸನೆಮಾಡುತ್ತಾರೆ. ಆ ವಿಜ್ಞಾನಮಯನಾದ ಬ್ರಹ್ಮದಲ್ಲಿ (ತಾವೆಂಬ) ಅಭಿಮಾನವನ್ನು ಮಾಡಿಕೊಂಡು ಉಪಾಸನೆಮಾಡುತ್ತಾರೆ ಎಂದರ್ಥ ಆದ್ದರಿಂದ ಅವರು ದೊಡ್ಡದಾದ ಬ್ರಹ್ಮವನ್ನು ಉಪಾಸನೆಮಾಡಿದ್ದರಿಂದ ಜ್ಞಾನ, ಐಶ್ವರ್ಯ - ಇವುಗಳಿಂದ ಕೂಡಿರುತ್ತಾರೆ.[2]

(ಭಾಷ್ಯ)

೧೪೨. ತಚ್ಚ ವಿಜ್ಞಾನಂ ಬ್ರಹ್ಮ ಚೇತ್ ಯದಿ ವೇದ ವಿಜಾನಾತಿ, ನ ಕೇವಲಂ ವೇದೈವ ತಸ್ಮಾತ್ ಬ್ರಹ್ಮಣಃ ಚೇತ್ ನ ಪ್ರಮಾದ್ಯತಿ । ಬಾಹ್ಯೇಷು ಅನಾತ್ಮಸು ಆತ್ಮ (ತ್ವ?) ಭಾವಿತತ್ವಾತ್[3] ಪ್ರಾಪ್ತಂ ವಿಜ್ಞಾನ ಮಯೇ ಬ್ರಹ್ಮಣಿ ಆತ್ಮಭಾವನಾಯಾಃ ಪ್ರಮದನಮ್ । ತನ್ನಿವೃತ್ತ್ಯರ್ಥಮ್ ಉಚ್ಯತೇ ''ತಸ್ಮಾಚ್ಚೇನ್ನ ಪ್ರಮಾದ್ಯತಿ'' ಇತಿ । ಅನ್ನಮಯಾದಿಷು ಆತ್ಮ ಭಾವಂ ಹಿತ್ವಾ ಕೇವಲೇ ವಿಜ್ಞಾನಮಯೇ ಬ್ರಹ್ಮಣಿ ಆತ್ಮತ್ವಂ ಭಾವಯನ್ ಆಸ್ತೇ ಚೇತ್ ಇತ್ಯರ್ಥಃ । ತತಃ ಕಿಂ ಸ್ಯಾತ್ ಇತಿ ? ಉಚ್ಯತೇ । ಶರೀರೇ ಪಾಪ್ಮನೋ ಹಿತ್ವಾ । ಶರೀರಾಭಿಮಾನನಿಮಿತ್ತಾ ಹಿ ಸರ್ವೇ ಪಾಪ್ಮಾನಃ । ತೇಷಾಂ ಚ ವಿಜ್ಞಾನಮಯೇ ಬ್ರಹ್ಮಣಿ ಆತ್ಮಾಭಿಮಾನಾತ್ ನಿಮಿತ್ತಾಪಾಯೇ ಹಾನಮ್ ಉಪಪದ್ಯತೇ । ಧರ್ಮಾಪಾಯೇ ಇವ ಧರ್ಮಾಪಾಯಃ । ತಸ್ಮಾತ್ ಶರೀರಾಭಿಮಾನನಿಮಿತ್ತಾನ್ ಸರ್ವಾನ್ ಪಾಪ್ಮನಃ ಶರೀರಪ್ರಭವಾನ್ ಶರೀರೇ ಏವ ಹಿತ್ವಾ ವಿಜ್ಞಾನಮಯಬ್ರಹ್ಮಸ್ವರೂಪಾಪನ್ನಃ ತತ್ಸ್ಥಾನ್ ಸರ್ವಾನ್ ಕಾಮಾನ್ ವಿಜ್ಞಾನಮಯೇನೈವ ಆತ್ಮನಾ ಸಮಶ್ನುತೇ ಸಮ್ಯಗ್ ಭುಙ್ಕ್ತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಆ ವಿಜ್ಞಾನವನ್ನು ಬ್ರಹ್ಮವೆಂದು ತಿಳಿಯುತ್ತಾನಾದರೆ ಅರಿತು ಕೊಳ್ಳುತ್ತಾನಾದರೆ ; ಸುಮ್ಮನೆ ಅರಿತುಕೊಳ್ಳುತ್ತಾನೆಂಬುದಿಷ್ಟೇ ಅಲ್ಲ, ಆ ಬ್ರಹ್ಮ ದಿಂದ ಪ್ರಮಾದವನ್ನು ಮಾಡುವದಿಲ್ಲವಾದರೆ ; ಹೊರಗಿನ ಅನಾತ್ಮಗಳಲ್ಲಿ

1. ಎಲ್ಲಾ ಪ್ರವೃತ್ತಿಗಳೂ ಬುದ್ಧಿಪೂರ್ವಕವಾಗಿಯೇ ಉಂಟಾಗುವವು.

2. ಧರ್ಮಜ್ಞಾನವೈರಾಗ್ಯೈಶ್ವರ್ಯಗಳಿಂದ ಕೂಡಿದ ಹಿರಣ್ಯಗರ್ಭನ ಉಪಾಸನೆಯಿಂದ ದೇವತೆಗಳಿಗೂ ಆ ಗುಣಗಳು ಉಂಟಾಗುತ್ತವೆ.

3 ''ಆತ್ಮಾ ಭಾವಿತಃ ತಸ್ಮಾತ್'' ಎಂದು ವಾ॥ ಕಾ॥ ಪಾಠ

ತಾನೆಂಬ ಭಾವನೆಯು (ತುಂಬಿರುವದರಿಂದ)[1] ವಿಜ್ಞಾನಮಯಬ್ರಹ್ಮದಲ್ಲಿ (ಅದೇ) ತಾನೆಂಬ ಭಾವನೆಯು ತಪ್ಪುವ ಸಂಭವವುಂಟಾಗುತ್ತದೆ. ಅದು ಕೂಡ ದೆಂದು (ಹೇಳುವದಕ್ಕಾಗಿ) "ಅದರಿಂದ ಪ್ರಮಾದವನ್ನು ಮಾಡುವದಿಲ್ಲ ವಾದರೆ" ಎಂದು ಹೇಳಿರುತ್ತದೆ. ಅನ್ನಮಯಾದಿಗಳಲ್ಲಿ ಅವೇ ತಾನೆಂಬ ಭಾವನೆಯನ್ನು ಬಿಟ್ಟು ಬರಿಯ ವಿಜ್ಞಾನಮಯಬ್ರಹ್ಮದಲ್ಲಿ ತಾನೆಂದು ಭಾವನೆಯನ್ನು ಮಾಡುತ್ತಾ ಇರುತ್ತಾನಾದರೆ ಎಂದರ್ಥ.[2] ಅದರಿಂದೇನಾಗುವದು ? ಎಂದರೆ (ಶ್ರುತಿ) ಹೇಳುತ್ತದೆ : "ಶರೀರದಲ್ಲಿ ಪಾಪಗಳನ್ನು ಬಿಟ್ಟು" ಶರೀರ (ವೇ ತಾನೆಂಬ) ಅಭಿಮಾನದ ನಿಮಿತ್ತದಿಂದಲೇ ಅಲ್ಲವೆ, ಎಲ್ಲಾ ಪಾಪಗಳೂ ಉಂಟಾಗುವವು ? ಅವುಗಳನ್ನು ಬಿಡುವದೆಂಬುದು ವಿಜ್ಞಾನಮಯವಾದ ಬ್ರಹ್ಮವೇ ತಾನೆಂಬ ಅಭಿಮಾನದಿಂದ (ಪಾಪಗಳ) ನಿಮಿತ್ತವು ಹೋಗುವದರಿಂದ ಸಾಧ್ಯವಾಗುತ್ತದೆ. ಕೊಡೆಯು ಹೋದರೆ (ಅದರಿಂದಾಗಿದ್ದ) ನೆರಳೂ ಹೋಗುವಂತೆಯೇ (ಇದು).[3] ಆದ್ದರಿಂದ ಶರೀರದ ಅಭಿಮಾನದ ನಿಮಿತ್ತದಿಂದ (ತನಗೆ ಉಂಟಾಗಿರುವ) ಶರೀರದಿಂದ ಹುಟ್ಟುವ ಪಾಪಗಳನ್ನೆಲ್ಲ ಶರೀರದಲ್ಲಿಯೇ ಬಿಟ್ಟು ವಿಜ್ಞಾನಮಯಬ್ರಹ್ಮದ ಸ್ವರೂಪವನ್ನು ಹೊಂದಿದವನಾಗಿ ಅದರಲ್ಲಿರುವ ಎಲ್ಲಾ ಕಾಮಗಳನ್ನೂ[4] ವಿಜ್ಞಾನಮಯವೇ ಆಗಿರುವ ಸ್ವರೂಪದಿಂದ[5] 'ಸಮಶ್ನುತೇ' (ಪಡೆಯುತ್ತಾನೆ) ಎಂದರೆ ಚೆನ್ನಾಗಿ ಅನುಭವಿಸುತ್ತಾನೆ ಎಂದರ್ಥ.[6]

1. ಆಯಾ ಕೋಶವನ್ನು ತಾನು ಎಂದುಕೊಂಡಾಗ ಹಿಂದಿನ ಕೋಶಗಳು ಅನಾತ್ಮವೆಂದು ತಿಳಿಯುವದು.

2. ಶರೀರವು, ಅಥವಾ ಪ್ರಾಣವು, ಅಥವಾ ಮನಸ್ಸು ತಾನೆಂಬ ದೃಢಭಾವನೆಯಿರುವಂತೆ ವಿಜ್ಞಾನಮಯನೇ ತಾನೆಂಬ ದೃಢನಿಶ್ಚಯವುಳ್ಳವನಾದರೆ ಎಂದರ್ಥ.

3. ಯಾವ ನಿಮಿತ್ತದಿಂದ ಯಾವದು ಆಗಿರುವದೋ ಆ ನಿಮಿತ್ತವು ಇಲ್ಲವಾದರೆ ಅದು ತಾನೂ ಇಲ್ಲವಾಗುವದು ಎಂಬುದು ನ್ಯಾಯ.

4. ಎಲ್ಲಾ ಬಾಹ್ಯಭೋಗಗಳನ್ನು, ಅವನು ಸಂಕಲ್ಪಿಸಿದ ಭೋಗಗಳು ಅವನಿಗೆ ದೊರೆಯುತ್ತವೆ ಎಂದರ್ಥ.

5. ಹಿರಣ್ಯಗರ್ಭನ ರೂಪದಿಂದ.

6. ವಿರಾಡ್ರೂಪ ಅನ್ನಾತ್ಮನ ಉಪಾಸಕನಿಗೆ ಸರ್ವಾನ್ನಪ್ರಾಪ್ತಿ, ಪ್ರಾಣಾತ್ಮನ ಉಪಾಸಕನಿಗೆ ಸರ್ವಾಯುಃಪ್ರಾಪ್ತಿ, ಮನಆತ್ಮೋಪಾಸಕನಿಗೆ ಸರ್ವದಾ ಅಭಯಪ್ರಾಪ್ತಿ ; ಇದರಂತೆ ವಿಜ್ಞಾನೋಪಾಸಕನಿಗೆ ಸರ್ವಭೋಗಪ್ರಾಪ್ತಿ.

ವಿಜ್ಞಾನಮಯಾತ್ಮಪ್ರಕರಣದ ಉಪಸಂಹಾರ

ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ ॥೨॥

೨. ಆ ಹಿಂದಿನವನಿಗೆ ಇವನೇ ಶಾರೀರನಾದ ಆತ್ಮನು.

(ಭಾಷ್ಯ)

೧೪೩. ತಸ್ಯ ಪೂರ್ವಸ್ಯ ಮನೋಮಯಸ್ಯ ಆತ್ಮಾ ಏಷ ಏವ ಶರೀರೇ ಮನೋಮಯೇ ಭವಃ ಶಾರೀರಃ । ಕಃ ? ಯ ಏಷ ವಿಜ್ಞಾನಮಯಃ ॥

(ಭಾಷ್ಯಾರ್ಥ)

ಆ ಹಿಂದಿನ ಮನೋಮಯನಿಗೆ ಆತ್ಮನು ಇವನೇ ಶಾರೀರನು, ಎಂದರೆ ಮನೋಮಯವೆಂಬ ಶರೀರದಲ್ಲಿರುವ (ಆತ್ಮನು). ಯಾರು ? ಎಂದರೆ ಯಾವ ಈ ವಿಜ್ಞಾನಮಯನಿದಾನಲ್ಲ, (ಇವನೇ).

೭. ಆನಂದಮಯಾತ್ಮ

ಆನಂದಮಯಾತ್ಮನ ವರ್ಣನೆ

ತಸ್ಮಾದ್ವಾ ಏತಸ್ಮಾದ್ವಿಜ್ಞಾನಮಯಾತ್ ।
ಅನ್ಯೋಽನ್ತರ ಆತ್ಮಾನನ್ದಮಯಃ । ತೇನೈಷ ಪೂರ್ಣಃ ॥೩॥

೩. ಆ ಈ ವಿಜ್ಞಾನಮಯನಿದಾನಲ್ಲ, ಇವನಿಗಿಂತ ಇನ್ನೊಬ್ಬ ಆನಂದಮಯನಾದ ಒಳಗಿನ ಆತ್ಮ(ನಿರುವನು). ಆತನಿಂದ ಇವನು ತುಂಬಿರುವನು.

(ಭಾಷ್ಯ)

೧೪೪. "ತಸ್ಮಾದ್ವಾ ಏತಸ್ಮಾತ್" ಇತಿ ಉಕ್ತಾರ್ಥಮ್ ॥

(ಭಾಷ್ಯಾರ್ಥ)

"ಆ ಈ (ವಿಜ್ಞಾನಮಯನಿದಾನಲ್ಲ) ಇವನಿಗಿಂತ" ..... ಎಂಬುದರ ಅರ್ಥವನ್ನು ಹಿಂದೆ ಹೇಳಿದಂತೆ (ತಿಳಿಯಬೇಕು).

ಆನಂದಮಯಾತ್ಮನು ಬ್ರಹ್ಮವಲ್ಲ

(ಭಾಷ್ಯ)

೧೪೫. 'ಆನನ್ದಮಯಃ' ಇತಿ ಕಾರ್ಯಾತ್ಮಪ್ರತೀತಿಃ । ಅಧಿಕಾರಾತ್,

ಮಯಟ್‌ಶಬ್ದಾಚ್ಚ । ಅನ್ನಾದಿಮಯಾ ಹಿ' ಕಾರ್ಯಾತ್ಮಾನೋ ಭೌತಿಕಾ ಇಹ ಅಧಿಕೃತಾಃ । ತದಧಿಕಾರಪತಿತಶ್ಚ ಅಯಮ್ ಆನನ್ದಮಯಃ । ಮಯಟ್ ಚ ಅತ್ರ ವಿಕಾರಾರ್ಥೇ ದೃಷ್ಟಃ । ಯಥಾ 'ಅನ್ನಮಯಃ' ಇತ್ಯತ್ರ । ತಸ್ಮಾತ್ ಕಾರ್ಯಾತ್ಮಾ ಆನನ್ದಮಯಃ ಪ್ರತ್ಯೇತವ್ಯಃ । ಸಂಕ್ರಮಣಾಚ್ಚ । ''ಆನನ್ದಮಯ ಮಾತ್ಮಾನಮುಪಸಂಕ್ರಾಮತಿ'' ಇತಿ ವಕ್ಷ್ಯತಿ । ಕಾರ್ಯಾತ್ಮನಾಂ ಚ ಸಂಕ್ರಮಣಮ್ ಅನಾತ್ಮನಾಂ[1] ದೃಷ್ಟಮ್ । ಸಂಕ್ರಮಣಕರ್ಮತ್ವೇನ ಚ ಆನನ್ದಮಯ ಆತ್ಮಾ ಶ್ರೂಯತೇ । ಯಥಾ ''ಅನ್ನಮಯಮಾತ್ಮಾನಮುಪಸಂಕ್ರಾಮತಿ'' ಇತಿ । ನ ಚ ಆತ್ಮನ ಏವ ಉಪಸಂಕ್ರಮಣಮ್ । ಅಧಿಕಾರವಿರೋಧಾತ್ । ಅಸಂಭವಾಚ್ಚ । ನ ಹಿ ಆತ್ಮನೈವ ಆತ್ಮನ ಉಪಸಂಕ್ರಮಣಂ ಸಂಭವತಿ । ಸ್ವಾತ್ಮನಿ ಭೇದಾಭಾವಾತ್ । ಆತ್ಮಭೂತಂ ಚ ಬ್ರಹ್ಮ ಸಂಕ್ರಮಿತುಃ । ಶಿರಆದಿ ಕಲ್ಪನಾನುಪಪತ್ತೇಶ್ಚ । ನ ಹಿ ಯಥೋಕ್ತಲಕ್ಷಣೇ ಆಕಾಶಾದಿಕಾರಣೇ ಅಕಾರ್ಯೇ ಪತಿತೇ ಶಿರಆದ್ಯವಯವರೂಪಕಲ್ಪನಾ ಉಪಪದ್ಯತೇ । ''ಅದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇ'' (೨-೭), ''ಅಸ್ಥೂಲಮನಣು.....'' (ಬೃ. ೩-೮-೮), ''ನೇತಿ ನೇತ್ಯಾತ್ಮಾ'' (ಬೃ. ೩-೯-೨೬). - ಇತ್ಯಾದಿವಿಶೇಷಾಪೋಹಶ್ರುತಿಭ್ಯಶ್ಚ । ಮನ್ತ್ರೋದಾಹರಣಾನುಪಪತ್ತೇಶ್ಚ । ನ ಹಿ ಪ್ರಿಯಶಿರಆದ್ಯವಯವ ವಿಶಿಷ್ಟೇ ಪ್ರತ್ಯಕ್ಷತೋಽನುಭೂಯಮಾನೇ ಆನನ್ದಮಯೇ ಆತ್ಮನಿ ಬ್ರಹ್ಮಣಿ ನಾಸ್ತಿ ಬ್ರಹ್ಮ ಇತ್ಯಾಶಙ್ಕಾಭಾವಾತ್ ''ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್'' (೨-೬) ಇತಿ ಮನ್ತ್ರೋದಾಹರಣಮ್ ಉಪಪದ್ಯತೇ । ''ಬ್ರಹ್ಮ ಪುಚ್ಛಂ ಪ್ರತಿಷ್ಠಾ'' ಇತ್ಯಪಿ ಚ ಅನುಪಪನ್ನಮ್ ಪೃಥಗ್ ಬ್ರಹ್ಮಣಃ ಪ್ರತಿಷ್ಠಾತ್ವೇನ ಗ್ರಹಣಮ್ । ತಸ್ಮಾತ್ ಕಾರ್ಯಪತಿತ ಏವ ಆನನ್ದಮಯಃ ನ ಪರ ಏವಾತ್ಮಾ ॥

(ಭಾಷ್ಯಾರ್ಥ)

'ಆನಂದಮಯನು' ಎಂಬಲ್ಲಿ ಕಾರ್ಯಾತ್ಮನನ್ನೇ ಅರಿಯಬೇಕು. ಏಕೆಂದರೆ (ಇದು ೮) ಪ್ರಕರಣವಾಗಿರುತ್ತದೆ, ಮತ್ತು ಮಯಟ್ ಶಬ್ದವನ್ನು ಉಪಯೋಗಿಸಿರುತ್ತದೆ. ಹೇಗೆಂದರೆ ಅನ್ನಮಯನೇ ಮುಂತಾದ ಭೌತಿಕವಾದ ಕಾರ್ಯಾತ್ಮರೇ ಈ ಪ್ರಕರಣದಲ್ಲಿ ಹೇಳಿರುವ (ಆತ್ಮರು) ; ಆ ಪ್ರಕರಣದಲ್ಲಿಯೇ ಈ ಆನಂದಮಯನೂ ಸೇರಿಕೊಂಡಿರುತ್ತಾನೆ. ಮತ್ತು ಮಯಟ್ (ಎಂಬ ಪ್ರತ್ಯಯ)ವನ್ನು ಇಲ್ಲಿ

1. ''ಅನ್ನಾತ್ಮನಾಮ್'' ಎಂಬ ವಾ।। ಪಾಠವು ಸರಿಯಲ್ಲ.

'ವಿಕಾರ'ವೆಂಬ ಅರ್ಥದಲ್ಲಿ[1] (ಉಪಯೋಗಿಸಿರುವದು) ಕಂಡುಬರುತ್ತದೆ. ಉದಾಹರಣೆಗೆ 'ಅನ್ನಮಯ' ಎಂಬಲ್ಲಿ (ಮಯಟ್ ಪ್ರತ್ಯಯವನ್ನು ಹೀಗೆ ವಿಕಾರಾರ್ಥದಲ್ಲಿ ಉಪಯೋಗಿಸಿರುತ್ತದೆ). ಆದ್ದರಿಂದ[2] ಆನಂದಮಯನಾದರೆ ಕಾರ್ಯಾತ್ಮನೆಂದೇ ತಿಳಿಯಬೇಕು

(ಇಲ್ಲಿ) 'ಸಂಕ್ರಮಣ'(ವನ್ನು ಹೇಳುವ ವಾಕ್ಯ)ವಿರುವದರಿಂದಲೂ (ಹೀಗೆಂದು ತಿಳಿಯಬೇಕು). ''ಆನಂದಮಯನೆಂಬ ಆತ್ಮನನ್ನು ಉಪಸಂಕ್ರಮಿಸುತ್ತಾನೆ'' (೨-೮) ಎಂದು ಶ್ರುತಿಯು ಮುಂದೆ ಹೇಳುತ್ತದೆ. ಅನಾತ್ಮರಾದ ಕಾರ್ಯಾತ್ಮರುಗಳನ್ನು ಸಂಕ್ರಮಿಸುವದೆಂಬುದು[3] ಕಂಡುಬಂದಿದೆ. ಆನಂದಮಯನಾದ ಆತ್ಮನು ಸಂಕ್ರಮಣವೆಂಬ (ಕ್ರಿಯೆಗೆ) ವಿಷಯನೆಂದು ಶ್ರುತಿಯಲ್ಲಿ (ಹೇಳಿಯೂ) ಇದೆ. ''ಅನ್ನಮಯನಾದ ಆತ್ಮನನ್ನು ಉಪಸಂಕ್ರಮಿಸುತ್ತಾನೆ' ಎಂದು ಹೇಳಿರುವಂತೆಯೇ (ಇಲ್ಲಿಯೂ ಹೇಳಿರುತ್ತದೆ). ಆತ್ಮನನ್ನೇ ಉಪಸಂಕ್ರಮಿಸಬಹುದಲ್ಲ !'[4] ಎನ್ನುವದಕ್ಕಿಲ್ಲ. ಏಕೆಂದರೆ '(ಹಾಗೆನ್ನುವದು) ಪ್ರಕರಣಕ್ಕೆ ವಿರುದ್ಧವಾಗಿರುತ್ತದೆ.[5] ಇದಲ್ಲದೆ (ಆತ್ಮನನ್ನು ಉಪಸಂಕ್ರಮಿಸುವದೆನ್ನುವದು) ಸಂಭವಿಸುವದೂ ಇಲ್ಲ. ತಾನೇ ತನ್ನನ್ನು ಉಪಸಂಕ್ರಮಿಸುವದು ಆಗುವ ಹಾಗೆಯೇ ಇಲ್ಲ. ಏಕೆಂದರೆ ಆತ್ಮನಲ್ಲಿ (ಯಾವ) ಭೇದವೂ

1. 'ಮಯ' ಎಂಬ ಪ್ರತ್ಯಯವನ್ನು ಅದರ ವಿಕಾರ (ಅದರ ಕಾರ್ಯ) ಎಂಬರ್ಥದಲ್ಲಿಯೇ ಅಲ್ಲದೆ ಅದು ಪ್ರಚುರವಾಗಿರುವದು ಎಂಬುದೇ ಮುಂತಾದ ಅರ್ಥಗಳಲ್ಲಿಯೂ ಉಪಯೋಗಿಸುವದುಂಟು ; ಆದರೆ ಪ್ರಕೃತದಲ್ಲಿ ಅದು ವಿಕಾರಾರ್ಥದಲ್ಲಿಯೇ ಉಪಯೋಗಿಸಲ್ಪಟ್ಟಿದೆ.

2. ಕಾರ್ಯರೂಪವಾದ ಅನ್ನಮಯಾದಿಗಳ ಪ್ರಕರಣವಾಗಿರುವದರಿಂದ ಮತ್ತು. ಕಾರ್ಯವನ್ನು ಹೇಳುವ ಪ್ರತ್ಯಯವಿರುವದರಿಂದ.

3. ಸಂಕ್ರಮಣವೆಂದರೆ ಪ್ರಾಪ್ತಿ (ಬಂದು ಸೇರುವದು), ದಾಟುವದು - ಎಂದು ಎರಡರ್ಥಗಳನ್ನು ಮಾಡಬಹುದು. ಈ ಎರಡೂ ಅನಾತ್ಮಕ್ಕೆ ಮಾತ್ರ ಹೊಂದುತ್ತವೆ.

4. ಆನಂದಮಯನು ಆತ್ಮನೂ ಆಗಲಿ, ಸಂಕ್ರಮಣಕ್ಕೆ ವಿಷಯನೂ ಆಗಲಿ ! - ಎಂದು ಪೂರ್ವಪಕ್ಷಿಯ ಆಶಯ.

5. ಅನಾತ್ಮರನ್ನೇ ಸಂಕ್ರಮಿಸುವದನ್ನು ಹೇಳುವದಕ್ಕೆ ಹೊರಟ ಶ್ರುತಿಯು ಆತ್ಮನನ್ನು ಸಂಕ್ರಮಿಸುವದನ್ನು ಹೇಳಿದರೆ ಪ್ರಕರಣಕ್ಕೆ ವಿರೋಧವಾಗುವದು.

ಇರುವದಿಲ್ಲ.[1] ಯಾವನು ಸಂಕ್ರಮಣವನ್ನು ಮಾಡಬೇಕೋ ಅವನಿಗೆ ಬ್ರಹ್ಮವು ಆತ್ಮನೇ ಆಗಿರುತ್ತದೆ.[2]

ತಲೆಯೇ ಮುಂತಾದವುಗಳ ಕಲ್ಪನೆಯು ಹೊಂದುವದಿಲ್ಲವಾದ್ದರಿಂದಲೂ (ಹೀಗೆಂದು ತಿಳಿಯಬೇಕು). ಹಿಂದೆ ಹೇಳಿರುವ ಲಕ್ಷಣವುಳ್ಳ[3] ಆಕಾಶವೇ ಮುಂತಾದವುಗಳಿಗೂ ಕಾರಣನಾಗಿರುವ, ಕಾರ್ಯಗಳಲ್ಲಿ ಸೇರದೆ ಇರುವ[4] (ಆತ್ಮನಲ್ಲಿ) ತಲೆಯೇ ಮುಂತಾದ ಅವಯವಗಳುಳ್ಳ ರೂಪವನ್ನು ಕಲ್ಪಿಸುವದು ಸರಿಯಾಗಲೇ ಆರದು. "ಅದೃಶ್ಯನಾದ, ಅನಾತ್ಮ್ಯನಾದ ಅನಿರುಕ್ತನಾದ, ಅನಿಲಯನಾದ" (೨-೭೦), "ಸ್ಥೂಲವಲ್ಲ, ಅಣುವಲ್ಲ" (ಬೃ. ೩-೮-೮). "ಇದಲ್ಲ, ಇದಲ್ಲ, ಆತ್ಮನು" (ಬೃ. ೩-೯-೨೬) ಎಂಬಿವೇ ಮುಂತಾದ (ಬ್ರಹ್ಮದಲ್ಲಿ) ವಿಶೇಷಗಳನ್ನು ಅಲ್ಲಗಳೆಯುವ ಶ್ರುತಿಗಳ ವ್ಯಾಮಾಣ್ಯದಿಂದಲೂ ಬ್ರಹ್ಮದಲ್ಲಿ (ಈ ಕಲ್ಪನೆಯು ಹೊಂದುವದಿಲ್ಲ).

ಮಂತ್ರವನ್ನು ಉದಾಹರಿಸಿರುವದು ಹೊಂದುವದಿಲ್ಲವಾದ್ದರಿಂದಲೂ (ಹೀಗೆಂದು ತಿಳಿಯಬೇಕು). ಪ್ರಿಯವೆಂಬ ತಲೆಯೇ ಮುಂತಾದ ಅವಯವಗಳಿಂದೊಡಗೂಡಿದ ಆನಂದಮಯಾತ್ಮನೆಂಬ ಬ್ರಹ್ಮವು ಪ್ರತ್ಯಕ್ಷವಾಗಿ ಅನುಭವದಲ್ಲಿ ಕಂಡುಬರುತ್ತಿರುವಲ್ಲಿ 'ಬ್ರಹ್ಮವು 'ಇಲ್ಲ' ಎಂಬ ಶಂಕೆಯು (ಉಂಟಾಗ)ಲಾರದಾಗಿ "ಬ್ರಹ್ಮವು ಇಲ್ಲವೆಂದು ತಿಳಿಯುತ್ತಾನಾದರೆ, ಅವನು ಇಲ್ಲವೇ ಆಗುವನು" (೨-೬) ಎಂಬ ಮಂತ್ರವನ್ನು ಉದಾಹರಿಸಿರುವದು ಹೊಂದಲೇ ಆರದು.

ಇದೂ ಅಲ್ಲದೆ "ಬ್ರಹ್ಮವು ಪುಚ್ಛವು, ಪ್ರತಿಷ್ಠೆಯು" ಎಂದು ಬ್ರಹ್ಮವನ್ನು (ಆನಂದಮಯಕ್ಕೆ) ಪ್ರತಿಷ್ಠೆ ಎಂತ ಬೇರೆಯಾಗಿ ಹೇಳಿರುವದೂ (ಆನಂದಮಯವೇ ಬ್ರಹ್ಮವೆಂಬ ಪಕ್ಷದಲ್ಲಿ). ಹೊಂದುವದಿಲ್ಲ.

1. ತನ್ನನ್ನು ತಾನೇ ಸೇರುವದು, ಅಥವಾ ದಾಟುವದು ಅವಯವಭೇದವುಳ್ಳ ಹಾವು ಮುಂತಾದ ಪ್ರಾಣಿಗಳಿಗೆ ಆಗುತ್ತದೆ. ಆದರೆ ನಿರವಯವನಾದ ಆತ್ಮನಿಗೆ ಅದು ಆಗುವ ಹಾಗಿಲ್ಲ.

2. ಆದ್ದರಿಂದ ತನ್ನ ಸ್ವರೂಪವನ್ನೇ ತಾನು ಸೇರುವದು ಅಥವಾ ದಾಟುವದು ಆಗಲಾರದು.

3. ಸತ್ಯಜ್ಞಾನಾನಂತಸ್ವರೂಪನಾದ ಆತ್ಮನಲ್ಲಿ ತಲೆ ಮುಂತಾದವುಗಳು ಹೇಗೆ ಇದ್ದಾವು?

4. ಆಕಾಶ, ಕಾಲ - ಇವುಗಳಿಗೇ ಅವಯವಗಳಿಲ್ಲ ; ಇವಕ್ಕೂ ಕಾರಣವಾದ ಆತ್ಮನಿಗೆ ಹೇಗೆ ಇದ್ದಾವು?

ಆದ್ದರಿಂದ ಆನಂದಮಯನು ಕಾರ್ಯಗಳಲ್ಲಿ ಸೇರಿದವನೇ (ಅವನು) ಪರಮಾತ್ಮನೇ (ಎಂಬುದು ಸರಿ)ಯಲ್ಲ.[1]

ಆನಂದಮಯನೆಂದರೆ ಯಾರು ?

(ಭಾಷ್ಯ)

೧೪೬. 'ಆನನ್ದಃ' ಇತಿ ವಿದ್ಯಾಕರ್ಮಣೋಃ ಫಲಮ್ । ತದ್ವಿಕಾರಃ ಆನನ್ದಮಯಃ । ನ ಚ ವಿಜ್ಞಾನಮಯಾತ್ ಅನ್ತರಃ । ಯಜ್ಞಾದಿಹೇತೋರ್ವಿಜ್ಞಾನಮಯಾತ್ ಅಸ್ಯ[2] ಅನ್ತರತ್ವಶ್ರುತೇಃ । ಜ್ಞಾನಕರ್ಮಣೋರ್ಹಿ ಫಲಂ ಭೋಕ್ತೃರ್ಥತ್ವಾತ್ ಅನ್ತರತಮಂ ಸ್ಯಾತ್ । ಅನ್ತರತಮಶ್ಚ ಆನನ್ದಮಯ ಆತ್ಮಾ ಪೂರ್ವೇಭ್ಯಃ । ವಿದ್ಯಾಕರ್ಮಣೋಃ ಪ್ರಿಯಾದ್ಯರ್ಥತ್ವಾಚ್ಚ । ಪ್ರಿಯಾದಿಪ್ರಯುಕ್ತೇ ಹಿ ವಿದ್ಯಾಕರ್ಮಣೇ । ತಸ್ಮಾತ್ ಪ್ರಿಯಾದೀನಾಂ ಫಲರೂಪಾಣಾಮ್ ಆತ್ಮಸಂನಿಕರ್ಷಾತ್ ವಿಜ್ಞಾನಮಯಾತ್ ಅಸ್ಯ ಅಭ್ಯನ್ತರತ್ವಮ್ ಉಪಪದ್ಯತೇ । ಪ್ರಿಯಾದಿವಾಸನಾನಿರ್ವೃತ್ತ್ಯೋ[3] ಹಿ ಆತ್ಮಾ ಆನನ್ದಮಯೋ ವಿಜ್ಞಾನಮಯಾಶ್ರಿತಃ ಸ್ವಪ್ನೇ ಉಪಲಭ್ಯತೇ ॥

(ಭಾಷ್ಯಾರ್ಥ)

'ಆನಂದ' ಎಂದರೆ ಜ್ಞಾನ[4] ಮತ್ತು ಕರ್ಮ-ಇವುಗಳ ಫಲವು ; ಅದರಿಂದ ಉಂಟಾಗುವವನು ಆನಂದಮಯನು. ಅವನು ವಿಜ್ಞಾನಮಯನಿಗಿಂತ ಒಳಗೆ (ಇರುತ್ತಾನೆ). ಯಜ್ಞವೇ ಮುಂತಾದದ್ದಕ್ಕೆ ಕಾರಣವಾಗಿರುವ ವಿಜ್ಞಾನಮಯನಿಗಿಂತ (ಇವನು) ಒಳಗೆ ಇರುವನೆಂದು ಶ್ರುತಿ ಹೇಳುವದರಿಂದ (ಇದು ಸಿದ್ಧವಾಗುತ್ತದೆ). ಜ್ಞಾನಕರ್ಮಗಳ ಫಲವು ಭೋಕ್ತೃವಿಗಾಗಿ ಇರುವದರಿಂದ ಎಲ್ಲಕ್ಕೂ ಒಳಗಿರಬೇಕಷ್ಟೆ ? ಆನಂದಮಯನೂ ಹಿಂದಿನ (ಅನ್ನಮಯಾದಿ)ಗಳಿಗಿಂತ ಒಳಗೆ ಇರುತ್ತಾನೆ. ಜ್ಞಾನಕರ್ಮಗಳು ಪ್ರಿಯವೇ ಮುಂತಾದವುಗಳಿಗಾಗಿ (ಉಂಟಾಗುತ್ತವೆ)ಯಾದ್ದರಿಂದಲೂ (ಆನಂದಮಯನು ಒಳಗಿನವನು). ಜ್ಞಾನಕರ್ಮಗಳು ಪ್ರಿಯವೇ ಮುಂತಾದವುಗಳಿಗಾಗಿ ಅಲ್ಲವೆ, (ಉಂಟಾಗುವದು) ?

---

1. ಸೂ. ಭಾ. ೧-೧-೧೯ರಲ್ಲಿ 'ಇದಂ ತ್ವಿಹ ವಕ್ತವ್ಯಮ್' ಎಂಬಲ್ಲಿಂದ ಪ್ರಾರಂಭವಾಗಿರುವ ಭಾಷ್ಯದಲ್ಲಿ ಇದೇ ವಿಚಾರವು ವಿಸ್ತಾರವಾಗಿದೆ.

2. ಇದು ಮಾ॥ ಪಾಠ.

3. "ನಿರ್ವರ್ತಿತೋ" ಎಂದು ಮಾ॥ ಪಾಠ.

4. ಉಪಾಸನೆ.

ಇದ್ದರಿಂದ ಫಲರೂಪವಾಗಿರುವ ಪ್ರಿಯವೇ ಮುಂತಾದವುಗಳು ಆತ್ಮನಿಗೆ ಹತ್ತಿರವಾಗಿರುವದರಿಂದ ಈ (ಆನಂದಮಯನು) ವಿಜ್ಞಾನಮಯನಿಗಿಂತಲೂ ಒಳಗಿ(ರುವ)ನೆಂಬುದು ಯುಕ್ತವಾಗಿರುತ್ತದೆ. ಪ್ರಿಯವೇ ಮುಂತಾದವುಗಳ ವಾಸನೆಯಿಂದ ಉಂಟಾಗಿರುವ ಆನಂದಮಯಾತ್ಮನು ವಿಜ್ಞಾನಮಯನನ್ನು ಆಶ್ರಯಿಸಿಕೊಂಡು ಕನಸಿನಲ್ಲಿ[1] ತೋರಿಕೊಳ್ಳುತ್ತಾನಲ್ಲವೆ ? (ಆದ್ದರಿಂದಲೂ ವಿಜ್ಞಾನಮಯನಿಗಿಂತ ಒಳಗಿನವನು).

ಆನಂದಮಯಾತ್ಮನ ಅವಯವಗಳು

ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಪ್ರಿಯಮೇವ ಶಿರಃ । ಮೋದೋ ದಕ್ಷಿಣಃ ಪಕ್ಷಃ । ಪ್ರಮೋದ ಉತ್ತರಃ ಪಕ್ಷಃ । ಆನನ್ದ ಆತ್ಮಾ । ಬ್ರಹ್ಮ ಪುಚ್ಛಂ ಪ್ರತಿಷ್ಠಾ ॥೪॥

೪. ಆ ಈತನು ಪುರುಷವಿಧನಾಗಿಯೇ (ಇರುವನು). ಅವನ ಪುರುಷವಿಧತ್ವವನ್ನು ಅನುಸರಿಸಿ ಇವನು ಪುರುಷವಿಧ(ನಾಗಿರುತ್ತಾನೆ). ಅವನಿಗೆ ಪ್ರಿಯವೇ ತಲೆ ; ಮೋದವೇ ದಕ್ಷಿಣಪಕ್ಷವು ; ಪ್ರಮೋದವೇ ಉತ್ತರ ಪಕ್ಷವು ; ಆನಂದವು ಆತ್ಮನು ; ಬ್ರಹ್ಮವು ಪುಚ್ಛವು, ಪ್ರತಿಷ್ಠೆಯು.

(ಭಾಷ್ಯ)

೧೪೭. ತಸ್ಯ ಆನನ್ದಮಯಸ್ಯ ಆತ್ಮನಃ ಇಷ್ಟ್ಯಪುತ್ರಾದಿದರ್ಶನಜಂ ಪ್ರಿಯಂ ಶಿರ ಇವ ಶಿರಃ । ಪ್ರಾಧಾನ್ಯಾತ್ । ಮೋದಃ ಇತಿ ಪ್ರಿಯಲಾಭನಿಮಿತ್ತೋ ಹರ್ಷಃ । ಸ ಏವ ಚ ಪ್ರಕೃಷ್ಟೋ ಹರ್ಷಃ ಪ್ರಮೋದಃ । ಆನನ್ದಃ ಇತಿ ಸುಖಿಸಾಮಾನ್ಯಮ್ ಆತ್ಮಾ ಪ್ರಿಯಾದೀನಾಂ ಸುಖಾವಯವಾನಾಮ್ । ತೇಷು ಅನುಸ್ಯೂತತ್ವಾತ್ ॥

(ಭಾಷ್ಯಾರ್ಥ)

ಆ ಆನಂದಮಯಾತ್ಮನಿಗೆ ಇಷ್ಟ್ಯವಾಗಿರುವ ಮಗನೇ ಮುಂತಾದವರನ್ನು

1. ಕರ್ತೃತ್ವವು ಎಚ್ಚರದಲ್ಲಿರುವದೆಂದೂ ಕನಸಿನಲ್ಲಿ ಅದರ ವಾಸನೆಯಿಂದಾದ ಫಲಭೋಗವು ಮಾತ್ರ ಇರುವದೆಂದೂ ಎಣಿಸುವ ವ್ಯಾವಹಾರಿಕರ ಅನುಭವವನ್ನು ಇಲ್ಲಿ ಉದಾಹರಿಸಿದೆ. ಬೃ. ಭಾ. ೪-೩-೧೫ "ಅನನ್ವಾಗತಃ" ಎಂಬುದರ ವ್ಯಾಖ್ಯಾನವನ್ನು ನೋಡಿ.

ಕಂಡವ್ವರಿಂದಾದ ಪ್ರಿಯವು[1] ತಲೆಯಂತಿರುವದರಿಂದ ತಲೆ ; ಏಕೆಂದರೆ (ಅವೇ) ಮುಖ್ಯವಾಗಿರುತ್ತದೆ. ಮೋದವು ಎಂದರೆ ಪ್ರಿಯವಾದದ್ದು ಮೊರೆತ ಕಾರಣದಿಂದಾಗುವ ಹರ್ಷವು. ಆ ಹರ್ಷವೇ ಹೆಚ್ಚಾಗಿ ಆದರೆ ಪ್ರಮೋದವು. ಆನಂದವು ಎಂದರೆ ಸುಖಿಸಾಮಾನ್ಯವು ಪ್ರಿಯವೇ ಮುಂತಾದ ಸುಖಿದ ಅವಯವಗಳಿಗೆ ಆತ್ಮನು ; ಏಕೆಂದರೆ (ಅದು) ಅವುಗಳ(ಲ್ಲೆಲ್ಲ) ಹೊಂದಿಕೊಂಡೇ ಇರುತ್ತದೆ.

(ಭಾಷ್ಯ)

೧೪೮. ಆನನ್ದಃ ಇತಿ ಪರಂ ಬ್ರಹ್ಮ । ತದ್ ಹಿ ಶುಭಕರ್ಮಣಾ ಪ್ರತ್ಯುಪ ಸ್ಥಾಪ್ಯಮಾನೇ ಪುತ್ರಮಿತ್ರಾದಿವಿಷಯವಿಶೇಷೋಪಾಧೌ ಅನ್ತಃಕರಣವೃತ್ತಿವಿಶೇಷೇ ತಮಸಾ ಅಪ್ರಚ್ಛಾದ್ಯಮಾನೇ ಪ್ರಸನ್ನೇ ಅಭಿವ್ಯಜ್ಯತೇ । ತದ್ ವಿಷಯಸುಖಿಮ್ ಇತಿ ಪ್ರಸಿದ್ಧಂ ಲೋಕೇ । ತದ್ವೃತ್ತಿವಿಶೇಷಪ್ರತ್ಯುಪಸ್ಥಾಪಕಸ್ಯ ಕರ್ಮಣಃ ಅನವಸ್ಥಿತತ್ವಾತ್ ಸುಖಿಸ್ಯ ಕ್ಷಣಿಕತ್ವಮ್ । ತದ್ ಯದಾ ಅನ್ತಃಕರಣಂ ತಪಸಾ ತಮೋಘ್ನೇನ ವಿದ್ಯಯಾ ಬ್ರಹ್ಮಚರ್ಯೇಣ ಶ್ರದ್ಧಯಾ ಚ ನಿರ್ಮಲತ್ವಮ್ ಆಪದ್ಯತೇ ಯಾವದ್ಯಾವತ್ ತಾವತ್ತಾವತ್[2] ವಿವಿಕ್ತೇ ಪ್ರಸನ್ನೇ ಅನ್ತಃಕರಣೇ ಆನನ್ದ ವಿಶೇಷ ಉತ್ಪದ್ಯತೇ ವಿಪುಲೀಭವತಿ । ವಕ್ಷ್ಯತಿ ಚ ''ರಸೋ ವೈ ಸಃ । ರಸಗ್ಂ ಹ್ಯೇವಾಯಂ ಲಬ್ಧ್ವಾ ಆನನ್ದೀ ಭವತಿ । ಏಷ ಹ್ಯೇವಾನನ್ದಯಾತಿ''[3] (೨-೭) (ಇತಿ)[3] । ''ಏತಸ್ಯೈವಾನನ್ದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ'' (ಬೃ. ೪-೩-೩೧) ಇತಿ ಶ್ರುತ್ಯನ್ತರಾತ್ । ಏವಂ ಚ ಕಾಮೋಪಶಮೋತ್ಕರ್ಷಾಪೇಕ್ಷಯಾ ಶತಗುಣೋತ್ತ ರೋತ್ತರೋತ್ಕರ್ಷಃ ಆನನ್ದಸ್ಯ ವಕ್ಷ್ಯತೇ ॥

(ಭಾಷ್ಯಾರ್ಥ)

('ಆನಂದವು ಆತ್ಮನು' ಎಂಬಲ್ಲಿ) ಆನಂದ ಎಂಬುದು ಪರಬ್ರಹ್ಮವು.[4] ಅದು ಪುಣ್ಯಕರ್ಮದಿಂದ ಮಗನು, ಗೆಳೆಯನು-ಮುಂತಾದ ಆಯಾ ವಿಷಯ ವೆಂಬ ಉಪಾಧಿಯು ಮುಂದಕ್ಕೆ ಒಡ್ಡಲ್ಪಟ್ಟಾಗ ಅಂತಃಕರಣದ ಒಂದಾನೊಂದು

1. ಇಲ್ಲಿ ಪ್ರಿಯವಾದ ವಸ್ತುಗಳನ್ನು ಕಂಡರೆ ಆಗುವ ಸಂತೋಷವನ್ನು ಪ್ರಿಯ ವೆಂದೇ ಕರೆದಿದೆ.

2. ''ಯಾವತ್ ತಾವತ್'' ಎಂದಿಷ್ಟೇ ವಾ॥ ಪಾಠ.

3. 'ಇತಿ' ಎಂಬ ಮಾತು ಇಲ್ಲಿ ಅಚ್ಚಿನ ಪುಸ್ತಕಗಳಲ್ಲಿಲ್ಲವಾದರೂ ಅವಶ್ಯ.

4. ಆನಂದಮಯ ಎಂಬುದು ಭೋಕ್ತೃತ್ವವನ್ನು ತಿಳಿಸುವದರಿಂದ ಜೀವನನ್ನೇ ಹೇಳುತ್ತದೆ. ಆದರೆ ಸ್ವರೂಪಾನಂದವು ಬ್ರಹ್ಮವೇ.

ವೃತ್ತಿಯು ತಮಸ್ಸಿನಿಂದ ಮರೆಯಾಗದೆ ತಿಳಿಯಾಗಿರುವಾಗ ಹೊರತೋರಿಕೊಳ್ಳುತ್ತದೆ. ಅದು ವಿಷಯಸುಖವು[1] ಎಂದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ಆ ಗೊತ್ತಾದ ವೃತ್ತಿಯನ್ನು ತಂದೊಡ್ಡುವ ಕರ್ಮವು ಹಾಗೆಯೇ ನಿಂತಿರುವದಿಲ್ಲವಾದ್ದರಿಂದ (ಆ) ಸುಖವು ಕ್ಷಣಿಕವಾಗಿರುತ್ತದೆ.[2] ಆ ಅಂತಃಕರಣವು ಯಾವಾಗ ತಪಸ್ಸಿನಿಂದಲೂ ತಮಸ್ಸನ್ನು ನಾಶಗೊಳಿಸುವ[3] ಜ್ಞಾನದಿಂದಲೂ ಬ್ರಹ್ಮಚರ್ಯೆಯಿಂದಲೂ ಶ್ರದ್ಧೆಯಿಂದಲೂ ಎಷ್ಟೆಷ್ಟುಮಟ್ಟಿಗೆ ನಿರ್ಮಲತೆಯನ್ನು ಹೊಂದುವದೋ ಅಷ್ಟಷ್ಟುಮಟ್ಟಿಗೆ ಅಂತಃಕರಣವು ಪ್ರಸನ್ನವಾಗಿ (ಅದ)ರಲ್ಲಿ ಬೇರೆಬೇರೆಯ ಆನಂದವು ಹೆಚ್ಚುವದು, ವಿಸ್ತರಿಸುವದು. ಆದ್ದರಿಂದಲೇ ''ಆತನು ರಸವೇ, ಈ (ಜೀವನು) ರಸವನ್ನೇ ಹೊಂದಿ ಆನಂದಿಯಾಗುವನು, ಈತನೇ ಆನಂದವನ್ನುಂಟುಮಾಡುತ್ತಾನೆ'' (೨-೬) (ಎಂದು ಈ ಶ್ರುತಿಯಲ್ಲಿ) ಮುಂದೆ ಹೇಳಿರುತ್ತದೆ. ''ಇದೇ ಆನಂದದ ಒಂದಂಶವನ್ನು ಮಿಕ್ಕ ಭೂತಗಳು ಉಪಜೀವಿಸಿಕೊಂಡಿರುವವು'' (ಬೃ. ೪-೩-೩೨) ಎಂಬ ಬೇರೊಂದು ಶ್ರುತಿಯು (ಇದಕ್ಕೆ ಪ್ರಮಾಣವು). ಹೀಗಿರುವದರಿಂದಲೇ ಕಾಮವನ್ನು ತೊಲಗಿಸಿಕೊಳ್ಳುವದು ಹೆಚ್ಚುಹೆಚ್ಚಾದಂತೆಲ್ಲ ಆನಂದವೂ ನೂರು ಪಾಲು ಮುಂದುಮುಂದಕ್ಕೆ ಹೆಚ್ಚಾಗುವದೆಂದು ಮುಂದೆ[4] ಹೇಳಲಾಗುವದು.

(ಭಾಷ್ಯ)

೧೪೯. ಏವಂ ಚ ಉತ್ಪ್ಲುಷ್ಯಮಾಣಸ್ಯ ಆನನ್ದಮಯಸ್ಯಾತ್ಮನಃ ಪರಮಾರ್ಥಬ್ರಹ್ಮವಿಜ್ಞಾನಾಪೇಕ್ಷಯಾ ಬ್ರಹ್ಮ ಪರಮೇವ ಯತ್ ಪ್ರಕೃತಂ ಸತ್ಯಜ್ಞಾನಾನನ್ತಲಕ್ಷಣಮ್, ಯಸ್ಯ ಚ ಪ್ರತಿಪತ್ತ್ಯರ್ಥಂ ಪಞ್ಚ ಅನ್ನಮಯಾದಿಕೋಶಾ ಉಪ

1. ವಿಷಯವು ಬಂದ ನಿಮಿತ್ತದಿಂದ ಕಾಣಿಸಿಕೊಳ್ಳುವದರಿಂದ ಅದು ವಿಷಯಸುಖವೆನಿಸುವದು ; ವಿಷಯದಿಂದ ಹುಟ್ಟಿದ್ದೆಂದು ಭಾವಿಸಲಾಗದು. ಮುಂದೆ ೭ನೆಯ ಅನುವಾಕದ ಭಾಷ್ಯದಲ್ಲಿ ಆನಂದಶಬ್ದಾರ್ಥವನ್ನೂ ೮ನೆಯ ಅನುವಾಕಭಾಷ್ಯದಲ್ಲಿ ಲೌಕಿಕಾನಂದವಿಚಾರವನ್ನೂ ನೋಡಿ.

2. ವೃತ್ತಿಯು ಕ್ಷಣಿಕವಾಗಿರುವದರಿಂದ ಅದರಲ್ಲಿ ತೋರಿಕೊಳ್ಳುವ ಸುಖವು ಕ್ಷಣಿಕವಾಗಿ ತೋರುತ್ತದೆ. ನಿಜವಾಗಿ ಸುಖವು ಕ್ಷಣಿಕವಲ್ಲ, ಅದು ಆತ್ಮನ ಸ್ವರೂಪವೇ ಆಗಿರುವದರಿಂದ ನಿತ್ಯವಾಗಿರುತ್ತದೆ.

3. ಈ ವಿಶೇಷಣವನ್ನು ಹಿಂದಕ್ಕೂ ಮುಂದಕ್ಕೂ ಇಲ್ಲಿ ಹೇಳಿರುವ ಸಾಧನಗಳಿಗೆಲ್ಲ ಅನ್ವಯಿಸಿಕೊಳ್ಳಬಹುದು.

4. ೪ನೆಯ ವಲ್ಲಿಯ ೮ನೆಯ ಅನುವಾಕದಲ್ಲಿ.

ನ್ಯಸ್ತಾಃ, ಯಚ್ಚೈತೇಭ್ಯೋಽನ್ತರಮ್, ಯೇನ ಚ ತೇ ಸರ್ವೇ ಆತ್ಮವನ್ತಃ ತದ್ ಬ್ರಹ್ಮ ಪುಚ್ಛಂ ಪ್ರತಿಷ್ಠಾ ॥

(ಭಾಷ್ಯಾರ್ಥ)

ಮತ್ತು ಈ ರೀತಿಯಲ್ಲಿ ಹೆಚ್ಚಾಗುತ್ತಿರುವ ಆನಂದಮಯಾತ್ಮನಿಗೆ, ಪೆರ ಮಾರ್ಥಬ್ರಹ್ಮದ ಅರಿವಿನ ದೃಷ್ಟಿಯಿಂದ ನೋಡಿದರೆ, ಬ್ರಹ್ಮವು - ಎಂದರೆ ಯಾವದು ಸತ್ಯ, ಜ್ಞಾನ, ಅನಂತವೆಂಬ ಲಕ್ಷಣವುಳ್ಳದ್ದೆಂದು (ಇಲ್ಲಿ) ಪ್ರಕೃತ ವಾಗಿರುತ್ತದೆಯೋ[1] ಯಾವದರ ಅರಿವು (ಉಂಟಾಗಲೆಂದು) ಅನ್ನಮಯವೇ ಮುಂತಾದ ಐದು ಕೋಶಗಳನ್ನು ಇಲ್ಲಿ ಹೇಳಲಾಗಿದೆಯೋ,[2] ಯಾವದು ಅವು ಗಳೆಲ್ಲಕ್ಕೂ ಒಳಗಿರುವದೋ,[3] ಮತ್ತು ಯಾವದರಿಂದಲೇ ಅವುಗಳೆಲ್ಲವೂ ಆತ್ಮ ವುಳ್ಳವುಗಳೆನಿಸಿರುವವೋ[4] ಆ ಬ್ರಹ್ಮವು ಪುಚ್ಛವು,[5] ಪ್ರತಿಷ್ಠೆಯು

ಬ್ರಹ್ಮದ ಅಸ್ತಿತ್ವ

ತದಪ್ಯೇಷ ಶ್ಲೋಕೋ ಭವತಿ ॥೬॥

(ಇತಿ ಪಞ್ಚಮೋಽನುವಾಕಃ)

೬. ಅದೇ ವಿಷಯದಲ್ಲಿ ಈ ಶ್ಲೋಕವಿರುವದು :-

(ಐದನೆಯ ಅನುವಾಕವು ಮುಗಿಯಿತು.)

1. 'ಬ್ರಹ್ಮವಿದಾಪ್ನೋತಿ ಪರಮ್' ಎಂಬಲ್ಲಿ ಹೇಳಿರುವ, ಸತ್ಯಜ್ಞಾನಾನಂತಸ್ವರೂಪವಾದದ್ದೆಂಬ ಲಕ್ಷಣದಿಂದ ತಿಳಿಸಿರುವ ಬ್ರಹ್ಮವೇ ಆನಂದಮಯನ ಪುಚ್ಛವು ; ವೇದ, ಮಹಃ ಎಂಬ ವ್ಯಾಹೃತಿ, ಅಪರಬ್ರಹ್ಮ - ಇವು ಯಾವವನ್ನೂ ಇಲ್ಲಿ ಪುಚ್ಛವೆಂದಿಲ್ಲ.

2. ಅನ್ನಮಯಾದಿಕೋಶಗಳನ್ನು ಹೇಳಿರುವದು ಅವುಗಳಿಗೋಸ್ಕರವಲ್ಲ, ಬ್ರಹ್ಮವಿಜ್ಞಾನಕ್ಕಾಗಿ, ಆ ಸ್ವಪ್ರಧಾನವಾದ ಬ್ರಹ್ಮವನ್ನೇ ಇಲ್ಲಿ ಪುಚ್ಛವೆಂದು ಕರೆದಿರುವದು.

3. "ಇನ್ನೊಬ್ಬ ಒಳಗಿನ (ಆತ್ಮನು)" ಎಂದು ಒಬ್ಬನಿಗಿಂತ ಒಬ್ಬನು ಒಳಗಿರುತ್ತಾನೆಂದು ಶ್ರುತಿಯು ಹೇಳುತ್ತಾ ಬಂದಿರುತ್ತದೆ.

4. ಆನಂದಮಯನಿಗೂ ಆತ್ಮನಾಗಿರುವ ಬ್ರಹ್ಮವು ಆನಂದಮಯಕೋಶಕ್ಕಿಂತ ಒಳಗಿರುತ್ತದೆ. ಆದ್ದರಿಂದ ಎಲ್ಲಕ್ಕೂ ಒಳಗಿನ ಆತ್ಮನಾಯಿತು. ಅನ್ನಮಯಾದಿಗಳನ್ನು ಆತ್ಮನೆಂದು ಕರೆದಿದ್ದರೂ ಎಲ್ಲಕ್ಕೂ ಆತ್ಮನು ಬ್ರಹ್ಮವು. ಆದ್ದರಿಂದ ಈ ಆತ್ಮನಿಲ್ಲದೆ ಅವಕ್ಕೆ ಸ್ವರೂಪವೇ ಇಲ್ಲ.

5. ಇಲ್ಲಿ ಪುಚ್ಛವೆಂದರೆ ಆಧಾರವು, ಅವಯವವೆಂದರ್ಥವಲ್ಲ. ಸೂ. ಭಾ ೧-೧-೧೯ನ್ನು ನೋಡಿ.

ಅಸನ್ನೇವ ಸ ಭವತಿ । ಅಸದ್ ಬ್ರಹ್ಮೇತಿ ವೇದ ಚೇತ್ । ಅಸ್ತಿ ಬ್ರಹ್ಮೇತಿ ಚೇದ್ ವೇದ । ಸನ್ತಮೇನಂ ತತೋ ವಿದುರಿತಿ ॥೧॥

೧. ಅಸತ್ಪ್ರಾಗಿಯೇ ಅವನು ಆಗುತ್ತಾನೆ, ಬ್ರಹ್ಮವು ಅಸತ್ತು ಎಂದು ತಿಳಿಯುತ್ತಾನಾದರೆ. ಬ್ರಹ್ಮವು ಇದೆ ಎಂದು ತಿಳಿಯುತ್ತಾನಾದರೆ ಇವನನ್ನು ಸತ್ತೆಂದು ಅದರಿಂದ ತಿಳಿಯುವರು

(ಭಾಷ್ಯ)

೧೫೦. ತದೇವ ಚ ಸರ್ವಸ್ಯ ಅವಿದ್ಯಾಕಲ್ಪಿತಸ್ಯ ದ್ವೈತಸ್ಯ ಅವಸಾನ ಭೂತಮ್ ಅದ್ವೈತಂ ಬ್ರಹ್ಮ ಪ್ರತಿಷ್ಠಾ । ಆನನ್ದಮಯಸ್ಯ ಏಕತ್ವಾವಸಾನತ್ವಾತ್ । ಅಸ್ತಿ ತದೇಕಮ್ ಅವಿದ್ಯಾಕಲ್ಪಿತಸ್ಯ ದ್ವೈತಸ್ಯ ಅವಸಾನಭೂತಮ್ ಅದ್ವೈತಂ ಬ್ರಹ್ಮ ಪ್ರತಿಷ್ಠಾ ಪುಚ್ಛಮ್ । ತತ್ ಏತಸ್ಮಿನ್ ಅಪಿ ಅರ್ಥೇ ಏಷ ಶ್ಲೋಕೋ ಭವತಿ ॥

(ಭಾಷ್ಯಾರ್ಥ)

ಅದೇ ಅವಿದ್ಯೆಯಿಂದ ಕಲ್ಪಿತವಾಗಿರುವ ದ್ವೈತಕ್ಕೆಲ್ಲ ಕೊನೆಯಾಗಿರುವ, ಅದ್ವೈತಬ್ರಹ್ಮವೇ, ಪ್ರತಿಷ್ಠೆಯು. ಏಕೆಂದರೆ ಆನಂದಮಯನು ಏಕತ್ವದಲ್ಲಿ ಕೊನೆಗೊಂಡಿರುತ್ತಾನೆ.[1] ಅವಿದ್ಯೆಯಿಂದ ಕಲ್ಪಿತವಾಗಿರುವ ದ್ವೈತಕ್ಕೆ ಅವಸಾನವಾಗಿ ರುವ ಪ್ರತಿಷ್ಠೆಯಾಗಿರುವ ಪುಚ್ಛವಾಗಿ ಅದ್ವೈತಬ್ರಹ್ಮವು[2] (ಇದ್ದೇ) ಇದೆ. ಇದೇ ವಿಷಯದಲ್ಲಿ ಈ ಶ್ಲೋಕವಿರುತ್ತದೆ :-

(ಭಾಷ್ಯ)

೧೫೧. ಅಸನ್ ಏವ ಅಸತ್ಸಮ ಏವ, ಯಥಾ ಅಸನ್ ಅಪುರುಷಾರ್ಥ ಸಂಬನ್ಧೀ ಏವಂ ಸ ಭವತಿ ಅಪುರುಷಾರ್ಥಸಂಬನ್ಧೀ । ಕೋಽಸೌ ? ಯಃ ಅಸತ್

---

1 ಆನಂದಮಯನಿಗೆ ಸತ್ಯಜ್ಞಾನಾನಂತರೂಪವಾದ ಬ್ರಹ್ಮವೇ ಪ್ರತಿಷ್ಠೆಯೆಂದೂ ಅದು ಆನಂದಸ್ವರೂಪವೆಂದೂ ಹೇಳಿರುತ್ತದೆ. ಹುಸಿತೋರಿಕೆಯಾದ ದ್ವೈತವು ಯಾವ ಆಧಾರವೂ ಇಲ್ಲದೆ ತೋರಿಕೊಳ್ಳಲಾರದು ; ಆ ಆಧಾರವಾದ ಬ್ರಹ್ಮವು ಇರಬೇಕೆಂದು ಇದರಿಂದಲೇ ಸಿದ್ಧವಾಗುತ್ತದೆ. ಯಾವ ಆಧಾರವೂ ಇಲ್ಲದೆ ತೋರಿಕೊಳ್ಳುವದೆಂದು ಕಲ್ಪಿಸುವವಾದವು ಶ್ರುತಿವಿರುದ್ಧವೂ ಯುಕ್ತಿವಿರುದ್ಧವೂ ಆಗಿದೆ.

2. ದ್ವೈತಕ್ಕೆ ದ್ವೈತವೇ ಆಧಾರವಾಗಲಾರದು ; ಆದ್ದರಿಂದ ಇದಕ್ಕೆ ಆಧಾರವಾಗಿ ರುವ ಅದ್ವೈತಬ್ರಹ್ಮವು ಇದೆ ಎಂದಾಯಿತು, ಇದನ್ನೇ ಮುಂದಿನ ಶ್ಲೋಕವೂ ತಿಳಿಸುತ್ತದೆ ಎಂದರ್ಥ.

ಅವಿದ್ಯಮಾನಂ ಬ್ರಹ್ಮ ಇತಿ ವೇದ ವಿಜಾನಾತಿ । ಚೇತ್ ಯದಿ । ತದ್ವಿಪರ್ಯ ಯೇಣ ಯತ್ ಸರ್ವವಿಕಾಲ್ಪಾಸ್ಪದಂ ಸರ್ವಪ್ರವೃತ್ತಿಬೀಜಂ ಸರ್ವವಿಶೇಷ ಪ್ರತ್ಯಸ್ತಮಿತಮಪಿ ಅಸ್ತಿ ತದ್ ಬ್ರಹ್ಮ ಇತಿ ವೇದ ಚೇತ್ । ಕುತಃ ಪುನರಾಶಙ್ಕಾ ತನ್ನಾಸ್ತಿತ್ವೇ ? ವ್ಯವಹಾರಾತೀತತ್ವಂ ಬ್ರಹ್ಮಣ ಇತಿ ಬ್ರೂಮಃ ವ್ಯವಹಾರ ವಿಷಯೇ ಹಿ ಪಾಚಾರಮ್ಭಣಮಾತ್ರೇ ಅಸ್ತಿತ್ವಭಾವಿತಾ ಬುದ್ಧಿಃ ತದ್ವಿಪರೀತೇ ವ್ಯವಹಾರಾತೀತೇ ನಾಸ್ತಿತ್ವಮಪಿ ಪ್ರತಿಪದ್ಯತೇ । ಯಥಾ ಘಟಾದಿ ವ್ಯವಹಾರ ವಿಷಯತಯಾ ಉಪಪನ್ನಃ ಸನ್, ತದ್ವಿಪರೀತಃ ಅಸನ್ ಇತಿ ಪ್ರಸಿದ್ಧಮ್ ಏವಂ ತತ್ಸಾಮಾನ್ಯಾತ್ ಇಹಾಪಿ ಸ್ಯಾದ್ ಬ್ರಹ್ಮಣೋ ನಾಸ್ತಿತ್ವಂ ಪ್ರತ್ಯಾಶಙ್ಕ್ಯಾ । ತಸ್ಮಾತ್ ಉಚ್ಯತೇ "ಅಸ್ತಿ ಬ್ರಹ್ಮೇತಿ ಚೇದ್ ವೇದ" ಇತಿ । ಕಿಂ ಪುನಃ ಸ್ಯಾತ್ ತದಸ್ತಿ ಇತಿ ವಿಜಾನತಃ ಇತಿ ? ತದಾಹ । ಸನ್ತಂ ವಿದ್ಯಮಾನಂ ಬ್ರಹ್ಮಸ್ವರೂ ಪೇಣ ಪರಮಾರ್ಥಸದಾತ್ಮಾಪನ್ನಮ್ ಏನಮ್ ಏವಂವಿದಂ ವಿದುಃ ಬ್ರಹ್ಮವಿದಃ । ತತಃ ತಸ್ಮಾತ್ ಅಸ್ತಿತ್ವವೇದನಾತ್ ಸಃ ಅಸ್ಯೇಷಾಂ ಬ್ರಹ್ಮವತ್ ವಿಜ್ಞೇಯೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಅಸತ್ತಾಗಿಯೇ ಎಂದರೆ ಇಲ್ಲದಿರುವವನಿಗೆ ಸಮವಾಗಿಯೇ - ಹೇಗೆ ಇಲ್ಲ ದವನು ಪುರುಷಾರ್ಥಕ್ಕೆ ಸಂಬಂಧವಿಲ್ಲದವನಾಗುವನೋ ಹಾಗೆ - ಅವನು ಪುರು ಷಾರ್ಥಸಂಬಂಧವಿಲ್ಲದವನಾಗುವನು. ಯಾವನು ? ಎಂದರೆ, ಯಾವನು ಬ್ರಹ್ಮವು ಅಸತ್ತು ಇರುವದಲ್ಲ ಎಂದು ತಿಳಿಯುತ್ತಾನೋ ಅರಿಯುತ್ತಾನೋ (ಅವನು). ಚೇತ್ (ಹಾಗೆಂದು ತಿಳಿಯುತ್ತಾ)ನಾದರೆ (ಎಂದರ್ಥ). ಇದಕ್ಕೆ ಬದಲಾಗಿ ಯಾವನು ಎಲ್ಲಾ ಬಗೆಯ ವಿಕಲ್ಪಗಳಿಗೂ ಆಧಾರವಾಗಿ,[1] ಎಲ್ಲಾ ಬಗೆಯ ಪ್ರವೃತ್ತಿ ಗಳಿಗೂ ಕಾರಣವಾಗಿ[2] ಯಾವದೊಂದು ವಿಶೇಷವೂ ತನ್ನಲ್ಲಿಲ್ಲದ್ದಾದರೂ ಆ ಬ್ರಹ್ಮವು ಇದೆ ಎಂದು ತಿಳಿಯುತ್ತಾನಾದರೆ -

(ಪ್ರಶ್ನೆ :-) ಅದು ಇಲ್ಲವೆಂದು ಶಂಕಿಸುವದಾದರೂ ಏಕೆ ?

(ಉತ್ತರ :-) ಬ್ರಹ್ಮವು ವ್ಯವಹಾರವನ್ನು ಮೀರಿರುವದೇ (ಕಾರಣವು)

---

1. ಇದೆ, ಇಲ್ಲ ಎಂದು ಮುಂತಾಗಿ ಬಗೆಬಗೆಯಾಗಿರುವ ವಿಕಲ್ಪಗಳಿಗೆ ಆಧಾರವಾಗಿ ಐ. ಭಾ. ಭಾ. ೭೧.

2. ಪ್ರಾಣಿಗಳ ವ್ಯಾಪಾರರೂಪವಾದ ಅಥವಾ ಉತ್ಪತ್ತಿರೂಪವಾದ ಪ್ರವೃತ್ತಿ. ಗೀ. ಭಾ. ೧೮-೪೬, ಈ ಎರಡು ವಿಶೇಷಣಗಳೂ ಬ್ರಹ್ಮವು ಇದೆ ಎಂಬುದಕ್ಕೆ ಸಾಧಕವು ; ಏಕೆಂದರೆ ಕಲ್ಪಿತಕ್ಕೆ ಸತ್ಯವಾದ ಆಧಾರವಿರಲೇಬೇಕು, ಪ್ರವೃತ್ತಿಗೆ ಕಾರಣವಿರಲೇಬೇಕು.

ಎಂದು ಹೇಳುತ್ತೇವೆ.[1] ಯಾವದು ವ್ಯವಹಾರಕ್ಕೆ ವಿಷಯವಾಗಿ ಬರಿಯ ಮಾತಿನಿಂದಾಗಿರುವ (ಕಾರ್ಯವಾಗಿರುವದೋ)[2] ಅದರಲ್ಲಿ 'ಇದೆ' ಎಂಬ ಭಾವನೆಮಾಡಿಕೊಂಡಿರುವ ಬುದ್ಧಿಯು ಅದಕ್ಕೆ ವಿರುದ್ಧವಾಗಿ ವ್ಯವಹಾರವನ್ನು ಮೀರಿರುವದರ ವಿಷಯದಲ್ಲಿ ಅದು ಇಲ್ಲವೆಂದೂ ಬಗೆಯುತ್ತದೆ. ಉದಾಹರಣೆಗೆ ವ್ಯವಹಾರಕ್ಕೆ ವಿಷಯವೆಂದು ತೋರುವ ಗಡಿಗೆಯೇ ಮುಂತಾದವುಗಳು ಸತ್ತೆಂದೂ ಅದಕ್ಕೆ ವಿರುದ್ಧವಾಗಿ (ವ್ಯವಹಾರಕ್ಕೆ ಗೋಚರವಾಗದ್ದು) ಅಸತ್ತೆಂದೂ (ಲೋಕದಲ್ಲಿ) ಪ್ರಸಿದ್ಧವಾಗಿರುತ್ತದೆ. ಇದರಂತೆ ಇಲ್ಲಿಯೂ ಬ್ರಹ್ಮವು ಇಲ್ಲವೆಂಬ ಶಂಕೆಯು ಉಂಟಾಗಬಹುದು. ಆದ್ದರಿಂದ "ಆ ಬ್ರಹ್ಮವು ಇದೆ ಎಂದು ತಿಳಿಯುತ್ತಾನಾದರೆ" ಎಂದು (ಶ್ರುತಿಯಲ್ಲಿ) ಹೇಳಿರುತ್ತದೆ.

ಆದು ಇದೆ ಎಂದು ತಿಳಿಯುವಾತನಿಗೆ ಏನಾಗುವದು ? ಎಂದರೆ (ಶ್ರುತಿ) ಅದನ್ನು ಹೇಳುತ್ತದೆ. ಇವನನ್ನು ಎಂದರೆ ಹೀಗೆಂದು ತಿಳಿದವನನ್ನು ಸತ್ತೆಂದು ಎಂದರೆ ಬ್ರಹ್ಮಸ್ವರೂಪದಿಂದ ಇರುವನೆಂದು **ಪರಮಾರ್ಥವಾದ ಸತ್ತಿನ**[3] ರೂಪವನ್ನೇ ಪಡೆದವನೆಂದು, ಬ್ರಹ್ಮಜ್ಞಾನಿಗಳು ತಿಳಿಯುವರು. ಅದರಿಂದ ಎಂದರೆ ಆ (ಬ್ರಹ್ಮವು) ಇದೆ ಎಂಬ ಅರಿವಿನಿಂದ, ಅವನು ಮಿಕ್ಕವರಿಗೆ ಬ್ರಹ್ಮದಂತೆ ವಿಜ್ಞೇಯನಾಗುವನು[4] ಎಂದರ್ಥ.

(ಭಾಷ್ಯ)

೧೫೨. ಅಥವಾ ಯಃ ನಾಸ್ತಿ ಬ್ರಹ್ಮ ಇತಿ ಮನ್ಯತೇ ಸಃ ಸರ್ವಸ್ಯೈವ ಸನ್ಮಾರ್ಗಸ್ಯ ವರ್ಣಾಶ್ರಮಾದಿವ್ಯವಸ್ಥಾಲಕ್ಷಣಸ್ಯ ಅಶ್ರದ್ದಧಾನತಯಾ ನಾಸ್ತಿತ್ವಂ ಪ್ರತಿಪದ್ಯತೇ । ಬ್ರಹ್ಮಪ್ರತಿಪತ್ಯರ್ಥತ್ವಾತ್ ತಸ್ಯ । ಅತಃ ನಾಸ್ತಿಕಃ ಸಃ ಅಸನ್ ಅಸಾಧುಃ ಉಚ್ಯತೇ

---

1. ಕೇ. ಭಾ. ಸಂಬಂಧಭಾಷ್ಯ, ಮಾಂ. ಭಾ. ತುರೀಯಮಂತ್ರಭಾಷ್ಯ - ಇವನ್ನು ನೋಡಿ. ವ್ಯವಹಾರವೆಂದರೆ ಅರಿಯುವದು, ಮಾತಿನಿಂದ ತಿಳಿಸುವದು - ಎರಡನ್ನೂ ತೆಗೆದುಕೊಳ್ಳಬೇಕು. ಇಲ್ಲಿ "ವ್ಯವಹಾರಾತೀತತ್ವಮ್" ಎಂಬುದರ ಬದಲು "ವ್ಯವಹಾರಾತೀತತ್ವಾತ್" ಎಂದಿದ್ದರೆ ಸರಳವಾಗಿ ಅನ್ವಯವಾಗುತ್ತದೆ.

2. ನಿಜವಾಗಿ ಅದು ಅನೃತವಾಗಿದ್ದರೂ ವ್ಯವಹಾರಗೋಚರವಾಗಿರುವದರಿಂದ ಇದೆ ಎಂಬ ಅರಿವಾಗಿದೆ.

3. ನಿಜವಾದ ಇರವಾದ ಬ್ರಹ್ಮದ. ವ್ಯವಹಾರದಲ್ಲಿ ಇರುವದೆಂದು ತೋರುವ ಅನ್ನಮಯಾದಿಗಳೂ ಆತ್ಮನ ಇರವಿನ ಆಧಾರದಿಂದಲೇ ಇರುವಂತೆ ತೋರುತ್ತಿರುವವು - ಎಂದರ್ಥ.

4. ಬ್ರಹ್ಮಜ್ಞಾನಿಯ ಮೂಲಕವೇ ಬ್ರಹ್ಮವನ್ನು ಅರಿತುಕೊಳ್ಳಬೇಕಾಗಿರುವದರಿಂದ ಜ್ಞಾನಿಯನ್ನು ಮುಮುಕ್ಷುಗಳು ಆದರದಿಂದ ಹುಡುಕುತ್ತಿರುವರು.

ಲೋಕೇ । ತದ್ವಿಪರೀತಃ ಸನ್ ಯಃ ಅಸ್ತಿ ಬ್ರಹ್ಮ ಇತಿ ಚೇತ್ ವೇದ ಸಃ ತಪ್ರಹ್ಮ ಪ್ರತಿಪತ್ತಿಹೇತುಂ ಸನ್ಮಾರ್ಗಂ ವರ್ಣಾಶ್ರಮಾದಿವ್ಯವಸ್ಥಾಲಕ್ಷಣಂ ಶ್ರದ್ಧಾನ ತಯಾ ಯಥಾವತ್ ಪ್ರತಿಪದ್ಯತೇ ಯಸ್ಮಾತ್ ತತಃ ತಸ್ಮಾತ್ ಸನ್ತಂ ಸಾಧು ಮಾರ್ಗಸ್ಥಮ್ ಏನಂ ವಿದುಃ ಸಾಧವಃ । ತಸ್ಮಾತ್ ಅಸ್ತಿ ಇತ್ಯೇವ ಬ್ರಹ್ಮ ಪ್ರತಿ ಪತ್ತವ್ಯಮ್ ಇತಿ ವಾಕ್ಯಾರ್ಥಃ ॥

(ಭಾಷ್ಯಾರ್ಥ)

ಅಥವಾ (ಶ್ರುತಿಗೆ ಇನ್ನೊಂದು ಅರ್ಥವನ್ನೂ ಮಾಡಬಹುದು :-) ಯಾವನು ಬ್ರಹ್ಮವು ಇಲ್ಲ ಎಂದು ಬಗೆಯುತ್ತಾನೋ ಅವನು ವರ್ಣ, ಆಶ್ರಮ - ಮುಂತಾದ ವುಗಳ ವ್ಯವಸ್ಥೆಯೆಂಬ ಯಾವ ಸನ್ಮಾರ್ಗದಲ್ಲಿಯೂ ಶ್ರದ್ಧೆಯಿಲ್ಲದೆ (ಅಂಥ ಮಾರ್ಗವು) ಇಲ್ಲವೆಂದೇ ತಿಳಿಯುತ್ತಾನೆ. ಏಕೆಂದರೆ ಆ (ಮಾರ್ಗವು) ಬ್ರಹ್ಮದ ಜ್ಞಾನಕ್ಕಾಗಿಯೇ ಇರತಕ್ಕದ್ದು.[1] ಆದ್ದರಿಂದ ನಾಸ್ತಿಕನಾದ ಅವನು ಅಸಂತನು, ಸಾಧುವಲ್ಲದವನು[2] ಎಂದು ಲೋಕದಲ್ಲಿ ಎನಿಸಿಕೊಳ್ಳುತ್ತಾನೆ. ಅವನಿಗೆ ವಿರುದ್ಧವಾಗಿರುವವನು ಸಂತನು. ಯಾವನು ಬ್ರಹ್ಮವು ಇದೆ ಎಂದು ನಂಬುತ್ತಾನೋ ಅವನು ಆ ಬ್ರಹ್ಮವನ್ನು ಅರಿಯುವದಕ್ಕೆ ಕಾರಣವಾಗಿರುವ ವರ್ಣ, ಆಶ್ರಮ-ಮುಂತಾದವು ಗಳ ವ್ಯವಸ್ಥೆ ಎಂಬ ಸನ್ಮಾರ್ಗದಲ್ಲಿ ಶ್ರದ್ಧೆಯುಳ್ಳವನಾಗಿ ಅದನ್ನು ಸರಿಯಾಗಿ ನಂಬಿ (ನಡೆ)ಯುತ್ತಾನೆ.[3] ಹೀಗಿರುತ್ತದೆಯಷ್ಟೆ. ಅದರಿಂದ ಆ ನಂಬಿಕೆಯಿಂದ ಇವನನ್ನು ಸತ್ಪುರುಷರು ಸಂತನು, ಸರಿಯಾದ ಮಾರ್ಗದಲ್ಲಿರುವವನು ಎಂದು ತಿಳಿಯುವರು. ಆದ್ದರಿಂದ ಬ್ರಹ್ಮವು ಇದೆ ಎಂದೇ ತಿಳಿಯಬೇಕು[4] - ಎಂಬುದು (ಒಟ್ಟು) ವಾಕ್ಯದ ಅರ್ಥವು.

---

1. ವೇದವಿಹಿತವಾದ ಕರ್ಮವನ್ನು ಜ್ಞಾನಾರ್ಥವಾಗಿ ಮಾಡತಕ್ಕದ್ದು ಎಂದು ಶೀಕ್ಷಾವಲ್ಲಿಯ ಅನುವಾಕದ ಭಾಷ್ಯದಲ್ಲಿ ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಬ್ರಹ್ಮವು ಇದೆ ಎಂದು ನಂಬದವನು ಅದನ್ನು ಹೊಂದುವ ಮಾರ್ಗವನ್ನೂ ಶ್ರದ್ಧೆಯಿಂದ ಅನುಸರಿಸಲಾರನು - ಎಂದು ಭಾವ. ಗೀ. ಭಾ. ೧೬-೨೦.

2. ಅಸನ್, ಸನ್ - ಎಂಬ ಮಾತುಗಳಿಗೆ ಇಲ್ಲದವನು, ಇರುವವನು ಎಂದು ಮೊದಲನೆಯ ವ್ಯಾಖ್ಯಾನದಲ್ಲಿ ಅರ್ಥವನ್ನು ಮಾಡಿತ್ತು ; ಕೆಟ್ಟವನು, ಶಿಷ್ಟನು ಎಂದು ಈಗ ಅರ್ಥವನ್ನು ಮಾಡಿದೆ.

3. ಮೊದಲನೆಯ ವ್ಯಾಖ್ಯಾನವು ಸಾಧ್ಯವಾದ ಜ್ಞಾನವನ್ನು ಗುರಿಯಲ್ಲಿಟ್ಟಿದೆ ; ಎರಡನೆಯದು ಸಾಧನವಾದ ಕರ್ಮಾಚರಣೆಯನ್ನು ಕುರಿತದ್ದು.

4. ಇದೆ ಎಂದು ನಂಬಿ ವರ್ಣಾಶ್ರಮಕರ್ಮಗಳನ್ನು ಮಾಡಿ ಚಿತ್ತಶುದ್ಧಿಯಿಂದ ಜ್ಞಾನವನ್ನು ಪಡೆದುಕೊಳ್ಳಬೇಕು.

ಆನಂದಮಯಪ್ರಕರಣದ ಉಪಸಂಹಾರ

ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ ॥೭॥

೭. ಆ ಹಿಂದಿನವನಿಗೆ ಇವನೇ ಶಾರೀರ ಆತ್ಮನು.

(ಭಾಷ್ಯ)

೧೫೬. ತಸ್ಯ ಪೂರ್ವಸ್ಯ ವಿಜ್ಞಾನಮಯಸ್ಯ ಏಷ ಏವ ಶರೀರೇ ವಿಜ್ಞಾನಮಯೇ ಭವಃ ಶಾರೀರ ಆತ್ಮಾ । ಕೋಽಸೌ ? ಯ ಏಷ ಆನನ್ದಮಯಃ । ತಂ ಪ್ರತಿ ನಾಸ್ಯಾಶಙ್ಕಾ ನಾಸ್ತಿತ್ವೇ । ಅಪೋಢನರ್ವವಿಶೇಷತ್ವಾತ್ತು ಬ್ರಹ್ಮಣೋ ನಾಸ್ತಿತ್ವಂ ಪ್ರತಿ ಆಶಙ್ಕಾ ಯುಕ್ತಾ । ಸರ್ವಸಾಮಾನ್ಯಾಚ್ಚ[1] ಬ್ರಹ್ಮಣಃ ॥

(ಭಾಷ್ಯಾರ್ಥ)

ಆ ಹಿಂದಿನ ವಿಜ್ಞಾನಮಯನಿಗೆ ಇವನೇ ಶಾರೀರನಾದ ಆತ್ಮನು ; ಶರೀರದಲ್ಲಿ ಎಂದರೆ ವಿಜ್ಞಾನಮಯವೆಂಬ (ಶರೀರ)ದಲ್ಲಿ ಇರುವದರಿಂದ (ಶಾರೀರನೆನಿಸಿರುವನು) ಅವನು ಯಾರು ? ಎಂದರೆ ಯಾವ ಈ ಆನಂದಮಯನಿದಾನಲ್ಲ, (ಇವನೇ). ಇವನ ವಿಷಯದಲ್ಲಿ (ಅವನು) ಇಲ್ಲವೆಂಬ ಆಶಂಕೆಯು (ಉಂಟಾಗುವ) ಹಾಗಿಲ್ಲ.[2] ಆದರೆ ಬ್ರಹ್ಮವು ಯಾವ ವಿಶೇಷಗಳೂ ಇಲ್ಲದ್ದಾದ್ದರಿಂದ[3] ಅದು ಇಲ್ಲವೆಂಬ (ಆಶಂಕೆಯುಂಟಾಗುವದು ಯುಕ್ತವಾಗಿದೆ), ಬ್ರಹ್ಮವು ಎಲ್ಲರಿಗೂ ಸಮಾನವಾಗಿರುವದರಿಂದಲೂ (ಈ ಶಂಕೆಯುಂಟಾಗುವದು ಯುಕ್ತವಾಗಿದೆ).

೮. ಶಿಷ್ಯನ ಪ್ರಶ್ನೆಗಳು

ಅಥಾತೋಽನುಪ್ರಶ್ನಾಃ । ಉತಾವಿದ್ವಾನಮುಂ ಲೋಕಂ ಪ್ರೇತ್ಯ ।

1. "ಸರ್ವಸಾಮ್ಯಾಚ್ಚ" ಎಂಬ ವಾ॥ ಪಾಠವು ಸರಿಯಲ್ಲ.

2. "ಅಸನ್ನೇವ ಸ ಭವತಿ" ಎಂಬ ಮಂತ್ರದಲ್ಲಿ ಹೇಳಿರುವದು ಆನಂದಮಯನ ವಿಷಯವೊ, ಅಥವಾ ಆನಂದಮಯನಿಗೆ ಪುಚ್ಛವೆಂದು ವರ್ಣಿಸಿರುವ ಬ್ರಹ್ಮದ ವಿಷಯವೊ ? - ಎಂಬ ಸಂಶಯವುಂಟಾದರೆ ಅದು ಬ್ರಹ್ಮದ ವಿಷಯವೇ, ಆನಂದಮಯನ ವಿಷಯವಲ್ಲ. ಪ್ರಿಯಮೋದ - ಮುಂತಾದ ವಿಶೇಷಗಳು ನಮ್ಮೆಲ್ಲರ ಅನುಭವದಲ್ಲಿರುವದರಿಂದ ಆನಂದಮಯನು ಇದಾನೊ, ಇಲ್ಲವೊ ? - ಎಂಬ ಸಂಶಯವುಂಟಾಗಲು ಕಾರಣವಿಲ್ಲ.

3 ಪ್ರಿಯಾದಿವಿಶೇಷಗಳಲ್ಲಿ ತಾರತಮ್ಯವುಂಟು ; ಆದರೆ ಬ್ರಹ್ಮವು ಪ್ರಿಯಾದಿಗಳು ಇಲ್ಲದ ನಿರ್ವಿಶೇಷಸ್ವರೂಪವಾಗಿರುತ್ತದೆ. ಎಲ್ಲರಿಗೂ ಆತ್ಮನಾಗಿರುವ ನಿರ್ವಿಶೇಷಬ್ರಹ್ಮವು ಇದೆಯೆ ? ಎಂಬ ಸಂಶಯವುಂಟಾಗಬಹುದು - ಎಂದು ಅಭಿಪ್ರಾಯ.

ಕಶ್ಚನ ಗಚ್ಛತೀ ತಿ । ಆಹೋ ವಿದ್ವಾನಮುಂ ಲೋಕಂ ಪ್ರೇತ್ಯ । ಕಶ್ಚಿತ್ಸ ಮಶ್ನುತಾ ತಿ ಉ ॥೬॥

೬. ಇನ್ನು ಆದ್ದರಿಂದ (ಈ) ಅನುಪ್ರಶ್ನೆಗಳು :- ಯಾವನಾದರೂ ಅಜ್ಞಾನಿಯು ಹೊರಟುಹೋದಬಳಿಕ ಆ ಲೋಕಕ್ಕೆ ಹೋಗುತ್ತಾನೆಯೆ ? ಅಥವಾ ಯಾವನಾದರೂ ಜ್ಞಾನಿಯು ಹೊರಟುಹೋದಬಳಿಕ ಆ ಲೋಕವನ್ನು ಪಡೆಯುತ್ತಾನೆಯೆ ?

ಪ್ರಶ್ನೆಗಳಿಗೆ ಕಾರಣ

(ಭಾಷ್ಯ)

೧೫೪. ಯಸ್ಮಾದೇವಮ್ ಅತಃ ತಸ್ಮಾತ್ ಅಥ ಅನಂತರ ಶ್ರೋತುಃ ಶಿಷ್ಯಸ್ಯ ಅನುಪ್ರಶ್ನಾಃ ಆಚಾರ್ಯೋಕ್ತಿಮ್ ಅನು ಏತೇ ಪ್ರಶ್ನಾಃ ಅನುಪ್ರಶ್ನಾಃ ॥

(ಭಾಷ್ಯಾರ್ಥ)

ಹೀಗಿರುತ್ತದೆಯಷ್ಟೆ, ಆದ್ದರಿಂದ[1] ಆ ಕಾರಣದಿಂದ ಇನ್ನು (ಗುರು ಹೇಳಿದ) ಬಳಿಕ ಕೇಳುವ ಶಿಷ್ಯನ ಅನುಪ್ರಶ್ನೆಗಳು (ಎದ್ದುಕೊಳ್ಳುತ್ತವೆ). ಆಚಾರ್ಯನು ಹೇಳಿದ್ದರ ಬಳಿಕ ಈ ಪ್ರಶ್ನೆಗಳು (ಉಂಟಾಗುವವಾದ್ದರಿಂದ ಇವು) ಅನುಪ್ರಶ್ನೆಗಳು.

ಪ್ರಶ್ನೆಗಳ ವಿಂಗಡ

(ಭಾಷ್ಯ)

೧೫೫. ಸಾಮಾನ್ಯಂ ಹಿ ಬ್ರಹ್ಮ ಆಕಾಶಾದಿಕಾರಣತ್ವಾತ್ ವಿದುಷಃ, ಅವಿದುಷಶ್ಚ । ತಸ್ಮಾತ್ ಅವಿದುಷೋಽಪಿ ಬ್ರಹ್ಮಪ್ರಾಪ್ತಿಃ ಆಶಙ್ಕ್ಯತೇ । ಉತ ಅಪಿ ಅವಿದ್ವಾನ್ ಅಮುಂ ಲೋಕಂ ಪರಮಾತ್ಮಾನಮ್ ಇತಃ ಪ್ರೇತ್ಯ ಕಶ್ಚನ । ಚನಶಬ್ದಃ ಅಪ್ಯರ್ಥೇ । ಅವಿದ್ವಾನಪಿ ಗಚ್ಛತಿ ಪ್ರಾಪ್ನೋತಿ ? ಕಿಂ ವಾ ನ ಗಚ್ಛತಿ ಇತಿ ದ್ವಿತೀಯೋಽಪಿ ಪ್ರಶ್ನೋ ದ್ರಷ್ಟವ್ಯಃ । ಅನುಪ್ರಶ್ನಾಃ ಇತಿ ಬಹುವಚನಾತ್ । ವಿದ್ವಾಂಸಂ ಪ್ರತಿ ಅನ್ಯೌ ಪ್ರಶ್ನೌ । ಯದಿ ಅವಿದ್ವಾನ್ ಸಾಮಾನ್ಯಂ ಕಾರಣಮಪಿ ಬ್ರಹ್ಮ ನ ಗಚ್ಛತಿ, ತತೋ ವಿದುಷೋಽಪಿ ಬ್ರಹ್ಮಾಗಮನಮ್ ಆಶಙ್ಕ್ಯತೇ । ಅತಸ್ತಂ ಪ್ರತಿ ಪ್ರಶ್ನಃ - "ಆಹೋ ವಿದ್ವಾನ್" ಇತಿ । ವಿದ್ವಾನ್ ಬ್ರಹ್ಮವಿದಪಿ

1 ಬ್ರಹ್ಮದ ವಿಷಯದಲ್ಲಿ ಶಂಕೆಯುಂಟಾಗುವದು ಸಹಜವಾಗಿರುವದರಿಂದ.

ಕಶ್ಚಿತ್ ಇತಃ ಪ್ರೇತ್ಯ ಅಮುಂ ಲೋಕಮ್ (ಸಮಶ್ನುತೇ ಪ್ರಾಪ್ನೋತಿ)[1] । 'ಸಮಶ್ನುತೇ ಉ' ಇತ್ಯೇವಂ ಸ್ಥಿತೇ ಅಯಾದೇಶೇ ಯಲೋಪೇ ಚ ಕೃತೇ ಅಕಾರಸ್ಯ ಪ್ಲುತಿಃ ಸಮಶ್ನುತಾ ಽ ಉ ಇತಿ । ಉಕಾರಂ ಚ ವಕ್ಷ್ಯಮಾಣಮ್ ಅಧಸ್ತಾತ್ ಅಪಕೃಷ್ಯ ತಕಾರಂ ಚ ಪೂರ್ವಸ್ಮಾತ್ ಉತಶಬ್ದಾತ್ ವ್ಯಾಸಜ್ಯ 'ಆಹೋ' ಇತ್ಯೇತಸ್ಮಾತ್ ಪೂರ್ವಮ್ ಉತಶಬ್ದಂ ಸಂಯೋಜ್ಯ ಪೃಚ್ಛ್ಯತೇ "ಉತಾಹೋ ವಿದ್ವಾನ್" ಇತಿ[2] । ವಿದ್ವಾನ್ ಸಮಶ್ನುತೇ ಅಮುಂ ಲೋಕಮ್, ಕಿಂ ವಾ ಯಥಾ ಅವಿದ್ವಾನ್ ಏವಂ ವಿದ್ವಾನಪಿ ನ ಸಮಶ್ನುತೇ ? ಇತ್ಯಪರಃ ಪ್ರಶ್ನಃ ॥

(ಭಾಷ್ಯಾರ್ಥ)

ಬ್ರಹ್ಮವು ಆಕಾಶವೇ ಮುಂತಾದವುಗಳಿಗೆ ಕಾರಣವಾಗಿರುವದರಿಂದ ಜ್ಞಾನಿಗೂ ಅಜ್ಞಾನಿಗೂ ಸಮಾನವಾಗಿರುತ್ತದೆಯಷ್ಟೆ. ಆದ್ದರಿಂದ ಅಜ್ಞಾನಿಗೂ ಬ್ರಹ್ಮ ಪ್ರಾಪ್ತಿಯಾಗಬಹುದಲ್ಲ ! ಎಂದು (ಶಿಷ್ಯನು) ಶಂಕಿಸಿರುತ್ತಾನೆ. (ಉತ-ಅಪಿ) ಅಜ್ಞಾನಿಯು ಆ ಲೋಕವನ್ನು ಎಂದರೆ ಪರಮಾತ್ಮನನ್ನು[3] ಇಲ್ಲಿಂದ ಹೊರಟು ಹೋದ ಬಳಿಕ[4] - ಕಶ್ಚನ (ಯಾವನಾದರೂ) ಇಲ್ಲಿ ; 'ಚನ' ಎಂಬ ಶಬ್ದವನ್ನು ಅಪಿ (ಕೂಡ) ಎಂಬರ್ಥದಲ್ಲಿ ಉಪಯೋಗಿಸಿರುತ್ತದೆ. "ಅಜ್ಞನುಕೂಡ (ಪರಮಾತ್ಮನಲ್ಲಿಗೆ) ಹೋಗುತ್ತಾನೊ, ಅಥವಾ ಇಲ್ಲವೊ ?" ಎಂದು ಎರಡನೆಯ ಪ್ರಶ್ನೆಯನ್ನೂ ಕಲ್ಪಿಸಬೇಕು ; ಏಕೆಂದರೆ 'ಅನುಪ್ರಶ್ನಾಃ' ಎಂದು ಬಹುವಚನವನ್ನು[5] (ಇಲ್ಲಿ ಉಪಯೋಗಿಸಿರುತ್ತದೆ).

ಮಿಕ್ಕೆರಡು ಪ್ರಶ್ನೆಗಳು ಜ್ಞಾನಿಯನ್ನು ಕುರಿತವುಗಳು. (ಇಬ್ಬರಿಗೂ) ಸಮಾನ

1-2. ಇಲ್ಲಿ "ವಿದ್ವಾನ್ ಬ್ರಹ್ಮವಿದಪಿ" ಎಂಬಲ್ಲಿಂದ "ಉತಾಹೋ ವಿದ್ವಾನ್ ಇತಿ" ಎಂಬರೆಗಿನ ಗ್ರಂಥಭಾಗವು ಮಾ॥ ಗೋ॥ ಪಾಠಗಳಲ್ಲಿ ಬೇರೆಯಾಗಿದೆ. ಅರ್ಥದಲ್ಲಿ ಹೆಚ್ಚುಕಡಿಮೆಯೇನೂ ಇಲ್ಲ. ನಾವು ಆ॥ ಪಾಠವನ್ನೇ ಅಂಗೀಕರಿಸಿರುತ್ತೇವೆ. "ಸಮಶ್ನುತೇ ಪ್ರಾಪ್ನೋತಿ" ಎಂಬ ಮಾತುಗಳು ಕಾ॥ ಗೋ॥ ಪಾಠಗಳಲ್ಲಿವೆ.

3. ಪರಮಾತ್ಮನನ್ನು ಲೋಕವೆಂದೂ ಕರೆಯುವದುಂಟು. ಐ. ೨-೬, ಛಾಂ. ೮-೩-೨, ಬೃ. ೧-೪-೧೫, ಮುಂ. ೩-೨-೬.

4. ಶರೀರವನ್ನು ಬಿಟ್ಟುಹೋದಬಳಿಕ.

5. ಅಜ್ಞಾನಿಯು ಪಡೆಯುತ್ತಾನೆಯೊ, ಇಲ್ಲವೊ ? - ಎಂದು ಎರಡು ಪ್ರಶ್ನೆಗಳು ; ಜ್ಞಾನಿಯು ಪಡೆಯುತ್ತಾನೆಯೊ, ಇಲ್ಲವೊ ? - ಎಂದು ಎರಡು ಪ್ರಶ್ನೆಗಳು ; ಹೀಗೆ ನಾಲ್ಕು ಪ್ರಶ್ನೆಗಳಿರುವದರಿಂದ ಬಹುವಚನವನ್ನುಪಯೋಗಿಸಿದೆ. ಹಾಗಿಲ್ಲದಿದ್ದರೆ 'ಅನುಪ್ರಶ್ನೌ' ಎಂದು ದ್ವಿವಚನವನ್ನುಪಯೋಗಿಸಬೇಕಾಗಿತ್ತು ಎಂದು ಭಾವ.

ವಾಗಿರುವ ಬ್ರಹ್ಮವನ್ನು ಕೂಡ ಅಜ್ಞಾನು ಹೋಗಿ (ಸೇರು)ವದಿಲ್ಲವಾದರೆ ಆಗ ಜ್ಞಾನಿಯೂಕೂಡ ಬ್ರಹ್ಮವನ್ನು ಹೋಗಿ (ಸೇರು)ವದಿಲ್ಲವೆಂದೇ ಶಂಕಿಸಬಹುದಾಗಿರುತ್ತದೆ. ಆದ್ದರಿಂದ ಅವನನ್ನು ಕುರಿತು "ಅಹೋ ವಿದ್ವಾನ್" (ಅಥವಾ ಜ್ಞಾನಿಯು ಯಾವನಾದರೂ ಆ ಲೋಕವನ್ನು ಪಡೆಯುತ್ತಾನೆಯೆ) ?- ಎಂಬ ಪ್ರಶ್ನೆಯನ್ನು (ಹಾಕಿರುತ್ತದೆ). ಜ್ಞಾನಿಯು ಎಂದರೆ ಬ್ರಹ್ಮವನ್ನು ಅರಿತವನು ಕೂಡ ಇಲ್ಲಿಂದ ಹೊರಟುಹೋದಬಳಿಕ ಆ ಲೋಕವನ್ನು ಪಡೆಯುತ್ತಾನೆಯೆ, ಸೇರುತ್ತಾನೆಯೆ ? 'ಸಮಶ್ನುತೇ ಉ' ಎಂದಿಂತು ಇರುವಲ್ಲಿ (ಒಕಾರಕ್ಕೆ) 'ಅಯ' (ಎಂಬ) ಆದೇಶವನ್ನೂ ಯಕಾರಲೋಪವನ್ನೂ ಮಾಡಿದ ಬಳಿಕ ಅಕಾರಕ್ಕೆ ಪ್ಲುತವಾಗಿ 'ಸಮಶ್ನುತಾ ೩ ಉ' ಎಂದಾಗಿರುತ್ತದೆ. ಮುಂದೆ ಬರುವ ಉಕಾರವನ್ನು ಇತ್ತಲಾಗಿ ಎಳೆದುಕೊಂಡು (ಉತಾವಿದ್ವಾನ್ ಎಂಬಲ್ಲಿ) ಹಿಂದೆ ಇರುವ ಉತ ಎಂಬ ಶಬ್ದದಿಂದ ತಕಾರವನ್ನು ಬಿಡಿಸಿಕೊಂಡು (ಆದ) ಉತ ಎಂಬ ಶಬ್ದವನ್ನು ಅಹೋ ಎಂಬುದರ ಹಿಂದೆ ಸೇರಿಸಿಕೊಂಡು 'ಉತಾಹೋ ವಿದ್ವಾನ್ ಎಂದು ಪ್ರಶ್ನೆಯನ್ನು ಮಾಡಿರುತ್ತದೆ. ಜ್ಞಾನಿಯು ಆ ಲೋಕವನ್ನು ಪಡೆಯುತ್ತಾನೆಯೊ, ಅಥವಾ ಅಜ್ಞಾನಿಯಂತೆಯೇ ಜ್ಞಾನಿಯುಕೂಡ ಪಡೆಯುವದಿಲ್ಲವೊ ? - ಎಂಬುದು ಮತ್ತೊಂದು ಪ್ರಶ್ನೆ .

(ಭಾಷ್ಯ)

೧೫೬. ದ್ವಾವೇವ ವಾ ಪ್ರಶ್ನೌ ವಿದ್ವದವಿದ್ವದ್ವಿಷಯೌ । ಬಹುವಚನಂ ತು ಸಾಮರ್ಥ್ಯಪ್ರಾಪ್ತಪ್ರಶ್ನಾನ್ತರಾಪೇಕ್ಷಯಾ ಘಟತೇ । "ಅಸದ್ ಬ್ರಹ್ಮೇತಿ ವೇದ ಚೇತ್", "ಅಸ್ತಿ ಬ್ರಹ್ಮೇತಿ ಚೇದ್ವೇದ" ಇತಿ ಶ್ರವಣಾತ್ ಅಸ್ತಿ ನಾಸ್ತೀತಿ ಸಂಶಯಃ । ತತಃ ಅರ್ಥಪ್ರಾಪ್ತಃ "ಕಿಮ್ ಅಸ್ತಿ ನಾಸ್ತಿ ?" ಇತಿ ಪ್ರಥಮೋಽನುಪ್ರಶ್ನಃ । ಬ್ರಹ್ಮಣಃ ಅಪಕ್ಷಪಾತಿತ್ವಾತ್ "ಅವಿದ್ವಾನ್ ಗಚ್ಛತಿ - ನ ಗಚ್ಛತಿ" ಇತಿ ದ್ವಿತೀಯಃ । ಬ್ರಹ್ಮಣಃ ಸಮತ್ವೇಽಪಿ ಅವಿದುಷ ಇವ ವಿದುಷೋಽಪಿ ಅಗಮನಮಾಶಙ್ಕ್ಯ[1] "ಕಂ ವಿದ್ವಾನ್ ಸಮಶ್ನುತೇ ನ ಸಮಶ್ನುತೇ" ಇತಿ ತೃತೀಯೋಽನುಪ್ರಶ್ನಃ ॥

(ಭಾಷ್ಯಾರ್ಥ)

ಅಥವಾ ಜ್ಞಾನಿಯನ್ನು ಕುರಿತದ್ದು ಮತ್ತು ಅಜ್ಞಾನಿಯನ್ನು ಕುರಿತದ್ದು - ಎಂದು ಎರಡೇ ಪ್ರಶ್ನೆಗಳು[2] ಎಂದಾದರೂ (ವಿವರಿಸಬಹುದು). ('ಅನುಪ್ರಶ್ನಾಃ' ಎಂಬ)

1. ವಾ॥ ಪಾಠ.

2. ಪಡೆಯುತ್ತಾನೊ, ಇಲ್ಲವೊ ? - ಎಂಬುದನ್ನು ಎರಡು ಪ್ರಶ್ನೆಗಳಾಗಿ ಎಣಿಸುವದ

ಸಹುವಚನವೋ ಎಂದರೆ (ಶಬ್ದ) ಸಾಮರ್ಥ್ಯದಿಂದ ತೋರುವ ಮತ್ತೊಂದು ಪ್ರಶ್ನೆಯ ಅಪೇಕ್ಷೆಯಿಂದ ಹೊಂದುತ್ತದೆ. (ಎಂದೂ ಹೇಳಬಹುದಾಗಿದೆ). ಅದು ಹೇಗೆಂದರೆ:- ''ಬ್ರಹ್ಮವು ಇಲ್ಲವೆಂದು ತಿಳಿಯುತ್ತಾನಾದರೆ'', ''ಬ್ರಹ್ಮವು ಇದೆ ಎಂದು ತಿಳಿಯುತ್ತಾನಾದರೆ'' - ಎಂದು ಶ್ರುತಿಯಿರುವದರಿಂದ (ಬ್ರಹ್ಮವು) ಇದೆಯೊ, ಇಲ್ಲವೊ ? - ಎಂಬ ಸಂಶಯ(ವುಂಟಾಗುತ್ತದೆ). ಆದ್ದರಿಂದ (ಅದು) ಇದೆಯೊ, ಇಲ್ಲವೊ ? ಎಂಬ ಮೊದಲನೆಯ ಅನುಪ್ರಶ್ನೆಯು ಅರ್ಥದಿಂದಲೇ ಪ್ರಾಪ್ತವಾಗಿರುತ್ತದೆ. ಬ್ರಹ್ಮವು (ಯಾರೊಬ್ಬರ) ಪಕ್ಷವನ್ನು ಹಿಡಿಯದೆ (ಎಲ್ಲರಿಗೂ ಸಮಾನ)ವಾಗಿರುವದರಿಂದ ಅಜ್ಞನು (ಅಲ್ಲಿಗೆ) ಹೋಗುತ್ತಾನೊ, ಇಲ್ಲವೊ ? - ಎಂಬುದು ಎರಡನೆಯ (ಅನು) ಪ್ರಶ್ನೆವು. ಬ್ರಹ್ಮವು (ಇಬ್ಬರಿಗೂ) ಸಮನಾಗಿ ಅಜ್ಞಾನಿಯು (ಅದನ್ನು ಪಡೆಯದಿರು)ವಂತೆ ಜ್ಞಾನಿಯೂ (ಅದನ್ನು ಪಡೆಯದೆ ಇರಲಿ ! - ಎಂಬ ಶಂಕೆಯಿಂದ ಜ್ಞಾನಿಯು (ಅದನ್ನು) ಪಡೆಯುತ್ತಾನೊ, ಇಲ್ಲವೊ - ಎಂಬ ಮೂರನೆಯ ಅನುಪ್ರಶ್ನವು (ಬಂದಿರುತ್ತದೆ).

೯. ಬ್ರಹ್ಮವು ಸೃಷ್ಟಿಕರ್ತೃವಾದ್ದರಿಂದ ಇದೆ

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೧೫೭. ಏತೇಷಾಂ ಪ್ರತಿವಚನಾರ್ಥಮ್[1] ಉತ್ತರಗ್ರನ್ಥ[2] ಆರಭ್ಯತೇ । ತತ್ರ ಅಸ್ತಿತ್ವಮೇವ ತಾವದುಚ್ಯತೇ । ಯಚ್ಚೋಕ್ತಮ್ ''ಸತ್ಯಂ ಜ್ಞಾನಮನನ್ತಂ ಬ್ರಹ್ಮ'' ಇತಿ ತತ್ರ (ಚ)[3] ''ಕಥಂ ಸತ್ಯತ್ವಮ್'' ಇತ್ಯೇತದ್ ವಕ್ತವ್ಯಮ್ ಇತಿ ಇದಮುಚ್ಯತೇ . ಸತ್ಯೋಕ್ಯೈವ ಸತ್ಯತ್ವಮುಚ್ಯತೇ । ಉಕ್ತಂ ಹಿ ''ಸದೇವ ಸತ್ಯಮ್'' ಇತಿ । ಕಸ್ಮಾತ್ ಸತ್ಯೋಕ್ಯೈವ ಸತ್ಯತ್ವಮುಚ್ಯತೇ ।।

ಕ್ಕಿಂತ ಒಂದೆಂತ ಭಾವಿಸುವದೇ ಯುಕ್ತ ; ಏಕೆಂದರೆ ಇದಕ್ಕೆ ಒಂದೇ ಉತ್ತರವು ಬರಬೇಕಾಗಿದೆ. ಆದ್ದರಿಂದ ಇಲ್ಲಿರುವದು ಎರಡೇ ಪ್ರಶ್ನೆಗಳು.

1. ''ಪ್ರತಿವಚವಾರ್ಥಃ'' ಎಂದು ವಾ।। ಪಾಠ.

2. ''ಉತ್ತರೋ ಗ್ರನ್ಥಃ'' ಎಂದು ವಾ।। ಪಾಠ.

3. ''ತಚ್ಚ'' ಎಂದು ಆ।। ಪಾಠ ; ಇಲ್ಲಿಕೊಟ್ಟಿರುವದು ವಾ।। ಪಾಠ. ಇಲ್ಲಿ 'ತತ್ರ' ಎಂದಿಷ್ಟೇ ಇದ್ದರೂ ಸಾಕು.

(ಭಾಷ್ಯಾರ್ಥ)

ಈ (ಪ್ರಶ್ನೆಗಳ)ಗೆ ಉತ್ತರವನ್ನು ಹೇಳುವದಕ್ಕಾಗಿ ಮುಂದಿನ ಗ್ರಂಥವನ್ನು ಪ್ರಾರಂಭಿಸಿರುತ್ತದೆ. ಅದರಲ್ಲಿಯೂ[1] (ಬ್ರಹ್ಮದ) ಇರುವಿಕೆಯನ್ನೇ ಮೊದಲು ಹೇಳಲಾಗುತ್ತದೆ. ಇದಲ್ಲದೆ "ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು" (೨-೧) ಎಂದು ಹಿಂದೆ ಹೇಳಿತ್ತಷ್ಟೆ, ಅಲ್ಲಿ (ಬ್ರಹ್ಮವು) ಸತವೆಂಬುದು ಹೇಗೆ ? ಎಂಬುದನ್ನು ಹೇಳಬೇಕಾಗಿರುತ್ತದೆ. (ಇಲ್ಲಿ) ಸತ್ತ್ವವನ್ನು (ಇರುವಿಕೆಯನ್ನು) ಹೇಳಿರುವದರಿಂದಲೇ (ಅದು) ಸತ್ಯವೆಂದು ಹೇಳಿದಂತಾಯಿತು. "ಸತ್ತೇ ಸತ್ಯವು" ಎಂದು ಹೇಳಿವೆಯಲ್ಲವೆ ?[2] ಆದ್ದರಿಂದ (ಅದು) ಸತ್ತೆಂದು ಹೇಳುವದರಿಂದಲೇ (ಅದು) ಸತ್ಯವೆಂದು ಹೇಳಿದಂತೆ ಆಯಿತು.

(ಭಾಷ್ಯ)

೧೫೮. ಕಥಮ್ ಏವಮರ್ಥತಾ ಅವಗಮ್ಯತೇ ಅಸ್ಯ ಗ್ರನ್ಥಸ್ಯ ? ಶಬ್ದಾನುಗಮಾತ್ । ಅನೇನೈವ ಹಿ ಅರ್ಥೇನ ಅನ್ವಿತಾನಿ ಉತ್ತರಾಣಿ ವಾಕ್ಯಾನಿ[3] 'ತತ್ಸತ್ಯಮಿತ್ಯಾಚಕ್ಷತೇ' (೨-೬), 'ಯದೇಷ ಆಕಾಶ ಆನನ್ದೋ ನ ಸ್ಯಾತ್' - (೭-೨) ಇತ್ಯಾದೀನಿ ॥

(ಭಾಷ್ಯಾರ್ಥ)

(ಪ್ರಶ್ನೆ :-) ಈ ಗ್ರಂಥಕ್ಕೆ ಇದೇ ಅರ್ಥವೆಂದು ಹೇಗೆ ನಿಶ್ಚಯಿಸಬೇಕು ?

(ಉತ್ತರ :-) ಶಬ್ದಗಳಲ್ಲಿ (ಇದು) ಹೊಂದಿಕೊಂಡು ಬಂದಿರುವದರಿಂದ. ಈ ಅರ್ಥವೇ ಮುಂದೆ ಬರುವ "ಅದು ಸತ್ಯವೆಂದು ಹೇಳುತ್ತಾರೆ" (೭-೬), "ಈ ಆಕಾಶದಲ್ಲಿರುವ ಆನಂದವು ಇಲ್ಲದಿದ್ದರೆ (ಯಾವನು ಕೆಲಸಮಾಡಿಯಾನು) ?" ಮುಂತಾದ ವಾಕ್ಯಗಳಲ್ಲಿ ಹೊಂದಿಕೊಂಡು ಬಂದಿರುತ್ತದೆ.

ಬ್ರಹ್ಮವು ಜಗತ್ಕಾರಣವಾದ್ದರಿಂದ ಇದೆ

(ಭಾಷ್ಯ)

೧೫೯. ತತ್ರ ಅಸದೇವ ಬ್ರಹ್ಮ ಇತ್ಯಾಶಙ್ಕ್ಯತೇ । ಕಸ್ಮಾತ್ ? ಯದಸ್ತಿ ತದ್ವಿಶೇಷತೋ ಗೃಹ್ಯತೇ ಯಥಾ ಘಟಾದಿ । ಯನ್ನಾಸ್ತಿ ತನ್ನೋಪಲಭ್ಯತೇ

---

1. ಇರುವಿಕೆ, ಅಜ್ಞರಿಗೆ ಬ್ರಹ್ಮಪ್ರಾಪ್ತಿ, ಜ್ಞಾನಿಗಳಿಗೆ ಬ್ರಹ್ಮಪ್ರಾಪ್ತಿ - ಈ ಮೂರು ವಿಷಯಗಳೊಳಗೆ.

2. ಛಾಂ. ೬-೮-೭ ; ಹಿಂದೆ ಭಾ. ಭಾ. ೯೮ ನೋಡಿ.

3. 'ಉತ್ತರವಾಕ್ಯಾನಿ' ಎಂದು ವಾ॥ ಪಾಠ.

ಯಥಾ ಶಶವಿಷಾಣಾದಿ । ತಥಾ ನೋಪಲಭ್ಯತೇ ಬ್ರಹ್ಮ । ತಸ್ಮಾತ್ ವಿಶೇಷ ಕೋಽಗ್ರಹಣಾತ್ ನಾಸ್ತಿ ಇತಿ । ತನ್ನ । ಆಕಾಶಾದಿಕಾರಣತ್ವಾದ್ ಬ್ರಹ್ಮಣಃ । ನ ನಾಸ್ತಿ ಬ್ರಹ್ಮ । ಕಸ್ಮಾತ್ ? ಆಕಾಶಾದಿ ಹಿ ಸರ್ವಂ ಕಾರ್ಯಂ ಬ್ರಹ್ಮಣೋ ಜಾತಂ ಗೃಹ್ಯತೇ । ಯಸ್ಮಾಚ್ಚ ಜಾಯತೇ ಕಿಂಚಿತ್ ತದಸ್ತೀತಿ ದೃಷ್ಟಂ ಲೋಕೇ ಯಥಾ ಘಟಾಙ್ಕುರಾದಿ ಕಾರಣಂ ಮೃದ್ಬೀಜಾದಿ । ತಸ್ಮಾದ್ ಆಕಾಶಾದಿಕಾರಣತ್ವಾತ್ ಅಸ್ತಿ ಬ್ರಹ್ಮ ॥

(ಭಾಷ್ಯಾರ್ಥ)

(ಆಕ್ಷೇಪ :-) ಇಲ್ಲಿ ಬ್ರಹ್ಮವು ಇರುವದೇ ಇಲ್ಲ ಎಂದು ಶಂಕಿಸಬಹುದಾಗಿದೆ. ಏಕೆಂದರೆ ಯಾವದು ಇರುತ್ತದೆಯೋ ಅದು ವಿಶೇಷರೂಪದಿಂದ[1] ತಿಳಿಯಬರುತ್ತದೆ ; ಉದಾಹರಣೆಗೆ ಗಡಿಗೆಯೇ ಮುಂತಾದದ್ದು (ಹಾಗೆ ವಿಶೇಷ ರೂಪದಿಂದ) ತಿಳಿಯಬರುತ್ತದೆ). ಯಾವದು ಇರುವದಿಲ್ಲವೋ ಅದು (ಹಾಗೆ) ತಿಳಿಯಬರುವದಿಲ್ಲ ; ಉದಾಹರಣೆಗೆ ಮೊಲದ ಕೊಂಬು (ವಿಶೇಷರೂಪದಿಂದ ತಿಳಿಯಬರುವದಿಲ್ಲ). ಅದರಂತೆ ಬ್ರಹ್ಮವೂ ತಿಳಿಯಬರುವದಿಲ್ಲ. ಆದ್ದರಿಂದ ವಿಶೇಷರೂಪದಿಂದ ತಿಳಿಯಬಾರದಿರುವದರಿಂದ (ಅದು) ಇಲ್ಲ.

(ಪರಿಹಾರ :-) ಇದು ಸರಿಯಲ್ಲ. ಏಕೆಂದರೆ (ಬ್ರಹ್ಮವು) ಆಕಾಶಾದಿಗಳಿಗೆ ಕಾರಣವಾಗಿರುತ್ತದೆ. ಬ್ರಹ್ಮವು ಇಲ್ಲವೆಂಬುದು ಸರಿಯಲ್ಲ. ಏಕೆಂದರೆ ಆಕಾಶವೇ ಮುಂತಾದ ಕಾರ್ಯವೆಲ್ಲವೂ ಬ್ರಹ್ಮದಿಂದ ಹುಟ್ಟಿರುವದು ಕಂಡುಬರುತ್ತಿದೆ. ಯಾವದರಿಂದ ಏನಾದರೂ ಹುಟ್ಟಿರುವದೋ ಅದು ಇರುವದೆಂದು ಲೋಕದಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಗಡಿಗೆ, ಮೊಳಕೆ - ಮುಂತಾದವುಗಳಿಗೆ ಕಾರಣವಾಗಿರುವ ಮಣ್ಣು, ಬೀಜ ಮುಂತಾದವುಗಳು (ಇರುತ್ತವೆ)[2]. ಆದ್ದರಿಂದ ಆಕಾಶವೇ ಮುಂತಾದವುಗಳಿಗೆ ಕಾರಣವಾಗಿರುವದರಿಂದ ಬ್ರಹ್ಮವು ಇದೆ.

ಜಗತ್ತಿಗೆ ಅಸತ್ತು ಕಾರಣವಲ್ಲ

(ಭಾಷ್ಯ)

೧೬೦. ನ ಚಾಸತೋ ಜಾತಂ ಕಿಂಚಿದ್ ಗೃಹ್ಯತೇ ಲೋಕೇ ಕಾರ್ಯಮ್ । ಅಸತಶ್ಚೇತ್ ನಾಮರೂಪಾದಿಕಾರ್ಯಂ ನಿರಾತ್ಮಕತ್ವಾನ್ನೋಪಲಭ್ಯೇತ । ಉಪಲಭ್ಯತೇ ತು ।

1. ।

2. ಇಲ್ಲಿ ಮಣ್ಣು, ಬೀಜ ಮುಂತಾದವುಗಳು ಸತ್ಯವೆಂಬುದನ್ನು ಹೇಳುವದಕ್ಕೆ ಬಂದಿಲ್ಲ ; ಕಾರ್ಯದಲ್ಲಿ ತೋರುವ ಇರವು ಕಾರಣದಿಂದಲೇ ಬಂದಿರುತ್ತದೆ ಎಂಬುದು ಇಲ್ಲಿ ಮುಖ್ಯಾಶಯ. ಗೀ. ಭಾ. ೨-೧೬ ನೋಡಿ.

ತಸ್ಮಾತ್ ಅಸ್ತಿ ಬ್ರಹ್ಮ । ಅಸತಶ್ಚೇತ್ ಕಾರ್ಯಂ ಗೃಹ್ಯಮಾಣಂ ಅಪಿ ಅಸದಸ್ತಿತ ಮೇವ ತತ್ ಸ್ಯಾತ್ । ನ ಚೈವಮ್ । ತಸ್ಮಾತ್ ಅಸ್ತಿ ಬ್ರಹ್ಮ । ತತ್ರ 'ಕಥಮಸತಃ ಸಜ್ಜಾಯೇತ' (ಛಾಂ. ೬-೨-೨) ಇತಿ ಶ್ರುತ್ಯನ್ತರಮ್ ಅಸತಃ ಸಜ್ಜನ್ಮಾಸಂಭವಮ್ ಅನ್ಯಾಚಷ್ಟೇ ನ್ಯಾಯತಃ । ತಸ್ಮಾತ್ ಸದೇವ ಬ್ರಹ್ಮ ಇತಿ ಯುಕ್ತಮ್ ॥

(ಭಾಷ್ಯಾರ್ಥ)

ಯಾವ ಕಾರ್ಯವೇ ಆಗಲಿ, ಅಸತ್ತಿನಿಂದ ಹುಟ್ಟಿರುವದು ಲೋಕದಲ್ಲಿ ಕಂಡುಬರುವದಿಲ್ಲ.[1] ನಾಮ, ರೂಪ-ಮುಂತಾದ[2] ಕಾರ್ಯವು ಅಸತ್ತಿನಿಂದ ಬಂದಿದ್ದರೆ (ಅದಕ್ಕೆ) ಆತ್ಮವೇ[3] ಇಲ್ಲದ್ದರಿಂದ (ಅದು) ಕಾಣಬರುತ್ತಲೇ ಇರಲಿಲ್ಲ ; ಆದರೆ ಕಾಣಬರುತ್ತಿದೆ. ಆದ್ದರಿಂದ ಬ್ರಹ್ಮವು ಇದೆ. ಅಸತ್ತಿನಿಂದ ಕಾರ್ಯವು (ಹುಟ್ಟಿದ್ದಿದ್ದರೆ) ಅಸತ್ತಿನಿಂದ ಕೂಡಿಕೊಂಡೇ ಕಾಣಬೇಕಾಗುತ್ತಿತ್ತು.[4] ಆದರೆ ಹಾಗಿಲ್ಲ. ಆದ್ದರಿಂದ ಬ್ರಹ್ಮವು ಇದೆ. ಇಲ್ಲಿ "ಅಸತ್ತಿನಿಂದ ಸತ್ತು ಹೇಗೆ ಹುಟ್ಟೀತು ?" (ಛಾಂ. ೬-೨-೨) ಎಂಬ ಬೇರೊಂದು ಶ್ರುತಿಯು ಅಸತ್ತಿನಿಂದ ಸತ್ತು ಹುಟ್ಟಲಾರದೆಂಬ ಯುಕ್ತಿಸಿದ್ಧವಾದ (ವಿಷಯವನ್ನು) ಅನುವಾದಮಾಡಿ ಹೇಳಿರುತ್ತದೆ. ಆದ್ದರಿಂದ ಬ್ರಹ್ಮವು ಸತ್ತೇ ಎಂಬುದು ಯುಕ್ತವಾಗಿರುತ್ತದೆ.[5]

ಬ್ರಹ್ಮವು ಚೇತನರೂಪವಾಗಿರುತ್ತದೆ

(ಭಾಷ್ಯ)

೧೬೧. ತದ್ ಯದಿ ಮೃದ್ಬೀಜಾದಿವತ್ ಕಾರಣಂ ಸ್ಯಾತ್ ಅಚೇತನಂ ತರ್ಹಿ । ನ । ಕಾಮಯಿತೃತ್ವಾತ್ । ನ ಹಿ ಕಾಮಯಿತೃ ಅಚೇತನಮ್ ಅಸ್ತಿ ಲೋಕೇ । ಸರ್ವಜ್ಞಂ ಹಿ ಬ್ರಹ್ಮ ಇತ್ಯವೋಚಾಮ । ಅತಃ ಕಾಮಯಿತೃತ್ವೋಪಪತ್ತಿಃ ॥

---

1. ಸೂ. ಭಾ. ೨-೨-೨೬ರಲ್ಲಿ ಅಸತ್ತಿನಿಂದಲೂ ಕಾರ್ಯವಾಗಬಹುದೆಂಬ ವಾದವನ್ನು ಖಂಡಿಸಿದೆ.

2. 'ಮುಂತಾದ' ಎಂಬ ಮಾತಿನಿಂದ ಕರ್ಮವನ್ನು ಗ್ರಹಿಸಬೇಕು.

3. ಸ್ವರೂಪವೇ.

4. ಮಣ್ಣಿನಿಂದ ಹುಟ್ಟಿದ ಕಾರ್ಯಗಳಲ್ಲಿ ಮಣ್ಣು ಸೇರಿಕೊಂಡೇ ಇರುವಂತೆ ಅಸತ್ತಿನಿಂದ ಆಗಿರುವ ಕಾರ್ಯಗಳಲ್ಲಿ ಅಸತ್ತೇ ಇರಬೇಕಾಗುವದು, ಯಾವ ವಸ್ತುವೂ ಇದೆ ಎಂದು ತಿಳಿಯಬರಬಾರದಾಗುವದು. ಆದರೆ ಅನುಭವದಲ್ಲಿ ತೋರುವದೆಲ್ಲ ಇದೆ ಎಂದೇ ತಿಳಿಯಬರುತ್ತದೆ. ಛಾಂ. ಭಾ. ೬-೨-೨.

5. "ಬ್ರಹ್ಮವು ಎಲ್ಲವನ್ನೂ ಸೃಷ್ಟಿಸಿತು" ಎಂಬ ವಾಕ್ಯದಿಂದ ಅದು ಸತ್ತೇ ಎಂದು ಹೇಳಿದಂತೆ ಆಗುತ್ತದೆ ಎಂದಭಿಪ್ರಾಯ.

(ಭಾಷ್ಯಾರ್ಥ)

(ಆಕ್ಷೇಪ :-) ಹಾಗಾದರೆ ಮಣ್ಣು, ಬೀಜ - ಮುಂತಾದವುಗಳಂತೆ ಕಾರಣ ವಾಗಿದ್ದರೆ (ಬ್ರಹ್ಮವು) ಅಚೇತನವೆಂದಾಯಿತು.

(ಪರಿಹಾರ :-) ಹಾಗಿಲ್ಲ. ಏಕೆಂದರೆ (ಅದು) ಕಾಮವನ್ನು ಮಾಡುವ ವಾಗಿರುತ್ತದೆ. ಲೋಕದಲ್ಲಿ ಕಾಮಿಸುವವನಾಗಿರುವ ಅಚೇತನವು ಇಲ್ಲವಷ್ಟೆ ?[1] ಬ್ರಹ್ಮವು ಸರ್ವಜ್ಞವಾಗಿರುತ್ತದೆ ಎಂದಲ್ಲವೆ, (ನಾವು) ಹಿಂದೆ ಹೇಳಿರುವದು ? ಆದ್ದರಿಂದ ಅದು ಕಾಮಿಸುವವನಾಗಿರಬಹುದಾಗಿದೆ.[2]

ಬ್ರಹ್ಮವು ಕಾಮಕ್ಕೆ ವಶವಲ್ಲ

(ಭಾಷ್ಯ)

೧೬೨. ಕಾಮಯಿತೃತ್ವಾತ್ ಅಸ್ಮದಾದಿವತ್ ಅನಾಪ್ತಕಾಮಮ್ ಇತಿ ಚೇತ್ । ನ । ಸ್ವಾತನ್ತ್ರ್ಯಾತ್ । ಯಥಾ ಅನ್ಯಾನ್ ಪರವಶೀಕೃತ್ಯ ಕಾಮಾದಿದೋಷಾಃ ಪ್ರವರ್ತ ಯನ್ತಿ ನ ತಥಾ ಬ್ರಹ್ಮಣಃ ಪ್ರವರ್ತಕಾಃ ಕಾಮಾಃ । ಕಥಂ ತರ್ಹಿ ? ಸತ್ಯಜ್ಞಾನ ಲಕ್ಷಣಾಃ ಸ್ವಾತ್ಮಭೂತತ್ವಾದ್ ವಿಶುದ್ಧಾಃ ; ನ ತೈರ್ಬ್ರಹ್ಮ ಪ್ರವರ್ತ್ಯತೇ । ತೇಷಾಂ ತು ತತ್ ಪ್ರವರ್ತಕಂ ಬ್ರಹ್ಮ ಪ್ರಾಣಕರ್ಮಾಪೇಕ್ಷಯಾ । ತಸ್ಮಾತ್ ಸ್ವಾತನ್ತ್ರ್ಯಂ ಕಾಮೇಷು ಬ್ರಹ್ಮಣಃ । ಅತೋ ನ ಅನಾಪ್ತಕಾಮಂ ಬ್ರಹ್ಮ ॥

(ಭಾಷ್ಯಾರ್ಥ)

(ಶಂಕೆ :-) (ಅದು) ಕಾಮಿಸುವದಾದ್ದರಿಂದ ನಮ್ಮಗಳಂತೆ ಪಡೆಯದೆ ಇರುವ ಕಾಮಗಳೂ (ಅದಕ್ಕೆ) ಉಂಟು (ಎಂದಾಯಿತಲ್ಲ) !

(ಪರಿಹಾರ :-) ಹಾಗಲ್ಲ. ಏಕೆಂದರೆ (ಅದಕ್ಕೆ) ಸ್ವಾತಂತ್ರ್ಯವಿರುತ್ತದೆ. ಮಿಕ್ಕವರನ್ನು ಕಾಮವೇ ಮುಂತಾದ ದೋಷಗಳು[3] ಹೇಗೆ ತಮ್ಮ ಅಧೀನಕ್ಕೆ ತಂದು ಕೊಂಡು (ವಿಷಯಗಳಲ್ಲಿ) ತೊಡಗಿಸುತ್ತವೆಯೋ ಹಾಗೆ ಕಾಮಗಳು ಬ್ರಹ್ಮವನ್ನು ತೊಡಗಿಸುವದಿಲ್ಲ. ಮತ್ತೆ ಹೇಗೆ ? ಎಂದರೆ, (ಅವು) ಸತ್ಯಜ್ಞಾನರೂಪವಾಗಿರು

1. ಇಚ್ಛೆಯು ಚೇತನದ ಧರ್ಮ.

2. ಬ್ರಹ್ಮವು ಸರ್ವಜ್ಞವೆಂದು ಹೇಳಿದ್ದರಿಂದ ಅದು ಚೇತನವೆಂದಂತೆ ಆಯಿತು. ಆದ್ದ ರಿಂದ ಅದರಲ್ಲಿ ಇಚ್ಛೆಯೂ ಇರಬಹುದು. ಅಚೇತನವಾಗಿದ್ದಿದ್ದರೆ ಇದು ಹೊಂದುತ್ತಿರಲಿಲ್ಲ.

3. ರಾಗದ್ವೇಷಮೋಹಗಳೆಂಬ ದೋಷಗಳೇ ಪ್ರವೃತ್ತಿಗೆ ಕಾರಣ. ನ್ಯಾ.ಸೂ ೧-೧-೧೮ ನೋಡಿ.

ತ್ತದೆ ; ಅದರ ಆತ್ಮವೇ ಆಗಿರುವದರಿಂದ[1] ಬಹುಶುಪ್ತವಾಗಿರುತ್ತದೆ. ಅವುಗಳಿಂದ ಬ್ರಹ್ಮವು ತೊಡಗಿಸಲ್ಪಡುವದಿಲ್ಲ , ಆದರೆ ಅವುಗಳನ್ನೇ ಆ ಬ್ರಹ್ಮವು ಪ್ರಾಣಿಗಳ ಕರ್ಮಕ್ಕೆ ತಕ್ಕಂತೆ[2] ತೊಡಗಿಸುತ್ತದೆ. ಆದ್ದರಿಂದ ಕಾಮಗಳ ವಿಷಯದಲ್ಲಿ ಹ್ಯಕ್ಕೆ ಸ್ವಾತಂತ್ರ್ಯವಿರುತ್ತದೆ. ಆದ್ದರಿಂದ ಬ್ರಹ್ಮವು ಪಡೆಯದೆ ಇರುವ ಕಾಮಗಳಿಲ್ಲ.

(ಭಾಷ್ಯ)

೧೬೩. ಸಾಧನಾನ್ತರಾನಪೇಕ್ಷತ್ವಾಚ್ಚ । ಕಿಂ[3] ಚ ಯಥಾ ಅನ್ಯೇಷಾಮ್ ಅನಾತ್ಮಭೂತಾಃ ಧರ್ಮಾದಿನಿಮಿತ್ತಾಪೇಕ್ಷಾಃ ಕಾಮಾಃ ಸ್ವಾತ್ಮವ್ಯತಿರಿಕ್ತಕಾರ್ಯ ಕರಣಸಾಧನಾನ್ತರಾಪೇಕ್ಷಾಶ್ಚ, ನ ತಥಾ ಬ್ರಹ್ಮಣಃ[4] । ಕಿಂ ತರ್ಹಿ ? ಸ್ವಾತ್ಮನೋಽನನ್ಯಾಃ । ತದೇತದಾಹ -

(ಭಾಷ್ಯಾರ್ಥ)

ಮತ್ತೊಂದು ಸಾಧನವನ್ನು ಬಯಸದಿರುವದರಿಂದಲೂ (ಹೀಗೆಂದು ತಿಳಿಯಬೇಕು.) ಇದಲ್ಲದೆ ಮಿಕ್ಕವರಿಗೆ ಕಾಮಗಳು ಅವರುಗಳ ಆತ್ಮ(ರೂಪ)ವಲ್ಲದೆ ಧರ್ಮವೇ ಮುಂತಾದ ನಿಮಿತ್ತವನ್ನು ಬಯಸುವವುಗಳಾಗಿಯೂ[5] ಅವರ ಸ್ವರೂಪಕ್ಕಿಂತ ಬೇರೆಯಾಗಿರುವ ದೇಹ, ಇಂದ್ರಿಯಗಳು (ಎಂಬ) ಬೇರೆಯ ಸಾಧನಗಳನ್ನು ಬಯಸುವವಾಗಿಯೂ ಹೇಗೆ ಇರುವವೋ, ಹಾಗೆ ಬ್ರಹ್ಮದ ಕಾಮಗಳು ಇರುವದಿಲ್ಲ. ಮತ್ತೇನೆಂದರೆ ಅದರ ಸ್ವರೂಪಕ್ಕಿಂತ ಅನ್ಯವಲ್ಲದೆ ಇರುತ್ತವೆ. ಆ ಇದನ್ನು (ಮುಂದಿನ) ಶ್ರುತಿಯು ಹೇಳುತ್ತದೆ :

---

1 ಸೃಷ್ಟಿಗೆ ಪೂರ್ವದಲ್ಲಿ ನಾಮರೂಪಗಳೆಲ್ಲವೂ ಆತ್ಮನೇ ಆಗಿರುವದರಿಂದ ಕಾಮಗಳೂ ಪರಮಾತ್ಮನೇ ಆಗಿರುತ್ತವೆ.

2. ನೀರಿನಿಂದ ನೊರೆ ಹುಟ್ಟುವಂತೆ ಕಾಮಗಳೂ ಸೃಷ್ಟಿಯೂ ಈಶ್ವರನಿಂದ ಹೊರಕ್ಕೆ ಬರುವವು ಜೀವರ ಕರ್ಮಕ್ಕೆ ಫಲವಾಗುವದಕ್ಕಾಗಿ. ಪ್ರಪಂಚವು ಅನಾದ್ಯನಂತವಾಗಿರುವದರಿಂದ ಕರ್ಮವೂ ಅದರ ವಾಸನೆಗಳೂ ಅನಾದ್ಯನಂತವಾಗಿರುವವು. ಆದರೆ ಪರಮಾರ್ಥ ದೃಷ್ಟಿಯಿಂದ ಅವುಗಳು ಯಾವವೂ ಆತ್ಮನಿಗಿಂತ ಬೇರೆಯಾಗಿರುವದಿಲ್ಲ.

3. "ಕಿಂ ಚ" ಎಂಬುದು ವಾ।। ಪಾಠದಲ್ಲಿಲ್ಲ.

4. "ಬ್ರಹ್ಮಣಃ" ಎಂಬ ಮಾತಾದ ಮೇಲೆ "ನಿಮಿತ್ತಾದ್ಯಪೇಕ್ಷತ್ವಮ್" ಎಂಬ ಮಾತು ಅಚ್ಚಿನ ಪುಸ್ತಕದಲ್ಲಿದ್ದರೂ ಬೇಕಿಲ್ಲ.

5. ತನ್ನ ಸ್ವರೂಪಕ್ಕಿಂತ ಬೇರೆಯಾಗಿದ್ದು ಧರ್ಮಾಧರ್ಮಗಳಿಂದ ಸಂಪಾದಿಸಬೇಕಾಗಿರುವ ಕಾಮಗಳು ಸಾಧನೆಯ ಕೊರತೆಯಿಂದ ದೊರೆಯದೆಯೂ ಹೋಗಬಹುದು ಬ್ರಹ್ಮದ ಸ್ವರೂಪವೇ ಆಗಿರುವ ಕಾಮಗಳು ಹಾಗಲ್ಲ. ಅವು ನಿತ್ಯಪ್ರಾಪ್ತವಾಗಿರುತ್ತವೆ. ಛಾಂ. ಭಾ. ೮-೧-೫, ೮-೩-೧.

ಸೋಽಕಾಮಯತ । ಬಹು ಸ್ಯಾಂ ಪ್ರಜಾಯೇಯೇತಿ । ಸ ತಪೋಽತಪ್ಯತ ॥೪॥

೪. ಅವನು "ಬಹುವಾಗುವೆನು ; ಹುಟ್ಟುವೆನು" ಎಂದು ಕಾಮಿಸಿದನು. ಅವನು ತಪಸ್ಸನ್ನು ಮಾಡಿದನು.

(ಭಾಷ್ಯ)

೧೬೪. ಸೋಽಕಾಮಯತ । ಸಃ ಆತ್ಮಾ ಯಸ್ಮಾತ್ ಆಕಾಶಃ ಸಂಭೂತಃ ಅಕಾಮಯತ ಕಾಮಿತವಾನ್ । ಕಥಮ್ ? ಬಹು ಸ್ಯಾಮ್ ; ಬಹು ಪ್ರಭೂತಂ ಸ್ಯಾಂ ಭವೇಯಮ್ ॥

(ಭಾಷ್ಯಾರ್ಥ)

"ಸೋಽಕಾಮಯತ" (ಅವನು ಕಾಮಿಸಿದನು). ಅವನು ಎಂದರೆ ಯಾವನಿಂದ ಆಕಾಶವು ಉಂಟಾಯಿತೋ (ಆ) ಆತ್ಮನು ಕಾಮಿಸಿದನು, ಎಂದರೆ ಇಚ್ಛೆಯನ್ನು ಮಾಡಿದನು. ಏನೆಂದು ? ಬಹುವಾಗುವೆನು, ಬಹು ಎಂದರೆ ಹೇರಳವಾಗಿ ಆಗುವೆನು, (ನಾನು) ಆಗಬೇಕು (ಎಂದು).

ಆತ್ಮನು ಬಹುವಾಗುವ ಬಗೆ

(ಭಾಷ್ಯ)

೧೬೫. ಕಥಮೇಕಸ್ಯ ಅರ್ಥಾನ್ತರಾನನುಪ್ರವೇಶೇ ಬಹುತ್ವಂ ಸ್ಯಾತ್ ಇತಿ ? ಉಚ್ಯತೇ । ಪ್ರಜಾಯೇಯ ಉತ್ಪದ್ಯೇಯ । ನ ಹಿ ಪುತ್ರೋತ್ಪತ್ತೇರಿವ ಅರ್ಥಾನ್ತರ ವಿಷಯಂ ಬಹುಭವನಮ್ । ಕಥಂ ತರ್ಹಿ ? ಆತ್ಮಸ್ಥಾನಭಿವ್ಯಕ್ತನಾಮರೂಪಾಭಿ ವ್ಯಕ್ತ್ಯಾ । ಯದಾ ಆತ್ಮಸ್ಥೇ ಅನಭಿವ್ಯಕ್ತೇ ನಾಮರೂಪೇ ವ್ಯಾಕ್ರಿಯೇತೇ ತದಾ ಆತ್ಮಸ್ವರೂಪಾಪರಿತ್ಯಾಗೇನೈವ ಬ್ರಹ್ಮಣಃ ಅಪ್ರವಿಭಕ್ತದೇಶಕಾಲೇ ಸರ್ವಾವಸ್ಥಾಸು ವ್ಯಾಕ್ರಿಯೇತೇ । ತದಾ ತನ್ನಾಮರೂಪವ್ಯಾಕರಣಂ ಬ್ರಹ್ಮಣೋ ಬಹುಭವನಮ್ । ನಾನ್ಯಥಾ ನಿರವಯವಸ್ಯ ಬ್ರಹ್ಮಣೋ ಬಹುತ್ವಾಪತ್ತಿರುಪಪದ್ಯತೇ ಅಲ್ಪತ್ವಂ ವಾ । ಯಥಾ ಆಕಾಶಸ್ಯ ಅಲ್ಪತ್ವಂ ಬಹುತ್ವಂ ಚ ವಸ್ತ್ವನ್ತರ ಕೃತಮೇವ । ಅತಃ ತದ್ವ್ಯಾರೇಣೈವ ಆತ್ಮಾ ಬಹು ಭವತಿ ॥

1. ಆನಂದಮಯನಿಗಿಂತ ಬೇರೆಯಾಗಿ ಬ್ರಹ್ಮವಿದ್ದರೆ ಬ್ರಹ್ಮಶಬ್ದವು ನಪುಂಸಕವಾದ್ದರಿಂದ ಅದನ್ನು ಸಃ ಎಂಬ ಪುಲ್ಲಿಂಗದಿಂದ ಪರಾಮರ್ಶಿಸಿದ್ದು ಸರಿಯಾಗುವದಿಲ್ಲ ಎಂಬ ಶಂಕೆಗೆ ಪರಿಹಾರವಿದು. ಸೂ.ಭಾ. ೧-೧-೧೯ ; ಆತ್ಮಶಬ್ದವು ಪುಲ್ಲಿಂಗ.

(ಭಾಷ್ಯಾರ್ಥ)

(ಪ್ರಶ್ನೆ :-) ಒಬ್ಬನೇ (ಆಗಿರುವ ಆತ್ಮನು) ಮತ್ತೊಂದು ಪದಾರ್ಥವು ಸೇರಿಕೊಳ್ಳದೆ ಇರುವಲ್ಲಿ ಬಹುವಾಗುವದು ಹೇಗೆ ?

(ಉತ್ತರ :-) ಇದಕ್ಕೆ ಉತ್ತರವನ್ನು (ಶ್ರುತಿಯಲ್ಲಿ) ಹೇಳಲಾಗುತ್ತದೆ : "ಹುಟ್ಟುವೆನು, ಉಂಟಾಗುವೆನು." ಮಗನು ಹುಟ್ಟಿ (ಬಹುವಾಗುವಂತೆ) ಬೇರೆಯ ಪದಾರ್ಥಗಳನ್ನು ಸೃಷ್ಟಿಸುವದಲ್ಲ, ಬಹುವಾಗುವದೆಂದರೆ ; ಮತ್ತೆ ಹೇಗೆ ? ಎಂದರೆ, ತನ್ನಲ್ಲಿ ಅಭಿವ್ಯಕ್ತವಾಗದೆ ಇರುವ ನಾಮರೂಪಗಳನ್ನು ವ್ಯಕ್ತಗೊಳಿಸುವದರಿಂದ. ತನ್ನಲ್ಲಿ ವ್ಯಕ್ತವಾಗದೆ ಇದ್ದ ನಾಮರೂಪಗಳು ಯಾವಾಗ ವ್ಯಾಕೃತವಾಗುವವೋ ಆಗ (ಅವು) ಆತ್ಮನ ಸ್ವರೂಪವನ್ನು ಬಿಡದೆಯೇ[1] ಬ್ರಹ್ಮಕ್ಕಿಂತ ಬೇರೆಯಾದ ದೇಶಕಾಲದಲ್ಲಿರದೆಯೇ[2] ಎಲ್ಲಾ ವಿವಸ್ತುಗಳಲ್ಲಿಯೂ ವ್ಯಾಕೃತವಾಗುವವು. ಆಗ ಆ ನಾಮರೂಪಗಳನ್ನು ವಿಂಗಡಿಸುವದೇ[3] ಬ್ರಹ್ಮವು ಬಹುವಾಗುವ (ದೆಂಬುದು). ಅವಯವಗಳಿಲ್ಲದ ಬ್ರಹ್ಮವು ಬಹುವಾಗುವದೆಂಬುದಾಗಲಿ ಅಲ್ಪವಾಗುವದೆಂಬುದಾಗಲಿ ಬೇರೆಯ ರೀತಿಯಿಂದ ಹೊಂದುವದಿಲ್ಲ. ಹೇಗೆ ಆಕಾಶವು ಅಲ್ಪವಾಗಿರುವದಾಗಲಿ ಬಹುವಾಗಿರುವದಾಗಲಿ ಮತ್ತೊಂದು ವಸ್ತುವಿನಿಂದಲೇ ಆಗಿರುವದೋ (ಹಾಗೆಯೇ ಇದು).[4] ಆದ್ದರಿಂದ ಆ (ನಾಮರೂಪಗಳ) ದ್ವಾರದಿಂದಲೇ ಆತ್ಮನು ಬಹುವಾಗುತ್ತಾನೆ.

(ಭಾಷ್ಯ)

೧೬೬. ನ ಹಿ ಆತ್ಮನೋಽನ್ಯತ್ ಅನಾತ್ಮಭೂತಂ ತತ್ಪ್ರವಿಭಕ್ತ ದೇಶಕಾಲಸೂಕ್ಷ್ಮಂ ವ್ಯವಹಿತಂ ವಿಪ್ರಕೃಷ್ಟಂ ಭೂತಂ ಭವತ್ ಭವಿಷ್ಯದ್ವಾ ವಸ್ತು ವಿದ್ಯತೇ । ಅತೋ ನಾಮರೂಪೇ ಸರ್ವಾವಸ್ಥೇ ಬ್ರಹ್ಮಣ್ಯೈವ ಆತ್ಮವತೀ ।

1. ನಾಮರೂಪಗಳು ಪರಮಾರ್ಥವಾಗಿ ಯಾವಾಗಲೂ ಆತ್ಮನೇ ಆಗಿರುತ್ತವೆ ಐ ಭಾ. ೧-೧ ನೋಡಿರಿ.

2. ನಾಮರೂಪಗಳು ಯಾವ ದೇಶದಲ್ಲಿ ಯಾವ ಕಾಲದಲ್ಲಿ ವ್ಯಾಕೃತವಾಗಿ ಎಂದರೆ ಬಿಡಿಬಿಡಿಯಾಗಿ ವಿಂಗಡವಾಗಿ ತೋರಿದರೂ ಅಲ್ಲಿ ಬ್ರಹ್ಮವು ಇದ್ದೇ ಇರುವದು. ಅವು ಬ್ರಹ್ಮವನ್ನು ಬಿಟ್ಟು ಇರಲಾರವು.

3. ಸೂ. ಭಾ. ೨-೧-೨೭, ೨-೪-೨೦.

4. ಆಕಾಶಕ್ಕೆ ಗಡಿಗೆಯೇ ಮುಂತಾದ ಉಪಾಧಿಯಿಂದ ಹುಟ್ಟುಹೊಂದುಗಳೂ ಬೇರೆಬೇರೆಯ ನಾಮರೂಪಕಾರ್ಯಗಳೂ ಉಂಟಾಗುವವು. ಮಾಂ. ಕಾ. ೩-೩ ; ೪-೬. ಇದರಂತೆ ಆತ್ಮನು ಬಹುವಾಗುವದೂ ನಾಮರೂಪಗಳಿಂದ.

ನ ಬ್ರಹ್ಮ ತದಾತ್ಮಕಮ್ । ತೇ ತತ್ರ ತ್ಯಾವ್ಯಾನೇ ನ ಸ್ತ ಏವ ಇತಿ ತದಾತ್ಮಕೇ ಉಚ್ಯೇತೇ ತಾಭ್ಯಾಂ ಚ ಸಾಧಿಭ್ಯಾಂ ಜ್ಞಾತೃಜ್ಞೇಯಜ್ಞಾನಶಬ್ದಾರ್ಥಾದಿ ಸರ್ವಸಂವ್ಯವಹಾರಭಾಗ್ ಬ್ರಹ್ಮ ॥

(ಭಾಷ್ಯಾರ್ಥ)

ಆತ್ಮನಿಗಿಂತ ಬೇರೆಯಾಗಿ ಅನಾತ್ಮವಾಗಿರುವ. ಅದಕ್ಕಿಂತ ಬೇರೆಯಾದ ದೇಶದಲ್ಲಿ ಅಥವಾ ಕಾಲದಲ್ಲಿ ಇರುವ, ಸೂಕ್ಷ್ಮವಾಗಿರುವ, ನಡುವೆ ಮರೆಯುಳ್ಳ, ದೂರವಾಗಿರುವ, ಹಿಂದಿನ, ಈಗಿನ ಅಥವಾ ಮುಂದಿನ (ಕಾಲದ) ವಸ್ತು ಇರುವದೇ ಇಲ್ಲ. ಆದ್ದರಿಂದ ನಾಮರೂಪಗಳು (ತಮ್ಮ) ಎಲ್ಲಾ ಅವಸ್ಥೆಗಳಲ್ಲಿಯೂ ಬ್ರಹ್ಮದಿಂದಲೇ ಸ್ವರೂಪವುಳ್ಳವಾಗಿರುತ್ತವೆ ;[1] ಆದರೆ ಬ್ರಹ್ಮವು ಅವುಗಳ ಸ್ವರೂಪವಾಗಿರುವದಿಲ್ಲ.[2] ಅದನ್ನು ಇಲ್ಲವೆಂದರೆ ಅವೆರಡೂ ಇರುವದೇ ಇಲ್ಲವಾಗಿ[3] ಅದರ ಸ್ವರೂಪವಾಗಿಯೇ ಇರುವವೆಂದು ಹೇಳಲಾಗಿದೆ. ಆ (ಎರಡು) ಉಪಾಧಿಗಳಿಂದ ಬ್ರಹ್ಮವು ಜ್ಞಾತೃ, ಜ್ಞೇಯ, ಜ್ಞಾನ, ಶಬ್ದ, ಅರ್ಥ - ಮುಂತಾದ ಎಲ್ಲಾ ವ್ಯವಹಾರಗಳನ್ನೂ ಪಡೆಯುತ್ತಿರುತ್ತದೆ.[4]

ಬ್ರಹ್ಮವು ಸೃಷ್ಟಿಗಾಗಿ ಮಾಡುವ ತಪಸ್ಸು

(ಭಾಷ್ಯ)

೧೬೭. ಸ ಆತ್ಮಾ ಏವಂಕಾಮಃ ಸನ್ ತಪಃ ಅತಪ್ಯತ । ತಪಃ ಇತಿ ಜ್ಞಾನಮುಚ್ಯತೇ । ''ಯಸ್ಯ ಜ್ಞಾನಮಯಂ ತಪಃ'' (ಮುಂ. ೧-೧-೯) ಇತಿ ಶ್ರುತ್ಯನ್ತರಾತ್ । ಆಪ್ತಕಾಮತ್ವಾಚ್ಚ ಇತರಸ್ಯ ಅಸಂಭವ ಏವ ತಪಸಃ । ತತ್ ತಪಃ ಅತಪ್ಯತ ತಪ್ತವಾನ್ । ಸೃಜ್ಯಮಾನಜಗದ್ರಚನಾದಿವಿಷಯಾಮ್ ಆಲೋಚನಾಮ್ ಅಕರೋದಾತ್ಮಾ ಇತ್ಯರ್ಥಃ ॥

1. ನಾಮರೂಪವಾಗಿ ತೋರುವ ಕಾಲದಲ್ಲಿಯೂ ಬ್ರಹ್ಮವೇ ; ನೀರು ನೊರೆಯಲ್ಲವಾದರೂ ನೊರೆಯು ನೀರೇ ಆಗಿರುವಂತೆ. ಐ.ಭಾ. ೧-೧ ; ಬೃ.ಭಾ. ೧-೪-೭, ೨-೪-೧೦ , ಛಾಂ. ಭಾ. ೪-೧೪-೧.

2. ಬ್ರಹ್ಮವು ತಾನು ಇರುವಂತೆಯೇ ಇದ್ದು ಅವಿದ್ಯೆಯಿಂದ ನಾಮರೂಪಗಳಾಗಿಯೂ ತೋರುತ್ತಿರುವದು.

3. ನೀರನ್ನು ಬಿಟ್ಟು ನೊರೆಯಿಲ್ಲದಂತೆಯೂ ಮಣ್ಣನ್ನು ಬಿಟ್ಟು ಬೇರೆಯಾಗಿ ಮಡಕೆ ಇಲ್ಲದಂತೆಯೂ ಬ್ರಹ್ಮವನ್ನು ಬಿಟ್ಟು ನಾಮರೂಪಗಳು ಇರುವದೇ ಇಲ್ಲ. ಬೃ.ಭಾ. ೩-೫-೧.

4. ಆದರೆ ಆಗಲೂ ತನ್ನ ರೂಪದಿಂದ ನಿರ್ವಿಶೇಷವಾಗಿಯೇ ಇದ್ದುಕೊಂಡಿರುತ್ತದೆ

(ಭಾಷ್ಯಾರ್ಥ)

ಆ ಆತ್ಮನು ಹೀಗೆ (ಬಹುವಾಗಬೇಕೆಂಬ) ಕಾಮವುಳ್ಳವನಾಗಿ ತಪಸ್ಸನ್ನು ತಪಿಸಿದನು. ತಪಸ್ಸು ಎಂದು ಇಲ್ಲಿ ಜ್ಞಾನವನ್ನು ಹೇಳಿದೆ. ''ಯಾವಾತನ ತಪಸ್ಸು ಜ್ಞಾನಮಯವಾಗಿರುವದೋ'' (ಅವನಿಂದ ನಾಮರೂಪಗಳ ಜಗತ್ತು ಉಂಟಾಗುತ್ತದೆ (ಮುಂ. ೧-೧-೯) ಎಂಬ ಬೇರೊಂದು ಶ್ರುತಿಯು ಇದಕ್ಕೆ ಪ್ರಮಾಣವು (ಬ್ರಹ್ಮವು) ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುವದರಿಂದ ಬೇರೆಯ ಬಗೆಯ ತಪಸ್ಸು[1] (ಅದಕ್ಕೆ) ಹೊಂದುವಹಾಗೆಯೇ ಇಲ್ಲ.[2] ಆ ತಪಸ್ಸನ್ನು ತಪಿಸಿದನು, ತಪಸ್ಸುಮಾಡಿದನು ; ಎಂದರೆ ಸೃಷ್ಟಿಮಾಡಬೇಕಾಗಿರುವ ಜಗತ್ತಿನ ರಚನೆಯೇ ಮುಂತಾದವುಗಳ ವಿಷಯದ ಆಲೋಚನೆಯನ್ನು[3] ಆತ್ಮನು ಮಾಡಿದನು ಎಂದರ್ಥ

ಬ್ರಹ್ಮವು ಜಗತ್ತನ್ನು ಸೃಷ್ಟಿಸಿದ್ದು

ಸ ತಪಸ್ತಪ್ತ್ವಾ । ಇದಗ್ಂ ಸರ್ವಮಸೃಜತ । ಯದಿದಂ ಕಿಂ ಚ ॥೫॥

೫. ಅವನು ತಪಸ್ಸನ್ನು ತಪಿಸಿದ ಬಳಿಕ ಇದೆಲ್ಲವನ್ನೂ ಏನೇನಿದೆಯೋ (ಇದೆಲ್ಲವನ್ನೂ) ಸೃಷ್ಟಿಸಿದನು.

(ಭಾಷ್ಯ)

೧೬೮. ಸಃ ಏವಮ್ ಆಲೋಚ್ಯ ತಪಃ ತಪ್ತ್ವಾ ಪ್ರಾಣಿಕರ್ಮಾದಿ ನಿಮಿತ್ತಾನುರೂಪಂ ಇದಂ ಸರ್ವಂ ಜಗತ್ ದೇಶತಃ ಕಾಲತಃ ನಾಮ್ನಾ ರೂಪೇಣ ಚ ಯಥಾನುಭವಂ ಸರ್ವೈಃ ಪ್ರಾಣಿಭಿಃ ಸರ್ವಾವಸ್ಥೈಃ ಅನುಭೂಯಮಾನಮ್ ಅಸೃಜತ ಸೃಷ್ಟವಾನ್ । ಯದಿದಂ ಕಿಂ ಚ ಯತ್ಕಿಂಚ ಇದಮ್ ಅವಿಶಿಷ್ಟಮ್ ॥

(ಭಾಷ್ಯಾರ್ಥ)

ಅವನು ತಪಸ್ಸನ್ನು ಮಾಡಿ ಎಂದರೆ ಹೀಗೆ ಆಲೋಚಿಸಿಕೊಂಡು[4] ಪ್ರಾಣಿಗಳ

1. ಕೃಚ್ಛ್ರ, ಚಾಂದ್ರಾಯಣ - ಮುಂತಾದ ತಪಸ್ಸನ್ನು ಮಾಡುವವರಿಗೆ ಹೊಸದಾಗಿ ಪಡೆದುಕೊಳ್ಳಬೇಕಾದ ಕಾಮಗಳಿರುವವು. ಆದರೆ ಬ್ರಹ್ಮಕ್ಕೆ ಹಾಗೇನೂ ಇಲ್ಲ.

2. ಅದಕ್ಕೆ ಬಯಕೆಯಿಲ್ಲ, ತನಗಿಂತ ಬೇರೆಯಾಗಿರುವ ಕಾಮಗಳೂ ಇರುವದಿಲ್ಲ.

3. 'ಆಲೋಚನೆಯನ್ನು ಮಾಡಿತು' ಎಂದದ್ದರಿಂದ ಬ್ರಹ್ಮವು ಜಡವಲ್ಲವೆಂದು ಹೇಳಿದಂತೆ ಆಯಿತು. ಸೂ.ಭಾ. ೧-೧-೫. ಹೀಗೆಯೇ ಪ್ರತಿಯೊಂದು ಉಪನಿಷತ್ತಿನಲ್ಲಿಯೂ ಆಲೋಚನಾಪೂರ್ವಕವಾಗಿಯೇ ಬ್ರಹ್ಮವು ಸೃಷ್ಟಿಸಿತು ಎಂದು ಹೇಳಿದೆ.

4. ತಪಃ ತಪ್ತ್ವಾ ಏವಮ್ ಆಲೋಚ್ಯ - ಎಂದು ಕ್ರಮವನ್ನು ಇಟ್ಟುಕೊಳ್ಳಬೇಕು.

ಕರ್ಮವೇ ಮುಂತಾದ ನಿಮಿತ್ತಕ್ಕೆ ತಕ್ಕಂತೆ ಇದೆಲ್ಲವನ್ನೂ ಎಂದರೆ ದೇಶದಿಂದ, ಕಾಲದಿಂದ, ನಾಮದಿಂದ, ಮತ್ತು ರೂಪದಿಂದ (ನಮ್ಮೆಲ್ಲರ) ಅನುಭವದಲ್ಲಿರುವಂಥ (ಈ) ಜಗತ್ತನ್ನು, ಎಲ್ಲಾ ಪ್ರಾಣಿಗಳೂ ತಮ್ಮ (ಬೇರೆ ಬೇರೆಯ) ಅವಸ್ಥೆಗಳಲ್ಲೆಲ್ಲ ಅನುಭವಿಸುತ್ತಿರುವ ಇದೆಲ್ಲವನ್ನೂ ಇಂಥದ್ದೆಂಬ ನಿಯಮವೇನೂ ಇಲ್ಲದೆ (ಎಲ್ಲವನ್ನೂ) ಸೃಷ್ಟಿಸಿದನು, ಸೃಷ್ಟಿಮಾಡಿದವನಾದನು.[1]

೧೦. ಬ್ರಹ್ಮವು ಜೀವರೂಪದಿಂದ ಸೃಷ್ಟಿಯಲ್ಲಿ ಹೊಕ್ಕಿರುವದರಿಂದ ಇದೆ

ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್ ॥೬॥

೬. ಅದನ್ನು ಸೃಷ್ಟಿಸಿ ಅದನ್ನೇ ಅನುಪ್ರವೇಶಮಾಡಿದನು.

(ಭಾಷ್ಯ)

೧೬೯. ತತ್ ಇದಂ ಜಗತ್ ಸೃಷ್ಟ್ವಾ ಕಿಮಕರೋತ್ ಇತಿ ? ಉಚ್ಯತೇ ತದೇವ ಸೃಷ್ಟಂ ಜಗತ್ ಅನುಪ್ರಾವಿಶತ್ ಇತಿ ॥

(ಭಾಷ್ಯಾರ್ಥ)

ಅದನ್ನು ಎಂದರೆ ಈ ಜಗತ್ತನ್ನು ಸೃಷ್ಟಿಸಿ ಏನು ಮಾಡಿದನು ? ಎಂದರೆ (ಶ್ರುತಿ) ಹೇಳುತ್ತದೆ. ಅದನ್ನೇ - ಸೃಷ್ಟಿಸಿದ ಜಗತ್ತನ್ನೇ - ಅನುಪ್ರವೇಶಮಾಡಿದನು.

ಪ್ರವೇಶಶ್ರುತಿಯ ವಿಷಯಕ್ಕೆ ಆಕ್ಷೇಪ

(ಭಾಷ್ಯ)

೧೭೦. ತತ್ರ ವಿತಚ್ಚಿನ್ಮ್ಯಮ್ - ಕಥಮ್ ಅನುಪ್ರಾವಿಶತ್ ಇತಿ । ಕಿಂ ಯಃ ಸ್ರಷ್ಟಾ ಸ ತೇನೈವಾತ್ಮನಾ ಅನುಪ್ರಾವಿಶತ್ ಉತ ಅನ್ಯೇನ ಇತಿ ? ಕಿಂ ತಾವತ್ ಯುಕ್ತಮ್ ? ಕ್ವಾಪ್ರತ್ಯಯಶ್ರವಣಾತ್ ಯಃ ಸ್ರಷ್ಟಾ ಸ ಏವಾನುಪ್ರಾವಿಶತ್ ಇತಿ । ನನು ನ ಯುಕ್ತಮ್ । ಮೃದ್ವಚ್ಚೇತ್ ಕಾರಣಂ ಬ್ರಹ್ಮ ತದಾತ್ಮಕತ್ವಾತ್ ಕಾರ್ಯಸ್ಯ ।

1. ಸೃಷ್ಟಿಸಿರುವದರಿಂದ ಬ್ರಹ್ಮವು ಇದೆ ಎಂದು ಅಭಿಪ್ರಾಯ. ಬ್ರಹ್ಮವು ಬಹುವಾಗುವೆನೆಂದು ಕಾಮಿಸಿದ್ದು. ಜಗತ್ತಿನ ವಿಷಯವಾಗಿ ಆಲೋಚಿಸಿದ್ದು, ಅದನ್ನು ಸೃಷ್ಟಿಸಿದ್ದು ಇದೆಲ್ಲವೂ ಜಗತ್ಕಾರಣವು ಸತ್ಯವಾಗಿದ್ದರೆ ಮಾತ್ರ ಸಂಭವಿಸುತ್ತದೆ. ಜಗತ್ಕಾರಣವಾಗಿರುವ ಬ್ರಹ್ಮವು ಚೇತನವಾಗಿರುವದರಿಂದ ಅದು 'ಇದೆ' ಎಂದು ತಿಳಿಯಬೇಕು ಎಂಬುದು ಒಟ್ಟಾರ್ಥ.

ಕಾರಣಮೇವ ಹಿ ಕಾರ್ಯಾತ್ಮನಾ ಪರಿಣತಮ್ ಇತ್ಯತಃ ಅಪ್ರವಿಷ್ಟಸ್ಯೈವ ಕಾರ್ಯೋತ್ಪತ್ತೇರೂರ್ಧ್ವಂ ಪೃಥಕ್ ಕಾರಣಸ್ಯ ಪುನಃ ಪ್ರವೇಶೋಽನುಪಪನ್ನಃ । ನ ಹಿ ಘಟಪರಿಣಾಮವ್ಯತಿರೇಕೇಣ ಮೃದೋ ಘಟೇ ಪ್ರವೇಶೋಽಸ್ತಿ ॥

(ಭಾಷ್ಯಾರ್ಥ)

ಇಲ್ಲಿ ಇದನ್ನು ವಿಚಾರಮಾಡಬೇಕಾಗಿದೆ : (ಅವನು) ಹೇಗೆ ಅನುಪ್ರವೇಶ ಮಾಡಿದನು ? ಯಾವನು ಸೃಷ್ಟಿಸಿದನೋ ಅವನು ಅದೇ ರೂಪದಿಂದ ಪ್ರವೇಶ ಮಾಡಿದನೆ, ಅಥವಾ ಮತ್ತೊಂದು ರೂಪದಿಂದ ಪ್ರವೇಶಮಾಡಿದನೆ ?

ಇಲ್ಲಿ ಯಾವ (ಪಕ್ಷವು) ಯುಕ್ತವೆಂದು ಮೊದಲು ತೋರುತ್ತದೆ ? - ಎಂದರೆ, ಕ್ತ್ವಾಪ್ರತ್ಯಯವು[1] ಶ್ರುತಿಯಲ್ಲಿರುವದರಿಂದ ಯಾವನು ಸೃಷ್ಟಿಸಿದನೋ ಅವನೇ ಪ್ರವೇಶಮಾಡಿದನು ಎಂಬುದು (ಸರಿ).

(ಆಕ್ಷೇಪ) :- ಇದು ಯುಕ್ತವಲ್ಲ. ಏಕೆಂದರೆ ಮಣ್ಣಿನಂತೆ ಬ್ರಹ್ಮವು ಕಾರಣವಾದರೆ ಕಾರ್ಯವು ಅದರ ರೂಪವಾಗಿಯೇ ಇರುತ್ತದೆ. ಕಾರಣವೇ ಕಾರ್ಯ ರೂಪವಾಗಿ ಪರಿಣಮಿಸಿರುತ್ತದೆಯಾದ್ದರಿಂದ ಅದು ಮೊದಲು ಪ್ರವೇಶಿಸಿರಲಿಲ್ಲವೋ ಎಂಬಂತೆ ಕಾರ್ಯವು ಹುಟ್ಟಿದಮೇಲೆ ಬೇರೆಯಾಗಿ ಕಾರಣವು ಮತ್ತೆ ಪ್ರವೇಶ ಮಾಡಿತೆನ್ನುವದು ಹೊಂದಲಾರದು. ಗಡಿಗೆಯಾಗಿ ಪರಿಣಮಿಸುವದಲ್ಲದೆ ಮಣ್ಣು ಗಡಿಗೆಯಲ್ಲಿ ಬೇರೆಯಾಗಿ ಪ್ರವೇಶಿಸುವದೆಂಬುದು ಇಲ್ಲವಷ್ಟೆ ?

(ಭಾಷ್ಯ)

೧೭೧. ಯಥಾ ಘಟೇ ಚೂರ್ಣಾತ್ಮನಾ ಮೃದೋಽನುಪ್ರವೇಶಃ, ಏವಮ್ ಅನ್ಯೇನ ಆತ್ಮನಾ ನಾಮರೂಪಕಾರ್ಯೇ ಅನುಪ್ರವೇಶ ಆತ್ಮನಃ ಇತಿ ಚೇತ್ । ಶ್ರುತ್ಯನ್ತರಾಚ್ಚ "ಅನೇನ ಜೀವೇನಾತ್ಮನಾನುಪ್ರವಿಶ್ಯ" (ಛಾ೦. ೬-೩-೨) ಇತಿ । ನೈವಂ ಯುಕ್ತಮ್ । ಏಕತ್ವಾತ್ ಬ್ರಹ್ಮಣಃ । ಮೃದಾತ್ಮನಸ್ತು ಅನೇಕತ್ವಾತ್ ಸಾವಯವತ್ವಾಚ್ಚ ಯುಕ್ತೋ ಘಟೇ ಮೃದಶ್ಚೂರ್ಣಾತ್ಮನಾ ಅನುಪ್ರವೇಶಃ । ಮೃದಶ್ಚೂರ್ಣಸ್ಯ ಅಪ್ರವಿಷ್ಟದೇಶತ್ವಾಚ್ಚ । ನ ತು ಆತ್ಮನ ಏಕತ್ವೇ ಸತಿ ನಿರವಯವತ್ವಾತ್, ಅಪ್ರವಿಷ್ಟದೇಶಾಭಾವಾಚ್ಚ ಪ್ರವೇಶ ಉಪಪದ್ಯತೇ ॥

1. "ಸೃಷ್ಟ್ವಾ" (ಸೃಷ್ಟಿಸಿ) ಎಂಬಲ್ಲಿರುವ ಭೂತಕೃದಂತಪ್ರತ್ಯಯಕ್ಕೆ 'ಕ್ತ್ವಾ' ಪ್ರತ್ಯಯವೆಂದು ಹೆಸರು. ಇದು ಸೃಷ್ಟಿ, ಪ್ರವೇಶ - ಎಂಬೆರಡು ಕ್ರಿಯೆಗಳಿಗೂ ಒಬ್ಬನೇ ಕರ್ತೃವೆಂದು ಹೇಳುವದು.

(ಭಾಷ್ಯಾರ್ಥ)

(ಒಂದು ಸಮಾಧಾನ :-) ಮಣ್ಣು ಹುಡಿಯ ರೂಪದಿಂದ ಹೇಗೆ ಗಡಿಗೆಯೊಳಕ್ಕೆ ಪ್ರವೇಶಿಸಬಹುದೋ, ಹಾಗೆಯೇ ಆತ್ಮನು ಮತ್ತೊಂದು ರೂಪದಿಂದ ನಾಮರೂಪಗಳೆಂಬ ಕಾರ್ಯದಲ್ಲಿ ಪ್ರವೇಶಿಸಿರುತ್ತಾನೆ. ಇದಕ್ಕೆ ಬೇರೊಂದು ಶ್ರುತಿಯಲ್ಲಿ "ಈ ಜೀವನ ರೂಪದಿಂದ ಒಳಹೊಕ್ಕು (ನಾಮರೂಪಗಳನ್ನು ವಿಂಗಡಿಸುವೆನು)" (ಛಾಂ. ೬-೩-೨) ಎಂದು ಹೇಳಿರುವದೂ ಪ್ರಮಾಣವಾಗಿರುತ್ತದೆ.[1]

(ಆಕ್ಷೇಪ :-) ಹೀಗಾದರೆ ಯುಕ್ತವಾಗುವದಿಲ್ಲ. ಏಕೆಂದರೆ ಬ್ರಹ್ಮವು ಒಂದೇ (ಆಗಿರುತ್ತದೆ). ಮಣ್ಣಿನ ರೂಪವು (ಕಾರಣ)ವಾದರೋ ಅನೇಕವಾಗಿರುವದರಿಂದಲೂ ಅವಯವಗಳಿಂದ ಕೂಡಿರುವದರಿಂದಲೂ ಮಣ್ಣು ಗಡಿಗೆಯಲ್ಲಿ ಹುಡಿಯ ರೂಪದಿಂದ ಪ್ರವೇಶಮಾಡುವದೆಂಬುದು ಸರಿಯಾಗುತ್ತದೆ. ಮಣ್ಣಿನ ಹುಡಿಯು ಪ್ರವೇಶ ಮಾಡದೆ ಇರುವ ಸ್ಥಲವು ಇರುವದರಿಂದಲೂ (ಇದು ಸರಿಯಾಗುತ್ತದೆ). ಆದರೆ ಆತ್ಮನು ಒಬ್ಬನೇ ಆಗಿ ಯಾವ ಅವಯವಗಳೂ ಇಲ್ಲದವನಾಗಿರುವದರಿಂದಲೂ (ಅವನು) ಪ್ರವೇಶಮಾಡದೆ ಇರುವ ಸ್ಥಲವು ಇಲ್ಲದಿರುವದರಿಂದಲೂ (ಅವನು ಪ್ರಪಂಚವನ್ನು) ಪ್ರವೇಶಿಸುವನೆಂಬುದು ಹೊಂದುವದಿಲ್ಲ.

(ಭಾಷ್ಯ)

೧೭೨. ಕಥಂ ತರ್ಹಿ ಪ್ರವೇಶಃ ಸ್ಯಾತ್ ? ಯುಕ್ತಶ್ಚ ಪ್ರವೇಶಃ । ಶ್ರುತತ್ವಾತ್ 'ತದೇವಾನುಪ್ರಾವಿಶತ್' ಇತಿ । ಸಾವಯವಮೇವಾಸ್ತು ತರ್ಹಿ । ಸಾವಯವತ್ವಾತ್ ಮುಖೇ ಹಸ್ತಪ್ರವೇಶವತ್ ನಾಮರೂಪಕಾರ್ಯೇ ಜೀವಾತ್ಮನಾ ಅನುಪ್ರವೇಶೋ ಯುಕ್ತ ಏವ ಇತಿ ಚೇತ್ । ನ ; ಅಶೂನ್ಯದೇಶತ್ವಾತ್[2] । ನ ಹಿ ಕಾರ್ಯಾತ್ಮನಾ ಪರಿಣತಸ್ಯ ನಾಮರೂಪಕಾರ್ಯದೇಶವ್ಯತಿರೇಕೇಣ ಆತ್ಮಶೂನ್ಯಃ ಪ್ರದೇಶೋಽಸ್ತಿ ಯಂ ಪ್ರವಿಶೇತ್ ಜೀವಾತ್ಮನಾ । ಕಾರಣಮೇವ ಚೇತ್ ಪ್ರವಿಶೇತ್, ಜೀವಾತ್ಮತ್ವಂ ಜಹ್ಯಾತ್ । ಯಥಾ ಘಟೋ ಮೃತ್ಪ್ರವೇಶೇ ಘಟತ್ವಂ ಜಹಾತಿ । 'ತದೇವಾನುಪ್ರಾವಿಶತ್' ಇತಿ ಚ ಶ್ರುತೇರ್ನ ಕಾರಣಾನುಪ್ರವೇಶೋ ಯುಕ್ತಃ ॥

1 ಬ್ರಹ್ಮವು ಜೀವರೂಪದಿಂದ ಮಾರ್ಪಟ್ಟು ಶರೀರದೊಳಗೆ ಹೊಕ್ಕಿರುವದೆಂದೂ ಧ್ಯಾನಾದಿಗಳಿಂದ ಮತ್ತೆ ಬ್ರಹ್ಮಭಾವವನ್ನು ಹೊಂದುವದೆಂದೂ ಹೇಳುವ ವಾದಿಗಳ ಮತವಿದು. ಇದನ್ನು ಸೂ. ಭಾ. ೧-೪-೨೨ ; ಗೀ ಭಾ. ೧೩-೨, (ಭಾ. ಭಾ. ೭೬೯) ; ಮಾಂ. ಭಾ. ೩-೧ ಇವುಗಳಲ್ಲಿ ಖಂಡಿಸಿದೆ.

2. "ಅಶೂನ್ಯತ್ವಾತ್" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಉತ್ತಮ.

(ಭಾಷ್ಯಾರ್ಥ)

(ಪ್ರಶ್ನೆ :-) ಹಾಗಾದರೆ ಪ್ರವೇಶವು ಹೇಗೆ ಆಗಬೇಕು ? ಪ್ರವೇಶವು (ಆಯಿತೆಂಬುದು) ಯುಕ್ತವಾಗಿರುತ್ತದೆ ; ಏಕೆಂದರೆ ''ಅದನ್ನೇ ಅನುಪ್ರವೇಶ ಮಾಡಿದನು'' ಎಂದು ಶ್ರುತಿಯಲ್ಲಿ ಹೇಳಿರುತ್ತದೆ

(ಒಂದು ಸಮಾಧಾನ :-) ಹಾಗಾದರೆ (ಬ್ರಹ್ಮವು) ಸಾವಯವವೆಂದೇ ಆಗಲಿ. ಸಾವಯವವಾಗಿರುವದರಿಂದ ಬಾಯಿಯಲ್ಲಿ ಕೈಯು ಪ್ರವೇಶಿಸುವಂತೆ ನಾಮರೂಪಗಳೆಂಬ ಕಾರ್ಯದೊಳಕ್ಕೆ (ಬ್ರಹ್ಮವು) ಜೀವರೂಪದಿಂದ ಒಳಹೊಕ್ಕಿತೆಂಬುದು ಯುಕ್ತವೇ ಆಗುತ್ತದೆಯಲ್ಲವೆ ?[1]

(ಆಕ್ಷೇಪ :-) ಹಾಗಲ್ಲ. ಏಕೆಂದರೆ ಅದಿಲ್ಲದ ಸ್ಥಲವೇ ಇಲ್ಲ. ಕಾರ್ಯರೂಪವಾಗಿ ಪರಿಣಮಿಸಿರುವ (ಬ್ರಹ್ಮಕ್ಕೆ) ನಾಮರೂಪಗಳೆಂಬ ಕಾರ್ಯವಿರುವ ಸ್ಥಲವನ್ನು ಬಿಟ್ಟರೆ ಬೇರೆಯಾಗಿ ತಾನಿಲ್ಲದ ಪ್ರದೇಶವೇ ಇರುವದಿಲ್ಲ.[2] ಹಾಗಿದ್ದಿದ್ದರೆ (ಅದನ್ನು) ಜೀವರೂಪದಿಂದ ಪ್ರವೇಶಮಾಡಬಹುದಾಗಿತ್ತು. ''ಕಾರಣವನ್ನೇ ಪ್ರವೇಶಿಸಲಿ'' ಎಂದರೆ ಜೀವರೂಪವನ್ನು ಬಿಟ್ಟುಬಿಡಬೇಕಾಗುವದು. ಹೇಗೆ ಗಡಿಗೆಯು ಮಣ್ಣನ್ನು ಹೊಕ್ಕರೆ (ತನ್ನ) ಘಟತ್ವವನ್ನು ಬಿಟ್ಟುಬಿಡುತ್ತದೆಯೋ ಹಾಗೆ. ಇದಲ್ಲದೆ ''ಆ (ಕಾರ್ಯವನ್ನೇ) ಅನುಪ್ರವೇಶಮಾಡಿದನು'' ಎಂದು ಶ್ರುತಿಯು ಹೇಳುತ್ತಿರುವದರಿಂದ ಕಾರಣವನ್ನು ಪ್ರವೇಶಿಸುವದೆಂಬುದೂ ಹೊಂದುವದಿಲ್ಲ.

(ಭಾಷ್ಯ)

೧೭೩. ಕಾರ್ಯಾನ್ತರಮೇವ ಸ್ಯಾತ್ ಇತಿ ಚೇತ್ । ''ತದೇವಾನುಪ್ರಾವಿಶತ್'' ಇತಿ ಜೀವಾತ್ಮರೂಪಂ ಕಾರ್ಯಂ ನಾಮರೂಪಪರಿಣತಂ ಕಾರ್ಯಾನ್ತರಮೇವ ಆಪದ್ಯತೇ ಇತಿ ಚೇತ್ । ನ । ವಿರೋಧಾತ್ । ನ ಹಿ ಘಟೋ ಘಟಾನ್ತರಮಾಪದ್ಯತೇ । ವ್ಯತಿರೇಕಶ್ರುತಿವಿರೋಧಾಚ್ಚ । ಜೀವಸ್ಯ ನಾಮರೂಪಕಾರ್ಯವ್ಯತಿರೇಕವಾದಿನ್ಯಃ[3] ಶ್ರುತಯೋ ವಿರುಧ್ಯೇರನ್ । ತದಾಪತ್ತೌ ಮೋಕ್ಷಾಸಂಭವಾಚ್ಚ । ನ ಹಿ

1. ಪ್ರವೇಶಕ್ಕೆ ಸಾವಯವತ್ವವು ಅವಶ್ಯವಾಗಿರುವದರಿಂದ ಶ್ರುತಿಪ್ರಾಮಾಣ್ಯದಿಂದ ಬ್ರಹ್ಮವು ಸಾವಯವವೆಂದೂ ಜೀವರೂಪದಿಂದಲೂ ನಾಮರೂಪಗಳ ರೂಪದಿಂದಲೂ ಪರಿಣಮಿಸುತ್ತದೆ ಎಂದು ಕಲ್ಪಿಸೋಣ ಎಂದು ಬ್ರಹ್ಮಪರಿಣಾಮವಾದಿಯೊಬ್ಬನು ಈ ಸಮಾಧಾನವನ್ನು ತೆಗೆದಿರುತ್ತಾನೆ.

2. ಹಾಗಿದ್ದರೆ ಹೊರಗಿನಿಂದ ನಾಮರೂಪಗಳೊಳಕ್ಕೆ ಹೊಕ್ಕಿತೆಂದು ಕಲ್ಪಿಸಬಹುದಾಗಿತ್ತು.

3. ''ಅನುವಾದಿನ್ಯಃ'' ಎಂಬ ಪಾಠದಲ್ಲಿ 'ಅನು' ಹೆಚ್ಚು.

ತತೋ ಮುಚ್ಯಮಾನಃ ತದೇವಾಪದ್ಯತೇ । ನ ಹಿ ಶೃಙ್ಖಲಾಪತ್ತಿರ್ಬದ್ಧಸ್ಯ ತಸ್ಕರಾದೇಃ ॥

(ಭಾಷ್ಯಾರ್ಥ)

(ಮತ್ತೊಂದು ಸಮಾಧಾನ :-) ಮತ್ತೊಂದು ಕಾರ್ಯವನ್ನೇ (ಹೊಕ್ಕನು) ಎಂದಾಗಲಿ ! "ಅದನ್ನೇ ಪ್ರವೇಶಿಸಿದನು" ಎಂದರೆ ಜೀವಾತ್ಮರೂಪವಾದ ಕಾರ್ಯವು ನಾಮರೂಪಗಳಾಗಿ ಪರಿಣಮಿಸಿ ಮತ್ತೊಂದು ಕಾರ್ಯವಾಗುತ್ತದೆ (ಎಂದರ್ಥ).[1]

(ಆಕ್ಷೇಪ :-) ಹಾಗಲ್ಲ. ಏಕೆಂದರೆ ವಿರೋಧವಾಗುತ್ತದೆ. ಗಡಿಗೆಯು ಮತ್ತೊಂದು ಗಡಿಗೆಯಾಗುವದಿಲ್ಲವಷ್ಟೆ ? ಬೇರೆ ಎಂದು ಹೇಳುವ ಶ್ರುತಿಗಳಿಗೆ ವಿರೋಧವಾಗುವದರಿಂದಲೂ (ಈ ಪಕ್ಷವು ಸರಿಯಲ್ಲ). ಜೀವನು ನಾಮರೂಪಗಳೆಂಬ ಕಾರ್ಯಕ್ಕಿಂತಲೂ ಬೇರೆ ಎಂದು ಹೇಳುವ ಶ್ರುತಿಗಳು[2] (ಈ ಪಕ್ಷಕ್ಕೆ) ವಿರುದ್ಧವಾಗುವವು. ಆ (ನಾಮರೂಪಗಳೇ) ಆದರೆ ಮೋಕ್ಷವು ಆಗಲೇಆರದಾದ್ದರಿಂದಲೂ (ಈ ಪಕ್ಷವು ಸರಿಯಲ್ಲ). ಯಾವದರಿಂದ (ಯಾವನು) ಬಿಡುಗಡೆಯಾಗಬೇಕಾಗಿರುವದೋ (ಅವನು) ಅದೇ ಆಗುವದಿಲ್ಲ ; ಕಟ್ಟುಬಿದ್ದಿರುವ ಕಳ್ಳನೇ ಮುಂತಾದವರು (ತಾವು ಕಟ್ಟುಬಿದ್ದಿರುವ) ಸರಪಳಿಯಾಗುವದಿಲ್ಲವಷ್ಟೆ ?

(ಭಾಷ್ಯ)

೧೭೪. ಬಾಹ್ಯಾನ್ತರ್ಭೇದೇನ ಪರಿಣತಮ್ ಇತಿ ಚೇತ್ । ತದೇವ ಕಾರಣಂ ಬ್ರಹ್ಮ ಶರೀರಾದ್ಯಾಧಾರತ್ವೇನ ತದನ್ತರ್ಜೀವಾತ್ಮಾ ಆಧೇಯತ್ವೇನ ಚ ಪರಿಣತಮ್ ಇತಿ ಚೇತ್ । ನ । ಬಹಿಷ್ಟಸ್ಯ ಪ್ರವೇಶೋಪಪತ್ತೇಃ । ನ ಹಿ ಯೋ ಯಸ್ಯ ಅನ್ತಸ್ಥಃ ಸ ಏವ ತತ್ ಪ್ರವಿಶ್ಯ ಉಚ್ಯತೇ । ಬಹಿಷ್ಟಸ್ಯ ಅನುಪ್ರವೇಶಃ ಸ್ಯಾತ್ । ಪ್ರವೇಶ ಶಬ್ದಾರ್ಥಸ್ಯ ಏವಂ ದೃಷ್ಟತ್ವಾತ್ । ಯಥಾ "ಗೃಹಂ ಕೃತ್ವಾ ಪ್ರಾವಿಶತ್" ಇತಿ ॥

(ಭಾಷ್ಯಾರ್ಥ)

(ಮತ್ತೊಂದು ಸಮಾಧಾನ :-) ಹೊರಗೆ, ಒಳಗೆ - ಎಂದು ಬೇರೆಬೇರೆ

---

1. ಜೀವ, ನಾಮರೂಪ - ಎಂಬ ಎರಡು ಅಂಗಗಳುಳ್ಳ ಕಾರ್ಯವಾಗಿ ಬ್ರಹ್ಮವು ಪರಿಣಮಿಸುತ್ತದೆ ಎಂಬ ಪಕ್ಷವನ್ನು ಬಿಟ್ಟು ಪರಿಣಾಮವಾದಿಯು ಬ್ರಹ್ಮವು ಮೊದಲು ಜೀವನಾಗುತ್ತದೆ, ಆಮೇಲೆ ಜೀವನು ನಾಮರೂಪವಾಗಿ ಪರಿಣಮಿಸುತ್ತಾನೆ - ಎಂಬ ವಾದವನ್ನು ಈಗ ಒಡ್ಡಿರುತ್ತಾನೆ. ಚೇತನನಾದ ಜೀವನು ಅಚೇತನನಾಗುವದು ಅಸಂಭವವೆಂಬ ದೋಷವು ಈ ವಾದದಲ್ಲಿ ಸ್ಪಷ್ಟ.

2. "ಜೀವರೂಪದಿಂದ ನಾಮರೂಪಗಳನ್ನು ವಿಂಗಡಿಸುವೆನು" (ಛಾಂ.) ಮುಂತಾದ ಶ್ರುತಿಗಳು.

ಯಾಗಿ (ಎರಡು ವಿಧದಿಂದ ಬ್ರಹ್ಮವು) ಪರಿಣಮಿಸಿರುವದು (ಎನ್ನೋಣ). ಅದೇ ಕಾರಣವಾದ ಬ್ರಹ್ಮವು ಶರೀರವೇ ಮುಂತಾದ ಆಧಾರವಾಗಿಯೂ ಅದರೊಳಗಿನ ಜೀವರೂಪದಿಂದ ಆಧೇಯವಾಗಿಯೂ ಪರಿಣಮಿಸಿರುತ್ತದೆ (ಎನ್ನಬಹುದಲ್ಲ) !

(ಆಕ್ಷೇಪ :-) ಹಾಗಲ್ಲ. ಏಕೆಂದರೆ ಹೊರಗೆ ಇರುವವನಿಗೆ (ಮಾತ್ರ) ಪ್ರವೇಶವೆಂಬುದು ಹೊಂದುತ್ತದೆ. ಯಾವನು ಯಾವದರ ಒಳಗೆ ಇರುತ್ತಾನೋ ಅವನೇ ಅದನ್ನು ಪ್ರವೇಶಿಸಿದನು ಎಂದು (ಯಾರೂ) ಹೇಳುವದಿಲ್ಲ. ಹೊರಗೆ ಇರುವವನಿಗೆ (ಮಾತ್ರ) ಒಳಹೊಗುವದೆಂಬುದು ಆದೀತು. ಏಕೆಂದರೆ ಪ್ರವೇಶ (ಒಳಹೊಗುವದು) ಎಂಬ ಶಬ್ದಕ್ಕೆ ಅರ್ಥವು ಹೀಗೆಯೇ ಇರುವದು ಕಂಡುಬಂದಿರುತ್ತದೆ. ಉದಾಹರಣೆಗೆ "ಮನೆಯನ್ನು ಮಾಡಿಕೊಂಡು ಪ್ರವೇಶಿಸಿದನು" ಎಂಬಲ್ಲಿ (ಹೀಗೆ ಅರ್ಥವಿರುತ್ತದೆ).

(ಭಾಷ್ಯ)

೧೭೫. ಜಲಸೂರ್ಯಕಾದಿಪ್ರತಿಬಿಮ್ಬವತ್ ಪ್ರವೇಶಃ ಸ್ಯಾತ್ ಇತಿ ಚೇತ್ । ನ । ಅಪರಿಚ್ಛಿನ್ನತ್ವಾತ್, ಅಮೂರ್ತತ್ವಾಚ್ಚ । ಪರಿಚ್ಛಿನ್ನಸ್ಯ ಮೂರ್ತಸ್ಯ ಅನ್ಯಸ್ಯ ಅನ್ಯತ್ರ ಪ್ರಸಾದಸ್ವಭಾವಕೇ ಜಲಾದೌ ಸೂರ್ಯಕಾದಿಪ್ರತಿಬಿಮ್ಬೋದಯಃ ಸ್ಯಾತ್, ನ ತ್ವಾತ್ಮನಃ । ಅಮೂರ್ತತ್ವಾತ್ ಆಕಾಶಾದಿಕಾರಣಸ್ಯ ಆತ್ಮನಃ ವ್ಯಾಪಕತ್ವಾತ್ ತದ್ವಿಪ್ರಕೃಷ್ಟದೇಶಪ್ರತಿಬಿಮ್ಬಾಧಾರವಸ್ತ್ವನ್ತರಾಭಾವಾಚ್ಚ ಪ್ರತಿಬಿಮ್ಬವತ್ ಪ್ರವೇಶೋ ನ ಯುಕ್ತಃ ॥

(ಭಾಷ್ಯಾರ್ಥ)

(ಇನ್ನೊಂದು ಸಮಾಧಾನ :-) (ಈ) ಪ್ರವೇಶವು ನೀರಿನಲ್ಲಿ (ಕಾಣುವ) ಸೂರ್ಯನ ಪ್ರತಿಬಿಂಬವೇ ಮುಂತಾದವುಗಳಂತೆ ಇರಬಹುದಲ್ಲ !

(ಆಕ್ಷೇಪ :-) ಹಾಗಲ್ಲ. ಏಕೆಂದರೆ (ಬ್ರಹ್ಮವು) ಪರಿಚ್ಛಿನ್ನವಾಗಿರುವದಲ್ಲ ; ಮೂರ್ತ(ದ್ರವ್ಯವೂ) ಅಲ್ಲ. ಪರಿಚ್ಛಿನ್ನವಾಗಿ ಮೂರ್ತವಾಗಿರುವ ಒಂದು ವಸ್ತುವಿಗೆ ನಿರ್ಮಲಸ್ವಭಾವವುಳ್ಳ ಮತ್ತೊಂದು (ವಸ್ತು)ವಾದ ನೀರೇ ಮುಂತಾದ್ದರಲ್ಲಿ ಸೂರ್ಯನ ಪ್ರತಿಬಿಂಬವೇ ಮುಂತಾದ್ದರಂತೆ ಪ್ರತಿಬಿಂಬವು ಮೂಡಿಕೊಳ್ಳಬಹುದು. ಆದರೆ ಆತ್ಮನಿಗೆ (ಪ್ರತಿಬಿಂಬ)ವುಂಟಾಗಲಾರದು ; ಏಕೆಂದರೆ (ಅವನು) ಮೂರ್ತನಲ್ಲ. ಆಕಾಶವೇ ಮುಂತಾದವುಗಳಿಗೂ ಕಾರಣವಾಗಿರುವ ಆತ್ಮನು ವ್ಯಾಪಕನಾಗಿರುವದರಿಂಲೂ ಅವನಿಗಿಂತ ದೂರ

ಪ್ರದೇಶದಲ್ಲಿ ಪ್ರತಿಬಿಂಬಕ್ಕೆ ಆಧಾರವಾಗಿರುವ (ನೀರಿನಂಥ) ವಸ್ತು ಮತ್ತೊಂದು ಇಲ್ಲದ್ದರಿಂದಲೂ ಪ್ರತಿಬಿಂಬದಂತೆ ಪ್ರವೇಶವೆಂಬುದು ಸರಿಯಾಗುವದಿಲ್ಲ.

ಪ್ರವೇಶಶ್ರುತಿಯ ನಿಜವಾದ ಅರ್ಥ

(ಭಾಷ್ಯ)

೧೭೬. ಏವಂ ತರ್ಹಿ ನೈವಾಸ್ತಿ ಪ್ರವೇಶಃ । ನ ಚ ಗತ್ಯನ್ತರಮ್ ಉಪಲಭಾಮಹೇ "ತದೇವಾನುಪ್ರಾವಿಶತ್" ಇತಿ[1] ಶ್ರುತೇಃ । ಶ್ರುತಿಶ್ಚ ನೋಽತೀನ್ದ್ರಿಯವಿಷಯೇ ವಿಜ್ಞಾನೋತ್ಪತ್ತೌ ನಿಮಿತ್ತಮ್ । ನ ಚ ಅಸ್ಮಾದ್ ವಾಕ್ಯಾತ್ ಯತ್ನವತಾಮಪಿ ವಿಜ್ಞಾನಮ್ ಉತ್ಪದ್ಯತೇ । ಹನ್ತ ತರ್ಹಿ ಅನರ್ಥಕತ್ವಾತ್ ಅಪೋಹ್ಯಮೇತದ್ ವಾಕ್ಯಮ್ "ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್" ಇತಿ ॥

(ಭಾಷ್ಯಾರ್ಥ)

(ವಾಕ್ಯಪ್ರಾಮಾಣ್ಯವಿಷಯಕ್ಕೆ ಆಕ್ಷೇಪ :-) ಹೀಗಾದರೆ ಪ್ರವೇಶವೆಂಬುದೇ ಇಲ್ಲವೆಂದಾಯಿತು. "ತದೇವಾನುಪ್ರಾವಿಶತ್" ಎಂಬ ಶ್ರುತಿಗೆ ಮತ್ತೆ ಯಾವ ಗತಿಯೂ ನಮಗೆ ಕಾಣುವದೂ ಇಲ್ಲ. ಅತೀಂದ್ರಿಯವಾದ (ವಸ್ತುವಿನ) ವಿಷಯದಲ್ಲಿ ನಮಗೆ ತಿಳಿವಳಿಕೆಯುಂಟಾಗುವದಕ್ಕೆ ಶ್ರುತಿಯೇ ಕಾರಣವು. ಈ ವಾಕ್ಯದಿಂದ (ನಾವು) ಎಷ್ಟೇ ಯತ್ನವನ್ನು ಮಾಡಿದರೂ ತಿಳಿವಳಿಕೆಯು ಉಂಟಾಗುವದಿಲ್ಲ. ಸರಿ, ಹಾಗಾದರೆ ಯಾವ ಅರ್ಥವೂ ಇಲ್ಲದ್ದರಿಂದ "ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್" ಎಂಬೀ ವಾಕ್ಯವನ್ನು ಬಿಟ್ಟುಬಿಡಬೇಕೆಂದಾಯಿತು.

(ಭಾಷ್ಯ)

೧೭೭. ನ । ಅನ್ಯಾರ್ಥತ್ವಾತ್ । ಕಿಮರ್ಥಮ್ ಅಸ್ಥಾನೇ ಚರ್ಚಾ ? ಪ್ರಕೃತೋ ಹಿ ಅನ್ಯೋ ವಿವಕ್ಷಿತೋಽಸ್ಯ ವಾಕ್ಯಸ್ಯ ಅರ್ಥೋಽಸ್ತಿ । ಸ ಸ್ಮರ್ತವ್ಯಃ । "ಬ್ರಹ್ಮವಿದಾಪ್ನೋತಿ ಪರಮ್ .... ಸತ್ಯಂ ಜ್ಞಾನಮನನ್ತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಮ್" (೨-೧) ಇತಿ । ತದ್ವಿಜ್ಞಾನಂ ಚ ವಿವಕ್ಷಿತಮ್ । ಪ್ರಕೃತಂ ಚ ತತ್ । ಬ್ರಹ್ಮಸ್ವರೂಪಾನುಗಮಾಯ ಚ ಆಕಾಶಾದ್ಯನ್ನಮಯಾನ್ತಂ ಕಾರ್ಯಂ ಪ್ರದರ್ಶಿತಮ್ । ಬ್ರಹ್ಮಾನುಗಮಶ್ಚ[2] ಆರಬ್ಧಃ । ತತ್ರ ಅನ್ನಮಯಾದಾತ್ಮನೋಽನ್ಯೋಽನ್ತರ ಆತ್ಮಾ ಪ್ರಾಣಮಯಃ, ತದನ್ತರ್ಮನೋಮಯಃ ವಿಜ್ಞಾನಮಯಃ

---

1. "ಇತಿ ಚ ಶ್ರುತೇಃ" ಎಂಬ ಆ॥ ಪಾಠದಲ್ಲಿ 'ಚ' ಹೆಚ್ಚು.
2. "ಬ್ರಹ್ಮಾವಗಮಶ್ಚ" ಎಂದು ವಾ॥ ಪಾಠ.

ಇತಿ ವಿಜ್ಞಾನಗುಹಾಯಾಂ ಪ್ರವೇಶಿತಃ । ತತ್ರ ಚ ಆನನ್ದಮಯೋ ವಿಶಿಷ್ಟ ಆತ್ಮಾ ಪ್ರದರ್ಶಿತಃ । ಅತಃ ಪರಮ್ ಆನನ್ದಮಯಲಿಙ್ಗಾಧಿಗಮವ್ಯಾರೇಣ ಆನನ್ದ ಏವಾವಸಾನ ಆತ್ಮಾ ಬ್ರಹ್ಮ ಪುಚ್ಛಂ ಪ್ರತಿಷ್ಠಾ ನರ್ವವಿಕಲ್ಪಾಸ್ಪದೋ ನಿರ್ವಿಕಲ್ಪೋಽನ್ಯಾಮೇವ ಗುಹಾಯಾಮ್ ಅಧಿಗನ್ತವ್ಯಃ ಇತಿ ತತ್ಪ್ರವೇಶಃ ಪ್ರಕಲ್ಪ್ಯತೇ । ನ ಹಿ ಅನ್ಯತ್ರೋಪಲಭ್ಯತೇ ಬ್ರಹ್ಮ । ನಿರ್ವಿಶೇಷತ್ವಾತ್ । ವಿಶೇಷಸಂಬನ್ಧೋ ಹಿ ಉಪಲಬ್ಧಿಹೇತುರ್ದೃಷ್ಟಃ । ಯಥಾ ರಾಹೋಶ್ಚನ್ದ್ರಾರ್ಕವಿಶೇಷಸಂಬನ್ಧಃ । ಏವಮ್ ಅನ್ತಃಕರಣಗುಹಾಸಂಬನ್ಧೋ[1] ಬ್ರಹ್ಮಣ ಉಪಲಬ್ಧಿಹೇತುಃ । ಸಂನಿಕರ್ಷಾತ್, ಅವಭಾಸಾತ್ಮಕತ್ವಾಚ್ಚಾನ್ತಃಕರಣಸ್ಯ । ಯಥಾ ಚ ಆಲೋಕ ವಿಶಿಷ್ಟಾ ಘಟಾದ್ಯುಪಲಬ್ಧಿಃ, ಏವಂ ಬುದ್ಧಿಪ್ರತ್ಯಯಾಲೋಕವಿಶಿಷ್ಟಾ ಆತ್ಮೋಪಲಬ್ಧಿಃ ಸ್ಯಾತ್ । ತಸ್ಮಾತ್ ಉಪಲಬ್ಧಿಹೇತೌ 'ಗುಹಾಯಾಂ ನಿಹಿತಮ್' ಇತಿ ಪ್ರಕೃತಮೇವ । ತದ್ಯುಕ್ತಿಸ್ಥಾನೀಯೇ ತು ಇಹ ಪುನಃ ''ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್'' ಇತ್ಯುಚ್ಯತೇ ॥

(ಭಾಷ್ಯಾರ್ಥ)

ಹಾಗಲ್ಲ. ಏಕೆಂದರೆ ಇದಕ್ಕೆ ಬೇರೆ (ಒಂದು) ಅರ್ಥವಿದೆ. ಪ್ರಕೃತಕ್ಕೆ ಹೊಂದದ ಚರ್ಚೆ ಏತಕ್ಕೆ ? ಈ ವಾಕ್ಯಕ್ಕೆ ವಿವಕ್ಷಿತವಾಗಿರುವ ಪ್ರಕೃತವಾದ ಬೇರೆ (ಒಂದು) ಅರ್ಥವಿದೆ. ಅದನ್ನು ನೆನಪಿಗೆ ತಂದುಕೊಳ್ಳಬೇಕು. ''ಬ್ರಹ್ಮವನ್ನರಿತವನು ಪರವನ್ನು ಪಡೆದುಕೊಳ್ಳುತ್ತಾನೆ..... ಸತ್ಯವೂ ಜ್ಞಾನವೂ ಅನಂತವೂ (ಆದ) ಬ್ರಹ್ಮವು ಗುಹೆಯಲ್ಲಿ ಇಡಲ್ಪಟ್ಟಿರುವದನ್ನು ಯಾವಾತನು ಅರಿತುಕೊಳ್ಳುವನೋ....'' ಎಂದು (ಉಪಕ್ರಮದಲ್ಲಿ ಹೇಳಿತ್ತು). ಆ (ಬ್ರಹ್ಮದ) ಜ್ಞಾನವೇ ವಿವಕ್ಷಿತವಾಗಿರುತ್ತದೆ , ಅದು ಪ್ರಕೃತವೂ ಆಗಿರುತ್ತದೆ. ಬ್ರಹ್ಮಸ್ವರೂಪವನ್ನು ಹಿಂಬಾಲಿಸಿ (ತಿಳಿಯುವದಕ್ಕಾಗಿ)[2] ಆಕಾಶವೇ ಮುಂತಾಗಿ ಅನ್ನಮಯದವರೆಗಿನ ಕಾರ್ಯವನ್ನು ತಿಳಿಸಿದ್ದಾಯಿತು. ಬ್ರಹ್ಮದ ಅನುಗಮನವನ್ನು ಪ್ರಾರಂಭಿಸಿದ್ದೂ ಆಯಿತು. ಅಲ್ಲಿ 'ಅನ್ನಮಯನಾದ ಆತ್ಮನಿಗಿಂತ ಬೇರೆಯಾದ ಒಳಗಿನ ಆತ್ಮನಾದ ಪ್ರಾಣಮಯನು, ಅವನ ಒಳಗೆ ಮನೋಮಯನು, (ಅವನೊಳಗೆ) ವಿಜ್ಞಾನಮಯನು (ಇರುತ್ತಾನೆ)' - ಎಂದು (ಆತ್ಮನನ್ನು) ವಿಜ್ಞಾನದ ಗುಹೆಯಲ್ಲಿ ಹೊಗಿಸಿದ್ದಾಯಿತು. ಮತ್ತು ಇಲ್ಲಿ

1. ''ಗುಹಾತ್ಮಸಂಬನ್ಧೋ'' ಎಂಬಲ್ಲಿ 'ಆತ್ಮ' ಎಂಬ ಮಾತು ಹೆಚ್ಚು.

2. ''ಅನುಗಮಾಯ'' ಎಂಬ ಆ!! ಪಾಠವನ್ನನುಸರಿಸಿ ಕನ್ನಡಿಸಿದೆ. ಬ್ರಹ್ಮಸ್ವರೂಪವಾದ ಸತ್ಯತ್ವವು ಆಕಾಶಾದಿಗಳಲ್ಲಿಯೂ ಅನ್ನಮಯಾದಿಗಳಲ್ಲಿಯೂ ಅನುಗತವಾಗಿರುತ್ತದೆ. ಅವುಗಳ ಮೂಲಕ ಬ್ರಹ್ಮವನ್ನು ಅರಿತುಕೊಳ್ಳಬೇಕು.

ಆನಂದಮಯನೆಂಬ ಅಸಾಧಾರಣ[1] ಆತ್ಮನನ್ನು ತೋರಿಸಿಕೊಟ್ಟಿದ್ದಾಯಿತು. ಅಲ್ಲಿಂದ ಮುಂದಕ್ಕೆ ಆನಂದಮಯನೆಂಬ ಗುರುತನ್ನು ಅರಿತುಕೊಳ್ಳುವ ಮೂಲಕವಾಗಿ[2] ಆನಂದವು ಹೆಚ್ಚುವದರ ಕೊನೆಯಾಗಿರುವ ಆತ್ಮನು, (ಆನಂದಮಯನಿಗೆ) ಪುಚ್ಛವೂ ಪ್ರತಿಷ್ಠೆಯೂ ಆಗಿರುವ ಬ್ರಹ್ಮವು, ಎಲ್ಲಾ ವಿಕಲ್ಪಗಳಿಗೂ ಆಶ್ರಯವಾಗಿರುವ ನಿರ್ವಿಕಲ್ಪವು,[3] ಇದೇ ಗುಹೆಯಲ್ಲಿ ಅರಿತುಕೊಳ್ಳತಕ್ಕದ್ದು ಎಂದು ಅದರ ಪ್ರವೇಶವನ್ನು (ಇಲ್ಲಿ) ಕಲ್ಪಿಸಿರುತ್ತದೆ. ಬ್ರಹ್ಮವು ಮತ್ತೆಲ್ಲಿಯೂ ಕಾಣಬರುವದಿಲ್ಲ. ಏಕೆಂದರೆ (ಅದು) ಯಾವ ವಿಶೇಷವೂ ಇಲ್ಲದ್ದಾಗಿರುತ್ತದೆ. ವಿಶೇಷ(ವಸ್ತುವಿನ) ಸಂಬಂಧವೇ (ನಿರ್ವಿಶೇಷವಾದದ್ದನ್ನು) ಅರಿಯುವದಕ್ಕೆ ಕಾರಣವಾಗುವದೆಂಬುದು (ಲೋಕದಲ್ಲಿ) ಕಂಡುಬಂದಿರುತ್ತದೆ. ಉದಾಹರಣೆಗೆ ರಾಹುವಿಗೆ ಚಂದ್ರ, ಸೂರ್ಯ - ಎಂಬ ವಿಶೇಷ(ವಸ್ತುಗಳ) ಸಂಬಂಧ(ವುಂಟಾಗುವದು ಅದನ್ನು ಅರಿಯುವದಕ್ಕೆ ಕಾರಣವಾಗುತ್ತದೆ). ಇದೇ ರೀತಿಯಲ್ಲಿ ಅಂತಃಕರಣವೆಂಬ ಗುಹೆಯ ಸಂಬಂಧವು ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಕಾರಣವಾಗಿರುತ್ತದೆ. ಏಕೆಂದರೆ ಅಂತಃಕರಣವು (ಆತ್ಮನಿಗೆ) ಹತ್ತಿರವಿರುತ್ತದೆ, ಮತ್ತು ಪ್ರಕಾಶಾತ್ಮಕವಾಗಿರುತ್ತದೆಯಾದ್ದರಿಂದ (ಹೀಗೆಂದು ತಿಳಿಯಬೇಕು). ಮತ್ತು ಹೇಗೆ ಬೆಳಕಿನಿಂದ ಕೂಡಿದರೇ ಗಡಿಗೆಯೇ ಮುಂತಾದವುಗಳ ಅರಿವು ಉಂಟಾಗುವದೋ ಹಾಗೆಯೇ ಬುದ್ಧಿಯ ಪ್ರತ್ಯಯವೆಂಬ ಬೆಳಕಿನಿಂದ ಕೂಡಿದರೆ ಆತ್ಮನ ಅರಿವು ಉಂಟಾಗುತ್ತದೆ.[4] ಆದ್ದರಿಂದ ಅರಿವಿಗೆ ಕಾರಣವಾಗಿರುವ (ಅಂತಃಕರಣವೆಂಬ) ಗುಹೆಯಲ್ಲಿ ಇಡಲ್ಪಟ್ಟಿದೆ ಎಂಬುದು ಪ್ರಕೃತವೇ ಆಗಿರುತ್ತದೆ. ಆ

---

1. ಭೋಕ್ತೃತ್ವವು ಒಬ್ಬೊಬ್ಬನಿಗೆ ಒಂದೊಂದು ಬಗೆ ; ಎಲ್ಲರಿಗೂ ಒಂದೇ ಭೋಗವಿರುವದಿಲ್ಲ.

2. ಹೊಗೆಯಿಂದ ಬೆಂಕಿಯನ್ನು ಊಹಿಸುವಂತೆ ಆನಂದಮಯನಿಂದ ಪರಮಾತ್ಮನನ್ನು ಊಹಿಸಬೇಕು.

3. ಆತ್ಯಂತ ನಿರತಿಶಯವಾದ ಆನಂದವೇ ಪರಮಾತ್ಮನು, ಬ್ರಹ್ಮವು ; ಆನಂದಮಯನು ವಿತರ ಬಲದಿಂದ ಆನಂದಮಯನೆನಿಸಿಕೊಂಡಿರುವನೋ ಅದು ಬ್ರಹ್ಮವು ; ಅಂಥದ್ದು, ಇಂಥದ್ದು ಎಂದು ನಾವು ಕಲ್ಪಿಸುವ ವಿಶೇಷಗಳಿಗೆಲ್ಲ ಆಧಾರವಾಗಿರುವ ನಿರ್ವಿಕಲ್ಪವೇ ಬ್ರಹ್ಮವು ಎಂದು ಅರಿತುಕೊಳ್ಳಬೇಕು. ಆ ಬ್ರಹ್ಮವನ್ನು ಹೃದಯಗುಹೆಯಲ್ಲಿಯೇ ಅರಿತುಕೊಳ್ಳಬೇಕು.

4. ನಿಜವಾಗಿ ನೋಡಿದರೆ ಅಂತಃಕರಣಕ್ಕೆ ಆತ್ಮನು ವಿಷಯವಾಗುವದಿಲ್ಲ. ಆದರೂ ಅದು ತಪಸ್ಸು ಮುಂತಾದ ಪುಣ್ಯಕರ್ಮಗಳಿಂದ ಶುದ್ಧವಾದಾಗ ಅದರಲ್ಲಿ ಆತ್ಮನು ಹೊಳೆದು ತೋರುತ್ತಾನೆ. ಆದ್ದರಿಂದ ಆತ್ಮನನ್ನು ಅರಿಯುವದಕ್ಕೆ ಮನಸ್ಸೇ ಬೆಳಕಾಯಿತು. ಈ ವಿಷಯಕ್ಕೆ ಕ.ಭಾ. ೨-೧-೧, (ಭಾ.ಭಾ. ೧೧೧) ; ಗೀ.ಭಾ. ೨-೨೧ (ಭಾ. ಭಾ. ೪೫) ; ಬೃ. ಭಾ. ೪-೪-೧೯ - ಇವುಗಳನ್ನು ನೋಡಿ.

(ವಾಕ್ಯದ) ವ್ಯತ್ತಿಯಂತಿರುವ ಈ (ವಾಕ್ಯದಲ್ಲಿ)ಯೋ ಎಂದರೆ ''ಅದನ್ನು ಸೃಷ್ಟಿ ಮಾಡಿ ಅದನ್ನೇ ಒಳಹೊಕ್ಕಿತು'' ಎಂದಿರುತ್ತದೆ.[1]

ಉಪಸಂಹಾರ

(ಭಾಷ್ಯ)

೧೭೮. ತದೇವೇದಮ್ ಆಕಾಶಾದಿಕಾರಣಂ ಕಾರ್ಯಂ ಸೃಷ್ಟ್ವಾ, ತದನು ಪ್ರವಿಷ್ಟಮಿವ ಅನ್ತರ್ಗುಹಾಯಾಂ ಬುದ್ಧೌ ದ್ರಷ್ಟೃ ಶ್ರೋತೃ ಮನ್ತೃ ವಿಜ್ಞಾತೃ ಇತ್ಯೇವಂ ವಿಶೇಷವದುಪಲಭ್ಯತೇ । ಸ ಏವ ತಸ್ಯ ಪ್ರವೇಶಃ । ತಸ್ಮಾತ್ ಅಸ್ತಿ ತತ್ ಕಾರಣಂ ಬ್ರಹ್ಮ । ಅತಃ ಅಸ್ತಿತ್ವಾತ್ ಅಸ್ತಿ ಇತ್ಯೇವೋಪಲಬ್ಧವ್ಯಂ ತತ್ ॥

(ಭಾಷ್ಯಾರ್ಥ)

ಆಕಾಶಾದಿಗಳಿಗೆ ಕಾರಣವಾಗಿರುವ ಅದೇ ಈ (ಬ್ರಹ್ಮವು) ಕಾರ್ಯವನ್ನು ಸೃಷ್ಟಿಸಿ ಅದರೊಳಕ್ಕೆ ಅನುಪ್ರವೇಶಮಾಡಿರುವಂತೆ ಒಳಗಿನ ಗುಹೆಯಾದ ಬುದ್ಧಿಯಲ್ಲಿ ದ್ರಷ್ಟೃ (ನೋಡುವದು), ಶ್ರೋತೃ (ಕೇಳುವದು), ಮನ್ತೃ (ಆಲೋಚಿಸುವದು), ವಿಜ್ಞಾತೃ (ಅರಿಯುವದು) - ಎಂದೀ ಪರಿಯಲ್ಲಿ ವಿಶೇಷ(ರೂಪ)ಗಳುಳ್ಳದ್ದಾಗಿ ಕಂಡುಬರುತ್ತಿದೆ.[2] ಇದೇ ಅದರ ಪ್ರವೇಶವು. ಆದ್ದರಿಂದ ಆ ಕಾರಣವಾದ ಬ್ರಹ್ಮವು ಇದೆ ; ಆದ್ದರಿಂದ (ಹೀಗೆ) ಇರುವದರಿಂದ, ಅದು ಇದೆ ಎಂದೇ ತಿಳಿಯತಕ್ಕದ್ದು.[3]

೧೧. ಹೊರಗಿನ ಪದಾರ್ಥಗಳ ರೂಪದಲ್ಲಿರುವದರಿಂದ ಬ್ರಹ್ಮವು ಇದೆ

ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ನಿಲಯನಂ ಚಾನಿಲಯನಂ ಚ । ವಿಜ್ಞಾನಂ ಚಾವಿಜ್ಞಾನಂ ಚ । ಸತ್ಯಂ ಚಾನೃತಂ ಚ ಸತ್ಯಮಭವತ್ । ಯದಿದಂ ಕಿಂ ಚ । ತತ್ ಸತ್ಯಮಿತ್ಯಾಚಕ್ಷತೇ ॥೭॥

1. ಬ್ರಹ್ಮವು ಅಂತಃಕರಣದೊಳಗೆ ಹೊಕ್ಕಿರುವಂತೆ ಕಾಣುತ್ತಿದೆ ಎಂದೇ ಅಭಿಪ್ರಾಯ ; ಹೊರಗಿನಿಂದ ನಿಜವಾಗಿ ಒಳಹೊಕ್ಕಿತು ಎಂಬುದೇನೂ ಅರ್ಥವಲ್ಲ.

2. ಬುದ್ಧಿಯಲ್ಲಿ ಪ್ರವೇಶಮಾಡಿದಂತೆ ಬುದ್ಧಿಯ ವೃತ್ತಿಗಳಾದ ದೃಷ್ಟಿ, ಶ್ರವಣ, ಮನನ, ವಿಜ್ಞಾನ - ಇವುಗಳಲ್ಲಿ ಕಂಡುಬರುತ್ತಿರುವದು. ಗೀ. ೧೫-೧೦.

3. ಈ ಮೂಲಕ ಅದನ್ನು ತತ್ತ್ವರೂಪದಿಂದ ಅರಿಯುವದಕ್ಕೆ ಪ್ರಯತ್ನಿಸಬೇಕು ಕ. ೨-೩-೧೩.

೭. ಅದನ್ನು ಒಳಹೊಕ್ಕು ಸತ್ತೂ ತ್ಯತ್ತೂ ಆಯಿತು. ನಿರುಕ್ತವೂ ಅನಿರುಕ್ತವೂ, ನಿಲಯನವೂ, ಅನಿಲಯನವೂ ವಿಜ್ಞಾನವೂ ಅವಿಜ್ಞಾನವೂ, ಸತ್ಯವೂ ಅನೃತವೂ ಸತ್ಯವು ಆಯಿತು. ಇದು ಏನೇನಿದೆಯೋ (ಎಲ್ಲವೂ ಆಯಿತು) ಅದನ್ನು ಸತ್ಯವೆಂದು ಕರೆಯುತ್ತಾರೆ.

ಮುರ್ತಾಮೂರ್ತಗಳು ಬ್ರಹ್ಮವೇ

(ಭಾಷ್ಯ)

೧೭. ತತ್ ಕಾರ್ಯಮ್ ಅನುಪ್ರವಿಶ್ಯ । ಕಿಮ್ ? ಸಚ್ಚ ಮೂರ್ತಂ ತ್ಯಚ್ಚ ಅಮೂರ್ತಮ್ ಅಭವತ್ । ಮೂರ್ತಾಮೂರ್ತೇ ಹಿ ಅವ್ಯಾಕೃತನಾಮರೂಪೇ ಆತ್ಮಸ್ಥೇ ಅನ್ತರ್ಗತೇನ ಆತ್ಮನಾ ವ್ಯಾಕ್ರಿಯೇತೇ, ವ್ಯಾಕೃತೇ ಚ ಮೂರ್ತಾಮೂರ್ತಶಬ್ದವಾಚ್ಯೇ । ತೇ ಆತ್ಮನಾ ತ್ವಪ್ರವಿಭಕ್ತದೇಶಕಾಲೇ ಇತಿ ಕೃತ್ವಾ ಆತ್ಮಾ ತೇ ಅಭವತ್ ಇತ್ಯುಚ್ಯತೇ । ಕಿಂ ಚ ನಿರುಕ್ತಂ ಚ ಅನಿರುಕ್ತಂ ಚ । ನಿರುಕ್ತಂ ನಾಮ ನಿಷ್ಪನ್ನಸ್ಯ ಸಮಾನಾಸಮಾನ ಜಾತೀಯೇಭ್ಯಃ ದೇಶಕಾಲವಿಶಿಷ್ಟತಯಾ ಇದಂ ತತ್ ಇತ್ಯುಕ್ತಮ್ । ಅನಿರುಕ್ತಂ ತದ್ವಿಪರೀತಮ್ । ನಿರುಕ್ತಾನಿರುಕ್ತೇ ಅಪಿ ಮೂರ್ತಾಮೂರ್ತಯೋರೇವ ವಿಶೇಷಣೇ । ಯಥಾ ಸಚ್ಚ ತ್ಯಚ್ಚ ಪ್ರತ್ಯಕ್ಷಪರೋಕ್ಷೇ । ತಥಾ ನಿಲಯನಂ ಚಾನಿಲಯನಂ ಚ । ನಿಲಯನಂ ನೀಡಮ್ ಆಶ್ರಯಃ, ಮೂರ್ತಸ್ಯೈವ ಧರ್ಮಃ । ಅನಿಲಯನಂ ತದ್ವಿಪರೀತಮ್, ಅಮೂರ್ತಸ್ಯೈವ ಧರ್ಮಃ । ತ್ಯದನಿರುಕ್ತಾನಿಲಯನಾನಿ ಅಮೂರ್ತ ಧರ್ಮತ್ವೇಽಪಿ ವ್ಯಾಕೃತವಿಷಯಾಣ್ಯೇವ । ಸರ್ಗೋತ್ತರಕಾಲಭಾವಶ್ರವಣಾತ್ । ತ್ಯತ್ ಇತಿ ಪ್ರಾಣಾದಿ । ಅನಿರುಕ್ತಂ ತದೇವ, ಅನಿಲಯನಂ ಚ । ಅತೋ ವಿಶೇಷಣಾನಿ ಅಮೂರ್ತಸ್ಯ ವ್ಯಾಕೃತವಿಷಯಾಣ್ಯೇವೈತಾನಿ ॥

(ಭಾಷ್ಯಾರ್ಥ)

ಅದು ಕಾರ್ಯವನ್ನು ಒಳಹೊಕ್ಕು ಏನು (ಮಾಡಿತು) ? - ಎಂದರೆ ಸತ್ತೂ ಎಂದರೆ ಮೂರ್ತವೂ ತ್ಯತ್ತೂ ಎಂದರೆ ಅಮೂರ್ತವೂ ಆಯಿತು. ಮೂರ್ತಾಮೂರ್ತಗಳು ಅವ್ಯಾಕೃತವಾದ ನಾಮರೂಪಗಳಾಗಿ ಆತ್ಮನಲ್ಲಿದ್ದು ಒಳಗಿರುವ ಆತ್ಮನಿಂದ ವ್ಯಾಕೃತವಾಗಿ ಮಾಡಲ್ಪಡುತ್ತವೆ.[1] ವ್ಯಾಕೃತವಾದ ಬಳಿಕ ಅವು ಮೂರ್ತ, ಅಮೂರ್ತ - ಎಂಬ ಶಬ್ದದಿಂದ ಹೇಳಲ್ಪಡುವವು.[2] ಅವು ಆತ್ಮನಿಗಿಂತ ಬೇರೆ

---

1. ಹಿಂದೆ ಭಾ.ಭಾ. ೧೬೪, ೧೬೫, ೧೬೬ರಲ್ಲಿ "ಬಹುಭವನದ" ವಿಷಯದಲ್ಲಿ ನಾಮರೂಪಗಳ ವಿವರವನ್ನು ಕೊಟ್ಟಿರುವದನ್ನು ನೋಡಿರಿ.

2. ಮೊದಲು 'ಆತ್ಮ' ಎಂಬ ಶಬ್ದದಿಂದಲೇ ಹೇಳಲ್ಪಡುತ್ತವೆ. ಐ.ಭಾ. ೧-೧, (ಭಾ.ಭಾ. ೨೮) "ಆಸೀತ್" ಎಂಬುದರ ವ್ಯಾಖ್ಯಾನವನ್ನು ನೋಡಿರಿ.

ಯಾಗಿರುವ ದೇಶದಲ್ಲಾಗಲಿ ಕಾಲದಲ್ಲಾಗಲಿ ಇರುವುದಿಲ್ಲವಾಗಿ ಆತ್ಮನು ಅವೆರಡೂ ಆದನು ಎನ್ನಿಸಿಕೊಳ್ಳುತ್ತಾನೆ.[1] ಮತ್ತು ನಿರುಕ್ತವೂ ಅನಿರುಕ್ತವೂ (ಆದನು). ನಿರುಕ್ತ ಎಂದರೆ (ತನಗೆ) ಸಮಾನವಾದ ಮತ್ತು ಸಮಾನವಲ್ಲದ ಜಾತಿಯ (ಪದಾರ್ಥ)ಗಳಿಂದ ವಿಂಗಡಿಸಿ ಗೊತ್ತುಮಾಡಿ ದೇಶ, ಕಾಲ - ಇವುಗಳಿಂದ ಕೂಡಿ 'ಅದು ಇದು' ಎಂದು ಉಕ್ತವಾಗಿರುವುದು. ಅನಿರುಕ್ತವೆಂದರೆ ಅದಕ್ಕೆ ವಿರುದ್ಧವಾದದ್ದು. (ಈ) ನಿರುಕ್ತ, ಅನಿರುಕ್ತ - ಎಂಬಿವೂ ಮೂರ್ತಾಮೂರ್ತಗಳ ವಿಶೇಷಣಗಳೇ.[2] ಹೇಗೆ ಸತ್ತು, ತ್ಯತ್ತು - ಎಂದರೆ ಪ್ರತ್ಯಕ್ಷವಾದದ್ದು, ಪರೋಕ್ಷವಾದದ್ದು[3] (ಇವೆರಡೂ ಹೇಗೆ ಮೂರ್ತಾಮೂರ್ತಗಳ ಧರ್ಮಗಳೋ ಇವೂ ಹಾಗೆಯೇ).[4] ಇದರಂತೆ ನಿಲಯನವೂ ಅನಿಲಯನವೂ (ಆದನು). ನಿಲಯನವೆಂದರೆ ಗೂಡು, ಆಶ್ರಯ ; (ಇದೂ) ಮೂರ್ತದ್ದೇ ಧರ್ಮವು. ಅನಿಲಯನವೆಂದರೆ ಅದಕ್ಕೆ ವಿರುದ್ಧವಾದದ್ದು ; (ಇದೂ) ಅಮೂರ್ತಕ್ಕೆ ಧರ್ಮವು. (ಹೀಗೆ) ತ್ಯತ್, ಅನಿರುಕ್ತ, ಅನಿಲಯನ - ಎಂಬಿವು ಅಮೂರ್ತಕ್ಕೆ ಧರ್ಮವಾದರೂ ವ್ಯಾಕೃತ (ಮೂರ್ತ)ಕ್ಕೇ ಸಂಬಂಧಪಟ್ಟಿರುತ್ತವೆ (ಎಂದು ತಿಳಿಯಬೇಕು).[5] ಏಕೆಂದರೆ (ಅವು) ಸೃಷ್ಟಿಯಾದ ಬಳಿಕ ಉಂಟಾಗುವವೆಂದು ಶ್ರುತಿಯಲ್ಲಿ ಹೇಳಿರುತ್ತದೆ. ತ್ಯತ್ ಎಂದರೆ ಪ್ರಾಣವೇ ಮುಂತಾದದ್ದು.[6] ಅನಿರುಕ್ತವೆಂದರೂ ಅದೇ, ಅನಿಲಯನ

1. ಆತ್ಮನು ಕೂಟಸ್ಥನಾಗಿರುವುದರಿಂದ ಅವನು ನಿಜವಾಗಿ ನಾಮರೂಪಗಳಾಗಿಯೇ ಪರಿಣಮಿಸಿದನೆಂದೇನೂ ಅಭಿಪ್ರಾಯವಿಲ್ಲ.

2. ಮೂರ್ತಾಮೂರ್ತಗಳ ವಿವರವನ್ನು ಬೃ. ೨-೩-೧ರಿಂದ ೬ರಲ್ಲಿ ವರ್ಣಿಸಿರುವುದನ್ನು ನೋಡಿರಿ.

3. ಎದುರಿಗೆ ಇರುವುದನ್ನು 'ಸತ್' (ಇರುವುದು) ಎಂದೂ, ದೂರದಲ್ಲಿ ಕಾಣದಂತಿರುವುದನ್ನು ತ್ಯತ್ (ಅದು) ಎಂದೂ ಕರೆಯುವರು ; ಇಲ್ಲಿ ಮೂರ್ತವನ್ನು 'ಸತ್' ಎಂದೂ ಅಮೂರ್ತವನ್ನು 'ತ್ಯತ್' ಎಂದೂ ಕರೆದಿದೆ ಎಂದು ಅಭಿಪ್ರಾಯ.

4. ಅನಿರುಕ್ತ ಎಂಬುದು ಅವ್ಯಾಕೃತದ ವಿಶೇಷಣವೆಂದೂ ನಿರುಕ್ತವೆಂಬುದು ವ್ಯಾಕೃತದ ವಿಶೇಷಣವೆಂದೂ ತಿಳಿಯಬಾರದು ಎಂದು ಭಾವ. ಈ ವಾಕ್ಯವನ್ನು "ಆತ್ಮನು ಸತ್ತು, ತ್ಯತ್ತು ಇವೆರಡೂ ಹೇಗೆ ಆದನೋ ಹಾಗೆಯೇ ನಿರುಕ್ತಾನಿರುಕ್ತಗಳೂ ಆದನು" ಎಂದೂ ಅರ್ಥಮಾಡಬಹುದಾಗಿದೆ.

5. ಇವು ಅವ್ಯಾಕೃತದ ಧರ್ಮಗಳೆಂದು ಭಾವಿಸಬೇಕಾದದ್ದಿಲ್ಲ.

6. ಪ್ರಾಣ, ಶರೀರದೊಳಗಿನ ಆಕಾಶ - ಇವುಗಳು ಅಧ್ಯಾತ್ಮವಾದ ಅಮೂರ್ತ. ಮೂರ್ತಾಮೂರ್ತಗಳು ಅಧಿದೈವತ. ಅಧ್ಯಾತ್ಮ - ಎರಡೂ ರೂಪದಿಂದಿರುತ್ತವೆ. ಬೃ. ೨-೩-೩, ೪.

ಪೆಂದರೂ (ಅದೇ) ಆದ್ದರಿಂದ ಈ ಅಮೂರ್ತದ ವಿಶೇಷಣಗಳು ವ್ಯಾಕೃತಕ್ಕೆ ಸಂಬಂಧಪಟ್ಟಿವುಗಳೇ (ಆಗಿರುತ್ತವೆ). ಚೇತನಾಚೇತನಗಳೂ ಸತ್ಯಾನೃತಗಳೂ ಬ್ರಹ್ಮವೇ.

ಚೇತನಾಚೇತನಗಳೂ ಸತ್ಯಾನೃತಗಳೂ ಬ್ರಹ್ಮವೇ

(ಭಾಷ್ಯ)

೧೮೦. ವಿಜ್ಞಾನಂ ಚೇತನಮ್, ಅವಿಜ್ಞಾನಂ ತದ್ರಹಿತಮ್ ಅಚೇತನಮ್, ಪಾಷಾಣಾದಿ । ಸತ್ಯಂ ಚ ವ್ಯವಹಾರವಿಷಯಮ್, ಅಧಿಕಾರಾತ್ । ನ ಪರಮಾರ್ಥ ಸತ್ಯಮ್ । ಏಕಮೇವ ಹಿ ಪರಮಾರ್ಥಸತ್ಯಂ ಬ್ರಹ್ಮ । ಇಹ ಪುನರ್ವ್ಯವಹಾರ ವಿಷಯಮ್ ಆಪೇಕ್ಷಿಕಂ ಸತ್ಯಮ್, ಮೃಗತೃಷ್ಣಿಕಾದ್ಯನೃತಾಪೇಕ್ಷಯಾ ಉದಕಾದಿ ಸತ್ಯಮ್ ಉಚ್ಯತೇ । ಅನೃತಂ ಚ ತದ್ವಿಪರೀತಮ್ । ಕಿಂ ಪುನರೇತತ್ ಸರ್ವಮ ಭವತ್ ? ಸತ್ಯಂ ಪರಮಾರ್ಥಸತ್ಯಮ್ । ಕಿಂ ಪುನಸ್ತತ್ ? ಬ್ರಹ್ಮ । "ಸತ್ಯಂ ಜ್ಞಾನಮನನ್ತಂ ಬ್ರಹ್ಮ" (೨-೧) ಇತಿ ಪ್ರಕೃತತ್ವಾತ್ ॥

(ಭಾಷ್ಯಾರ್ಥ)

ವಿಜ್ಞಾನವೆಂದರೆ ಚೇತನವು ; **ಅವಿಜ್ಞಾನವೆಂದರೆ** ಅದಿಲ್ಲದ್ದು ಅಚೇತನವು, ಕಲ್ಲು ಮುಂತಾದದ್ದು.[1] **ಸತ್ಯವು** ಎಂದರೆ ವ್ಯವಹಾರವಿಷಯವಾದ ಸತ್ಯವು ; ಏಕೆಂದರೆ (ವ್ಯವಹಾರದ ವಿಷಯದ್ದೇ) **ಈ** ಪ್ರಕರಣವು. (ಇದು) ಪರಮಾರ್ಥಸತ್ಯವಲ್ಲ ; ಏಕೆಂದರೆ **ಪರಮಾರ್ಥಸತ್ಯವಾದ** ಬ್ರಹ್ಮವು ಒಂದೇ. ಇಲ್ಲಿಯೋ ಎಂದರೆ ವ್ಯವಹಾರ ವಿಷಯವಾದ ಬಿಸಿಲುಕುದುರೆಯ (ನೀರೇ) ಮುಂತಾದ **ಅನೃತಕ್ಕೆ** ಹೋಲಿಸಿದರೆ (ಸತ್ಯ)ವಾಗುವ **ಆಪೇಕ್ಷಿಕಸತ್ಯವಾಗಿರುವ**[2] ನೀರು ಮುಂತಾದದ್ದನ್ನೇ ಸತ್ಯ ಎಂದು ಕರೆದಿರುತ್ತದೆ. ಮತ್ತು ಇದಕ್ಕೆ ವಿರುದ್ಧವಾಗಿರುವದು ಅನೃತವು.

(ಪ್ರಶ್ನೆ :-) ಇದೆಲ್ಲವೂ ಆದದ್ದು ಯಾವದು ?

(ಉತ್ತರ :-) ಸತ್ಯವು ; ಪರಮಾರ್ಥಸತ್ಯವು.

(ಪ್ರಶ್ನೆ :-) ಆ (ಪರಮಾರ್ಥಸತ್ಯ)ವೆಂಬುದಾದರೂ ಯಾವದು ?

---

1. ಕಲ್ಲು ಮುಂತಾದ ಜಡವಸ್ತುಗಳೂ ಚೇತನವಾದ ಬ್ರಹ್ಮದ ಕಾರ್ಯವೇ ಆದರೂ ಅವುಗಳಲ್ಲಿ ಚೈತನ್ಯವು ಸ್ಫುಟವಾಗಿ ತೋರುತ್ತಿಲ್ಲ. ಸೂ. ಭಾ. ೨-೧-೬.

2. ಹೋಲಿಕೆಯ ಸತ್ಯ. ನೀರು ಬಾಯಾರಿಕೆಯನ್ನು ಹಿಂಗಿಸುತ್ತದೆ ; ಬಿಸಿಲು ಕುದುರೆಯ ನೀರು ಹಿಂಗಿಸುವದಿಲ್ಲ ಆದ್ದರಿಂದ ನೀರು ಆಪೇಕ್ಷಿಕಸತ್ಯ ; ಬಿಸಿಲು ಕುದುರೆಯ ನೀರು ಅನೃತ.

(ಉತ್ತರ :-) ಬ್ರಹ್ಮವೇ. ''ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು'' (೨-೧) ಎಂದು ಪ್ರಕೃತವಾಗಿರುವದರಿಂದ ಬ್ರಹ್ಮವೇ (ಆ ಪರಮಾರ್ಥ ಸತ್ಯವು).

ಬ್ರಹ್ಮಕ್ಕೆ ಸತ್ಯವೆಂದು ಹೆಸರು

(ಭಾಷ್ಯ)

೧೮೧. ಯಸ್ಮಾತ್ ಸತ್ಯಾದಿಕಂ ಮೂರ್ತಾಮೂರ್ತಧರ್ಮಜಾತಂ ಯತ್ಕಿಂಚೇದಂ ಸರ್ವಮ್ ಅವಿಶಿಷ್ಯಂ ವಿಕಾರಜಾತಮ್ ವಿಕಮೇವ ಸಚ್ಛಬ್ದವಾಚ್ಯಂ ಬ್ರಹ್ಮ ಅಭವತ್, ತದ್ವ್ಯತಿರೇಕೇಣ ಅಭಾವಾತ್ ನಾಮರೂಪವಿಕಾರಸ್ಯ । ತಸ್ಮಾತ್ ತದ್ ಬ್ರಹ್ಮ 'ಸತ್ಯಮ್' ಇತಿ ಆಚಕ್ಷತೇ ಬ್ರಹ್ಮವಿದಃ ॥

(ಭಾಷ್ಯಾರ್ಥ)

ಸತ್ತು, ತ್ಯತ್ತು ಮುಂತಾದ ಮೂರ್ತಾಮೂರ್ತಗಳ ಧರ್ಮಸಮೂಹ ವೆಲ್ಲವೂ, ಯಾವಯಾವ ಈ ಕಾರ್ಯಸಮೂಹವೆಂಬುದಿದೆಯೋ ಇದೆಲ್ಲವೂ ಒಂದನ್ನೂ ಬಿಡದೆ ಎಲ್ಲವೂ, ಆ (ಬ್ರಹ್ಮಕ್ಕಿಂತ) ಬೇರೆಯಾಗಿ ನಾಮರೂಪಕಾರ್ಯವು ಇಲ್ಲದಿರುವದರಿಂದ, ಸತ್ ಎಂಬ ಶಬ್ದಕ್ಕೆ ವಾಚ್ಯವಾಗಿರುವ ಆ ಬ್ರಹ್ಮವೊಂದೇ (ಎಲ್ಲವೂ) ಆಯಿತಷ್ಟೇ ? ಆ ಕಾರಣದಿಂದ ಅದನ್ನು (ಆ) ಬ್ರಹ್ಮವನ್ನು 'ಸತ್ಯವು' ಎಂದು ಬ್ರಹ್ಮಜ್ಞಾನಿಗಳು ಕರೆಯುತ್ತಾರೆ.

ಬ್ರಹ್ಮದ ಅಸ್ತಿತ್ವದ ಉಪಸಂಹಾರ

ತದಪ್ಯೇಷ ಶ್ಲೋಕೋ ಭವತಿ ॥೮॥

(ಇತಿ ಷಷ್ಠೋಽನುವಾಕಃ)

೮. ಅದೇ ವಿಷಯದಲ್ಲಿ ಈ ಶ್ಲೋಕವಿರುವದು.

(ಆರನೆಯ ಅನುವಾಕವು ಮುಗಿಯಿತು)

ಅಸದ್ವಾ ಇದಮಗ್ರ ಆಸೀತ್ । ತತೋ ವೈ ಸದಜಾಯತ । ತದಾತ್ಮಾನಗ್ಂ ಸ್ವಯಮಕುರುತ । ತಸ್ಮಾತ್ ತತ್ಸುಕೃತಮುಚ್ಯತ ಇತಿ ॥೧॥

೧. ಇದು ಮೊದಲು ಅಸತ್ತೇ ಆಗಿತ್ತು. ಅದರಿಂದಲೇ ಸತ್ತು ಹುಟ್ಟಿತು, ಅದು ತನ್ನನ್ನು ತಾನೇ ಉಂಟುಮಾಡಿತು. ಆದ್ದರಿಂದ ಅದು ಸುಕೃತ ಎನಿಸುತ್ತದೆ.

(ಭಾಷ್ಯ)

೧೮೨. ಅಸ್ತಿ, ನಾಸ್ತಿ - ಇತ್ಯಮುಪ್ರಶ್ನಃ ಪ್ರಕೃತಃ । ತಸ್ಯ ಪ್ರತಿವಚನವಿಷಯೇ ಏತಮಕ್ತಮ್ - ''ಆತ್ಮಾ ಅಕಾಮಯತ ಬಹು ಸ್ಯಾಮ್'' ಇತಿ । ಸ ಯಥಾಕಾಮಂ ಚ ಆಕಾಶಾದಿಕಾರ್ಯಂ ಸತ್ಯಾದಾದಿಲಕ್ಷಣಂ ಸೃಷ್ಟ್ವಾ, ತದನುಪ್ರವಿಶ್ಯ ಪಶ್ಯನ್ ಶೃಣ್ವನ್ ಮನ್ವಾನೋ ವಿಜಾನನ್ ಬಹ್ವಭವತ್ । ತಸ್ಮಾತ್ ತದೇವೇದಮ್ ಆಕಾಶಾದಿಕಾರಣಂ ಕಾರ್ಯಸ್ಥಂ ಪರಮೇ ವ್ಯೋಮನ್ ಹೃದಯಗುಹಾಯಾಂ ನಿಹಿತಂ ತತ್ಪ್ರತ್ಯಯಾವ ಭಾಸವಿಶೇಷೇಣ ಉಪಲಭ್ಯಮಾನಮ್ ಅಸ್ತಿ ಇತ್ಯೇವಂ ವಿಜಾನೀಯಾತ್ ಇತ್ಯುಕ್ತಂ ಭವತಿ । ತದ್ ಏತಸ್ಮಿನ್ ಅರ್ಥೇ ಬ್ರಾಹ್ಮಣೋಕ್ತೇ ಏಷ ಶ್ಲೋಕಃ ಮನ್ತ್ರಃ ಭವತಿ । ಯಥಾ ಪೂರ್ವೇಷು ಅನ್ನಮಯಾದ್ಯಾತ್ಮಪ್ರಕಾಶಕಾಃ ಪಞ್ಚಸ್ವಪಿ, ಏವಂ ಸರ್ವಾನ್ತರತಮಾತ್ಯಾಸ್ತಿತ್ವಪ್ರಕಾಶಕೋಽಪಿ ಮನ್ತ್ರಃ ಕಾರ್ಯದ್ವಾರೇಣ ಭವತಿ ॥

(ಭಾಷ್ಯಾರ್ಥ)

(ಬ್ರಹ್ಮವು) ಇದೆಯೊ, ಇಲ್ಲವೊ ? - ಎಂಬ ಅನುಪ್ರಶ್ನೆಯು ಪ್ರಕೃತವಾಗಿತ್ತು. ಅದಕ್ಕೆ ಉತ್ತರವನ್ನು ಹೇಳುವ ಸಂದರ್ಭದಲ್ಲಿ ''ಆತ್ಮನು ಬಹುವಾಗುವೆನು ಎಂದು ಕಾಮಿಸಿದನು'' ಎಂದು ಹೇಳಲಾಯಿತು. ಅವನು (ಈ) ಕಾಮಕ್ಕೆ ಅನುಗುಣವಾಗಿ ಸತ್ತು, ತ್ಯತ್ತು - ಎಂದುಮುಂತಾಗಿರುವ[1] ಸ್ವಭಾವದ ಆಕಾಶವೇ ಮುಂತಾದ ಕಾರ್ಯವನ್ನು ಸೃಷ್ಟಿಸಿ ಅದರೊಳಗೆ ಹೊಕ್ಕು ನೋಡುವವನಾಗಿ, ಕೇಳುವವನಾಗಿ, ಆಲೋಚಿಸುವವನಾಗಿ, ಅರಿತುಕೊಳ್ಳುವವನಾಗಿ ಬಹುವಾದನು. ಆದ್ದರಿಂದ ಆಕಾಶವೇ ಮುಂತಾದದ್ದಕ್ಕೆ ಕಾರಣವಾಗಿರುವ ಅದೇ ಈ (ಬ್ರಹ್ಮವು) ಕಾರ್ಯದಲ್ಲಿದ್ದುಕೊಂಡು ಪರಮಾಕಾಶದಲ್ಲಿರುವ ಹೃದಯಗುಹೆಯಲ್ಲಿ ಇಡಲ್ಪಟ್ಟು ಆ (ಹೃದಯದ) ಪ್ರತ್ಯಯಗಳ ಆಯಾ ಹೊಳಪಿನ ಬಲದಿಂದ[2] ಕಂಡುಬರುವದರಿಂದ (ಅದು) 'ಇದೆ' ಎಂದೇ ತಿಳಿಯಬೇಕು ಎಂದು ಹೇಳಿದಂತೆ ಆಯಿತು. ಬ್ರಾಹ್ಮಣದಲ್ಲಿ ಹೇಳಿರುವ ಅದೇ ಈ ವಿಷಯದಲ್ಲಿ ಈ ಶ್ಲೋಕವು ಎಂದರೆ ಮಂತ್ರವು

---

1. ಸತ್ತು, ತ್ಯತ್ತು ; ನಿರುಕ್ತ, ಅನಿರುಕ್ತ ; ನಿಲಯನ, ಅನಿಲಯನ ; ಸತ್ಯ, ಅನೃತ - ಈ ಜೋಡಿಗಳನ್ನು ಹೇಳಿರುವದು ಇಡಿಯ ಪ್ರಪಂಚದ ಸ್ವಭಾವವನ್ನು ವಿವರಿಸುವದಕ್ಕೆ.

2. ಆಯಾ ವಿಷಯದ ಆಕಾರದಲ್ಲಿರುವ ಪ್ರತ್ಯಯಗಳಲ್ಲಿ ಆತ್ಮನ ಬೆಳಕು ಮೂರು ಹೊಳೆಯುವದರಿಂದ ತೋರುವ ಹೊಳಪುಗಳು. ಭಾ. ಭಾ. ೧೦೬ರಲ್ಲಿ ಜ್ಞಾನಶಬ್ದದ ವ್ಯಾಖ್ಯಾನದಲ್ಲಿ ಇವುಗಳ ವಿವರವನ್ನು ಕೊಟ್ಟಿದೆ. ಈ ಆಭಾಸಗಳಿಂದ ಜ್ಞಾನರೂಪನಾದ ಆತ್ಮನನ್ನು ಅರಿತುಕೊಳ್ಳಬಹುದು.

(ತೊಡಗಿ)ರುತ್ತದೆ. ಹಿಂದಿನ ಐದು (ಪರ್ಯಾಯ)ಗಳಲ್ಲಿಯೂ[1] ಹೇಗೆ ಅನ್ನ ಮಯನೇ ಮುಂತಾದ ಆತ್ಮರನ್ನು ಪ್ರಕಾಶಗೊಳಿಸುವ (ಮಂತ್ರಗಳು ಬಂದಿದ್ದವೋ) ಹಾಗೆಯೇ ಎಲ್ಲಕ್ಕೂ ತೀರ ಒಳಗಿರುವ ಆತ್ಮನು ಇರುವನೆಂಬುದನ್ನು ಕಾರ್ಯ ದ್ವಾರದಿಂದ ತಿಳಿಸುವ (ಈ) ಮಂತ್ರವೂ ಬಂದಿರುತ್ತದೆ (ಎಂದರ್ಥ).

೧೨. ಸುಕೃತಪ್ರಸಿದ್ಧಿಯಿಂದ ಬ್ರಹ್ಮವು ಇದೆ

ಅವ್ಯಾಕೃತವು ವ್ಯಾಕೃತವಾಗಿರುತ್ತದೆ

(ಭಾಷ್ಯ)

೧೪೩. ಅಸದ್ವಾ ಇದಮಗ್ರ ಆಸೀತ್ । ಅಸತ್ ಇತಿ ವ್ಯಾಕೃತನಾಮರೂಪ ವಿಶೇಷವಿಪರೀತರೂಪಮ್ ಅವಿಕೃತಂ ಬ್ರಹ್ಮ ಉಚ್ಯತೇ । ನ ಪುನಃ ಅತ್ಯನ್ತಮೇವ ಅಸತ್ । ನ ಹಿ ಅಸತಃ ಸಜ್ಜನ್ಮಾಸ್ತಿ । ಇದಮ್ ಇತಿ ನಾಮರೂಪವಿಶೇಷವದ್ ವ್ಯಾಕೃತಂ ಜಗತ್ । ಅಗ್ರೇ ಪೂರ್ವಂ ಪ್ರಾಗುತ್ಪತ್ತೇಃ ಬ್ರಹ್ಮೈವ ಅಸಚ್ಛಬ್ದವಾಚ್ಯಮ್ ಆಸೀತ್ । ತತಃ ಅಸತಃ ವೈ ಸತ್ ಪ್ರವಿಭಕ್ತನಾಮರೂಪವಿಶೇಷಮ್ ಅಜಾಯತ ಉತ್ಪನ್ನಮ್ । ಕಿಂ ತತಃ ಪ್ರವಿಭಕ್ತಂ ಕಾರ್ಯಮ್ ಇತಿ ಪಿತುರಿವ ಪುತ್ರಃ ? ನ ಇತ್ಯಾಹ । ತತ್ ಅಸಚ್ಛಬ್ದವಾಚ್ಯಂ ಸ್ವಯಮೇವ ಆತ್ಮಾನಮೇವ ಅಕುರುತ ಕೃತ ವತ್ ॥

(ಭಾಷ್ಯಾರ್ಥ)

'ಅಸತ್ತೇ' ಇದು ಮೊದಲು ಆಗಿತ್ತು. 'ಅಸತ್ತು' ಎಂದರೆ ಬಿಡಿಯಾಗಿರುವ ನಾಮರೂಪಗಳೆಂಬ ವಿಶೇಷ(ರೂಪಕ್ಕೆ) ವಿರುದ್ಧವಾದ ರೂಪವುಳ್ಳ ವಿಕಾರವಾಗದೆ ಇರುವ[2] ಬ್ರಹ್ಮದ ಹೆಸರು. (ಇಷ್ಟೇ ಹೊರತು) ಅತ್ಯಂತವಾಗಿ ಅಸತ್ತೇ (ಇಲ್ಲದ್ದೇ) ಎಂದ(ರ್ಥವ)ಲ್ಲ. ಏಕೆಂದರೆ ಅಸತ್ತಿನಿಂದ ಸತ್ತು ಹುಟ್ಟಲಾರದು.[3] 'ಇದು' ಎಂದರೆ

1. ಈ ಪರ್ಯಾಯಗಳಲ್ಲಿ ಬರಿಯ ಕೋಶಗಳನ್ನೇ ವಿವರಿಸಿಲ್ಲ. ಕೊನೆಯ ಪರ್ಯಾಯದ "ಅಸನ್ನೇವ ಸ ಭವತಿ" ಎಂಬ ಶ್ಲೋಕಕ್ಕೆ ಅವತರಣಿಕೆಯಾಗಿರುವ ಭಾ. ಭಾ. ೧೪೯ನ್ನು ನೋಡಿರಿ.

2. "ಅವ್ಯಾಕೃತಂ" ಎಂಬ ವಾ॥ ಪಾಠದಲ್ಲಿ ವಿಂಗಡವಾಗದಿರುವ ಎಂದು ಕನ್ನಡಿಸಬೇಕು.

3. ಛಾಂ. ೬-೨-೩ರ ಸೂಚನೆ. ಈ ಶ್ರುತಿಯಲ್ಲಿಯೂ ಛಾಂ. ೩-೧೯-೧ರಲ್ಲಿಯೂ ಅಸತ್ತೆಂದರೆ ಅವ್ಯಾಕೃತನಾಮರೂಪಗಳ ಬೀಜವಾದ ಬ್ರಹ್ಮವೇ ಎಂದು ಸೂ. ಭಾ. ೧-೪-೧೫ (ಭಾ. ಭಾ. ೩೬೮)ರಲ್ಲಿ ನಿಶ್ಚಯಿಸಿದೆ. ಗೀ. ಭಾ. ೯-೧೯ (ಭಾ. ಭಾ. ೫೭೩)ರಲ್ಲಿ ಸತ್, ಅಸತ್ - ಎಂಬ ಶಬ್ದಗಳ ವ್ಯಾಖ್ಯಾನವನ್ನು ನೋಡಿರಿ.

ನಾಮರೂಪಗಳೆಂಬ ವಿಶೇಷ(ರೂಪ)ವುಳ್ಳ ವ್ಯಾಕೃತವಾದ ಜಗತ್ತು ; ಮೊದಲು ಎಂದರೆ ಮುಂಚೆ, ಸೃಷ್ಟಿಗೆ ಪೂರ್ವದಲ್ಲಿ ಅಸತ್ತೆಂಬ ಶಬ್ದಕ್ಕೆ ವಾಚ್ಯವಾದ ಬ್ರಹ್ಮವೇ ಆಗಿತ್ತು.[1] ಅದರಿಂದ(ಲೇ) ಎಂದರೆ (ಆ) ಅಸತ್ತಿನಿಂದಲೇ ಸತ್ತು ಎಂದರೆ ನಾಮ ರೂಪ ಎಂಬ ವಿಶೇಷರೂಪಗಳಿಂದ ಏಂಗಡವಾಗಿರುವ (ಜಗತ್ತು) ಹುಟ್ಟಿತು, ಉಂಟಾಯಿತು. ತಂದೆಗಿಂತ (ಬೇರೆಯಾಗಿ) ಮಗನು (ಹುಟ್ಟುವಂತೆ) ಅದಕ್ಕಿಂತ ತೀರ ಬೇರೆಯಾಗಿ (ಹುಟ್ಟಿ)ತೇನು ? ಎಂದರೆ 'ಹಾಗಲ್ಲ' - ಎಂದು (ಶ್ರುತಿ) ಹೇಳುತ್ತಿದೆ : ಅದು (ಆ) ಅಸತ್ ಎಂಬ ಶಬ್ದದಿಂದ ಹೇಳಲ್ಪಡುವ (ಬ್ರಹ್ಮವು) ತಾನೇ ತನ್ನನ್ನೇ ಮಾಡಿತು, ಮಾಡಿಕೊಂಡಿತು.

(ಭಾಷ್ಯ)

೧೦ಳ. ಯಸ್ಮಾತ್ ಏವಮ್, ತಸ್ಮಾದ್ ತತ್ ಬ್ರಹ್ಮೈವ ಸುಕೃತಂ ಸ್ವಯಂಕರ್ತೃ ಉಚ್ಯತೇ । ಸ್ವಯಂಕರ್ತೃಬ್ರಹ್ಮ ಇತಿ ಪ್ರಸಿದ್ಧಂ ಲೋಕೇ ಸರ್ವಕಾರಣತ್ವಾತ್ । ಯಸ್ಮಾದ್ ವಾ ಸ್ವಯಮ್ ಅಕರೋತ್ ಸರ್ವಂ ಸರ್ವಾತ್ಮನಾ ತಸ್ಮಾತ್ ಪುಣ್ಯರೂಪೇಣಾಪಿ ತದೇವ ಬ್ರಹ್ಮ ಕಾರಣಂ ಸುಕೃತಮ್ ಉಚ್ಯತೇ । ಸರ್ವಥಾಪಿ ತು ಫಲಸಂಬನ್ಧಾದಿಕಾರಣಂ ಸುಕೃತಶಬ್ದವಾಚ್ಯಂ ಪ್ರಸಿದ್ಧಂ ಲೋಕೇ ಯದಿ ಪುಣ್ಯಂ ಯದಿ ವಾ ಅನ್ಯತ್ ಸಾ ಪ್ರಸಿದ್ಧಿಃ ನಿತ್ಯೇ ಚೇತನವತ್ಕಾರಣೇ ಸತಿ ಉಪಪದ್ಯತೇ । ತಸ್ಮಾತ್ ಅಸ್ತಿ ತದ್ ಬ್ರಹ್ಮ । ಸುಕೃತಪ್ರಸಿದ್ಧೇಃ ॥

(ಭಾಷ್ಯಾರ್ಥ)

ಹೀಗಿರುತ್ತದೆಯಷ್ಟೇ ? ಈ ಕಾರಣದಿಂದ ಅದು ಎಂದರೆ ಬ್ರಹ್ಮವೇ ಸುಕೃತವು ಎಂದರೆ ಸ್ವಯಂಕರ್ತೃ[3] ಎಂದು ಎನಿಸಿಕೊಳ್ಳುತ್ತದೆ. ಬ್ರಹ್ಮವು ಎಲ್ಲಕ್ಕೂ ಕಾರಣವಾಗಿರುವದರಿಂದ ಸ್ವಯಂಕರ್ತೃ ಎಂದು ಲೋಕದಲ್ಲಿ[4] ಪ್ರಸಿದ್ಧವಾಗಿರುತ್ತದೆ. ಅಥವಾ (ಬ್ರಹ್ಮವು) ತಾನೇ ಎಲ್ಲವನ್ನೂ ಎಲ್ಲದರ ರೂಪದಿಂದ[5] ಮಾಡಿತಾದ್ದರಿಂದ

---

1. ಈಗಲೂ ಬ್ರಹ್ಮವೇ, ಆದರೆ ವ್ಯಾಕೃತವೂ ಆಗಿದೆ. ಐ.ಭಾ. ೧-೧ (ಭಾ. ಭಾ. ೨೮) ನೋಡಿ.

2. ಸೂ.ಭಾ. ೧-೪-೨೪ನ್ನು ನೋಡಿರಿ.

3. ತಾನೇ ಸ್ವತಂತ್ರವಾಗಿ ಮಾಡುವದು, ಮತ್ತೊಂದರ ಪ್ರೇರಣೆಯಿಂದ ಅಥವಾ ಸಹಾಯದಿಂದ ಮಾಡತಕ್ಕದ್ದಲ್ಲ. ಸುಕೃತ ಎಂಬಲ್ಲಿ ಕ್ತ ಎಂಬ ಪ್ರತ್ಯಯವನ್ನು ಕರ್ತೃರ್ಥದಲ್ಲಿ ಉಪಯೋಗಿಸಿರುವದು ವೈದಿಕಪ್ರಯೋಗ.

4. ಶಾಸ್ತ್ರಜ್ಞರ ಲೋಕದಲ್ಲಿ.

5. ಜಗತ್ತಿನಲ್ಲಿ ಕಾರ್ಯವನ್ನುಂಟುಮಾಡುವ ಕಾರಣವೆಲ್ಲ ಬ್ರಹ್ಮವೇ ; ಆದ್ದರಿಂದ ಪುಣ್ಯ

ಪುಣ್ಯರೂಪದಿಂದಲೂ ಅದೇ ಬ್ರಹ್ಮವೇ ಕಾರಣವಾಗಿರುತ್ತದೆಯಾಗಿ[1] ಸುಕೃತ ಎನಿಸಿಕೊಳ್ಳುತ್ತದೆ. ಹೇಗೇ ಆಗಿರಲಿ, ಫಲಸಂಬಂಧವೇ ಮುಂತಾದದ್ದಕ್ಕೆ[2] ಕಾರಣವಾಗಿ ಸುಕೃತ ಎಂಬ ಶಬ್ದಕ್ಕೆ ವಾಚ್ಯವಾಗಿರುವ ಪದಾರ್ಥವು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ[3] (ಅಲ್ಲಿ ಸುಕೃತವೆಂದರೆ) ಪುಣ್ಯವೇ ಆಗಲಿ ಅಥವಾ ಮತ್ತೊಂದೇ ಆಗಿರಲಿ,[4] ಆ ಪ್ರಸಿದ್ಧಿಯು ನಿತ್ಯವಾಗಿರುವ ಚೇತನವುಳ್ಳ ಕಾರಣವೊಂದಿದ್ದರೇ ಹೊಂದುತ್ತದೆ. ಆದ್ದರಿಂದ ಆ ಬ್ರಹ್ಮವು ಇದೆ ; ಏಕೆಂದರೆ ಸುಕೃತವು (ಇದೆ) ಎಂಬ ಪ್ರಸಿದ್ಧಿಯಿರುತ್ತದೆ.

೧೩. ಆನಂದಹೇತುವಾದ್ದರಿಂದ ಬ್ರಹ್ಮವು ಇದೆ

(ಭಾಷ್ಯ)

೧೮೫. ಇತಶ್ಚಾಸ್ತಿ । ಕುತಃ ? ರಸತ್ವಾತ್ । ಕುತೋ ರಸತ್ವಪ್ರಸಿದ್ಧಿರ್ಬ್ರಹ್ಮಣ ಇತಿ ? ಅತ ಆಹ :-

(ಭಾಷ್ಯಾರ್ಥ)

ಈ ಕಾರಣದಿಂದಲೂ (ಬ್ರಹ್ಮವು) ಇದೆ. ಯಾವ ಕಾರಣದಿಂದ ? - ಎಂದರೆ ರಸವಾಗಿರುವದರಿಂದ. ಬ್ರಹ್ಮವು ರಸವೆಂದು ಹೇಗೆ ಗೊತ್ತಾಗುತ್ತದೆ ? - ಎಂದರೆ ಅದಕ್ಕೆ (ಶ್ರುತಿ) ಹೇಳುತ್ತದೆ :-

ಯದ್ವೈ ತತ್ ಸುಕೃತಮ್ । ರಸೋ ವೈ ಸಃ । ರಸಗ್ಂ ಹ್ಯೇವಾಯಂ ಲಬ್ಧ್ವಾऽऽನನ್ದೀ ಭವತಿ ॥೭॥

ರೂಪದಿಂದ ಕಾರಣವಾಗಿರುವದೂ ಬ್ರಹ್ಮವೇ. (ಸೂ. ಭಾ. ೨-೩-೧೩, ಭಾ. ಭಾ ೧೧೩) ; ಛಾಂ. ಭಾ. ೬-೨-೩ (''ತತ್ತೇಜ ಐಕ್ಷತ'' ಎಂಬುದರ ವ್ಯಾಖ್ಯಾನ) - ಇವುಗಳಲ್ಲಿ ವ್ಯಾವಹಾರಿಕ ಕಾರಣರೂಪವಾಗಿಯೂ ಬ್ರಹ್ಮವೇ ಇರುವದೆಂದು ಹೇಳಿದೆ ಸೂ. ಭಾ. ೧-೪-೨೬ರಲ್ಲಿ ಬ್ರಹ್ಮವು ಎಲ್ಲದರ ರೂಪದಿಂದ ಉಂಟಾಗುವದೆಂದೂ ಹೇಳಿದೆ

1. ಪುಣ್ಯಫಲವನ್ನು ಕೊಡುತ್ತದೆಯಾಗಿ.

2. ಫಲವನ್ನು ಸೇರಿಸುವದಲ್ಲದೆ ಅದರ ಭೋಗ, ಸುಖ - ಇವುಗಳಿಗೆ.

3 'ಸುಕೃತವಿಶೇಷದಿಂದ ಇಂಥ ಫಲವು ಬಂದಿದೆ' ಎಂದು ಜನರು ಅನ್ನುವರು.

4. ಕರ್ಮವಲ್ಲದೆ ಅದರ ಫಲವಾದ ಅದೃಷ್ಟ, ಅಪೂರ್ವ ಎಂಬುದೊಂದು ಉತ್ಪನ್ನವಾಗಿ ಫಲವನ್ನು ಕೊಡುವದೆಂದು ಮೀಮಾಂಸಕರೆನ್ನುತ್ತಿದ್ದರು. ಪುಣ್ಯವೆಂದರೆ ಕರ್ಮವೇ ಆಗಲಿ ಅಪೂರ್ವವೇ ಆಗಲಿ ಚೇತನರೂಪನಾದ ಈಶ್ವರನ ಅನುಗ್ರಹವಿಲ್ಲದೆ ಫಲವನ್ನು ಕೊಡಲಾರದು ಎಂದು ಅಭಿಪ್ರಾಯ. ಸೂ. ಭಾ. ೩-೩-೪೧ ; ಬೃ. ಭಾ. ೩-೯-೯. ''ದದತೋ ಮನುಷ್ಯಾಃ ಪ್ರಶಂಸನ್ತಿ'' ಎಂಬುದರ ವ್ಯಾಖ್ಯಾನವನ್ನು ನೋಡಿ.

೨. ಆ ಸುಕೃತವೆಂಬುದು ಇದೆಯಲ್ಲ, ಅದು ರಸವೇ. ರಸವನ್ನು ಪಡೆದೇ ಅಲ್ಲವೆ, ಇವನು ಆನಂದಿಯಾಗುತ್ತಾನೆ ?

(ಭಾಷ್ಯ)

೧೮೬. ಯದ್ವೈ ತತ್ ಸುಕೃತಮ್, ರಸೋ ವೈ ಸಃ । ರಸೋ ನಾಮ ತೃಪ್ತಿ ಹೇತುಃ ಆನನ್ದಕರಃ ಮಧುರಾಮ್ಲಾದಿಃ ಪ್ರಸಿದ್ಧೋ ಲೋಕೇ । ರಸಮೇವ ಹಿ[1] ಅಯಂ ಲಬ್ಧ್ವಾ ಪ್ರಾಪ್ಯ ಆನನ್ದೀ ಸುಖೀ ಭವತಿ । ನಾಸತಃ ಆನನ್ದಹೇತುತ್ವಂ ದೃಷ್ಟಂ ಲೋಕೇ । ಬಾಹ್ಯಾನನ್ದಸಾಧನರಹಿತಾ ಅಪಿ ಅನೀಹಾ ನಿರೇಷಣಾ ಬ್ರಾಹ್ಮಣಾಃ ಬಾಹ್ಯರಸಲಾಭಾದಿವ ಸಾನನ್ದಾ ದೃಶ್ಯನ್ತೇ ವಿದ್ವಾಂಸಃ । ನೂನಂ ಬ್ರಹ್ಮೈವ ರಸ ಸ್ತೇಷಾಮ್ । ತಸ್ಮಾತ್ ಅಸ್ತಿ ತತ್ ತೇಷಾಮಾನನ್ದಕಾರಣಂ ರಸವದ್ ಬ್ರಹ್ಮ ॥

(ಭಾಷ್ಯಾರ್ಥ)

ಆ ಸುಕೃತವೆಂಬುದಿದೆಯಲ್ಲ, ಅದು ರಸವೇ. ರಸ ಎಂದರೆ ತೃಪ್ತಿಗೆ ಕಾರಣವಾಗಿ ಆನಂದವನ್ನುಂಟುಮಾಡುವ ಸಿಹಿ, ಹುಳಿ - ಮುಂತಾದದ್ದೆಂದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ರಸವನ್ನೇ ಈ (ಮನುಷ್ಯನು) ಪಡೆದುಕೊಂಡರೆ, ದೊರಕಿಸಿಕೊಂಡರೆ, ಆನಂದಿಯಾಗುವನು, ಸುಖಿ(ಯಾಗುವನು). ಇಲ್ಲದಿರುವ (ಪದಾರ್ಥವು) ಆನಂದಕ್ಕೆ ಕಾರಣವಾಗಿರುವದು ಲೋಕದಲ್ಲಿ ಕಂಡುಬಂದಿರುವದಿಲ್ಲ. ಹೊರಗಿನ ಆನಂದಸಾಧನಗಳು ಇಲ್ಲದಿದ್ದರೂ, ಯಾವ ಕೆಲಸವನ್ನೂ ಮಾಡದೆ ಯಾವ ಬಯಕೆಯೂ ಇಲ್ಲದೆ(ಯೇ) ಜ್ಞಾನಿಗಳಾದ ಬ್ರಾಹ್ಮಣರು[2] ಹೊರಗಿನ ರಸವನ್ನು ಪಡೆದುಕೊಂಡಂತೆ ಆನಂದದಿಂದೊಡಗೂಡಿರುವದು ಕಂಡುಬರುತ್ತದೆ. (ಆದ್ದರಿಂದ) ಅವರಿಗೆ ನಿಜವಾಗಿಯೂ ಬ್ರಹ್ಮವೇ ರಸ(ವಾಗಿರಬೇಕೆಂದಾಯಿತು). ಆದ್ದರಿಂದ ಅವರಿಗೆ ರಸದಂತೆ ಆನಂದಕ್ಕೆ ಕಾರಣವಾಗಿರುವ ಆ ಬ್ರಹ್ಮವು ಇದೆ (ಎಂದು ಸಿದ್ಧವಾಯಿತು).

೧೪. ಪ್ರಾಣಿಗಳ ಪ್ರವೃತ್ತಿಗೆ ಕಾರಣವಾಗಿರುವದರಿಂದ ಬ್ರಹ್ಮವು ಇದೆ

(ಭಾಷ್ಯ)

೧೮೭. ಇತಶ್ಚಾಸ್ತಿ । ಕುತಃ ? ಪ್ರಾಣನಾದಿಕ್ರಿಯಾದರ್ಶನಾತ್ । ಅಯಮಪಿ ಹಿ

---

1. 'ಹಿ' ಎಂಬ ಮಾತು ಆ।। ಪಾಠದಲ್ಲಿ ಬಿಟ್ಟುಹೋಗಿದೆ.

2 ಬ್ರಹ್ಮದ ಚಿಂತನೆಯಲ್ಲಿ ನಿರತರಾದವರು.

ಪಿನ್ಯೋ ಜೀವತಃ ಪ್ರಾಣೇನ ಪ್ರಾಣಿತಿ ಅಪಾನೇನ ಅಪಾನಿತಿ । ಏವಂ ವಾಯು ವೀಯಾ ಐನ್ದ್ರಿಯಿಕಾಶ್ಚ ಚೇಷ್ಟಾಃ ಸಂಹತ್ಯೇಃ ಕಾರ್ಯಕರಣೈರ್ನಿರ್ವರ್ತ್ಯಮಾನಾ ದೃಶ್ಯನ್ತೇ । ತಚ್ಚ ಏಕಾರ್ಥವೃತ್ತಿತ್ವೇನ ಸಂಹನನಂ ನಾನ್ತರೇಣ ಚೇತನಮ್ ಅಸಂಹತಂ ಸಂಭವತಿ । ಅನ್ಯತ್ರಾದರ್ಶನಾತ್ । ತದಾಹ -

(ಭಾಷ್ಯಾರ್ಥ)

ಈ ಕಾರಣದಿಂದಲೂ (ಬ್ರಹ್ಮವು) ಇದೆ. ಯಾವ ಕಾರಣದಿಂದ ? ಪ್ರಾಣವೇ ಮುಂತಾದ ಕ್ರಿಯೆಗಳು ಕಂಡುಬರುವದರಿಂದ. ಹೇಗೆಂದರೆ : ಬದುಕಿರುವಾತನ ಈ ಶರೀರವುಕೂಡ ಪ್ರಾಣ(ವಾಯುವಿ)ನಿಂದ ಉಸಿರುಬಿಡುತ್ತದೆ, ಅಪಾನ(ವಾಯುವಿ)ನಿಂದ ಉಸಿರನ್ನು ಎಳೆದುಕೊಳ್ಳುತ್ತದೆ. ಹೀಗೆ ವಾಯುವಿನ ಮತ್ತು ಇಂದ್ರಿಯಗಳ ವ್ಯಾಪಾರಗಳು ಒಂದಕ್ಕೊಂದು ಸಂಹತವಾಗಿರುವ ದೇಹೇಂದ್ರಿಯಗಳಿಂದ ನಡೆಸಲ್ಪಡುತ್ತಿರುವದು ಕಂಡುಬರುತ್ತದೆ. ಒಂದೇ ಪ್ರಯೋಜನಕ್ಕಾಗಿ ಕೆಲಸಮಾಡಲು ಹಾಗೆ ಸೇರಿಕೊಂಡಿರುವದೆಂಬುದು ಅಸಂಹತನಾದ ಚೇತನನಿಲ್ಲದೆ ಆಗಲೇ ಆರದು.[1] ಏಕೆಂದರೆ ಬೇರೆಯ ಕಡೆಯಲ್ಲಿ (ಹಾಗೆ ತಾವೇ ಸಂಹತವಾಗಿರುವದು) ಕಂಡಿಲ್ಲ. ಅದನ್ನು (ಈ ಶ್ರುತಿ) ಹೇಳುತ್ತದೆ :-

ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನನ್ದೋ ನ ಸ್ಯಾತ್ । ಏಷ ಹ್ಯೇವಾನನ್ದಯಾತಿ ॥೩॥

೩. ಈ ಆಕಾಶದಲ್ಲಿ ಆನಂದವು ಇಲ್ಲದೆ ಇದ್ದರೆ ಯಾವನು ತಾನೇ ಉಸಿರುತೆಗೆದುಕೊಂಡಾನು, ಯಾವನು ಉಸಿರುಬಿಟ್ಟಾನು ? ಈತನೇ ಅಲ್ಲವೆ, ಆನಂದಪಡಿಸುವವನು ?

(ಭಾಷ್ಯ)

೧೮೮. ಯತ್ ಯದಿ ಏಷ ಆಕಾಶೇ ಪರಮೇ ವ್ಯೋಮ್ನಿ ಗುಹಾಯಾಂ ನಿಹಿತಃ ಆನನ್ದಃ ನ ಸ್ಯಾತ್ ನ ಭವೇತ್ ಕೋ ಹ್ಯೇವ ಲೋಕೇ ಅನ್ಯಾತ್ ಅಪಾನ ಚೇಷ್ಟಾಂ ಕುರ್ಯಾತ್ ? ಇತ್ಯರ್ಥಃ । ಕಃ ಪ್ರಾಣ್ಯಾತ್ ಪ್ರಾಣನಂ ವಾ ಕುರ್ಯಾತ್ ? ತಸ್ಮಾತ್ ಅಸ್ತಿ ತದ್ ಬ್ರಹ್ಮ ಯದರ್ಥಾಃ ಕಾರ್ಯಕರಣಪ್ರಾಣನಾದಿಚೇಷ್ಟಾಃ । ತತ್ಪುನ ಏವ ಚಾನನ್ದೋ ಲೋಕಸ್ಯ । ಕುತಃ ? ಏಷ ಹಿ ಏವ ಪರಃ ಆತ್ಮಾ ಆನನ್ದಯಾತಿ

1. ಸಂಹತವಾಗಿ (ಒಟ್ಟಿಗೆ ಸೇರಿ) ಕೆಲಸಮಾಡುವದೆಂಬುದು ಅಸಂಹತವಾದ ಸ್ವತಂತ್ರವಾದದ್ದರ ಪ್ರಯೋಜನಕ್ಕಾಗಿ. ಕೇ. ಭಾ. ೧-೨ (ಭಾ. ಭಾ. ೧೬) ; ಕ. ಭಾ. ೨-೨-೧ (ಭಾ ಭಾ. ೧೩೪) ; ಐ. ಭಾ. ೧-೩-೧೧ (ಭಾ. ಭಾ. ೫೧) ; ಪ್ರ. ಭಾ. ೪-೧.

ಆನನ್ದಯತಿ ಸುಖಿಯತಿ ಲೋಕಂ ಧರ್ಮಾನುರೂಪಮ್ । ಸ ಏಷಾತ್ಮಾ ಆನನ್ದರೂಪಃ ಅವಿದ್ಯಯಾ ಪರಿಚ್ಛಿನ್ನೋ ವಿಭಾವ್ಯತೇ ಪ್ರಾಣೇಭಿಃ ಇತ್ಯರ್ಥಃ ॥

(ಭಾಷ್ಯಾರ್ಥ)

ಯತ್ = ಯದಿ (ರೆ). ಆಕಾಶದಲ್ಲಿ ಎಂದರೆ ಪರಮವ್ಯೋಮದಲ್ಲಿರುವ ಗುಹೆಯಲ್ಲಿ[1] ಇಡಲ್ಪಟ್ಟಿರುವ ಆನಂದವು ಇಲ್ಲವಾಗಿದ್ದರೆ, ಇರದೆ ಇದ್ದರೆ, ಲೋಕದಲ್ಲಿ ಯಾವನುತಾನೆ 'ಅನ್ಯಾತ್' ಎಂದರೆ ಅಪಾನ(ವ್ಯತ್ತಿಯ) ವ್ಯಾಪಾರವನ್ನು ಮಾಡಿಯಾನು ? ಎಂದರ್ಥ. (ಮತ್ತು) ಯಾವನು ಪ್ರಾಣನಮಾಡಿಯಾನು ? ಎಂದರೆ ಉಸಿರುಬಿಡುವಿಕೆಯನ್ನು ಮಾಡಿಯಾನು ? ಆದ್ದರಿಂದ ಯಾವದಕ್ಕಾಗಿ[2] ದೇಹ, ಇಂದ್ರಿಯಗಳು - ಇವುಗಳ ಪ್ರಾಣವ್ಯಾಪಾರವೇ ಮುಂತಾದವುಗಳು (ನಡೆಯುತ್ತಿರುವವೋ) ಆ ಬ್ರಹ್ಮವು ಇದೆ. ಅದರಿಂದಲೇ ಜನರಿಗೆ ಆನಂದವುಂಟಾಗುತ್ತದೆ. (ಅದು) ಹೇಗೆ ? ಎಂದರೆ, ಈತನೇ ಎಂದರೆ (ಈ) ಪರಮಾತ್ಮನೇ ಜನರನ್ನು (ಅವರ) ಧರ್ಮಕ್ಕೆ ಅನುಗುಣವಾಗಿ[3] (ಆನನ್ದಯಾತಿ = ಆನನ್ದಯತಿ) ಸುಖಿಗಳನ್ನಾಗಿ ಮಾಡುವನು. ಆ ಆನಂದರೂಪನಾದ ಆತ್ಮನೇ ಅವಿದ್ಯೆಯಿಂದ ಅಳತೆಗೆ ಕಟ್ಟುಬಿದ್ದ (ಸುಖವಾಗಿ)[4] ಪ್ರಾಣಿಗಳಿಗೆ ತೋರುತ್ತಿರುವನು ಎಂದರ್ಥ.

೧೫. ಭಯಾಭಯಗಳಿಗೆ ಕಾರಣವಾಗಿರುವದರಿಂದ ಬ್ರಹ್ಮವು ಇದೆ

(ಭಾಷ್ಯ)

೧೪. ಭಯಾಭಯಹೇತುತ್ವಾದ್ವಿದ್ವದವಿದುಷೋಃ ಅಸ್ತಿ ತದ್ ಬ್ರಹ್ಮ । ಸದ್ವಸ್ತ್ವಾಶ್ರಯಣೇನ ಹಿ ಅಭಯಂ ಭವತಿ । ನಾಸದ್ವಸ್ತ್ವಾಶ್ರಯಣೇನ ಭಯನಿವೃತ್ತಿರುಪಪದ್ಯತೇ । ಕಥಮಭಯಹೇತುತ್ವಮಿತಿ ? ಉಚ್ಯತೇ :-

---

1. ಹೃದಯಾಕಾಶದಲ್ಲಿರುವ ಬುದ್ಧಿಗುಹೆಯಲ್ಲಿ. ಭಾ. ಭಾ. ೧೦೬ನ್ನು ನೋಡಿ.

2. ಅಸಂಹತವಾದ ಯಾವ ವಸ್ತುವಿನ ಉಪಯೋಗಕ್ಕಾಗಿ ಸಂಹತವಾದ ಈ ದೇಹೇಂದ್ರಿಯವ್ಯಾಪಾರಗಳು ನಡೆಯುತ್ತಿರುವವೋ ಆ ವಸ್ತುವಿರಬೇಕು.

3. ಧರ್ಮವು ಹೆಚ್ಚಾದರೆ ಆನಂದವೂ ಹೆಚ್ಚುತ್ತದೆ ಎಂದು ಭಾವ. ಉಳಿದವರಿಗೆ ಆನಂದವನ್ನುಂಟುಮಾಡುವವನು ತಾನು ಆನಂದಸ್ವರೂಪನಾಗಿರಬೇಕು. ಆದ್ದರಿಂದ ಜೀವರುಗಳಲ್ಲಿ ಧರ್ಮಕ್ಕೆ ತಕ್ಕಂತೆ ಆನಂದತಾರತಮ್ಯವು ಕಾಣುತ್ತಿರುವದರಿಂದ ಇದಕ್ಕೆ ಮೂಲವಾದ ಆನಂದಸ್ವರೂಪವಾದ ಬ್ರಹ್ಮವು ಇದೆ ಎಂದಾಯಿತು.

4. ವಿಷಯಸುಖದ ರೂಪದಿಂದ. ಭಾ. ಭಾ. ೧೪೭ನ್ನು ನೋಡಿ.

ಭಾವಾರ್ಥ

ಅಜ್ಞಾನಿಗಳಿಗೂ ಜ್ಞಾನಿಗಳಿಗೂ ಹೆದರಿಕೆಗೂ ಹೆದರಿಕೆಯಿಲ್ಲದಿರುವದಕ್ಕೂ ಕಾರಣವಾಗಿರುವದರಿಂದ ಆ ಬ್ರಹ್ಮವು ಇದೆ. ಇರುವ ವಸ್ತುವನ್ನು ಆಶ್ರಯಿಸುವದರಿಂದಲೇ ಅಲ್ಲವೆ, ಅಭಯವುಂಟಾಗುವದು ? ಇಲ್ಲದ ವಸ್ತುವಿನ ಆಶ್ರಯದಿಂದ ಹೆದರಿಕೆಯು ಇಲ್ಲವಾಗುವದೆಂಬುದು ಹೊಂದುವದಿಲ್ಲ. (ಬ್ರಹ್ಮವು) ಅಭಯಕ್ಕೆ ಕಾರಣವಾಗಿದೆ ಎಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ :-

ಜ್ಞಾನಿಗೆ ಅಭಯಕಾರಣವು ಬ್ರಹ್ಮ

ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇಽ ಭಯಂ ಪ್ರತಿಷ್ಠಾಂ ವಿನ್ದತೇ । ಅಥ ಸೋಽಭಯಂ ಗತೋ ಭವತಿ ॥೪॥

೪. ಯಾವಾಗಲೇ ಈತನು ಈ ಅದೃಶ್ಯವಾದ ಅನಾತ್ಮ್ಯವಾದ ಅನಿರುಕ್ತವಾದ ಅನಿಲಯನವಾದ (ಬ್ರಹ್ಮದಲ್ಲಿ) ಅಭಯವಾಗಿ ಪ್ರತಿಷ್ಠೆಯನ್ನು ಪಡೆಯುತ್ತಾನೋ ಆಗಲೇ ಅಭಯವನ್ನು ಹೊಂದಿದವನಾಗುತ್ತಾನೆ.

(ಭಾಷ್ಯ)

೧೯೦. ಯದಾ ಹಿ ಏವ ಯಸ್ಮಾತ್ ಏಷಃ ಸಾಧಕಃ ಏತಸ್ಮಿನ್ ಬ್ರಹ್ಮಣಿ । ಕಿಂವಿಶಿಷ್ಟೇ ? ಅದೃಶ್ಯೇ - ದೃಶ್ಯಂ ನಾಮ ದ್ರಷ್ಟವ್ಯಮ್, ವಿಕಾರಃ । ದರ್ಶನಾರ್ಥತ್ವಾದ್ ವಿಕಾರಸ್ಯ, ನ ದೃಶ್ಯಮ್ ಅದೃಶ್ಯಮ್ । ಅವಿಕಾರಃ ಇತ್ಯರ್ಥಃ । ಏತಸ್ಮಿನ್ - ಅದೃಶ್ಯೇ ಅವಿಕಾರೇ ಅವಿಷಯಭೂತೇ ಅನಾತ್ಮ್ಯೇ ಅಶರೀರೇ । ಯಸ್ಮಾತ್ ಅದೃಶ್ಯಮ್, ತಸ್ಮಾತ್ ಅನಾತ್ಮ್ಯಮ್ ; ಯಸ್ಮಾತ್ ಅನಾತ್ಮ್ಯಮ್ ತಸ್ಮಾತ್ ಅನಿರುಕ್ತಮ್ । ವಿಶೇಷೋ ಹಿ ನಿರುಚ್ಯತೇ ವಿಶೇಷಶ್ಚ ವಿಕಾರಃ । ಅವಿಕಾರಂ ಚ ಬ್ರಹ್ಮ ಸರ್ವವಿಕಾರಹೇತುತ್ವಾತ್ । ತಸ್ಮಾತ್ ಅನಿರುಕ್ತಮ್ । ಯತ ಏತಮ್ ತಸ್ಮಾತ್ ಅನಿಲಯನಮ್ । ನಿಲಯನಂ ನೀಡಃ ಆಶ್ರಯಃ । ನ ನಿಲಯನಮ್ ಅನಿಲಯನಮ್ ಅನಾಧಾರಮ್ । ತಸ್ಮಿನ್ ಏತಸ್ಮಿನ್ ಅದೃಶ್ಯೇ ಅನಾತ್ಮ್ಯೇ ಅನಿರುಕ್ತೇ ಅನಿಲಯನೇ ಸರ್ವಕಾರ್ಯಧರ್ಮವಿಲಕ್ಷಣೇ ಬ್ರಹ್ಮಣಿ ಇತಿ ವಾಕ್ಯಾರ್ಥಃ । ಅಭಯಮ್ ಇತಿ ಕ್ರಿಯಾವಿಶೇಷಣಮ್ । ಅಭಯಾಮ್ ಇತಿ ವಾ ಲಿಙ್ಗಾನ್ತರಂ ಪರಿಣಮ್ಯತೇ । ಪ್ರತಿಷ್ಠಾಂ ಸ್ಥಿತಿಮ್ ಆತ್ಮಭಾವಂ ವಿನ್ದತೇ ಲಭತೇ । ಅಥ ತದಾ ಸಃ ತಸ್ಮಿನ್, ನಾನಾತ್ವಸ್ಯ ಭಯಹೇತೋಃ ಅವಿದ್ಯಾಕೃತಸ್ಯ ಅದರ್ಶನಾತ್, ಅಭಯಂ ಗತೋ ಭವತಿ ॥

(ಭಾಷ್ಯಾರ್ಥ)

ಯಾವಾಗಲೇ ಈ ಸಾಧಕನು 'ಹಿ' ಯಾವ ಕಾರಣದಿಂದ ಈ ಬ್ರಹ್ಮ ದಲ್ಲಿ. ಎಂಥ (ಬ್ರಹ್ಮದಲ್ಲಿ) ? ಎಂದರೆ ಅದೃಶ್ಯವಾದ - ದೃಶ್ಯವು ಎಂದರೆ ನೋಡುವವಕ್ಕೆ ಆಗುವ ವಿಕಾರವು ; ಏಕೆಂದರೆ ವಿಕಾರವಾಗುವದು ದರ್ಶನ ಕ್ಕಾಗಿ. ದೃಶ್ಯವಲ್ಲದ್ದು ಅದೃಶ್ಯವು ; ಅವಿಕಾರವಾದದ್ದು ಎಂದರ್ಥ. ಈ ಅದೃಶ್ಯ ವಾದ ಅವಿಕಾರವಾದ - (ಯಾವದಕ್ಕೂ) ವಿಷಯವಲ್ಲದ ; ಅನಾತ್ಮ್ಯವಾದ ಎಂದರೆ ಶರೀರವಿಲ್ಲದ (ಎಂದರ್ಥ). ಅದೃಶ್ಯವಾಗಿರುತ್ತದೆ, ಆದ್ದರಿಂದಲೇ ಅನಾತ್ಮ್ಯ ವಾಗಿರುತ್ತದೆ ; ಅನಾತ್ಮ್ಯವಾಗಿರುವದರಿಂದ ಅನಿರುಕ್ತವಾಗಿರುತ್ತದೆ. ವಿಶೇಷ ವನ್ನೇ ಅಲ್ಲವೆ, ಗೊತ್ತುಮಾಡಿ ಹೇಳುವದು ? ವಿಕಾರವೆಂಬುದು ವಿಶೇಷವು. ಆದರೆ ಬ್ರಹ್ಮವು ಅವಿಕಾರವಾಗಿರುತ್ತದೆ. ಏಕೆಂದರೆ ಅದು ಎಲ್ಲಾ ವಿಕಾರಗಳಿಗೂ[1] ಕಾರಣವಾಗಿರುತ್ತದೆ, ಆದ್ದರಿಂದ ಅದು ಅನಿರುಕ್ತವು.[2] ಹೀಗಿರುತ್ತದೆಯಷ್ಟೆ, ಆದ್ದರಿಂದ (ಅದು) ಅನಿಲಯನವು. ನಿಲಯನೆಂದರೆ ಗೂಡು, ಆಶ್ರಯ ; ನಿಲಯನವಲ್ಲದ್ದು ಅನಿಲಯನವು, ಆಧಾರವಲ್ಲದ್ದು ಎಂದರ್ಥ.[3] ಆ ಈ ಅದೃಶ್ಯ ವಾದ, ಅನಾತ್ಮ್ಯವಾದ, ಅನಿರುಕ್ತವಾದ, ಅನಿಲಯನವಾದ, ಎಂದರೆ ಕಾರ್ಯ ಗಳಲ್ಲಿರುವ ಯಾವ ಧರ್ಮವೂ (ಇಲ್ಲದ) ಬೇರೆಯ ಸ್ವಭಾವದ ಬ್ರಹ್ಮದಲ್ಲಿ ಎಂದು (ಒಟ್ಟು)ವಾಕ್ಯದ ಅರ್ಥವು. ಅಭಯಮ್ (ಹೆದರಿಕೆಯಿಲ್ಲದೆ) ಎಂಬುದು ಕ್ರಿಯಾವಿಶೇಷಣವು ; ಅಥವಾ 'ಅಭಯಾಮ್' ಎಂದು ಮತ್ತೊಂದು ಲಿಂಗಕ್ಕೆ,[4] ತಿರುಗಿಸಿಕೊಳ್ಳಬೇಕು. (ಅಂಜಿಕೆಯಿಲ್ಲದ) ಪ್ರತಿಷ್ಠೆಯನ್ನು, ಸ್ಥಿತಿಯನ್ನು ತಾನೇ ಅದೆಂಬ ಭಾವವನ್ನು ಪಡೆಯುತ್ತಾನೋ (ಆ ಕಾರಣದಿಂದ)[5] ಆಗಲೇ ಅವನು

1 ಕಾರ್ಯಗಳಿಗೂ. ಆಕಾಶವೇ ಮುಂತಾದ ಕಾರ್ಯಗಳಲ್ಲಿ ವಿಶೇಷಗಳಿರುತ್ತವೆ. ಎಲ್ಲಕ್ಕೂ ಕಾರಣವಾಗಿರುವ ಬ್ರಹ್ಮದಲ್ಲಿ ಯಾವ ವಿಶೇಷವೂ ಇರುವದಿಲ್ಲ.

2. ಅನಿರುಕ್ತ, ಅನಿಲಯನ - ಇವು ಅಮೂರ್ತದ ಧರ್ಮಗಳೆಂದು ಹೇಳಲಾಗಿತ್ತು. ಆದರೆ ಈಗ ಮೂರ್ತ, ಅಮೂರ್ತ - ಇವೆರಡಕ್ಕೂ ಅತ್ಯಂತವಿಲಕ್ಷಣವಾದ ಸ್ವಭಾವವುಳ್ಳದ್ದು ಎಂಬರ್ಥದಲ್ಲಿ ಬ್ರಹ್ಮದ ವಿಶೇಷಣಗಳಾಗಿ ಇವನ್ನು ವರ್ಣಿಸಿದೆ.

3. ಆಧಾರವಿಲ್ಲದ್ದು ಎಂದೂ ಈ ಮಾತಿಗೆ ಅರ್ಥವನ್ನು ಮಾಡಬಹುದು ; ಏಕೆಂದರೆ ಬ್ರಹ್ಮವು ಮತ್ತೊಂದು ಆಧಾರವನ್ನು ಬಯಸುವದಿಲ್ಲ.

4. ಪ್ರತಿಷ್ಠಾಮ್ ಎಂಬ ಸ್ತ್ರೀಲಿಂಗವಿಶೇಷ್ಯಕ್ಕೆ ತಕ್ಕಂತೆ.

5. ತನ್ನಲ್ಲಿಯೇ ಪ್ರತಿಷ್ಠೆಯನ್ನು ಪಡೆದುಕೊಳ್ಳುತ್ತಾನಲ್ಲ, ಆ ಕಾರಣದಿಂದ ಎಂದರ್ಥ. ಯಸ್ಮಾತ್ ಎಂಬುದರ ಸ್ವಾರಸ್ಯವಿದು.

೮ (ಬ್ರಹ್ಮದಲ್ಲಿ) ಭಯಕ್ಕೆ ಕಾರಣವಾದ ಅವಿದ್ಯಾಕಲ್ಪಿತವಾದ ನಾನಾತ್ವವನ್ನು[1] ಕಾಣದಿರುವದರಿಂದ ಅಭಯವನ್ನು ಪಡೆದವನಾಗುತ್ತಾನೆ.

(ಭಾಷ್ಯ)

೧೯೧. ಸ್ವರೂಪಪ್ರತಿಷ್ಠೋ ಽಂ ಅಸೌ ಯದಾ ಭವತಿ ತದಾ ನಾನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯದ್ ವಿಜಾನಾತಿ । ಅನ್ಯಸ್ಯ ಹಿ ಅನ್ಯತೋ ಭಯಂ ಭವತಿ, ನಾತ್ಮನ ಏವ ಆತ್ಮನೋ ಭಯಂ ಯುಕ್ತಮ್ । ತಸ್ಮಾತ್ ಆತ್ಮೈವ ಆತ್ಮನೋಽಭಯಕಾರಣಮ್ । ಸರ್ವತೋ ಹಿ ನಿರ್ಭಯಾ ಬ್ರಾಹ್ಮಣಾ ದೃಶ್ಯನ್ತೇ ಸತ್ಸು ಭಯಹೇತುಷು । ತಚ್ಚಾಯುಕ್ತಮ್ ಅಸತಿ ಭಯತ್ರಾಣೇ ಬ್ರಹ್ಮಣಿ । ತಸ್ಮಾತ್ ತೇಷಾಮ್ ಅಭಯದರ್ಶನಾತ್ ಅಸ್ತಿ ತದಭಯಕಾರಣಂ ಬ್ರಹ್ಮ ಇತಿ । ಕದಾ ಅಸೌ ಅಭಯಂ ಗತೋ ಭವತಿ ಸಾಧಕಃ ? ಯದಾ ನಾನ್ಯತ್ ಪಶ್ಯತಿ ಆತ್ಮನಿ ಚ ಅನ್ತರಂ ಭೇದಂ ನ ಕುರುತೇ ತದಾ ಅಭಯಂ ಗತೋ ಭವತಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಏಕೆಂದರೆ ಯಾವಾಗ ಈತನು (ತನ್ನ) ಸ್ವರೂಪದಲ್ಲಿ ನಿಂತವನಾಗುವನೋ ಆಗ ಮತ್ತೊಂದನ್ನು ಕಾಣುವದಿಲ್ಲ, ಮತ್ತೊಂದನ್ನು ಕೇಳುವದಿಲ್ಲ. ಮತ್ತೊಂದನ್ನು ಅರಿಯುವದಿಲ್ಲ.[2] (ಬೇರೆಯಾದ) ಒಬ್ಬರಿಗೆ (ತನಗಿಂತ) ಬೇರೆಯಾದ್ದರಿಂದ ಲಲ್ಲವೆ, ಭಯವುಂಟಾಗುವದು ? ತನ್ನಿಂದಲೇ ತನಗೆ ಭಯ(ವುಂಟಾಗುವ) ದೆಂಬುದು ಯುಕ್ತವಾಗುವದಿಲ್ಲ.[3] ಆದ್ದರಿಂದ ತನಗೆ ತಾನೇ[4] ಅಭಯಕ್ಕೆ ಕಾರಣವು. ಭಯಕ್ಕೆ ಕಾರಣಗಳು ಇದ್ದರೂ[5] ಬ್ರಾಹ್ಮಣರು[6] ಎತರಿಂದಲೂ ಅಂಜಿಕೆಯಿಲ್ಲದೆ (ಇರುವದು) ಕಂಡುಬರುತ್ತದೆಯಲ್ಲವೆ ? ಭಯದಿಂದ ರಕ್ಷಿಸುವ ಬ್ರಹ್ಮವು ಇಲ್ಲದಿದ್ದರೆ ಅದು ಹೊಂದುವಹಾಗಿಲ್ಲ. ಆದ್ದರಿಂದ ಅವರಿಗೆ ಅಭಯ(ವಿರುವದು) ಕಂಡುಬರುವದರಿಂದ ಅವರ ಅಭಯಕ್ಕೆ ಕಾರಣವಾಗಿರುವ ಬ್ರಹ್ಮವು ಇದೆ

---

1. ಅಂಜಿಕೆಗೆ ನಾನಾತ್ವವೇ ಕಾರಣ. ಬೃ. ೧-೪-೨ ; ನಾನಾತ್ವಕ್ಕೆ ಅವಿದ್ಯೆಯೇ ಕಾರಣ. ಬೃ. ಭಾ. ೪-೩-೨೧ "ಆತ್ಮನೋ ವಸ್ತ್ವನ್ತರಸ್ಯ ಪ್ರತ್ಯುಪಸ್ಥಾಪಿಕಾ ಅವಿದ್ಯಾ" ಎಂಬ ವಾಕ್ಯವನ್ನು ನೋಡಿರಿ.

2. ಛಾಂ. ೭-೨೪-೧.

3. ಬೃ. ೧-೪-೨ ; ಮಾಂ. ಕಾ. ಭಾ. ೩-೩೯.

4. ತನ್ನ ಅದ್ವಿತೀಯಸ್ವರೂಪವೇ.

5. ಇರುವಂತೆ ನಮ್ಮಗಳಿಗೆ ತೋರುತ್ತಿದ್ದರೂ.

6. ಜ್ಞಾನಿಗಳು.

ಎಂದಾಯಿತು. [1]ಈ ಸಾಧಕನು ಯಾವಾಗ ಅಭಯವನ್ನು ಪಡೆದುಕೊಂಡವನಾಗುತ್ತಾನೆ ? ಎಂದರೆ ಯಾವಾಗ ಮತ್ತೊಂದನ್ನು ಕಾಣುವದಿಲ್ಲವೋ, ತನ್ನಲ್ಲಿ ಅಂತರವನ್ನು ಎಂದರೆ ಭೇದವನ್ನು ಮಾಡಿಕೊಳ್ಳುವದಿಲ್ಲವೋ[1] ಆಗ ಅಭಯವನ್ನು ಹೊಂದಿದವನಾಗುತ್ತಾನೆ ಎಂದು ಅಭಿಪ್ರಾಯ.

ಅಜ್ಞಾನಿಗೆ ಭಯಕಾರಣವು ಬ್ರಹ್ಮ

ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ । ಅಥ ತಸ್ಯ ಭಯಂ ಭವತಿ । ತತ್ತ್ವೇವ ಭಯಂ ವಿದುಷೋಽಮನ್ವಾನಸ್ಯ ॥೫॥

೫. ಯಾವಾಗಲೇ ಈತನು ಇದರಲ್ಲಿ ಸ್ವಲ್ಪವಾದರೂ ಅಂತರವನ್ನು ಮಾಡಿಕೊಳ್ಳುತ್ತಾನೋ, ಅದರಿಂದ ಇವನಿಗೆ ಭಯವು ಆಗುತ್ತದೆ. ಅದೇ (ಹಾಗೆ) ತಿಳಿಯುವ (ಆ) ತಿಳಿಯದಾತನಿಗೆ ಭಯವು.

(ಭಾಷ್ಯ)

೧೯೨. ಯದಾ ಪುನಃ ಅವಿದ್ಯಾವಸ್ಥಾಯಾಂ ಹಿ ಯಸ್ಮಾತ್ ಏಷಃ ಅವಿದ್ಯಾವಾನ್ ಅವಿದ್ಯಯಾ ಪ್ರತ್ಯುಪಸ್ಥಾಪಿತಂ ವಸ್ತು ತೈಮಿರಿಕದ್ವಿತೀಯಚನ್ದ್ರವತ್ ಪಶ್ಯತಿ, ಆತ್ಮನಿ ಚ ಏತಸ್ಮಿನ್ ಬ್ರಹ್ಮಣಿ ಉತ್ ಅಪಿ ಅರಮ್ ಅಲ್ಪಮಪಿ ಅನ್ತರಂ ಭಿದ್ರಂ ಭೇದದರ್ಶನಂ ಕುರುತೇ । ಭೇದದರ್ಶನಮೇವ ಹಿ ಅನ್ತರಕರಣಮ್[2] । ಅಲ್ಪಮಪಿ ಭೇದಂ ಪಶ್ಯತಿ ಇತ್ಯರ್ಥಃ । ಅಥ ತಸ್ಮಾತ್ ಭೇದದರ್ಶನಾತ್ ಹೇತೋಃ ಅಸ್ಯ ಭೇದದರ್ಶಿನಃ ಆತ್ಮನಃ ಭಯಂ ಭವತಿ । ತಸ್ಮಾತ್ ಆತ್ಮೈವ ಆತ್ಮನೋ ಭಯಕಾರಣಮ್ ಅವಿದುಷಃ ॥

(ಭಾಷ್ಯಾರ್ಥ)

ಇದಕ್ಕೆ ಬದಲಾಗಿ ಯಾವಾಗ ಎಂದರೆ (ಯಾವ) ಅವಿದ್ಯಾವಸ್ಥೆಯಲ್ಲಿ ಈತನು ಎಂದರೆ ಅವಿದ್ಯೆಯಿಂದ ಕೂಡಿರುವವನು, ಅವಿದ್ಯೆಯಿಂದ ಮುಂದಿಡಲ್ಪಟ್ಟ ವಸ್ತುವನ್ನು. ಪರೆಗಣ್ಣಿನವನಿಗೆ ಕಾಣುವ ಎರಡನೆಯ ಚಂದ್ರನಂತೆ (ಕಲ್ಪಿತವಾದ ವಸ್ತುವನ್ನು) ಕಾಣುತ್ತಾನೋ, ಮತ್ತು ತನ್ನ ಆತ್ಮನಾಗಿರುವ ಬ್ರಹ್ಮದಲ್ಲಿ 'ಉತ್' ಕೂಡ 'ಅರಮ್' ಅಲ್ಪವಾದರೂ ಅಂತರವನ್ನು ಎಂದರೆ ಭಿದ್ರವನ್ನು, ಭೇದದರ್ಶನವನ್ನು

---

1. ತನಗಿಂತ ಬೇರೆಯಾಗಿ ಮತ್ತೊಂದು ಇದೆಯೆಂದು ತಿಳಿದುಕೊಳ್ಳುವದಿಲ್ಲವೋ, ತನ್ನದು ಅದ್ವಿತೀಯಚೈತನ್ಯರೂಪವೆಂದು ಕಂಡುಕೊಳ್ಳುವನೋ.

2. "ಭಯಕಾರಣಮ್" ಎಂದು ವಾ।। ಪಾಠ.

ಮಾಡಿಕೊಳ್ಳುತ್ತಾನೋ - ಭೇದವನ್ನು ಕಾಣುವದೇ ಅಲ್ಪವೆ, ಅಂತರವನ್ನು ಮಾಡಿಕೊಳ್ಳುವದು ? - ಸ್ವಲ್ಪವಾದರೂ ಭೇದವನ್ನು ಕಾಣುತ್ತಾನೋ ಎಂದರ್ಥ. (ಯಾವ ಕಾರಣದಿಂದ ಹೀಗೆ ಕಾಣುತ್ತಾನೋ) 'ಅಥ' ಆ ಕಾರಣದಿಂದ (ಆ) ಭೇದವನ್ನು ಕಂಡದ್ದೆಂಬ ಹೇತುವಿನಿಂದ ಅವನಿಗೆ ಎಂದರೆ (ಈ) ಭೇದವನ್ನು ಕಾಣುವಾತನಿಗೆ ಆತ್ಮನಿಂದ ಭಯವಾಗುತ್ತದೆ. ಆದ್ದರಿಂದ ಅಜ್ಞಾನಿಗೆ ತಾನೇ[1] ತನಗೆ ಭಯಕಾರಣವು.

(ಭಾಷ್ಯ)

೧೯೩. ತದೇತದಾಹ - ತತ್ ಬ್ರಹ್ಮ ತ್ವೇವ ಭಯಂ ಭೇದದರ್ಶಿನೋ ವಿದುಷಃ । ''ಈಶ್ವರೋಽನ್ಯೋ ಮತ್ತಃ, ಅಹಮನ್ಯಃ ಸಂಸಾರೀ'' ಇತ್ಯೇವಂ ವಿದುಷಃ ಭೇದದೃಷ್ಟಮ್ ಈಶ್ವರಾಖ್ಯಂ ತದೇವ ಬ್ರಹ್ಮ ಅಲ್ಪಮಪಿ ಅನ್ತರಂ ಕುರ್ವತೋ ಭಯಂ ಭವತಿ ವಿಕತ್ವೇನ ಅಮನ್ವಾನಸ್ಯ । ತಸ್ಮಾತ್ ವಿದ್ವಾನಪಿ ಅವಿದ್ವಾನೇವಾಸೌ ಯೋಽಯಮ್ ಏಕಮ್ ಅಭಿನ್ನಮ್ ಆತ್ಮತತ್ತ್ವಂ ನ ಪಶ್ಯತಿ ॥

(ಭಾಷ್ಯಾರ್ಥ)

ಆ ಈ (ಅರ್ಥವನ್ನೇ ಶ್ರುತಿಯು)ಹೇಳುತ್ತದೆ : ಆ ಬ್ರಹ್ಮವೇ ಭೇದವನ್ನು ಕಾಣುವ ಜ್ಞಾತೃವಿಗೆ ಭಯವು. ''ಈಶ್ವರನು ನನಗಿಂತ ಬೇರೆ, ಸಂಸಾರಿಯಾಗಿರುವ ನಾನು ಬೇರೆ'' ಎಂದೀ ಪರಿಯಲ್ಲಿ ತಿಳಿಯುವವನಿಗೆ ಬೇರೆಯಾಗಿ ಕಂಡ ಈಶ್ವರನೆಂಬ ಹೆಸರಿನ[2] ಅದೇ ಬ್ರಹ್ಮವೇ ಅಲ್ಪವಾದರೂ ಅಂತರವನ್ನು ಮಾಡಿಕೊಳ್ಳುವ (ಅದೂ ತಾನೂ) ಒಂದೇ ಎಂದು ತಿಳಿದುಕೊಳ್ಳದಾತನಿಗೆ ಭಯವಾಗುತ್ತದೆ. ಆದ್ದರಿಂದ ತಿಳಿದವನಾದರೂ,[3] ಒಂದೇ ಆಗಿ, (ತನಗಿಂತ) ಬೇರೆಯಲ್ಲದ ಆತ್ಮತತ್ತ್ವವನ್ನು ಅರಿತುಕೊಳ್ಳದಿರುವವನು ಯಾವನೋ, ಅವನು ತಿಳಿಯದವನೇ.

ಭಯಕಾರಣವಾಗಿರುವ ಬ್ರಹ್ಮ

ತದಪ್ಯೇಷ ಶ್ಲೋಕೋ ಭವತಿ ॥೬॥

(ಇತಿ ಸಪ್ತಮೋಽನುವಾಕಃ)

1. ಭಿನ್ನವಾಗಿ ಕಂಡ ಆತ್ಮನೇ.

2. ಅಜ್ಞಾನದಿಂದ ಬ್ರಹ್ಮವು ಈಶ್ವರನಾಗುವದು, ತಾನು ಈಶಿತವ್ಯನಾಗುವನು. ಸೂ. ಭಾ. ೨-೧-೧೪ (ಭಾ. ಭಾ. ೪೪೦).

3. ಮೂಲದಲ್ಲಿ (ವಿದುಷಃ) ''ತಿಳಿಯುವವನಿಗೆ'' ಎಂದಿದ್ದರೂ ತಪ್ಪುತಿಳಿಯುವವನಿಗೆ ಎಂದರ್ಥವೆಂದು ಭಾವ.

೬. ಅದರ ವಿಷಯದಲ್ಲಿಯೇ ಈ ಶ್ಲೋಕವಿರುವದು :
(ಏಳನೆಯ ಅನುವಾಕವು ಮುಗಿಯಿತು)

ಭೀಷಾಽಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ ।
ಭೀಷಾಽಸ್ಮಾದಗ್ನಿಶ್ಚೇನ್ದ್ರಶ್ಚ । ಮೃತ್ಯುರ್ಧಾವತಿ ಪಞ್ಚಮ ಇತಿ ॥೮॥

೮. "ಈತನ ಭಯದಿಂದ ವಾಯುವು ಬೀಸುತ್ತಾನೆ, ಭಯದಿಂದ ಸೂರ್ಯನು ಉದಯಿಸುತ್ತಾನೆ. ಈತನ ಭಯದಿಂದ ಅಗ್ನಿಯೂ ಇಂದ್ರನೂ (ಕೆಲಸಮಾಡುತ್ತಾರೆ), ಐದನೆಯವನಾದ ಮೃತ್ಯುವೂ ಓಡುತ್ತಾನೆ."

(ಭಾಷ್ಯ)

೧೯೪. ಉಚ್ಛೇದಹೇತುದರ್ಶನಾದ್ಧಿ ಉಚ್ಛೇದ್ಯಾಭಿಮತಸ್ಯ ಭಯಂ ಭವತಿ । ಅನುಚ್ಛೇದ್ಯೋ ಹಿ ಉಚ್ಛೇದಹೇತುಃ । ತತ್ರ ಅಸತ್ಯುಚ್ಛೇದಹೇತೌ ಉಚ್ಛೇದ್ಯೇ ನ ತದ್ದರ್ಶನಕಾರ್ಯಂ ಭಯಂ ಯುಕ್ತಮ್ । ಸರ್ವಂ ಚ ಜಗದ್ ಭಯವದ್ ದೃಶ್ಯತೇ । ತಸ್ಮಾತ್ ಜಗತೋ ಭಯದರ್ಶನಾತ್ ಗಮ್ಯತೇ ನೂನಂ ತದಸ್ತಿ ಭಯಕಾರಣಮ್ ಉಚ್ಛೇದಹೇತುಃ ಅನುಚ್ಛೇದ್ಯಾತ್ಮಕಂ ಯತೋ ಜಗದ್ ಬಿಭೇತಿ ಇತಿ । ತತ್ ಏತಸ್ಮಿನ್ನಪ್ಯರ್ಥೇ ಏಷ ಶ್ಲೋಕೋ ಭವತಿ ॥

(ಭಾಷ್ಯಾರ್ಥ)

ನಾಶಕ್ಕೆ ಕಾರಣವಾದದ್ದನ್ನು ಕಾಣುವದರಿಂದಲೇ ಅಲ್ಲವೆ, (ತಾನು) ನಾಶವಾಗುವವನೆಂದು ತಿಳಿದುಕೊಂಡವನಿಗೆ ಹೆದರಿಕೆಯುಂಟಾಗುವದು ? ನಾಶಕ್ಕೆ ಕಾರಣವಾದದ್ದು (ತಾನು) ನಾಶವಾಗತಕ್ಕದ್ದಾಗಿರಲಾರದಷ್ಟೆ ? ಹೀಗಿರುವಲ್ಲಿ ನಾಶಕ್ಕೆ ಕಾರಣವಾದದ್ದು ಇಲ್ಲದಿದ್ದರೆ ಅದನ್ನು ಕಂಡದ್ದರಿಂದಾಗಬೇಕಾದ ಹೆದರಿಕೆ ಎಂಬ ಕಾರ್ಯವು ನಾಶವಾಗತಕ್ಕವನಲ್ಲಿ (ಆಗುವದು) ಸರಿಯಾಗುವದಿಲ್ಲ. ಇಡಿಯ ಜಗತ್ತೇ ಹೆದರಿಕೆಯುಳ್ಳದ್ದಾಗಿರುವದು ಕಂಡುಬರುತ್ತದೆ. ಆದ್ದರಿಂದ (ಹೀಗೆ) ಜಗತ್ತಿಗೆ ಹೆದರಿಕೆಯಾಗುವದು ಕಂಡುಬರುತ್ತಿರುವದರಿಂದ ಯಾವದಕ್ಕೆ ಜಗತ್ತು ಹೆದರುತ್ತಿದೆಯೋ ಆ ನಾಶಕ್ಕೆ ಹೇತುವಾದ ತನಗೆ ನಾಶವಿಲ್ಲದೆ (ಮಿಕ್ಕದ್ದಕ್ಕೆ) ಹೆದರಿಕೆಗೆ ಕಾರಣವಾಗಿರುವ ಆ (ಬ್ರಹ್ಮವು) ಇದೆ ಎಂದು ನಿಶ್ಚಯವಾಗುತ್ತದೆ. ಅಲ್ಲಿ ಎಂದರೆ ಆ ವಿಷಯದಲ್ಲಿಯೂ ಈ (ಮುಂದಿನ) ಶ್ಲೋಕವಿರುವದು.

(ಭಾಷ್ಯ)

೧೯೫. ಭೀಷಾ ಭಯೇನ ಅಸ್ಮಾತ್ ವಾತಃ ಪವತೇ । ಭೀಷಾ ಉದೇತಿ ಸೂರ್ಯಃ । ಭೀಷಾ ಅಸ್ಮಾತ್ ಅಗ್ನಿಶ್ಚ ಇನ್ದ್ರಶ್ಚ । ಮೃತ್ಯುರ್ಧಾವತಿ ಪಞ್ಚಮ ಇತಿ ।

ವಾತಾದಯೋ ಹಿ ಮಹಾಭಾಗಾಃ ಸ್ವಯಮ್ ಈಶ್ವರಾಃ ಸನ್ತಃ ಪವನಾದಿಕಾರ್ಯೇಷು ಅಯಾಸಬಹುಲೇಷು ನಿಯತಾಃ ಪ್ರವರ್ತನ್ತೇ । ತದ್ ಯುಕ್ತಂ ಪ್ರಶಾಸ್ತರಿ ಸತಿ ಅಸ್ಮಿನ್[1] ನಿಯಮೇನ ತೇಷಾಂ ಪ್ರವರ್ತನಮ್ । ತಸ್ಮಾತ್ ಅಸ್ತಿ ಭಯಕಾರಣಂ ತೇಷಾಂ ಪ್ರಶಾಸ್ತಾ ಬ್ರಹ್ಮ । ಯತಸ್ತೇ ಭೃತ್ಯಾ ಇವ ರಾಜ್ಞಃ ಅಸ್ಮಾದ್ ಬ್ರಹ್ಮಣೋ ಭಯೇನ ಪ್ರವರ್ತನ್ತೇ ॥

(ಭಾಷ್ಯಾರ್ಥ)

'ಭೀಷಾ' ಎಂದರೆ ಈತನ ಅಂಜಿಕೆಯಿಂದ ವಾಯು ಬೀಸುತ್ತಾನೆ. ಸೂರ್ಯನು ಅಂಜಿಕೆಯಿಂದ ಉದಯಿಸುತ್ತಾನೆ. ಈತನ ಅಂಜಿಕೆಯಿಂದ ಅಗ್ನಿಯೂ ಇಂದ್ರನೂ (ಕೆಲಸಮಾಡುತ್ತಾರೆ). ಐದನೆಯವನಾದ ಮೃತ್ಯುವೂ ಓಡುತ್ತಾನೆ. (ಇಲ್ಲಿ ಹೇಳಿರುವ) ವಾಯುವೇ ಮುಂತಾದವರು ಬಹು ಪೂಜ್ಯರಾದವರೂ ಸ್ವತಃ ಸ್ವತಂತ್ರರಾದವರೂ ಆಗಿದ್ದುಕೊಂಡು ಬಹಳ ಆಯಾಸಕರವಾದ ಬೀಸುವದೇ ಮುಂತಾದ ಕಾರ್ಯಗಳಲ್ಲಿ ಗೊತ್ತಾಗಿ ತೊಡಗಿರುತ್ತಾರೆ. (ಅವರಿಗಿಂತ) ಬೇರೆಯಾದ, (ಅವರಿಗೆ) ಅಪ್ಪಣೆಮಾಡುವಾತನೊಬ್ಬನು ಇದ್ದರೆ ಹೀಗೆ ಅವರು ಗೊತ್ತಾಗಿ ತೊಡಗುವದೆಂಬುದು ಯುಕ್ತವಾಗುತ್ತದೆ. ಆದ್ದರಿಂದ ಅಂಜಿಕೆಗೆ ಕಾರಣವಾಗಿ ಅವರನ್ನು ಆಳುತ್ತಿರುವ ಬ್ರಹ್ಮವು ಇದೆ (ಎಂದು ನಿಶ್ಚಯವಾಗುತ್ತದೆ). ಆ ಯಾವ (ಈ) ಬ್ರಹ್ಮದ ಅಂಜಿಕೆಯಿಂದಲೇ ಅರಸನ (ಅಂಜಿಕೆಯಿಂದ ಕೆಲಸದಲ್ಲಿ ತೊಡಗುವ) ಸಂಬಳದಾಳುಗಳಂತೆ ಅವರು ಕೆಲಸದಲ್ಲಿ ತೊಡಗಿರುತ್ತಾರೆ.

೧೬. ಬ್ರಹ್ಮದ ಆನಂದವು ಸ್ವಾಭಾವಿಕವಾದದ್ದು

ಆನಂದದ ವಿಷಯಕ್ಕೆ ವಿಚಾರ

ಸೈಷಾನನ್ದಸ್ಯ ಮೀಮಾಗ್ಂಸಾ ಭವತಿ ॥೨॥

೨. ಇದು ಆನಂದ ಮೀಮಾಂಸೆಯಾಗಿರುತ್ತದೆ.

(ಭಾಷ್ಯ)

೧೬. ತಚ್ಚ ಭಯಕಾರಣಮ್ ಆನನ್ದಂ ಬ್ರಹ್ಮ । ತಸ್ಯಾಸ್ಯ ಬ್ರಹ್ಮಣಃ ಆನನ್ದಸ್ಯ ಏಷಾ[2] ಮೀಮಾಂಸಾ ವಿಚಾರಣಾ ಭವತಿ । ಕಿಮ್ ಆನನ್ದಸ್ಯ ಮೀಮಾಂಸ್ಯಮ್ ಇತಿ ?

1. "ಯಸ್ಮಾತ್" ಎಂದು ವಾ॥ ಪಾಠ.

2. ಮೂಲದಲ್ಲಿರುವ 'ಸೈಷಾ' ಎಂಬಲ್ಲಿ ಕಾಣುವ 'ಸಾ' ಎಂಬ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿದೆ.

ಉಚ್ಯತೇ । ಕಿಮಾನನ್ದೋ ವಿಷಯವಿಷಯಿಸಂಬನ್ಧಜನಿತೋ ಲೌಕಿಕಾನನ್ದವತ್, ಆಹೋಸ್ವಿತ್ ಸ್ವಾಭಾವಿಕಃ ? ಇತ್ಯೇವಮೇಷಾ ಆನನ್ದಸ್ಯ ಮೀಮಾಂಸಾ ॥

(ಭಾಷ್ಯಾರ್ಥ)

ಆ ಅಂಜಿಕೆಗೆ ಕಾರಣವಾದದ್ದು ಆನಂದರೂಪವಾದ ಬ್ರಹ್ಮವು.[1] ಆ ಈ ಬ್ರಹ್ಮದ ಆನಂದವನ್ನು ಕುರಿತು ಈ ಮೀಮಾಂಸೆಯು, ವಿಚಾರವು ಉಂಟಾಗುತ್ತದೆ.

(ಪ್ರಶ್ನೆ :-) ಆನಂದದ ವಿಷಯಕ್ಕೆ ವಿಚಾರಮಾಡತಕ್ಕದ್ದು ಏನಿದೆ ?

(ಉತ್ತರ :-) ಹೇಳುತ್ತೇವೆ. (ಈ) ಆನಂದವು ಲೌಕಿಕಾನಂದದಂತೆ[2] ವಿಷಯ, ವಿಷಯಿ-ಇವುಗಳ ಸಂಬಂಧದಿಂದ ಉಂಟಾದದ್ದೊ, ಅಥವಾ ಸ್ವಾಭಾವಿಕವಾದದ್ದೊ ?[3] ಹೀಗೆಂಬುದೇ ಆನಂದದ ವಿಷಯಕ್ಕೆ (ಮಾಡಬೇಕಾಗಿರುವ) ವಿಚಾರವು.

ಲೌಕಿಕಾನಂದದಿಂದ ಪರಮಾನಂದವನ್ನು ಗೊತ್ತುಪಡಿಸಬಹುದು

(ಭಾಷ್ಯ)

೧೯೭. ತತ್ರ ಲೌಕಿಕ ಆನನ್ದೋ ಬಾಹ್ಯಾಧ್ಯಾತ್ಮಿಕಸಾಧನಸಂಪತ್ತಿನಿಮಿತ್ತಃ ಉತ್ಕೃಷ್ಟಃ ಸಃ ಯ ಏಷ ನಿರ್ದಿಶ್ಯತೇ ಬ್ರಹ್ಮಾನನ್ದಾನುಗಮಾರ್ಥಮ್ । ಅನೇನ ಹಿ ಪ್ರಸಿದ್ಧೇನ ಆನನ್ದೇನ ವ್ಯಾವೃತ್ತವಿಷಯಬುದ್ಧಿಗಮ್ಯ ಆನನ್ದೋಽನುಗನ್ತುಂ ಶಕ್ಯತೇ । ಲೌಕಿಕೋಽಪಿ ಆನನ್ದೋ ಬ್ರಹ್ಮಾನನ್ದಸ್ಯೈವ ಮಾತ್ರಾ । ಅವಿದ್ಯಯಾ ತಿರಸ್ಕ್ರಿಯಮಾಣೇ ವಿಜ್ಞಾನೇ ಉತ್ಕೃಷ್ಯಮಾಣಾಯಾಂ ಚಾವಿದ್ಯಾಯಾಂ ಬ್ರಹ್ಮಾದಿಭಿಃ ಕರ್ಮವಶಾತ್ ಯಥಾವಿಜ್ಞಾನಂ ವಿಷಯಾದಿಸಾಧನಸಂಬನ್ಧವಶಾಚ್ಚ ವಿಭಾವ್ಯಮಾನಶ್ಚ ಲೋಕೇ ಅನವಸ್ಥಿತೋ ಲೌಕಿಕಃ ಸಂಪದ್ಯತೇ । ಸ ಏವ ಅವಿದ್ಯಾಕಾಮಕರ್ಮಾಪಕರ್ಷಣಾ ಮನುಷ್ಯಗನ್ಧರ್ವಾದ್ಯುತ್ತರೋತ್ತರಭೂಮಿಷು ಅಕಾಮಹತವಿದ್ವಚ್ಛ್ರೋತ್ರಿಯಪ್ರತ್ಯಕ್ಷೋ ವಿಭಾವ್ಯತೇ ಶತಗುಣೋತ್ತರೋತ್ತರೋತ್ಕರ್ಷೇಣ[4] ಯಾವತ್ ಹಿರಣ್ಯಗರ್ಭಸ್ಯ ಬ್ರಹ್ಮಣ ಆನನ್ದಃ ಇತಿ । ನಿರಸ್ತೇ ತು ಅವಿದ್ಯಾಕೃತೇ

---

1. ತಮ್ಮ ಆತ್ಮನಾದ ಬ್ರಹ್ಮವು ಆನಂದರೂಪವಾದದ್ದೆಂಬುದನ್ನರಿಯದವರಿಗೇ ಅಂಜಿಕೆ.

2. ವಿಷಯದಿಂದಾಗುವ ಸುಖದಂತೆ.

3. ಇಂದ್ರಿಯವಿಷಯಗಳ ಸಂಬಂಧದಿಂದ ಆಗತಕ್ಕದ್ದೊ, ಸೂರ್ಯನ ಬೆಳಕಿನಂತೆ ಆತ್ಮಸ್ವರೂಪಕ್ಕೇ ಸೇರಿದ್ದೊ ?

4. ಆ॥ ಪಾಠದಲ್ಲಿ "ಶತಗುಣೋತ್ತರೋತ್ಕರ್ಷೇಣ" ಎಂದಿದೆ.

ವಿಷಯವಿಷಯಿವಿಭಾಗೇ ವಿದ್ಯಯಾ ಸ್ವಾಭಾವಿಕಃ ಪರಿಪೂರ್ಣಃ ಏಕ ಆನನ್ದೋಽದ್ವೈತೋ ಭವತಿ - ಇತ್ಯೇತಮರ್ಥಂ ವಿಭಾವಯಿಷ್ಯನ್ ಆಹ :-

(ಭಾಷ್ಯಾರ್ಥ)

ಲೌಕಿಕವಾದ ಆನಂದವು ಹೊರಗಿನ ಮತ್ತು ಒಳಗಿನ ಸಾಧನಸಂಪತ್ತಿಯ[1] ನಿಮಿತ್ತದಿಂದ ಉತ್ಪಷ್ಟವಾಗಿರುವದು ಯಾವದೋ ಅದನ್ನು[2] ಬ್ರಹ್ಮಾನಂದವನ್ನು ಬೆಂಬಿಡಿದು ತಿಳಿದುಕೊಳ್ಳುವದಕ್ಕಾಗಿ ಇಲ್ಲಿ ತಿಳಿಸಿರುತ್ತದೆ. ಏಕೆಂದರೆ ಈ ಪ್ರಸಿದ್ಧವಾದ ಆನಂದದಿಂದಲೇ ವಿಷಯಗಳಿಂದ ಹಿಂತಿರುಗಿದ ಬುದ್ಧಿಗೆ (ಮಾತ್ರ) ತಿಳಿಯಬರುವ ಆನಂದವನ್ನು ಬೆಂಬಿಡಿದು ತಿಳಿದುಕೊಳ್ಳುವದಕ್ಕೆ ಸಾಧ್ಯವಾಗುತ್ತದೆ.[3]

ಲೌಕಿಕವಾದ ಆನಂದವು ಕೂಡ ಬ್ರಹ್ಮಾನಂದದ್ದೇ ಒಂದು ಅಂಶವು.[4] ಅವಿದ್ಯೆಯಿಂದ ಜ್ಞಾನವು ಮರೆಯಾಗಿ ಅವಿದ್ಯೆಯು ಹೆಚ್ಚುತ್ತಾಬಂದಂತೆ ಬ್ರಹ್ಮವೇ ಮುಂತಾದ ಪ್ರಾಣಿಗಳಿಂದ ಕರ್ಮವಶದಿಂದಲೂ ಅವರವರ ತಿಳಿವಳಿಕೆಯ ವಾಸನೆಯಿಂದ[5] ವಿಷಯವೇ ಮುಂತಾದ ಸಾಧನಗಳ ಸಂಬಂಧದ ಕಾರಣದಿಂದಲೂ ಲೋಕದಲ್ಲಿ ಅನುಭವಕ್ಕೆ ಬರುವದಾಗಿ ನಿತ್ಯವಲ್ಲದಿರುವ ಲೌಕಿಕವಾದ (ಆನಂದ)ವಾಗುತ್ತದೆ.[6] ಅವಿದ್ಯೆ, ಕಾಮ, ಕರ್ಮ - ಇವುಗಳು ಕಡಿಮೆಕಡಿಮೆಯಾಗುವದರಿಂದ ಮನುಷ್ಯಗಂಧರ್ವರೇ ಮುಂತಾದವರ ಮೇಲುಮೇಲಿನ ಅಂತಸ್ತುಗಳಲ್ಲಿ, ಕಾಮದ ಹೊಡೆತವಿಲ್ಲದ ಜ್ಞಾನಿಯಾದ ಶ್ರೋತ್ರಿಯನಿಗೆ ಪ್ರತ್ಯಕ್ಷವಾಗಿ (ಅನುಭವಕ್ಕೆ ಬರುತ್ತಿರುವ) ಆ (ಬ್ರಹ್ಮಾನಂದವೇ) ನೂರುಮಡಿಯಾಗಿ ಮುಂದುಮುಂದಕ್ಕೆ ಹೆಚ್ಚುತ್ತಾ ಹಿರಣ್ಯಗರ್ಭನೆಂಬ ಬ್ರಹ್ಮನ ಆನಂದದವರೆಗೂ (ಹಬ್ಬಿರುತ್ತದೆ).[7] ಆದ್ದ

1 ಹೊರಗಿನ ಸಾಧನಗಳೆಂದರೆ ವಿತ್ತಾದಿಗಳು ; ಒಳಗಿನ ಸಾಧನವೆಂದರೆ ಆರೋಗ್ಯ, ಅಧ್ಯಯನ, ತಿಳಿವಳಿಕೆ ಮುಂತಾದವುಗಳು.

2. ಮನುಷ್ಯನಿಂದ ಹಿಡಿದು ಬ್ರಹ್ಮನವರೆಗೆ ಹೆಚ್ಚುಹೆಚ್ಚುತ್ತಾ ಬಂದಿರುವದನ್ನು.

3. ಯಾವದಕ್ಕಿಂತ ಹೆಚ್ಚಿಲ್ಲವೋ ಯಾವದು ಸಾಧನವನ್ನು ಬಯಸದೆ ನಿತ್ಯವಾಗಿರುವದೋ ಅದೇ ಬ್ರಹ್ಮಾನಂದವು ಎಂದು ತಿಳಿಯುವದಕ್ಕಾಗುತ್ತದೆ.

4. ಬೃ. ೪-೩-೩೨. ಹಿಂದೆ ಭಾ. ಭಾ. ೧೪ರಲ್ಲಿ ಈ ಆನಂದದ ವರ್ಣನೆಯನ್ನು ಮಾಡಿರುವ ಬಗೆಯನ್ನು ಇದಕ್ಕೆ ಹೋಲಿಸಿ.

5. ಕ. ೨-೨-೭, ಬೃ. ೪-೪-೨ ಇವುಗಳಲ್ಲಿ ಶ್ರುತ, ಪೂರ್ವಪ್ರಜ್ಞಾ - ಎಂದಿರುವದು ಇದೇ.

6. ಕಾರಣವು ಅನಿತ್ಯವಾಗಿರುವದರಿಂದ ಈ ಆನಂದವೂ ಅನಿತ್ಯವಾಗಿ ತೋರುತ್ತದೆ.

7. ಆನಂದವು ಬ್ರಹ್ಮಾದಿಯಾಗಿ ಸ್ಥಾವರಪ್ರಾಣಿಯವರೆಗೂ ಸಾಧನತಾರತಮ್ಯದಿಂದ ಕಡಿಮೆಯಾಗಿ ತೋರುತ್ತದೆ ; ಮೇಲುಮೇಲಕ್ಕೆ ಹೋಗುತ್ತಾ ಹೆಚ್ಚಾಗಿ ತೋರುತ್ತದೆ

ರಿಂದ ಅವಿದ್ಯಾಕಲ್ಪಿತವಾದ ವಿಷಯ, ವಿಷಯಿ - ಎಂಬ ವಿಭಾಗವು ವಿದ್ಯೆಯಿಂದ ತೊಲಗಲಾಗಿ ಸ್ವಾಭಾವಿಕವೂ ಪರಿಪೂರ್ಣವೂ ಆಗಿ ಒಂದೇ ಆಗಿರುವ ಅದ್ವೈತಾನಂದವಾಗುತ್ತದೆ[1] - ಎಂಬೀ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಡುವದಕ್ಕಾಗಿ (ಶ್ರುತಿಯು ಹೀಗೆಂದು) ಹೇಳುತ್ತದೆ :-

ಲೌಕಿಕಾನಂದದ ತಾರತಮ್ಯ

ಯುವಾ ಸ್ಯಾತ್ ಸಾಧುಯುವಾಧ್ಯಾಯಕಃ । ಆಶಿಷ್ಠೋ ದ್ರಢಿಷ್ಠೋ ಬಲಿಷ್ಠಃ । ತಸ್ಯೇಯಂ ಪೃಥಿವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್ । ಸ ಏಕೋ ಮಾನುಷ ಆನನ್ದಃ । ತೇ ಯೇ ಶತಂ ಮಾನುಷಾ ಆನನ್ದಾಃ । ಸ ಏಕೋ ಮನುಷ್ಯಗನ್ಧರ್ವಾಣಾಮಾನನ್ದಃ । ಶ್ರೋತ್ರಿಯಸ್ಯ ಚಾಕಾಮ ಹತಸ್ಯ । ತೇ ಯೇ ಶತಂ ಮನುಷ್ಯಗನ್ಧರ್ವಾಣಾಮಾನನ್ದಾಃ । ಸ ಏಕೋ ದೇವಗನ್ಧರ್ವಾಣಾಮಾನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ದೇವಗನ್ಧರ್ವಾಣಾಮಾನನ್ದಾಃ । ಸ ಏಕಃ ಪಿತೄಣಾಂ ಚಿರಲೋಕಲೋಕಾನಾಮಾನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ಪಿತೄಣಾಂ ಚಿರಲೋಕಲೋಕಾನಾಮಾನನ್ದಾಃ । ಸ ಏಕ ಆಜಾನಜಾನಾಂ ದೇವಾನಾಮಾನನ್ದಃ । ಶ್ರೋತ್ರಿಯಸ್ಯ ಚಾಕಾಮ ಹತಸ್ಯ । ತೇ ಯೇ ಶತಮಾಜಾನಜಾನಾಂ ದೇವಾನಾಮಾನನ್ದಾಃ । ಸ ಏಕಃ ಕರ್ಮದೇವಾನಾಂ ದೇವಾನಾಮಾನನ್ದಃ । ಯೇ ಕರ್ಮಣಾ ದೇವಾನಪಿ ಯನ್ತಿ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ಕರ್ಮದೇವಾನಾಂ ದೇವಾನಾಮಾನನ್ದಾಃ । ಸ ಏಕೋ ದೇವಾನಾಮಾನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ದೇವಾನಾಮಾನನ್ದಾಃ । ಸ ಏಕ ಇನ್ದ್ರಸ್ಯಾನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಮಿನ್ದ್ರಸ್ಯಾನನ್ದಾಃ । ಸ ಏಕೋ ಬೃಹಸ್ಪತೇರಾನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ

ಸೂ. ಭಾ. ೧-೧-೪ ; ಜ್ಞಾನೈಶ್ವರ್ಯಾದಿಗಳು ಬ್ರಹ್ಮನವರೆಗೆ ಹೆಚ್ಚುತ್ತಿರುವದೇ ಆನಂದ ತಾರತಮ್ಯಕ್ಕೆ ಕಾರಣ. ಸೂ. ಭಾ. ೧-೩-೩೦ (ಭಾ. ಭಾ. ೨೯೪).

1. ಆದ್ದರಿಂದ ಉಪಾಧಿನಿಮಿತ್ತದಿಂದ ತಾರತಮ್ಯವುಳ್ಳದ್ದಾಗಿ ಕಾಣಬರುತ್ತಿರುವ ಆನಂದವು ಸ್ವತಃ ಬ್ರಹ್ಮಾನಂದವೇ ಎಂದು ಅದನ್ನು ಬೆಂಬಿಡದು ತಿಳಿಯಬಹುದು.

ಶತಂ ಬೃಹಸ್ಪತೇರಾನನ್ದಾಃ । ಸ ಏಕಃ ಪ್ರಜಾಪತೇರಾನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ಪ್ರಜಾಪತೇ ರಾನನ್ದಾಃ । ಸ ಏಕೋ ಬ್ರಹ್ಮಣ ಆನನ್ದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ ॥೩॥

೩. ಯೌವನವಂತನಾಗಿರಬೇಕು, ಒಳ್ಳೆಯ ಯೌವನವಂತನಾಗಿರ ಬೇಕು, ಅಧ್ಯಯನಮಾಡಿದವನಾಗಿರಬೇಕು, ಆಶಿಷ್ಠನಾಗಿ ದ್ರಢಿಷ್ಠನಾಗಿ ಬಲಿಷ್ಠನಾಗಿರಬೇಕು. ಅವನಿಗೆ ಈ ವಿತ್ತಪೂರ್ಣವಾದ ಇಡಿಯ ಪೃಥ್ವಿಯೂ ಇರಬೇಕು. ಅದು ಒಂದು ಮಾನುಷ ಆನಂದವು. ಆ ಮಾನುಷ ಆನಂದ ಗಳು ನೂರಾಗುವವಲ್ಲ, ಅದು ಮನುಷ್ಯಗಂಧರ್ವರ ಆನಂದವು, ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ಮನುಷ್ಯಗಂಧರ್ವರ ಆನಂದ ಗಳು ನೂರಾಗುವವಲ್ಲ, ಅದು ಒಂದು ದೇವಗಂಧರ್ವರ ಆನಂದವು, ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ದೇವಗಂಧರ್ವರ ಆನಂದ ಗಳು ನೂರಾಗುವವಲ್ಲ, ಅದು ಒಂದು ಚಿರಲೋಕಲೋಕವುಳ್ಳ ಪಿತೃಗಳ ಆನಂದವು, ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ಚಿರಲೋಕ ಲೋಕವುಳ್ಳ ಪಿತೃಗಳ ಆನಂದಗಳು ನೂರಾಗುವವಲ್ಲ, ಅದು ಒಂದು ಆಜಾನಜದೇವತೆಗಳ ಆನಂದವು, ಮತ್ತು ಅಕಾಮಹತನಾದ ಶ್ರೋತ್ರಿಯ ನದು. ಆ ಆಜಾನಜದೇವತೆಗಳ ಆನಂದಗಳು ನೂರಾಗುವವಲ್ಲ, ಅದು ಒಂದು ಕರ್ಮದೇವತೆಗಳಾದ ದೇವತೆಗಳ ಆನಂದವು ; ಅವರು ಕರ್ಮ ದಿಂದ ದೇವತೆಗಳೆನ್ನು ಸೇರಿಕೊಂಡಿರುತ್ತಾರೆ. ಮತ್ತು (ಅದು) ಅಕಾಮ ಹತನಾದ ಶ್ರೋತ್ರಿಯನದೂ (ಆಗಿರುತ್ತದೆ). ಆ ಕರ್ಮದೇವತೆಗಳಾದ ದೇವತೆಗಳ ಆನಂದಗಳು ನೂರು ಆಗುವವಲ್ಲ, ಅದು ಒಂದು ದೇವತೆಗಳ ಆನಂದವು ; ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ದೇವತೆಗಳ ಆನಂದಗಳು ನೂರು ಆಗುವವಲ್ಲ, ಅದು ಒಂದು ಇಂದ್ರನ ಆನಂದವು ; ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ಇಂದ್ರನ ಆನಂದಗಳು ನೂರಾಗುವವಲ್ಲ, ಅದು ಒಂದು ಬೃಹಸ್ಪತಿಯ ಆನಂದವು ; ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ಬೃಹಸ್ಪತಿಯ ಆನಂದಗಳು

ನೂರಾಗುವವಲ್ಲ, ಅದು ಒಂದು ಪ್ರಜಾಪತಿಯ ಆನಂದವು, ಮತ್ತು ಅಕಾಮಹತನಾದ ಶ್ರೋತ್ರಿಯನದು. ಆ ಪ್ರಜಾಪತಿಯ ಆನಂದಗಳು ನೂರಾಗುವವಲ್ಲ, ಅದು ಒಂದು ಬ್ರಹ್ಮದ ಆನಂದವು ; ಮತ್ತು ಅಕಾಮ ಹತನಾದ ಶ್ರೋತ್ರಿಯನದು.

(ಭಾಷ್ಯ)

೧೯. ಯುವಾ ಪ್ರಥಮವಯಾಃ । ಸಾಧುಯುವಾ ಇತಿ । ಸಾಧುಶ್ಚ ಅಸೌ ಯುವಾ ಚ ಇತಿ ಯೂನೋ ವಿಶೇಷಣಮ್ । ಯುವಾಪಿ ಅಸಾಧುರ್ಭವತಿ, ಸಾಧುರಪಿ ಅಯುವಾ ; ಅತೋ ವಿಶೇಷಣಂ ಯುವಾ ಸ್ಯಾತ್ ಸಾಧುಯುವಾ ಇತಿ । ಅಧ್ಯಾಯಕಃ ಅಧೀತವೇದಃ । ಆಶಿಷ್ಠಃ ಆಶಾಸ್ಯತಮಃ । ದ್ರಢಿಷ್ಠಃ ದೃಢತಮಃ । ಬಲಿಷ್ಠಃ ಬಲವತ್ತಮಃ । ಏವಮ್ ಆಧ್ಯಾತ್ಮಿಕಸಾಧನಸಂಪನ್ನಃ । ತಸ್ಯ ಇಯಂ ಪೃಥಿವೀ ಉರ್ವೀ ಸರ್ವಾ ವಿತ್ತಸ್ಯ ವಿತ್ತೇನ ಉಪಭೋಗಸಾಧನೇನ ದೃಷ್ಟಾರ್ಥೇನ ಅದೃಷ್ಟಾರ್ಥೇನ ಚ ಕರ್ಮಸಾಧನೇನ ಸಂಪನ್ನಾ ಪೂರ್ಣಾ (ಸ್ಯಾತ್) । ರಾಜಾ ಪೃಥಿವೀಪತಿಃ ಇತ್ಯರ್ಥಃ । ತಸ್ಯ ಯ ಆನಂದಃ ಸ ಏಕಃ ಮಾನುಷಃ ಮನುಷ್ಯಾಣಾಂ ಪ್ರಕೃಷ್ಟಃ ಏಕ ಆನಂದಃ ॥

(ಭಾಷ್ಯಾರ್ಥ)

ಯೌವನವಂತನೆಂದರೆ ಮೊದಲನೆಯ ವಯಸ್ಸಿನವನು. 'ಒಳ್ಳೆಯ ಯೌವನವಂತನು' ಎಂಬಲ್ಲಿ ಒಳ್ಳೆಯವನೂ ಯೌವನವಂತನೂ (ಆಗಿರಬೇಕು) ಎಂದು ಯೌವನವಂತನಿಗೆ ವಿಶೇಷಣವನ್ನು ಕೊಟ್ಟಿರುತ್ತದೆ. ಯೌವನವಂತನಾದರೂ ಒಳ್ಳೆಯವನಾಗದಿರುವದುಂಟು ; ಒಳ್ಳೆಯವನಾದರೂ ಯೌವನವಂತನಲ್ಲದೆ ಇರುವದುಂಟು ; ಆದ್ದರಿಂದ ಯೌವನವಂತನಾಗಿರಬೇಕು, ಒಳ್ಳೆಯ ಯೌವನವಂತನಾಗಿರಬೇಕು ಎಂದು ವಿಶೇಷಣವನ್ನು (ಕೊಟ್ಟಿರುತ್ತದೆ). ಅಧ್ಯಯನವನ್ನು ಮಾಡಿದವನು ಎಂದರೆ ವೇದವನ್ನು ಅಧ್ಯಯನಮಾಡಿದವನು. ಆಶಿಷ್ಠನು ಎಂದರೆ ಅತ್ಯಂತವಾಗಿ ಆಶೆಯುಳ್ಳವನು,[1] ದ್ರಢಿಷ್ಠನು ಎಂದರೆ ಅತ್ಯಂತ ಗಟ್ಟಿಗನು, ಬಲಿಷ್ಠನು ಎಂದರೆ ಅತ್ಯಂತ ಬಲವಂತನು. ಹೀಗೆ ಒಳಗಿನ ಸಾಧನೆಗಳಿಂದ ಕೂಡಿರುವವನಾ

1. 'ಆಶು' ಎಂಬುದಕ್ಕೆ 'ಇಷ್ಠ' ಎಂಬ ಪ್ರತ್ಯಯವು ಸೇರಿದೆ ಎಂದು ಭಾವಿಸಿದರೆ ಅತ್ಯಂತವೇಗವಾಗಿರುವವನು ಎಂದು ಅರ್ಥಮಾಡಬಹುದಾಗಿತ್ತು. ಮನುಷ್ಯರಲ್ಲಿ ಹೆಚ್ಚಿನ ಆಶೆಯೂ ಅದನ್ನು ಪೂರ್ತಿಗೊಳಿಸಿಕೊಳ್ಳುವ ಸಾಧನವೂ ಉಳ್ಳವನೂ ಎಂಬುದನ್ನು ತಿಳಿಸುವದಕ್ಕೆ ಭಾಷ್ಯದ ಅರ್ಥವು ಸಾಧಕವಾಗಿರುತ್ತದೆ.

(ಗಿರಬೇಕು). ಇವನಿಗೆ ಈ ಪೃಥಿವಿಯು ಭೂಮಿಯು ಎಲ್ಲವೂ (ವಿತ್ತಸ್ಯ - ವಿತ್ತೇನ) ವಿತ್ತದಿಂದ ಎಂದರೆ ಉಪಭೋಗಸಾಧನವಾದ, ದೃಷ್ಟ(ವಾದ ಈ ಲೋಕದ) ಪ್ರಯೋಜನವನ್ನೂ ಅದೃಷ್ಟ(ವಾದ ಪರಲೋಕದ) ಪ್ರಯೋಜನವನ್ನೂ ಕೊಡುವ ಕರ್ಮಸಾಧನದಿಂದ[1] ಪೂರ್ಣವಾಗಿ(ರಬೇಕು). ರಾಜನಾಗಿ (ಇರಿಯು) ನೆಲದೊಡೆಯ (ನಾಗಿರಬೇಕು) ಎಂದರ್ಥ. ಅವನಿಗಿರುವ ಆನಂದವಿದೆಯಲ್ಲ, ಅದು ಮಾನುಷವಾದ ಮನುಷ್ಯರಿಗಿರುವ ಉತ್ತಮವಾದ ಒಂದು ಆನಂದ(ವಾಗುವದು).

ಲೌಕಿಕಾನಂದದ ತಾರತಮ್ಯಕ್ಕೆ ಕಾರಣ

(ಭಾಷ್ಯ)

ಸೈಷ ತೇ ಯೇ ಶತಂ ಮಾನುಷಾ ಆನನ್ದಾಃ ಸ ಏಕೋ ಮನುಷ್ಯ ಗನ್ಧರ್ವಾಣಾಮ್ ಆನನ್ದಃ । ಮಾನುಷಾನನ್ದಾತ್ ಶತಗುಣೇನ ಉತ್ಕೃಷ್ಟಃ ಮನುಷ್ಯ ಗನ್ಧರ್ವಾಣಾಮ್ ಆನನ್ದೋ ಭವತಿ । ಮನುಷ್ಯಾಃ ಸನ್ತಃ ಕರ್ಮ ವಿದ್ಯಾವಿಶೇಷಾತ್ ಗನ್ಧರ್ವತ್ವಂ ಪ್ರಾಪ್ತಾ ಮನುಷ್ಯಗನ್ಧರ್ವಾಃ । ತೇ ಹಿ ಅನ್ತರ್ಧಾನಾದಿಶಕ್ತಿಸಂಪನ್ನಾಃ ಸೂಕ್ಷ್ಮಕಾರ್ಯಕರಣಾಃ । ತಸ್ಮಾತ್ ಪ್ರತಿಘಾತಾಲ್ಪತ್ವಂ ತೇಷಾಂ ದ್ವನ್ದ್ವಪ್ರತಿಘಾತ ಶಕ್ತಿಸಾಧನಸಂಪತ್ತಿಶ್ಚ । ತತಃ ಅಪ್ರತಿಹನ್ಯಮಾನಸ್ಯ ಪ್ರತೀಕಾರವತಃ ಮನುಷ್ಯ ಗನ್ಧರ್ವಸ್ಯ ಸ್ಯಾತ್ ಚಿತ್ತಪ್ರಸಾದಃ । ತತ್ಪ್ರಸಾದವಿಶೇಷಾತ್ ಸುಖವಿಶೇಷಾಭಿವ್ಯಕ್ತಿಃ । ಏವಂ ಪೂರ್ವಸ್ಯಾಃ ಪೂರ್ವಸ್ಯಾ ಭೂಮೇಃ ಉತ್ತರಸ್ಯಾಮುತ್ತರಸ್ಯಾಂ ಭೂಮೌ ಪ್ರಸಾದವಿಶೇಷತಃ ಶತಗುಣೇನ ಆನನ್ದೋತ್ಕರ್ಷ ಉಪಪದ್ಯತೇ ॥

(ಭಾಷ್ಯಾರ್ಥ)

"ಆ ಮಾನುಷ ಆನಂದಗಳು ನೂರಾಗುವವಲ್ಲ, ಅದು ಒಂದು ಮನುಷ್ಯ ಗಂಧರ್ವರ ಆನಂದವು." ಮಾನುಷ ಆನಂದಕ್ಕಿಂತ ಮನುಷ್ಯ ಗಂಧರ್ವರ ಆನಂದವು ನೂರುಮಡಿಯಾಗಿ ಹೆಚ್ಚಿನದಾಗಿರುವದು. ಮನುಷ್ಯರಾಗಿದ್ದು ಕರ್ಮ ವಿಶೇಷದಿಂದಲೂ ಜ್ಞಾನ(ವಾಸನೆಯ) ವಿಶೇಷದಿಂದಲೂ[2] ಗಂಧರ್ವತ್ವವನ್ನು ಹೊಂದಿದವರು 'ಮನುಷ್ಯ ಗಂಧರ್ವರು'. ಏಕೆಂದರೆ ಅವರು ಅಂತರ್ಧಾನವೇ ಮುಂತಾದ ಶಕ್ತಿಗಳಿಂದೊಡಗೂಡಿ ಸೂಕ್ಷ್ಮವಾದ ದೇಹೇಂದ್ರಿಯಗಳುಳ್ಳವರಾಗಿರುತ್ತಾರೆ. ಆದ್ದರಿಂದ ಅವರಿಗೆ ಅಡಚಣೆಗಳು

1. ಬೃ. ೧-೪-೧೭.

2. ಈ ಜ್ಞಾನವು ಹಿಂದಿನ ಜನ್ಮದ ವಿಚಾರಗಳು ಮತ್ತು ಹಿಂದೆ ಅನುಭವಿಸಿದ್ದರೆ ವಾಸನೆ - ಇವುಗಳಿಂದಾಗಿರುತ್ತದೆ. ಇದು ಉತ್ಕೃಷ್ಟವಾಗಿದ್ದರೆ ಉತ್ಕೃಷ್ಟಕರ್ಮಕ್ಕೆ ಮುಂದಿನ ಜನ್ಮದಲ್ಲಿ ಸಾಧಕವಾಗುತ್ತದೆ. ಬೃ. ಭಾ. ೪-೪-೨

ಅಲ್ಪವಾಗಿರುತ್ತವೆ ; ದ್ವಂದ್ವಗಳಿಂದಾಗುವ ಅಡಚಣೆಗಳನ್ನು[1] ತಪ್ಪಿಸಿಕೊಳ್ಳುವ ಶಕ್ತಿಯೂ ಸಾಧನವೂ ಅವರಿಗೆ (ಇರುತ್ತದೆ). ಆದ್ದರಿಂದ (ಯಾವ) ಅಡಚಣೆಯೂ ಇಲ್ಲದೆ (ಅಡಚಣೆಗೆ) ಪ್ರತೀಕಾರವನ್ನೂ ಇಟ್ಟುಕೊಂಡಿರುವ ಮನುಷ್ಯಗಂಧರ್ವನಿಗೆ ಚಿತ್ತವು ತಿಳಿಯಾಗುವುದು.[2] ಹಾಗೆ ಆದ ಆ (ಚಿತ್ತದ) ತಿಳಿಯ ಕಾರಣದಿಂದ ಒಂದಾನೊಂದು (ಹೆಚ್ಚಿನ) ಸುಖವು ತೋರಿಕೊಳ್ಳುವದು.[3] ಹೀಗೆಯೇ ಹಿಂದುಹಿಂದಿನ ಅಂತಸ್ತಿಗಿಂತ ಮುಂದುಮುಂದಿನ ಅಂತಸ್ತಿನಲ್ಲಿ (ಚಿತ್ತವು) ಹೆಚ್ಚು ಹೆಚ್ಚು ತಿಳಿಯಾಗುವದರಿಂದ ನೂರುಮಡಿಯಾಗಿ ಆನಂದವು ಹೆಚ್ಚುವದೆಂಬುದು ಯುಕ್ತವಾಗಿದೆ.

(ಭಾಷ್ಯ)

೨೦೦. ಪ್ರಥಮಂ ತು ಅಕಾಮಹತಾಗ್ರಹಣಂ ಮನುಷ್ಯವಿಷಯಭೋಗ ಕಾಮಾನಭಿಹತಸ್ಯ ಶ್ರೋತ್ರಿಯಸ್ಯ ಮನುಷ್ಯಾನನ್ದಾತ್ ಶತಗುಣೇನ ಆನನ್ದೋ ತ್ಕರ್ಷೋ ಮನುಷ್ಯಗನ್ಧರ್ವೇಣ ತುಲ್ಯೋ ವಕ್ತವ್ಯಃ ಇತ್ಯೇವಮರ್ಥಮ್ । 'ಸಾಧು ಯುವಾಧ್ಯಾಯಕಃ' ಇತಿ ಶ್ರೋತ್ರಿಯತ್ವಾವೃಜಿನತ್ವೇ ಗೃಹ್ಯೇತೇ । ತೇ ಹಿ ಅವಿಶಿಷ್ಟೇ ಸರ್ವತ್ರ । ಅಕಾಮಹತತ್ವಂ ತು ವಿಷಯೋತ್ಕರ್ಷಾಪಕರ್ಷತಃ ಸುಖೋತ್ಕರ್ಷಾಪ ಕರ್ಷಾಯ ವಿಶೇಷ್ಯತೇ । ಅತಃ ಅಕಾಮಹತಗ್ರಹಣಂ ತದ್ವಿಶೇಷತಃ ಶತಗುಣ ಸುಖೋತ್ಕರ್ಷೋಪಲಬ್ಧೇಃ ಅಕಾಮಹತತ್ವಸ್ಯ ಪರಮಾನನ್ದಪ್ರಾಪ್ತಿಸಾಧನತ್ವ ವಿಧಾನಾರ್ಥಮ್ ॥

(ಭಾಷ್ಯಾರ್ಥ)

ಮೊದಲನೆಯ (ಪರ್ಯಾಯದಲ್ಲಿ) 'ಅಕಾಮಹತ' ಎಂಬ ಮಾತನ್ನು ಪ್ರಯೋಗಿಸದೆ ಇರುವದೇಕೆಂದರೆ, ಮನುಷ್ಯರ ವಿಷಯಭೋಗಗಳ ಕಾಮದ ಹೊಡೆತವಿಲ್ಲದ ಶ್ರೋತ್ರಿಯನಿಗೆ ಮನುಷ್ಯಾನಂದಕ್ಕಿಂತ ನೂರುಮಡಿಯಾಗಿ ಹೆಚ್ಚಿನ ಮನುಷ್ಯಗಂಧರ್ವನ (ಆನಂದಕ್ಕೆ) ಸಮನಾದ ಆನಂದವು (ಆಗುವ)ದೆಂದು ಹೇಳಬೇಕೆಂಬ ಉದ್ದೇಶದಿಂದ.[4] 'ಸಾಧು ಯುವಾ', 'ಅಧ್ಯಾಯಕಃ' ಎಂಬ (ಮಾತು

---

1. ಶೀತೋಷ್ಣಾದಿಗಳಿಂದಾಗುವ ಬಾಧೆಯನ್ನು.

2. ಹೊರಗೆ ಚಿತ್ತಕ್ಕೆ ಆಗುವ ತಡೆಯೇ ಅದು ತಿಳಿಯಾಗದಿರುವದಕ್ಕೆ ಕಾರಣವು.

3. ಆನಂದವು ಬ್ರಹ್ಮಸ್ವರೂಪವೇ ಆಗಿದ್ದರೂ ಚಿತ್ತಪ್ರಸನ್ನತೆಯ ತಾರತಮ್ಯದಿಂದ ಅಷ್ಟಷ್ಟುಮಟ್ಟಿಗೆ ತೋರಿಕೊಳ್ಳುತ್ತದೆ.

4. ಹಿಂದಿನ ಅಂತಸ್ತಿನ ಭೋಗದಲ್ಲಿ ಕಾಮವಿಲ್ಲದವರಿಗೆ ಮುಂದಿನ ಅಂತಸ್ತಿನ ಆನಂದವಾಗುವದೆಂಬುದನ್ನು ತಿಳಿಸುವ ಉದ್ದೇಶದಿಂದ.

ಗಳಿಂದ) ಶ್ರೋತ್ರಿಯತ್ವ, ಅವೃಜಿನತ್ವ [1] - (ಇವನ್ನು) ಗ್ರಹಿಸಬೇಕು ಏಕೆಂದರೆ ಅವು ಎಲ್ಲರಲ್ಲಿಯೂ ಸಮಾನವಾಗಿರುತ್ತವೆ [2] ಆದರೆ ಕಾಮದ ಹೊಡೆತವಿಲ್ಲದಿರುವಿಕೆ ಎಂಬುದನ್ನು ಮಾತ್ರ ವಿಷಯದ ಹೆಚ್ಚುಗಾರಿಕೆ, ಅಥವಾ ಕೀಳುತನ - ಇವುಗಳಿಂದ ಸುಖವೂ ಉತ್ತಮವಾದದ್ದು ಅಥವಾ ಕೀಳಾದದ್ದು (ಆಗುವದೆಂದು ತಿಳಿಸುವದಕ್ಕಾಗಿ) ವಿಶೇಷವಾಗಿ ಹೇಳಿರುತ್ತದೆ.[3] ಆದ್ದರಿಂದ 'ಅಕಾಮಹತ' ಎಂಬ ಮಾತನ್ನು ಪ್ರಯೋಗಿಸಿರುವದು ಅದು ವಿಶೇಷವಾದಂತೆ ನೂರು(ನೂರು) ಮಡಿಯಾಗಿ ಹೆಚ್ಚಿನ ಸುಖವು ಕಾಣಬರುವದರಿಂದ (ಅಕಾಮಹತತ್ವವು) ಪರಮಾನಂದಪ್ರಾಪ್ತಿಗೆ ಸಾಧನವೆಂದು ತಿಳಿಸುವದಕ್ಕೆ.[4]

ಹಿರಣ್ಯಗರ್ಭನವರೆಗಿನ ಆನಂದಿಜೀವರುಗಳು

(ಭಾಷ್ಯ)

೨೦೧. ವ್ಯಾಖ್ಯಾತಮನ್ಯತ್ । ದೇವಗನ್ಧರ್ವಾಃ ಜಾತಿತ ಏಃ ಚಿರಲೋಕಲೋಕಾನಾಮ್ ಇತಿ ಪಿತೃಣಾಂ ವಿಶೇಷಣಮ್ । ಚಿರಕಾಲಸ್ಥಾಯೀ ಲೋಕಃ ಯೇಷಾಂ ಪಿತೃಣಾಮ್ ತೇ ಚಿರಲೋಕಲೋಕಾಃ । ಆಜಾನ ಇತಿ ದೇವ ಲೋಕಃ ತಸ್ಮಿನ್ ಆಜಾನೇ ಜಾತಾಃ ಆಜಾನಜಾಃ ದೇವಾಃ । ಸ್ಮಾರ್ತಕರ್ಮ ವಿಶೇಷತೋ ದೇವಸ್ಥಾನೇಷು ಜಾತಾಃ । ಕರ್ಮದೇವಾಃ ಯೇ ವೈದಿಕೇನ ಕರ್ಮಣಾ ಅಗ್ನಿಹೋತ್ರಾದಿನಾ ಕೇವಲೇನ ದೇವಾನ್ ಅಪಿಯನ್ತಿ । ದೇವಾಃ ಇತಿ ತ್ರಯಸ್ತ್ರಿಂಶತ್ ಹವಿರ್ಭುಜಃ । ಇನ್ದ್ರಃ ತೇಷಾಂ ಸ್ವಾಮೀ । ತಸ್ಯ ಆಚಾರ್ಯಃ ಬೃಹಸ್ಪತಿಃ । ಪ್ರಜಾಪತಿಃ ವಿರಾಟ್ ತ್ರೈಲೋಕ್ಯಶರೀರಃ । ಬ್ರಹ್ಮಾ ಸಮಷ್ಟಿವ್ಯಷ್ಟಿ

1. ಬೃ. ೪-೩-೩೩ನ್ನು ನೋಡಿ.

2. ಕೆಳಗಿನ ಭೂಮಿಕೆಗಳಲ್ಲಿಯೂ ಮೇಲಿನ ಭೂಮಿಕೆಗಳಲ್ಲಿಯೂ ಇರುತ್ತವೆ. ಆದ್ದರಿಂದ ಅವು ಮೇಲಿನ ಅಂತಸ್ತಿನ ಆನಂದಕ್ಕೆ ಅಸಾಧಾರಣವಾದ ಹೇತುವಲ್ಲ

3. ವಿಷಯವು ಉತ್ತಮವಾದಂತೆ ಆನಂದವೂ ಉತ್ತಮವಾಗುತ್ತದೆ ಎಂದು ತಿಳಿಸುವದಕ್ಕೆ ಕೆಳಗಿನಂತಸ್ತಿನ ವಿಷಯದಲ್ಲಿ ಅಕಾಮಹತತ್ವವನ್ನೂ ಹೇಳಿದೆ. ಆದ್ದರಿಂದ ಅಕಾಮ ಹತತ್ವವೆಂಬುದು ಪ್ರತಿಯೊಂದು ಪರ್ಯಾಯದಲ್ಲಿಯೂ ಬೇರೆಬೇರೆಯ ಸ್ವಭಾವದ್ದು.

4. ತನ್ನ ವಿಷಯಕ್ಕಿಂತ ಕಡಿಮೆಯಾಗಿರುವ ಕೀಳ್ತರದ ವಿಷಯಗಳಲ್ಲಿ ಅಕಾಮ ಹತತ್ವವುಂಟಾದರೆ ಆಯಾ ವಿಷಯದ ಆನಂದವುಂಟಾಗುತ್ತದೆ. ಆದ್ದರಿಂದ ಪರಮಾನಂದವಾದ ಬ್ರಹ್ಮಾನಂದವೂ ಅದಕ್ಕಿಂತ ಕೀಳಾಗಿರುವ ಎಲ್ಲಾ ಅನಾತ್ಮವಸ್ತುಗಳಲ್ಲಿ ಅಕಾಮಹತನಾಗಿರುವದರಿಂದಲೇ ಉಂಟಾಗುತ್ತದೆ.

ರೂಪಃ ಸಂಸಾರಮಣ್ಡಲವ್ಯಾಪೀ ; ಯತ್ರ ಏತೇ ಆನನ್ದಭೇದಾಃ ವಿಕತಾಂ ಗಚ್ಛನ್ತಿ, ಧರ್ಮಶ್ಚ ತನ್ನಿಮಿತ್ತಃ ಜ್ಞಾನಂ ಚ ತದ್ವಿಷಯಮ್ ಅಕಾಮಹತತ್ವಂ ಚ ನಿರತಿಶಯಂ ಯತ್ರ, ಸ ಏಷ ಹಿರಣ್ಯಗರ್ಭೋ ಬ್ರಹ್ಮಾ । ತಸ್ಯೈಷ ಆನನ್ದಃ ಶ್ರೋತ್ರಿಯೇಣ ಅವೃಜಿನೇನ ಅಕಾಮಹತೇನ ಚ ಸರ್ವತಃ ಪ್ರತ್ಯಕ್ಷಮ್ ಉಪಲಭ್ಯತೇ ॥

(ಭಾಷ್ಯಾರ್ಥ)

ಉಳಿದದ್ದನ್ನು ವಿವರಿಸಿದಂತೆಯೇ (ಆಗಿದೆ). ದೇವಗಂಧರ್ವರು ಏಂದರೆ ಹುಟ್ಟುವಾಗಲೇ (ಗಂಧರ್ವರಾಗಿ ಹುಟ್ಟಿರುವವರು). ಚಿರಲೋಕಲೋಕವುಳ್ಳ ಎಂಬುದು ಪಿತೃಗಳಿಗೆ ವಿಶೇಷಣವು. ಬಹುಕಾಲ ನಿಲ್ಲುವ ಲೋಕವು ಯಾರಿಗೆ ಎಂದರೆ (ಯಾವ) ಪಿತೃಗಳಿಗೆ (ಇರುವದೋ) ಅವರು ಚಿರಲೋಕಲೋಕವುಳ್ಳವರೆನಿಸುತ್ತಾರೆ. ಆಜಾನವೆಂದರೆ ದೇವಲೋಕವು ; ಆ ಆಜಾನದಲ್ಲಿ ಹುಟ್ಟುವವರು ಆಜಾನಜದೇವತೆಗಳು, ಕೆಲವು ಸ್ಮಾರ್ತಕರ್ಮಗಳಿಂದ ದೇವತೆಗಳ ಸ್ಥಾನದಲ್ಲಿ ಹುಟ್ಟಿರುವವರು. ಕರ್ಮದೇವತೆಗಳು ಎಂದರೆ ಅಗ್ನಿಹೋತ್ರವೇ ಮುಂತಾದ ಬರಿಯ ಶ್ರೌತಕರ್ಮಗಳಿಂದಲೇ ದೇವತೆಗಳ ಸಾಯುಜ್ಯವನ್ನು ಪಡೆದಿರುವವರು ; ದೇವತೆಗಳು ಎಂದರೆ ಹವಿಸ್ಸನ್ನು ಅನುಭವಿಸುವ ಮೂವತ್ತುಮೂರು ಮಂದಿ.[1] ಇಂದ್ರನೆಂದರೆ ಆ (ದೇವತೆಗಳ) ಒಡೆಯ. ಅವನ ಆಚಾರ್ಯನು ಬೃಹಸ್ಪತಿ. ಪ್ರಜಾಪತಿ ಎಂದರೆ ಮೂರು ಲೋಕಗಳೆಂಬ ಶರೀರವುಳ್ಳ ವಿರಾಟ್ಪುರುಷನು. ಬ್ರಹ್ಮನು ಎಂದರೆ ಸಮಷ್ಟಿ ರೂಪನಾಗಿಯೂ ವ್ಯಷ್ಟಿರೂಪನಾಗಿಯೂ[2] ಸಂಸಾರಮಂಡಲವನ್ನೆಲ್ಲ ವ್ಯಾಪಿಸಿರುವವನು ; ಆತನಲ್ಲಿ ಈ (ಮೇಲೆ ಹೇಳಿದ) ಬೇರೆಬೇರೆಯ ಆನಂದಗಳು ಒಂದಾಗಿ ಸೇರಿಕೊಂಡಿರುವವು[3] ; ಆ (ಆನಂದಕ್ಕೆ) ನಿಮಿತ್ತವಾದ ಧರ್ಮವೂ ಅದರ ವಿಷಯವಾದ ಜ್ಞಾನವೂ ಕಾಮದ ಹೊಡೆತವಿಲ್ಲದಿರುವಿಕೆಯೂ, ಆತನಲ್ಲಿ ಮಿಗಿಲಿಲ್ಲದಷ್ಟು ಇರುವವು.[4] ಆ ಈತನೇ ಹಿರಣ್ಯಗರ್ಭನೆಂಬ ಬ್ರಹ್ಮನು. ಆತನ ಈ ಆನಂದವು

1. ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಇಂದ್ರನು, ಪ್ರಜಾಪತಿ - ಈ ಮೂವತ್ತು ಮೂರು ಮಂದಿ ದೇವತೆಗಳೂ. ಇಲ್ಲಿ ಇಂದ್ರ, ಪ್ರಜಾಪತಿ - ಇಬ್ಬರನ್ನು ಬಿಟ್ಟು ಮಿಕ್ಕವರನ್ನು ಗ್ರಹಿಸಬೇಕು.

2. ಬೇರೆಬೇರೆಯಾಗಿ ತೋರುವ ಜೀವರುಗಳೂ ಅವರ ಒಟ್ಟೂ ಬ್ರಹ್ಮನೇ.

3. ಅವನಲ್ಲಿ ಅಡಕವಾಗಿರುವವು.

4. ಮುಂ. ಭಾ. ೧-೧-೧ ; ಬೃ. ಭಾ. ೧-೪-೬- ಇವುಗಳಲ್ಲಿ ಹಿರಣ್ಯಗರ್ಭನ ವಿಷಯದ ಚರ್ಚೆಯನ್ನು ನೋಡಿರಿ.

ಶ್ರೋತ್ರಿಯನೂ ಅವೃಜಿನನೂ[1] ಅಕಾಮಹತನೂ ಆಗಿರುವವನಿಗೆ ಎಲ್ಲೆಲ್ಲಿಯೂ[2] ಪ್ರತ್ಯಕ್ಷವಾಗಿ ಕಾಣಬರುತ್ತಿರುವದು.

ಪರಮಾನಂದಕ್ಕೆ ಸಾಧನಗಳು

(ಭಾಷ್ಯ)

೨೦೨. ತಸ್ಮಾತ್ ಏತಾನಿ ತ್ರೀಣಿ ಸಾಧನಾನಿ ಇತ್ಯವಗಮ್ಯತೇ । ತತ್ರ ಶ್ರೋತ್ರಿಯತ್ವಾವೃಜಿನತ್ವೇ ನಿಯತೇ, ಅಕಾಮಹತತ್ವಂ ತು ಉತ್ಪದ್ಯತೇ ಇತಿ ಪ್ರಕೃಷ್ಟಸಾಧನತಾ ಅವಗಮ್ಯತೇ ॥

(ಭಾಷ್ಯಾರ್ಥ)

ಹೀಗಿರುವದರಿಂದ ಈ ಮೂರೂ (ಪರಮಾನಂದಕ್ಕೆ) ಸಾಧನಗಳು ಎಂದು ನಿಶ್ಚಯವಾಯಿತು. ಇವುಗಳಲ್ಲಿ ಶ್ರೋತ್ರಿಯತ್ವ, ಅವೃಜಿನತ್ವ - ಇವುಗಳು ಒಂದೇ ಸಮವಾಗಿರುತ್ತವೆ ; ಅಕಾಮಹತತ್ವವು ಮಾತ್ರ ಹೆಚ್ಚುತ್ತಿರುತ್ತದೆ. ಆದ್ದರಿಂದ (ಅದು ಪರಮಾನಂದಕ್ಕೆ) ಎಲ್ಲಕ್ಕಿಂತಲೂ ಹೆಚ್ಚಿನ ಸಾಧನವೆಂದು ನಿಶ್ಚಯವಾಯಿತು.

ಪರಮಾನಂದ

(ಭಾಷ್ಯ)

೨೦೩. ತಸ್ಯ ಅಕಾಮಹತತ್ವಪ್ರಕರ್ಷತಶ್ಚ ಉಪಲಭ್ಯಮಾನಃ ಶ್ರೋತ್ರಿಯ ಪ್ರತ್ಯಕ್ಷೋ ಬ್ರಹ್ಮಣ ಆನನ್ದಃ ಯಸ್ಯ ಪರಮಾನನ್ದಸ್ಯ ಮಾತ್ರಾ ವಿಕದೇಶಃ "ಏತಸ್ಯೈವಾನನ್ದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ" (ಬೃ. ೪-೩-೩೨) ಇತಿ ಶ್ರುತ್ಯನ್ತರಾತ್, ಸ ಏಷ ಆನನ್ದಃ, ಯಸ್ಯ ಮಾತ್ರಾಃ ಸಮುದ್ರಾಮ್ಬುಸ ಇವ ವಿಪ್ರುಷಃ ಪ್ರವಿಭಕ್ತಾಃ ಯತ್ಕೈಕತಾಂ ಗತಾಃ ಸ ಏಷ ಪರಮಾನನ್ದಃ ಸ್ವಾಭಾವಿಕಃ । ಅದ್ವೈತತ್ವಾತ್ । ಆನನ್ದಾನನ್ದಿನೋಶ್ಚ ಅವಿಭಾಗೋಽತ್ರ ॥

(ಭಾಷ್ಯಾರ್ಥ)

ಅಕಾಮಹತತ್ವವು (ತೀರ) ಹೆಚ್ಚಾಗಿರುವದರಿಂದ ಅನುಭವಕ್ಕೆ ಬರುವ ದಾಗಿಯೂ ಶ್ರೋತ್ರಿಯರಿಗೆ ಪ್ರತ್ಯಕ್ಷವಾಗಿರುವದಾಗಿಯೂ ಇರುವ ಆ ಬ್ರಹ್ಮನ ಆನಂದವು "ಇದೇ ಆನಂದದ ಮಾತ್ರೆಯನ್ನು ಮಿಕ್ಕ ಭೂತಗಳು ಆಶ್ರಯಿಸಿ ಕೊಂಡಿರುವವು" (ಬೃ. ೪-೩-೩೨) ಎಂಬ ಬೇರೊಂದು ಶ್ರುತಿಯು ಹೇಳಿರುವಂತೆ

---

1. ಪಾಪರಹಿತನೂ. ಪಾಪವು ಆನಂದಕ್ಕೆ ಮರೆಯಾಗಿರುವದು.

2. ಗೀ. ಭಾ. ೫-೨೬.

ಯಾವ ಪರಮಾನಂದಕ್ಕೆ ಮಾತ್ರೆಯಾಗಿ ಎಂದರೆ ಒಂದಂಶವಾಗಿ (ಇರುವದೋ), ಆ ಈ ಆನಂದವು.[1] ಯಾವದರ ಅಂಶಗಳಾಗಿರುವ (ಮಿಕ್ಕ ಆನಂದಗಳು) ಸಮುದ್ರದ ನೀರಿನ ಬೇರೆಬೇರೆಯಾಗಿರುವ ಹನಿಗಳಂತೆ ಯಾವದರಲ್ಲಿ ಒಂದಾಗಿರುವವೋ[2] ಆ ಈ ಪರಮಾನಂದವು, ಸ್ವಾಭಾವಿಕವಾದದ್ದು ; ಏಕೆಂದರೆ ಅದು ತನಗೆರಡನೆಯದಿಲ್ಲ ವ್ವಾಗಿರುತ್ತದೆ. ಮತ್ತು ಇಲ್ಲಿ ಆನಂದ, ಆನಂದಿ - ಇವೆರಡೂ ಬಿಂಗಡವಾಗಿರದೆ (ಒಂದಾಗಿ)ರುವವು.[3]

ಪರಮಾನಂದವು ಅದ್ವಿತೀಯವಾಗಿರುತ್ತದೆ

(ಭಾಷ್ಯ)

೨೦೫. ತ್ತದೇತನ್ಮೀಮಾಂಸಾಫಲಮ್ ಉಪಸಂಹ್ರಿಯತೇ - ''ಸ ಯಶ್ಚಾಯಂ ಪುರುಷೇ'' ಇತಿ ॥

(ಭಾಷ್ಯಾರ್ಥ)

ಆ ಈ ವಿಚಾರದ ಫಲವನ್ನು ''ಸ ಯಶ್ಚಾಯಂ ಪುರುಷೇ'' ಎಂಬ (ವಾಕ್ಯ ದಲ್ಲಿ) ಉಪಸಂಹಾರಮಾಡಲಾಗುತ್ತದೆ :-

ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ ॥೪॥

೪. ಯಾವ ಆ ಇವನು ಪುರುಷನಲ್ಲಿರುವನೋ ಮತ್ತು ಯಾವ ಅವನು ಆದಿತ್ಯನಲ್ಲಿರುವನೋ ಅವನು ಒಬ್ಬನೇ.

(ಭಾಷ್ಯ)

೨೦೬. ಯೋ ಗುಹಾಯಾಂ ನಿಹಿತಃ ಪರಮೇ ವ್ಯೋಮ್ನಿ ಆಕಾಶಾದಿಕಾರ್ಯಂ ಸೃಷ್ಟ್ವಾ ಅನ್ನಮಯಾನ್ತಂ ತದೇವಾನುಪ್ರವಿಷ್ಟಃ ಸ ''ಯಃ'' ಇತಿ ನಿರ್ದಿಶ್ಯತೇ । ಕೋಽಸೌ ? ಅಯಂ ಪುರುಷೇ । ಯಶ್ಚಾಸಾವಾದಿತ್ಯೇ । ಯಃ ಪರಮಾನನ್ದಃ

---

1. ''ಸ ಏಷ ಆನನ್ದಃ'', ''ಸ ಏಷ ಪರಮಾನನ್ದಃ'' ಎಂದು ಎರಡುಸಲ ಬಂದಿರುವದು ''ಸ್ವಾಭಾವಿಕಃ'' ಎಂಬುದರ ಸಂಬಂಧವನ್ನು ತಿಳಿಸುವದಕ್ಕೆ.

2. ''ಮಾತ್ರಾಃ'' ಎಂಬ ಮಾ॥ ಪಾಠವನ್ನು ಇಟ್ಟುಕೊಂಡಿದೆ. ವಿಪ್ರುಷಃ ಎಂಬ ದೃಷ್ಟಾಂತಕ್ಕೆ ಇದು ಅನುಗುಣವಾಗಿಯೂ ಇದೆಯಲ್ಲದೆ ಹಿರಣ್ಯಗರ್ಭನ ಆನಂದವೂ ಮಿಕ್ಕ ಆನಂದಗಳೂ ಪರಮಾನಂದದಲ್ಲಿಯೇ ಅಡಕವಾಗಿರುವವು ಎಂಬರ್ಥವನ್ನೂ ಕೊಡುತ್ತದೆ.

3. ತನಗೆರಡನೆಯದಿಲ್ಲವಾದ್ದರಿಂದ ಮತ್ತೊಂದರಿಂದ ಆದದ್ದಲ್ಲ, ಮತ್ತೊಂದರ ಧರ್ಮವೂ ಅಲ್ಲ - ಎಂದು 'ಅದ್ವಿತೀಯತ್ವಾತ್' ಎಂಬ ಪದವನ್ನು ಎರಡು ಕಡೆಗೂ ಅನ್ವಯಿಸಿಕೊಳ್ಳಬೇಕು.

ಶ್ರೋತ್ರಿಯಪ್ರತ್ಯಕ್ಷೋ ನಿರ್ದಿಷ್ಟಃ, ಯಸ್ಯ ಏಕದೇಶಂ ಬ್ರಹ್ಮಾದೀನಿ ಭೂತಾನಿ ಸುಖಾರ್ಹಾಣಿ ಉಪಜೀವನ್ತಿ - ಸ "ಯಶ್ಚಾಸಾವಾದಿತ್ಯೇ" ಇತಿ ನಿರ್ದಿಶ್ಯತೇ । ಸ ಏಕಃ । ಭಿನ್ನಪ್ರದೇಶಸ್ಥಘಟಾಕಾಶಾಕಾಶೈಕತ್ವವತ್ ॥

(ಭಾಷ್ಯಾರ್ಥ)

ಯಾವನು ಪರಮವ್ಯೋಮದಲ್ಲಿ ಗುಹೆಯಲ್ಲಿಡಲ್ಪಟ್ಟಿರುವನೋ[1] ಆಕಾಶವೇ ಮುಂತಾದ ಅನ್ನಮಯದವರೆಗಿನ ಕಾರ್ಯವನ್ನು ಸೃಷ್ಟಿಮಾಡಿ[2] ಅದನ್ನೇ ಒಳ ಹೊಕ್ಕಿರುವನೋ[3] ಅವನನ್ನು "ಸ ಯಃ" (ಯಾವ ಅವನು) ಎಂದು ತಿಳಿಸಿರುತ್ತದೆ ಅವನು ಯಾರು ? ಎಂದರೆ ಪುರುಷನಲ್ಲಿರುವ ಇವನು "ಯಾವ ಅವನು ಆದಿತ್ಯನಲ್ಲಿರುವನೋ" ಯಾವ ಪರಮಾನಂದ(ರೂಪನಾದ ಆತ್ಮನು) ಶ್ರೋತ್ರಿಯರಿಗೆ ಪ್ರತ್ಯಕ್ಷವಾಗಿರುವನೆಂದು ತಿಳಿಸಲಾಯಿತೋ ಯಾವ (ಪರಮಾತ್ಮನ ಆನಂದದ) ಒಂದಂಶವನ್ನು ಸುಖಿಕ್ಕೆ ತಕ್ಕ[4] ಬ್ರಹ್ಮನೇ ಮುಂತಾದ ಪ್ರಾಣಿಗಳು ಆಶ್ರಯಿಸಿಕೊಂಡು ಬಾಳುವವೋ ಅವನನ್ನು "ಯಶ್ಚಾಸಾವಾದಿತ್ಯೇ" (ಮತ್ತು ಯಾವ ಅವನು ಆದಿತ್ಯನಲ್ಲಿರುವನೋ) ಎಂದು ತಿಳಿಸಿರುತ್ತದೆ. ಅವನು, ಬೇರೆಬೇರೆಯ ಪ್ರದೇಶದಲ್ಲಿರುವ ಗಡಿಗೆಯ ಆಕಾಶವೂ (ಮಹಾ)ಕಾಶವೂ ಒಂದೇ ಆಗಿರುವಂತೆ, ಒಬ್ಬನೇ.[5]

(ಭಾಷ್ಯ)

೨೦೭. ನನು ತನ್ನಿರ್ದೇಶೇ "ಸ ಯಶ್ಚಾಯಂ ಪುರುಷೇ" ಇತಿ ಅವಿಶೇಷತೋಽಧ್ಯಾತ್ಮಂ ನ ಯುಕ್ತೋ ನಿರ್ದೇಶಃ । "ಯಶ್ಚಾಯಂ ದಕ್ಷಿಣೇಽರ್ಕ್ಷ" ಇತಿ ತು ಯುಕ್ತಃ । ಪ್ರಸಿದ್ಧತ್ವಾತ್ । ನ, ಪರಾಧಿಕಾರಾತ್ । ಪರೋ ಹಿ ಆತ್ಮಾ ಅತ್ರ ಅಧಿಕೃತಃ "ಅದೃಶ್ಯೇಽನಾತ್ಮ್ಯೇ" (೨-೭), 'ಭೀಷಾಽಸ್ಮಾದ್ ವಾತಃ ಪವತೇ' (೨-೮), "ಸೈಷಾ ಆನನ್ದಸ್ಯ ಮೀಮಾಂಸಾ" (೨-೮) ಇತಿ । ನ ಹಿ ಅಕಸ್ಮಾತ್ ಅಪ್ರಕೃತೋ ಯುಕ್ತೋ ನಿರ್ದೇಷ್ಟುಮ್ । ಪರಮಾತ್ಮವಿಜ್ಞಾನಂ ಚ ವಿವಕ್ಷಿತಮ್ । ತಸ್ಮಾತ್ ಪರ ಏವ ನಿರ್ದಿಶ್ಯತೇ "ಸ ಏಕಃ" ಇತಿ ॥

1. ೨-೧. 2. ೨-೧. 3. ೨-೬.

4. ಬರಿಯ ದುಃಖಿವನ್ನೇ ಅನುಭವಿಸುವ ಪಾಪಿಗಳನ್ನು ಬಿಟ್ಟು ಮಿಕ್ಕವರನ್ನೇ ಇಲ್ಲಿ ಭೂತಗಳೆಂಬ ಮಾತಿನಿಂದ ತಿಳಿಸಿದೆ ಎಂದು ಭಾವ.

5. ಗಡಿಗೆ ಎಂಬ ಉಪಾಧಿಯಿಂದ ಬೇರೆಯಾಗಿ ತೋರಿದರೂ ಆಕಾಶವು ಯಾವಾಗಲೂ ಅಖಂಡಿತವಾಗಿ ಒಂದೇ ಆಗಿರುವಂತೆ ಆತ್ಮನ ಸ್ವರೂಪವಾದ ಆನಂದವು ಅಯಾ ಜೀವರಲ್ಲಿ ಉಪಾಧಿಯಿಂದ ಬೇರೆಬೇರೆಯಾಗಿ ತೋರಿದರೂ ಅಖಂಡಿತವಾಗಿ ಒಂದೇ ಆಗಿರುತ್ತದೆ ಎಂದರ್ಥ.

(ಭಾಷ್ಯಾರ್ಥ)

(ಆಕ್ಷೇಪ :-) ಅಧ್ಯಾತ್ಮವಾಗಿ ಆ (ಆತ್ಮನನ್ನು) ತಿಳಿಸುವಾಗ ಯಾವ ವಿಶೇಷವೂ ಇಲ್ಲದೆ "ಯಾವ ಆ ಇವನು ಪುರುಷನಲ್ಲಿರುವನೋ" ಎಂದು ಗೊತ್ತಾದ (ಪ್ರದೇಶವನ್ನು ಹೇಳದೆ) ತಿಳಿಸಿರುವದು ಸರಿಯಾಗುವದಿಲ್ಲವಲ್ಲ [1] "ಮತ್ತು ಯಾವ ಈತನು ಬಲಗಣ್ಣಿನಲ್ಲಿರುವನೋ" ಎಂದು ಬೇಕಾದರೆ (ತಿಳಿಸುವದು) ಸರಿಯಾದೀತು. ಏಕೆಂದರೆ (ಹೀಗೆ ತಿಳಿಸುವದು ಶ್ರುತಿ)ಪ್ರಸಿದ್ಧವಾಗಿರುತ್ತದೆ.[2]

(ಪರಿಹಾರ :-) ಹಾಗಲ್ಲ. ಏಕೆಂದರೆ (ಇದು) ಪರಮಾತ್ಮನ ಪ್ರಕರಣವಾಗಿರುತ್ತದೆ. "ಅದೃಶ್ಯವೂ ಅನಾತ್ಮವೂ ಆದ (ಪರಮಾತ್ಮತತ್ತ್ವದಲ್ಲಿ ಅಭಯವಾದ ಪ್ರತಿಷ್ಠೆಯನ್ನು ಹೊಂದುವನು)" (೨-೭), "ಇವನ ಅಂಜಿಕೆಯಿಂದ ವಾಯುವು ಬೀಸುತ್ತಾನೆ" (೨-೮), "ಆ ಇದು ಆನಂದದ ಮಿಮಾಂಸೆಯು" (೨-೮) - ಎಂದು ಇಲ್ಲಿ ಪರಮಾತ್ಮನನ್ನು ಕುರಿತೇ ಹೇಳಿರುತ್ತದೆ. ತಟ್ಟನೆ ಅಪ್ರಕೃತನಾದ (ಹಿರಣ್ಯಗರ್ಭನನ್ನು)[3] ತಿಳಿಸುವದು ಯುಕ್ತವಾಗಲಾರದಷ್ಟೆ ? ಮತ್ತು (ಇಲ್ಲಿ) ಪರಮಾತ್ಮನ ವಿಜ್ಞಾನವನ್ನು ಹೇಳಬೇಕೆಂದು ಹೊರಟಿರುತ್ತದೆ. ಆದ್ದರಿಂದ ಪರ(ಮಾತ್ಮನನ್ನೇ) "ಅವನು ಒಬ್ಬನೇ" ಎಂದು (ಇಲ್ಲಿ) ತಿಳಿಸಿರುತ್ತದೆ.

(ಭಾಷ್ಯ)

೨೦೮. ನನ್ವಾನನ್ದಸ್ಯ ಮಿಮಾಂಸಾ ಪ್ರಕೃತಾ । ತಸ್ಯಾ ಅಪಿ ಫಲಮ್ ಉಪಸಂಹರ್ತವ್ಯಮ್ । ಅಭಿನ್ನಃ ಸ್ವಾಭಾವಿಕ ಆನನ್ದಃ ಪರಮಾತ್ಮೈವ ನ ವಿಷಯವಿಷಯಿಸಮ್ಬನ್ಧಜನಿತಃ ಇತಿ । ನನು ತದನುರೂಪ ಏವಾಯಂ ನಿರ್ದೇಶಃ "ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ" ಇತಿ ಭಿನ್ನಾಧಿಕರಣಸ್ಥ ವಿಶೇಷೋಪಮರ್ದೇನ । ನನ್ವೇವಮಪಿ ಆದಿತ್ಯವಿಶೇಷಗ್ರಹಣಮ್ ಅನರ್ಥಕಮ್ । ನಾನರ್ಥಕಮ್[4] । ಉತ್ಕರ್ಷಾಪಕರ್ಷಾಪೋಹಾರ್ಥತ್ವಾತ್ । ದ್ವ್ಯೇತಸ್ಯ ಹಿ

1. ಶರೀರದಲ್ಲಿ ಇಂಥದ್ದೊಂದು ಗೊತ್ತಾದ ಪ್ರದೇಶದಲ್ಲಿರುವನೆಂದು ಹೇಳದೆ ಸಾಮಾನ್ಯವಾಗಿ ಪುರುಷನಲ್ಲಿ ಎಂದರೆ ಶರೀರದಲ್ಲಿ ಇರುವನೆಂದು ತಿಳಿಸಿರುವದು ಸರಿಯಲ್ಲ - ಎಂದು ಅಭಿಪ್ರಾಯ.

2. ಬೃ. ೫-೫-೨ನ್ನು ನೋಡಿ.

3. ಬೃಹದಾರಣ್ಯಕದಲ್ಲಿ "ಸತ್ಯ" ಎಂಬ ಹೆಸರಿನಿಂದ ವ್ಯಾಹೃತ್ಯವಯವಯುಕ್ತನಾದ ಹಿರಣ್ಯಗರ್ಭನನ್ನು ಉಪಾಸನೆಮಾಡುವದಕ್ಕೆಂದು ಅಧ್ಯಾತ್ಮ. ಅಧಿದೈವ - ಎಂಬ ಎರಡು ವಿಧಗಳಿಂದ ನಿರ್ದೇಶಮಾಡಿರುತ್ತದೆ. ಆದರೆ ಇಲ್ಲಿ ಹಿರಣ್ಯಗರ್ಭನ ವಿಷಯವೇನೂ ಬಂದಿಲ್ಲ.

4. ಇದು ವಾ।। ಕಾ।। ಪಾಠದಂತೆ ಬರೆದುಕೊಂಡದ್ದು.

ಮೂರ್ತಾಮೂರ್ತಲಕ್ಷಣಸ್ಯ ಪರ ಉತ್ಕರ್ಷಃ ಸವಿತ್ರಭ್ಯನ್ತರ್ಗತಃ । ಸ ಚೇತ್ ಪುರುಷಗತವಿಶೇಷೋಪಮರ್ದೇನ ಪರಮಾನನ್ದಮಪೇಕ್ಷ್ಯ ಸಮೋ ಭವತಿ ನ ಕಶ್ಚಿದುತ್ಕರ್ಷೋಽಪಕರ್ಷೋ ವಾ ತಾಂ ಗತಿಂ ಗತಸ್ಯ ಇತಿ "ಅಭಯಂ ಪ್ರತಿಷ್ಠಾಂ ವಿನ ತೇ" ಇತ್ಯುಪಪನ್ನಮ್ ॥

(ಭಾಷ್ಯಾರ್ಥ)

(ಆಕ್ಷೇಪ) :- ಆನಂದದ ವಿಚಾರವು (ಇಲ್ಲಿ) ಪ್ರಕೃತವಾಗಿರುತ್ತದೆ. (ಅದ್ದರಿಂದ) ಆ (ವಿಚಾರದ) ಫಲವನ್ನೂ ಉಪಸಂಹಾರಮಾಡಬೇಕು. ಆನಂದವು ಭೇದವಿಲ್ಲದ್ದು, ಸ್ವಾಭಾವಿಕವಾದದ್ದು,[1] ಪರಮಾತ್ಮ(ಸ್ವರೂಪ)ವೇ, ವಿಷಯ ವಿಷಯಿಗಳ ಸಂಬಂಧದಿಂದ ಉಂಟಾದದ್ದಲ್ಲ ಎಂದು (ತಿಳಿಸಬೇಕಲ್ಲವೆ) ?

(ಪರಿಹಾರ) :- "ಯಾವ ಆ ಇವನು ಪುರುಷನಲ್ಲಿರುವನೋ ಮತ್ತು ಯಾವ ಇವನು ಆದಿತ್ಯನಲ್ಲಿರುವನೋ ಇವನು ಒಬ್ಬನೇ" ಎಂದು ಬೇರೆಬೇರೆಯ ಅಧಿಕರಣಗಳಲ್ಲಿರುವ (ಆನಂದದಲ್ಲಿ) ವಿಶೇಷವನ್ನು ಅಲ್ಲಗಳೆದು ಹೇಳಿರುವ ಈ ಉಪದೇಶವು ಆ (ಫಲಕಥನಕ್ಕೆ) ಅನುಗುಣವಾಗಿಯೇ ಇದೆಯಲ್ಲವೆ ?

(ಆಕ್ಷೇಪ) :- ಹೀಗೆಂದು (ಒಪ್ಪಿಕೊಂಡ)ರೂ ಆದಿತ್ಯ(ನೆಂಬ ಅಧಿಕರಣ) ವಿಶೇಷವನ್ನು (ಇಲ್ಲಿ) ತಿಳಿಸಿರುವದು ವ್ಯರ್ಥವೇ[2] (ಆಗುತ್ತದೆಯಲ್ಲ !)

(ಪರಿಹಾರ) :- ವ್ಯರ್ಥವಲ್ಲ. ಏಕೆಂದರೆ (ಅದು) ಹೆಚ್ಚುಕಡಿಮೆಗಳನ್ನು ಒರಸಿಹಾಕುವದಕ್ಕಾಗಿ (ಹೇಳಿದ್ದಾಗಿದೆ). ಮೂರ್ತಾಮೂರ್ತರೂಪವಾದ ದ್ಯುತದ ಅತ್ಯಂತ ಹೆಚ್ಚಿನ (ಕಟ್ಟುಕಡೆಯ) ಉತ್ತಮತ್ವವು ಸೂರ್ಯನ ಒಳಗಿರುತ್ತದೆಯಷ್ಟೆ.[3] ಪುರುಷನಲ್ಲಿರುವ ವಿಶೇಷವನ್ನು[4] ಒರಸಿಹಾಕಿ ಪರಮಾನಂದವನ್ನೇ ಲೆಕ್ಕಕ್ಕೆ ಇಟ್ಟು ಕೊಂಡರೆ ಅದು (ಪುರುಷನಲ್ಲಿರುವ ಆನಂದಕ್ಕೆ) ಸಮವಾಗುತ್ತದೆ ಎಂದಮೇಲೆ ಆ ಗತಿಯನ್ನು ಪಡೆದವನಿಗೆ[5] ಯಾವ ಹೆಚ್ಚಿಗೆಯಾಗಲಿ ಕುಂದಾಗಲಿ ಇರುವದಿಲ್ಲ ;

---

1. ಕೃತಕವಾಗಿ ಮತ್ತೊಂದರಿಂದ ಆದದ್ದಲ್ಲ.

2. ಉಪಾಸನೆಗೆಂದು ಹೇಳಿರುವ ಬೃಹದಾರಣ್ಯಕವಾಕ್ಯದಲ್ಲಿ ಉಪಾಧಿಯೂ ವಿವಕ್ಷಿತವಾಗಿರುವದರಿಂದ ಆದಿತ್ಯನೆಂಬ ಮಾತನ್ನುಪಯೋಗಿಸಿರುವದಕ್ಕೆ ಪ್ರಯೋಜನವುಂಟು. ನಿರ್ವಿಶೇಷಾತ್ಮನನ್ನು ಹೇಳುವ ಈ ಪ್ರಕರಣದಲ್ಲಿ ಅದರಿಂದೇನಾಗಬೇಕು ? - ಎಂದು ಆಕ್ಷೇಪ.

3. ಬೃ. ೨-೩-೨, ೩ ನೋಡಿ.

4. ಇಂದ್ರಿಯಗಳು, ಲಿಂಗಶರೀರ - ಎಂಬ ವಿಶೇಷಗಳನ್ನು.

5. ಪರಮಾನಂದರೂಪವಾದ ಬ್ರಹ್ಮವನ್ನು ಪಡೆದವನಿಗೆ.

ಆದ್ದರಿಂದಲೇ ''ಅಭಯವಾಗಿ ಪ್ರತಿಷ್ಠೆಯನ್ನು ಪಡೆದುಕೊಳ್ಳುತ್ತಾನೆ'' (೨-೮) ಎಂದು ಹೇಳಿದ್ದು ಯುಕ್ತವಾಗಿರುತ್ತದೆ.[1]

೧೭. ಬ್ರಹ್ಮಜ್ಞಾನದ ಫಲ

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೨೦೯. ಅಸ್ತಿ ನಾಸ್ತಿ - ಇತ್ಯನುಪ್ರಶ್ನೋ ವ್ಯಾಖ್ಯಾತಃ । ಕಾರ್ಯರಸಲಾಭ ಪ್ರಾಣನಾಭಯದರ್ಶನೋಪಪತ್ತಿಭ್ಯೋಽಸ್ಯೇವ ತದಾಕಾಶಾದಿಕಾರಣಂ ಬ್ರಹ್ಮ ಇತ್ಯಪಾಕೃತೋಽನುಪ್ರಶ್ನ ಏಕಃ । ದ್ವೌ ಅನ್ಯೌ ಅನುಪ್ರಶ್ನೌ ವಿದ್ವದವಿದುಷೋ ರ್ಬ್ರಹ್ಮಪ್ರಾಪ್ತ್ಯಪ್ರಾಪ್ತಿವಿಷಯೌ । ತತ್ರ ವಿದ್ವಾನ್ ಸಮಶ್ನುತೇ ನ ಸಮಶ್ನುತೇ ಇತ್ಯನುಪ್ರಶ್ನೋಽನ್ಯಃ । ತದಪಾಕರಣಾಯ ಉಚ್ಯತೇ । ಮಧ್ಯಮೋಽನುಪ್ರಶ್ನಃ ಅನ್ಯಾಪಾಕರಣಾದೇವ ಅಪಾಕೃತಃ ಇತಿ ತದಪಾಕರಣಾಯ ನ ಯತ್ಯತೇ ॥

(ಭಾಷ್ಯಾರ್ಥ)

'(ಬ್ರಹ್ಮವು) ಇದೆಯೊ, ಇಲ್ಲವೊ ?' - ಎಂಬ ಅನುಪ್ರಶ್ನೆಗೆ ಉತ್ತರವನ್ನು ಹೇಳಿದ್ದಾಯಿತು. ಕಾರ್ಯ, ರಸಲಾಭ, ಪ್ರಾಣನ, ಅಭಯಪ್ರತಿಷ್ಠೆ, ಭಯದರ್ಶನ ಎಂಬ[2] ಯುಕ್ತಿಗಳಿಂದ ಆಕಾಶವೇ ಮುಂತಾದದ್ದಕ್ಕೆ ಕಾರಣವಾದ ಆ ಬ್ರಹ್ಮವು ಇದ್ದೇ ಇದೆ - ಎಂದು ಒಂದು ಅನುಪ್ರಶ್ನೆಗೆ ಉತ್ತರವನ್ನು ಹೇಳಿದ್ದಾಯಿತು. ಜ್ಞಾನಿಗೂ ಅಜ್ಞಾನಿಗೂ ಬ್ರಹ್ಮಪ್ರಾಪ್ತಿಯಾಗುವದೊ, ಇಲ್ಲವೊ - ಎಂಬ ವಿಷಯದಲ್ಲಿ ಇನ್ನೆರಡು ಅನುಪ್ರಶ್ನೆಗಳು (ಉಳಿದಿವೆ). ಅವುಗಳಲ್ಲಿ ಜ್ಞಾನಿಯು ಪಡೆಯುತ್ತಾನೊ, ಇಲ್ಲವೊ ? - ಎಂಬುದು ಕೊನೆಯ ಅನುಪ್ರಶ್ನೆ. ಅದಕ್ಕೆ ಉತ್ತರವನ್ನು ಕೊಡುವದಕ್ಕಾಗಿ (ಶ್ರುತಿಯು ಮುಂದಿನ ವಾಕ್ಯವನ್ನು) ಹೇಳುತ್ತದೆ. ನಡುವಿನ ಅನುಪ್ರಶ್ನೆಗೆ, ಕೊನೆಯದಕ್ಕೆ ಉತ್ತರವನ್ನು ಕೊಟ್ಟದ್ದರಿಂದಲೇ ಉತ್ತರವನ್ನು ಕೊಟ್ಟಂತಾಗು

---

1. ಇಲ್ಲದಿದ್ದರೆ ತನಗಿಂತ ಬೇರೆಯಾದ ಹೆಚ್ಚಿನ ಸ್ಥಿತಿಯಿದೆ ಎಂಬ ಅರಿವಿನಿಂದ ಭಯವುಂಟಾಗಲೇಬೇಕು.

2. ಕಾರ್ಯವು ಕಾರಣವಿಲ್ಲದೆ ಇರಲಾರದು ; ಆನಂದವು ರಸವನ್ನು ಪಡೆದಲ್ಲದೆ ಉಂಟಾಗಲಾರದು ; ಪ್ರಾಣೇಂದ್ರಿಯಚೇಷ್ಟೆಗಳು ಅಸಂಹತಸ್ವತಂತ್ರವಸ್ತುವಿಲ್ಲದೆ ಆಗಲಾರವು ; ಜ್ಞಾನಿಯ ಅಭಯವು ಅದರ ಕಾರಣವಿಲ್ಲದೆ ಆಗಲಾರದು ; ದೊಡ್ಡವರಿಗೆಕೂಡ ಆಗುವ ಭಯವು ಭಯಕಾರಣವಿಲ್ಲದೆ ಆಗಲಾರದು - ಎಂಬ ಯುಕ್ತಿಗಳಿಂದ.

ವರಿಂದ ಅದಕ್ಕೆ (ಬೇರೆಯಾಗಿ) ಉತ್ತರವನ್ನು ಕೊಡುವದಕ್ಕೆ (ಶ್ರುತಿಯು) ಯತ್ನವನ್ನು ಮಾಡುವದಿಲ್ಲ.[1]

ಬ್ರಹ್ಮವನ್ನು ಅರಿಯುವದೇ ಅದರ ಪ್ರಾಪ್ತಿ

ಸ ಯ ಏವಂವಿತ್ । ಅಸ್ಮಾಲ್ಲೋಕಾತ್ ಪ್ರೇತ್ಯ । ಏತಮನ್ನಮಯ ಮಾತ್ಮಾನಮುಪಸಂಕ್ರಾಮತಿ । ಏತಂ ಪ್ರಾಣಮಯಮಾತ್ಮಾನಮುಪ ಸಂಕ್ರಾಮತಿ । ಏತಂ ಮನೋಮಯಮಾತ್ಮಾನಮುಪಸಂಕ್ರಾಮತಿ । ಏತಂ ವಿಜ್ಞಾನಮಯಮಾತ್ಮಾನಮುಪಸಂಕ್ರಾಮತಿ । ಏತಮಾನನ್ದ ಮಯಮಾತ್ಮಾನಮುಪಸಂಕ್ರಾಮತಿ ॥೫॥

೫. ಯಾವನು ಹೀಗೆ ಅರಿತುಕೊಂಡವನೋ ಅವನು ಈ ಲೋಕ ದಿಂದ ಹೊರಟುಹೋಗಿ ಈ ಅನ್ನಮಯನೆಂಬ ಆತ್ಮನನ್ನು ಪಡೆದು ಕೊಳ್ಳುತ್ತಾನೆ, ಈ ಪ್ರಾಣಮಯನೆಂಬ ಆತ್ಮನನ್ನು ಪಡೆದುಕೊಳ್ಳುತ್ತಾನೆ, ಈ ಮನೋಮಯನೆಂಬ ಆತ್ಮನನ್ನು ಪಡೆದುಕೊಳ್ಳುತ್ತಾನೆ, ಈ ವಿಜ್ಞಾನ ಮಯನೆಂಬ ಆತ್ಮನನ್ನು ಪಡೆದುಕೊಳ್ಳುತ್ತಾನೆ, ಈ ಆನಂದಮಯನೆಂಬ ಆತ್ಮನನ್ನು ಪಡೆದುಕೊಳ್ಳುತ್ತಾನೆ.

(ಭಾಷ್ಯ)

೨೧೦. ಸ ಯಃ ಕಶ್ಚಿತ್ ಏವಂ ಯಥೋಕ್ತಂ ಬ್ರಹ್ಮ ಉತ್ಸ್ಯುಜ್ಯೋತ್ಕರ್ಷಾಪಕರ್ಷಮ್ 'ಅದ್ವೈತಂ ಸತ್ಯಂ ಜ್ಞಾನಮನನ್ತಮಸ್ಮಿ' ಇತ್ಯೇವಂ ವೇತ್ತಿ ಇತಿ ಏವಂವಿತ್ । ಏವಂಶಬ್ದಸ್ಯ ಪ್ರಕೃತಪರಾಮರ್ಶಾರ್ಥತ್ವಾತ್ । ಸ ಕಿಮ್ ? ಅಸ್ಮಾತ್ ಲೋಕಾತ್ ಪ್ರೇತ್ಯ । ದೃಷ್ಟಾದೃಷ್ಟೇಷ್ಟವಿಷಯ ಸಮುದಾಯೋ ಹಿ ಅಯಂ ಲೋಕಃ । ತಸ್ಮಾತ್ ಅಸ್ಮಾತ್ ಲೋಕಾತ್ ಪ್ರೇತ್ಯ

1. ಜ್ಞಾನಿಯು ಪಡೆಯುತ್ತಾನೊ, ಇಲ್ಲವೊ ? ಅಜ್ಞಾನಿಯು ಪಡೆಯುತ್ತಾನೊ, ಇಲ್ಲವೊ ? ಎಂಬೀ ಎರಡು ಅನುಪ್ರಶ್ನೆಗಳಿಗೂ ನೇರಾಗಿ "ಯದಾ ಹಿ" ಎಂಬ ಶ್ರುತಿಯಿಂದಲೇ ಉತ್ತರವನ್ನು ಹೇಳಿದೆ ; ಇದೆಯೊ, ಇಲ್ಲವೊ ? ಎಂಬ ಪ್ರಶ್ನೆಗೂ ಅದರಿಂದಲೇ ಉತ್ತರಹೇಳಿದಂತಾಗಿದೆ - ಎಂದು ವಾರ್ತಿಕಕಾರರು (೨-೫೪೧, ೫೪೨ ರಲ್ಲಿ) ಅಭಿಪ್ರಾಯ ಪಟ್ಟಿದ್ದಾರೆ. ಆದರೆ 'ಭೀಷಾಽಸ್ಮಾತ್' ಎಂಬ ಶ್ರುತಿಯು ಭಾಷ್ಯದ ಕಡೆಗೇ ಸ್ವರಸವಾಗಿ ಒಲಿಯುತ್ತದೆ ಎಂದು ತೋರುತ್ತದೆ.

ಪ್ರತ್ಯಾವೃತ್ಯ ನಿರಪೇಕ್ಷೋ ಭೂತ್ವಾ ಏತಂ ಯಥಾವ್ಯಾಖ್ಯಾತಮ್ ಅನ್ನಮಯಾತ್ಮಾನಮ್ ಉಪಸಂಕ್ರಾಮತಿ । ವಿಷಯಜಾತಮ್ ಅನ್ನಮಯಾತ್ ಪಿಣ್ಡಾತ್ಮನೋ ವ್ಯತಿರಿಕ್ತಂ ನ ಪಶ್ಯತಿ । ಸರ್ವಂ ಸ್ಥೂಲಭೂತಮ್ ಅನ್ನಮಯಮಾತ್ಮಾನಂ ಪಶ್ಯತಿ ಇತ್ಯರ್ಥಃ । ತತಃ ಅಭ್ಯನ್ತರಮ್ ಏತಂ ಪ್ರಾಣಮಯಂ ಸರ್ವಾನ್ನಮಯಾತ್ಮಸ್ಥಮ್ ಅವಿಭಕ್ತಮ್ । ಅಥೈತಂ ಮನೋಮಯಂ ವಿಜ್ಞಾನಮಯಮ್ ಆನನ್ದಮಯಮ್ ಆತ್ಮಾನಮ್ ಉಪಸಂಕ್ರಾಮತಿ । ಅಥ "ಅದೃಶ್ಯೇ, ಅನಾತ್ಮ್ಯೇ, ಅನಿರುಕ್ತೇ, ಅನಿಲಯನೇ ಅಭಯಂ ಪ್ರತಿಷ್ಠಾಂ ವಿನ್ದತೇ" ॥

(ಭಾಷ್ಯಾರ್ಥ)

ಯಾವನೇ ಆಗಲಿ, ಈ ರೀತಿಯಲ್ಲಿ ಮೇಲೆ ಹೇಳಿದ ಬ್ರಹ್ಮವನ್ನು ಹೆಚ್ಚುಕುಂದು(ಗಳ ಭಾವ)ವನ್ನು ಬಿಟ್ಟು, "ಅದ್ವೈತವೂ ಸತ್ಯವೂ ಜ್ಞಾನವೂ ಅನಂತವೂ (ಆದ ಬ್ರಹ್ಮ)ವೇ ನಾನಾಗಿರುವೆನು" ಎಂದೀಪರಿಯಲ್ಲಿ ಅರಿತುಕೊಂಡವನಾದ್ದರಿಂದ ಅವನಿಗೆ "ಏವಂವಿತ್" (ಹೀಗೆ ಅರಿತುಕೊಂಡವನು ಎಂದು ಹೆಸರು). ಏಕೆಂದರೆ "ಏವಮ್" (ಹೀಗೆ) ಎಂಬ ಮಾತು ಪ್ರಕೃತವಾದದ್ದನ್ನು ಪರಾಮರ್ಶಿಸುವದಕ್ಕೇ (ಬರುತ್ತದೆ). ಯಾವನು ಹೀಗೆ ಅರಿತುಕೊಳ್ಳುವನೋ ಅವನು ಏನು ? ಎಂದರೆ 'ಈ ಲೋಕದಿಂದ ಹೊರಟುಹೋಗಿ', ಕಂಡ ಮತ್ತು ಕಾಣದ ಇಷ್ಟು ವಿಷಯಗಳ ಸಮುದಾಯವೇ ಅಲ್ಲವೆ, ಈ ಲೋಕವು[1] ? ಆ ಈ ಲೋಕದಿಂದ ಹೊರಟು ಹೋಗಿ[2] ಎಂದರೆ ಹಿಂತಿರುಗಿ ಯಾವ ಅಪೇಕ್ಷೆಯೂ ಇಲ್ಲದವನಾಗಿ ಈ ಹಿಂದೆ ವಿವರಿಸಿರುವ ಅನ್ನಮಯನಾದ ಆತ್ಮನನ್ನು ಪಡೆದುಕೊಳ್ಳುತ್ತಾನೆ. ವಿಷಯಸಮೂಹವೆಲ್ಲವನ್ನೂ ಅನ್ನಮಯನಾದ ಶರೀರಾತ್ಮನಿಗಿಂತ ಬೇರೆಯಾಗಿ ಏನನ್ನೂ ಕಾಣುವದಿಲ್ಲ, ಎಲ್ಲವೂ ಸ್ಥೂಲವಾಗಿರುವ ಅನ್ನಮಯಾತ್ಮನೇ ಎಂದು ಅರಿತುಕೊಳ್ಳುತ್ತಾನೆ[3] ಎಂದರ್ಥ. ಅದಕ್ಕೂ ಒಳಗಿರುವ ಈ ಪ್ರಾಣಮಯನನ್ನು, ಎಲ್ಲಾ ಅನ್ನಮಯಾತ್ಮರೊಳಗೆ ಇರುವ ವಿಂಗಡವಾಗಿಲ್ಲದ (ಪ್ರಾಣಮಯಾತ್ಮನನ್ನು),[4] ಆಮೇಲೆ ಈ ಮನೋಮಯ

---

1. ಈ ಲೋಕವೆಂದರೆ ಇಹಲೋಕವೆಂದು ಅರ್ಥವಲ್ಲ ; ಪರಮಾರ್ಥವಲ್ಲದ ವಿಷಯಗಳ ಸಮೂಹವು. ಅದು ಇಹಲೋಕಪರಲೋಕ. ಎರಡನ್ನೂ ಒಳಗೊಂಡಿರುತ್ತದೆ.

2. ಕೇ. ಭಾ. ೧-೨ (ಭಾ. ಭಾ. ೨೩)ರಲ್ಲಿ "ಪ್ರೇತ್ಯಾಸ್ಮಾಲ್ಲೋಕಾತ್" ಎಂಬುದರ ವಿವರವನ್ನು ನೋಡಿರಿ. 3. ವಿರಾಡ್ರೂಪದಿಂದಲೇ ಅರಿತುಕೊಳ್ಳುತ್ತಾನೆ.

4. ಸಮಷ್ಟಿರೂಪನಾದ ಸೂತ್ರಾತ್ಮನೇ ಎಂದು ಅರಿತುಕೊಳ್ಳುತ್ತಾನೆ ಎಂದರ್ಥ. ಹೀಗೆಯೇ ಮನೋಮಯ, ವಿಜ್ಞಾನಮಯ ಮುಂತಾದವುಗಳೂ ಸಮಷ್ಟಿರೂಪವೇ ಎಂದರಿಯಬೇಕು.

ಏವೈನಂ ಆನಂದಮಯಮೇತಿ ಆನಂದಮಯನೆಂಬ, ಆತ್ಮನನ್ನು ಪಡೆದುಕೊಳ್ಳುತ್ತಾನೆ. ಬಳಿಕ ಅದೃಶ್ಯವಾದ, ಅನಾತ್ಮ್ಯವಾದ, ಅನಿರುಕ್ತವಾದ, ಅನಿಲಯನವಾದ, (ಬ್ರಹ್ಮದಲ್ಲಿ) ಅಭಯವಾದ ಪ್ರತಿಷ್ಠೆಯನ್ನು ಹೊಂದುತ್ತಾನೆ

ಸಂಕ್ರಮಣದ ವಿಷಯದಲ್ಲಿ ವಿಚಾರದ ಆವಶ್ಯಕತೆ

(ಭಾಷ್ಯ)

೨೧೧. ತತ್ರ ಏತಚ್ಚಿನ್ಯಮ್ । ಕೋಽಯಮ್ ಏವಂವಿತ್ ? ಕಥಂ ವಾ ಸಂಕ್ರಾಮತಿ ? ಇತಿ । ಕಿಂ ಪರಸ್ಮಾದಾತ್ಮನೋಽನ್ಯಃ ಸಂಕ್ರಮಣಕರ್ತಾ ಪ್ರತಿಷ್ಠಕ್ತಃ । ಉತ ನ ಏವ ಇತಿ । ಕಿಂ ತತಃ ? ಯದಿ ಅನ್ಯಃ ಸ್ಯಾತ್ ಶ್ರುತಿವಿರೋಧಃ । ''ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್'' (೨-೬), ''ಅಸ್ಯೋಽಸಾವಸ್ಯೋಽಹಮಸ್ಮೀತಿ ನ ಸ ವೇದ'' (ಬೃ. ೧-೪-೧೦), ''ಏಕಮೇವಾದ್ವಿತೀಯಮ್'' (ಛಾಂ. ೬-೨-೧), ''ತತ್ತ್ವಮಸಿ'' (ಛಾಂ. ೬-೮-೭) ಇತಿ । ಅಥ ಸ ಏವ ಆನನ್ದಮಯಮಾತ್ಮಾನಮ್ ಉಪಸಂಕ್ರಾಮತೀತಿ, ಕರ್ಮಕರ್ತೃತ್ವಾನುಪಪತ್ತಿಃ । ಪರಸ್ಯೈವ ಚ ಸಂಸಾರಿತ್ವಮ್, ಪರಾಭಾವೋ ವಾ । ಯದಿ ಉಭಯಥಾ ಪ್ರಾಪ್ತೋ ದೋಷಃ ನ ಪರಿಹರ್ತುಂ ಶಕ್ಯತೇ ಇತಿ ವ್ಯರ್ಥಾ ಚಿನ್ತಾ । ಅಥ ಅನ್ಯತರಸ್ಮಿನ್ ಪಕ್ಷೇ ದೋಷಾಪ್ರಾಪ್ತಿಃ, ತೃತೀಯೇ ವಾ ಪಕ್ಷೇ ಅದುಷ್ಟೇ[1] ಸ ಏವ ಶಾಸ್ತ್ರಾರ್ಥಃ ಇತಿ ವ್ಯರ್ಥೈವ ಚಿನ್ತಾ । ನ । ತನ್ನಿರ್ಧಾರಣಾರ್ಥತ್ವಾತ್ । ಸತ್ಯಂ, ಪ್ರಾಪ್ತೋ ದೋಷೋ ನ ಶಕ್ಯಃ ಪರಿಹರ್ತುಮ್ । ಅನ್ಯತರಸ್ಮಿನ್ ತೃತೀಯೇ ವಾ ಪಕ್ಷೇಽದುಷ್ಟೇ ಅವಧೃತೇ ವ್ಯರ್ಥಾ ಚಿನ್ತಾ ಸ್ಯಾತ್ । ನ ತು ಸೋಽವಧೃತಃ ಇತಿ ತದವಧಾರಣಾರ್ಥತ್ವಾತ್ ಅರ್ಥವತ್ತ್ವೈವ ಏಷಾ ಚಿನ್ತಾ । ಸತ್ಯಮ್ ಅರ್ಥವತೀ ಚಿನ್ತಾ ಶಾಸ್ತ್ರಾರ್ಥಾವಧಾರಣಾರ್ಥತ್ವಾತ್ । ಚಿನ್ತಯಸಿ ಚ ತ್ವಂ ನ ತು ನಿರ್ಣೇಷ್ಯಸಿ । ಕಿಂ ನ ನಿರ್ಣೇತವ್ಯಮ್ ಇತಿ ವೇದವಚನಮ್ ? ನ । ಕಥಂ ತರ್ಹಿ ? ಬಹುಪ್ರತಿಪಕ್ಷತ್ವಾತ್ । ಏಕತ್ವವಾದೀ ತ್ವಮ್, ವೇದಾರ್ಥಪರತ್ವಾತ್ । ಬಹವೋ ಹಿ ನಾನಾತ್ವವಾದಿನೋ ವೇದಬಾಹ್ಯಾಃ ತ್ವತ್ಪ್ರತಿಪಕ್ಷಾಃ । ಅತೋ ಮಮಾಶಙ್ಕಾಂ ನ ನಿರ್ಣೇಷ್ಯಸೀತಿ । ಏತದೇವ ಮೇ ಸ್ವಸ್ಯಯನಮ್ ಯನ್ಮಾಮ್ ಏಕಯೋಗಿನಮ್ ಅನೇಕಯೋಗಿಬಹುಪ್ರತಿಪಕ್ಷಮಾತ್ಥ । ಅತೋ ಜೇಷ್ಯಾಮಿ ಸರ್ವಾನ್, ಆರಭೇ ಚ ಚಿನ್ತಾಮ್ ॥

ಇಲ್ಲಿ ಇದನ್ನು ವಿಚಾರಮಾಡಬೇಕಾಗಿರುತ್ತದೆ. ಹೀಗೆ ಅರಿತುಕೊಂಡವನು

1. ''ತೃತೀಯೋ ವಾ ಪಕ್ಷೋಽದುಷ್ಟಃ'' ಎಂದಿದ್ದರೆ ಸರಳವಾಗಿ ಅನ್ವಯವಾಗುತ್ತದೆ.

ಎಂದರೆ ಯಾರು ? ಮತ್ತು (ಅವನು ಬ್ರಹ್ಮವನ್ನು) ಪಡೆದುಕೊಳ್ಳುವನೆಂಬುದಾದರೂ ಹೇಗೆ ? ಪಡೆದುಕೊಳ್ಳುವವನು ಪರಮಾತ್ಮನಿಗಿಂತ ಬೇರೆಯಾಗಿ (ಅವನಿಗಿಂತ) ಏಂಗಡವಾಗಿರುವನೊ, ಅಥವಾ ಅವನೇಯೊ ?

(ಪ್ರಶ್ನೆ :-) ಇದರಿಂದ ಏನು (ಪ್ರಯೋಜನ) ?[1]

(ಉತ್ತರ :-) ಬೇರೆಯಾದರೆ "ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕನು" (೨-೬), "ಅವನು ಬೇರೆ, ನಾನು ಬೇರೆ (ಎಂದು ಉಪಾಸನೆಮಾಡುತ್ತಾನಲ್ಲ), ಅವನು ಅರಿಯನು" (ಬೃ. ೧-೪-೧೦), "(ತನಗೆ)ರಡನೆಯದಿಲ್ಲದ ಒಂದೇ" (ಛಾಂ. ೬-೨-೧), "ಅದೇ ನೀನಾಗಿರುವೆ" (ಛಾಂ. ೬-೮-೭) - ಎಂಬ ಶ್ರುತಿಗಳಿಗೆ ವಿರೋಧವಾಗುತ್ತದೆ. ಹಾಗಿಲ್ಲದೆ ಅವನೇ ಆನಂದಮಯಾತ್ಮನನ್ನು ಪಡೆದು ಕೊಳ್ಳುವನೆಂದಾದರೆ (ಪಡೆದುಕೊಳ್ಳವ ಕ್ರಿಯೆಗೆ ತಾನೇ) ಕರ್ಮವು, (ತಾನೇ) ಕರ್ತೃ ಎಂಬುದು ವಿರುದ್ಧವಾಗುತ್ತದೆ. ಮತ್ತು ಪರ(ಮಾತ್ಮನಿಗೇ) ಸಂಸಾರಿತ್ವ ವೆಂದೋ ಪರಮಾತ್ಮನೇ ಇಲ್ಲವೆಂದೋ ಆಗುವದು.[2]

(ಆಕ್ಷೇಪ) :- ಹೀಗೆ ಎರಡುಪಕ್ಷದಲ್ಲಿಯೂ ಒದಗುವ ದೋಷವನ್ನು ಪರಿಹರಿಸುವದಕ್ಕೆ ಆಗುವಹಾಗಿಲ್ಲವಾದರೆ (ಈ) ವಿಚಾರವು ವ್ಯರ್ಥ. ಹಾಗಿಲ್ಲದೆ ಇವೆರಡರಲ್ಲಿ ಒಂದು ಪಕ್ಷದಲ್ಲಿ ದೋಷವಿಲ್ಲವೆಂದಾದರೆ ಅಥವಾ ಮೂರನೆಯ ಪಕ್ಷವೊಂದು ದೋಷವಿಲ್ಲದ್ದೆಂದಾದರೆ ಅದೇ ಶಾಸ್ತ್ರಾರ್ಥ (ವೆಂದಾಗುವ)ದರಿಂದ (ಈ) ವಿಚಾರವು ವ್ಯರ್ಥವೇ (ಆಗುವದಲ್ಲವೆ) ?

(ಪರಿಹಾರ) :- ಹಾಗಲ್ಲ, ಏಕೆಂದರೆ ಅದನ್ನು ಗೊತ್ತುಪಡಿಸುವದಕ್ಕಾಗಿಯೇ (ವಿಚಾರವು ಬೇಕಾಗಿದೆ). ದೋಷವು ಒದಗಿದರೆ (ಅದನ್ನು) ಪರಿಹರಿಸುವದು ಆಗಲಾರದೆಂಬುದು ನಿಜ, ಅಥವಾ ಇವೆರಡರಲ್ಲಿ ಒಂದು (ಪಕ್ಷ)ವಾಗಲಿ ಮೂರನೆಯ ಪಕ್ಷವಾಗಲಿ ದೋಷವಿಲ್ಲದ್ದೆಂದು ಗೊತ್ತಾದರೆ ವಿಚಾರವು ವ್ಯರ್ಥವಾಗುವದೆಂಬುದೂ (ನಿಜ). ಆದರೆ ಆ (ಪಕ್ಷವು ಯಾವದೆಂಬುದು) ಗೊತ್ತಾಗಿರುವದಿಲ್ಲ ; ಆದ್ದ ರಿಂದ ಅದನ್ನು ಗೊತ್ತುಪಡಿಸುವದಕ್ಕಾಗಿ ಹೊರಟಿರುವದರಿಂದ ಈ ವಿಚಾರವು ಸಪ್ರಯೋಜನವೇ (ಆಗಿರುತ್ತದೆ).[3]

---

1 ಬೇರೆಯಾದರೇನು, ಅವನೇ ಆದರೇನು ?

2. ಪರಮಾತ್ಮನೊಬ್ಬನೇ ನಿಜವಾಗಿರುವನೆಂದರೆ ಸಂಸಾರವೂ ಅವನಿಗೇ ಎಂದಾಗು ವದು ; ಸಂಸಾರಿಯೊಬ್ಬನೇ ಇರುವನೆಂದರೆ ಪರಮಾತ್ಮನಿಲ್ಲವೆಂದಾಗುವದು. ಈ ಪೂರ್ವಪಕ್ಷ ವನ್ನು ಸೂ. ಭಾ. ೪-೧-೩ ; ಗೀ. ಭಾ. ೧೩-೨ ; ಬೃ. ಭಾ. ೨-೧-೨೦ ಇವುಗಳಲ್ಲಿ ನೋಡಿರಿ.

3. ನಿರ್ಣೀತವಾಗಿರುವ ವಿಷಯದಲ್ಲಿ ವಿಚಾರವು ಬೇಕಿರುವದಿಲ್ಲ ; ಆದರೆ ನಿರ್ಣಯ ವಾಗಿಲ್ಲದ್ದರಿಂದ ಅದು ಬೇಕು.

(ಆಕ್ಷೇಪ) :- ನಿಜ, ವಿಚಾರವು ಸಪ್ರಯೋಜನವಾದದ್ದೇ ; ಏಕೆಂದರೆ ಶಾಸ್ತ್ರಾರ್ಥವನ್ನು ಗೊತ್ತುಪಡಿಸುವದಕ್ಕೆ (ಅದು ಬೇಕಾಗಿರುತ್ತದೆ). ಆದರೆ ನೀನು ವಿಚಾರಮಾಡುತ್ತೀಯೇ ಹೊರತು ಗೊತ್ತುಪಡಿಸುವದಿಲ್ಲವಲ್ಲ !

(ಪರಿಹಾರ) :- ಗೊತ್ತುಪಡಿಸಬಾರದು ಎಂದೇನಾದರೂ ವೇದವಚನ ವಿದೆಯೇನು ?

(ಆಕ್ಷೇಪ) :- ಹಾಗೇನೂ ಇಲ್ಲ. ಮತ್ತೇನೆಂದರೆ (ನಿನಗೆ) ಪ್ರತಿಪಕ್ಷಗಳು ಬಹುವಾಗಿರುವದರಿಂದ (ಹೀಗೆಂದು ಹೇಳಬೇಕಾಗಿದೆ). ನೀನು ವೇದಾರ್ಥದಲ್ಲಿಯೇ ತಾತ್ಪರ್ಯವುಳ್ಳವನಾದ್ದರಿಂದ ಏಕತ್ವವಾದಿಯಾಗಿರುತ್ತೀಯೆ.[1] ನಿನಗೆ ಪ್ರತಿಪಕ್ಷದವರಾದ ನಾನಾತ್ವವಾದಿಗಳು ವೇದಬಾಹ್ಯರಾಗಿರುವದರಿಂದ ಅನೇಕರಿರುತ್ತಾರೆ. ಆದ್ದರಿಂದ ನನ್ನ ಆಶಂಕೆಯನ್ನು (ನೀನು) ಪರಿಹರಿಸಲಾರೆ.

(ಪರಿಹಾರ) :- (ನಾನು ಏಕತ್ವವಾದಿಯೆಂದೂ ಅನೇಕತ್ವವಾದಿಗಳಾದ ಪ್ರತಿಪಕ್ಷದವರು ನನಗೆ ಬಹಳವಿರುವರೆಂದೂ ಹೇಳುವೆಯಲ್ಲ,) ಇದೇ ನನಗೆ ಸ್ವಸ್ಥ್ಯವನ್ನು ಹೇಳಿದಂತಾಯಿತು. ಆದ್ದರಿಂದ ಎಲ್ಲರನ್ನೂ ಜಯಿಸುವೆನು.[2] ವಿಚಾರವನ್ನೂ ಮೊದಲುಮಾಡುವೆನು.

ಏಕತ್ವವೇ ಪರಮಾರ್ಥವು, ಅನೇಕತ್ವವು ಅವಿದ್ಯಾಕೃತ

(ಭಾಷ್ಯ)

೨೧೨. ಸ ಏವ ತು ಸ್ಯಾತ್ । ತದ್ಭಾವಸ್ಯ ವಿವಕ್ಷಿತತ್ವಾತ್ । ತದ್ವಿಜ್ಞಾನೇನ ಪರಮಾತ್ಮಭಾವೋ ಹಿ ಅತ್ರ ವಿವಕ್ಷಿತಃ ''ಬ್ರಹ್ಮವಿದಾಪ್ನೋತಿ ಪರಮ್'' (೨-೧) ಇತಿ । ನ ಹ್ಯನ್ಯಸ್ಯ ಅನ್ಯಭಾವಾಪತ್ತಿರುಪಪದ್ಯತೇ । ನನು ತಸ್ಯಾಪಿ ತದ್ಭಾವಾಪತ್ತಿರನುಪಪನ್ನೈವ । ನ । ಅವಿದ್ಯಾಕೃತತಾದಾತ್ಮ್ಯಾಪೋಹಾರ್ಥತ್ವಾತ್ । ಯಾ ಹಿ ಬ್ರಹ್ಮವಿದ್ಯಯಾ ಸ್ವಾತ್ಮಪ್ರಾಪ್ತಿರುಪದಿಶ್ಯತೇ ಸಾ ಅವಿದ್ಯಾಕೃತಸ್ಯ ಅನ್ನಾದಿ ವಿಶೇಷಾತ್ಮನಃ ಆತ್ಮತ್ವೇನಾಧ್ಯಾರೋಪಿತಸ್ಯ ಅನಾತ್ಮನೋಽಪೋಹಾರ್ಥಾ ॥

(ಭಾಷ್ಯಾರ್ಥ)

ಅವನೇ ಆಗಿರಬೇಕು.[3] ಏಕೆಂದರೆ ಅದೇ ರೂಪವನ್ನು (ಪಡೆಯುತ್ತಾನೆಂದು)

---

1. ಆಚಾರ್ಯರ ಕಾಲದಲ್ಲಿ ವೇದವಾದಿಗಳೆಲ್ಲರೂ ಏಕತ್ವವಾದಿಗಳಾಗಿದ್ದರೆಂಬುದಕ್ಕೆ ಈ ವಾಕ್ಯವೊಂದು ಗಮಕವಾಗಿರುತ್ತದೆ.

2. ಇತರ ಮತಗಳ ಅಸಾರತೆಯನ್ನು ತಿಳಿಸಿ ಏಕತ್ವವನ್ನು ನಿರ್ಣಯಿಸುವದಕ್ಕಾಗಿ ವಿಚಾರವು ಆವಶ್ಯಕ.

3. ಸಂಕ್ರಮಣಕರ್ತನಾದ ಜ್ಞಾನಿಯು ಪ್ರಾಪ್ಯವಾದ ಪರಮಾತ್ಮನೇ ಆಗಿರಬೇಕು

ಹೇಳುವದು (ಶ್ರುತಿಯ) ಅಭಿಪ್ರಾಯವಿರುತ್ತದೆ. ಅದನ್ನು ಅರಿಯುವದರಿಂದ ಪರಮಾತ್ಮಸ್ವರೂಪ(ವನ್ನೇ ಪಡೆಯುವನೆಂದ)ಲ್ಲವೆ, ''ಬ್ರಹ್ಮವನ್ನು ಬಲ್ಲವನು ಪರವನ್ನು ಪಡೆಯುತ್ತಾನೆ'' ಎಂಬೀ (೨-೧) ಶ್ರುತಿಯಲ್ಲಿ ವಿವಕ್ಷಿತವಾಗಿರುತ್ತದೆ[1] ? ಒಬ್ಬನು ಮತ್ತೊಂದರ ಭಾವವನ್ನು ಹೊಂದುವನೆಂಬುದು ಯುಕ್ತವಾಗುವದೇ ಇಲ್ಲ ವಷ್ಟೆ.[2]

(ಆಕ್ಷೇಪ) :- ಅವನೇ ಅದೇ ಸ್ವರೂಪವನ್ನು ಹೊಂದುವದೆಂಬುದೂ ಅಯುಕ್ತವೇ ಆಗಿರುವದಲ್ಲ ![3]

(ಪರಿಹಾರ :-) ಹಾಗಲ್ಲ. ಏಕೆಂದರೆ ಅವಿದ್ಯೆಯಿಂದ ಕಲ್ಪಿತವಾದ ತಾದಾತ್ಮ್ಯ[4]ವನ್ನು ಕಳೆಯುವದಕ್ಕಾಗಿ (ಈ ಶ್ರುತಿ ಬಂದಿರುತ್ತದೆ). ಬ್ರಹ್ಮವಿದ್ಯೆಯಿಂದ ತನ್ನ ಆತ್ಮನ ಪ್ರಾಪ್ತಿಯಾಗುವದೆಂದು ಉಪದೇಶಿಸಿರುತ್ತದೆಯಲ್ಲ, ಅದು ಅವಿದ್ಯಾ ಕಲ್ಪಿತವಾದ ಅನ್ನ(ಮಯ)ನೇ ಮುಂತಾದ ವಿಶೇಷರೂಪವೇ (ತನ್ನ) ಆತ್ಮನೆಂದು ಹುಟ್ಟುಗಟ್ಟಿರುವ ಅನಾತ್ಮನನ್ನು ಅಲ್ಲಗಳೆಯುವದಕ್ಕೆ.[5]

ಜ್ಞಾನಮಾತ್ರದಿಂದ ಆತ್ಮಪ್ರಾಪ್ತಿಯನ್ನು ಹೇಳಿರುವದರಿಂದ ಏಕತ್ವವೇ ಪರಮಾರ್ಥ

(ಭಾಷ್ಯ)

೨೧೩. ಕಥಮ್ ಏವಮರ್ಥತಾ ಅವಗಮ್ಯತೇ ? ವಿದ್ಯಾಮಾತ್ರೋಪದೇಶಾತ್ । ವಿದ್ಯಾಯಾಶ್ಚ ದೃಷ್ಟಂ ಕಾರ್ಯಮ್ ಅವಿದ್ಯಾನಿವೃತ್ತಿಃ । ತಚ್ಚೇಹ ವಿದ್ಯಾಮಾತ್ರಮ್ ಆತ್ಮಪ್ರಾಪ್ತೌ ಸಾಧನಮ್ ಉಪದಿಶ್ಯತೇ । ಮಾರ್ಗವಿಜ್ಞಾನೋಪದೇಶವತ್ ಇತಿ ಚೇತ್ । ತದಾತ್ಮತ್ವೇ ವಿದ್ಯಾಮಾತ್ರಸಾಧನೋಪದೇಶೋಽಹೇತುಃ । ಕಸ್ಮಾತ್ ?

---

1. ಈ ಶ್ರುತಿಯಲ್ಲಿ ಪರ(ಪುರುಷಾರ್ಥ)ವನ್ನು ಪಡೆಯುತ್ತಾನೆ ಎಂದಿಷ್ಟೇ ಹೇಳಿದ್ದರೂ ಪರಮಾತ್ಮರೂಪವನ್ನೇ ಪಡೆಯುತ್ತಾನೆಂಬುದು ವಿವಕ್ಷಿತಾರ್ಥವೆಂದು ಭಾ. ಭಾ. ೯೨ರಲ್ಲಿ ತೋರಿಸಿರುತ್ತದೆ.

2. ಮತ್ತೊಂದು ರೂಪವನ್ನು ಹೊಂದುವದಕ್ಕೆ ತಾನೇ ನಾಶವಾಗಬೇಕಾಗುತ್ತದೆ

3. 'ತಾನು ತನ್ನ ರೂಪವನ್ನು ಹೊಂದಿಯೇ ಇರುವದರಿಂದ ಅದಕ್ಕಾಗಿ ಉಪದೇಶವೇಕೆ ?' - ಎಂದು ಆಕ್ಷೇಪ.

4. ತಾನೇ ಅದೆಂಬ ಭಾವನೆಯನ್ನು.

5. ಅನಾತ್ಮವು ಆತ್ಮನಲ್ಲವೆಂದು ತಿಳಿಸುವದಕ್ಕೆ ಉಪದೇಶಿಸಿರುತ್ತದೆ. ಮೊದಲೇ ಪಡೆದಿರುವದು ಅವಿದ್ಯೆಯಿಂದ ಮರೆಯಾಗಿರುವಾಗ ವಿದ್ಯೆಯಿಂದ ಮರೆಯನ್ನು ಕಳೆಯುವದಕ್ಕೆ ಉಪದೇಶವು ಬೇಕಾಗುತ್ತದೆ ಎಂದು ಭಾವ.

ದೇಶಾನ್ತರಪ್ರಾಪ್ತೌ ಮಾರ್ಗವಿಜ್ಞಾನೋಪದೇಶದರ್ಶನಾತ್ । ನ ಹಿ ಗ್ರಾಮ ಏವ ಗನ್ತಾ ಇತಿ ಚೇತ್ । ನ [illegible] ತತ್ರ ಹಿ ಗ್ರಾಮವಿಷಯಂ ವಿಜ್ಞಾನಂ ನೋಪದಿಶ್ಯತೇ, ತತ್ಪ್ರಾಪ್ತಿಮಾರ್ಗವಿಷಯಮೇವೋಪದಿಶ್ಯತೇ ವಿಜ್ಞಾನಮ್ । ನ ತಥಾ ಇಹ ಬ್ರಹ್ಮವಿಜ್ಞಾನವ್ಯತಿರೇಕೇಣ ಸಾಧನಾನ್ತರವಿಷಯಂ ವಿಜ್ಞಾನಮ್ ಉಪದಿಶ್ಯತೇ । ಉಕ್ತಕರ್ಮಾದಿಸಾಧನಾಪೇಕ್ಷಂ ಬ್ರಹ್ಮವಿಜ್ಞಾನಂ ಪರಪ್ರಾಪ್ತೌ ಸಾಧನಮ್ ಉಪದಿಶ್ಯತೇ ಇತಿ ಚೇತ್ । ನ । ನಿತ್ಯತ್ವಾನ್ಮೋಕ್ಷಸ್ಯ ಇತ್ಯಾದಿನಾ ಪ್ರತ್ಯುಕ್ತತ್ವಾತ್ ॥

(ಭಾಷ್ಯಾರ್ಥ)

(ಪ್ರಶ್ನೆ :-) (ಶ್ರುತಿಗೆ) ಇದೇ ಅರ್ಥವೆಂದು[1] ಹೇಗೆ ನಿಶ್ಚಯಿಸಬೇಕು ?

(ಉತ್ತರ :-) ಏಕೆಂದರೆ ವಿದ್ಯೆಯನ್ನು ಮಾತ್ರ (ಇಲ್ಲಿ) ಉಪದೇಶಿಸಿರುತ್ತದೆ.[2] ಅವಿದ್ಯೆಯನ್ನು ತೊಲಗಿಸುವ(ದೊಂ)ದೇ ವಿದ್ಯೆಯ ಕಾರ್ಯವೆಂದು (ಅನುಭವದಲ್ಲಿ) ಕಂಡಿರುತ್ತದೆ.[3] ಆ ವಿದ್ಯೆಯನ್ನು ಮಾತ್ರ ಆತ್ಮಪ್ರಾಪ್ತಿಗೆ ಸಾಧನವೆಂದು ಇಲ್ಲಿ ಉಪದೇಶಿಸಿರುತ್ತದೆ.[4]

(ಆಕ್ಷೇಪ :-) ಮಾರ್ಗದ ಜ್ಞಾನವನ್ನು ಉಪದೇಶಮಾಡಿರುವಂತೆಯೇ (ಇದು). ವಿದ್ಯೆಯನ್ನು ಮಾತ್ರ ಸಾಧನವೆಂದು ಉಪದೇಶಿಸಿರುವದು ಅವನೇ (ಪರಮಾತ್ಮನು) ಎಂಬುದಕ್ಕೆ ಹೇತುವಾಗಲಾರದು. ಏಕೆಂದರೆ ಮತ್ತೊಂದು ಸ್ಥಲವನ್ನು ಪಡೆಯುವದಕ್ಕೆ ಮಾರ್ಗದ ಜ್ಞಾನವನ್ನು ಉಪದೇಶಮಾಡುವದೂ ಕಂಡುಬರುತ್ತದೆ. ಹಳ್ಳಿಯೇ (ಹಳ್ಳಿಗೆ) ಹೋಗುವವನೂ ಅಲ್ಲವಷ್ಟೆ ?[5]

(ಪರಿಹಾರ :-) ಹಾಗಲ್ಲ. ಏಕೆಂದರೆ (ಅದಕ್ಕೂ ಇದಕ್ಕೂ) ವೈಲಕ್ಷಣ್ಯವಿದೆ. ಆ (ದೃಷ್ಟಾಂತ)ದಲ್ಲಿ ಹಳ್ಳಿಯ ವಿಷಯದ ಜ್ಞಾನವನ್ನಲ್ಲ, ಉಪದೇಶಿಸಿರುವದು ,

---

1. ಅವಿದ್ಯಾಕಲ್ಪಿತನಾದ ಅನಾತ್ಮನೇ ತಾನೆಂದು ತಿಳಿದಿರುವದನ್ನು ಅಲ್ಲಗಳೆದು ಪರಮಾತ್ಮನೇ ನೀನೆಂಬ ಬೋಧಿಸುವದರಲ್ಲಿಯೇ ಶ್ರುತಿಗೆ ತಾತ್ಪರ್ಯವೆಂದು

2. ಸಾಧನವನ್ನೇನೂ ಉಪದೇಶಿಸಿಲ್ಲ

3. ಜ್ಞಾನವು ಹೊಸದಾಗಿ ಏನನ್ನೂ ಉಂಟುಮಾಡುವದಿಲ್ಲ, ಇರುವದನ್ನು ಯಾವದನ್ನೂ ಕಳೆಯುವದಿಲ್ಲ. ಬೃ. ಭಾ. ೧-೪-೧೦.

4. ಆದ್ದರಿಂದ ಆತ್ಮವಿಷಯದ ಅಜ್ಞಾನವನ್ನು ಕಳೆಯುವದೊಂದೇ ಶ್ರುತಿಯ ಉದ್ದೇಶವೇ ಹೊರತು, ನಿಜವಾದ ಪ್ರಾಪ್ತಿಯನ್ನು ಹೇಳುವದಲ್ಲವೆಂದು ಗೊತ್ತಾಗುತ್ತದೆ.

5. ಬ್ರಹ್ಮವನ್ನು ಪಡೆಯುವದಕ್ಕೆ ಸಾಧನವನ್ನು ಉಪದೇಶಿಸಿದ ಮಾತ್ರಕ್ಕೆ ಜಡವೇ ಬ್ರಹ್ಮವೆಂದೇಕಾಗಬೇಕು ? ಎಂದು ಆಕ್ಷೇಪ.

ಅದನ್ನು ಪಡೆದುಕೊಳ್ಳುವ ಮಾರ್ಗದ ವಿಷಯದ ಜ್ಞಾನವನ್ನು ಮಾತ್ರ ಉಪದೇಶಿಸಿರುತ್ತದೆ. ಹಾಗೇನೂ ಇಲ್ಲಿ ಬ್ರಹ್ಮವಿಜ್ಞಾನಕ್ಕಿಂತ ಬೇರೆಯಾಗಿ ಮತ್ತೊಂದು ಸಾಧನದ ವಿಷಯದ ವಿಜ್ಞಾನವನ್ನು ಉಪದೇಶಿಸಿಲ್ಲ.

(ಆಕ್ಷೇಪ :-) ಹಿಂದೆ ಹೇಳಿರುವ ಕರ್ಮವೇ ಮುಂತಾದ ಸಾಧನದೊಡನೆ ಕೂಡಿರುವ ಬ್ರಹ್ಮವಿಜ್ಞಾನವು[1] ಪರಮಾತ್ಮನನ್ನು ಪಡೆಯುವದಕ್ಕೆ ಸಾಧನವೆಂದು (ಇಲ್ಲಿಯೂ) ಉಪದೇಶಿಸಿರುತ್ತದೆ (ಎನ್ನಬಹುದಲ್ಲವೆ) ?

(ಪರಿಹಾರ :-) ಹಾಗಲ್ಲ. ಏಕೆಂದರೆ ಮೋಕ್ಷವು ನಿತ್ಯವಾಗಿರುವದರಿಂದ ಇದು ಸರಿಯಲ್ಲ ಎಂದು ಮುಂತಾಗಿ (ಈ ಪಕ್ಷವನ್ನು) ಹಿಂದೆಯೇ[2] ತಿರಸ್ಕರಿಸ ಲಾಗಿದೆ.

ಶ್ರುತಿಯಲ್ಲಿ ಏಕತ್ವವನ್ನು ಹೇಳಿಯೂ ಇದೆ

(ಭಾಷ್ಯ)

೨೧೪. ಶ್ರುತಿಶ್ಚ 'ತತ್ಸೃಷ್ಟ್ವಾ । ತದೇವಾನುಪ್ರಾವಿಶತ್' (೨-೬) ಇತಿ ಕಾರ್ಯಸ್ಥಸ್ಯ ತದಾತ್ಮತ್ವಂ ದರ್ಶಯತಿ ॥

(ಭಾಷ್ಯಾರ್ಥ)

ಮತ್ತು ಶ್ರುತಿಯಲ್ಲಿ ಕಾರ್ಯವಾದ (ಸೃಷ್ಟಿಯಲ್ಲಿ)ರುವ ಜೀವನು ಆ (ಪರ)ಮಾತ್ಮನೇ ಎಂಬುದನ್ನು "ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕನು" (೨-೬) ಎಂದು ತಿಳಿಸಿಯೂ ಇರುತ್ತದೆ.[3]

ಮುಕ್ತಿಯಲ್ಲಿ ಉಭಯಪ್ರಾಪ್ತಿಯು ಏಕತ್ವಪಕ್ಷಕ್ಕೇ ಹೊಂದುತ್ತದೆ

(ಭಾಷ್ಯ)

೨೧೫. ಉಭಯಪ್ರತಿಷ್ಠೋಪಪತ್ತೇಶ್ಚ । ಯದಿ ಹಿ ವಿದ್ವಾನ್ ಸ್ವಾತ್ಮನೋಽನ್ಯನ್ನ ಪಶ್ಯತಿ, ತತಃ "ಉಭಯಂ ಪ್ರತಿಷ್ಠಾಂ ವಿನ್ದತೇ" (೨-೭) ಇತಿ

---

1. ಉಪಾಸನೆಯನ್ನೂ ಇಲ್ಲಿ ಸೇರಿಸಿಕೊಳ್ಳಬೇಕು. ಬರಿಯ ಜ್ಞಾನವನ್ನು ಪ್ರಾಪ್ತಿಗೆ ಹೇಳಿಲ್ಲ ; ಜ್ಞಾನದಿಂದೊಡಗೂಡಿದ ಕರ್ಮ ಮತ್ತು ಉಪಾಸನೆ - ಈ ರೂಪವಾದ ಸಾಧನವನ್ನು ಹೇಳಿದೆ ಎಂದು ಭಾವ. ಇದೇ ವೃತ್ತಿಕಾರರ ಮತವು.

2. ಶೀಕ್ಷಾವಲ್ಲಿ ಭಾ. ಭಾ. ೯, ೭೩ - ಇವುಗಳಲ್ಲಿ.

3. ವಿದ್ಯಾಮಾತ್ರವನ್ನುಪದೇಶಿಸಿರುವದರಿಂದ ಜೀವಪರಮಾತ್ಮೈಕ್ಯವು ಶ್ರುತಿಗೆ ವಿವಕ್ಷಿತ ವಾಗಿರಬೇಕು ಎಂಬುದು ಶ್ರುತಾರ್ಥಾಪತ್ತಿ. ಈಗ ಹೇಳುವದು ಸಾಕ್ಷಾತ್ತಾದ ಶ್ರುತಿ.

ನ್ಯಾತ್ । ಭಯಹೇತೋಃ ಪರಸ್ಯ ಅನ್ಯಸ್ಯ ಅಭಾವಾತ್ । ಅನ್ಯಸ್ಯ ಚ ಅವಿದ್ಯಾಕೃತತ್ವೇ ವಿದ್ಯಯಾ ಅವಸ್ತುತ್ವದರ್ಶನೋಪಪತ್ತಿಃ । ತದ್ ಹಿ ದ್ವಿತೀಯಚಂದ್ರಸ್ಯ ಅಸತ್ತ್ವಂ[1] ಯದತೈಮಿರಿಕೇಣ ಚಕ್ಷುಷ್ಮತಾ ನ ಗೃಹ್ಯತೇ ॥

(ಭಾಷ್ಯಾರ್ಥ)

ಅಂಜಿಕೆಯಿಲ್ಲದೆ ಪ್ರತಿಷ್ಠೆಯನ್ನು ಹೊಂದುವನೆಂಬುದು (ಈ ಪಕ್ಷದಲ್ಲಿಯೇ) ಹೊಂದುವದರಿಂದಲೂ (ಏಕತ್ವವೇ ಸತ್ಯವೆಂದು ತಿಳಿಯಬೇಕು) ಜ್ಞಾನವುಳ್ಳಾತನು ತನಗಿಂತ ಬೇರೆಯಾಗಿ (ಮತ್ತೇನನ್ನೂ) ಕಾಣುವದಿಲ್ಲವೆಂದಾದರೆ ಆಗ "ಅಂಜಿಕೆಯಿಲ್ಲದೆ ಪ್ರತಿಷ್ಠೆಯನ್ನು ಹೊಂದುತ್ತಾನೆ" (೨-೭) ಎಂದು (ಹೇಳಿರುವದು ಸರಿ)ಯಾದೀತು. ಏಕೆಂದರೆ ಅಂಜಿಕೆಗೆ ಕಾರಣವಾದ ಮತ್ತೊಂದು (ವಸ್ತುವು ಆಗ) ಇರುವದಿಲ್ಲ. ಮತ್ತೊಂದು (ವಸ್ತು) ಅವಿದ್ಯಾಕಲ್ಪಿತವೆಂದಾದರೆ ಜ್ಞಾನದಿಂದ (ಅದು ನಿಜವಾದ) ವಸ್ತುವಲ್ಲವೆಂದು ಕಂಡುಕೊಳ್ಳಲೂಬಹುದು. ಕಣ್ಣುಪರೆಯಿಲ್ಲದ (ಸರಿಯಾದ) ಕಣ್ಣುಳ್ಳವನಿಗೆ ಕಾಣದೆ ಇರುವದೇ ಇಲ್ಲವೆ, ಎರಡನೆಯ ಚಂದ್ರನು ಮಿಥ್ಯೆಯಾಗಿರುವದೆಂಬುದು ?[2]

ಅದ್ವೈತವು ಅನುಭವಾರೂಢವಾಗಿದೆ

(ಭಾಷ್ಯ)

೨೧೬. ನೈವಂ ನ ಗೃಹ್ಯತೇ ಇತಿ ಚೇತ್ । ನ । ಸುಪ್ತಪ್ರತಿಬೋಧಯೋರಿವ ಗ್ರಹಣಾತ್ । ಸುಪ್ತೇ ಅಗ್ರಹಣಮ್ ಅನ್ಯಾಸಕ್ತವತ್ ಇತಿ ಚೇತ್ । ನ । ಸರ್ವಾಗ್ರಹಣಾತ್[3] । ಜಾಗ್ರತ್ಸ್ವಪ್ನಯೋರನ್ಯಸ್ಯ ಗ್ರಹಣಾತ್ ಸತ್ತ್ವಮೇವ ಇತಿ ಚೇತ್ । ನ । ಅವಿದ್ಯಾಕೃತತ್ವಾತ್ ಜಾಗ್ರತ್ಸ್ವಪ್ನಯೋಃ । ಯದನ್ಯಗ್ರಹಣಂ ಜಾಗ್ರತ್ಸ್ವಪ್ನಯೋಃ, ತದವಿದ್ಯಾಕೃತಮ್ । ಅವಿದ್ಯಾಭಾವೇ[4] ಅಭಾವಾತ್ । ಸುಪ್ತೇಃ ಅಗ್ರಹಣಮಪಿ ಅವಿದ್ಯಾಕೃತಮ್ ಇತಿ ಚೇತ್ । ನ । ಸ್ವಾಭಾವಿಕತ್ವಾತ್ । ದ್ರವ್ಯಸ್ಯ ಹಿ ತತ್ತ್ವಮ್ ಅವಿಕ್ರಿಯಾ । ವಿಕ್ರಿಯಾ ತತ್ತ್ವಮ್

1. 'ಸತ್ತ್ವಮ್' ಎಂಬ ಆ॥ ಪಾಠಕ್ಕಿಂತ ಈ ವಾ॥ ಕಾ॥ ಪಾಠವೇ ಉತ್ತಮ.

2. ಇದರಂತೆ ದ್ವೈತವು ಮಿಥ್ಯೆಯೆಂಬುದಕ್ಕೆ ಅದು ಜ್ಞಾನಿಗೆ ಇಲ್ಲವೆಂದು ಗೊತ್ತಾಗುವದೆಂಬುದೇ ಹೇತು. ಹೀಗಾದರೇ ಜ್ಞಾನಿಗೆ ಅಭಯದಲ್ಲಿ ನಿಲುಗಡೆ ಯಾಗುವದೆಂಬ ಶ್ರುತಿಯು ಹೊಂದುತ್ತದೆ ಎಂದಭಿಪ್ರಾಯ.

3. 'ಸುಪ್ತಪ್ರತಿಬೋಧಯೋಃ' ಎಂಬುದು ಆ॥ ಪಾಠ.

4. 'ವಿದ್ಯಾಭಾವೇ' ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವು ಮೇಲು

ಪರಾಪೇಕ್ಷತ್ವಾತ್ । ನ ಹಿ ಕಾರಕಾಪೇಕ್ಷಂ ವಸ್ತುನಸ್ತತ್ತ್ವಮ್ । ಸತೋ ವಿಶೇಷಃ ಕಾರಕಾಪೇಕ್ಷಃ । ವಿಶೇಷಶ್ಚ ವಿಕ್ರಿಯಾ । ಜಾಗ್ರತ್ಸ್ವಪ್ನಯೋಶ್ಚ ಗ್ರಹಣಂ ವಿಶೇಷಃ । ಯದ್ಧಿ ಯಸ್ಯ ನಾನ್ಯಾಪೇಕ್ಷಂ ಸ್ವರೂಪಂ ತತ್ ತಸ್ಯ ತತ್ತ್ವಮ್ । ಯದನ್ಯಾಪೇಕ್ಷಂ ನ ತತ್ ತತ್ತ್ವಮ್ । ಅನ್ಯಾಭಾವೇ ಅಭಾವಾತ್ । ತಸ್ಮಾತ್ ಸ್ವಾಭಾವಿಕತ್ವಾತ್ ಜಾಗ್ರತ್ಸ್ವಪ್ನವತ್ ನ ಸುಷುಪ್ತೇ ವಿಶೇಷಃ ॥

(ಭಾಷ್ಯಾರ್ಥ)

(ಆಕ್ಷೇಪ :-) ಹೀಗೆ (ದ್ವೈತವು) ಕಾಣುವದಿಲ್ಲವೆಂಬುದು ಇಲ್ಲವಲ್ಲ !

(ಪರಿಹಾರ :-) ಹಾಗಲ್ಲ. ಏಕೆಂದರೆ **ತನಿನಿದ್ರೆಯಲ್ಲಿರುವವನಿಗೂ ಸಮಾಧಿಯಲ್ಲಿರುವವನಿಗೂ**[1] **(ಮತ್ತೊಂದು ವಸ್ತು) ಕಾಣಿಸುವದಿಲ್ಲ.**

(ಆಕ್ಷೇಪ :-) ತನಿನಿದ್ರೆಯಲ್ಲಿ ಕಾಣದಿರುವದು ಮತ್ತೊಂದರಲ್ಲಿ ಆಸಕ್ತನಾದವನಿಗೆ ಕಾಣಿಸದಿರುವಂತೆ[2] (ಎನ್ನಬಹುದಲ್ಲವೆ) ?

(ಪರಿಹಾರ :-) ಹಾಗಲ್ಲ. ಏಕೆಂದರೆ ಅಲ್ಲಿ ಏನನ್ನೂ ಕಾಣುವದೇ ಇಲ್ಲ.[3]

(ಆಕ್ಷೇಪ :-) ಎಚ್ಚರಕನಸುಗಳಲ್ಲಿ ಮತ್ತೊಂದು (ವಸ್ತು)ವನ್ನೂ ಕಾಣುವದರಿಂದ (ಅದು ನಿಜವಾಗಿ) ಇರುವದೆಂದೇ (ಹೇಳಬಹುದಲ್ಲ) !

(ಪರಿಹಾರ :-) ಹಾಗಲ್ಲ. ಏಕೆಂದರೆ **ಎಚ್ಚರಕನಸುಗಳು ಅವಿದ್ಯೆಯಿಂದಾದವುಗಳಾಗಿರುತ್ತವೆ.**[4] ಎಚ್ಚರಕನಸುಗಳಲ್ಲಿ ಮತ್ತೊಂದು (ವಸ್ತು)ವನ್ನು ಕಾಣುವದೆಂಬುದು ಅವಿದ್ಯೆಯಿಂದಾಗಿರುತ್ತದೆ, ಏಕೆಂದರೆ ಅವಿದ್ಯೆಯಿಲ್ಲದಾಗ (ಅದು) ಇರುವದಿಲ್ಲ.

(ಆಕ್ಷೇಪ :-) ತನಿನಿದ್ರೆಯಲ್ಲಿ (ಮತ್ತೊಂದು ವಸ್ತುವನ್ನು) ಕಾಣದಿರುವದೂ ಅವಿದ್ಯೆಯಿಂದಾದದ್ದೇ (ಎಂದರೊ) ?

(ಪರಿಹಾರ :-) ಹಾಗಲ್ಲ. ಏಕೆಂದರೆ ಅದು **ಸ್ವಾಭಾವಿಕವಾಗಿರುತ್ತದೆ.**[5] ಅದು

---

1. ತನಿನಿದ್ರೆ. ಸಮಾಧಿ - ಎರಡರಲ್ಲಿಯೂ ಎರಡನೆಯ ವಸ್ತುವನ್ನು ಕಾಣುವದಿಲ್ಲ ; ಆದ್ದರಿಂದ ಎರಡನೆಯ ವಸ್ತು ಮಿಥ್ಯೆ ಸೂ. ಭಾ. ೨-೧-೯, ಮಾಂ. ಕಾ. ಭಾ. ೪-೨೫.

2. ಬಾಣಹೊಡೆಯುವವನು ಗುರಿಯಲ್ಲಿ ಲಕ್ಷವಿಟ್ಟದ್ದರಿಂದ ಮತ್ತೊಂದು ವಸ್ತುವನ್ನು ಕಾಣದಿರುವಂತೆ. ಸೂ. ಭಾ. ೩-೨-೧೦.

3. ನಾನು, ಮತ್ತೊಂದು - ಏನನ್ನೂ ಕಾಣುವದಿಲ್ಲ : ಇದಕ್ಕೆ ವಿಕತ್ವವೇ ಕಾರಣ. ಬೃ ಭಾ ೪-೩-೧೧, ಛಾಂ. ಭಾ. ೬-೮-೧, ಸೂ. ಭಾ. ೩-೨-೭. ಇಲ್ಲಿ ವ್ಯಾಖ್ಯಾನಕಾರರು ಕೊಟ್ಟಿರುವ ವಿವರಣೆ ಭಾಷ್ಯಸಮ್ಮತವಲ್ಲ ; ಪೀಠಿಕೆಯನ್ನು ನೋಡಿ.

4. ತಾನಲ್ಲದ್ದನ್ನು ತಾನೆಂದು ಭಾವಿಸುವ ತಪ್ಪುತಿಳಿವಳಿಕೆ.

5. ಆತ್ಮಸ್ವರೂಪಕ್ಕೇ ಸೇರಿದ್ದು.

ಹೇಗೆಂದರೆ, ದ್ರವ್ಯಕ್ಕೆ ವಿಕಾರವಿಲ್ಲದಿರುವದೇ ತತ್ತ್ವವು. ಏಕೆಂದರೆ (ಅದು) ಮತ್ತೊಂದರ ಅವಲಂಬನೆಯಿಂದ ಇರುವದಿಲ್ಲ. ವಿಕಾರವಾಗುವದು (ದ್ರವ್ಯದ) ತತ್ತ್ವವಲ್ಲ, ಏಕೆಂದರೆ ಅದು ಮತ್ತೊಂದರ ಅವಲಂಬನೆಯಿಂದ (ಆಗತಕ್ಕದ್ದು) ವಸ್ತುವಿನ ತತ್ತ್ವವು[1] ಕಾರಕಗಳನ್ನು ಅವಲಂಬಿಸಿರುವದಿಲ್ಲ. ಇರುವ (ವಸ್ತುವಿಗೆ ಆಗುವ) ವಿಶೇಷವು ಕಾರಕಗಳನ್ನು ಅವಲಂಬಿಸಿ (ಆಗತಕ್ಕದ್ದಾಗಿ)ದೆ. ವಿಶೇಷವೆಂಬುದು ವಿಕಾರವಾಗಿರುತ್ತದೆ. ಎಚ್ಚರಕನಸುಗಳಲ್ಲಿ (ಮತ್ತೊಂದು ವಸ್ತುವನ್ನು) ಕಾಣುವದೆಂಬುದು ವಿಶೇಷವಾಗಿರುತ್ತದೆ. ಯಾವದಕ್ಕೆ ಯಾವದು ಮತ್ತೊಂದನ್ನು ಬಯಸದ ಸ್ವರೂಪವೋ ಅದು ಅದರ ತತ್ತ್ವವು ; ಯಾವದು ಮತ್ತೊಂದನ್ನು ಬಯಸುವದೋ ಅದು (ಅದರ) ತತ್ತ್ವವಲ್ಲ, ಏಕೆಂದರೆ (ಅದು ಆ) ಮತ್ತೊಂದಿಲ್ಲದಾಗ ಇರುವದಿಲ್ಲ. ಆದ್ದರಿಂದ (ನಿದ್ರೆಯಲ್ಲಿರುವ ಆತ್ಮರೂಪವು) ಸ್ವಾಭಾವಿಕವಾಗಿರುವದರಿಂದ ಎಚ್ಚರಕನಸುಗಳಂತೆ ತನಿನಿದ್ರೆಯಲ್ಲಿ ವಿಶೇಷವು ಇರುವದಿಲ್ಲ.

ದ್ವೈತಿಗಳ ಪಕ್ಷದಲ್ಲಿ ಅಭಯಪ್ರಾಪ್ತಿಯಿಲ್ಲ

(ಭಾಷ್ಯ)

೨೧೭. ಯೇಷಾಂ ಪುನಃ ಈಶ್ವರೋಽನ್ಯ ಆತ್ಮನಃ, ಕಾರ್ಯಂ ಚ ಅನ್ಯತ್, ತೇಷಾಂ ಭಯಾನಿವೃತ್ತಿಃ । ಭಯಸ್ಯ ಅನ್ಯನಿಮಿತ್ತತ್ವಾತ್ ಸತಶ್ಚ ಅನ್ಯಸ್ಯ ಆತ್ಮಹಾನಾನುಪಪತ್ತಿಃ । ನ ಚ ಅಸತ ಆತ್ಮಲಾಭಃ । ಸಾಪೇಕ್ಷಸ್ಯ ಅನ್ಯಸ್ಯ ಭಯಹೇತುತ್ವಮ್ ಇತಿ ಚೇತ್ । ನ । ತಸ್ಯಾಪಿ ತುಲ್ಯತ್ವಾತ್ । ಯತ್ ಧರ್ಮಾದ್ಯನು ಸಹಾಯಾಭೂತಂ ನಿತ್ಯಮ್ ಅನಿತ್ಯಂ ವಾ ನಿಮಿತ್ತಮ್ ಅಪೇಕ್ಷ್ಯ ಅನ್ಯತ್ ಭಯ ಕಾರಣಂ ಸ್ಯಾತ್ ತಸ್ಯಾಪಿ ತಥಾಭೂತಸ್ಯ ಆತ್ಮಹಾನಾಭಾವಾತ್ ಭಯಾನಿವೃತ್ತಿಃ । ಆತ್ಮಹಾನೇ ವಾ ಸದಸತೋರಿತರೇತರಾಪತ್ತೌ ಸರ್ವತ್ರ ಅನಾಶ್ವಾಸ ಏವ । ಏಕತ್ವ ಪಕ್ಷೇ ಪುನಃ ಸನಿಮಿತ್ತಸ್ಯ ಸಂಸಾರಸ್ಯ ಅವಿದ್ಯಾಕಲ್ಪಿತತ್ವಾತ್ ಅದೋಷಃ । ತೈಮಿರಿಕ ದೃಷ್ಟ್ಯಸ್ಯ ಹಿ ದ್ವಿತೀಯಚನ್ದ್ರಸ್ಯ ನಾತ್ಮಲಾಭೋ ವಿನಾಶೋ ವಾ ಅಸ್ತಿ ॥

(ಭಾಷ್ಯಾರ್ಥ)

ಆದರೆ ಯಾರ (ಮತದಲ್ಲಿ) ಈಶ್ವರನು ತನಗಿಂತ ಬೇರೆಯಾಗಿರುವನೋ ಮತ್ತು ಕಾರ್ಯವಾದ (ಜಗತ್ತೂ) ಬೇರೆಯಾಗಿರುವದೋ ಅವರ (ಮತದಲ್ಲಿ) ಭಯವು ತೊಲಗುವಹಾಗೇ ಇಲ್ಲ. ಏಕೆಂದರೆ ಭಯವು ಮತ್ತೊಂದು ನಿಮಿತ್ತದಿಂದ

1. ಇಲ್ಲಿ ತತ್ತ್ವವೆಂದರೆ ಸತ್ತ್ವವು ಸ್ವರೂಪವು.

(ಆಗಿರುತ್ತದೆ). (ನಿಜವಾಗಿ) ಇರುವ (ಆ) ಮತ್ತೊಂದು ನಾಶವಾಗುವ ಹಾಗಿಲ್ಲ ; ಇಲ್ಲದಿರುವದು ಹುಟ್ಟುವ (ಹಾಗೂ) ಇಲ್ಲ.[1]

(ಶಂಕೆ) :- (ಆ) ಮತ್ತೊಂದು (ಒಂದರ) ಅಪೇಕ್ಷೆಯಿಂದಲೇ[2] ಭಯಕ್ಕೆ ಕಾರಣವಾಗಿರಬಹುದಲ್ಲವೆ ?

(ಪರಿಹಾರ) :- ಹಾಗಲ್ಲ ಏಕೆಂದರೆ ಅದೂ (ಇದಕ್ಕೆ) ಸಮಾನವಾಗಿದೆ. (ಈ ಅಭಿಪ್ರಾಯದ ವಿವರವೇನೆಂದರೆ) : ಯಾವ ಧರ್ಮವೇ ಮುಂತಾದ[3] ಸಹಾಯ ಸಾಮಗ್ರಿಯಾಗಿರುವ ನಿತ್ಯವಾದ ಅಥವಾ ಅನಿತ್ಯವಾದ ನಿಮಿತ್ತವನ್ನಿಟ್ಟುಕೊಂಡು[4] (ಆ) ಇನ್ನೊಂದು ಭಯಕಾರಣವೆನ್ನಬಹುದೋ ಆ (ನಿಮಿತ್ತ)ವೂ ಸತ್ಯವಾದರೆ ನಾಶವಾಗಲಾರದಾದ್ದರಿಂದ ಭಯವು ತೊಲಗಲೇ ಆರದು. (ಒಂದು ವೇಳೆ ಅದು) ನಾಶವಾದರೆ ಸತ್ತು, ಅಸತ್ತು - ಇವುಗಳಲ್ಲಿ ಒಂದು ಇನ್ನೊಂದಾಗಬಹುದಾಗುವದರಿಂದ[5] ಏತರಲ್ಲಿಯೂ ನಂಬಿಕೆಯಿಲ್ಲದೆಹೋಗುವದು.[6]

ಇದರ ಬದಲು ಏಕತ್ವಪಕ್ಷವನ್ನೇ ಅವಲಂಬಿಸಿದರೆ ನಿಮಿತ್ತಸಹಿತವಾದ ಸಂಸಾರವು ಅವಿದ್ಯಾಕಲ್ಪಿತವಾಗಿರುವದರಿಂದ ಯಾವ ದೋಷವೂ ಇರುವದಿಲ್ಲ. **ಏಕೆಂದರೆ ಪರೆಗಣ್ಣಿನವನಿಗೆ ಕಾಣುವ ಎರಡನೆಯ ಚಂದ್ರನಿಗೆ ಹುಟ್ಟೂ ಇಲ್ಲ, ಹೊಂದೂ ಇಲ್ಲ.**[7]

ವಿದ್ಯಾವಿದ್ಯೆಗಳೂ ಪರಮಾರ್ಥವಾಗಿ ಆತ್ಮಧರ್ಮವಲ್ಲ

(ಭಾಷ್ಯ)

೨೧೮. ವಿದ್ಯಾವಿದ್ಯಯೋಃ ತದ್ಧರ್ಮತ್ವಮ್ ಇತಿ ಚೇತ್ । ನ । ಪ್ರತ್ಯಕ್ಷತ್ವಾತ್ । ವಿವೇಕಾವಿವೇಕೌ ರೂಪಾದಿವತ್ ಪ್ರತ್ಯಕ್ಷೌ ಉಪಲಭ್ಯೇತೇ ಅನ್ತಃಕರಣಸ್ಥೌ ।

---

1. ಇರುವ ಸಂಸಾರಭಯವು ಹೋಗಲಾರದು, ಇಲ್ಲದ ಮುಕ್ತಿಯು ಬರಲಾರದು.

2. ಧರ್ಮಾಧರ್ಮಗಳನ್ನವಲಂಬಿಸಿ ಈಶ್ವರನು ಭಯಕಾರಣನಾಗಬಹುದಲ್ಲ !

3. 'ಧರ್ಮಾದಿ' ಎಂಬ ವಾ॥ ಕಾ॥ ಪಾಠವನ್ನಿಟ್ಟುಕೊಂಡಿದೆ.

4. ಧರ್ಮಾಧರ್ಮಗಳು ಕರ್ಮರೂಪವಾದರೆ ಅನಿತ್ಯ, ಅದೃಷ್ಟರೂಪವಾದರೆ ನಿತ್ಯ.

5. ಇದ್ದ ಸಂಸಾರವು ಹೋಗಿ ಇಲ್ಲದ ಮುಕ್ತಿಯು ಉಂಟಾಗುವದಾದರೆ ಸತ್ತೂ ಅಸತ್ತಾಗಬಹುದು, ಅಸತ್ತೂ ಸತ್ತಾಗಬಹುದು - ಎಂದಾಗುವದು. ಗೀ. ಭಾ. ೧೩-೨, ೧೮-೪೮.

6. ಕರ್ಮಾದಿಸಾಧನಗಳಲ್ಲಿಯೂ ವಿಶ್ವಾಸವುಂಟಾಗದು. ಏಕೆಂದರೆ ಸಾಧನವು ಸಾಧನವಲ್ಲದೆ ಹೋಗಬಹುದು, ಫಲವು ಫಲವಲ್ಲದೆ ಹೋಗಬಹುದು.

7. ಮಾಂ. ಕಾ. ಭಾ. ೧-೧೭.

ನ ಹಿ ರೂಪಸ್ಯ ಪ್ರತ್ಯಕ್ಷಸ್ಯ ಸತೋ ದ್ರಷ್ಟೃಧರ್ಮತ್ವಮ್ । ಅಪಿ ಚ ಸ್ವಾನ ಭವೇನ ರೂಪ್ಯತೇ 'ಮೂಢೋಽಹಮ್, ಅವಿವಿಕ್ತಂ ಮಮ ವಿಜ್ಞಾನಮ್' ಇತಿ । ತಥಾ ವಿದ್ಯಾವಿವೇಕೋಽನುಭೂಯತೇ । ಉಪದಿಶನ್ತಿ ಚ ಅನ್ಯೇಭ್ಯ ಆತ್ಮನೋ ವಿದ್ಯಾಂ ಬುಧಾಃ । ತಥಾ ಚ ಅನ್ಯೇ ಅವಧಾರಯನ್ತಿ । ತಸ್ಮಾತ್ ನಾಮರೂಪಪಕ್ಷ ಸ್ಯೈವ ವಿದ್ಯಾವಿದ್ಯೇ । ನಾಮರೂಪೇ ಚ ನಾತ್ಮಧರ್ಮೌ । 'ನಾಮರೂಪ ಯೋರ್ನಿರ್ವಹಿತಾ ತೇ ಯದನ್ತರಾ ತದ್ ಬ್ರಹ್ಮ' (ಛಾಂ ೪-೧೪-೧) ಇತಿ ಶ್ರುತ್ಯನ್ತರಾತ್ । ತೇ ಚ ಪುನರ್ನಾಮರೂಪೇ ಸವಿತರಿ ಅಹೋರಾತ್ರೇ ಇವ ಕಲ್ಪಿತೇ ನ ಪರಮಾರ್ಥತೋ ವಿದ್ಯಮಾನೇ ॥

(ಭಾಷ್ಯಾರ್ಥ)

(ಆಕ್ಷೇಪ) :- (ಹಾಗಾದರೆ) ವಿದ್ಯಾವಿದ್ಯೆಗಳು ಆ ಆತ್ಮನ ಧರ್ಮ ಗಳಿಂದಾಯಿತು[1] !

(ಪರಿಹಾರ :-) ಅಲ್ಲ. ಏಕೆಂದರೆ (ಅವು) ಪ್ರತ್ಯಕ್ಷವಾಗಿರುತ್ತವೆ.[2] ವಿವೇಕ, ಅವಿವೇಕ - ಇವೆರಡೂ ರೂಪವೇ ಮುಂತಾದವುಗಳಂತೆಯೇ ಅಂತಃಕರಣ ದಲ್ಲಿರುವದು (ಪ್ರತ್ಯಕ್ಷವಾಗಿರುತ್ತದೆ). ಪ್ರತ್ಯಕ್ಷವಾಗಿರುವ ರೂಪವು (ಅದನ್ನು) ನೋಡುವವನ ಧರ್ಮವಲ್ಲವಷ್ಟೆ ? 'ನಾನು ಮೂಢನು, ನನ್ನ ಜ್ಞಾನವು ಏಂಗಡಿಸಿ (ತಿಳಿಸುವ)ದಿಲ್ಲ' ಎಂದು ಅವಿದ್ಯೆಯು ತನ್ನ ಅನುಭವಕ್ಕೆ ವಿಷಯವಾಗುತ್ತದೆ.[3] ಇದರಂತೆ ವಿದ್ಯೆಯೆಂಬ ವಿವೇಕವೂ ಅನುಭವಕ್ಕೆ ಬರುತ್ತದೆ. ತಿಳಿದವರು ತಮ್ಮ ವಿದ್ಯೆಯನ್ನು ಮತ್ತೊಬ್ಬರಿಗೆ ಉಪದೇಶಮಾಡುತ್ತಾರೆ. ಆದ್ದರಿಂದ ವಿದ್ಯೆ, ಅವಿದ್ಯೆ - ಇವೆರಡೂ ನಾಮರೂಪಗಳ ಪಕ್ಷಕ್ಕೇ (ಸೇರಿದವುಗಳು). ನಾಮರೂಪಗಳಂತೂ ಆತ್ಮನ ಧರ್ಮವಲ್ಲ. '(ಆಕಾಶನೆಂದು ಪ್ರಸಿದ್ಧನಾಗಿರುವ ಆತ್ಮನು) ನಾಮ ರೂಪಗಳನ್ನು ಬಿಡಿಸುವವನು ; ಅವುಗಳಿಗಿಂತ ಬೇರೆಯಾಗಿರುವದೇ ಬ್ರಹ್ಮವು' (ಛಾಂ. ೪-೧೪-೧) ಎಂಬ ಮತ್ತೊಂದು ಶ್ರುತಿಯು ಇದಕ್ಕೆ ಪ್ರಮಾಣವು.

---

1. ಅವಿದ್ಯೆಯಿಂದಾಗಿರುವ ಬಂಧವನ್ನು ವಿದ್ಯೆಯಿಂದ ಕಳೆದುಕೊಂಡು ಮುಕ್ತಿಯನ್ನು ಪಡೆಯಬೇಕು ಎಂಬ ಅದ್ವೈತಪಕ್ಷದಲ್ಲಿ ವಿದ್ಯಾವಿದ್ಯೆಗಳಾದರೂ ಆತ್ಮನಿಗೆ ಇರಬೇಕೆಂದಾಗು ವದು. ಅವುಗಳಿದ್ದರೆ ಅದ್ವೈತಹಾನಿ ಎಂದು ಪೂರ್ವಪಕ್ಷಿಯ ಭಾವ.

2. ನೇರಾಗಿ ಅನುಭವಕ್ಕೆ ವಿಷಯವಾಗಿರುತ್ತವೆ. ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ ವೆಂಬುದನ್ನು ಗೀ. ಭಾ. ೧೩-೨, ಬೃ. ಭಾ. ೩-೫-೧, ಕ. ಭಾ. ೨-೨-೧೧ - ಇವುಗಳಲ್ಲಿ ಕಾಣಬಹುದು.

3. ಆದ್ದರಿಂದ ಅದು ಅರಿಯುವ ಆತ್ಮನ ಧರ್ಮವಲ್ಲ. ಬೃ. ೪-೪-೬.

ಈ ನಾಮರೂಪಗಳೆಂಬವುಗಳಾದರೋ ಸೂರ್ಯನಲ್ಲಿ ಹಗಲುರಾತ್ರಿಗಳಂತೆ ಕಲ್ಪಿತವಾಗಿರುವವೇ ಹೊರತು ನಿಜವಾಗಿ ಇರುವವಲ್ಲ.[1]

ಸಂಕ್ರಮಣವೆಂದರೆ ಜ್ಞಾನವೇ

(ಭಾಷ್ಯ)

೨೧೯. ಅಭೇದೇ "ಏತಮಾನನ್ದಮಯಮಾತ್ಮಾನಮುಪಸಂಕ್ರಾಮತಿ" ಇತಿ ಕರ್ಮಕರ್ತೃತ್ವಾನುಪಪತ್ತಿಃ ಇತಿ ಚೇತ್ । ನ । ವಿಜ್ಞಾನಮಾತ್ರತ್ವಾತ್ ಸಂಕ್ರಮಣಸ್ಯ । ನ ಜಲೂಕಾದಿವತ್ ಸಂಕ್ರಮಣಮ್ ಇಹ ಉಪದಿಶ್ಯತೇ, ಕಿಂ ತರ್ಹಿ, ವಿಜ್ಞಾನ ಮಾತ್ರಂ ಸಂಕ್ರಮಣಶ್ರುತೇರರ್ಥಃ । ನನು ಮುಖ್ಯಮೇವ ಸಂಕ್ರಮಣಂ ಶ್ರೂಯತೇ 'ಉಪಸಂಕ್ರಾಮತಿ' ಇತಿ (ಇತಿ ?) ಚೇತ್ । ನ । ಅನ್ನಮಯೇ ಅದರ್ಶನಾತ್ । ನ ಹಿ ಅನ್ನಮಯಮ್ ಉಪಸಂಕ್ರಾಮತಃ ಬಾಹ್ಯಾತ್ ಅಸ್ಮಾತ್ ಲೋಕಾತ್ ಜಲೂಕಾವತ್ ಸಂಕ್ರಮಣಂ ದೃಶ್ಯತೇ ಅನ್ಯಥಾ ವಾ । ಮನೋಮಯಸ್ಯ ಬಹಿರ್ನಿರ್ಗತಸ್ಯ ವಿಜ್ಞಾನಮಯಸ್ಯ ವಾ ಪುನಃ ಪ್ರತ್ಯಾವೃತ್ತ್ಯಾ ಆತ್ಮಸಂಕ್ರಮಣಮ್ ಇತಿ ಚೇತ್ । ನ । ಸ್ವಾತ್ಮನಿ ಕ್ರಿಯಾವಿರೋಧಾತ್, ಅನ್ಯೋಽನ್ನಮಯಮ್ ಅನ್ಯಮ್ ಉಪಸಂಕ್ರಾಮತಿ ಇತಿ ಪ್ರಕೃತ್ಯ ಮನೋಮಯೋ ವಿಜ್ಞಾನಮಯೋ ವಾ ಸ್ವಾತ್ಮಾನಮೇವ ಉಪ ಸಂಕ್ರಾಮತಿ ಇತಿ ವಿರೋಧಃ ಸ್ಯಾತ್ । ತಥಾ ನಾನನ್ದಮಯಸ್ಯ ಆತ್ಮಸಂಕ್ರಮಣಮ್ ಉಪಪದ್ಯತೇ ॥

(ಭಾಷ್ಯಾರ್ಥ)

(ಆಕ್ಷೇಪ) :- ಅಭೇದಪಕ್ಷದಲ್ಲಿ 'ಈ ಆನಂದಮಯನೆಂಬ ಆತ್ಮನನ್ನು ಪಡೆದುಕೊಳ್ಳುತ್ತಾನೆ' ಎಂದು (ಸಂಕ್ರಮಣ = ಬಂದು ಪಡೆಯುವಿಕೆ ಎಂಬ ಕ್ರಿಯೆಗೆ ತಾನೇ) ಕರ್ಮವೂ ಕರ್ತೃವೂ ಆಗಿರುವದು ಅಯುಕ್ತವಲ್ಲವೆ ?

(ಪರಿಹಾರ :-) ಹಾಗಲ್ಲ. ಏಕೆಂದರೆ ಸಂಕ್ರಮಣ (ಪಡೆದುಕೊಳ್ಳುವದು) ಎಂದರೆ ಬರಿಯ ಜ್ಞಾನವೇ ಆಗಿರುತ್ತದೆ. ಜಿಗಣೆಯ ಹುಳುವೇ ಮುಂತಾದವುಗಳಂತೆ (ಚಲಿಸಿಕೊಂಡುಹೋಗಿ) ಪಡೆದುಕೊಳ್ಳುವದನ್ನೇನೂ ಇಲ್ಲಿ ಹೇಳಿರುವದಿಲ್ಲ. ಮತ್ತೇನೆಂದರೆ 'ಸಂಕ್ರಮಣ' ಎಂಬ ಶ್ರುತಿಗೆ ಅರಿತುಕೊಳ್ಳುವದೆಂಬುದು ಮಾತ್ರ ಅರ್ಥ(ವಾಗಿರುತ್ತದೆ).

---

1. ಆದ್ದರಿಂದ ಅವು ಆತ್ಮನ ಧರ್ಮವಲ್ಲ ; ಅವು ಕಲ್ಪಿತವಾಗಿರುವದರಿಂದ ಅದ್ವೈತಕ್ಕೆ ಹಾನಿಯೂ ಇಲ್ಲ. ಬೃ. ಭಾ. ೩-೫-೧. ಇಲ್ಲಿ ವ್ಯಾಖ್ಯಾನದಲ್ಲಿ ಕೊಟ್ಟಿರುವ ಅವಿದ್ಯಾ ಪ್ರಕ್ರಿಯೆಯ ವಿಷಯದ ಅವತರಣಿಕೆಗೆ ಭಾಷ್ಯಾಧಾರವಿಲ್ಲ. ಪೀಠಿಕೆಯನ್ನು ನೋಡಿ.

(ಆಕ್ಷೇಪ :-) 'ಉಪಸಂಕ್ರಾಮತಿ' (ಬಂದು ಸೇರುತ್ತಾನೆ) ಎಂದು ಮುಖ್ಯಾರ್ಥದಲ್ಲಿಯೇ ಸಂಕ್ರಮಣವನ್ನು ಪಡೆದುಕೊಳ್ಳುವದನ್ನು ಶ್ರುತಿ ಹೇಳುತ್ತಿದೆಯಲ್ಲ !

(ಪರಿಹಾರ :-) ಹಾಗಲ್ಲ. ಏಕೆಂದರೆ ಈ ಬಗೆಯ ಸಂಕ್ರಮಣವು ಅನ್ನಮಯನ ವಿಷಯದಲ್ಲಿ ಕಂಡುಬರುವದಿಲ್ಲ. ಅನ್ನಮಯನನ್ನು ಸೇರುವದಕ್ಕೆ, ಹೊರಗಿನ ಈ ಲೋಕದಿಂದ ಜಿಗಣೆಯಂತೆ ಬಂದುಸೇರುವ (ಸಂಕ್ರಮಣ)ವಾಗಲಿ, ಬೇರೆಯ ಬಗೆಯ (ಸಂಕ್ರಮಣ)ವಾಗಲಿ, ಕಂಡುಬರುವದಿಲ್ಲವಷ್ಟೆ ?

(ಆಕ್ಷೇಪ) :- ಮನೋಮಯನು ಅಥವಾ ವಿಜ್ಞಾನಮಯನು ಹೊರಕ್ಕೆ ಹೊರಟಿದ್ದವನು ಮತ್ತೆ ಹಿಂತಿರುಗಿ ಬಂದು ತನ್ನನ್ನೇ ತಾನು ಸೇರಿಕೊಳ್ಳಬಹುದಲ್ಲವೆ ?

(ಪರಿಹಾರ :-) ಹಾಗಲ್ಲ. ಏಕೆಂದರೆ ತನ್ನ ವಿಷಯದಲ್ಲಿ (ತನ್ನ) ಕ್ರಿಯೆಯೇ (ಕೆಲಸಮಾಡುವದೆಂಬುದು) ವಿರುದ್ಧವಾಗಿರುತ್ತದೆ. 'ಅನ್ನಮಯನನ್ನು ಮತ್ತೊಬ್ಬನು (ಬಂದು) ಸೇರುತ್ತಾನೆ' ಎಂದು ಪ್ರಾರಂಭಿಸಿ ಮನೋಮಯನು ಅಥವಾ ವಿಜ್ಞಾನಮಯನು ತನ್ನನ್ನೇ ಬಂದು ಸೇರಿಕೊಳ್ಳುತ್ತಾನೆ ಎಂಬುದು (ಪ್ರಕ್ರಮ)ವಿರುದ್ಧವಾಗುತ್ತದೆ.[1] ಇದರಂತೆ ಆನಂದಮಯನು ತನ್ನನ್ನೇ ಬಂದು ಸೇರಿಕೊಳ್ಳುತ್ತಾನೆ ಎಂಬುದೂ ಯುಕ್ತವಾಗುವದಿಲ್ಲ.[2]

(ಭಾಷ್ಯ)

೨೨೦. ತಸ್ಮಾತ್ ನ ಪ್ರಾಪ್ತಿಃ ಸಂಕ್ರಮಣಮ್, ನಾಪಿ ಅನ್ನಮಯಾದೀನಾಮನ್ಯತಮಕರ್ತೃಕಮ್ । ಪಾರಿಶೇಷ್ಯಾತ್ ಅನ್ನಮಯಾದ್ಯಾನನ್ದಮಯಾನ್ತಾತ್ಮವ್ಯತಿರಿಕ್ತಕರ್ತೃಕಂ ಜ್ಞಾನಮಾತ್ರಂ ಚ ಸಂಕ್ರಮಣಮ್ ಉಪಪದ್ಯತೇ । ಜ್ಞಾನಮಾತ್ರತ್ವೇ ಚ ಆನನ್ದಮಯಾನ್ತಃಸ್ಥಸ್ಯೈವ ಸರ್ವಾನ್ತರಸ್ಯ ಆಕಾಶಾದ್ಯನ್ನಮಯಾನ್ತಂ ಕಾರ್ಯಂ ಸೃಷ್ಟ್ವಾ ಅನುಪ್ರವಿಷ್ಟಸ್ಯ ಹೃದಯಗುಹಾಭಿಸಂಬನ್ಧಾತ್ ಅನ್ನಮಯಾದಿಷ್ವನಾತ್ಮಸು

1. ಮನಸ್ಸು ಅಥವಾ ವಿಜ್ಞಾನವು ಹೊರಗಿನ ವಿಷಯಗಳ ಬಳಿಗೆ ಹೋಗಿದ್ದು ಹಿಂದಕ್ಕೆ ಬರಬಹುದು, ಅದೇ ಸಂಕ್ರಮಣವು ಎಂದು ಪೂರ್ವಪಕ್ಷಿ ಹೇಳಿದ್ದು ಅನ್ನಮಯನ ವಿಷಯಕ್ಕೆ ಹೊಂದಬಹುದು. ಏಕೆಂದರೆ ದೇಹಕ್ಕಿಂತ ಬೇರೆಯ ವಿಷಯಗಳನ್ನು ಬಿಟ್ಟು ದೇಹಕ್ಕೆ ಮನಸ್ಸು ಹಿಂತಿರುಗಿತು ಎಂದು ಹೇಳಬಹುದು. ಆದರೆ ಮನಸ್ಸು ಮನಸ್ಸಿಗೆ ಬಂದು ಸೇರಿತು, ವಿಜ್ಞಾನವು ವಿಜ್ಞಾನದ ಬಳಿಗೆ ಬಂದು ಸೇರಿತು - ಎಂದರೆ ಅರ್ಥವಿಲ್ಲ. ತಾನೇ ತನ್ನನ್ನೇ ಸೇರುವದು ಆಗಲಾರದು.

2. ಅನ್ನಮಯನನ್ನು ಬಿಟ್ಟರೆ ಮಿಕ್ಕ ಆತ್ಮರುಗಳ ವಿಷಯದಲ್ಲೆಲ್ಲ ಕರ್ಮಕರ್ತೃತ್ವ ವಿರೋಧವು ಬರುವದರಿಂದ ಮುಖ್ಯಸಂಕ್ರಮಣಪಕ್ಷವನ್ನು ಕೈಬಿಡಬೇಕು ಎಂದಭಿಪ್ರಾಯ.

ಆತ್ಮವಿಭ್ರಮಃ ಸಂಕ್ರಮಣೇನ ಆತ್ಮವಿವೇಕವಿಜ್ಞಾನೋತ್ಪತ್ತ್ಯಾ ವಿನಶ್ಯತಿ । ತದೇತಸ್ಮಿನ್ ಅವಿದ್ಯಾವಿಭ್ರಮನಾಶೇ ಸಂಕ್ರಮಣಶಬ್ದಃ ಉಪಚರ್ಯತೇ । ನ ಹಿ ಅನ್ಯಥಾ ಸರ್ವಗತಸ್ಯ ಆತ್ಮನಃ ಸಂಕ್ರಮಣಮ್ ಉಪಪದ್ಯತೇ । ವಸ್ತ್ವನ್ತರಾಭಾವಾಚ್ಚ । ನ ಚ ಸ್ವಾತ್ಮನ ಏವ ಸಂಕ್ರಮಣಮ್ । ನ ಹಿ ಜಲೂಕಾ ಆತ್ಮಾನಮೇವ ಸಂಕ್ರಾಮತಿ ॥

(ಭಾಷ್ಯಾರ್ಥ)

ಆದ್ದರಿಂದ (ಇಲ್ಲಿ) ಸಂಕ್ರಮಣವೆಂದರೆ (ನಿಜವಾಗಿ ಹೋಗಿ) ಪಡೆದು ಕೊಳ್ಳುವದು (ಎಂದರ್ಥ)ವಲ್ಲ ; ಅನ್ನಮಯನೇ ಮೊದಲಾದ (ಆತ್ಮರುಗಳಲ್ಲಿ) ಯಾವನೋ ಒಬ್ಬನು (ಪಡೆದು)ಕೊಳ್ಳತಕ್ಕ ದ್ದೂ ಅಲ್ಲ.[1] ಆದ್ದರಿಂದ (ಇನ್ನು) ಉಳಿದಿರುವ (ಒಂದೇ ಒಂದು ಪಕ್ಷವು ಯಾವದೆಂದರೆ), ಅನ್ನಮಯನಿಂದ ಹಿಡಿದು ಆನಂದಮಯನವರೆಗಿನ ಆತ್ಮರುಗಳಿಗಿಂತ ಬೇರೆಯಾಗಿರುವವನು (ಸಂಕ್ರಮಣಕ್ಕೆ) ಕರ್ತೃ. (ಆತ್ಮನನ್ನು) ಅರಿತುಕೊಳ್ಳುವದೇ ಸಂಕ್ರಮಣವು ಎಂಬುದು ಯುಕ್ತ. (ಹೀಗೆ) ಅರಿಯುವದೆಂಬುದೇ (ಸಂಕ್ರಮಣವೆಂದಾಗಲಾಗಿ) ಆನಂದಮಯನ ಒಳಗೆ ಇರುವ, ಎಲ್ಲರಿಗೂ ಒಳಗಿನ ಆತ್ಮನು ಆಕಾಶವೇ ಮುಂತಾಗಿ ಅನ್ನಮಯದವರೆಗಿನ ಕಾರ್ಯವನ್ನು ಸೃಷ್ಟಿಸಿ ತಾನೇ ಒಳಹೊಕ್ಕಿರುವಲ್ಲಿ ಹೃದಯಗುಹೆಯ ಸಂಬಂಧದಿಂದ ಅನ್ನಮಯವೇ ಮುಂತಾದ ಅನಾತ್ಮಗಳಲ್ಲಿ ಉಂಟಾಗಿದ್ದ ಆತ್ಮತ್ವಭ್ರಾಂತಿಯು ಸಂಕ್ರಮಣ ದಿಂದ ಎಂದರೆ ಆತ್ಮನನ್ನು ವಿಂಗಡಿಸಿ ಅರಿತುಕೊಂಡ ತಿಳಿವಳಿಕೆಯು ಹುಟ್ಟುವದ ರಿಂದ ಹೋಗುತ್ತದೆ.[2] ಆ ಈ ಅವಿದ್ಯಾಭ್ರಾಂತಿಯ ನಾಶವನ್ನು (ಹೇಳುವದಕ್ಕೆ) 'ಸಂಕ್ರಮಣ' ಎಂಬ ಶಬ್ದವನ್ನು ಉಪಚಾರದಿಂದ[3] ಉಪಯೋಗಿಸಿರುತ್ತದೆ. ಸರ್ವಗತ ನಾದ ಆತ್ಮನಿಗೆ (ಇನ್ನು ಯಾವ) ಬೇರೆಯ ವಿಧದಿಂದಲೂ 'ಸಂಕ್ರಮಣ' (ಪಡೆದು ಕೊಳ್ಳುವಿಕೆ) ಎಂಬುದು ಹೊಂದುವದಿಲ್ಲ. ಮತ್ತೊಂದು ವಸ್ತುವಿಲ್ಲದ್ದರಿಂದಲೂ

---

1. ಏಕೆಂದರೆ ಅನ್ನಮಯನು ತಾನು ಹೊಂದುವಂತಿಲ್ಲ ; ಮಿಕ್ಕವರನ್ನೂ ಹೋಗಿ ಸೇರುವಂತಿಲ್ಲ ; ಮನೋಮಯಾದ್ಯಾತ್ಮರು ತಮ್ಮನ್ನು ತಾವು ಸೇರಿಕೊಳ್ಳುವಹಾಗಿಲ್ಲ.

2. ಹತ್ತನೆಯವನ ಕಥೆಯಿಂದ ಹಿಂದೆ ಭಾ. ಭಾ. ೯೩ರಲ್ಲಿ ಹೇಳಿದ್ದ ಜ್ಞಾನವೇ ಇದು. ಈ ಜ್ಞಾನವು - ಅಜ್ಞಾನವನ್ನು ನಾಶಮಾಡುವದೆಂಬ ವೃತ್ತಿಯು - ಅಂತಃಕರಣದಲ್ಲಿಯೇ ಉಂಟಾಗುವದಾದರೂ ಅನ್ನಮಯಾದಿ ಪಂಚಕೋಶಗಳಿಗಿಂತ ಬೇರೆಯಾದ ಆತ್ಮನಲ್ಲಿ ನೆಲೆ ನಿಂತಿದ್ದರಿಂದ ಆಗಿರುವದರಿಂದ ಆತ್ಮನನ್ನೇ ಜ್ಞಾನಿಯೆಂದು ವ್ಯವಹರಿಸಲಾಗುತ್ತದೆ. ಗೀ. ಭಾ. ೨-೨೧ನ್ನು ನೋಡಿ.

3. ಅವಿದ್ಯೆಯಿಂದ ಅನಾಪ್ತವಾದಂತಿದ್ದ ಆತ್ಮನು ವಿದ್ಯೆಯಿಂದ ಆಪ್ತನಾದಂತೆ ಆಗುತ್ತಾನೆ ಎಂಬುದನ್ನು ತಿಳಿಸುವದಕ್ಕೆ ಸಂಕ್ರಮಣಶಬ್ದವನ್ನು ಇಲ್ಲಿ ಗೌಣವೃತ್ತಿಯಿಂದ ಉಪಯೋಗಿಸಿದೆ.

(ಹೀಗೆಂದು ತಿಳಿಯಬೇಕು.[1]) ತನ್ನನ್ನು ತಾನೇ ಪಡೆಯುವದೆಂಬುದೂ ಸಲ್ಲದು ಜಿಗಣೆಯ ಹುಳು ತನ್ನನ್ನೇ ತಾನು ಸೇರಿಕೊಳ್ಳುವದಿಲ್ಲವಷ್ಟೆ ?[2]

೧೮. ನಿರ್ವಿಕಲ್ಪಾತ್ಮಜ್ಞಾನದ ಉಪಸಂಹಾರ

ತದಪ್ಯೇಷ ಶ್ಲೋಕೋ ಭವತಿ ॥೬॥

(ಇತ್ಯಷ್ಟಮೋಽನುವಾಕಃ)

೬. ಅದರ ವಿಷಯದಲ್ಲಿಯೇ ಈ ಶ್ಲೋಕವಿರುವದು.

(ಎಂಟನೆಯ ಅನುವಾಕವು ಮುಗಿಯಿತು)

ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ । ಆನನ್ದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕುತಶ್ಚನೇತಿ ॥೧॥

೧. ಯಾವದರಿಂದ ವಾಕ್ಕುಗಳು ಮನಸ್ಸಿನೊಡನೆ (ಅದನ್ನು) ಮುಟ್ಟಲಾರದೆ ಹಿಂತಿರುಗುವವೋ (ಆ) ಬ್ರಹ್ಮದ ಆನಂದವನ್ನು ತಿಳಿದವನು ಏತಕ್ಕೂ ಅಂಜುವದಿಲ್ಲ.

ನಿರ್ವಿಕಲ್ಪಾತ್ಮಜ್ಞಾನಕ್ಕೆ ಉಪಾಯ

(ಭಾಷ್ಯ)

೨೨೧. ತಸ್ಮಾತ್ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" ಇತಿ ಯಥೋಕ್ತ ಲಕ್ಷಣಾತ್ಮಪ್ರತಿಪತ್ಯರ್ಥಮೇವ ಬಹುಭವನಸರ್ಗಪ್ರವೇಶರಸಲಾಭಾಭಯಸಂಕ್ರಮಣಾದಿ ಪರಿಕಲ್ಪ್ಯತೇ ಬ್ರಹ್ಮಣಿ ಸರ್ವಂ[3] ವ್ಯವಹಾರವಿಷಯೇ । ನ ತು ಪರಮಾರ್ಥತೋ

1. ಆತ್ಮನಿಗಿಂತ ಬೇರೆಯಾಗಿರುವ ವಸ್ತುವೇ ಇಲ್ಲ ; ನಾಮರೂಪಗಳೆಲ್ಲವೂ ಆತ್ಮವ್ಯಾಪ್ತವಾಗಿಯೇ ಇವೆ. ಹೀಗಿರುವಲ್ಲಿ ಆತ್ಮರು ಏನನ್ನು ಪಡೆಯಬೇಕಾಗಿದೆ ?

2. ಜಿಗಣೆಗೆ ಅವಯವಗಳಿರುವದರಿಂದ ಒಂದು ಅವಯವದಿಂದ ಮತ್ತೊಂದನ್ನು ಅದು ಸೇರಿದರೂ ಸೇರಬಹುದು ; ಆದರೆ ಆತ್ಮನಿಗೆ ಅವಯವಗಳೂ ಇಲ್ಲ. ತೈ. ವಾ ೨-೫೮೪.

3. 'ಸರ್ವವ್ಯವಹಾರವಿಷಯೇ' ಆ॥ ವಾ॥ 'ಸರ್ವವ್ಯವಹಾರಾವಿಷಯೇ' ಕಾ॥ - ಈ ಎರಡು ಪಾಠಗಳನ್ನೂ ಬಿಟ್ಟು 'ಸರ್ವಂ ವ್ಯವಹಾರವಿಷಯೇ' ಎಂದು ತಿದ್ದಿಕೊಂಡಿದೆ. ವ್ಯವಹಾರಕ್ಕಾಗಿ ಬ್ರಹ್ಮದಲ್ಲಿದ್ದಂತೆ ಅಧ್ಯಾರೋಪಮಾಡಿಕೊಂಡು ತಿಳಿಸಿದೆ - ಎಂಬ ಅರ್ಥವು ಇದರಿಂದ ಹೊರಡುತ್ತದೆ.

ನಿರ್ವಿಕಲ್ಪೇ ಬ್ರಹ್ಮಣಿ ಕಶ್ಚಿದಪಿ ವಿಕಲ್ಪ ಉಪಪದ್ಯತೇ । ತಮೇತಂ ನಿರ್ವಿಕಲ್ಪಮ್ ಆತ್ಮಾನಮ್ ಏವಂಕ್ರಮೇಣ ಉಪಸಂಕ್ರಮ್ಯ ವಿದಿತ್ವಾ ನ ಬಿಭೇತಿ ಕುತಶ್ಚನ । ಅಭಯಂ ಪ್ರತಿಷ್ಠಾಂ ವಿನ್ದತೇ ಇತ್ಯೇತಸ್ಮಿನ್ ಅರ್ಥೇಽಪಿ ಏಷ ಶ್ಲೋಕೋ ಭವತಿ, ಸರ್ವಸ್ಯೈವ ಅಸ್ಯ ಪ್ರಕರಣಸ್ಯ ಆನನ್ದವಲ್ಲ್ಯರ್ಥಸ್ಯ ಸಂಕ್ಷೇಪತಃ ಪ್ರಕಾಶನಾಯ ಏಷ ಮನ್ತ್ರೋ ಭವತಿ ॥

(ಭಾಷ್ಯಾರ್ಥ)

ಆದ್ದರಿಂದ 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (೨-೧) ಎಂದು ಹಿಂದೆ ಹೇಳಿದ ಲಕ್ಷಣವುಳ್ಳ ಆತ್ಮನನ್ನು ತಿಳಿಯುವದಕ್ಕೋಸ್ಕರವೇ ಬಹುವಾಗುವಿಕೆ, ಸೃಷ್ಟಿ, ಪ್ರವೇಶ, ರಸವನ್ನು ಹೊಂದುವಿಕೆ, ಅಭಯ, ಸಂಕ್ರಮಣ - ಮುಂತಾದ ದ್ದೆಲ್ಲವನ್ನೂ ವ್ಯವಹಾರದೃಷ್ಟಿಯಿಂದ ಬ್ರಹ್ಮದಲ್ಲಿ ಕಲ್ಪಿಸಲಾಗಿದೆ.[1] ಆದರೆ ನಿರ್ವಿಕಲ್ಪವಾಗಿರುವ ಬ್ರಹ್ಮದಲ್ಲಿ ನಿಜವಾಗಿ ಯಾವದೊಂದೂ ವಿಕಲ್ಪವೂ ಇರುವ ದೆಂಬುದು ಹೊಂದುವದಿಲ್ಲ. ಆ ಈ ನಿರ್ವಿಕಲ್ಪನಾದ ಆತ್ಮನನ್ನು ಈ ಕ್ರಮದಿಂದ ಪಡೆದುಕೊಂಡರೆ, ಎಂದರೆ ಅರಿತುಕೊಂಡರೆ, ಏತಕ್ಕೂ ಅಂಜುವದಿಲ್ಲ, ಅಭಯವಾಗಿ ಪ್ರತಿಷ್ಠೆಯನ್ನು ಹೊಂದುತ್ತಾನೆ - ಎಂಬೀ ಅರ್ಥದಲ್ಲಿ ಈ ಶ್ಲೋಕವೂ ಇರುತ್ತದೆ. ಆನಂದವಲ್ಲಿಯ[2] ಅರ್ಥವಾದ ಈ ಪ್ರಕರಣವನ್ನೆಲ್ಲ ಸಂಗ್ರಹವಾಗಿ ತಿಳಿಸುವದಕ್ಕಾಗಿ ಈ ಮಂತ್ರವು ಬಂದಿರುತ್ತದೆ (ಎಂದರ್ಥ).

ನಿರ್ವಿಕಲ್ಪಾತ್ಮಜ್ಞಾನದ ಫಲ

(ಭಾಷ್ಯ)

೨೨೨. ಯತಃ ಯಸ್ಮಾತ್ ನಿರ್ವಿಕಲ್ಪಾತ್ ಯಥೋಕ್ತಲಕ್ಷಣಾತ್ ಅದ್ವಯಾನ ನ್ದಾತ್ ಆತ್ಮನಃ ವಾಚಃ ಅಭಿಧಾನಾನಿ ದ್ರವ್ಯಾದಿಸವಿಕಲ್ಪವಸ್ತುವಿಷಯಾಣಿ ವಸ್ತು ಸಾಮಾನ್ಯಾತ್ ನಿರ್ವಿಕಲ್ಪೇ ಅದ್ವಯೇಽಪಿ ಬ್ರಹ್ಮಣಿ ಪ್ರಯೋಕ್ತೃಭಿಃ ಪ್ರಕಾಶನಾಯ

1. ಅಧ್ಯಾರೋಪಾಪವಾದಗಳಿಂದ ನಿಷ್ಪ್ರಪಂಚವಾದ ತತ್ತ್ವವನ್ನು ವಿಸ್ತರಿಸುತ್ತಾರೆ - ಎಂಬ ನ್ಯಾಯದ ಸೂಚನೆಯಿದು. ಬೃ. ಭಾ. ೨-೧-೨೦ ; ಉತ್ಪತ್ತ್ಯಾದಿಕಲ್ಪನೆಯ ಭಾಷ್ಯವನ್ನೂ ಅಂಶಾಂಶ್ಯಾದಿಕಲ್ಪನಾಭಾಷ್ಯವನ್ನೂ ನೋಡಿ. ಸೂ. ಭಾ. ೪-೩-೧೪ ರಲ್ಲಿ ಉತ್ಪತ್ತ್ಯಾದಿಶ್ರುತಿ ವಿಚಾರವನ್ನೂ ನೋಡಿ.

2. ಬ್ರಹ್ಮದ ಸ್ವರೂಪವು ನಿರ್ವಿಶೇಷವಾದ ಆನಂದವೆಂದು ತಿಳಿಸುವದರಿಂದ ಈ ವಲ್ಲಿಯನ್ನು 'ಆನಂದವಲ್ಲಿ' ಎಂದು ಕರೆಯುತ್ತಾರೆ. ಈ ಕಾರಣದಿಂದಲೇ ಇದನ್ನು 'ಬ್ರಹ್ಮಾನಂದ ವಲ್ಲಿ' ಎಂದೂ ಕರೆಯುವದುಂಟು.

ಪ್ರಯುಜ್ಯಮಾನಾನಿ ಅಪ್ರಾಪ್ಯ ಅಪ್ರಕಾಶ್ಯೈವ ನಿವರ್ತಂತೇ ಸಾಮರ್ಥ್ಯಾತ್ ಹೀಯಂತೇ । ಮನಃ ಇತಿ ಪ್ರತ್ಯಯಃ, ವಿಜ್ಞಾನಮ್ । ತಚ್ಚ ಯತ್ರಾಭಿಧಾನಂ ಪ್ರವೃತ್ತಮ್ ಅತೀಂದ್ರಿಯೇಽಪ್ಯರ್ಥೇ ತದರ್ಥೇ ಚ ಪ್ರವರ್ತತೇ ಪ್ರಕಾಶನಾಯ । ಯತ್ರ ಚ ವಿಜ್ಞಾನಮ್ ತತ್ರ ವಾಚಃ ಪ್ರವೃತ್ತಿಃ ತಸ್ಮಾತ್ ಸಹೈವ ವಾಙ್ಮನಸಯೋಃ ಅಭಿಧಾನಪ್ರತ್ಯಯಯೋಃ ಪ್ರವೃತ್ತಿಃ ಸರ್ವತ್ರ । ತಸ್ಮಾತ್ ಬ್ರಹ್ಮಪ್ರಕಾಶನಾಯ ಸರ್ವಥಾ ಪ್ರಯೋಕ್ತೃಭಿಃ ಪ್ರಯುಜ್ಯಮಾನಾ ಅಪಿ ವಾಚಃ, ಯಸ್ಮಾತ್ ಅಪ್ರತ್ಯಯವಿಷಯಾತ್ ಅನಭಿಧೇಯಾತ್, ಅದೃಶ್ಯಾದಿವಿಶೇಷಣಾತ್, ಸಹೈವ ಮನಸಾ ವಿಜ್ಞಾನೇನ ಸರ್ವ ಪ್ರಕಾಶನಸಮರ್ಥೇನ ನಿವರ್ತಂತೇ । ತಂ ಬ್ರಹ್ಮಣ ಆನಂದಂ ಶ್ರೋತ್ರಿಯಸ್ಯ, ಅವೃಜಿನಸ್ಯ, ಅಕಾಮಹತಸ್ಯ ಸರ್ವೈಷಣಾವಿರ್ಮುಕ್ತಸ್ಯ ಆತ್ಮಭೂತಂ ವಿಷಯ ವಿಷಯಿಸಂಬಂಧವಿನಿರ್ಮುಕ್ತಂ ನಿತ್ಯಮ್, ಅವಿಭಕ್ತಂ, ಪರಮಾನಂದಂ ಬ್ರಹ್ಮಣೋ ವಿದ್ವಾನ್ ಯಥೋಕ್ತೇನ ವಿಧಿನಾ ನ ಬಿಭೇತಿ ಕುತಶ್ಚನ । ನಿಮಿತ್ತಾಭಾವಾತ್ ॥

(ಭಾಷ್ಯಾರ್ಥ)

ಯಾವದರಿಂದ ಎಂದರೆ ಯಾವ ನಿರ್ವಿಕಲ್ಪವಾದ ಹಿಂದೆ ಹೇಳಿದ ಲಕ್ಷಣದ ಅದ್ವಯಾನಂದವಾದ ಆತ್ಮನಿಂದ, ವಾಕ್ಕುಗಳು ಎಂದರೆ ದ್ರವ್ಯವೇ ಮುಂತಾದ ಸವಿಕಲ್ಪವಸ್ತುಗಳನ್ನು[1] ವಿಷಯಮಾಡುವ ಹೆಸರುಗಳು (ಇದೂ) ವಸ್ತುವೆಂಬ ಹೋಲಿಕೆಯಿಂದ ಅದ್ವಯವಾದ ಬ್ರಹ್ಮದಲ್ಲಿಯೂ (ಶಬ್ದ)ಪ್ರಯೋಗವನ್ನು ಮಾಡುವವರು (ಅದನ್ನು) ತಿಳಿಸುವದಕ್ಕೋಸ್ಕರ ಪ್ರಯೋಗಮಾಡಲಾಗಿ (ಅದನ್ನು) ಮುಟ್ಟಲಾರದೆ ಎಂದರೆ ಬೆಳಗಲಾರದೆಯೇ ಹಿಂತಿರುಗುವವೋ ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುವವೋ - ಇಲ್ಲಿ 'ಮನಸ್ಸು' ಎಂದರೆ ಪ್ರತ್ಯಯವು, ವಿಜ್ಞಾನವು. ಅದು ಎಲ್ಲಿ ಹೆಸರು ಪ್ರವರ್ತಿಸುವದೋ, (ಅಂಥ) ವಿಷಯವು ಅತೀಂದ್ರಿಯವೇ ಆಗಿದ್ದರೂ ಆ ಅರ್ಥವನ್ನು ಬೆಳಗುವದಕ್ಕೆ ಹೊರಡುತ್ತದೆ. ಮತ್ತು ಎಲ್ಲಿ ವಿಜ್ಞಾನವು (ಪ್ರವರ್ತಿಸುವದೋ) ಅಲ್ಲಿ ವಾಕ್ಕು ಪ್ರವರ್ತಿಸುತ್ತದೆ. ಆದ್ದರಿಂದ ವಾಕ್ಕು, ಮನಸ್ಸು - ಎಂಬ ಹೆಸರು, ಪ್ರತ್ಯಯ - ಇವೆರಡೂ ಎಲ್ಲೆಲ್ಲಿಯೂ ಜೊತೆಜೊತೆಯಾಗಿಯೇ ಪ್ರವರ್ತಿಸುತ್ತವೆ.[2] ಆದ್ದರಿಂದ ಬ್ರಹ್ಮ

1. ದ್ರವ್ಯ, ಗುಣ, ಕ್ರಿಯಾ, ಜಾತಿ - ಮುಂತಾದವುಗಳನ್ನು ಮಾತ್ರ ಶಬ್ದವು ಹೇಳೀತು ಗೀ. ಭಾ. ೧೩-೧೨, ಮಾಂ. ಭಾ. ೭, ಬೃ. ಭಾ. ೨-೩-೬.

2. ಒಂದು ಇಲ್ಲವಾದಲ್ಲಿ ಇನ್ನೊಂದು ಪ್ರವರ್ತಿಸುವದಿಲ್ಲ.

ವನ್ನು ಬೆಳಗುವದಕ್ಕೆಂದು (ಶಬ್ದವನ್ನು) ಪ್ರಯೋಗಿಸುವವರು ಶಬ್ದಗಳನ್ನು ಹೇಗೆಯೇ ಪ್ರಯೋಗಿಸಿದರೂ ಅವು ಪ್ರತ್ಯಯಕ್ಕೆ ವಿಷಯವಲ್ಲದ[1] ಹೆಸರಿಟ್ಟು, ಹೇಳಲಾಗದ[2] ಅದೃಶ್ಯತ್ವವೇ ಮುಂತಾದ ವಿಶೇಷಣಗಳಿಂದ ಕೂಡಿರುವ[3] ಯಾವ (ಬ್ರಹ್ಮದಿಂದ) ಎಲ್ಲವನ್ನೂ ಬೆಳಗುವ ಶಕ್ತಿಯುಳ್ಳ ಮನಸ್ಸಿನಿಂದೊಡಗೂಡಿಯೇ ಹಿಂತಿರುಗುವವೋ - ಆ ಬ್ರಹ್ಮದ ಆನಂದವನ್ನು ಶ್ರೋತ್ರಿಯನೂ ಅವೃಜಿನನೂ ಅಕಾಮಹತನೂ ಆಗಿ ವಿಷಣೆಗಳನ್ನೆಲ್ಲ ಬಿಟ್ಟಿರುವ (ಜ್ಞಾನಿಯ) ಸ್ವರೂಪವೇ[4] ಆಗಿ ವಿಷಯವಿಷಯಿಗಳ ಸಂಬಂಧವಿಲ್ಲದೆ ಸ್ವಾಭಾವಿಕವೂ ನಿತ್ಯವೂ ವಿಂಗಡವಿಂಗಡವಾಗಿಲ್ಲದ್ದೂ ಆಗಿರುವ ಬ್ರಹ್ಮದ ಪರಮಾನಂದವನ್ನು ಹಿಂದೆ ಹೇಳಿದ ರೀತಿಯಿಂದ ತಿಳಿಯುವವನು[5] ಎತಕ್ಕೂ ಹೆದರುವದಿಲ್ಲ. ಏಕೆಂದರೆ (ಹೆದರಿಕೆಗೆ) ನಿಮಿತ್ತವೇ ಇರುವದಿಲ್ಲ.

(ಭಾಷ್ಯ)

೨೨೩. ನ ಹಿ ತಸ್ಮಾದ್ ವಿದುಷಃ ಅನ್ಯದ್ ವಸ್ತ್ವನ್ತರಮಸ್ತಿ ಭಿನ್ನಂ ಯತೋ ಬಿಭೇತಿ । ಅವಿದ್ಯಯಾ ಯದಾ "ಉದರಮನ್ತರಂ ಕುರುತೇ । ಅಥ ತಸ್ಯ ಭಯಂ ಭವತಿ" (೨-೭) ಇತಿ ಹಿ ಉಕ್ತಮ್ । ವಿದುಷಶ್ಚ ಅವಿದ್ಯಾಕಾರ್ಯಸ್ಯ ತೈಮಿರಿಕದೃಷ್ಟ್ಯದ್ವಿತೀಯಚನ್ದ್ರವತ್ ನಾಶಾದ್ ಭಯನಿಮಿತ್ತಸ್ಯ "ನ ಬಿಭೇತಿ ಕುತಶ್ಚನ" ಇತಿ ಯುಜ್ಯತೇ । ಮನೋಮಯೇ ಚೋದಾಹೃತೋ ಮನ್ತ್ರಃ । ಮನಸೋ ಬ್ರಹ್ಮವಿಜ್ಞಾನಸಾಧನತ್ವಾತ್ ತತ್ರ ಬ್ರಹ್ಮತ್ವಮ್ ಅಧ್ಯಾರೋಪ್ಯ ತತ್ಸ್ತುತ್ಯರ್ಥಂ "ನ ಬಿಭೇತಿ ಕದಾಚನ" (೨-೪) ಇತಿ ಭಯಮಾತ್ರಂ ಪ್ರತಿಷಿದ್ಧಮ್ । ಇಹ ಅದ್ವೈತ ವಿಷಯೇ "ನ ಬಿಭೇತಿ ಕುತಶ್ಚನ" ಇತಿ ಭಯನಿಮಿತ್ತಮೇವ ಪ್ರತಿಷಿಧ್ಯತೇ ॥

1. ಬ್ರಹ್ಮವನ್ನು ಅರಿಯುವದೆಂದರೆ (ಅದು) ಅವಿಷಯವೆಂದು ತಿಳಿದುಕೊಳ್ಳುವದೇ.

2. ಪ್ರತ್ಯಯಕ್ಕೆ ವಿಷಯವಲ್ಲದ್ದರಿಂದ ಬ್ರಹ್ಮವು ವಾಕ್ಯಕ್ಕೂ ವಿಷಯವಲ್ಲ ; ಆದ್ದರಿಂದ ಬ್ರಹ್ಮವನ್ನು ಅರಿತುಕೊಳ್ಳಬೇಕೆಂದು ಶಾಸ್ತ್ರವು ಕಟ್ಟುಮಾಡುತ್ತದೆ ಎಂಬ ಜ್ಞಾನನಿಯೋಗವಾದವು ಯುಕ್ತಿಬಾಹ್ಯವೆಂದು ವಾರ್ತಿಕದಲ್ಲಿ ಹೇಳಿದೆ.

3. "ಅದೃಶ್ಯೇಽನಾತ್ಮ್ಯೇ" ಎಂಬ (೨-೭) ವಾಕ್ಯದಲ್ಲಿರುವ.

4. ಆನಂದಮೀಮಾಂಸೆಯಲ್ಲಿ ಶ್ರೋತ್ರಿಯ, ಅವೃಜಿನ, ಅಕಾಮಹತ - ಎಂದು ಮತ್ತೆ ಮತ್ತೆ ಹೇಳಿರುವದು ವಿರಕ್ತನಾದ ಜ್ಞಾನಿಯ ಸ್ವರೂಪವೇ ಆನಂದವೆಂದು ತಿಳಿಸುವದಕ್ಕೆ.

5. ಉಪಾಧಿಯಿಂದ ತೋರುವ ಹೆಚ್ಚುಕಡಿಮೆಗಳನ್ನು ಬಿಟ್ಟು, ಬ್ರಹ್ಮಾನಂದವು ತನ್ನ ಸ್ವರೂಪವೇ ಎಂದು ತಿಳಿಯುವವನು.

(ಭಾಷ್ಯಾರ್ಥ)

ಆ ಜ್ಞಾನಿಗಿಂತ ಮತ್ತೊಂದಾದ[1] (ತಾನೇ) ಬೇರೆಯಾಗಿರುವ[2] ಇನ್ನು ಯಾವ ವಸ್ತುವೂ ಇಲ್ಲವಷ್ಟೆ ; ಹಾಗಿದ್ದರಲ್ಲವೆ, (ಅವನು)ಅದಕ್ಕೆ ಹೆದರುತ್ತಾನೆ (ಎಂದಾದೀತು) ? ಅವಿದ್ಯೆಯಿಂದ ಯಾವಾಗ ''ಸ್ವಲ್ಪವಾದರೂ ಭೇದವನ್ನು ಮಾಡಿಕೊಳ್ಳುವನೋ ಆಗ ಅವನಿಗೆ ಭಯವುಂಟಾಗುತ್ತದೆ'' (೨-೭) ಎಂದಲ್ಲವೆ, ಹಿಂದೆ ಹೇಳಿದೆ ? ಜ್ಞಾನಿಗೋ ಎಂದರೆ ಅವಿದ್ಯೆಯ ಕಾರ್ಯವಾದ ಭಯಕಾರಣವನ್ನು[3] ಪರೆಗಣ್ಣಿನವನು ಕಾಣುತ್ತಿದ್ದ ಎರಡನೆಯ ಚಂದ್ರನಂತೆ ನಾಶವಾಗಿರುವದರಿಂದ ''ಅವನು ಏತಕ್ಕೂ ಹೆದರುವದಿಲ್ಲ'' ಎಂಬುದು ಯುಕ್ತವಾಗುತ್ತದೆ. (ಈ) ಮಂತ್ರವನ್ನು ಮನೋಮಯನ ವಿಷಯದಲ್ಲಿಯೂ ಉದಾಹರಿಸಿತ್ತು. ಮನಸ್ಸು ಬ್ರಹ್ಮಜ್ಞಾನಕ್ಕೆ ಸಾಧನವಾಗಿರುವದರಿಂದ[4] ಅದರಲ್ಲಿ ಬ್ರಹ್ಮಭಾವವನ್ನು ಕಲ್ಪಿಸಿ ಅದನ್ನು ಹೊಗಳುವದಕ್ಕಾಗಿ ''ಎಂದಿಗೂ ಹೆದರುವದಿಲ್ಲ'' (೨-೪) ಎಂದು ಭಯವನ್ನು ಮಾತ್ರ ಅಲ್ಲಗಳೆದಿತ್ತು.[5] ಇಲ್ಲಿ ಅದ್ವೈತವನ್ನು ಕುರಿತು (ಹೇಳುತ್ತಿರುವದರಿಂದ) ''ಏತಕ್ಕೂ ಹೆದರುವದಿಲ್ಲ'' ಎಂದು ಭಯದ ಕಾರಣವನ್ನೇ[6] ಇಲ್ಲವೆಂದಿರುತ್ತದೆ.

ಜ್ಞಾನಿಗೆ ಭಯನಿಮಿತ್ತವಿಲ್ಲವೆಂಬುದು ಹೇಗೆ ?

(ಭಾಷ್ಯ)

೨೨೪. ನನು ಅಸ್ತಿ ಭಯನಿಮಿತ್ತಂ ಸಾಧ್ವಕರಣಮ್ ಪಾಪಕ್ರಿಯಾ ಚ । ನೈವಮ್ । ಕಥಮಿತಿ ? ಉಚ್ಯತೇ -

1. ವಿಲಕ್ಷಣವಾದ.

2. ನಾಮರೂಪಗಳು ಆತ್ಮನಿಗಿಂತ ವಿಲಕ್ಷಣವಾಗಿದ್ದರೂ ಅವನಿಗಿಂತ ಭಿನ್ನವಲ್ಲ ; ನೊರೆಯು ನೀರೇ ಆಗಿರುವಂತೆ ಅವೂ ಆತ್ಮನೇ ಆಗಿರುತ್ತವೆ.

3. ತನಗಿಂತ ಬೇರೆಯಾದ ಈಶ್ವರ, ಧರ್ಮಾಧರ್ಮ - ಮುಂತಾದದ್ದು.

4. ಸಂಸ್ಕಾರವನ್ನು ಹೊಂದಿದ ಮನಸ್ಸಿನಿಂದಲೇ ಬ್ರಹ್ಮವನ್ನು ತಿಳಿದುಕೊಳ್ಳಬೇಕಾದ್ದರಿಂದ.

5. ಸಮಷ್ಟಿಮನಸ್ಸನ್ನು ಬ್ರಹ್ಮವೆಂದು ತಿಳಿದಾತನು ಉತ್ತಮವಾದ ಜ್ಞಾನವನ್ನು ಪಡೆಯುತ್ತಾನಾದ್ದರಿಂದ ಮಿಕ್ಕವರಂತೆ ಹೆದರುವದಿಲ್ಲ ಎಂದು ಹೇಳಿತ್ತು.

6. ಆತ್ಮನಿಗಿಂತ ಬೇರೆಯಾದ ಹೆದರಿಕೆಯಾಗಲಿ ಹೆದರಿಕೆಯ ನಿಮಿತ್ತವಾಗಲಿ ಇಲ್ಲದ್ದರಿಂದ ಹೆದರುವದಿಲ್ಲ - ಎಂದು ಹೆದರಿಕೆಯ ಮೂಲಕಾರಣವನ್ನೇ ಕಿತ್ತುಹಾಕಿದೆ.

(ಭಾಷ್ಯಾರ್ಥ)

(ಆಕ್ಷೇಪ :-) ಪುಣ್ಯಕರ್ಮವನ್ನು ಮಾಡದಿರುವದು, ಪಾಪ(ಕರ್ಮವನ್ನು) ಮಾಡಿರುವದು - ಎಂಬ ಭಯನಿಮಿತ್ತವು ಇದೆಯಲ್ಲ !

(ಪರಿಹಾರ :-) ಹಾಗಲ್ಲ. ಅದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ :-

ಏತಗ್ಂ ಹ ವಾವ ನ ತಪತಿ । ಕಿಮಹಗ್ಂ ಸಾಧು ನಾಕರವಮ್ । ಕಿಮಹಂ ಪಾಪಮಕರವಮಿತಿ । ಸ ಯ ಏವಂ ವಿದ್ವಾನೇತೇ ಆತ್ಮಾನಗ್ಂ ಸ್ಪೃಣುತೇ । ಉಭೇ ಹ್ಯೇವೈಷ ಏತೇ ಆತ್ಮಾನಗ್ಂ ಸ್ಪೃಣುತೇ । ಯ ಏವಂ ವೇದ ॥೨॥

೨. "ನಾನು ಒಳ್ಳೆಯದನ್ನೇಕೆ ಮಾಡಲಿಲ್ಲ ? ನಾನು ಪಾಪವನ್ನೇಕೆ ಮಾಡಿದೆನು ?" ಎಂಬ (ಯೋಚನೆಯು) ಇವನನ್ನು ಸುಡುವದೇ ಇಲ್ಲ, ಯಾವನು ಹೀಗೆ ಅರಿತುಕೊಂಡಿರುವನೋ ಅವನು ಈ ಎರಡನ್ನೂ ಆತ್ಮನನ್ನಾಗಿ ಮಾಡಿಕೊಂಡಿರುತ್ತಾನೆ. ಯಾವನು ಹೀಗೆಂದು ತಿಳಿಯುವನೋ ಅವನು ಈ ಎರಡನ್ನೂ ಆತ್ಮನನ್ನಾಗಿಯೇ ಮಾಡಿಕೊಳ್ಳುತ್ತಾನಲ್ಲವೆ ?

(ಭಾಷ್ಯ)

೨೨ಜ. ಏತಂ ಯಥೋಕ್ತಮ್ ಏವಂವಿಧಂ ಹ ವಾವ - ಇತ್ಯವಧಾರಣಾರ್ಥೌ । ನ ತಪತಿ ನೋದ್ವೇಜಯತಿ ನ ಸಂತಾಪಯತಿ ಕಥಂ ಪುನಃ ಸಾಧ್ವಕರಣಂ ಪಾಪಕ್ರಿಯಾ ಚ ನ ತಪತಿ ಇತಿ । ಉಚ್ಯತೇ । ಕಿಂ ಕಸ್ಮಾತ್ ಸಾಧು ಶೋಭನಂ ಕರ್ಮ ನಾಕರವಮ್ ನ ಕೃತವಾನ್ ಅಸ್ಮಿ ? ಇತಿ ಪಶ್ಚಾತ್ ಸನ್ತಾಪೋ ಭವತಿ ಆಸನ್ನೇ ಮರಣಕಾಲೇ । ತಥಾ ಕಿಂ ಕಸ್ಮಾತ್ ಪಾಪಂ ಪ್ರತಿಷಿದ್ಧ ಕರ್ಮ ಅಕರವಂ ಕೃತವಾನ್ ಅಸ್ಮಿ ? ಇತಿ ಚ ನರಕಪತನಾದಿದುಃಖಭಯಾತ್ ತಾಪೋ ಭವತಿ । ತೇ ಏತೇ ಸಾಧ್ವಕರಣಪಾಪಕ್ರಿಯೇ ಏವಮ್ ಏತಂ ನ ತಪತಃ, ಯಥಾ ಅವಿದ್ವಾಂಸಂ ತಪತಃ ॥

(ಭಾಷ್ಯಾರ್ಥ)

ಇವನನ್ನು ಎಂದರೆ ಹಿಂದೆ ಹೇಳಿದಂತೆ ಈ ರೀತಿಯಲ್ಲಿ ಅರಿತುಕೊಂಡಾತನನ್ನು - 'ಹ', 'ವಾವ' (ಏ) ಎಂಬಿವೆರಡೂ ಅವಧಾರಣೆಯನ್ನು ತಿಳಿಸುತ್ತವೆ. ತಪಿಸುವದಿಲ್ಲ, ಕಳವಳಪಡಿಸುವದಿಲ್ಲ, ಬೇಗುದಿಗೊಳಿಸುವದಿಲ್ಲ. ಪುಣ್ಯವನ್ನು ಮಾಡದಿರುವದಾಗಲಿ ಪಾಪವನ್ನು ಮಾಡಿರುವದಾಗಲಿ ಹೇಗೆಂದು ತಪಿಸುವದಿಲ್ಲ ? - ಎಂದರೆ (ಶ್ರುತಿ) ಹೇಳುತ್ತದೆ : ಏತಕ್ಕೆ, ಯಾವಕಾರಣದಿಂದ, ಒಳ್ಳೆಯದನ್ನು ಎಂದರೆ ಪುಣ್ಯಕರ್ಮವನ್ನು

(ನಾನು) ಮಾಡಲಿಲ್ಲ, ಮಾಡಿದವನಾಗಲಿಲ್ಲ ? - ಎಂಬ ಸಾಮುವ ಕಾಲವು ಹತ್ತಿರವಾಗಲು ಪಶ್ಚಾತ್ತಾಪವಾಗುತ್ತದೆ. ಹಾಗೂ ಏತಕ್ಕೆ, ಯಾವ ಕಾರಣದಿಂದ. ಪಾಪವನ್ನು ಎಂದರೆ (ಶಾಸ್ತ್ರದಲ್ಲಿ) ಮಾಡಬಾರದೆಂದಿರುವ ಕರ್ಮವನ್ನು ಮಾಡಿದೆನು. ಮಾಡಿದವನಾಗಿರುವೆನು ? - ಎಂದೂ ನರಕಕ್ಕೆ ಬೀಳುವದೇ ಮುಂತಾದ ಮಾಡಿದ ಅಂಜಿಕೆಯಿಂದ ತಾಪವಾಗುತ್ತದೆ. ಪುಣ್ಯವನ್ನು ಮಾಡದಿರುವದು, ಪಾಪವನ್ನು ಮಾಡಿರುವದು - ಎಂಬ ಆ ಈ ಎರಡೂ ಅಜ್ಞಾನವನ್ನು ಹೇಗೆ ತಪಿಸುವವೋ ಹಾಗೆ ಇವನನ್ನು ತಪಿಸುವದಿಲ್ಲ.

(ಭಾಷ್ಯ)

೨೨೬. ಕಸ್ಮಾತ್ ಪುನರ್ವಿದ್ವಾಂಸಂ ನ ತಪತಃ ಇತಿ ? ಉಚ್ಯತೇ । ಸ ಯ ಏವಂವಿದ್ವಾನ್ ಏತೇ ಸಾಧ್ವಸಾಧುನೀ ತಾಪಹೇತೂ ಇತಿ ಆತ್ಮಾನಂ ಸ್ವಯತೇ ಪ್ರೀಣಯತಿ ಬಲಯತಿ ವಾ । ಪರಮಾತ್ಮಭಾವೇನ ಉಭೇ ಪಶ್ಯತಿ ಇತ್ಯರ್ಥಃ । ಉಭೇ ಪುಣ್ಯಪಾಪೇ ಹಿ ಯಸ್ಮಾತ್ ಏವಮ್ ಏಷ ವಿದ್ವಾನ್ ಏತೇ ಆತ್ಮಾನಮ್ ಆತ್ಮರೂಪೇಣೈವ ಪುಣ್ಯಪಾಪೇ ಸ್ವೇನ ವಿಶೇಷರೂಪೇಣ ಶೂನ್ಯೇ ಕೃತ್ವಾ ಆತ್ಮಾನಂ ಸ್ವಯತೇ ಏವ । ಕಃ ? ಯಃ ಏವಂ ವೇದ ಯಥೋಕ್ತಮ್ ಅದ್ವೈತಮ್ ಆನನ್ದಂ ಬ್ರಹ್ಮ ವೇದ । ತಸ್ಯ ಆತ್ಮಭಾವೇನ ದೃಷ್ಟೇ ಪುಣ್ಯಪಾಪೇ ನಿರ್ವೀರ್ಯೇ ಅತಾಪಕೇ ಜನ್ಮಾನ್ತರಾರಮ್ಭಕೇ ನ ಭವತಃ ॥

(ಭಾಷ್ಯಾರ್ಥ)

ಅದೇಕೆ ಜ್ಞಾನಿಯನ್ನು (ಅವೆರಡೂ) ತಪಿಸುವದಿಲ್ಲ ? - ಎಂದರೆ (ಶ್ರುತಿ) ಹೇಳುತ್ತದೆ : ಯಾವಾತನು ಹೀಗೆಂದು ಅರಿತುಕೊಳ್ಳವನೋ ಆತನು ತಾಪಕ್ಕೆ ಕಾರಣವಾಗಿರುವ ಈ ಒಳ್ಳೆಯ ಮತ್ತು ಕೆಟ್ಟ(ಕರ್ಮ)ಗಳನ್ನು ಹೀಗೆಂದು ಅರಿತುಕೊಂಡು[1] ತನ್ನನ್ನು ಸ್ವಯತೇ ಸಂತೋಷಗೊಳಿಸಿಕೊಳ್ಳುತ್ತಾನೆ ; ಅಥವಾ ಬಲಪಡಿಸಿಕೊಳ್ಳುತ್ತಾನೆ.[2] ಪರಮಾತ್ಮರೂಪದಿಂದ ಇವೆರಡನ್ನೂ ಕಾಣುತ್ತಾನೆ ಎಂದರ್ಥ. ಈ ಪುಣ್ಯ, ಪಾಪ - ಎರಡನ್ನೂ ಈ ಜ್ಞಾನಿಯು ಹೀಗೆ ತಮ್ಮ ವಿಶೇಷ

1. ಅದ್ವಿತೀಯಾನಂದರೂಪವಾದ ಬ್ರಹ್ಮವೇ ನನ್ನ ಆತ್ಮನೆಂದು ಅರಿತುಕೊಂಡು.

2. ಸ್ವ-ಪ್ರೀತಿಪಾಲನಯೋಃ - ಎಂಬ ಪಾಠದಂತೆ ಸಂತೋಷಗೊಳ್ಳು, ಕಾಪಾಡು ಎಂಬುದು ಧಾತುವಿನ ಅರ್ಥವು ; ಪ್ರೀತಿಚಲನಯೋಃ - ಎಂಬ ಪಾಠದಲ್ಲಿ ಚಲನವೆಂದರೆ ಜೀವನ, ಬಲಯತಿ ಎಂಬುದು ಈ ಎರಡನೆಯ ಅರ್ಥವೆಂದು ಭಾಷ್ಯಕಾರರು ಭಾವಿಸಿರಬಹುದು. ಕರ್ಮವನ್ನೂ ಫಲವನ್ನೂ ಆತ್ಮರೂಪದಿಂದ ಕಾಣುವದರಿಂದ ಜ್ಞಾನಿಗೆ ಹರ್ಷವಾಗುತ್ತದೆ. ಜ್ಞಾನವೇ ಅವನಿಗಿರುವ ಬಲ - ಎಂಬುದು ವಾಕ್ಯಾರ್ಥ.

ರೂಪದಿಂದ[1] ಇಲ್ಲವಾಗಿ ಮಾಡಿಕೊಂಡು ಆತ್ಮನನ್ನು ಆತ್ಮರೂಪದಿಂದಲೇ (ಕಂಡುಕೊಂಡು) ತನ್ನನ್ನು ಸಂತೋಷಗೊಳಿಸಿಕೊಂಡೇ ತೀರುತ್ತಾನೆ. ಅಲ್ಲವೆ ? (ಆದ್ದರಿಂದ ಅವನನ್ನು ತಪಿಸುವದಿಲ್ಲ). ಯಾವನು ಸಂತೋಷಗೊಳಿಸಿಕೊಳ್ಳುತ್ತಾನೆ ? ಎಂದರೆ ಯಾವನು ಹೀಗೆಂದು ಅರಿತುಕೊಳ್ಳುವನೋ ; ಹಿಂದೆ ಹೇಳಿದ ಅದ್ವೈತವಾದ ಆನಂದ(ರೂಪ)ವಾದ ಬ್ರಹ್ಮವನ್ನು ತಿಳಿದುಕೊಳ್ಳುವನೋ (ಅವನು) ಆತ್ಮರೂಪದಿಂದ ಕಂಡುಕೊಂಡ ಅವನ ಪುಣ್ಯಪಾಪಗಳೂ (ಫಲವನ್ನು ಕೊಡುವ) ಸಾಮರ್ಥ್ಯವಿಲ್ಲದೆ (ಅವನನ್ನು) ನಂತಾಪಗೊಳಿಸದೆ (ಇರುತ್ತವೆ), ಜನ್ಮಾಂತರವನ್ನುಂಟುಮಾಡುವವಾಗುವದಿಲ್ಲ.[2]

೧೯. ಆನಂದವಲ್ಲಿಯ ಉಪಸಂಹಾರ

ಇತ್ಯುಪನಿಷತ್ ॥೩॥

೩. ಇಂತು ಉಪನಿಷತ್ತು.

(ಭಾಷ್ಯ)

೨೨೭. ಇತಿ ಇಯಮ್ ಏವಂ ಯಥೋಕ್ತಾ ಅಸ್ಯಾಂ ವಲ್ಲ್ಯಾಂ ಬ್ರಹ್ಮವಿದ್ಯಾ ಉಪನಿಷತ್ ಸರ್ವಾಭ್ಯೋ ವಿದ್ಯಾಭ್ಯಃ ಪರಮರಹಸ್ಯಂ ದರ್ಶಿತಮ್ ಇತ್ಯರ್ಥಃ । ಪರಂ ಶ್ರೇಯಃ ಅಸ್ಯಾಂ ನಿಷಣ್ಣಮ್ ಇತಿ ॥

(ಭಾಷ್ಯಾರ್ಥ)

ಇಂತು ಹೀಗೆ ಈ ವಲ್ಲಿಯಲ್ಲಿ ಹಿಂದೆ ಹೇಳಿದ ಈ ಬ್ರಹ್ಮವಿದ್ಯೆಯೆಂಬ ಉಪನಿಷತ್ತು ; ಎಂದರೆ ಎಲ್ಲಾ ವಿದ್ಯೆಗಳಿಗಿಂತಲೂ ಹೆಚ್ಚಿನ ರಹಸ್ಯವನ್ನು[3] ತಿಳಿಸಿದ್ದಾಯಿತು. ಇದರಲ್ಲಿ ಅತ್ಯಂತ ಹೆಚ್ಚಿನ ಶ್ರೇಯಸ್ಸು ಇದ್ದುಕೊಂಡಿರುತ್ತದೆ ಯಾದ್ದರಿಂದ (ಇದು ಉಪನಿಷತ್ತು).[4]

1. ಪುಣ್ಯಪಾಪಗಳ ರೂಪದಿಂದ.

2. ಕರ್ಮಗಳು ಜ್ಞಾನಿಗೆ ಅಂಟುವದಿಲ್ಲವೆಂಬ ವೇದಾಂತಸಿದ್ಧಾಂತವನ್ನು ಸೂ. ಭಾ. ೪-೧-೧೩ರಿಂದ ೧೯ರ ವರೆಗಿನ ಸೂತ್ರಗಳಲ್ಲಿ ಸ್ಪಷ್ಟಗೊಳಿಸಿದೆ.

3. ಉಪನಿಷತ್ತು ಎಂಬ ಶಬ್ದಕ್ಕೆ ರಹಸ್ಯವು ಎಂದರ್ಥ. ಗೀ. ೯-೨ರಲ್ಲಿರುವ 'ರಾಜ ಗುಹ್ಯಮ್' ಎಂಬ ಶಬ್ದದ ಭಾಷ್ಯವನ್ನು ನೋಡಿ.

4. 'ಉಪನಿಷತ್' ಎಂಬ ಶಬ್ದವ್ಯುತ್ಪತ್ತಿಯನ್ನು ಇಲ್ಲಿ ಇನ್ನೊಂದು ಸಲ ಸೂಚಿಸಿದೆ. ಶೀಕ್ಷಾವಲ್ಲಿಯ ಸಂಬಂಧಭಾಷ್ಯವನ್ನು ನೋಡಿರಿ.

ಭೃಗುವಲ್ಲಿ

ಈ ವಲ್ಲಿಯ ಸಂಬಂಧ

(ಭಾಷ್ಯ)

೨೨೮. ಸತ್ಯಂ ಜ್ಞಾನಮನನ್ತಂ ಬ್ರಹ್ಮ ಆಕಾಶಾದಿಕಾರ್ಯಮ್ ಅನ್ನಮಯಾನ್ತಂ ಸೃಷ್ಟ್ವಾ ತದೇವ ಅನುಪ್ರವಿಷ್ಟಂ ವಿಶೇಷವದಿವ ಉಪಲಭ್ಯಮಾನಂ ಯಸ್ಮಾತ್, ತಸ್ಮಾತ್ ಸರ್ವಕಾರ್ಯವಿಲಕ್ಷಣಮ್ ಅದೃಶ್ಯಾದಿ(ತ್ವಾದಿ ?) ಧರ್ಮಕಮೇವ ಆನನ್ದಂ 'ತದೇವಾಹಮ್' ಇತಿ ವಿಜಾನೀಯಾತ್ ಅನುಪ್ರವೇಶಸ್ಯ ತದರ್ಥತ್ವಾತ್ । ತಸ್ಯೈವಂ ವಿಜಾನತಃ ಶುಭಾಶುಭೇ ಕರ್ಮಣೇ ಜನ್ಮಾನ್ತರಾರಮ್ಭಕೇ ನ ಭವತಃ - ಇತ್ಯೇವಮ್ ಆನನ್ದವಲ್ಲ್ಯಾಂ ವಿವಕ್ಷಿತೋಽರ್ಥಃ । ಪರಿಸಮಾಪ್ತಾ ಚ ಬ್ರಹ್ಮವಿದ್ಯಾ । ಅತಃ ಪರಂ ಬ್ರಹ್ಮವಿದ್ಯಾಸಾಧನಂ ತಪೋ ವಕ್ತವ್ಯಮ್, ಅನ್ನಾದಿವಿಷಯಾಣಿ ಚೋಪಾಸನಾನ್ಯನುಕ್ತಾನಿ - ಇತ್ಯತಃ ಇದಮ್ ಆರಭ್ಯತೇ ।।

(ಭಾಷ್ಯಾರ್ಥ)

ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು ಆಕಾಶವು ಮೊದಲಾಗಿ ಅನ್ನಮಯದವರೆಗಿನ ಕಾರ್ಯವನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕು ವಿಶೇಷಗಳಿಂದ ಕೂಡಿಕೊಂಡಿರುವಂತೆ ಕಾಣುತ್ತಿರುವದಷ್ಟೆ. ಆದ್ದರಿಂದ ಎಲ್ಲಾ ಕಾರ್ಯಗಳಿಗಿಂತಲೂ ಬೇರೆಯ ಸ್ವಭಾವದ್ದಾಗಿ ಅದೃಶ್ಯತ್ವವೇ ಮುಂತಾದ ಧರ್ಮವುಳ್ಳ ಆನಂದವನ್ನೇ 'ಅದೇ ನಾನು' ಎಂದು ಅರಿತುಕೊಳ್ಳಬೇಕು ; ಏಕೆಂದರೆ ಒಳಹೊಕ್ಕನೆಂದು (ಶ್ರುತಿಯಲ್ಲಿ ಹೇಳಿರುವದು) ಅದಕ್ಕಾಗಿಯೇ. ಹೀಗೆಂದು ಅರಿತುಕೊಳ್ಳುವ ಆ (ಜ್ಞಾನಿಗೆ) ಪುಣ್ಯಪಾಪಗಳೆಂಬ ಕರ್ಮಗಳು ಮತ್ತೊಂದು ಜನ್ಮಕ್ಕೆ ಕಾರಣವಾಗುವದಿಲ್ಲ - ಎಂಬಿದೇ ಆನಂದವಲ್ಲಿಯಲ್ಲಿ (ಮುಖ್ಯವಾಗಿ) ಹೇಳಹೊರಟಿದ್ದ ವಿಷಯವು (ಇಲ್ಲಿಗೆ) ಬ್ರಹ್ಮವಿದ್ಯೆಯು ಮುಗಿಯಿತು. ಇಲ್ಲಿಂದ ಮುಂದೆ ಬ್ರಹ್ಮವಿದ್ಯೆಗೆ ಸಾಧನವಾದ ತಪಸ್ಸನ್ನೂ[1] (ಹಿಂದೆ) ಹೇಳದಿರುವ ಅನ್ನಾದಿವಿಷಯದ ಉಪಾಸನೆಗಳನ್ನೂ[2] ಹೇಳಬೇಕಾಗಿದೆ. ಆದ್ದರಿಂದ ಇದನ್ನು[3] ಪ್ರಾರಂಭಿಸಿರುತ್ತದೆ.

---

1. ಬ್ರಹ್ಮದ ಸ್ವರೂಪ, ಅದನ್ನು ಅರಿತುಕೊಳ್ಳುವದರಿಂದ ಆಗುವ ಫಲ - ಇವುಗಳನ್ನು ಹೇಳಿದ್ದಾಯಿತು. ಈಗ ಅದನ್ನು ಅರಿತುಕೊಳ್ಳುವದಕ್ಕೆ ಉಪಾಯವನ್ನು ಹೇಳುತ್ತದೆ

2. ಬ್ರಹ್ಮವಿದ್ಯೆಗೆ ದ್ವಾರವಾಗಿ ಅನ್ನಾದಿಗಳ ಉಪಾಸನೆ, ಮತ್ತು ಬ್ರಹ್ಮದ ಹಲವು ಬಗೆಯ ಉಪಾಸನೆಗಳು - ಇವನ್ನು ಹೇಳಬೇಕಾಗಿದೆ. 3. ಭೃಗುವಲ್ಲಿಯನ್ನು

೧. ಬ್ರಹ್ಮಜ್ಞಾನಕ್ಕೆ ಸಾಧನ

ಕಥೆಯ ಸಂಬಂಧ

ಭೃಗುರ್ವೈ ವಾರುಣಿಃ । ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ[1] ॥೧॥

೧. ಭೃಗುವೆಂಬ ವಾರುಣಿ ಇದ್ದನಷ್ಟೆ, (ಅವನು) ತಂದೆಯಾದ ವರುಣನನ್ನು "ಭಗವಂತನೆ, ಬ್ರಹ್ಮವನ್ನು ಹೇಳಿಕೊಡು" ಎಂದು ಸಮೀಪಿಸಿದನು.

(ಭಾಷ್ಯ)

೨೨೯. ಆಖ್ಯಾಯಿಕಾ ವಿದ್ಯಾಸ್ತುತಯೇ, ಪ್ರಿಯಾಯ ಪುತ್ರಾಯ ಪಿತ್ರಾ ಉಕ್ತಾ ಇತಿ । ಭೃಗುರ್ವೈ ವಾರುಣಿಃ । ವೈಶಬ್ದಃ ಪ್ರಸಿದ್ಧಾನುಸ್ಮಾರಕಃ । ಭೃಗುಃ ಇತ್ಯೇವಂ ನಾಮಾ ಪ್ರಸಿದ್ಧಃ ಅನುಸ್ಮಾರ್ಯತೇ । ವಾರುಣಿಃ ವರುಣಸ್ಯ ಅಪತ್ಯಂ ವಾರುಣಿಃ । ವರುಣಂ ಪಿತರಂ ಬ್ರಹ್ಮ ವಿಜಿಜ್ಞಾಸುಃ ಉಪಸಸಾರ ಉಪಗತವಾನ್ 'ಅಧೀಹಿ ಭಗವೋ ಬ್ರಹ್ಮ' ಇತ್ಯನೇನ ಮನ್ತ್ರೇಣ । ಅಧೀಹಿ ಅಧ್ಯಾಪಯ ಕಥಯ[2] ಇತ್ಯರ್ಥಃ ॥

(ಭಾಷ್ಯಾರ್ಥ)

ಕಥೆಯ(ನ್ನು ಹೇಳಿರುವದು) ಪ್ರಿಯನಾದ ಮಗನಿಗೆ ತಂದೆಯು ಹೇಳಿದ್ದು ಎಂದು ವಿದ್ಯೆಯನ್ನು ಹೊಗಳುವದಕ್ಕೆ.[3] ('ಭೃಗುರ್ವೈ ವಾರುಣಿಃ' ಎಂಬಲ್ಲಿ) ವೈ (ಅಷ್ಟೆ ?) ಎಂಬ ಮಾತು ಪ್ರಸಿದ್ಧವಾದದ್ದನ್ನು ಅನುವಾದಮಾಡಿ ನೆನಪಿಗೆ ಕೊಡುವದಕ್ಕೆ (ಬಂದಿದೆ). ಭೃಗು ಎಂಬ ಹೆಸರಿನಿಂದ ಪ್ರಸಿದ್ಧನಾದ (ಪುರುಷನನ್ನು) ಅನುವಾದದಿಂದ (ಇಲ್ಲಿ) ನೆನಪಿಗೆ ತರಲಾಗಿದೆ. 'ವಾರುಣಿಃ' ವರುಣನ ಮಗನು

---

1. ಬ್ರಹ್ಮವಲ್ಲಿಯ ಕೊನೆಯಲ್ಲಿಯೂ ಭೃಗುವಲ್ಲಿಯ ಮೊದಲಿನಲ್ಲಿಯೂ "ಸಹ ನಾವವತು" ಎಂಬ ಶಾಂತಿಯನ್ನು ಹೇಳಿಕೊಳ್ಳುವ ರೂಢಿಯು ವೈದಿಕರಲ್ಲಿದೆ. ಆದರೆ ಇದಕ್ಕೆ ಭಾಷ್ಯದಲ್ಲಿ, ವಾರ್ತಿಕದಲ್ಲಿ ಅಥವಾ ಸಾಯಣಭಾಷ್ಯದಲ್ಲಿ ಆಧಾರವು ಕಾಣುತ್ತಿಲ್ಲ. ಪೀಠಿಕೆಯನ್ನು ನೋಡಿ.

2. ಈ ವಾಕ್ಯವು ೪॥ ಪಾಠದಲ್ಲಿಲ್ಲ.

3. ಕರ್ಮಗಳನ್ನು ಹೇಳುವ ವೇದವಾಕ್ಯಗಳ ಬಳಿಯಲ್ಲಿರುವ ಕಥೆಗಳು ಹೇಗೆ ಕರ್ಮವಿಧಿಯನ್ನು ಹೊಗಳುವವೋ ಹಾಗೆಯೇ ವಿದ್ಯಾಪ್ರಕರಣದಲ್ಲಿರುವ ಕಥೆಗಳು ವಿದ್ಯೆಯನ್ನು ಹೊಗಳುವ ಅರ್ಥವಾದಗಳಾಗಿರುತ್ತವೆ. ಸೂ. ಭಾ. ೩-೪-೨೪.

ವಾರುಣಿಯು. (ಅವನು) ಬ್ರಹ್ಮವನ್ನು ವಿಶೇಷವಾಗಿ ಅರಿತುಕೊಳ್ಳಬೇಕೆಂಬ ಇಚ್ಛೆಯಿಂದ 'ಅಧೀಹಿ ಭಗವೋ ಬ್ರಹ್ಮ' (ಭಗವಂತನೆ, ಬ್ರಹ್ಮವನ್ನು ಹೇಳಿಕೊಡು) ಎಂಬ ಮಂತ್ರದಿಂದ[1] ತಂದೆಯಾದ ವರುಣನನ್ನು ಬಳಿಸಾರಿದವನು.[2] ಅಧೀಹಿ ಎಂದರೆ ಅಧ್ಯಾಪಯ, ಹೇಳಿಕೊಡು ಎಂದರ್ಥ.[3]

ತಸ್ಮಾ ಏತತ್ ಪ್ರೋವಾಚ । ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋ ವಾಚಮಿತಿ ॥೨॥

೨. ಅವನಿಗೆ "ಅನ್ನ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು" ಎಂಬುದನ್ನು ಹೇಳಿದನು.

(ಭಾಷ್ಯ)

೨ಽ೦. ಸ ಚ ಪಿತಾ ವಿಧಿವತ್ ಉಪಸನ್ನಾಯ ತಸ್ಮೈ ಪುತ್ರಾಯ ಏತತ್ ವಚನಂ ಪ್ರೋವಾಚ । "ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋ ವಾಚಮ್" ಇತಿ । ಅನ್ನಂ ಶರೀರಮ್, ತದಭ್ಯನ್ತರಂ ಚ ಪ್ರಾಣಮ್ ಅತ್ತಾರಮ್, ಉಪಲಬ್ಧಿ ಸಾಧನಾನಿ ಚಕ್ಷುಃ, ಶ್ರೋತ್ರಮ್, ಮನಃ, ವಾಚಮ್ - ಇತಿ ಏತಾಸಿ ಬ್ರಹ್ಮೋಪ ಲಬ್ಧೌ ದ್ವಾರಾಣಿ ಉಕ್ತವಾನ್ ॥

(ಭಾಷ್ಯಾರ್ಥ)

ಆ ತಂದೆಯುಕೂಡ ವಿಧ್ಯುಕ್ತವಾಗಿ ತನ್ನಲ್ಲಿಗೆ ಬಂದಿರುವ ಆ ಮಗನಿಗೆ ಈ (ಮಾತನ್ನು)[4] ಹೇಳಿದನು. "ಅನ್ನ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು,

1. ತೈತ್ತಿರೀಯರು ಬ್ರಹ್ಮವಿದ್ಯೆಗೆಂದು ಗುರುವಿನ ಬಳಿಗೆ ಶಿಷ್ಯರಾಗಿ ಬರುವಾಗ ಹೇಳುವ ಮಂತ್ರವಿದು.

2. 'ಶಿಷ್ಯನಾಗಿ ಬಂದನು' ಎಂದದ್ದರಿಂದ ಮಗನುಕೂಡ ವಿದ್ಯೆಯನ್ನು ಹೇಳುವ ತಂದೆಯನ್ನು ಗುರುವಿನಂತೆ ವಿಶೇಷವಾಗಿ ಸತ್ಕರಿಸಬೇಕು ಎಂಬ ಆಚಾರವು ಸೂಚಿತವಾಗಿದೆ.

3. ಈ ವಾಕ್ಯವು ಕೆಲವು ಕೋಶಗಳಲ್ಲಿ ಮಾತ್ರ ಕಂಡುಬರುತ್ತದೆ. 'ಅಧೀಹಿ' ಎಂಬ ಮಾತಿಗೆ ಅಧ್ಯಯನಮಾಡು ಎಂದೇ ಅರ್ಥವಲ್ಲ ; ಇದರಲ್ಲಿ (ಪ್ರೇರಣೆಯನ್ನು ಹೇಳುವ) ಣಿಜರ್ಥವೂ ಅಡಗಿರುತ್ತದೆ ಎಂದು ಭಾವ.

4. ಏತತ್ ಎಂದರೆ ಈ ಮಾತನ್ನು ಎಂದು ಅರ್ಥಮಾಡುವಾಗ 'ಪ್ರಾಣಮ್' ಎಂಬುದನ್ನು 'ಪ್ರಾಣಃ' ಎಂದು ಪ್ರಥಮಾವಿಭಕ್ತಿಗೆ ತಿರುಗಿಸಿಕೊಳ್ಳಬೇಕು. ಅಥವಾ ಇವುಗಳನ್ನು ವಿಚಾರಿಸು ಎಂಬರ್ಥದ ಕ್ರಿಯೆಯನ್ನು ಅಧ್ಯಾಹಾರಮಾಡಿಕೊಂಡರೆ ದ್ವಿತೀಯಾವಿಭಕ್ತ್ಯಂತವೇ ಇರಬಹುದು.

ವಾಕ್ಯ." ಅನ್ನವನ್ನು ಎಂದರೆ ಶರೀರವನ್ನು[1] ಅದರ ಒಳಗೆ ಇರುವ ಆತ್ಮವಾದ[2] ಪ್ರಾಣವನ್ನು ಅರಿವಿಗೆ ಸಾಧನಗಳಾದ ಚಕ್ಷುಸ್ಸನ್ನು, ಶ್ರೋತ್ರವನ್ನು, ಮನಸ್ಸನ್ನು ವಾಕ್ಯನ್ನು - ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ (ಉಪಯೋಗವಾಗುವ) ಈ ದ್ವಾರ ಗಳನ್ನು[3] ಹೇಳಿದನು.

ಬ್ರಹ್ಮಲಕ್ಷಣ

ತಗ್ಂ ಹೋವಾಚ । ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ । ಯತ್ ಪ್ರಯನ್ತ್ಯಭಿಸಂವಿಶನ್ತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ ॥೩॥

೩. ಅವನಿಗೆ ಹೇಳಿದನೇನೆಂದರೆ "ಈ ಭೂತಗಳು ಯಾವದರಿಂದಲೇ ಹುಟ್ಟುತ್ತವೆಯೋ, ಯಾವದರಿಂದ ಹುಟ್ಟಿ ಜೀವಿಸುತ್ತವೆಯೋ, ಯಾವದನ್ನು ಕುರಿತುಹೋಗಿ ಚೆನ್ನಾಗಿ ಸೇರಿಕೊಳ್ಳುತ್ತವೆಯೋ - ಅದನ್ನು ತಿಳಿಯಲೆಳಸು ವವನಾಗು, ಅದು ಬ್ರಹ್ಮವು.

(ಭಾಷ್ಯ)

೨೩೧. ಉಕ್ತ್ವಾ ಚ ದ್ವಾರಭೂತಾನಿ ಏತಾನಿ ಅನ್ನಾದೀನಿ ತಂ ಭೃಗುಂ ಹ ಉವಾಚ ಬ್ರಹ್ಮಣೋ ಲಕ್ಷಣಮ್ । ಕಿಂ ತತ್ ? ಯತಃ ಯಸ್ಮಾತ್ ವಾ ಇಮಾನಿ ಬ್ರಹ್ಮಾದೀನಿ ಸ್ತಮ್ಬಪರ್ಯನ್ತಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ ಪ್ರಾಣಾನ್ ಧಾರಯನ್ತಿ ವರ್ಧನ್ತೇ । ವಿನಾಶಕಾಲೇ ಚ ಯತ್ ಪ್ರಯನ್ತಿ ಯದ್ ಬ್ರಹ್ಮ ಪ್ರತಿಗಚ್ಛನ್ತಿ । ಅಭಿಸಂವಿಶನ್ತಿ ತಾದಾತ್ಮ್ಯಮೇವ ಪ್ರತಿಪದ್ಯನ್ತೇ । ಉತ್ಪತ್ತಿ ಸ್ಥಿತಿಲಯಕಾಲೇಷು ಯದಾತ್ಮತಾಂ ನ ಜಹತಿ ಭೂತಾನಿ ತದೇತದ್ ಬ್ರಹ್ಮಣೋ ಲಕ್ಷಣಮ್ ತದ್ ಬ್ರಹ್ಮ ವಿಜಿಜ್ಞಾಸಸ್ವ ವಿಶೇಷೇಣ ಜ್ಞಾತುಮ್ ಇಚ್ಛಸ್ವ (?) । ಯತ್ ಏವಂಲಕ್ಷಣಂ ಬ್ರಹ್ಮ ತತ್ ಅನ್ನಾದಿದ್ವಾರೇಣ ಪ್ರತಿಪದ್ಯಸ್ವ ಇತ್ಯರ್ಥಃ । ಶ್ರುತ್ಯನ್ತರಂ ಚ "ಪ್ರಾಣಸ್ಯ ಪ್ರಾಣಮುತ ಚಕ್ಷುಷಶ್ಚಕ್ಷುರುತ ಶ್ರೋತ್ರಸ್ಯ

1. ಅನ್ನಮಯವೇ ಮುಂತಾದವುಗಳಿಗೆ ಕಾರಣವಾಗಿರುವ ಅನ್ನಾದಿಗಳನ್ನೇ ಇಲ್ಲಿ ತಿಳಿಸುವ ದಾದರೂ ಶರೀರಾದಿಗಳ ಮೂಲಕ ಆತ್ಮನನ್ನು ತಿಳಿದುಕೊಳ್ಳಬೇಕೆಂಬುದೂ ವಿವಕ್ಷಿತವಾಗಿದೆ.

2. ಪ್ರ. ೨ನೆಯ ಪ್ರಶ್ನೆಯನ್ನು ನೋಡಿ.

3. ಏತತ್ ಎಂದರೆ ಈ ದ್ವಾರವನ್ನು ಎಂಬ ಎರಡನೆಯ ಅರ್ಥವನ್ನು ಇಲ್ಲಿ ಸೂಚಿಸಿದೆ.

ಶ್ರೋತ್ರಮನ್ನಸ್ಯಾನ್ನಂ ಮನಸೋ ಮನೋ ಯೇ ವಿದುಸ್ತೇ ನಿಚಿಕ್ಯುರ್ಬ್ರಹ್ಮ ಪುರಾಣ ಮಗ್ರ್ಯಮ್'' (ಬೃ. ಮಾ. ೪-೨-೩೧) ಇತಿ ಬ್ರಹ್ಮೋಪಲಬ್ಧೌ ದ್ವಾರಾಣೀತಿ ಇತಿ ದರ್ಶಯತಿ ॥

(ಭಾಷ್ಯಾರ್ಥ)

(ಬ್ರಹ್ಮವನ್ನು ತಿಳಿಯುವದಕ್ಕೆ) ದ್ವಾರವಾಗಿರುವ ಈ ಅನ್ನಾದಿಗಳನ್ನು ಹೇಳಿದ ಬಳಿಕ ಆ ಭೃಗುವನ್ನು ಕುರಿತು ಬ್ರಹ್ಮದ ಲಕ್ಷಣವನ್ನು ಹೇಳಿದನು ಅದು ಯಾವದು ? ಎಂದರೆ : ಯಾವದರಿಂದ ಯಾವ (ಕಾರಣದಿಂದ) ಈ ಬ್ರಹ್ಮನು ಮೊದಲಾಗಿ ಸ್ಥಾವರದವರೆಗಿನ ಪ್ರಾಣಿಗಳು ಹುಟ್ಟುತ್ತವೆಯೋ ; ಹುಟ್ಟಿದ ಬಳಿಕ ಯಾವದ ರಿಂದ ಜೀವಿಸುತ್ತವೆಯೋ ಎಂದರೆ ಪ್ರಾಣವನ್ನು ಧರಿಸಿರುತ್ತವೆಯೋ, ಬೆಳೆಯು ತ್ತಿರುವವೋ (ಎಂದರ್ಥ) ; ಮತ್ತು ನಾಶವಾಗುವ ಕಾಲದಲ್ಲಿ ಯಾವದನ್ನು ಕುರಿತು ಹೋಗುತ್ತವೆಯೋ ಯಾವ ಬ್ರಹ್ಮದ ಕಡೆಗೆ ನಡೆಯುವವೋ, ಚೆನ್ನಾಗಿ ಸೇರಿ ಕೊಳ್ಳುತ್ತವೆಯೋ ಎಂದರೆ ಅದರ ಸ್ವರೂಪವನ್ನೇ ಹೊಂದುತ್ತಿರುವವೋ. **ಹುಟ್ಟು ಇರವು, ನಾಶ - (ಈ) ಕಾಲಗಳಲ್ಲಿ ಯಾವದರ ಸ್ವರೂಪವನ್ನು ಭೂತಗಳು ಬಿಡ ದಿರುವವೋ ಆ ಇದೇ ಬ್ರಹ್ಮದ ಲಕ್ಷಣ.**[1] ಆ ಬ್ರಹ್ಮವನ್ನು ವಿಜಿಜ್ಞಾಸೆಮಾಡು, ಎಂದರೆ ವಿಶೇಷದಿಂದ ಅರಿತುಕೊಳ್ಳಲು ಇಚ್ಛಿಸು, ಯಾವದು ಈ ಲಕ್ಷಣದ ಬ್ರಹ್ಮವೋ ಅದನ್ನು ಅನ್ನವೇ ಮುಂತಾದ ದ್ವಾರದಿಂದ ಅರಿತುಕೊ ಎಂದರ್ಥ. ಮತ್ತೊಂದು ಶ್ರುತಿಯೂ ''ಪ್ರಾಣದ ಪ್ರಾಣವನ್ನೂ ಚಕ್ಷುವಿನ ಚಕ್ಷುಸ್ಸನ್ನೂ ಶ್ರೋತ್ರದ ಶ್ರೋತ್ರ ವನ್ನೂ ಅನ್ನದ ಅನ್ನವನ್ನೂ ಮನಸ್ಸಿನ ಮನಸ್ಸನ್ನೂ ಯಾರು ಅರಿತುಕೊಳ್ಳು ವರೋ ಅವರು ಹಿಂದಿನ ಎಲ್ಲಕ್ಕೂ ಮೊದಲಿನ ಬ್ರಹ್ಮವನ್ನು ಗೊತ್ತುಪಡಿಸಿ ಕೊಂಡಿರುವರು'' (ಬೃ. ಮಾ. ೪-೨-೩೧) ಎಂದು ಇವು ಬ್ರಹ್ಮವನ್ನರಿಯುವದಕ್ಕೆ ದ್ವಾರಗಳೆಂದು ತಿಳಿಸುತ್ತದೆ.

ಬ್ರಹ್ಮವನ್ನು ಅರಿಯುವದಕ್ಕೆ ತಪಸ್ಸು ಬೇಕು

ಸ ತಪೋಽತಪ್ಯತ ॥೪॥

೪. ಅವನು ತಪಸ್ಸನ್ನು ಮಾಡಿದನು.

1. ಬ್ರಹ್ಮವು ಜಗತ್ತಿನ ಜನ್ಮಾದಿಗಳಿಗೆ ಕಾರಣವೆಂದರೆ ಜಗತ್ತು ತೋರುವಾಗಲೂ ಅಡಗುವಾಗಲೂ ಬ್ರಹ್ಮರೂಪವಾಗಿರುವದೆಂದೇ ಅರ್ಥ.

(ಭಾಷ್ಯ)

೨೩೨. ಸ ಭೃಗುಃ ಬ್ರಹ್ಮೋಪಲಬ್ಧಿದ್ವಾರಾಣಿ ಬ್ರಹ್ಮಲಕ್ಷಣಂ ಚ ಶ್ರುತ್ವಾ ಪಿತುಃ, ತಪಃ ಬ್ರಹ್ಮೋಪಲಬ್ಧಿಸಾಧನತ್ವೇನ ಅತಪ್ಯತ ತಪ್ತವಾನ್ । ಕುತಃ ಪುನರಮುಪದಿಷ್ಟಸ್ಯೈವ ತಪಸಃ ಸಾಧನತ್ವಪ್ರತಿಪತ್ತಿರ್ಭೃಗೋಃ ? ಸಾವಶೇಷೋಕ್ತೇಃ । ಅನ್ನಾದಿ ಬ್ರಹ್ಮಣಃ ಪ್ರತಿಪತ್ತೌ ದ್ವಾರಂ ಲಕ್ಷಣಂ ಚ ''ಯತೋ ವಾ ಇಮಾನಿ'' ಇತ್ಯಾದಿ ಉಕ್ತವಾನ್ । ಸಾವಶೇಷಂ ಹಿ ತತ್ । ಸಾಕ್ಷಾದ್ ಬ್ರಹ್ಮಣೋಽನಿರ್ದೇಶಾತ್ । ಅನ್ಯಥಾ ಹಿ ಸ್ವರೂಪೇಣೈವ ಬ್ರಹ್ಮ ನಿರ್ದೇಷ್ಟವ್ಯಂ ಜಿಜ್ಞಾಸವೇ ಪುತ್ರಾಯ 'ಇದಮ್ ಇತ್ಥಂರೂಪಂ ಬ್ರಹ್ಮ' ಇತಿ । ನ ಚೈವಂ ನಿರದಿಶತ್ ; ಕಿಂ ತರ್ಹಿ, ಸಾವಶೇಷಮೇವ ಉಕ್ತವಾನ್ । ಅತೋಽವಗಮ್ಯತೇ ನೂನಂ ಸಾಧನಾನ್ತರಮಪಿ ಅಪೇಕ್ಷತೇ ಪಿತಾ ಬ್ರಹ್ಮವಿಜ್ಞಾನಂ ಪ್ರತಿ ಇತಿ । ತಪೋವಿಶೇಷಪ್ರತಿಪತ್ತಿಸ್ತು, ಸರ್ವಸಾಧಕತಮತ್ವಾತ್ । ಸರ್ವೇಷಾಂ ಹಿ[1] ನಿಯತಸಾಧ್ಯವಿಷಯಾಣಾಂ ಸಾಧನಾನಾಂ ತಪ ಏವ ಸಾಧಕತಮಂ ಸಾಧನಮ್ ಇತಿ ಹಿ ಪ್ರಸಿದ್ಧಂ ಲೋಕೇ । ತಸ್ಮಾತ್ ಪಿತ್ರಾ ಅನುಪದಿಷ್ಟಮಪಿ ಬ್ರಹ್ಮವಿಜ್ಞಾನಸಾಧನತ್ವೇನ ತಪಃ ಪ್ರತಿಪೇದೇ ಭೃಗುಃ ತಚ್ಚ ತಪಃ ಬಾಹ್ಯಾನ್ತಃಕರಣಸಮಾಧಾನಮ್ । ತದ್ದ್ವಾರಕತ್ವಾತ್ ಬ್ರಹ್ಮಪ್ರತಿಪತ್ತೇಃ । ''ಮನಸಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ[2] ಪರಮಂ ತಪಃ । ತಜ್ಜ್ಞಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ ॥'' (ಮೋ. ಧ. ೨೫೦-೪) ಇತಿ ಸ್ಮೃತೇಃ ॥

(ಭಾಷ್ಯಾರ್ಥ)

ಆ ಭೃಗುವು ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ದ್ವಾರವನ್ನೂ ಬ್ರಹ್ಮದ ಲಕ್ಷಣವನ್ನೂ ತಂದೆಯಿಂದ ಕೇಳಿ (ತಿಳಿದುಕೊಂಡ)ವನಾಗಿ ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಸಾಧನವಾಗಿ ತಪಸ್ಸನ್ನು ತಪಿಸಿದನು, ತಪಸ್ಸುಮಾಡಿದವನಾದನು.

(ಪ್ರಶ್ನೆ :-) (ತಂದೆಯು) ಹೇಳಿಕೊಡದೆ ಇದ್ದರೂ ತಪಸ್ಸು ಸಾಧನವೆಂದು ಭೃಗು ತಿಳಿದುಕೊಂಡದ್ದು ಹೇಗೆ ?

(ಉತ್ತರ :-) (ಹೇಳಬೇಕಾದದ್ದನ್ನು ಇನ್ನೂ ಉಳಿಸಿ[3] ತಂದೆಯು ಹೇಳಿರುವದರಿಂದ. ಬ್ರಹ್ಮವನ್ನು ತಿಳಿದುಕೊಳ್ಳುವದಕ್ಕೆ ಅನ್ನವೇ ಮುಂತಾದ ದ್ವಾರವನ್ನೂ

1. ಈ ವಾಕ್ಯದಲ್ಲಿ ಒಂದು 'ಹಿ' ಹೆಚ್ಚಾಗಿರುವಂತೆ ಕಾಣುತ್ತದೆ.
2. ''ಚಾಪ್ಯೈಕಾಗ್ರ್ಯಮ್'' ಎಂದು ಮುದ್ರಿತಭಾರತದ ಪಾಠ.
3. ಹೇಳುವದನ್ನು ನೇರಾಗಿ ಹೇಳಿಬಿಡದೆ.

"ಯಾವದರಿಂದ ಈ (ಭೂತಗಳು ..)" ಎಂಬುದಾಗಿರುವ ಲಕ್ಷಣವನ್ನೂ (ತಂದೆ) ಹೇಳಿರುತ್ತಾನೆ ಅದು (ಇನ್ನೂ) ಅಪೂರ್ಣವಾಗಿಯೇ ಇರುತ್ತದೆ. ಏಕೆಂದರೆ ಬ್ರಹ್ಮವನ್ನು ನೇರಾಗಿ ತಿಳಿಸಿಕೊಟ್ಟಿರುವದಿಲ್ಲ. ಹೀಗಲ್ಲದೆ ಇದ್ದರೆ[1] (ಬ್ರಹ್ಮವನ್ನು) ಅರಿತುಕೊಳ್ಳಬೇಕೆಂಬ ಇಚ್ಛೆಯುಳ್ಳ ಪುತ್ರನಿಗೆ 'ಬ್ರಹ್ಮವು ಇದು, ಇಂಥ ರೂಪದ್ದು' - ಎಂದು ತನ್ನ ರೂಪದಿಂದಲೇ ಬ್ರಹ್ಮವನ್ನು ತಿಳಿಸಿಕೊಡಬೇಕಾಗಿತ್ತು. ಆದರೆ ಹಾಗೆ ಹೇಳಿಕೊಡಲಿಲ್ಲ, ಮತ್ತೇನೆಂದರೆ ಇನ್ನೂ ಉಳಿಸಿಯೇ ಹೇಳಿರುತ್ತಾನೆ. ಆದ್ದರಿಂದ ಬ್ರಹ್ಮವನ್ನು ವಿಶೇಷವಾಗಿ ಅರಿತುಕೊಳ್ಳುವದಕ್ಕೆ ಮತ್ತೊಂದು ಸಾಧನವೂ (ಬೇಕೆಂದು) ತಂದೆಯು ಅಭಿಪ್ರಾಯಪಟ್ಟಿರಬೇಕು ಎಂದು ನಿಶ್ಚಯವಾಗುತ್ತದೆ.[2] (ಆ ಸಾಧನವು) ತಪಸ್ಸೇ ಎಂಬ ವಿಶೇಷ ರೂಪದಿಂದ ತಿಳಿದುಕೊಂಡದ್ದೋ ಎಂದರೆ (ಅದು) ಎಲ್ಲಕ್ಕಿಂತಲೂ ಹೆಚ್ಚಿನ ಸಾಧನವಾಗಿರುವದರಿಂದ. ಆಯಾ ಸಾಧ್ಯಗಳನ್ನು ನಿಯಮದಿಂದ ಉಂಟುಮಾಡುವ ಸಾಧನಗಳಿಲ್ಲಕ್ಕಿಂತಲೂ ತಪಸ್ಸೇ ಅತ್ಯಂತವಾಗಿ ಹೆಚ್ಚಿನ ಸಾಧನವು ಎಂದು ಲೋಕದಲ್ಲಿ ಪ್ರಸಿದ್ಧವೇ ಆಗಿರುತ್ತದೆ. ಆದ್ದರಿಂದ ತಂದೆಯು ಹೇಳಿಕೊಡದೆ ಇದ್ದರೂ ತಪಸ್ಸು ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಸಾಧನವೆಂದು ಭೃಗುವು ಅರಿತುಕೊಂಡನು. ಆ ತಪಸ್ಸೆಂದರೆ ಹೊರಗಿನ ಕರಣಗಳ ಸಮಾಧಾನರೂಪವಾದದ್ದೇ[3] ; ಏಕೆಂದರೆ ಅದರ ಮೂಲಕವಾಗಿಯೇ ಬ್ರಹ್ಮದ ಜ್ಞಾನವಾಗುತ್ತದೆ.[4] "ಮನಸ್ಸು ಮತ್ತು ಇಂದ್ರಿಯಗಳ ಐಕಾಗ್ರ್ಯವೇ ಹೆಚ್ಚಿನ ತಪಸ್ಸು ; ಅದು ಎಲ್ಲಾ ಧರ್ಮಗಳಿಗಿಂತಲೂ ಹೆಚ್ಚಿನದು, ಆ ಧರ್ಮವೇ ಪರಮ ಧರ್ಮವೆನಿಸುತ್ತದೆ" (ಮೋ. ಧ. ೨೫೦-೪) ಎಂಬ ಸ್ಮೃತಿಯು ಇದಕ್ಕೆ ಪ್ರಮಾಣವು.

೨. ಬ್ರಹ್ಮವಿಜ್ಞಾನದ ಮೆಟ್ಟಿಲುಗಳು

ಅನ್ನವು ಬ್ರಹ್ಮವೆಂಬ ಜ್ಞಾನ

ಸ ತಪಸ್ತಪ್ತ್ವಾ ।।೫।।

(ಇತಿ ಪ್ರಥಮೋಽನುವಾಕಃ)

1. ತಂದೆಯು ಹೇಳಿದಷ್ಟೇ ಪೂರ್ಣವಾಗಬೇಕಾಗಿದ್ದರೆ.

2. ಗುರುವು ಹೇಳಿಕೊಟ್ಟಮೇಲೂ ಶಿಷ್ಯನು ಮಾಡತಕ್ಕ ಸಾಧನವಿದೆ ಎಂದು ಭಾವ.

3. ಕೃಚ್ಛ್ರವೇ ಮುಂತಾದದ್ದಲ್ಲ, ಏಕೆಂದರೆ ಇಲ್ಲಿ ಜ್ಞಾನಕ್ಕೆ ಸಾಧನವನ್ನು ಹೇಳುವದಕ್ಕೆ ಹೊರಟಿದೆ.

4. ಬರಿಯ ದೇಹದಂಡನೆಯಿಂದ ಬ್ರಹ್ಮಜ್ಞಾನವಾಗುವದಿಲ್ಲ.

೫. ಅವನು ತಪಸ್ಸನ್ನು ಮಾಡಿ -

(ಒಂದನೆಯ ಅನುವಾಕವು ಮುಗಿಯಿತು)[1]

ಅನ್ನಂ ಬ್ರಹ್ಮೇತಿ ವ್ಯಜಾನಾತ್ । ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ । ಅನ್ನೇನ ಜಾತಾನಿ ಜೀವನ್ತಿ । ಅನ್ನಂ ಪ್ರಯನ್ತ್ಯಭಿ ಸಂವಿಶನ್ತೀತಿ ॥೧॥

೧. ಅನ್ನವು ಬ್ರಹ್ಮವೆಂದು ಅರಿತುಕೊಂಡನು. ಏಕೆಂದರೆ, ಅನ್ನದಿಂದಲೇ ಈ ಭೂತಗಳು ಹುಟ್ಟುತ್ತವೆ ; ಅನ್ನದಿಂದ ಹುಟ್ಟಿ ಜೀವಿಸುತ್ತವೆ ; ಅನ್ನವನ್ನು ಕುರಿತು ಹೋಗಿ ಚೆನ್ನಾಗಿ ಸೇರಿಕೊಳ್ಳುತ್ತವೆ ; ಆದ್ದರಿಂದ.

(ಭಾಷ್ಯ)

೨೩. ಸ ಚ ತಪಸ್ತಪ್ತ್ವಾ ಅನ್ನಂ ಬ್ರಹ್ಮ ಇತಿ ವ್ಯಜಾನಾತ್ ವಿಜ್ಞಾತವಾನ್ । ತದ್ ಹಿ ಯಥೋಕ್ತಲಕ್ಷಣೋಪೇತಮ್ । ಕಥಮ್ ? ಅನ್ನಾದ್ ಹಿ ಏವ ಖಲು ಇಮಾನಿ ಭೂತಾನಿ ಜಾಯನ್ತೇ । ಅನ್ನೇನ ಜಾತಾನಿ ಜೀವನ್ತಿ । ಅನ್ನಂ ಪ್ರಯನ್ತಿ, ಅಭಿಸಂವಿಶನ್ತಿ ಇತಿ । ತಸ್ಮಾತ್ ಯುಕ್ತಮ್ ಅನ್ನಸ್ಯ ಬ್ರಹ್ಮತ್ವಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಆ ಭೃಗುವು ತಪಸ್ಸುಮಾಡಿ ಅನ್ನವು[2] ಬ್ರಹ್ಮವೆಂದು ಅರಿತುಕೊಂಡನು, ಅರಿತುಕೊಂಡವನಾದನು. ಏಕೆಂದರೆ ಅದು (ತಂದೆಯು) ಹೇಳಿದಂಥ ಲಕ್ಷಣದಿಂದ ಕೂಡಿರುತ್ತದೆ. (ಅದು) ಹೇಗೆ ? ಎಂದರೆ ಅನ್ನದಿಂದಲೇ ಅಲ್ಲವೆ, ಈ ಭೂತಗಳು ಹುಟ್ಟುತ್ತವೆ ? ಹುಟ್ಟಿದ ಬಳಿಕ ಅನ್ನದಿಂದಲೇ ಜೀವಿಸುತ್ತವೆ. ಅನ್ನವನ್ನು ಕುರಿತು ಹೋಗಿ ಅದರಲ್ಲಿಯೇ ಚೆನ್ನಾಗಿ ಸೇರಿಕೊಳ್ಳುತ್ತವೆ. ಆದ್ದರಿಂದ ಅನ್ನವು ಬ್ರಹ್ಮವೆಂಬುದು ಯುಕ್ತವಾಗಿದೆಯೆಂದು ಅಭಿಪ್ರಾಯ.

ತಪಸ್ಸು ಕೊನೆಯವರೆಗೂ ಬೇಕಾದ ಸಾಧನ

ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ

---

1. ಆನಂದವಲ್ಲಿಯಂತೆಯೇ ಭೃಗುವಲ್ಲಿಯನ್ನೂ ವೈದಿಕರು ಅನುವಾಕಗಳಾಗಿ ಒಡೆದುಕೊಂಡು ಅಧ್ಯಯನಮಾಡುತ್ತಾರೆ. ಆದರೆ ಭಾಷ್ಯದಲ್ಲಿ ಇದಕ್ಕೆ ಆಧಾರವೇನೂ ಕಾಣುವದಿಲ್ಲ. ಪೀಠಿಕೆಯನ್ನು ನೋಡಿ.

2. ವಿರಾಟ್ಪುರುಷನ ಉಪಾಧಿಯಾದ ಸಮಷ್ಟ್ಯನ್ನ ; ಭೂತಪಂಚಕ.

ಭಗವೋ ಬ್ರಹ್ಮೇತಿ । ತಗ್ಂ ಹೋವಾಚ ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ ॥೨॥

೨. ಅದನ್ನು ಅರಿತುಕೊಂಡು ಮತ್ತೂ ''ಭಗವಂತನೆ, ಬ್ರಹ್ಮವನ್ನು ಹೇಳಿಕೊಡು'' ಎಂದು ತಂದೆಯಾದ ವರುಣನನ್ನು ಸಮೀಪಿಸಿದನು. ಅವನನ್ನು ಕುರಿತು (ವರುಣನು) ಇಂತೆಂದನು : ''ತಪಸ್ಸಿನಿಂದ ಬ್ರಹ್ಮವನ್ನು ಅರಿತುಕೊಳ್ಳಲಿಚ್ಛಿಸು ; ತಪಸ್ಸೇ ಬ್ರಹ್ಮವು.''

(ಭಾಷ್ಯ)

೨ಓಳ ಸಃ ಏವಂ ತಪಸ್ತಪ್ತ್ವಾ ಅನ್ನಂ ಬ್ರಹ್ಮ ಇತಿ ವಿಜ್ಞಾಯ ಲಕ್ಷಣೇನ ಉಪಪತ್ತ್ಯಾ ಚ, ಪುನರೇವ ಸಂಶಯಮಾಪನ್ನಃ ವರುಣಂ ಪಿತರಮ್ ಉಪಸಸಾರ ''ಅಧೀಹಿ ಭಗವೋ ಬ್ರಹ್ಮ'' ಇತಿ । ಕಃ ಪುನಃ ಸಂಶಯಹೇತುರಸ್ಯ ಇತಿ ? ಉಚ್ಯತೇ । ಅನ್ನಸ್ಯ ಉತ್ಪತ್ತಿದರ್ಶನಾತ್ । ತಪಸಃ ಪುನಃಪುನರುಪದೇಶಃ ಸಾಧನಾತಿಶಯತ್ವಾವಧಾರಣಾರ್ಥಃ । ಯಾವತ್ ಬ್ರಹ್ಮಣೋ ಲಕ್ಷಣಂ ನಿರತಿಶಯಂ ನ ಭವತಿ ಯಾವಚ್ಚ ಜಿಜ್ಞಾಸಾ ನ ನಿವರ್ತತೇ ತಾವತ್ ತಪ ಏವ ತೇ ಸಾಧನಮ್ । ತಪಸ್ಯೇವ ಬ್ರಹ್ಮ ವಿಜಿಜ್ಞಾಸಸ್ವ ಇತ್ಯರ್ಥಃ । ಋಜ್ವನ್ಯತ್ ॥

(ಭಾಷ್ಯಾರ್ಥ)

ಅವನು ಹೀಗೆ ತಪಸ್ಸನ್ನು ಮಾಡಿ ಅನ್ನವು ಬ್ರಹ್ಮವೆಂದು ಲಕ್ಷಣದಿಂದಲೂ ಯುಕ್ತಿಯಿಂದಲೂ[1] ಅರಿತುಕೊಂಡು ಮತ್ತೂ ಸಂಶಯವನ್ನು ಹೊಂದಿದವನಾಗಿ ತಂದೆಯಾದ ವರುಣನ ಬಳಿಗೆ ''ಪೂಜ್ಯನೆ, ಬ್ರಹ್ಮವನ್ನು ಹೇಳಿಕೊಡು'' ಎಂದು ಸಮೀಪಿಸಿದನು.

(ಪ್ರಶ್ನೆ :-) ಅವನಿಗೆ ಸಂಶಯವುಂಟಾದದ್ದಕ್ಕೆ ಕಾರಣವಾದರೂ ಏನು ?

(ಉತ್ತರ :-) ಹೇಳುತ್ತೇವೆ. ಅನ್ನಕ್ಕೆ ಉತ್ಪತ್ತಿ(ಯಿರುವದು) ಕಂಡುಬರುವದರಿಂದ, ತಪಸ್ಸನ್ನು ಮತ್ತೆ ಮತ್ತೆ ಹೇಳಿರುವದು (ಅದು) ಮಿಗಿಲಿಲ್ಲದ ಸಾಧನವೆಂದು ಒತ್ತಿ ಹೇಳುವದಕ್ಕೆ. ಎಲ್ಲಿಯವರೆಗೂ ಬ್ರಹ್ಮದ ಲಕ್ಷಣವು ಮಿಗಿಲಿಲ್ಲದಂತೆ (ಹೊಂದಿತೆಂದು) ಆಗುವದಿಲ್ಲವೋ, ಎಲ್ಲಿಯವರೆಗೂ (ಇನ್ನೂ) ತಿಳಿಯಬೇಕೆಂಬ ಇಚ್ಛೆಯು ತೊಲಗುವದಿಲ್ಲವೋ ಅಲ್ಲಿಯವರೆಗೂ ತಪಸ್ಸೇ ನಿನಗೆ

1. ಯಾವದಕ್ಕೆ ಲಕ್ಷಣವು ಹೊಂದುತ್ತದೆಯೋ ಅದು ಬ್ರಹ್ಮವು, ಹೊಂದದೆ ಇರುವದು ಅಬ್ರಹ್ಮವು - ಎಂಬ ಯುಕ್ತಿಯನ್ನಿಟ್ಟುಕೊಂಡು.

ಸಾಧನವು ; (ಆದ್ದರಿಂದ) ತಪಸ್ಸಿನಿಂದಲೇ ಬ್ರಹ್ಮವನ್ನು ತಿಳಿಯಲಿಚ್ಛಿಸು ಎಂದು ಅರ್ಥ. ಉಳಿದದ್ದು ಸ್ಪಷ್ಟವಾಗಿದೆ.[1]

ಪ್ರಾಣವು ಬ್ರಹ್ಮವೆಂಬ ಜ್ಞಾನ

ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥೩॥

(ಇತಿ ದ್ವಿತೀಯೋಽನುವಾಕಃ)

೩. ಅವನು ತಪಸ್ಸನ್ನು ಮಾಡಿದನು. ಅವನು ತಪಸ್ಸನ್ನು ಮಾಡಿ -

(ಎರಡನೆಯ ಅನುವಾಕವು ಮುಗಿಯಿತು)

ಪ್ರಾಣೋ ಬ್ರಹ್ಮೇತಿ ವ್ಯಜಾನಾತ್ । ಪ್ರಾಣಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ । ಪ್ರಾಣೇನ ಜಾತಾನಿ ಜೀವನ್ತಿ । ಪ್ರಾಣಂ ಪ್ರಯನ್ತ್ಯಭಿಸಂವಿಶನ್ತೀತಿ ॥೪॥

೪. ಪ್ರಾಣವು[2] ಬ್ರಹ್ಮವೆಂದು ಅರಿತುಕೊಂಡನು. ಏಕೆಂದರೆ ಪ್ರಾಣದಿಂದಲೇ ಈ ಭೂತಗಳು ಹುಟ್ಟುತ್ತವೆ ; ಪ್ರಾಣದಿಂದ ಹುಟ್ಟಿ ಜೀವಿಸುತ್ತವೆ. ಪ್ರಾಣವನ್ನು ಕುರಿತು ಹೋಗಿ ಚೆನ್ನಾಗಿ ಸೇರಿಕೊಳ್ಳುತ್ತವೆ ; ಆದ್ದರಿಂದ.

ಭೃಗುವಿನ ತಪಸ್ಸು

ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ ॥೫॥

೫. ಅದನ್ನು ಅರಿತುಕೊಂಡು ಮತ್ತೂ ''ಭಗವಂತನೆ, ಬ್ರಹ್ಮವನ್ನು ಹೇಳಿಕೊಡು'' ಎಂದು ತಂದೆಯಾದ ವರುಣನನ್ನು ಸಮೀಪಿಸಿದನು.

ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ ॥೬॥

1. ತಪಸ್ಸೇ ಬ್ರಹ್ಮವೆಂದರೆ ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಉತ್ತಮಸಾಧನವು ಎಂದರ್ಥ. ಇದು ಸ್ಪಷ್ಟವೇ ಆಗಿದೆ.

2. ಕ್ರಿಯಾಶಕ್ತಿಪ್ರಧಾನನಾದ ಸೂತ್ರಾತ್ಮನ ಉಪಾಧಿಯು.

೩. ಅವನನ್ನು ಕುರಿತು (ವರುಣ)ನಿಂತೆಂದನು 'ತಪಸ್ಸಿನಿಂದ ಬ್ರಹ್ಮವನ್ನು ಅರಿತುಕೊಳ್ಳಲಿಚ್ಛಿಸು. ತಪಸ್ಸೇ ಬ್ರಹ್ಮವು.''

ಮನಸ್ಸು ಬ್ರಹ್ಮವೆಂಬ ಜ್ಞಾನ

ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥೩॥

(ಇತಿ ತೃತೀಯೋಽನುವಾಕಃ)

೩. ಅವನು ತಪಸ್ಸನ್ನು ಮಾಡಿದನು. ಅವನು ತಪಸ್ಸನ್ನು ಮಾಡಿ -

(ಮೂರನೆಯ ಅನುವಾಕವು ಮುಗಿಯಿತು)

ಮನೋ ಬ್ರಹ್ಮೇತಿ ವ್ಯಜಾನಾತ್ । ಮನಸೋ ಹ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ । ಮನಸಾ ಜಾತಾನಿ ಜೀವನ್ತಿ । ಮನಃ ಪ್ರಯನ್ತ್ಯಭಿ ಸಂವಿಶನ್ತೀತಿ ॥೪॥

೪. ಮನಸ್ಸು[1] ಬ್ರಹ್ಮವೆಂದು ಅರಿತುಕೊಂಡನು. ಏಕೆಂದರೆ ಮನಸ್ಸಿನಿಂದಲೇ ಈ ಭೂತಗಳು ಹುಟ್ಟುತ್ತವೆ. ಹುಟ್ಟಿ ಮನಸ್ಸಿನಿಂದ ಜೀವಿಸುತ್ತವೆ ; ಮನಸ್ಸನ್ನು ಕುರಿತು ಹೋಗಿ ಚೆನ್ನಾಗಿ ಸೇರಿಕೊಳ್ಳುತ್ತವೆ, ಆದ್ದರಿಂದ.

ಭೃಗುವಿನ ತಪಸ್ಸು

ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ ॥೫॥

೫. ಅದನ್ನು ಅರಿತುಕೊಂಡು ಮತ್ತೂ ''ಭಗವಂತನೆ, ಬ್ರಹ್ಮವನ್ನು ಹೇಳಿಕೊಡು'' ಎಂದು ತಂದೆಯಾದ ವರುಣನನ್ನು ಸಮೀಪಿಸಿದನು. ಅವನನ್ನು ಕುರಿತು (ವರುಣ)ನಿಂತೆಂದನು. ತಪಸ್ಸಿನಿಂದ ಬ್ರಹ್ಮವನ್ನು ಅರಿತುಕೊಳ್ಳಲಿಚ್ಛಿಸು. ತಪಸ್ಸೇ ಬ್ರಹ್ಮವು.

1. ಸಮಷ್ಟಿಸಂಕಲ್ಪವು, ಹಿರಣ್ಯಗರ್ಭನ ಉಪಾಧಿಯು.

ವಿಜ್ಞಾನವು ಬ್ರಹ್ಮವೆಂಬ ಜ್ಞಾನ

ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥೩॥

(ಇತಿ ಚತುರ್ಥೋಽನುವಾಕಃ)

೩. ಅವನು ತಪಸ್ಸುಮಾಡಿದನು. ಅವನು ತಪಸ್ಸನ್ನು ಮಾಡಿ -

(ನಾಲ್ಕನೆಯ ಅನುವಾಕವು ಮುಗಿಯಿತು)

ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ । ವಿಜ್ಞಾನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ । ವಿಜ್ಞಾನೇನ ಜಾತಾನಿ ಜೀವನ್ತಿ । ವಿಜ್ಞಾನಂ ಪ್ರಯನ್ತ್ಯಭಿಸಂವಿಶನ್ತೀತಿ ॥೦॥

೦. ವಿಜ್ಞಾನವು[1] ಬ್ರಹ್ಮವೆಂದು ತಿಳಿದುಕೊಂಡನು. ಏಕೆಂದರೆ ವಿಜ್ಞಾನದಿಂದಲೇ ಈ ಭೂತಗಳು ಹುಟ್ಟುತ್ತವೆ ; ಹುಟ್ಟಿ ವಿಜ್ಞಾನ ದಿಂದ ಜೀವಿಸುತ್ತವೆ ; ವಿಜ್ಞಾನವನ್ನು ಕುರಿತು ಹೋಗಿ ಚೆನ್ನಾಗಿ ಸೇರಿ ಕೊಳ್ಳುತ್ತವೆ, ಆದ್ದರಿಂದ.

ಭೃಗುವಿನ ತಪಸ್ಸು

ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ ॥೧॥

೧. ಅದನ್ನು ಅರಿತುಕೊಂಡು ಮತ್ತೂ ''ಭಗವಂತನೆ, ಬ್ರಹ್ಮ ವನ್ನು ಹೇಳಿಕೊಡು'' ಎಂದು ತಂದೆಯಾದ ವರುಣನನ್ನು ಸಮೀಪಿಸಿದನು. ಅವನನ್ನು ಕುರಿತು (ವರುಣ)ನಿಂತೆಂದನು. ತಪಸ್ಸಿನಿಂದ ಬ್ರಹ್ಮವನ್ನು ಅರಿತು ಕೊಳ್ಳಲಿಚ್ಛಿಸು, ತಪಸ್ಸೇ ಬ್ರಹ್ಮವು.

ಆನಂದವು ಬ್ರಹ್ಮವೆಂಬ ಜ್ಞಾನ

ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥೩॥

(ಇತಿ ಪಞ್ಚಮೋಽನುವಾಕಃ)

1. ಹಿರಣ್ಯಗರ್ಭನ ಉಪಾಧಿಯಾದ ಸಮಷ್ಟಿಬುದ್ಧಿ.

೩. ಅವನು ತಪಸ್ಸನ್ನು ಮಾಡಿದನು. ಅವನು ತಪಸ್ಸನ್ನು ಮಾಡಿ -
(ಐದನೆಯ ಅನುವಾಕವು ಮುಗಿಯಿತು)

ಆನನ್ದೋ ಬ್ರಹ್ಮೇತಿ ವ್ಯಜಾನಾತ್ । ಆನನ್ದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ । ಆನನ್ದೇನ ಜಾತಾನಿ ಜೀವನ್ತಿ । ಆನನ್ದಂ ಪ್ರಯನ್ತ್ಯಭಿಸಂವಿಶನ್ತೀತಿ ॥೧॥

೧. ಆನಂದವು[1] ಬ್ರಹ್ಮವೆಂದು ಅರಿತುಕೊಂಡನು. ಏಕೆಂದರೆ ಆನಂದದಿಂದಲೇ ಈ ಭೂತಗಳು ಹುಟ್ಟುತ್ತವೆ. ಆನಂದದಿಂದ ಹುಟ್ಟಿ ಜೀವಿಸುತ್ತವೆ ; ಆನಂದವನ್ನು ಕುರಿತು ಹೋಗಿ ಚೆನ್ನಾಗಿ ಸೇರಿಕೊಳ್ಳುತ್ತವೆ, ಆದ್ದರಿಂದ.

(ಭಾಷ್ಯ)

೨೩೫. ಏವಂ ತಪಸಾ ವಿಶುದ್ಧಾತ್ಮಾ ಪ್ರಾಣಾದಿಷು ಸಾಕಲ್ಯೇನ ಬ್ರಹ್ಮ ಲಕ್ಷಣಮ್ ಅಪಶ್ಯನ್ ಶನೈಃ ಶನೈಃ ಅನ್ತರನುಪ್ರವಿಶ್ಯ ಅನ್ತರತಮಮ್ ಆನನ್ದಂ ಬ್ರಹ್ಮ ವಿಜ್ಞಾತವಾನ್ ತಪಸ್ಯೇವ ಸಾಧನೇನ ಭೃಗುಃ । ತಸ್ಮಾತ್ ಬ್ರಹ್ಮ ವಿಜಿಜ್ಞಾಸುನಾ ಬಾಹ್ಯಾನ್ತಃಕರಣಸಮಾಧಾನಲಕ್ಷಣಂ ಪರಮಂ ತಪಃ ಸಾಧನಮ್ ಅನುಷ್ಠೇಯಮ್ ಇತಿ ಪ್ರಕರಣಾರ್ಥಃ ॥

(ಭಾಷ್ಯಾರ್ಥ)

ಹೀಗೆ ಭೃಗುವು ತಪಸ್ಸಿನಿಂದ ಅಂತಃಕರಣಶುದ್ಧಿಯನ್ನು ಹೊಂದಿದವನಾಗಿ ಪ್ರಾಣವೇ ಮುಂತಾದವುಗಳಲ್ಲಿ ಬ್ರಹ್ಮದ ಲಕ್ಷಣವನ್ನು ಸಂಪೂರ್ಣವಾಗಿ ಕಾಣದೆ ಮೆಲ್ಲಮೆಲ್ಲಗೆ[2] ಒಳಗೆ ಹೊಕ್ಕವನಾಗಿ ತೀರ ಒಳಗಿರುವ[3] ಆನಂದವೇ ಬ್ರಹ್ಮವೆಂದು ತಪಸ್ಸೆಂಬ ಸಾಧನದಿಂದಲೇ ಅರಿತುಕೊಂಡನು. ಆದ್ದರಿಂದ ಬ್ರಹ್ಮವನ್ನು ಅರಿತುಕೊಳ್ಳಬೇಕೆನ್ನುವಾತನು ಹೊರಗಿನ ಮತ್ತು ಒಳಗಿನ ಕರಣಗಳನ್ನು ಸಮಾಧಾನ

---

1. ಸರ್ವಾನಂದಗಳಿಗೂ ಸಾರವಾದ ನಿರತಿಶಯವಾದ ಆನಂದವು.

2. ಸ್ಥೂಲವಾಗಿರುವ ಅನ್ನಾದಿಗಳನ್ನು ಸೂಕ್ಷ್ಮವಾದ ಮುಂದುಮುಂದಿನ ಪ್ರಾಣಾದಿಗಳಲ್ಲಿ ಜ್ಞಾನದಿಂದ ಲಯಮಾಡುತ್ತಾ.

3. ಹೃದಯಗುಹೆಯಲ್ಲಿರುವದೆಂದು ಶ್ರುತಿಯಲ್ಲಿ ಹೇಳಿರುವ.

ದಲ್ಲಿಡುವದೆಂಬ ಹೆಚ್ಚಿನ ತಪಸ್ಸೆಂಬ ಸಾಧನವನ್ನು ಅಭ್ಯಾಸಮಾಡಬೇಕು ಎಂಬುದು (ಈ) ಪ್ರಕರಣದ ಅರ್ಥವು.

೩. ಭೃಗುವರುಣರ ಸಂವಾದದ ಉಪಸಂಹಾರ

(ಭಾಷ್ಯ)

೨೩೭. ಅಧುನಾ ಆಖ್ಯಾಯಿಕಾತೋಽಪಸೃತ್ಯ ಶ್ರುತಿಃ ಸ್ವೇನ ವಚನೇನ ಆಖ್ಯಾಯಿಕಾನಿರ್ವೃತ್ತಮ್ ಅರ್ಥಮ್ ಆಚಷ್ಟೇ -

(ಭಾಷ್ಯಾರ್ಥ)

ಈಗ ಶ್ರುತಿಯು ಕಥೆಯನ್ನು ಬಿಟ್ಟು ತನ್ನ ಮಾತಿನಿಂದಲೇ ಕಥೆಯಿಂದ ನಿರ್ಪನ್ನ ವಿಷಯವನ್ನು ಹೇಳುತ್ತದೆ :-

ಸೈಷಾ ಭಾರ್ಗವೀ ವಾರುಣೀ ವಿದ್ಯಾ । ಪರಮೇ ವ್ಯೋಮನ್ ಪ್ರತಿಷ್ಠಿತಾ । ಯ ಏವಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥೨॥

೨. ಆ ಈ ಭಾರ್ಗವೀ ವಾರುಣೀ ವಿದ್ಯೆಯು ಪರಮವ್ಯೋಮದಲ್ಲಿ ನಿಂತಿರುವದು. ಯಾವನು ಹೀಗೆಂದು ಅರಿತುಕೊಳ್ಳುವನೋ (ಅವನು) ನೆಲೆನಿಲ್ಲುತ್ತಾನೆ. ಅನ್ನವಂತ(ನಾಗುತ್ತಾನೆ), ಅನ್ನಾದನಾಗುತ್ತಾನೆ ; ಪ್ರಜೆಯಿಂದಲೂ ಪಶುಗಳಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ದೊಡ್ಡವನಾಗುತ್ತಾನೆ. ಕೀರ್ತಿಯಿಂದಲೂ ದೊಡ್ಡವನಾಗುತ್ತಾನೆ.

(ಭಾಷ್ಯ)

೨೩೭. ಸೈಷಾ ಭಾರ್ಗವೀ ಭೃಗುಣಾ ವಿದಿತಾ ವರುಣೇನ ಪ್ರೋಕ್ತಾ ವಾರುಣೀ ವಿದ್ಯಾ ಪರಮೇ ವ್ಯೋಮನ್ ಹೃದಯಾಕಾಶಗುಹಾಯಾಂ ಪರಮೇ ಆನನ್ದೇ ಅದ್ವೈತೇ ಪ್ರತಿಷ್ಠಿತಾ ಪರಿಸಮಾಪ್ತಾ ಅನ್ನಮಯಾತ್ ಆತ್ಮನೋ ಅಧಿ ಪ್ರವೃತ್ತಾ । ಯ ಏವಮ್ ಅನ್ಯೋಽಪಿ ತಪಸ್ಯೈವ ಸಾಧನೇನ ಅನೇನೈವ ಕ್ರಮೇಣ ಅನುಪ್ರವಿಶ್ಯ ಆನನ್ದಂ ಬ್ರಹ್ಮ ವೇದ ಸ ಏವ ವಿದ್ಯಾಪ್ರತಿಷ್ಠಾನಾತ್ ಪ್ರತಿತಿಷ್ಠತಿ ಆನನ್ದೇ ಪರಮೇ ಬ್ರಹ್ಮಣಿ । ಬ್ರಹ್ಮೈವ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಈ ಭಾರ್ಗವೀ ಎಂದರೆ ಭೃಗುವು ತಿಳಿದುಕೊಂಡ. ವಾರುಣೀ ಎಂದರೆ ವರುಣನು ಹೇಳಿಕೊಟ್ಟ, ವಿದ್ಯೆಯು ಪರಮವ್ಯೋಮದಲ್ಲಿ ಎಂದರೆ ಹೃದಯಾಕಾಶದ ಗುಹೆಯಲ್ಲಿರುವ ಅದ್ವೈತವಾದ ಪರಮಾನಂದದಲ್ಲಿ[1] ನಿಂತಿತು, ಎಂದರೆ ಅನ್ನಮಯ ನೆಂಬ ಆತ್ಮನಿಂದ ಮುಂದಕ್ಕೆ ಹೊರಟು (ಆನಂದದಲ್ಲಿ) ಕೊನೆಗಂಡಿತು ಮತ್ತೊಬ್ಬ ನೂ ಯಾವನು ತಪಸ್ಸೆಂಬ ಸಾಧನದಿಂದಲೇ ಇದೇ ಕ್ರಮದಿಂದ ಒಳಹೊಕ್ಕು ಆನಂದ (ವನ್ನು) ಬ್ರಹ್ಮವೆಂದು ಅರಿತುಕೊಳ್ಳುವನೋ ಅವನು ಈ ರೀತಿಯಲ್ಲಿ ವಿದ್ಯೆಯು ಕೊನೆಗಂಡದ್ದರಿಂದ ಆನಂದವೆಂಬ ಪರಬ್ರಹ್ಮದಲ್ಲಿ ನೆಲೆನಿಲ್ಲುತ್ತಾನೆ , ಬ್ರಹ್ಮವೇ ಆಗುತ್ತಾನೆ[2] ಎಂದರ್ಥ.

(ಭಾಷ್ಯ)

೨೩೮. ದೃಷ್ಟಂ ಚ ಫಲಂ ತಸ್ಯ ಉಚ್ಯತೇ । ಅನ್ನವಾನ್ ಪ್ರಭೂತಮ್ ಅನ್ನಮ್ ಅಸ್ಯ ವಿದ್ಯತೇ ಇತಿ ಅನ್ನವಾನ್ । ಸತ್ತಾಮಾತ್ರೇಣ ತು ಸರ್ವೋ ಹಿ ಅನ್ನವಾನ್ ಇತಿ ವಿದ್ಯಾಯಾ ವಿಶೇಷೋ ನ ಸ್ಯಾತ್ । ಏವಮ್ ಅನ್ನಮ್ ಅತ್ತಿ ಇತಿ ಅನ್ನಾದಃ । ದೀಪ್ತಾಗ್ನಿರ್ಭವತಿ ಇತ್ಯರ್ಥಃ । ಮಹಾನ್ ಭವತಿ । ಕೇನ ಮಹತ್ತ್ವಮ್ ಇತಿ ? ಅತ ಆಹ । ಪ್ರಜಯಾ ಪುತ್ರಾದಿನಾ, ಪಶುಭಿಃ ಗವಾಶ್ವಾದಿಭಿಃ, ಬ್ರಹ್ಮವರ್ಚಸೇನ ಶಮದಮಜ್ಞಾನಾದಿನಿಮಿತ್ತೇನ ತೇಜಸಾ । ಮಹಾನ್ ಭವತಿ ಕೀರ್ತ್ಯಾ ಖ್ಯಾತ್ಯಾ ಶುಭಾಚಾರನಿಮಿತ್ತಯಾ ॥

(ಭಾಷ್ಯಾರ್ಥ)

ಅವನಿಗೆ ಆಗುವ ದೃಷ್ಟಫಲವನ್ನೂ ಶ್ರುತಿಯು ಹೇಳುತ್ತದೆ. ಅನ್ನವಂತ (ನಾಗುತ್ತಾನೆ) ; ಬೇಕಾದಷ್ಟು ಅನ್ನವು ಇವನಿಗೆ ಇರುವದರಿಂದ ಅನ್ನವಂತನೆನಿಸು ತ್ತಾನೆ (ಅನ್ನವು) ಇದ್ದ ಮಾತ್ರದಿಂದ ಎಲ್ಲರೂ ಅನ್ನವಂತರೇ (ಆಗಿರುವದರಿಂದ ಅಷ್ಟರಿಂದ) ಜ್ಞಾನದಿಂದ ವಿಶೇಷವೇನೂ ಆಗಲಾರದು.[3] ಇದರಂತೆ ಅನ್ನ ವನ್ನು ತಿನ್ನುತ್ತಾನಾದ್ದರಿಂದ ಅನ್ನಾದನಾಗುತ್ತಾನೆ ; ಎಂದರೆ ದೀಪ್ತಾಗ್ನಿಯಾಗುತ್ತಾನೆ[4]

1. ಆಕಾಶದಲ್ಲಿಯೇ ಎಂದು ಅಕ್ಷರಾರ್ಥವನ್ನು ಹಿಡಿಯಬಾರದು, ಆಕಾಶವೆಂಬ ಶಬ್ದವನ್ನು ಬ್ರಹ್ಮಕ್ಕೂ ಉಪಯೋಗಿಸುವದುಂಟು. ಸೂ. ಭಾ. ೧-೧-೨೨, ೧-೩-೧೪.

2. ಬ್ರಹ್ಮದಲ್ಲಿ ನಿಲ್ಲುತ್ತಾನೆ ಎಂದದ್ದರಿಂದ ಭೇದವೇನೂ ವಿವಕ್ಷಿತವಲ್ಲ.

3. ಅಜ್ಞರಿಗೂ ಸಾಕಾದಷ್ಟು ಅನ್ನವಿರುತ್ತದೆ ; ಅನ್ನವಾನ್ ಎಂಬಲ್ಲಿರುವ 'ವತ್' ಪ್ರತ್ಯಯವು 'ಬೇಕಾದಷ್ಟು ಹೆಚ್ಚಾಗಿ ಉಳ್ಳವನು' ಎಂಬ ವಿಶೇಷಾರ್ಥವನ್ನು ಸೂಚಿಸುತ್ತದೆ.

4. ಅನ್ನವನ್ನು ತಿಂದು ಅರಗಿಸಿಕೊಳ್ಳುವ ಶಕ್ತಿಯೂ ಇರುವವನಾಗುತ್ತಾನೆ.

ಎಂದರ್ಥ. ದೊಡ್ಡವನು ಆಗುತ್ತಾನೆ. ಏತರಿಂದ ದೊಡ್ಡಸ್ತಿಕೆ (ಬರುತ್ತದೆ) ? ಎಂದರೆ ಅದಕ್ಕೆ (ಶ್ರುತಿ) ಹೇಳುತ್ತದೆ ; ಪ್ರಜೆಯಿಂದಲೂ ಎಂದರೆ ಮಗನೇ ಮುಂತಾದ[1] (ಸಂತತಿಯಿಂದಲೂ) ಪಶುಗಳಿಂದಲೂ ಹಸು, ಕುದುರೆ ಮುಂತಾದವು ಗಳಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಎಂದರೆ ಶಮ, ದಮ, ಜ್ಞಾನ - ಮುಂತಾದ ಕಾರಣದಿಂದ (ಉಂಟಾಗಿರುವ) ಕಾಂತಿಯಿಂದಲೂ (ದೊಡ್ಡವನಾಗುತ್ತಾನೆ). ಕೀರ್ತಿ ಯಿಂದಲೂ ಎಂದರೆ ಒಳ್ಳೆಯ ನಡತೆಯಿಂದುಂಟಾದ[2] ಹೆಸರುವಾಸಿಯಿಂದಲೂ ದೊಡ್ಡವನಾಗುತ್ತಾನೆ.[3]

ಅನ್ನವನ್ನು ನಿಂದಿಸಬಾರದು

(ಅಥ ಸಪ್ತಮೋಽನುವಾಕಃ)

ಅನ್ನಂ ನ ನಿನ್ಯಾತ್ । ತದ್ ವ್ರತಮ್ ॥೧॥

೧. ಅನ್ನವನ್ನು ನಿಂದಿಸಬಾರದು, ಅದು ವ್ರತವು.

(ಭಾಷ್ಯ)

೨೩೯. ಕಂ ಚ ಅನ್ನೇನ ದ್ವಾರಭೂತೇನ ಬ್ರಹ್ಮ ವಿಜ್ಞಾತಂ ಯಸ್ಮಾತ್ ತಸ್ಮಾತ್ ಗುರುಮಿವ ಅನ್ನಂ ನ ನಿನ್ಯಾತ್ । ತದಸ್ಯ ಏವಂ ಬ್ರಹ್ಮವಿದೋ ವ್ರತಮ್ ಉಪದಿಶ್ಯತೇ । ವ್ರತೋಪದೇಶೋಽನ್ನಸ್ತುತಯೇ । ಸ್ತುತಿಭಾಕ್ಚ್ಚಂ ಚ ಅನ್ನಸ್ಯ ಬ್ರಹ್ಮೋಪಲಬ್ಧ್ಯುಪಾಯತ್ವಾತ್ ॥

(ಭಾಷ್ಯಾರ್ಥ)

ಮತ್ತು (ಜ್ಞಾನಕ್ಕೆ) ದ್ವಾರವಾಗಿರುವ ಅನ್ನದಿಂದ ಬ್ರಹ್ಮವನ್ನು ಅರಿತು ಕೊಂಡದ್ದಾಯಿತಲ್ಲವೆ, ಆದ್ದರಿಂದ ಗುರುವನ್ನು (ಹೇಗೆ ನಿಂದಿಸಬಾರದೋ) ಹಾಗೆ ಅನ್ನವನ್ನು ನಿಂದಿಸಬಾರದು. ಅದು, ಹೀಗೆ ಬ್ರಹ್ಮವನ್ನು ಅರಿತುಕೊಂಡಿರುವ ಈ

1. ಮುಮ್ಮಗನು, ಮರಿಮಗನು ಮುಂತಾದ

2. 'ಶುಭಪ್ರಚಾರ' ಎಂಬ ೪॥ ಪಾಠಕ್ಕೂ ಇದೇ ಅರ್ಥ.

3. ಇಲ್ಲಿ 'ಅನ್ನವಂತನಾಗುತ್ತಾನೆ' ಎಂದುಮುಂತಾಗಿ ಬ್ರಹ್ಮಜ್ಞಾನಿಗೆ ಫಲವನ್ನು ಹೇಳಿರುವದು ಜೀವನ್ಮುಕ್ತನಿಗೂ ಅವಿದ್ಯಾಲೇಶವಿರುವದರಿಂದ ದೃಷ್ಟಾಭಾಸವು ಕಾಣಬಹುದೆಂಬ ಕಾರಣದಿಂದ ಸರಿಯಾಗಿದೆ ಎಂದು (೪॥) ಟೀಕೆಯಲ್ಲಿದೆ ; ಆದರೆ ಅನ್ನಾದ್ಯುಪಾಸಕರಿಗೆ ಈ ಫಲವಾಗುವದೆಂದು ಹೇಳಿರುವದನ್ನಿಟ್ಟುಕೊಂಡು ಆ ಫಲವೂ ಬ್ರಹ್ಮಜ್ಞಾನಿಯದೇ ಎಂದು ವಿದ್ಯಾಸ್ತುತಿಗಾಗಿ ಹೇಳಿದೆಯೆಂದು ಅರ್ಥಮಾಡುವದು ಹೆಚ್ಚು ಯುಕ್ತ.

(ಜ್ಞಾನಿಗೆ) ವ್ರತವೆಂದು ಉಪದಿಷ್ಟವಾಗಿರುತ್ತದೆ. ವ್ರತವೆಂದು ಹೇಳಿರುವದು ಅನ್ನ ವನ್ನು ಹೊಗಳುವದಕ್ಕೆ[1] ಅನ್ನವು ಹೊಗಳತಕ್ಕದ್ದಾಗಿರುವದು ಏಕೆಂದರೆ ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಸಾಧನವಾಗಿರುವದರಿಂದ.

೪. ಅನ್ನಾನ್ನಾದರ ಉಪಾಸನೆಗಳು

ಶರೀರಪ್ರಾಣಗಳೆಂಬ ಅನ್ನಾನ್ನಾದಗಳು

ಪ್ರಾಣೋ ವಾ ಅನ್ನಮ್ । ಶರೀರಮನ್ನಾದಮ್ । ಪ್ರಾಣೇ ಶರೀರಂ ಪ್ರತಿಷ್ಠಿತಮ್ । ಶರೀರೇ ಪ್ರಾಣಃ ಪ್ರತಿಷ್ಠಿತಃ । ತದೇತದನ್ನಮನ್ನೇ ಪ್ರತಿಷ್ಠಿತಮ್ ॥೨॥

೨. ಪ್ರಾಣವೇ ಅನ್ನವು ; ಶರೀರವು ಅನ್ನಾದವು. ಪ್ರಾಣದಲ್ಲಿ ಶರೀರವು ನಿಂತಿರುತ್ತದೆ ; ಶರೀರದಲ್ಲಿ ಪ್ರಾಣವು ನಿಂತಿರುತ್ತದೆ. ಆ ಈ ಅನ್ನವು ಅನ್ನ ದಲ್ಲಿ ನಿಂತಿರುತ್ತದೆ.

(ಭಾಷ್ಯ)

೨ಳಂ. ಪ್ರಾಣೋ ವೈ ಅನ್ನಮ್, ಶರೀರಾನ್ತರ್ಭಾವಾತ್ ಪ್ರಾಣಸ್ಯ । ಯತ್ ಯಸ್ಯಾನ್ತಃ ಪ್ರತಿಷ್ಠಿತಮ್ ಭವತಿ ತತ್ ತಸ್ಯ ಅನ್ನಂ ಭವತಿ ಇತಿ । ಶರೀರೇ ಚ ಪ್ರಾಣಃ ಪ್ರತಿಷ್ಠಿತಃ । ತಸ್ಮಾತ್ ಪ್ರಾಣೋಽನ್ನಮ್, ಶರೀರಮ್ ಅನ್ನಾದಮ್ । ತಥಾ ಶರೀರಮಪಿ ಅನ್ನಮ್, ಪ್ರಾಣೋಽನ್ನಾದಃ । ಕಸ್ಮಾತ್ ? ಪ್ರಾಣೇ ಶರೀರಂ ಪ್ರತಿಷ್ಠಿತಮ್, ತನ್ನಿಮಿತ್ತತ್ವಾತ್ ಶರೀರಸ್ಥಿತೇಃ । ತಸ್ಮಾತ್ ತದೇತತ್ ಉಭಯಂ ಶರೀರಂ ಪ್ರಾಣಶ್ಚ ಅನ್ನಮನ್ನಾದಶ್ಚ । ಯೇನ ಅನ್ಯೋನ್ಯಸ್ಮಿನ್ ಪ್ರತಿಷ್ಠಿತಂ ತೇನ ಅನ್ನಮ್ ; ಯೇನ ಅನ್ಯೋನ್ಯಸ್ಯ ಪ್ರತಿಷ್ಠಾ ತೇನ ಅನ್ನಾದಃ । ತಸ್ಮಾತ್ ಪ್ರಾಣಃ ಶರೀರಂ ಚ ಉಭಯಮ್ ಅನ್ನಮ್ ಅನ್ನಾದಂ ಚ ॥

(ಭಾಷ್ಯಾರ್ಥ)

ಪ್ರಾಣವೇ ಅನ್ನವು, ಏಕೆಂದರೆ ಪ್ರಾಣವು ಶರೀರದೊಳಗೆ ಇರುತ್ತದೆ.

---

1. ಜ್ಞಾನಿಗೆ ಉಪದೇಶವು ಹೊಂದುವದಿಲ್ಲವಾದ್ದರಿಂದ ಜ್ಞಾನಿಯು ವ್ರತದಂತೆ ಅದನ್ನು ನಡೆಯಿಸುತ್ತಲೇ ಇರುವನೆಂದೂ ಸಾಧಕರು ಹಾಗೆ ಮಾಡಬೇಕೆಂದೂ ಅರ್ಥಮಾಡಿಕೊಳ್ಳಬೇಕು. ಅನ್ನಬ್ರಹ್ಮೋಪಾಸಕನು ಅನ್ನವನ್ನು ನಿಂದಿಸಬಾರದು ಎಂದು ವಿಧಿಯನ್ನು ಕಲ್ಪಿಸಿದರೆ ಯಾವ ತೊಂದರೆಯೂ ಇರುವದಿಲ್ಲ.

ಯಾವದು ಯಾವದರ ಒಳಗೆ ಇದ್ದುಕೊಂಡಿರುವದೋ ಅದು ಅದಕ್ಕೆ ಅನ್ನವು ಆಗುತ್ತದೆ ಎಂದು[1] ಪ್ರಸಿದ್ಧವು. ಶರೀರದೊಳಗೆ ಪ್ರಾಣವು ಇದ್ದುಕೊಂಡಿರುತ್ತದೆ ; ಆದ್ದರಿಂದ ಪ್ರಾಣವು ಅನ್ನವು, ಶರೀರವು ಅನ್ನಾದವು. ಇದರಂತೆ ಶರೀರವೂ ಅನ್ನವು, ಪ್ರಾಣವು ಅನ್ನಾದವು. ಹೇಗೆ ? ಎಂದರೆ ಪ್ರಾಣದಲ್ಲಿ ಶರೀರವು ಇದ್ದು ಕೊಂಡಿರುತ್ತದೆ ; ಏಕೆಂದರೆ ಆ (ಪ್ರಾಣ)ನಿಮಿತ್ತದಿಂದಲೇ ಶರೀರವು ನಿಂತಿರುತ್ತದೆ. ಆದ್ದರಿಂದ ಆ ಈ ಶರೀರ, ಪ್ರಾಣ - ಎಂಬೆರಡು ಅನ್ನವೂ ಅನ್ನಾದವೂ (ಆಗಿವೆ). ಒಂದು ಇನ್ನೊಂದರಲ್ಲಿ ಇದ್ದುಕೊಂಡಿರುತ್ತದೆಯಲ್ಲ, ಆದರಿಂದ ಅನ್ನವು ; ಒಂದು ಇನ್ನೊಂದಕ್ಕೆ ಆಶ್ರಯವಾಗಿರುತ್ತದೆಯಲ್ಲ, ಆದರಿಂದ ಅನ್ನಾದವು. ಆದ್ದರಿಂದ ಪ್ರಾಣವೂ ಶರೀರವೂ ಎರಡೂ ಅನ್ನವೂ ಅನ್ನಾದವೂ (ಆಗಿರುತ್ತವೆ).

ಈ ಉಪಾಸನೆಯ ಫಲ

ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥೩॥

೩. ಯಾವನು ಈ ಅನ್ನವು ಅನ್ನದಲ್ಲಿ ಇದ್ದುಕೊಂಡಿರುವದೆಂಬುದನ್ನು ಅರಿತುಕೊಳ್ಳುವನೋ ಅವನು ನೆಲೆನಿಲ್ಲುತ್ತಾನೆ. ಅನ್ನವಂತ (ನಾಗುತ್ತಾನೆ), ಅನ್ನಾದನಾಗುತ್ತಾನೆ ; ಪ್ರಜೆಯಿಂದಲೂ ಪಶುಗಳಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ದೊಡ್ಡವನಾಗುತ್ತಾನೆ. ಕೀರ್ತಿಯಿಂದಲೂ ದೊಡ್ಡವನಾಗುತ್ತಾನೆ.

(ಭಾಷ್ಯ)

೨೪೧. ಸ ಯ ಏವಮ್ ಏತದನ್ನಮ್ ಅನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ ಅನ್ನಾನ್ನಾದಾತ್ಮನ್ಯೇವ । ಕಂ ಚ ಅನ್ನವಾನನ್ನಾದೋ ಭವತಿ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಯಾವನು ಹೀಗೆ ಈ ಅನ್ನವು ಅನ್ನದಲ್ಲಿ ಇದ್ದುಕೊಂಡಿರುವದೆಂಬುದನ್ನು ಅರಿತುಕೊಳ್ಳುವನೋ ಅವನು ಅನ್ನ ಮತ್ತು ಅನ್ನಾದ - ಇವುಗಳ ರೂಪದಿಂದಲೇ

1. ಉದಾಹರಣೆಗೆ ಶರೀರಕ್ಕೆ ಅನ್ನವಾದದ್ದು ಶರೀರದೊಳಗೆ ಇರುತ್ತದೆ.

ನೆಲೆನಿಲ್ಲುತ್ತಾನೆ [1] ಮತ್ತು "ಅನ್ನವಂತನಾಗುತ್ತಾನೆ, ಅನ್ನಾದನಾಗುತ್ತಾನೆ" ಇದೇ ಮುಂತಾದವನ್ನು ಹಿಂದಿನಂತೆ (ಅರ್ಥಮಾಡಿಕೊಳ್ಳಬೇಕು).

ಅನ್ನವನ್ನು ಬೇಡವೆನ್ನಬಾರದು

(ಅಥಾಷ್ಟಮೋಽನುವಾಕಃ)

ಅನ್ನಂ ನ ಪರಿಚಕ್ಷೀತ । ತದ್ ವ್ರತಮ್ ॥೧॥

೧. ಅನ್ನವನ್ನು ಬೇಡವೆನ್ನಬಾರದು. ಅದು ವ್ರತವು.

(ಭಾಷ್ಯ)

೨೪೨. ಅನ್ನಂ ನ ಪರಿಚಕ್ಷೀತ ನ ಪರಿಹರೇತ್ । ತದ್ ವ್ರತಮ್ । ಪೂರ್ವವತ್ ಸ್ತುತ್ಯರ್ಥಮ್ । ತದೇವಂ ಶುಭಾಶುಭಕಲ್ಪನಯಾ ಅಪರಿಗೃಹ್ಯಮಾಣಂ ಸ್ತುತಂ ಮಹೀಕೃತಮ್ ಅನ್ನಂ ಸ್ಯಾತ್ ॥

(ಭಾಷ್ಯಾರ್ಥ)

ಅನ್ನವನ್ನು ಬೇಡವೆನ್ನಬಾರದು, ತಿರಸ್ಕರಿಸಬಾರದು. 'ಅದು ವ್ರತವು' ಎಂಬುದು ಹಿಂದೆ ಹೇಳಿದಂತೆ (ಅನ್ನವನ್ನು) ಹೊಗಳುವದಕ್ಕೆ. ಹೀಗೆ ಒಳ್ಳೆಯದು, ಕೆಟ್ಟದ್ದು - ಎಂಬ ಕಲ್ಪನೆಯಿಂದ (ಅನ್ನವನ್ನು) ಭಾವಿಸದೆ[2] ಇರುವದರಿಂದ ಅನ್ನವನ್ನು ಹೊಗಳಿ ದೊಡ್ಡದುಮಾಡಿದಂತೆ ಆಗುತ್ತದೆ.

(ಭಾಷ್ಯ)

೨೪೩. ಏವಂ ಯಥೋಕ್ತಮ್ ಉತ್ತರೇಷ್ವಪಿ "ಆಪೋ ವಾ ಅನ್ನಮ್" ಇತ್ಯಾದಿಷು ಯೋಜಯೇತ್ ॥

(ಭಾಷ್ಯಾರ್ಥ)

'ನೀರೇ ಅನ್ನವು' ಮುಂತಾದ ಮುಂದಿನ ವಾಕ್ಯಗಳಲ್ಲಿಯೂ ಹೀಗೆಯೇ ಹಿಂದೆ ಹೇಳಿದ (ವ್ಯಾಖ್ಯಾನವನ್ನೇ)[3] ಹೊಂದಿಸಿಕೊಳ್ಳಬೇಕು.

1. ಶರೀರ, ಪ್ರಾಣ - ಇವುಗಳಲ್ಲಿ ಒಂದು ಅನ್ನವು ಮತ್ತೊಂದರಲ್ಲಿರುವದೆಂದು ಉಪಾಸನೆಮಾಡಿರುವನು ಆಯಾ ಅನ್ನ, ಅನ್ನಾದ ಇವುಗಳ ರೂಪದಿಂದ ನೆಲೆನಿಲ್ಲುತ್ತಾನೆ.

2. 'ಅಪರಿಹ್ರಿಯಮಾಣಮ್' ಎಂಬ ವಾ॥ ಪಾಠಕ್ಕೆ 'ಬಿಡದೆ ಇದ್ದರೆ' ಎಂದರ್ಥ

3. ಒಂದನ್ನೊಂದು ಆವಲಂಬಿಸಿಕೊಂಡಿರುವದರಿಂದ ಒಂದೊಂದೂ ಅನ್ನವೂ ಅನ್ನಾದವೂ ಆಗಿರುವದರಿಂದ ಹಿಂದಿನ ಭಾಷ್ಯದಲ್ಲಿ ಹೇಳಿದಂತೆ ತಿಳಿಯಬೇಕು. ಫಲವಾಕ್ಯದ ಅರ್ಥವನ್ನೂ ಹಾಗೆಯೇ ಸಂದರ್ಭಕ್ಕೆ ತಕ್ಕಂತೆ ಹೊಂದಿಸಿಕೊಂಡು ಅರ್ಥಮಾಡಿಕೊಳ್ಳಬೇಕು.

ಅಪ್ಪು, ಜ್ಯೋತಿ - ಎಂಬ ಅನ್ನಾನ್ನಾದಗಳು

ಆಪೋ ವಾ ಅನ್ನಮ್ । ಜ್ಯೋತಿರನ್ನಾದಮ್ । ಅಪ್ಸುಜ್ಯೋತಿಃ ಪ್ರತಿಷ್ಠಿತಮ್ । ಜ್ಯೋತಿಷ್ಯಾಪಃ ಪ್ರತಿಷ್ಠಿತಾಃ । ತದೇತದನ್ನಮನ್ನೇ ಪ್ರತಿಷ್ಠಿತಮ್ ॥೨॥

೨. ಅಪ್ಪೇ ಅನ್ನವು, ಜ್ಯೋತಿಯು ಅನ್ನಾದವು ; ಅಪ್ಪಿನಲ್ಲಿ ಜ್ಯೋತಿಯು ಇದ್ದುಕೊಂಡಿರುತ್ತದೆ. ಜ್ಯೋತಿಯಲ್ಲಿ ಅಪ್ಪು ಇದ್ದುಕೊಂಡಿರುತ್ತದೆ. ಆ ಈ ಅನ್ನವು ಅನ್ನದಲ್ಲಿದ್ದುಕೊಂಡಿದೆ.

ಈ ಉಪಾಸನೆಯ ಫಲ

ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥೩॥

೩. ಯಾವನು ಈ ಅನ್ನವು ಅನ್ನದಲ್ಲಿದ್ದುಕೊಂಡಿರುವದನ್ನು ಅರಿತುಕೊಳ್ಳುವನೋ ಅವನು ನೆಲೆನಿಲ್ಲುತ್ತಾನೆ, ಅನ್ನವಂತ(ನಾಗುತ್ತಾನೆ), ಅನ್ನಾದನಾಗುತ್ತಾನೆ. ಪ್ರಜೆಯಿಂದಲೂ ಪಶುಗಳಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ದೊಡ್ಡವನಾಗುತ್ತಾನೆ ; ಕೀರ್ತಿಯಿಂದಲೂ ದೊಡ್ಡವನಾಗುತ್ತಾನೆ.

ಅನ್ನವನ್ನು ಬಹುವಾಗಿ ಮಾಡಬೇಕು

(ಅಥ ನವಮೋಽನುವಾಕಃ)

ಅನ್ನಂ ಬಹು ಕುರ್ವೀತ । ತದ್ ವ್ರತಮ್ ॥೧॥

೧. ಅನ್ನವನ್ನು ಬಹುವಾಗಿ ಮಾಡಿಕೊಳ್ಳಬೇಕು ; ಅದು ವ್ರತವು.

(ಭಾಷ್ಯ)

೨೪೪. 'ಅಪ್ಸು ಜ್ಯೋತಿಃ' ಇತಿ ಅಬ್ಜ್ಯೋತಿಷೋರನ್ನಾನ್ನಾದಗುಣತ್ವೇನ, ಉಪಾಸಕಸ್ಯ ಅನ್ನಸ್ಯ ಬಹುಕರಣಂ ವ್ರತಮ್ ॥

(ಭಾಷ್ಯಾರ್ಥ)

'ಅಪ್ಪಿನಲ್ಲಿ ಜ್ಯೋತಿ(ಯಿದ್ದುಕೊಂಡಿದೆ)' ಎಂದು (ಮುಂತಾದ ಕಾರಣ ದಿಂದ) ಅಪ್ಪು, ಜ್ಯೋತಿ - ಇವುಗಳನ್ನು ಅನ್ನ ಮತ್ತು ಅನ್ನಾದ ಎಂಬ ಗುಣ ದಿಂದ ಕೂಡಿದವನ್ನಾಗಿ ಉಪಾಸನೆಮಾಡುತ್ತಿರುವವನಿಗೆ ಅನ್ನವನ್ನು ಬಹುವಾಗಿ ಮಾಡಿಕೊಳ್ಳುವದು ವ್ರತವು.

ಪೃಥಿವಿ, ಆಕಾಶ - ಎಂಬ ಅನ್ನಾನ್ನಾದಗಳು

ಪೃಥಿವೀ ವಾ ಅನ್ನಮ್ । ಆಕಾಶೋಽನ್ನಾದಃ । ಪೃಥಿವ್ಯಾಮಾಕಾಶಃ ಪ್ರತಿಷ್ಠಿತಃ । ಆಕಾಶೇ ಪೃಥಿವೀ ಪ್ರತಿಷ್ಠಿತಾ । ತದೇತದನ್ನಮನ್ನೇ ಪ್ರತಿಷ್ಠಿತಮ್ ॥೨॥

೨. ಪೃಥಿವಿಯೇ ಅನ್ನವು, ಆಕಾಶವೇ ಅನ್ನಾದವು. ಪೃಥಿವಿಯಲ್ಲಿ ಆಕಾಶವು ಇದ್ದುಕೊಂಡಿರುತ್ತದೆ. ಆಕಾಶದಲ್ಲಿ ಪೃಥಿವಿಯು ಇದ್ದುಕೊಂಡಿರು ತ್ತದೆ. ಆ ಈ ಅನ್ನವು ಅನ್ನದಲ್ಲಿ ಇದ್ದುಕೊಂಡಿದೆ.

ಈ ಉಪಾಸನೆಯ ಫಲ

ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನ ವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿ ರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥೨॥

೨. ಯಾವನು ಈ ಅನ್ನವು ಅನ್ನದಲ್ಲಿ ಇದ್ದುಕೊಂಡಿರುವ ದೆಂಬುದನ್ನು ಅರಿತುಕೊಳ್ಳವನೋ ಅವನು ನೆಲೆನಿಲ್ಲುತ್ತಾನೆ. ಅನ್ನವಂತ (ನಾಗುತ್ತಾನೆ) ; ಅನ್ನಾದನಾಗುತ್ತಾನೆ. ಪ್ರಜೆಯಿಂದಲೂ ಪಶುಗಳಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ದೊಡ್ಡವನಾಗುತ್ತಾನೆ. ಕೀರ್ತಿಯಿಂದ ದೊಡ್ಡ ವನಾಗುತ್ತಾನೆ.

ವಸತಿ ಇಲ್ಲವೆನ್ನಬಾರದು, ಹೆಚ್ಚು ಅನ್ನವನ್ನು ಸಂಗ್ರಹಿಸಬೇಕು

(ಅಥ ದಶಮೋಽನುವಾಕಃ)

ನ ಕಞ್ಚನ ವಸತೌ ಪ್ರತ್ಯಾಚಕ್ಷೀತ । ತದ್ ವ್ರತಮ್ । ತಸ್ಮಾದ್ ಯಯಾ

ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್ । ಅರಾಧ್ಯಸ್ಮಾ ಅನ್ನಮಿತ್ಯಾಚಕ್ಷತೇ ॥೧॥

೧. ವಸತಿಯ (ವಿಷಯ)ದಲ್ಲಿ ಯಾರನ್ನೂ ಬೇಡವೆನ್ನಬಾರದು. ಅದು ವ್ರತವು. ಆದ್ದರಿಂದ ಯಾವದಾದರೂ ವಿಧದಿಂದ ಬಹು ಅನ್ನವನ್ನು ಪಡೆದುಕೊಳ್ಳಬೇಕು. 'ಇವನಿಗೆ ಅನ್ನವು ಸಿದ್ಧವಾಗಿದೆ' ಎನ್ನುತ್ತಾರೆ.

(ಭಾಷ್ಯ)

೨೪೫. ತಥಾ ಪೃಥಿವ್ಯಾಕಾಶೋಪಾಸಕಸ್ಯ । ವಸತೌ ವಸತಿನಿಮಿತ್ತಂ ಕಂಚನ ಕಂಚಿದಪಿ ನ ಪ್ರತ್ಯಾಚಕ್ಷೀತ । ವಸತ್ಯರ್ಥಮಾಗತಂ ನ ನಿವಾರಯೇತ್ ಇತ್ಯರ್ಥಃ । ವಾಸೇ ಚ ದತ್ತೇ ಹಿ[1] ಅವಶ್ಯಮ್ ಅಶನಂ ದಾತವ್ಯಮ್ । ತಸ್ಮಾತ್ ಯಯಾ ಕಯಾ ಚ ವಿಧಯಾ ಯೇನ ಕೇನ ಚ ಪ್ರಕಾರೇಣ ಬಹ್ವನ್ನಂ ಪ್ರಾಪ್ನುಯಾತ್ ಬಹ್ವನ್ನಸಂಗ್ರಹಂ ಕುರ್ಯಾತ್ ಇತ್ಯರ್ಥಃ । ಯಸ್ಮಾತ್ ಅನ್ನವನ್ತೋ ವಿದ್ವಾಂಸಃ ಅಭ್ಯಾಗತಾಯ ಅನ್ನಾರ್ಥಿನೇ ಅರಾಧಿ ಸಂಸಿದ್ಧಮ್ ಅಸ್ಮೈ ಅನ್ನಮ್ ಇತಿ ಆಚಕ್ಷತೇ, ನ ನಾಸ್ತಿ ಇತಿ ಪ್ರತ್ಯಾಖ್ಯಾನಂ ಕುರ್ವನ್ತಿ, ತಸ್ಮಾಚ್ಚ ಹೇತೋಃ ಬಹು ಅನ್ನಂ ಪ್ರಾಪ್ನುಯಾತ್ ಇತಿ ಪೂರ್ವೇಣ ಸಂಬನ್ಧಃ ॥

(ಭಾಷ್ಯಾರ್ಥ)

ಇದರಂತೆ ಪೃಥಿವಿ, ಆಕಾಶ - ಇವುಗಳನ್ನು ಉಪಾಸನೆಮಾಡುವವನಿಗೆ (ಇದು ವ್ರತವು.)[2] ವಸತಿಯ (ವಿಷಯದಲ್ಲಿ) ಎಂದರೆ ವಸತಿಯ ಕಾರಣದಿಂದ ಯಾರನ್ನೂ ಯಾರೊಬ್ಬನನ್ನೂ ಬೇಡವೆನ್ನಬಾರದು. ವಸತಿಗಾಗಿ ಬಂದವನನ್ನು ತಿರಸ್ಕರಿಸಬಾರದು - ಎಂದರ್ಥ. ವಾಸವನ್ನು ಕೊಟ್ಟಬಳಿಕ ಅವಶ್ಯವಾಗಿ ಊಟವನ್ನು ಕೊಡಬೇಕಾಗುವದಷ್ಟೆ ? ಆದ್ದರಿಂದ ಯಾವದಾದರೂ ವಿಧದಿಂದ ಯಾವದೊಂದು ಪ್ರಕಾರದಿಂದಲೇ ಆಗಲಿ, ಬಹಳ ಅನ್ನವನ್ನು ಪಡೆದುಕೊಳ್ಳಬೇಕು, ಬಹಳವಾಗಿ ಅನ್ನವನ್ನು ಕೂಡಿಹಾಕಿಕೊಳ್ಳಬೇಕು - ಎಂದು ಅರ್ಥ. ಅನ್ನವುಳ್ಳ ವಿವೇಕಿಗಳು ಅನ್ನಕ್ಕಾಗಿ ಮನೆಗೆ ಬಂದವನಿಗೆ 'ಇವನಿಗೆ ಅನ್ನವು ಸಿದ್ಧವಾಗಿದೆ, ಸಜ್ಜಾಗಿದೆ' ಎನ್ನುತ್ತಾರಲ್ಲವೆ ? 'ಇಲ್ಲ' ಎಂದು ತಿರಸ್ಕಾರಮಾಡುವದಿಲ್ಲವಲ್ಲವೆ ? ಆ ಕಾರಣ

1. ಈ ಮಾತು ವಾ॥ ಪಾಠದಲ್ಲಿಲ್ಲ ; ಈ ವಾಕ್ಯದಲ್ಲಿ ಒಂದು 'ಹಿ' ಹೆಚ್ಚಾಗಿಯೂ ಇದೆ.

2. 'ತದ್ ವ್ರತಮ್' ಎಂಬ ಮಾತುಗಳು ಭಾಷ್ಯದಲ್ಲಿ ಬಿಟ್ಟುಹೋಗಿವೆ ; ಅಥವಾ ಅನುಷಂಗವನ್ನು ಮಾಡಿಕೊಳ್ಳಬೇಕು.

ದಿಂದಲೂ 'ಬಹಳ ಅನ್ನವನ್ನು ಪಡೆದುಕೊಳ್ಳಬೇಕು' ಎಂಬ ಹಿಂದಿನ (ವಾಕ್ಯಕ್ಕೆ) ಸಂಬಂಧವನ್ನು ಮಾಡಿಕೊಳ್ಳಬೇಕು.

ಅನ್ನದಾನದ ಹೆಚ್ಚುಗಾರಿಕೆ

(ಭಾಷ್ಯ)

೨೪೬. ಅಥ ಚ ಅನ್ನದಾನಸ್ಯ ಮಾಹಾತ್ಮ್ಯಮ್ ಉಚ್ಯತೇ । ಯಥಾ ಯತ್ಕಾಲಂ ಪ್ರಯಚ್ಛತಿ ಅನ್ನಮ್ ತಥಾ ತತ್ಕಾಲಮೇವ ಪ್ರತ್ಯುಪನಮತೇ । ಕಥಮ್ ಇತಿ ? ತದೇತದಾಹ -

(ಭಾಷ್ಯಾರ್ಥ)

ಮತ್ತು ಅನ್ನದಾನದ ಮಾಹಾತ್ಮ್ಯವನ್ನು (ಶ್ರುತಿ) ಹೇಳುತ್ತದೆ. ಹೇಗೆ ಯಾವ ಕಾಲದಲ್ಲಿ ಅನ್ನವನ್ನು ಕೊಡುತ್ತಾರೋ ಹಾಗೆಯೇ ಅದೇ ಕಾಲದಲ್ಲಿ (ಅದು ಅವರಿಗೆ) ಹಿಂತಿರುಗಿ ಬರುತ್ತದೆ. ಹೇಗೆ ? ಎಂದರೆ ಆ ಇದನ್ನು (ಶ್ರುತಿ) ಹೇಳುತ್ತದೆ :-

ಏತದ್ವೈ ಮುಖಿತೋಽನ್ನಗ್ಂ ರಾದ್ಧಮ್ । ಮುಖಿತೋಽಸ್ಮಾ ಅನ್ನಗ್ಂ ರಾಧ್ಯತೇ । ಏತದ್ವೈ ಮಧ್ಯತೋಽನ್ನಗ್ಂ ರಾದ್ಧಮ್ । ಮಧ್ಯತೋಽಸ್ಮಾ ಅನ್ನಗ್ಂ ರಾಧ್ಯತೇ । ಏತದ್ವಾ ಅನ್ತತೋಽನ್ನಗ್ಂ ರಾದ್ಧಮ್ । ಅನ್ತತೋಽಸ್ಮಾ ಅನ್ನಗ್ಂ ರಾಧ್ಯತೇ । ಯ ಏವಂ ವೇದ ॥೨॥

೨. ಇದೇ ಅನ್ನವು ಮುಖ್ಯದಿಂದ ಸಿದ್ಧವಾದರೆ ಮುಖ್ಯದಿಂದ ಇವನಿಗೆ ಅನ್ನವು ಸಿದ್ಧವಾಗುತ್ತದೆ. ಇದೇ ಅನ್ನವು ಮಧ್ಯದಿಂದ ಸಿದ್ಧವಾದರೆ ಮಧ್ಯದಿಂದ ಇವನಿಗೆ ಅನ್ನವು ಸಿದ್ಧವಾಗುತ್ತದೆ. ಇದೇ ಅನ್ನವು ಅಂತ್ಯದಿಂದ ಸಿದ್ಧವಾದರೆ ಅಂತ್ಯದಿಂದ ಇವನಿಗೆ ಅನ್ನವು ಸಿದ್ಧವಾಗುತ್ತದೆ. (ಇದು) ಯಾವನು ಹೀಗೆಂದು ಅರಿಯುವನೋ (ಅವನಿಗೆ).

(ಭಾಷ್ಯ)

೨೪೭. ಏತದ್ ವೈ ಅನ್ನಂ ಮುಖಿತಃ ಮುಖ್ಯೇ ಪ್ರಥಮೇ ವಯಸಿ ಮುಖ್ಯಯಾ ವಾ ವೃತ್ತ್ಯಾ ಪೂಜಾಪುರಸ್ಸರಮ್ ಅಭ್ಯಾಗತಾಯ ಅನ್ನಾರ್ಥಿನೇ ರಾದ್ಧಂ ಸಂಸಿದ್ಧಂ

ಪ್ರಯಚ್ಛತಿ ಇತಿ ಶೇಷಃ[1] । ತಸ್ಯ ಕಿಂ ಫಲಂ ಸ್ಯಾತ್ ಇತಿ ? ಉಚ್ಯತೇ । ಮುಖಿತಃ ಪೂರ್ವೇ ವಯಸಿ ಮುಖ್ಯಯಾ ವಾ ವೃತ್ತ್ಯಾ ಅಸ್ಮೈ ಅನ್ನದಾಯ ಅನ್ನಂ ರಾಧ್ಯತೇ । ಯಷ್ಠಾದತ್ತಮ್ ಉಪತಿಷ್ಠತೇ ಇತ್ಯರ್ದಃ । ಏವಂ ಮಧ್ಯತಃ ಮಧ್ಯಮೇ ವಯಸಿ ಮಧ್ಯಮೇನ ವಾ ಉಪಚಾರೇಣ । ತಥಾ ಅನ್ತತಃ ಅನ್ತೇ ವಯಸಿ ಜಘನ್ಯೇನ ವಾ ಉಪಚಾರೇಣ ಪರಿಭವೇನ । ತಥೈವ ಅಸ್ಮೈ ರಾಧ್ಯತೇ ಸಂಸಿಧ್ಯತಿ ಅನ್ನಮ್ । ಯ ಏವಂ ವೇದ ಯ ಏವಮ್ ಅನ್ನಸ್ಯ ಯಥೋಕ್ತಂ ಮಾಹಾತ್ಮ್ಯಂ ವೇದ ತದ್ದಾನಸ್ಯ ಯಥೋಕ್ತಂ ಫಲಮ್ ಉಪನಮತೇ[2] ॥

(ಭಾಷ್ಯಾರ್ಥ)

ಇದೇ ಅನ್ನಸ್ಯ ಮುಖಿತಃ ಎಂದರೆ ಮುಖ್ಯವಾದ ಮೊದಲನೆಯ ವಯಸ್ಸಿನಲ್ಲಿ ಅಥವಾ ಮುಖ್ಯವಾದ ವೃತ್ತಿಯಿಂದ ಎಂದರೆ ಗೌರವಪೂರ್ವಕವಾಗಿ[3] ಅನ್ನಕ್ಕಾಗಿ ಮನೆಗೆ ಬಂದವನಿಗೆ ಸಿದ್ಧವಾದರೆ ಎಂದರೆ ಸಜ್ಜುಮಾಡಿ 'ಕೊಟ್ಟರೆ' ಎಂದು ಸೇರಿಸಿಕೊಳ್ಳಬೇಕು. ಅವನಿಗೆ ಯಾವ ಫಲವಾಗುವದು ? ಎಂದರೆ (ಶ್ರುತಿ)ಹೇಳುತ್ತದೆ. 'ಮುಖಿತಃ' ಎಂದರೆ ಮೊದಲನೆಯ ವಯಸ್ಸಿನಲ್ಲಿ ಅಥವಾ ಮುಖ್ಯವಾದ ವೃತ್ತಿಯಿಂದ ಈ ಅನ್ನದಾನಿಗೆ (ಅವನು) ಕೊಟ್ಟಂತೆಯೇ ಸಿದ್ಧವಾಗುತ್ತದೆ, ಬಂದು ಸೇರುತ್ತದೆ ಎಂದರ್ಥ. ಹೀಗೆಯೇ 'ಮಧ್ಯತಃ' ಎಂದರೆ ನಡುವಿನ ವಯಸ್ಸಿನಲ್ಲಿ ಅಥವಾ ನಡುತರದ ಉಪಚಾರದಿಂದ, ಹಾಗೂ 'ಅನ್ತತಃ' ಎಂದರೆ ಕಡೆಯ ವಯಸ್ಸಿನಲ್ಲಿ ಅಥವಾ ಕೀಳಾದ ಉಪಚಾರದಿಂದ ಎಂದರೆ ತಿರಸ್ಕಾರ (ಭಾವ)ದಿಂದ (ಕೊಟ್ಟರೆ) ಹಾಗೆಯೇ ಇವನಿಗೆ ಅನ್ನವು ಸಿದ್ಧವಾಗುತ್ತದೆ, ಬರುತ್ತದೆ. ಯಾವನು ಹೀಗೆಂದು ; ತಿಳಿಯುವನೋ ಎಂದರೆ ಯಾವನು ಹೀಗೆಂದು ಮೇಲೆ ಹೇಳಿದ ಅನ್ನದ ಮಾಹಾತ್ಮ್ಯವನ್ನು ಅರಿಯುವನೋ ಅವನ ದಾನಕ್ಕೆ ಮೇಲೆ ಹೇಳಿದ ಫಲವು[4] (ಅವನಲ್ಲಿಗೆ) ಬಂದು ಸೇರುತ್ತದೆ.

1. 'ವಾಕ್ಯಶೇಷತಃ' ವಾ॥ ಪಾಠ.

2 ಉಪನಮೇತ್ ಎಂಬ ಆ॥ ಪಾಠಕ್ಕಿಂತ ಇದು ಉತ್ತಮ. ಈ ವಾ॥ ಪಾಠದಲ್ಲಿ ತದ್ದಾನಸ್ಯ ಎಂಬ ಮಾತಿನ ಮುಂದೆ 'ಚ ಫಲಂ ತಸ್ಯ' ಎಂಬ ಮಾತುಗಳು ಹೆಚ್ಚಾಗಿವೆ.

3. ಮುಖವು ಮೊದಲು ಕಾಣುವಂತೆ ಇರುವ ಮೊದಲನೆಯ ವಯಸ್ಸು ಅಥವಾ ಉತ್ತಮವಾದ ಉಪಚಾರವು ಎಂಬುದು ಮುಖ್ಯತಃ ಎಂಬ ಮಾತಿನ ಅರ್ಥವೆಂದು ಭಾವ. ಹೀಗೆಯೇ ಮಧ್ಯತಃ, ಅನ್ತತಃ ಎಂಬ ಮಾತುಗಳಿಗೂ ಎರಡೆರಡು ಅರ್ಥ.

4. "ಮಾಹಾತ್ಮ್ಯವನ್ನೂ ಅದರ ದಾನದ ಫಲವನ್ನೂ ಅರಿಯುವನೋ" ಎಂದು ವಾ॥ ಪಾಠಕ್ಕೆ ಅರ್ಥ.

೫. ಬ್ರಹ್ಮದ ಬಗೆಬಗೆಯ ಉಪಾಸನೆಗಳು

ಆಧ್ಯಾತ್ಮಿಕ ಉಪಾಸನೆಗಳು

(ಭಾಷ್ಯ)

೨೪೮ ಇದಾನೀಂ ಬ್ರಹ್ಮಣಃ ಉಪಾಸನಪ್ರಕಾರ ಉಚ್ಯತೇ -

(ಭಾಷ್ಯಾರ್ಥ)

ಈಗ ಬ್ರಹ್ಮವನ್ನು ಉಪಾಸನೆಮಾಡುವ ರೀತಿಯನ್ನು[1] ಹೇಳಲಾಗುತ್ತದೆ.

ಕ್ಷೇಮ ಇತಿ ವಾಚಿ । ಯೋಗಕ್ಷೇಮ ಇತಿ ಪ್ರಾಣಾಪಾನಯೋಃ । ಕರ್ಮೇತಿ ಹಸ್ತಯೋಃ । ಗತಿರಿತಿ ಪಾದಯೋಃ । ವಿಮುಕ್ತಿರಿತಿ ಪಾಯೌ । ಇತಿ ಮಾನುಷೀಃ ಸಮಾಜ್ಞಾಃ ॥೩॥

೩. ಕ್ಷೇಮವೆಂದು ವಾಕ್ಕಿನಲ್ಲಿ, ಯೋಗಕ್ಷೇಮವೆಂದು ಪ್ರಾಣಾಪಾನಗಳಲ್ಲಿ, ಕರ್ಮವೆಂದು ಹಸ್ತಗಳಲ್ಲಿ, ಗತಿ ಎಂದು ಪಾದಗಳಲ್ಲಿ, ಬಿಡುಗಡೆ ಎಂದು ಪಾಯುವಿನಲ್ಲಿ - ಹೀಗೆ ಮಾನುಷವಾದ ಸಮಾಜ್ಞೆಗಳು.

(ಭಾಷ್ಯ)

೨೪೯. ಕ್ಷೇಮಃ ಇತಿ ವಾಚಿ । ಕ್ಷೇಮೋ ನಾಮ ಉಪಾತ್ತಪರಿರಕ್ಷಣಮ್, ಬ್ರಹ್ಮ ವಾಚಿ ಕ್ಷೇಮರೂಪೇಣ ಪ್ರತಿಷ್ಠಿತಮ್ ಇತಿ ಉಪಾಸ್ಯಮ್ । ಯೋಗ ಕ್ಷೇಮಃ ಇತಿ । ಯೋಗಃ ಅನುಪಾತ್ತಸ್ಯ ಉಪಾದಾನಮ್ । ತೌ ಹಿ ಯೋಗಕ್ಷೇಮೌ ಪ್ರಾಣಾಪಾನಯೋಃ[2] ಸತೋರ್ಭವತಃ ಯದ್ಯಪಿ ತಥಾಪಿ ನ ಪ್ರಾಣಾಪಾನನಿಮಿತ್ತಾವೇವ, ಕಿಂ ತರ್ಹಿ ಬ್ರಹ್ಮನಿಮಿತ್ತೌ । ತಸ್ಮಾತ್ ಬ್ರಹ್ಮ ಯೋಗಕ್ಷೇಮಾತ್ಮನಾ ಪ್ರಾಣಾಪಾನಯೋಃ ಪ್ರತಿಷ್ಠಿತಮ್ ಇತಿ ಉಪಾಸ್ಯಮ್ । ವಿಮುತ್ತರೇಷ್ವನ್ಯೇಷು ತೇನ ತೇನಾತ್ಮನಾ ಬ್ರಹ್ಮೈವೋಪಾಸ್ಯಮ್ । ಕರ್ಮಣೋ ಬ್ರಹ್ಮನಿರ್ವರ್ತ್ಯತ್ವಾತ್ ಹಸ್ತಯೋಃ ಕರ್ಮಾತ್ಮನಾ ಬ್ರಹ್ಮ ಪ್ರತಿಷ್ಠಿತಮ್, ಇತಿ ಉಪಾಸ್ಯಮ್ । ಗತಿಃ ಇತಿ ಪಾದಯೋಃ । ವಿಮುಕ್ತಿಃ ಇತಿ ಪಾಯೌ । ಇತಿ ವಿತಾಃ ಮಾನುಷೀಃ ಮನುಷ್ಯೇಷು

1. 'ಪ್ರಕಾರಃ' ಎಂದು ವಿಕವಚನವಿದ್ದರೂ ಇಲ್ಲಿ ಅನೇಕ ಪ್ರಕಾರಗಳನ್ನು ಹೇಳಲಾಗಿದೆ.

2. ಇಲ್ಲಿ "ಬಲವತೋಃ' (ಬಲವುಳ್ಳ) ಎಂಬ ವಿಶೇಷಣವೊಂದು ವಾ।। ಪಾಠದಲ್ಲಿ ಹೆಚ್ಚಾಗಿದೆ.

ಭವಾಃ ಮಾನುಷ್ಯಃ ಸಮಾಜ್ಞಾಃ ಆಧ್ಯಾತ್ಮಿಕ್ಯಃ ಸಮಾಜ್ಞಾಃ ಜ್ಞಾನಾನಿ ವಿಜ್ಞಾನಾನಿ ಉಪಾಸನಾನಿ ಇತ್ಯರ್ಥಃ ।।

(ಭಾಷ್ಯಾರ್ಥ)

ಕ್ಷೇಮವೆಂದು ವಾಕ್ಯನಲ್ಲಿ ; ಕ್ಷೇಮ ಎಂದರೆ ಪಡೆದುಕೊಂಡಿರುವದನ್ನು ಕಾಪಾಡಿಕೊಳ್ಳುವದು. ಬ್ರಹ್ಮವು ವಾಕ್ಯನಲ್ಲಿ ಕ್ಷೇಮರೂಪದಿಂದ ಇರುತ್ತದೆ[1] ಎಂದು ಉಪಾಸನೆಮಾಡಬೇಕು. 'ಯೋಗಕ್ಷೇಮವೆಂದು' (ಎಂಬಲ್ಲಿ) ಯೋಗವೆಂದರೆ ಪಡೆಯದೆ ಇರುವದನ್ನು ಪಡೆದುಕೊಳ್ಳುವದು. ಈ ಯೋಗಕ್ಷೇಮಗಳು ಪ್ರಾಣ, ಅಪಾನ - ಇವುಗಳು ಇರುವಾಗಲೇ ಆಗುತ್ತವೆ ಎಂಬುದೇನೋ ಸರಿಯೇ ; ಆದರೂ (ಅವು ಬರಿಯ) ಪ್ರಾಣಾಪಾನಗಳ ಕಾರಣದಿಂದಲೇ (ದೊರಕುವ)ದಿಲ್ಲ, ಮತ್ತೇನೆಂದರೆ ಬ್ರಹ್ಮವೆಂಬ ಕಾರಣದಿಂದಲೇ[2] (ದೊರಕುತ್ತವೆ). ಆದ್ದರಿಂದ ಬ್ರಹ್ಮವು ಯೋಗಕ್ಷೇಮಗಳ ರೂಪದಿಂದ ಪ್ರಾಣಾಪಾನಗಳಲ್ಲಿ ಇರುತ್ತದೆ ಎಂದು ಉಪಾಸನೆ ಮಾಡಬೇಕು. ಇದರಂತೆ ಮುಂದೆಯೂ ಆಯಾ ರೂಪದಿಂದ ಬ್ರಹ್ಮವನ್ನೇ ಉಪಾಸನೆ ಮಾಡಬೇಕು. ಕರ್ಮವು ಬ್ರಹ್ಮದಿಂದಲೇ ಆಗುವದರಿಂದ[3] ಹಸ್ತಗಳಲ್ಲಿ ಕರ್ಮದ ರೂಪದಿಂದ ಬ್ರಹ್ಮವು ಇರುತ್ತದೆ ಎಂದು ಉಪಾಸನೆಮಾಡಬೇಕು. ಗತಿ ಎಂದು ಪಾದಗಳಲ್ಲಿ, ಬಿಡುವಿಕೆ ಎಂದು ಪಾಯುವಿನಲ್ಲಿ (ಉಪಾಸನೆ ಮಾಡಬೇಕು). ಇಂತಿವು (ಮಾನುಷೀಃ ಮಾನುಷ್ಯಃ) ಮಾನುಷವಾದ ಮನುಷ್ಯರಲ್ಲಿ ಉಂಟಾಗುವ, ಮನುಷ್ಯಸಂಬಂಧವಾದ, ಎಂದರೆ **ಆಧ್ಯಾತ್ಮಿಕವಾದ ಸಮಾಜ್ಞೆಗಳು** ಎಂದರೆ ಜ್ಞಾನಗಳು, ತಿಳಿವಳಿಕೆಗಳು ಉಪಾಸನೆಗಳು ಎಂದರ್ಥ.

ಆಧಿದೈವಿಕವಾದ ಉಪಾಸನೆಗಳು

ಅಥ ದೈವೀಃ । ತೃಪ್ತಿರಿತಿ ವೃಷ್ಟೌ । ಬಲಮಿತಿ ವಿದ್ಯುತಿ । ಯಶ ಇತಿ ಪಶುಷು । ಜ್ಯೋತಿರಿತಿ ನಕ್ಷತ್ರೇಷು । ಪ್ರಜಾತಿರಮೃತ ಮಾನನ್ದ ಇತ್ಯುಪಸ್ಥೇ । ಸರ್ವಮಿತ್ಯಾಕಾಶೇ ।।೪।।

1. ಮಾತಿನಿಂದ ಯಾವದನ್ನು ಕಾಪಾಡಿಕೊಳ್ಳುವೆವೋ ಅದರ ಕ್ಷೇಮವು ಬ್ರಹ್ಮದ ರೂಪವು ಎಂದು ಭಾವಿಸಬೇಕು. ಗೀತೆಯ ೧೦ನೆಯ ಅಧ್ಯಾಯವೇ ಮುಂತಾದ ಕಡೆಗಳಲ್ಲಿ ಹೇಳಿರುವ ವಿಭೂತಿಗಳಂತೆ ಇಲ್ಲಿ ಹೇಳಿರುವ ಬ್ರಹ್ಮರೂಪಗಳನ್ನೂ ಅರಿಯಬೇಕು.

2. ಕ. ೨-೨-೫ನ್ನು ನೋಡಿ.

3. ಪ್ರಾಣಿಗಳ ಪ್ರವೃತ್ತಿಗಳೆಲ್ಲ ಬ್ರಹ್ಮದಿಂದಲೇ ಆಗುವವು ಗೀ. ೧೮-೪೬.

೪. ಇನ್ನು ದೈವ (ಸಮಾಜ್ಞೆಗಳು) : ತೃಪ್ತಿಯೆಂದು ಮಳೆಯಲ್ಲಿ ; ಬಲವೆಂದು ಮಿಂಚಿನಲ್ಲಿ ; ಯಶಸ್ಸೆಂದು ಪಶುಗಳಲ್ಲಿ ; ಜ್ಯೋತಿ ಎಂದು ನಕ್ಷತ್ರಗಳಲ್ಲಿ ; ಪ್ರಜಾತಿ, ಅಮೃತ, ಆನಂದ ಎಂದು ಉಪಸ್ಥದಲ್ಲಿ ; ಎಲ್ಲವೂ ಎಂದು ಆಕಾಶದಲ್ಲಿ.

(ಭಾಷ್ಯ)

೨೫೦. ಅಥ ಅನನ್ತರಂ ದೈವೀಃ ದೈವ್ಯಃ, ದೇವೇಷು ಭವಾಃ ಸಮಾಜ್ಞಾಃ ಉಚ್ಯನ್ತೇ । ತೃಪ್ತಿಃ ಇತಿ ವೃಷ್ಟೌ । ವೃಷ್ಟೇಃ ಅನ್ನಾದಿದ್ವಾರೇಣ ತೃಪ್ತಿ ಹೇತುತ್ವಾತ್ ಬ್ರಹ್ಮೈವ ತೃಪ್ತ್ಯಾತ್ಮನಾ ವೃಷ್ಟೌ ವ್ಯವಸ್ಥಿತಮ್ ಇತಿ ಉಪಾಸ್ಯಮ್ । ತಥಾ ಅನ್ಯೇಷು ತೇನ ತೇನಾತ್ಮನಾ ಬ್ರಹ್ಮೈವೋಪಾಸ್ಯಮ್ । ತಥಾ ಬಲ ರೂಪೇಣ ವಿದ್ಯುತಿ । ಯಶೋರೂಪೇಣ ಪಶುಷು । ಜ್ಯೋತೀರೂಪೇಣ ನಕ್ಷತ್ರೇಷು । ಪ್ರಜಾತಿಃ, ಅಮೃತಮ್, ಅಮೃತತ್ವಪ್ರಾಪ್ತಿಃ ಪುತ್ರೇಣ ಋಣ ವಿಮೋಕ್ಷದ್ವಾರೇಣ, ಆನನ್ದಃ ಸುಖಮ್ ಇತ್ಯೇತತ್ ಸರ್ವಮ್ ಉಪಸ್ಥನಿಮಿ ತ್ತಮ್ ಬ್ರಹ್ಮೈವ ಅನೇನಾತ್ಮನಾ ಪ್ರತಿಷ್ಠಿತಮ್ ಇತಿ ಉಪಾಸ್ಯಮ್ । ಸರ್ವಂ ಹಿ ಆಕಾಶೇ ಪ್ರತಿಷ್ಠಿತಮ್ ಅತಃ ಯತ್ ಸರ್ವಂ ಆಕಾಶೇ, ತದ್ ಬ್ರಹ್ಮೈವ ಇತಿ ಉಪಾಸ್ಯಮ್ ॥

(ಭಾಷ್ಯಾರ್ಥ)

ಇನ್ನು (ಅಧ್ಯಾತ್ಮವಾದ) ಬಳಿಕ (ದೈವೀಃ - ದೈವ್ಯಃ) ದೈವವಾದ ಎಂದರೆ ದೇವತೆಗಳಲ್ಲಿರುವ ಸಮಾಜ್ಞೆಗಳನ್ನು ಹೇಳಲಾಗುತ್ತದೆ. ತೃಪ್ತಿ ಎಂದು ಮಳೆಯಲ್ಲಿ, ಮಳೆಯು ಅನ್ನವೇ ಮುಂತಾದವುಗಳ ಮೂಲಕ ತೃಪ್ತಿಗೆ ಕಾರಣವಾಗಿರುವದ ರಿಂದ ಬ್ರಹ್ಮವೇ ತೃಪ್ತಿಯ ರೂಪದಿಂದ ಮಳೆಯಲ್ಲಿ ಇರುತ್ತದೆ ಎಂದು ಉಪಾಸನೆ ಮಾಡಬೇಕು. ಇದರಂತೆ ಉಳಿದ (ಕಡೆ)ಗಳಲ್ಲಿಯೂ ಆಯಾ ರೂಪದಿಂದ ಬ್ರಹ್ಮವನ್ನೇ[1] ಉಪಾಸನೆಮಾಡಬೇಕು. ಹೀಗೆಯೇ ಬಲರೂಪದಿಂದ ಮಿಂಚಿನಲ್ಲಿ ; ಕೀರ್ತಿಯ ರೂಪದಿಂದ ಪಶುಗಳಲ್ಲಿ ; ಬೆಳಕಿನ ರೂಪದಿಂದ ನಕ್ಷತ್ರಗಳಲ್ಲಿ ; ಮಕ್ಕಳುಮರಿಗಳನ್ನು ಪಡೆಯುವಿಕೆ, ಅಮೃತವು ಎಂದರೆ ಮಗನ ಮೂಲಕ ವಾಗಿ ಋಣವನ್ನು ತೀರಿಸಿಕೊಳ್ಳುವದರ ಮೂಲಕ ಅಮೃತತ್ವವನ್ನು ಪಡೆಯು

1. ಮಳೆಯನ್ನಾಗಲಿ ತೃಪ್ತಿಯನ್ನಾಗಲಿ ಉಪಾಸನೆಮಾಡತಕ್ಕದ್ದಲ್ಲ, ಮಳೆಯಲ್ಲಿ ತೃಪ್ತಿರೂಪದಿಂದ ತೋರುವದೆಂದು ಬ್ರಹ್ಮವನ್ನು ಉಪಾಸನೆಮಾಡಬೇಕು. ಹೀಗೆಯೇ ಮಿಕ್ಕ ಪರ್ಯಾಯಗಳಲ್ಲಿಯೂ ತಿಳಿಯಬೇಕು

ವಿಕೆ,[1] ಆನಂದವು ಎಂದರೆ ಸುಖವು[2] - ಎಂಬುದೆಲ್ಲವೂ ಉಪಸ್ಥೇಂದ್ರಿಯದ ನಿಮಿತ್ತದಿಂದ (ಆಗತಕ್ಕದ್ದು. ಆದ್ದರಿಂದ) ಬ್ರಹ್ಮವೇ[3] ಈ ರೂಪದಿಂದ ಉಪಸ್ಥದಲ್ಲಿರುತ್ತದೆ - ಎಂದು ಉಪಾಸನೆಮಾಡಬೇಕು. ಎಲ್ಲವೂ ಆಕಾಶದಲ್ಲಿ ಇದ್ದುಕೊಂಡಿರುತ್ತದೆಯಲ್ಲವೆ ?[4] ಆದ್ದರಿಂದ ಆಕಾಶದಲ್ಲಿರುವ ಎಲ್ಲ ಎಂಬುದು ಯಾವದೋ ಅದು ಬ್ರಹ್ಮವೇ ಎಂದು ಉಪಾಸನೆಮಾಡಬೇಕು.

ಬ್ರಹ್ಮವು ಬೇರೆಬೇರೆಯ ಧರ್ಮಗಳುಳ್ಳದ್ದೆಂದು ಮಾಡುವ ಉಪಾಸನೆಗಳು

ತತ್ ಪ್ರತಿಷ್ಠೇತ್ಯುಪಾಸೀತ । ಪ್ರತಿಷ್ಠಾವಾನ್ ಭವತಿ । ತನ್ಮಹ ಇತ್ಯುಪಾಸೀತ । ಮಹಾನ್ ಭವತಿ । ತನ್ಮನ ಇತ್ಯುಪಾಸೀತ । ಮಾನವಾನ್ ಭವತಿ । ತನ್ನಮ ಇತ್ಯುಪಾಸೀತ । ನಮ್ಯನ್ತೇಽಸ್ಮೈ ಕಾಮಾಃ । ತತ್ ಬ್ರಹ್ಮೇತ್ಯುಪಾಸೀತ । ಬ್ರಹ್ಮವಾನ್ ಭವತಿ । ತತ್ ಬ್ರಹ್ಮಣಃ ಪರಿಮರ ಇತ್ಯುಪಾಸೀತ । ಪರ್ಯೇಣಂ ಮ್ರಿಯನ್ತೇ ದ್ವಿಷನ್ತಃ ಸಪತ್ನಾಃ । ಪರಿಯೇಽಪ್ರಿಯಾ ಭ್ರಾತೃವ್ಯಾಃ ॥೫॥

೫. ಅದನ್ನು ಪ್ರತಿಷ್ಠೆ ಎಂದು ಉಪಾಸನೆಮಾಡಬೇಕು ; ಪ್ರತಿಷ್ಠಾವಂತನಾಗುತ್ತಾನೆ. ಅದನ್ನು ಮಹತ್ತೆಂದು ಉಪಾಸನೆಮಾಡಬೇಕು, ಮಹಾ(ಪುರುಷ)ನಾಗುತ್ತಾನೆ. ಅದು ಮನಸ್ಸೆಂದು ಉಪಾಸನೆಮಾಡಬೇಕು, ಮಾನವಂತನಾಗುತ್ತಾನೆ. ಅದು ನಮ(ಸ್ಕಾರ)ವೆಂದು ಉಪಾಸನೆಮಾಡಬೇಕು, ಇವನಿಗೆ ಕಾಮಗಳು ನಮಸ್ಕರಿಸುವವು. ಅದು ಬ್ರಹ್ಮವೆಂದು ಉಪಾಸನೆಮಾಡಬೇಕು, ಬ್ರಹ್ಮವುಳ್ಳವನಾಗುತ್ತಾನೆ. ಅದು ಬ್ರಹ್ಮದ ಪರಿಮರವೆಂದು ಉಪಾಸನೆಮಾಡಬೇಕು, ಇವನನ್ನು ಹಗೆಮಾಡುವ ಶತ್ರುಗಳು ಸಾಯುತ್ತಾರೆ, (ಇವನಿಗೆ) ಅಪ್ರಿಯರಾದ ಭ್ರಾತೃವ್ಯರೂ (ಸಾಯುತ್ತಾರೆ).

1. ಪಿತೃಋಣಗಳನ್ನು ತೀರಿಸಿಕೊಂಡು ಮೋಕ್ಷಸಾಧನವನ್ನು ಮಾಡಿ ಮೋಕ್ಷವನ್ನು ಪಡೆಯುವದು.

2. ವಿಷಯಸುಖ.

3. ವಿಷಯತ್ವಬುದ್ಧಿ ಹೋಗಬೇಕು, ಬ್ರಹ್ಮಬುದ್ಧಿ ಬರಬೇಕು.

4. ಆಕಾಶವು ಎಲ್ಲಕ್ಕೂ ಆಧಾರವಾಗಿರುತ್ತದೆ.

(ಭಾಷ್ಯ)

೨೫೧. ತಚ್ಚ ಆಕಾಶಂ ಬ್ರಹ್ಮೈವ । ತಸ್ಮಾತ್ ತತ್ ಸರ್ವಸ್ಯ ಪ್ರತಿಷ್ಠಾ ಇತಿ ಉಪಾಸೀತ । ಪ್ರತಿಷ್ಠಾಗುಣೋಪಾಸನಾತ್ ಪ್ರತಿಷ್ಠಾವಾನ್ ಭವತಿ । ಏವಂ ಪೂರ್ವೇಷ್ವಪಿ ಯದ್ ಯದಧೀನಂ ಫಲಂ[1] ತದ್ ಬ್ರಹ್ಮೈವ । ತದುಪಾಸನಾತ್ ತದ್ವಾನ್ ಭವತಿ ಇತಿ ದ್ರಷ್ಟವ್ಯಮ್ । ಶ್ರುತ್ಯನ್ತರಾಚ್ಚ - 'ತಂ ಯಥಾ ಯಥೋಪಾಸತೇ ತತ್ ತದೇವ ಭವತಿ' (ಶತ. ಬ್ರಾ. ೧೦-೫-೨-೨೦) ಇತಿ । ತತ್ ಮಹಃ ಇತಿ ಉಪಾಸೀತ । ಮಹಃ ಮಹತ್ತ್ವಗುಣವತ್ ತತ್ ಉಪಾಸೀತ । ಮಹಾನ್ ಭವತಿ ತತ್ ಮನಃ ಇತಿ ಉಪಾಸೀತ । ಮನನಂ ಮನಃ ಮಾನವಾನ್ ಭವತಿ । ಮನನಸಮರ್ಥೋ ಭವತಿ । ತತ್ ನಮಃ ಇತಿ ಉಪಾಸೀತ । ನಮನಂ ನಮಃ ನಮನಗುಣವತ್ ತತ್ ಉಪಾಸೀತ । ನಮ್ಯನ್ತೇ ಪ್ರಹ್ವೀಭವನ್ತಿ ಅಸ್ಮೈ ಉಪಾಸಿತ್ರೇ ಕಾಮಾಃ ಕಾಮ್ಯನ್ತ ಇತಿ ಭೋಗ್ಯವಿಷಯಾಃ ಇತ್ಯರ್ಥಃ । ತತ್ ಬ್ರಹ್ಮೇತ್ಯುಪಾಸೀತ । ಬ್ರಹ್ಮ ಪರಿವೃಢತಮಮ್ ಇತಿ ಉಪಾಸೀತ । ಬ್ರಹ್ಮವಾನ್ ತದ್ಗುಣಃ ಭವತಿ । ತದ್ ಬ್ರಹ್ಮಣಃ ಪರಿಮರಃ ಇತಿ ಉಪಾಸೀತ । ಬ್ರಹ್ಮಣಃ ಪರಿಮರಃ । ಪರಿಮ್ರಿಯನ್ತೇ ಅಸ್ಮಿನ್ ಪಞ್ಚದೇವತಾಃ ವಿದ್ಯುತ್ ವೃಷ್ಟಿಃ ಚನ್ದ್ರಮಾಃ ಆದಿತ್ಯಃ ಅಗ್ನಿಃ ಇತ್ಯೇತಾಃ, ಅತೋ[2] ವಾಯುಃ ಪರಿಮರಃ । ಶ್ರುತ್ಯನ್ತರಪ್ರಸಿದ್ಧೇಃ । ಸ ಏಷ (ಏವಾಯಂ)[3] ವಾಯುಃ ಆಕಾಶೇನ ಅನನ್ಯಃ ಇತಿ ಆಕಾಶೋ ಬ್ರಹ್ಮಣಃ ಪರಿಮರಃ । ತಮ್[4] ಆಕಾಶಂ ವಾಯ್ವಾತ್ಮಾನಂ ಬ್ರಹ್ಮಣಃ ಪರಿಮರಃ ಇತಿ ಉಪಾಸೀತ । ಪರಿ ಏನಮ್[5] ಏವಂವಿದಂ ಪ್ರತಿಸ್ಪರ್ಧಿನಃ ದ್ವಿಷನ್ತಃ - ಅದ್ವಿಷನ್ತೋಽಪಿ ಸಪತ್ನಾ ಯತೋ ಭವನ್ತಿ, ಅತಃ ವಿಶೇಷ್ಯನ್ತೇ ದ್ವಿಷನ್ತಃ ಸಪತ್ನಾಃ ಇತಿ । ಯ[6] ಏನಂ ದ್ವಿಷನ್ತಃ ಸಪತ್ನಾಃ ತೇ - ಪರಿಮ್ರಿಯನ್ತೇ ಪ್ರಾಣಾನ್ ಜಹತಿ । ಕಿಂ ಚ ಯೇ ಚ ಅಪ್ರಿಯಾ ಅಸ್ಯ ಭ್ರಾತೃವ್ಯಾಃ ಅದ್ವಿಷನ್ತೋಽಪಿ ತೇ ಚ ಪರಿಮ್ರಿಯನ್ತೇ ॥

---

1. 'ಏವಂ ಸರ್ವೇಷ್ವಪಿ ಯದ್ ಯತ್ಸಾಧಿಗತಮ್ ಫಲಮ್' ಎಂದು ವಾ॥ ಪಾಠ.

2. 'ಇತಿ' ಎಂದೋ, 'ಇತ್ಯತಃ' ಎಂದೋ ಭಾಷ್ಯಕಾರರು ಬರೆದಿರಬಹುದೆಂದು ತೋರುತ್ತದೆ.

3. 'ಏವಾಯಂ' ಎಂಬುದು ಇಲ್ಲದಿದ್ದರೂ ಸಾಗುತ್ತದೆ.

4. 'ತಸ್ಮಾತ್' ಎಂದು ವಾ॥ ಪಾಠ.

5. ಈ ಎರಡು ಮಾತುಗಳು ವಾ॥ ಪಾಠದಲ್ಲಿ ಕೈಬಿಟ್ಟುಹೋಗಿವೆ.

6. 'ಯಃ' ಎಂಬ ಮಾತು ವಾ॥ ಪಾಠದಲ್ಲಿಲ್ಲ.

(ಭಾಷ್ಯಾರ್ಥ)

ಆ ಆಕಾಶವೂ ಬ್ರಹ್ಮವೇ. ಆದ್ದರಿಂದ ಅದು ಎಲ್ಲಕ್ಕೂ ಪ್ರತಿಷ್ಠೆ ಎಂದು ಉಪಾಸನೆಮಾಡಬೇಕು[1] ; ಪ್ರತಿಷ್ಠಾಗುಣವನ್ನು ಉಪಾಸನೆಮಾಡುವದರಿಂದ ಪ್ರತಿಷ್ಠೆಯುಳ್ಳವನಾಗುತ್ತಾನೆ. ಹೀಗೆಯೇ ಹಿಂದಿನ (ಪರ್ಯಾಯಗಳಲ್ಲಿಯೂ) ಯಾವ ಯಾವದಕ್ಕೆ ಫಲವು ಅಧೀನವಾಗಿರುತ್ತದೆಯೋ ಅದು ಬ್ರಹ್ಮವೇ[2] ; ಅದನ್ನು (ಬ್ರಹ್ಮವೆಂದು) ಉಪಾಸನೆಮಾಡುವದರಿಂದ ಆ (ಫಲ)ವುಳ್ಳವನಾಗುತ್ತಾನೆ ಎಂದು ಇಟ್ಟುಕೊಳ್ಳಬೇಕು. "ಅವನನ್ನು ಹೇಗೆ ಹೇಗೆ ಉಪಾಸನೆ ಮಾಡುವರೋ (ಹಾಗೆ) ಅದೇ ಆಗುತ್ತದೆ" (ಶತ. ಬ್ರಾ. ೧೦-೫-೨-೨೦) ಎಂಬ ಬೇರೊಂದು ಶ್ರುತಿಯಿರುವದರಿಂದಲೂ (ಹೀಗೆಂದು ತಿಳಿಯಬೇಕು). ಅದನ್ನು ಮಹಃ ಎಂದು ಉಪಾಸನೆಮಾಡಬೇಕು. ಇಲ್ಲಿ ಮಹಃ ಎಂದರೆ ಮಹತ್ತ್ವಗುಣವುಳ್ಳದ್ದು ; (ಹಾಗೆಂದು) ಅದನ್ನು ಉಪಾಸನೆಮಾಡಬೇಕು. ಮಹಾ(ಪುರುಷ)ನಾಗುತ್ತಾನೆ. ಅದನ್ನು ಮನಸ್ಸು ಎಂದು ಉಪಾಸನೆಮಾಡಬೇಕು. (ಇಲ್ಲಿ) ಮನಸ್ಸೆಂದರೆ ಮನನವು ; (ಆ ಉಪಾಸನೆಯಿಂದ) ಮಾನವಂತನಾಗುತ್ತಾನೆ ಎಂದರೆ ಮನನ ಮಾಡುವದಕ್ಕೆ ಶಕ್ತನಾಗುತ್ತಾನೆ. ಅದನ್ನು ನಮಃ ಎಂದು ಉಪಾಸನೆಮಾಡಬೇಕು. (ಇಲ್ಲಿ) ನಮಃ ಎಂದರೆ ನಮಸ್ಕಾರಮಾಡುವದು. ನಮಸ್ಕರಿಸುವ ಗುಣವುಳ್ಳದ್ದೆಂದು ಅದನ್ನು ಉಪಾಸನೆಮಾಡಬೇಕು. ಈ ಉಪಾಸಕನಿಗೆ ಕಾಮಗಳು ಎಂದರೆ ಕಾಮಿಸಲ್ಪಡುವ ಭೋಗ್ಯವಿಷಯಗಳು ಎಂದರ್ಥ. (ಅವು) ನಮಿಸುವವು. ತಲೆಬಾಗುವವು. ಅದು ಬ್ರಹ್ಮವು ಎಂದು ಉಪಾಸನೆಮಾಡಬೇಕು ; ಬ್ರಹ್ಮವು ಎಂದರೆ ಅತ್ಯಂತ ದೊಡ್ಡದು ಎಂದು ಉಪಾಸನೆಮಾಡಬೇಕು. ಬ್ರಹ್ಮವಂತನು ಎಂದರೆ ದೊಡ್ಡಗುಣವುಳ್ಳವನು - ಆಗುತ್ತಾನೆ. ಅದನ್ನು ಬ್ರಹ್ಮದ ಪರಿಮರವೆಂದು ಉಪಾಸನೆಮಾಡಬೇಕು. ಬ್ರಹ್ಮದ ಪರಿಮರವೆಂದರೆ : ಇದರಲ್ಲಿ ಮಿಂಚು, ಮಳೆ, ಚಂದ್ರ, ಆದಿತ್ಯ, ಅಗ್ನಿ - ಎಂಬೀ ಐದು ದೇವತೆಗಳು ನಾಶವಾಗುತ್ತಾರೆ (ಪರಿಮ್ರಿಯನ್ತೇ), ಆದ್ದರಿಂದ ವಾಯುವು ಪರಿಮರವು ; ಇದು ಬೇರೊಂದು

---

1. ಪ್ರತಿಷ್ಠಾಗುಣವುಳ್ಳ ಆಕಾಶವು ಬ್ರಹ್ಮಕಾರ್ಯವಾಗಿರುವದರಿಂದ ಬ್ರಹ್ಮವೇ ಆ ಗುಣವುಳ್ಳದ್ದೆಂದು ಉಪಾಸನೆಮಾಡಬೇಕು.

2. "ಯತ್ ಯದಧೀನಂ ಫಲಮ್" ಎಂದು ಬಿಡಿಸಿದರೆ ಯಾವ ಫಲವು ಯಾವದರ ಅಧೀನವೋ ಆ ಆಶ್ರಯವನ್ನು ಉಪಾಸನೆಮಾಡುವದರಿಂದ ಆ ಫಲವುಳ್ಳವನಾಗುವನು ಎಂದರ್ಥ. ವಾ॥ ಪಾಠಕ್ಕೆ "ಹೀಗೆ ಎಲ್ಲಾ ಕಡೆಯಲ್ಲಿಯೂ ಯಾವ ಫಲವು ಎಲ್ಲಿರುವದೆಂದು ತಿಳಿಯಬರುವದೋ" ಎಂದರ್ಥ.

ಶ್ರುತಿಯಲ್ಲಿ (?)[1] ಪ್ರಸಿದ್ಧವಾಗಿರುತ್ತದೆ ಆ ಈ ವಾಯುವು ಆಕಾಶಕ್ಕಿಂತ ಬೇರೆಯಲ್ಲ[2] ಎಂಬುದರಿಂದ ಆಕಾಶವು ಬ್ರಹ್ಮದ ಪರಿಮರವು ಆ ವಾಯ್ವಾತ್ಮಕವಾದ ಆಕಾಶವನ್ನು ಬ್ರಹ್ಮದ ಪರಿಮರವೆಂದು ಉಪಾಸಿಸಬೇಕಾದ ಹೀಗೆ ಉಪಾಸನೆ ಮಾಡುವಾತನನ್ನು - ಇವನ ಪೀಳಿಗೆಯಲ್ಲಿ ಹುಟ್ಟುವುದನ್ನು ಮಾಡುವ, ಹಗೆಮಾಡುವ (ಶತ್ರುಗಳು) ಹಗೆ ಮಾಡುವುವ ಶತ್ರುಗಳು ಇರುವಾಗಿದ್ದರಿಂದ ಹಗೆಮಾಡುವ ಶತ್ರುಗಳು ಎಂದು (ವಕ್ತೃಗಳಿಗೆ) ವಿಶೇಷಣವನ್ನು ಹಾಕಿರುತ್ತದೆ. ಇವನನ್ನು ಹಗೆ ಮಾಡುವ - ಶತ್ರುಗಳು ಯಾವಿಧಾನದಲ್ಲಾದರೂ ಇವರು ಸಾಯುತ್ತಾರೆ, ಎಂದರೆ ಪ್ರಾಣವನ್ನು ಬಿಡುತ್ತಾರೆ. ಮತ್ತು ಯಾರು ಇವನಿಗೆ ಬ್ರಯರಲ್ಲದ ವಿರೋಧಿಗಳಿರುವರೋ ಹಗೆಮಾಡದಿದ್ದರೂ ಅವರೂ ಸಾಯುತ್ತಾರೆ.

೬. ಜ್ಞಾನದಿಂದ ಪರಮಪುರುಷಾರ್ಥ

ಆತ್ಮನು ಎಂದೆಂದಿಗೂ ಅಸಂಸಾರಿಯೇ

(ಭಾಷ್ಯ)

೨೫೨. "ಪ್ರಾಣೋ ವಾ ಅನ್ನಮ್, ಶರೀರಮನ್ನಾದಮ್" (೩-೭) ಇತ್ಯಾರಭ್ಯ ಆಕಾಶಾನ್ತಸ್ಯ ಕಾರ್ಯಸ್ಯೈವ ಅನ್ನಾನ್ನಾದತ್ವಮುಕ್ತಮ್ । ಉಕ್ತಂ ನಾಮ, ಕಿಂ ತೇನ ? ತೇನ ಏತತ್ ಸಿದ್ಧಂ ಭವತಿ - ಕಾರ್ಯವಿಷಯ ಏವ ಭೋಜ್ಯಭೋಕ್ತೃತ್ವಕೃತಃ ಸಂಸಾರಃ, ನ ತ್ವಾತ್ಮನಿ ಇತಿ । ಆತ್ಮನಿ ತು ಭ್ರಾನ್ತ್ಯಾ ಉಪಚರ್ಯತೇ ॥

(ಭಾಷ್ಯಾರ್ಥ)

"ಪ್ರಾಣವೇ ಅನ್ನವು, ಶರೀರವೇ ಅನ್ನಾದವು" (೩-೭) ಎಂಬುದರಿಂದ ಹಿಡಿದು ಆಕಾಶದವರೆಗಿನ ಕಾರ್ಯವನ್ನೇ ಅನ್ನವು, ಅನ್ನಾದವು - ಎಂದು ಹೇಳಲಾಗಿರುತ್ತದೆ.

(ಪ್ರಶ್ನೆ :-) ಹೇಳಿರಲಿ. ಅದರಿಂದೇನು ?

(ಉತ್ತರ :-) ಅದರಿಂದ ಇದು ಸಿದ್ಧವಾಯಿತು : (ಏನೆಂದರೆ) ಭೋಜ್ಯ, ಭೋಕ್ತೃ - ಎಂಬ ಸಂಬಂಧದಿಂದಾಗಿರುವ ಸಂಸಾರವು ಕಾರ್ಯಕ್ಕೇ ಸೇರಿದ್ದೇ ಹೊರತು

---

1. ಛಾಂ. ೪-೩-೧ರಲ್ಲಿ ವಾಯುವಿನಲ್ಲಿ ಎಲ್ಲವೂ ಲಯವಾಗುವದೆಂದು ಹೇಳಿರುತ್ತದೆ ; ಆದರೆ ಅಲ್ಲಿ ಮಿಂಚುಮಳೆಗಳನ್ನು ಹೇಳಿಲ್ಲ. ಆಚಾರ್ಯರು ನಿಜವಾಗಿ ಯಾವ ಶ್ರುತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರುವರೋ ತಿಳಿಯದು.

2. ಕಾರ್ಯವು ಕಾರಣಕ್ಕಿಂತ ಬೇರೆಯಲ್ಲ ; ವಾಯುರೂಪವಾದ ಆಕಾಶದಲ್ಲಿ ಎಲ್ಲವೂ ಲಯಿಸುತ್ತದೆ ಎಂದಂತೆ ಆಯಿತು.

ಆತ್ಮನಲ್ಲಿರುವದಿಲ್ಲ. ಆತ್ಮನಲ್ಲಿಯೋ ಎಂದರೆ ಅದು ಭ್ರಾಂತಿಯಿಂದ ಇದೆ ಎಂದು ಭಾವಿಸಲ್ಪಡುತ್ತದೆ.[1]

ಜೀವನು ಪರಮಾತ್ಮನ ಕಾರ್ಯವಲ್ಲ

(ಭಾಷ್ಯ)

೨೫೩. ನನು ಆತ್ಮಾಪಿ ಪರಮಾತ್ಮನಃ ಕಾರ್ಯಮ್, ತತೋ ಯುಕ್ತಸ್ತಸ್ಯ ಸಂಸಾರ ಇತಿ । ನ । ಅಸಂಸಾರಿಣ ಏವ ಪ್ರವೇಶಶ್ರುತೇಃ । ''ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್'' (೨-೬) ಇತಿ ಆಕಾಶಾದಿಕಾರಣಸ್ಯ ಹಿ ಅಸಂಸಾರಿಣ ಏವ ಪರಮಾತ್ಮನಃ ಕಾರ್ಯೇ ಅನುಪ್ರವೇಶಃ ಶ್ರೂಯತೇ । ತಸ್ಮಾತ್ ಕಾರ್ಯಾನುಪ್ರವಿಷ್ಟೋ ಜೀವ ಆತ್ಮಾ ಪರ ಏವ ಅಸಂಸಾರೀ । ''ಸೃಷ್ಟ್ವಾ ಅನುಪ್ರಾವಿಶತ್'' ಇತಿ ಸಮಾನಕರ್ತೃಕತ್ವೋಪಪತ್ತೇಶ್ಚ । ಸರ್ಗಪ್ರವೇಶಕ್ರಿಯಯೋಶ್ಚ ಏಕಶ್ಚೇತ್ ಕರ್ತಾ ತತಃ ಕ್ತ್ವಾಪ್ರತ್ಯಯೋ ಯುಕ್ತಃ । ಪ್ರವಿಷ್ಟಸ್ಯ ತು ಭಾವಾನ್ತರಾಪತ್ತಿಃ ಇತಿ ಚೇತ್ । ನ । ಪ್ರವೇಶಸ್ಯ ಅನ್ಯಾರ್ಥತ್ವೇನ ಪ್ರತ್ಯಾಖ್ಯಾತತ್ವಾತ್ । ''ಅನೇನ ಜೀವೇನ'' (ಛಾಂ. ೬-೩-೨) ಇತಿ ವಿಶೇಷಶ್ರುತೇಃ ಧರ್ಮಾನ್ತರೇಣ ಅನುಪ್ರವೇಶಃ ಇತಿ ಚೇತ್ । ನ । 'ತತ್ತ್ವಮಸಿ' (ಛಾಂ. ೬-೮-೭) ಇತಿ ಪುನಸ್ತದ್ಭಾವೋಕ್ತೇಃ । ಭಾವಾನ್ತರಾಪನ್ನಸ್ಯೈವ ತದಪೋಹಾರ್ಥಂ ಸಂಪತ್ ಇತಿ ಚೇತ್ । ನ । ''ತತ್ ಸತ್ಯಂ ಸ ಆತ್ಮಾ ತತ್ತ್ವಮಸಿ'' (ಛಾಂ. ೬-೮-೭) ಇತಿ ಸಾಮಾನಾಧಿಕರಣ್ಯಾತ್ ॥

(ಭಾಷ್ಯಾರ್ಥ)

(ಆಕ್ಷೇಪ :-) ಆತ್ಮನೂ ಪರಮಾತ್ಮನ ಕಾರ್ಯವೇ[2] ; ಆದ್ದರಿಂದ ಅವನಿಗೆ ಸಂಸಾರವಿರುವದು ಯುಕ್ತವೇ (ಆಗಿರುತ್ತದೆಯಲ್ಲವೆ) ?

(ಪರಿಹಾರ :-) ಹಾಗಲ್ಲ. ಏಕೆಂದರೆ ಅಸಂಸಾರಿಯಾದ (ಪರಮಾತ್ಮನೇ) ಪ್ರವೇಶಮಾಡಿದನೆಂದು ಶ್ರುತಿಯಲ್ಲಿದೆ. ''ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕನು'' (೨-೬) ಎಂದು ಆಕಾಶವೇ ಮುಂತಾದದ್ದಕ್ಕೆ ಕಾರಣವಾಗಿರುವ ಅಸಂಸಾರಿಯಾದ ಪರಮಾತ್ಮನೇ ಕಾರ್ಯದಲ್ಲಿ ಒಳಹೊಕ್ಕನೆಂದು ಶ್ರುತಿಯಲ್ಲಿದೆ. ಆದ್ದರಿಂದ ಕಾರ್ಯವನ್ನು ಒಳಹೊಕ್ಕ ಜೀವಾತ್ಮನು ಅಸಂಸಾರಿಯಾದ ಪರಮಾತ್ಮನೇ. ''ಸೃಷ್ಟಿಸಿ ಒಳ

---

1. ಭೋಕ್ತೃಭೋಗ್ಯವ್ಯವಹಾರವು ಪರಮಾರ್ಥವಲ್ಲ, ವ್ಯಾವಹಾರಿಕವೇ ಎಂಬುದನ್ನು ಸೂ. ಭಾ. ೨-೧-೧೩, ೧೪ರಲ್ಲಿ ನಿರ್ಣಯಿಸಿದೆ.

2. ಈ ಮತವು ಭಾಗವತರದು. ಸೂ. ೨-೨-೪೨ನ್ನು ನೋಡಿ ಆತ್ಮನು ಹುಟ್ಟುವದಿಲ್ಲವೆಂಬುದನ್ನು ಸೂ. ಭಾ. ೨-೩-೧೭ರಲ್ಲಿ ವರ್ಣಿಸಿದೆ.

ಹೊಕ್ಕನು'' ಎಂದು ಸಮಾನಕರ್ತೃಕವಾಗಿ (ಹೇಳಿರುವದು) ಹೊಂದುವದರಿಂದಲೂ (ಹೀಗೆಂದು ತಿಳಿಯಬೇಕು). ಸೃಷ್ಟಿ, ಹೊಗುವದು - ಎಂಬ ಎರಡು ಕ್ರಿಯೆಗಳಿಗೂ ಒಬ್ಬನೇ ಕರ್ತೃವಾದರೆ ಆಗ 'ಕ್ತ್ವಾ' (ಎಂಬ ಭೂತಕೃದಂತದ) ಪ್ರತ್ಯಯವನ್ನು (ಪ್ರಯೋಗಿಸಿರುವದು) ಸರಿಯಾಗುತ್ತದೆ.

(ಆಕ್ಷೇಪ :-) ಆದರೆ ಪ್ರವೇಶಮಾಡಿದಮೇಲೆ (ಪರಮಾತ್ಮನು) ಮತ್ತೊಂದು ಪದಾರ್ಥವಾಗುತ್ತಾನೆ (ಎಂದರೊ) ?

(ಪರಿಹಾರ :-) ಹಾಗಲ್ಲ. ಏಕೆಂದರೆ ಪ್ರವೇಶವೆಂಬ ಶ್ರುತಿಗೆ ಬೇರೆಯ ಉದ್ದೇಶವಿರುವದೆಂದು ಆಗಲೆ[1] ಈ (ಮತವನ್ನು) ತಿರಸ್ಕರಿಸಿರುತ್ತೇವೆ.

(ಆಕ್ಷೇಪ :-) ''ಈ ಜೀವನ (ರೂಪದಿಂದ)'' (ಛಾಂ. ೬-೩-೨) ಎಂದು ವಿಶೇಷ(ರೂಪವನ್ನು) ಹೇಳುವ[2] ಶ್ರುತಿಯ ಪ್ರಮಾಣದಿಂದ ಮತ್ತೊಂದು ಸ್ವಭಾವದಿಂದ[3] ಒಳಹೊಕ್ಕನು (ಎನ್ನುವದೇ ಯುಕ್ತ).

(ಪರಿಹಾರ :-) ಹಾಗಲ್ಲ. ಏಕೆಂದರೆ ''ಅದೇ ನೀನಾಗಿದ್ದೀಯೆ'' (ಛಾಂ. ೬-೮-೭) ಎಂದು ಮತ್ತೂ ಅದೇ ಸ್ವರೂಪವನ್ನು (ಶ್ರುತಿಯಲ್ಲಿ) ಹೇಳಿರುತ್ತದೆ.[4]

(ಆಕ್ಷೇಪಃ :-) ಮತ್ತೊಂದು ಸ್ವರೂಪವನ್ನು ಪಡೆದುಕೊಂಡ (ಜೀವನಿಗೆ) ಅದನ್ನು ಕಳೆದುಕೊಳ್ಳುವದಕ್ಕಾಗಿ (ಹೇಳಿದ) ಸಂಪತ್ತು[5] ಎಂದರೊ ?

(ಪರಿಹಾರ :-) ಹಾಗಲ್ಲ. ಏಕೆಂದರೆ ''ಅದು ಸತ್ಯವು ; ಅದೇ ಆತ್ಮನು,

1. ಭಾ ಭಾ. ೧೭೭ರಲ್ಲಿ.

2. ''ಅದನ್ನೇ ಒಳಹೊಕ್ಕಿತು'' ಎಂಬುದು ಸಾಮಾನ್ಯವಾಕ್ಯ ; ಅದರಲ್ಲಿ ಇಂಥ ರೂಪದಿಂದ ಹೊಕ್ಕನು ಎಂಬುದನ್ನೇನೂ ಹೇಳಿಲ್ಲ. ಛಾಂದೋಗ್ಯದಲ್ಲಿ ಜೀವರೂಪದಿಂದ ಹೊಕ್ಕನು ಎಂದು ಹೇಳಿರುವದು ವಿಶೇಷವಾಕ್ಯ. ಸಾಮಾನ್ಯವಾಕ್ಯಕ್ಕಿಂತ ವಿಶೇಷವಾಕ್ಯವು ಪ್ರಬಲವಾದ್ದರಿಂದ ಇಲ್ಲಿಯೂ ರೂಪಾಂತರವನ್ನು ಹೊಂದಿ ಹೊಕ್ಕನು ಎಂದು ಅರ್ಥಮಾಡುವದು ಯುಕ್ತ ಎಂದು ಪೂರ್ವಪಕ್ಷಿಯ ಭಾವ.

3. ''ಪಾಷಾಣಸರ್ಪಾದಿವತ್ ಧರ್ಮಾನ್ತರೇಣೇತಿ ಚೇತ್'' ಎಂಬ ಬ್ರ. ಭಾ ೧-೪-೭ರ ಪೂರ್ವಪಕ್ಷವನ್ನೂ ಅದರ ಪರಿಹಾರವನ್ನೂ ನೋಡಿ.

4. ಜೀವನಾದ ಶ್ವೇತಕೇತುವಿಗೆ 'ಆ ಸದ್ರೂಪಬ್ರಹ್ಮವು ನೀನು' ಎಂದು ಉಪದೇಶಿಸಿರುವದರಿಂದ ಶ್ರುತಿಗೆ ವಿಶೇಷರೂಪವು ಪರಮಾರ್ಥವೆಂಬ ಅಭಿಪ್ರಾಯವಿಲ್ಲ ಎಂದು ಭಾವ

5. ಜೀವನನ್ನು ಪರಮಾತ್ಮನೆಂದು ಚಿಂತಿಸಬೇಕು ಎಂಬುದು ಶ್ರುತಿಯ ಅರ್ಥ ಪರಮಾತ್ಮನ ಧರ್ಮವನ್ನು ಜೀವನಲ್ಲಿದೆಯೆಂಬ ಸಂಪಾದನ (ಉಂಟೆಂಬ ಚಿಂತನೆ) ಯಿಂದ ಸತ್ತಬಳಿಕ ಮುಕ್ತಿಯಾಗುತ್ತದೆ ಎಂದು ಪೂರ್ವಪಕ್ಷಿಯ ಭಾವ. ಐಕ್ಯವನ್ನು ಹೇಳುವ ವಾಕ್ಯಗಳನ್ನು ಹೀಗೆ ಉಪಾಸನಾಪರವಾಗಿ ಮಾಡುವ ಪೂರ್ವಪಕ್ಷವನ್ನು ಛಾಂ. ಭಾ. ೬ನೆಯ ಅಧ್ಯಾಯದ ಉಪಸಂಹಾರದಲ್ಲಿಯೂ ಸೂ. ಭಾ. ೧-೧-೪ರಲ್ಲಿಯೂ ಖಂಡಿಸಿದೆ.

ಅದೇ ನೀನಾಗಿರುತ್ತೀಯೆ'' (ಛಾಂ. ೬-೮-೭) ಎಂದು ಸಮಾನಾಧಿಕರಣವಾಗಿ ಉಪದೇಶಮಾಡಿರುತ್ತದೆ.[1]

ಆತ್ಮನಲ್ಲಿ ಸಂಸಾರಿತ್ವವಿದೆ ಎಂಬುದು ಯುಕ್ತಿವಿರುದ್ಧ

(ಭಾಷ್ಯ)

೨೫೪. ದೃಷ್ಟಂ ಜೀವಸ್ಯ ಸಂಸಾರಿತ್ವಮ್ ಇತಿ ಚೇತ್ । ನ । ಉಪಲಬ್ಧೇಃ ಅನುಪಲಭ್ಯತ್ವಾತ್ । ಸಂಸಾರಧರ್ಮವಿಶಿಷ್ಟ ಆತ್ಮಾ ಉಪಲಭ್ಯತೇ ಇತಿ ಚೇತ್ । ನ । ಧರ್ಮಾಣಾಂ ಧರ್ಮಿಣೋಽವ್ಯತಿರೇಕಾತ್ ಕರ್ಮತ್ವಾನುಪಪತ್ತೇಃ । ಉಷ್ಣಪ್ರಕಾಶಯೋರ್ದಾಹ್ಯಪ್ರಕಾಶ್ಯತ್ವಾನುಪಪತ್ತಿವತ್ । ತ್ರಾಸಾದಿದರ್ಶನಾತ್ ದುಃಖಿತ್ವಾದ್ಯನುಮಿಯತೇ ಇತಿ ಚೇತ್ । ನ । ತ್ರಾಸಾದೇರ್ದುಃಖಸ್ಯ ಚ ಉಪಲಭ್ಯಮಾನತ್ವಾತ್ ನೋಪಲಬ್ಧೃಧರ್ಮತ್ವಮ್ । ಕಾಪಿಲಕಾಣಾದಾದಿತರ್ಕಶಾಸ್ತ್ರವಿರೋಧಃ ಇತಿ ಚೇತ್ । ನ । ತೇಷಾಂ ಮೂಲಾಭಾವೇ ವೇದವಿರೋಧೇ ಚ ಭ್ರಾನ್ತತ್ವೋಪಪತ್ತೇಃ । ಶ್ರುತ್ಯುಪಪತ್ತಿಭ್ಯಾಂ ಚ ಸಿದ್ಧಮ್ ಆತ್ಮನೋಽಸಂಸಾರಿತ್ವಮ್ ॥

(ಭಾಷ್ಯಾರ್ಥ)

(ಆಕ್ಷೇಪ :-) ಜೀವನಿಗೆ ಸಂಸಾರಿತ್ವವಿರುವದು (ಅನುಭವದಲ್ಲಿ) ಕಂಡು ಬರುತ್ತದೆಯಲ್ಲ !?[2]

(ಪರಿಹಾರ :-) ಹಾಗಲ್ಲ. ಏಕೆಂದರೆ ಅರಿಯುವ ಆತ್ಮನು ಅರಿಯಲ್ಪಡುವವನಾಗಲಾರನು.[3]

(ಆಕ್ಷೇಪ :-) ಸಂಸಾರವೆಂಬ ಧರ್ಮದಿಂದ ಕೂಡಿಯೇ ಆತ್ಮನು ಕಂಡು ಬರುತ್ತಿದಾನಲ್ಲ ![4]

---

1. ಶ್ರುತಿಯಲ್ಲಿ 'ನೀನು ಈಗಲೇ ಬ್ರಹ್ಮವಾಗಿದ್ದೀಯೆ' ಎಂದು ಹೇಳಿದೆ ; ಚಿಂತಿಸಿದರೆ ಮುಂದೆ ಆಗುವೆ ಎಂದೇನೂ ಹೇಳಿಲ್ಲ ಎಂದು ಭಾವ.

2. ಶ್ರುತಿಯನ್ನು ಬಿಟ್ಟು ಪ್ರತ್ಯಕ್ಷಾನುಮಾನಗಳಿಂದಲೇ ಜೀವಬ್ರಹ್ಮಭೇದವನ್ನು ಸಾಧಿಸುವದಕ್ಕೆ ಪೂರ್ವಪಕ್ಷಿಯು ಹೊರಟಿರುತ್ತಾನೆ.

3. ಆತ್ಮನು ತನಗೆ ತಾನೇ ಜ್ಞೇಯನಲ್ಲ. ಐ. ಭಾ. ಒಂದನೆಯ ಅಧ್ಯಾಯದ ಉಪಸಂಹಾರಭಾಷ್ಯವನ್ನು ನೋಡಿ. ಛಾಂ. ಭಾ. ೮-೧೨-೧ ರಲ್ಲಿ ಜೀವನಲ್ಲಿ ಸಂಸಾರಿತ್ವವಿಲ್ಲವೆಂದು ಹೇಳಿರುವ ಭಾಷ್ಯವನ್ನೂ ನೋಡಿ.

4. ಕೇವಲಾತ್ಮನು ವಿಷಯನಾಗದೆ ಇದ್ದರೂ ಗುಣವಿಶಿಷ್ಟನಾದ ಆತ್ಮನು ವಿಷಯನಾಗಲಿ - ಎಂದು ಭಾವ.

(ಪರಿಹಾರ :-) ಹಾಗಲ್ಲ. ಏಕೆಂದರೆ ಧರ್ಮಗಳು ಧರ್ಮಿಗಿಂತ ಬೇರೆ ಯಾಗಿ (ಅದನ್ನು ಬಿಟ್ಟು,) ಇರಲಾರವಾದ್ದರಿಂದ (ಅವೂ) ವಿಷಯವಾಗಲಾರವು ; ಹೇಗೆ ಬಿಸಿ, ಬೆಳಕು ಸುಡಲ್ಪಡುವದು, ಬೆಳಗಲ್ಪಡುವದು ಎಂಬುದು ಹೇಗೆ ಹೊಂದುವದಿಲ್ಲವೋ ಅದರಂತೆಯೇ (ಇದು).[2]

(ಆಕ್ಷೇಪ :-) ಅಂಜಿಕೆಯೇ ಮುಂತಾದವುಗಳು ಕಂಡುಬರುವದರಿಂದ ದುಃಖಿತ್ವವೇ ಮುಂತಾದದ್ದು (ಆತ್ಮನ ಧರ್ಮವೆಂದು) ಅನುಮಾನಿಸಬಹುದಲ್ಲ ![3]

(ಪರಿಹಾರ :-) ಹಾಗಲ್ಲ. ಅಂಜಿಕೆಯೇ ಮುಂತಾದದ್ದೂ ದುಃಖವೂ ಅರಿಯುಲ್ಪಡುತ್ತಿರುವದರಿಂದ (ಅವು) ಅರಿಯುವಾತನ ಧರ್ಮವಾಗಲಾರವು.[4]

(ಆಕ್ಷೇಪ :-) ಕಪಿಲರು, ಕಣಾದರು - ಮುಂತಾದವರ[5] ತರ್ಕಶಾಸ್ತ್ರಕ್ಕೆ ವಿರುದ್ಧವಾಗಿದೆಯಲ್ಲ, (ನಿಮ್ಮ ಮತ) !

(ಪರಿಹಾರ :-) ಹಾಗಲ್ಲ. ಏಕೆಂದರೆ ಅವರಿಗೆ ಮೂಲ(ಪ್ರಮಾಣ)ವಿಲ್ಲದ್ದರಿಂದಲೂ (ಅವರು) ವೇದಕ್ಕೆ ವಿರುದ್ಧವಾಗಿರುವದರಿಂದಲೂ ಅವರು ಭ್ರಾಂತರು ಎಂಬುದು ಯುಕ್ತ.[6] ಶ್ರುತಿ, ಯುಕ್ತಿ - ಎರಡರಿಂದಲೂ ಆತ್ಮನು ಅಸಂಸಾರಿ ಎಂದು ಸಿದ್ಧವೂ ಆಗಿರುತ್ತದೆ.

ಆತ್ಮನು ಒಬ್ಬನೇ ಆದ್ದರಿಂದ ಸಂಸಾರಿತ್ವವು ನಿಜವಲ್ಲ

(ಭಾಷ್ಯ)

೨೫೫. ಏಕತ್ವಾಚ್ಚ । ಕಥಮ್ ಏಕತ್ವಮಿತಿ । ಉಚ್ಯತೇ -

---

1. ಅವು ಆತ್ಮನ ಧರ್ಮಗಳಾದರೆ ಆತ್ಮನಂತೆ ಅವೂ ವಿಷಯವಾಗಬಾರದು ; ಆದರೆ ವಿಷಯವಾಗುತ್ತವೆಯಾದ್ದರಿಂದ ಅವು ಆತ್ಮನ ಧರ್ಮವಲ್ಲ.

2. ಸುಡುವದು ಎಂಬುದು ಬೆಂಕಿಯನ್ನು ವಿಷಯಮಾಡಲಾರದು ; ಅದರಂತೆ ಬಿಸಿಯನ್ನೂ ವಿಷಯೀಕರಿಸಲಾರದು ; ಅದರಂತೆ ಜ್ಞಾನವು ಆತ್ಮನನ್ನಾಗಲಿ ಆತ್ಮನ ಧರ್ಮವನ್ನಾಗಲಿ ವಿಷಯೀಕರಿಸಲಾರದು.

3. ಅಂಜಿಕೊಂಡು ಓಡುತ್ತಿರುವವನಿಗೆ ಅವನು ಯಾವದಕ್ಕೆ ಅಂಜಿದ್ದಾನೋ ಅದರಿಂದ ದುಃಖಿವಾಗಿದೆ ಎಂದು ಊಹಿಸಬಹುದಲ್ಲ ! ಎಂದು ಭಾವ.

4. ಆದ್ದರಿಂದ ಅನುಮಾನವು ಸರಿಯಲ್ಲ.

5. ಕಪಿಲರು ಭೋಕ್ತೃತ್ವವು ಪರಮಾರ್ಥವೆನ್ನುತ್ತಾರೆ ; ಕಣಾದರು ಕರ್ತೃತ್ವವೂ ಪರಮಾರ್ಥವೆನ್ನುತ್ತಾರೆ.

6. ಪ್ರಮಾಣವನ್ನು ಸರಿನೋಡುವದಕ್ಕೆ ತರ್ಕವು ಬೇಕು , ಪ್ರಮಾಣವಿಲ್ಲದ ಒಣ ತರ್ಕದಿಂದ ಯಾವದೂ ಸಿದ್ಧವಾಗಲಾರದು. ಆದ್ದರಿಂದ ಈ ವಿಷಯಕ್ಕೆ ಕಪಿಲಾದಿಗಳ ಮಾತನ್ನು ಆಪ್ತವಚನವೆಂಬ ಭಾವಿಸಲಾಗದು ಎಂದು ಭಾವ.

(ಭಾಷ್ಯಾರ್ಥ)

(ಆತ್ಮನು) ಒಬ್ಬನೇ ಆಗಿರುವದರಿಂದಲೂ (ಅವನಲ್ಲಿ) ನಿಜವಾಗಿ ಸಂಸಾರಿತ್ವವಿರುವದಿಲ್ಲ. (ಅವನು) ಒಬ್ಬನೇ ಎಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ :-

ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ ॥೬॥

೬. ಯಾವ ಆ ಇವನು ಪುರುಷನಲ್ಲಿರುವನೋ ಮತ್ತು ಯಾವ ಅವನು ಆದಿತ್ಯನಲ್ಲಿರುವನೋ ಅವನು ಒಬ್ಬನೇ.

(ಭಾಷ್ಯ)

೨೫೬. "ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ ।" ಇತ್ಯೇವಮಾದಿ ಪೂರ್ವವತ್ ಸರ್ವಮ್ ॥

(ಭಾಷ್ಯಾರ್ಥ)

"ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ" ಎಂದು ಮುಂತಾಗಿರುವದೆಲ್ಲವನ್ನೂ ಹಿಂದೆ (೨-ಆರಲ್ಲಿ ವಿವರಿಸಿರು)ವಂತೆ[1] (ಅರ್ಥಮಾಡಿ ಕೊಳ್ಳಬೇಕು.)

ಸ ಯ ಏವಂವಿತ್ । ಅಸ್ಮಾಲ್ಲೋಕಾತ್ ಪ್ರೇತ್ಯ । ಏತಮನ್ನಮಯ ಮಾತ್ಮಾನಮುಪಸಂಕ್ರಮ್ಯ । ಏತಂ ಪ್ರಾಣಮಯಮಾತ್ಮಾನಮುಪ ಸಂಕ್ರಮ್ಯ । ಏತಂ ಮನೋಮಯಮಾತ್ಮಾನಮುಪಸಂಕ್ರಮ್ಯ । ಏತಂ ವಿಜ್ಞಾನಮಯಮಾತ್ಮಾನಮುಪಸಂಕ್ರಮ್ಯ । ಏತಮಾನನ್ದಮಯ ಮಾತ್ಮಾನಮುಪಸಂಕ್ರಮ್ಯ । ಇಮಾಲ್ಲೋಕಾನ್ ಕಾಮಾನ್ನೀ ಕಾಮ ರೂಪ್ಯನುಸಂಚರನ್ । ಏತತ್ ಸಾಮ ಗಾಯನ್ನಾಸ್ತೇ ॥೭॥

೭. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ಈ ಲೋಕದಿಂದ ಹೊರಟುಹೋಗಿ ಈ ಅನ್ನಮಯನೆಂಬ ಆತ್ಮನನ್ನು ಪಡೆದುಕೊಂಡು,

1. "ಉಪಾಧಿಗಳಿಂದಾದ ಹೆಚ್ಚುಕುಂದುಗಳಿಲ್ಲದೆ ಒಬ್ಬನೇ ಆತ್ಮನು ಎಲ್ಲೆಲ್ಲಿಯೂ ಇರುತ್ತಾನೆ ; ಹೀಗೆಂದು ಅರಿತವನು ಜ್ಞಾನದಿಂದಲೇ ಆತ್ಮಸ್ವರೂಪವನ್ನು ಪಡೆದುಕೊಳ್ಳುತ್ತಾನೆ" ಎಂಬುದು 'ಆನಂದಮಯಮಾತ್ಮಾನಮುಪಸಂಕ್ರಮ್ಯ' ಎಂಬವರೆಗಿನ ಗ್ರಂಥದ ಅರ್ಥ.

ಈ ಪ್ರಾಣಮಯನೆಂಬ ಆತ್ಮನನ್ನು ಪಡೆದುಕೊಂಡು, ಈ ಮನೋಮಯನೆಂಬ ಆತ್ಮನನ್ನು ಪಡೆದುಕೊಂಡು, ಈ ವಿಜ್ಞಾನಮಯನೆಂಬ ಆತ್ಮನನ್ನು ಪಡೆದುಕೊಂಡು, ಈ ಆನಂದಮಯನೆಂಬ ಆತ್ಮನನ್ನು ಪಡೆದುಕೊಂಡು, ಈ ಲೋಕಗಳನ್ನು ಕಾಮಾನ್ನಿಯಾಗಿ ಕಾಮರೂಪಿಯಾಗಿ ಸಂಚರಿಸುತ್ತಾ ಈ (ಮುಂದೆ ಹೇಳುವ) ಸಾಮವನ್ನು ಗಾನಮಾಡುತ್ತಾ ಇರುವನು.

(ಭಾಷ್ಯ)

೨೫೭. ಅನ್ನಮಯಾದಿಕ್ರಮೇಣ ಆನನ್ದಮಯಮಾತ್ಮಾನಮ್ ಉಪಸಂಕ್ರಮ್ಯ ಏತತ್ ಸಾಮ ಗಾಯನ್ ಆಸ್ತೇ । 'ಸತ್ಯಂ ಜ್ಞಾನಮ್' ಇತ್ಯಸ್ಯಾಃ ಋಚೋಽರ್ಥೋ ವ್ಯಾಖ್ಯಾತೋ ವಿಸ್ತರೇಣ ತದ್ವಿವರಣಭೂತಯಾ ಆನನ್ದವಲ್ಲ್ಯಾ । ''ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತಾ'' ಇತಿ ತಸ್ಯ (?)[1] ಫಲವಚನಸ್ಯ ಅರ್ಥವಿಸ್ತಾರೋ ನೋಕ್ತಃ । ಕೇ ತೇ ? ಕಿಂ - ವಿಷಯಾ ವಾ ಸರ್ವೇ ಕಾಮಾಃ ? ಕಥಂ ವಾ ಬ್ರಹ್ಮಣಾ ಸಹ ಸಮಶ್ನುತೇ ಇತ್ಯೇತದ್ ವಕ್ತವ್ಯಮ್ ಇತಿ ಇದಮಿದಾನೀಮ್ ಆರಭ್ಯತೇ । ತತ್ರ ಪಿತಾಪುತ್ರಾಖ್ಯಾಯಿಕಾಯಾಂ ಪೂರ್ವವಿದ್ಯಾಶೇಷಭೂತಾಯಾಂ ತಪೋ ಬ್ರಹ್ಮವಿದ್ಯಾ ಸಾಧನಮ್ ಉಕ್ತಮ್ । ಪ್ರಾಣಾದೇಃ ಆಕಾಶಾನ್ತಸ್ಯ ಚ ಕಾರ್ಯಸ್ಯ ಅನ್ನಾನ್ನಾದತ್ಯೇನ ವಿನಿಯೋಗಶ್ಚ ಉಕ್ತಃ । ಬ್ರಹ್ಮವಿಷಯೋಪಾಸನಾನಿ ಚ । ಯೇ ಚ ಸರ್ವೇ ಕಾಮಾಃ ಪ್ರತಿನಿಯತಾನೇಕಸಾಧನಸಾಧ್ಯಾ ಆಕಾಶಾದಿಕಾರ್ಯ ಭೇದವಿಷಯಾಃ ಏತೇ ದರ್ಶಿತಾಃ । ವಿಕತ್ಥೇ ಪುನಃ ಕಾಮಕಾಮಿತ್ವಾನುಪಪತ್ತಿಃ । ಭೇದಜಾತಸ್ಯ ಸರ್ವಸ್ಯ ಆತ್ಮಭೂತತ್ವಾತ್ । ತತ್ರ ಕಥಂ ಯುಗಪದ್ ಬ್ರಹ್ಮ ಸ್ವರೂಪೇಣ ಸರ್ವಾನ್ ಕಾಮಾನ್ ವಿವಂವಿತ್ ಸಮಶ್ನುತೇ ಇತಿ ? ಉಚ್ಯತೇ । ಸರ್ವಾತ್ಮತ್ವಾಪತ್ತೇಃ ।।[2]

(ಭಾಷ್ಯಾರ್ಥ)

ಅನ್ನಮಯವೇ ಮುಂತಾದ ಕ್ರಮದಿಂದ ಆನಂದಮಯನೆಂಬ ಆತ್ಮನನ್ನು ಪಡೆದುಕೊಂಡು ಈ (ಮುಂದೆ ಹೇಳುವ) ಸಾಮವನ್ನು ಗಾನಮಾಡುತ್ತಾ ಇರುತ್ತಾನೆ ;

''ಸತ್ಯವೂ ಜ್ಞಾನವೂ (ಅನಂತವೂ ಆದದ್ದು ಬ್ರಹ್ಮವು)'' ಎಂಬೀ ಋಕ್ಕಿನ

---

1. 'ಇತ್ಯೇತಸ್ಯ' ಎಂದೋ, 'ಇತಿ ತಸ್ಯಾಃ' ಎಂದೋ ಭಾಷ್ಯವು ಇದ್ದಿರಬೇಕೆಂದು ತೋರುತ್ತದೆ.

2. ''ಸರ್ವಾತ್ಮತ್ವೋಪಪತ್ತೇಃ'' ಎಂಬ ವಾ।। ಪಾಠಕ್ಕಿಂತ ಈ ಪಾಠವೇ ಮೇಲು.

ಅರ್ಥವನ್ನು ಅದರ ವಿವರಣವಾಗಿರುವ ಆನಂದವಲ್ಲಿಯಲ್ಲಿ ವಿಸ್ತಾರವಾಗಿ ವ್ಯಾಖ್ಯಾನಮಾಡಿದ್ದಾಗಿದೆ. (ಆದರೆ) ''ಅವನು ಎಲ್ಲಾ ಕಾಮಗಳನ್ನೂ ಒಮ್ಮೆಗೇ ವಿಪಶ್ಚಿತ್ತಾದ ಬ್ರಹ್ಮವಾಗಿ ಪಡೆದುಕೊಳ್ಳುತ್ತಾನೆ'' ಎಂಬೀ ಫಲವಚನದ ಅರ್ಥವನ್ನು ವಿಸ್ತಾರವಾಗಿ ಹೇಳಿರುವದಿಲ್ಲ. ಆ (ಕಾಮಗಳು) ಯಾವವು ? ಯಾವ ವಿಷಯದ ಕಾಮಗಳು ? ಬ್ರಹ್ಮರೂಪದಿಂದ ಅವುಗಳನ್ನು ಒಮ್ಮೆಗೇ ಪಡೆಯುತ್ತಾನೆಂಬುದು ಹೇಗೆ ? - ಎಂಬಿದನ್ನು ಹೇಳಬೇಕಾಗಿರುವದರಿಂದ ಈ (ಮುಂದಿನ) ಗ್ರಂಥವನ್ನು ಈಗ ಆರಂಭಿಸಿರುತ್ತದೆ. ಹಿಂದೆ ಹೇಳಿರುವ ವಿದ್ಯೆಗೆ ಶೇಷವಾಗಿರುವ ತಂದೆಮಕ್ಕಳ ಕಥೆಯಲ್ಲಿ[1] ತಪಸ್ಸು ಬ್ರಹ್ಮವಿದ್ಯೆಗೆ ಸಾಧನ ವೆಂದು ಹೇಳಲಾಗಿದೆ. ಪ್ರಾಣವೇ ಮುಂತಾಗಿ ಆಕಾಶದವರೆಗಿನ ಕಾರ್ಯವು ಅನ್ನ, ಅನ್ನಾದ - ಈ ಸಂಬಂಧದಿಂದ ಇದ್ದುಕೊಂಡಿರುವದೆಂದು (ಅದಕ್ಕೆ) ವಿನಿ ಯೋಗವನ್ನೂ ಹೇಳಲಾಗಿದೆ. ಬ್ರಹ್ಮವಿಷಯದ ಉಪಾಸನೆಗಳನ್ನೂ (ಹೇಳಿ ದ್ದಾಗಿದೆ). ಮತ್ತು (ಇಂಥಿಂಥವೆಂದು) ಗೊತ್ತಾಗಿರುವ ಅನೇಕ ಸಾಧನಗಳಿಂದ ಸಾಧ್ಯವಾಗಿರುವ ಆಕಾಶವೇ ಮುಂತಾದ ಬೇರೆಬೇರೆಯ ಕಾರ್ಯಗಳ ವಿಷಯ ವಾದ ಕಾಮಗಳು ಯಾವವೋ ಅವನ್ನೆಲ್ಲ ತಿಳಿಸಿದ್ದಾಗಿದೆ. ಆದರೆ (ಆತ್ಮನು) ಒಬ್ಬನೇ ಆಗಿರುವಲ್ಲಿ ಕಾಮಗಳು, ಕಾಮಿ - ಎಂಬ (ಸಂಬಂಧವು) ಇರುವ ದೆಂಬುದು ಹೊಂದುವಹಾಗಿಲ್ಲ ; ಏಕೆಂದರೆ ಭೇದಸಮೂಹವೆಲ್ಲವೂ ಆತ್ಮನಾಗಿ ಬಿಟ್ಟಿರುತ್ತದೆ.[2] ಹೀಗಿರುವಲ್ಲಿ ಈ ರೀತಿಯಲ್ಲಿ ಬ್ರಹ್ಮವನ್ನು ತಿಳಿದುಕೊಂಡ ವನು ಹೇಗೆ ಒಮ್ಮೆಗೇ ಬ್ರಹ್ಮಸ್ವರೂಪದಿಂದ ಎಲ್ಲಾ ಕಾಮಗಳನ್ನೂ ಪಡೆದು ಕೊಳ್ಳುತ್ತಾನೆ ? - ಎಂದರೆ (ಶ್ರುತಿ) ಹೇಳುತ್ತದೆ : ಏಕೆಂದರೆ ಸರ್ವವೂ ತಾನೇ ಆಗಿಬಿಡುವದರಿಂದ.

ಜ್ಞಾನಿಯ ಸರ್ವಾತ್ಮಭಾವ

(ಭಾಷ್ಯ)

೨೫೮. ಕಥಂ ಸರ್ವಾತ್ಮತ್ವಾಪತ್ತಿರಿತಿ ?[3] ಆಹ - ಪುರುಷಾದಿತ್ಯ ಸ್ಥಾತ್ಮೈಕತ್ವವಿಜ್ಞಾನೇನ ಅಪೋಹ್ಯ ಉತ್ಕರ್ಷಾಪಕರ್ಷೌ ಅನ್ನಮಯಾದೀನ್

1. ಉಪನಿಷತ್ತಿನಲ್ಲಿ ಬರುವ ಜ್ಞಾನಸಂಬಂಧವಾಗಿರುವ ಈ ಬಗೆಯ ಕಥೆಗಳು ಕರ್ಮಕ್ಕೆ ಅಂಗವೆಂದು ಭಾವಿಸಬಾರದೆಂಬುದಕ್ಕೆ ಸೂ. ಭಾ. ೩-೪-೨೩ನ್ನು ನೋಡಿ.

2. ಭೇದವು ಇದ್ದ ಹೊರತು ಕಾಮವುಂಟಾಗುವದಿಲ್ಲ.

3. ''ಸರ್ವಾತ್ಮಕ್ಯೋಪಪತ್ತಿಃ'' ಎಂಬ ವಾ॥ ಪಾಠವು ಅವಶ್ಯವಿಲ್ಲ.

ಆತ್ಮನೋ[1]ಽವಿದ್ಯಾಕಲ್ಪಿತಾನ್ ಕ್ರಮೇಣ ಸಂಕ್ರಮ್ಯ ಆನನ್ದಮಯಾನ್ತಾನ್ ಸತ್ಯಂ ಜ್ಞಾನಮನನ್ತಂ ಬ್ರಹ್ಮ ಅದೃಶ್ಯಾದಿಧರ್ಮಕಂ ಸ್ವಾಭಾವಿಕಮಾನನ್ದಮ್ ಅಜಮ್ ಅಮೃತಮ್ ಅಭಯಮ್ ಅದ್ವೈತಂ ಫಲಭೂತಮ್ ಆಪನ್ನಃ ಇಮಾನ್ ಲೋಕಾನ್ ಭೂರಾದೀನ್ 'ಅನುಸಂಚರನ್' ಇತಿ ವ್ಯವಹಿತೇನ ಸಂಬನ್ಧಃ । ಕಥಮ್ ಅನುಸಂಚರನ್ ? ಕಾಮಾನ್ನೀ ಕಾಮತೋಽನ್ನಮ್ ಅಸ್ಯ ಇತಿ ಕಾಮಾನ್ನೀ । ಶಥಾ ಕಾಮತೋ ರೂಪಾಣಿ ಅಸ್ಯ ಇತಿ ಕಾಮರೂಪೀ ಅನುಸಂಚರನ್ ಸರ್ವಾತ್ಮನಾ ಇಮಾನ್ ಲೋಕಾನ್ ಆತ್ಮತ್ವೇನ ಅನುಭವನ್ । ಕಿಮ್ ? ಏತತ್ ಸಾಮ ಗಾಯನ್ ಆಸ್ತೇ । ಸಮತ್ವಾತ್ ಬ್ರಹ್ಮೈವ ಸಾಮ ಸರ್ವಾನನ್ಯರೂಪಂ ಗಾಯನ್ ಶಬ್ದಯನ್ ಪ್ರಖ್ಯಾಪಯನ್ ಲೋಕಾನುಗ್ರಹಾರ್ಥಂ ತದ್ವಿಜ್ಞಾನಫಲಂ ಚ ಅತೀವ ಕೃತಾರ್ಥತ್ವಂ ಗಾಯನ್ ಆಸ್ತೇ ತಿಷ್ಠತಿ ॥

(ಭಾಷ್ಯಾರ್ಥ)

(ಅವನು) ಸರ್ವವೂ ತಾನೇ ಆಗಿರುವನೆಂಬುದು ಹೇಗೆ ? - ಎಂದರೆ (ಶ್ರುತಿ) ಹೇಳುತ್ತದೆ : ಪುರುಷನಲ್ಲಿಯೂ ಆದಿತ್ಯನಲ್ಲಿಯೂ ಇರುವ ಆತ್ಮನು ಒಬ್ಬನೇ ಎಂಬ ಅರಿವಿನಿಂದ ಹೆಚ್ಚು ಕುಂದುಗಳನ್ನು ತಳ್ಳಿಹಾಕಿ ಅನ್ನಮಯನು ಮೊದಲಾಗಿ ಆನಂದಮಯನವರೆಗಿನ ಅವಿದ್ಯಾಕಲ್ಪಿತರಾಗಿರುವ ಆತ್ಮರುಗಳನ್ನು (ಕ್ರಮವಾಗಿ) ಪಡೆದುಕೊಂಡು[2] ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಬ್ರಹ್ಮವೇ, ಅದೃಶ್ಯತ್ವವೇ ಮುಂತಾದ ಧರ್ಮಗಳುಳ್ಳ ಆನಂದಸ್ವರೂಪವೇ ಆಗಿರುವ, ಹುಟ್ಟಿಲ್ಲದ ಸಾವಿಲ್ಲದ ಅಂಜಿಕೆಯಿಲ್ಲದ ಅದ್ವೈತವಾದ ಫಲರೂಪವಾದ[3] ಆನಂದವೇ, ತಾನಾಗಿ ಈ ಲೋಕಗಳನ್ನು ಎಂದರೆ (ಈ) ಭೂರಾದಿ (ಲೋಕ)ಗಳನ್ನು ಸಂಚರಿಸುತ್ತಾ (ಅನುಸಂಚರನ್ ಎಂಬ) ದೂರ ಇರುವ ಮಾತಿಗೆ (ಈ ಲೋಕಗಳನ್ನು ಎಂಬುದನ್ನು) ಸಂಬಂಧಮಾಡಿಕೊಳ್ಳಬೇಕು. ಹೇಗೆ ಅನುಸಂಚಾರಮಾಡುತ್ತಾನೆ ? ಎಂದರೆ ಕಾಮಾನ್ನಿಯಾಗಿ - (ತನ್ನ) ಇಚ್ಛೆಯಂತೆ (ಬೇಕಾದ) ಅನ್ನವು ಇವನಿಗೆ (ದೊರಕುತ್ತದೆ)ಯಾದ್ದರಿಂದ ಕಾಮಾನ್ನಿ

1. ಇದು ವಾ॥ ಪಾಠ ; "ಅನ್ನಮಯಾದ್ಯಾತ್ಮನಃ" ಎಂದು ಆ॥ ಪಾಠ

2. 'ಕ್ರಮಕ್ರಮವಾಗಿ ದಾಟಿ' ಎಂದೂ ಅರ್ಥಮಾಡಬಹುದಾದರೂ ಹಿಂದೆ ಭಾ. ಭಾ. ೨೧೭ರಲ್ಲಿ ಹೇಳಿರುವಂತೆ ಉಪಸಂಕ್ರಮಿಸಿ ಎಂದರೆ ಪಡೆದುಕೊಂಡು, ಅರಿತುಕೊಂಡು - ಎಂದು ಅರ್ಥಮಾಡಿದರೆ ಸಾಕಾಗಿದೆ.

3. ಫಲದಂತೆ ಭೋಗದ ಕೊನೆಯಲ್ಲಿ ಕಾಣುವ ಆನಂದವು ನಿಜವಾಗಿ ಆತ್ಮನೇ. ಭಾ. ಭಾ. ೧೪೬ನ್ನು ನೋಡಿ.

ಯಾಗಿ (ಎಂದಿದೆ) ; ಇದರಂತೆ (ತನ್ನ) ಇಚ್ಛೆಯಂತೆ (ಬೇಕಾದ) ರೂಪಗಳು ಇವನಿಗೆ (ದೊರಕುವ)ದರಿಂದ ಕಾಮರೂಪಿಯಾಗಿ ಅನುಸಂಚಾರಮಾಡುತ್ತಾನೆ ; ಎಂದರೆ ಸರ್ವವೂ ತಾನೇ ಆಗಿ ಈ ಲೋಕಗಳನ್ನು (ಅವುಗಳ) ಆತ್ಮನಾಗಿ ಅನುಭವಿಸುತ್ತಾ.[1] ಅನುಭವಿಸುತ್ತಾ ಏನು ? ಎಂದರೆ ಈ ಸಾಮವನ್ನು ಗಾನಮಾಡುತ್ತಾ ಇರುತ್ತಾನೆ. ಸಮವಾಗಿರುವದರಿಂದ[2] ಸಾಮವೆನಿಸಿರುವದು ಎಲ್ಲಕ್ಕೂ ಅಭಿನ್ನವಾಗಿರುವ ಬ್ರಹ್ಮವೇ ; (ಆ ಸಾಮವನ್ನು) ಗಾನಮಾಡುತ್ತಾ ಎಂದರೆ ತಿಳಿಯ ಹೇಳುತ್ತಾ, ಜನರಿಗೆ ಅನುಗ್ರಹಮಾಡಬೇಕೆಂದು[3] ಆತ್ಮೈಕತ್ವವನ್ನು ಪ್ರಕಟಿಸುತ್ತಾ ಆ (ಬ್ರಹ್ಮವನ್ನು) ಅರಿತುಕೊಂಡದ್ದರ ಫಲವಾಗಿ (ತಾನು) ಅತ್ಯಂತವಾಗಿ ಕೃತಾರ್ಥನಾಗಿರುವೆನೆಂಬುದನ್ನೂ, ಗಾನಮಾಡುತ್ತಾ ಇರುತ್ತಾನೆ, ಇದ್ದುಕೊಂಡಿರುತ್ತಾನೆ.

ಜ್ಞಾನಿಯ ಏಕತ್ವದ ಗಾನ .

ಹಾಽವು ಹಾಽವು ಹಾಽವು । ಅಹಮನ್ನಮಹಮನ್ನಮಹಮನ್ನಮ್ । ಅಹಮನ್ನಾದೋಽಽಹಮನ್ನಾದೋಽಽಹಮನ್ನಾದಃ । ಅಹಗ್ಂ ಶ್ಲೋಕ ಕೃದಹಗ್ಂ ಶ್ಲೋಕಕೃದಹಗ್ಂ ಶ್ಲೋಕಕೃತ್ । ಅಹಮಸ್ಮಿ ಪ್ರಥ ಮಜಾ ಋತಾಽಸ್ಯ । ಪೂರ್ವಂ ದೇವೇಭ್ಯೋ ಅಮೃತಸ್ಯ ನಾಽಭಾಯಿ । ಯೋ ಮಾ ದದಾತಿ ಸ ಇದೇವ ಮಾಽಽವಾಃ । ಅಹಮನ್ನಮನ್ನ ಮದನ್ತಮಾಽದ್ಮಿ । ಅಹಂ ವಿಶ್ವಂ ಭುವನಮಭ್ಯಭವಾಽಮ್ । ಸುವರ್ನ ಜ್ಯೋತೀಃ ॥೮॥

೮. ಆಹಾ ! ಆಹಾ ! ಆಹಾ ! ನಾನು ಅನ್ನವು, ನಾನು ಅನ್ನವು,

1. ಯಾವ ಲೋಕದಲ್ಲಿ ಯಾವ ಭೋಗವನ್ನು ಯಾವನು ಅನುಭವಿಸುತ್ತಿದ್ದರೂ ಅವನ ಆತ್ಮನು ಬ್ರಹ್ಮವೇ. ಬ್ರಹ್ಮಜ್ಞಾನಿಯು ಬ್ರಹ್ಮವೇ ಆಗಿರುವದರಿಂದ ಕಾಮಾನ್ನಿಯೂ ಕಾಮರೂಪಿಯೂ ಆಗಿ ಲೋಕಗಳನ್ನು ಅನುಸಂಚಾರಮಾಡುತ್ತಾ ಇರುತ್ತಾನೆ ; ಎಂದರೆ ಉಪಾಧಿಗಳನ್ನು ಅನುಸರಿಸಿ ಅನುಭವಿಸುತ್ತಿರುತ್ತಾನೆ. ಬ್ರಹ್ಮವನ್ನು ಉಪಾಸನೆಮಾಡುವವರಿಗೆ ಬರುವ ಸರ್ವಲೋಕಾನುಭವದ ಐಶ್ವರ್ಯವೂ ಅವರ ಆತ್ಮನಾದ ಜ್ಞಾನಿಯದೇ ಆದ್ದರಿಂದ ಅನುಸಂಚಾರಮಾಡುತ್ತಾ ಎಂದರೆ ಲೋಕಗಳನ್ನು ಅನುಕ್ರಮದಿಂದ ಸಂಚರಿಸುತ್ತಾ ಎಂದೂ ಜ್ಞಾನದ ಸ್ತುತಿಯಾಗಿ ಅರ್ಥಮಾಡಬಹುದು.

2. ಗೀ. ಭಾ. ೧೩-೨೭, ೨೮ ; ೧೮-೨೦.

3. ಜ್ಞಾನಿಯು ಬ್ರಹ್ಮವಿಷಯವಾಗಿ ಮಾತನಾಡುವದಕ್ಕೆ ಪರಾನುಗ್ರಹವೇ ಕಾರಣ.

ನಾನು ಅನ್ನವು ! ನಾನು ಅನ್ನಾದವು. ನಾನು ಅನ್ನಾದವು ! ನಾನು ಅನ್ನಾದವು ! ನಾನು ಶ್ಲೋಕಕರ್ತನು, ನಾನು ಶ್ಲೋಕಕರ್ತನು, ನಾನು ಶ್ಲೋಕಕರ್ತನು ! ನಾನು ಋತಕ್ಕೆ ಮೊದಲು ಹುಟ್ಟಿದವನಾಗಿರುತ್ತೇನೆ. ದೇವತೆಗಳಿಗಿಂತ ಮೊದಲು ಅಮೃತಕ್ಕೆ ನಾಭಿಯು. ಯಾವನು ನನ್ನನ್ನು (ಬೇಕೆನ್ನುವವರಿಗೆ) ದಾನಮಾಡುವನೋ ಅವನು ಇದ್ದದ್ದು ಇದ್ದಂತೆ ಕಾಪಾಡಿಕೊಳ್ಳುವನು. ಅನ್ನವಾಗಿರುವ ನಾನು, ಅನ್ನವನ್ನುಣ್ಣುವವನನ್ನು ಉಣ್ಣುತ್ತೇನೆ. ನಾನು ಇಡಿಯ ಭುವನವನ್ನು ತಿರಸ್ಕರಿಸುವೆನು. ಸೂರ್ಯನಂತಿರುವ ಜ್ಯೋತಿಯು !

(ಭಾಷ್ಯ)

೨೫೯. ಕಥಮ್ ? ''ಹಾಽವು ಹಾಽವ್ಯ ಹಾಽವ್ಯ'' । ಅಹೋ ಇತ್ಯಸ್ಮಿನ್ ಅರ್ಥೇ ಅತ್ಯನ್ತವಿಸ್ಮಯಖ್ಯಾಪನಾರ್ಥಮ್ । ಕಃ ಪುನರಸೌ ವಿಸ್ಮಯಃ ? ಉಚ್ಯತೇ । ಅದ್ವೈತ ಆತ್ಮಾ ನಿರಞ್ಜನೋಽಪಿ ಸನ್ ಅಹಮೇವ ಅನ್ನಮ್, ಅನ್ನಾದಶ್ಚ । ಕಿಂ ಚ ಅಹಮೇವ ಶ್ಲೋಕಕೃತ್ । ಶ್ಲೋಕೋ ನಾಮ ಅನ್ನಾನ್ನಾದಯೋಃ ಸಙ್ಘಾತಃ । ತಸ್ಯ ಕರ್ತಾ ಚೇತನಾವಾನ್ । ಅನ್ನಸ್ಯೈವ ವಾ ಪರಾರ್ಥಸ್ಯ ಅನ್ನಾದಾರ್ಥಸ್ಯ ಸತಃ, ಅನೇಕಾತ್ಮಕಸ್ಯ ಪಾರಾರ್ಥ್ಯೇನ ಹೇತುನಾ ಸಙ್ಘಾತಕೃತ್ । ತ್ರಿರುಕ್ತಿರ್ವಿಸ್ಮಯ(ತ್ವ)[1] ಖ್ಯಾಪನಾರ್ಥಾ ॥

(ಭಾಷ್ಯಾರ್ಥ)

ಹೇಗೆ ? ಎಂದರೆ : ''ಹಾಽವು, ಹಾಽವು, ಹಾಽವು'' ಎಂಬುದು ಆಹಾ ! ಎಂಬರ್ಥದಲ್ಲಿ ಉಪಯೋಗಿಸಿರುವ (ಶಬ್ದವು. ಇದನ್ನು) ಅತ್ಯಂತ ಆಶ್ಚರ್ಯವನ್ನು ತೋರಿಸುವದಕ್ಕೆ (ಉಪಯೋಗಿಸಿದೆ). ಈ ಆಶ್ಚರ್ಯವೆಂಬುದಾದರೂ ಯಾವದು ? ಎಂದರೆ ಹೇಳುತ್ತಾನೆ : ಅದ್ವೈತನಾದ, ಮತ್ತೊಂದರ ಅಂಟಿಲ್ಲದ, ಆತ್ಮನಾದರೂ ನಾನೇ ಅನ್ನವೂ ಅನ್ನಾದವೂ ಆಗಿರುವೆನಲ್ಲ !? ಮತ್ತೆ ನಾನೇ ಶ್ಲೋಕಕರ್ತನು ; ಶ್ಲೋಕವೆಂದರೆ ಅನ್ನಾನ್ನಾದಗಳ ಗುಂಪು. ಅದರ ಕರ್ತೃವಾದ ಚೇತನಾವಂತನೂ[3]

---

1. 'ತ್ವ' ಎಂಬುದು ಇಲ್ಲದಿದ್ದರೂ ಸಾಗುತ್ತದೆ.

2. ಅನ್ನಾನ್ನಾದಗಳು ಅಧ್ಯಸ್ತವಾಗಿರುವದರಿಂದ ಅವು ತಮಗೆ ಆಧಾರವಾಗಿರುವ ಸಚ್ಚಿದಾನಂದಸ್ವರೂಪವಾದ ಆತ್ಮನಿಗಿಂತ ಬೇರೆಯಲ್ಲ ; ಅವೆರಡೂ ಅವನೇ.

3. ಇದು ಈ ಅನ್ನಾದನ ಅನ್ನವು - ಎಂದು ಅನ್ನಾನ್ನಾದಗಳ ಗುಂಪನ್ನು ಗೊತ್ತು ಪಡಿಸಿರುವ ಚೇತನನಾದ ಈಶ್ವರನು ನಾನೇ.

ನಾನೇ ! ಅಥವಾ[1] ಮತ್ತೊಬ್ಬನಿಗಾಗಿರುವ, ಅನ್ನಾದನಿಗಾಗಿದ್ದುಕೊಂಡಿರುವ, ಅನ್ನವೇ ಅನೇಕಾತ್ಮಕವಾಗಿಯೂ ಮತ್ತೊಬ್ಬರಿಗಾಗಿರತಕ್ಕದ್ದಾಗಿಯೂ ಇರುವದೆಂಬ ಕಾರಣ ದಿಂದ (ಅದನ್ನು) ಒಟ್ಟುಗೂಡಿಸುವವನೂ[2] (ನಾನೇ) ! ಮೂರುಬಾರಿ ಹೇಳಿರುವದು ಆಶ್ಚರ್ಯವನ್ನು ತೋರಿಸುವದಕ್ಕೆ.

(ಭಾಷ್ಯ)

೨೬೦. ಅಹಂ ಅಸ್ಮಿ ಭವಾಮಿ ಪ್ರಥಮಜಾಃ ಪ್ರಥಮಜಃ ಪ್ರಥಮೋತ್ಪನ್ನಃ ಋತಸ್ಯ ಸತ್ಯಸ್ಯ ಮೂರ್ತಾಮೂರ್ತಸ್ಯ ಅಸ್ಯ ಜಗತಃ ದೇವೇಭ್ಯಶ್ಚ ಪೂರ್ವಮ್ । ಅಮೃತಸ್ಯ ನಾಭಿಃ ಅಮೃತತ್ವಸ್ಯ ನಾಭಿಃ ಮಧ್ಯಮ್ । ಮತ್ಸಂಸ್ಪರ್ದಮ್ ಅಮೃತತ್ವಂ ಪ್ರಾಣಿನಾಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ನಾನೇ (ಪ್ರಥಮಜಾ - ಪ್ರಥಮಜಃ) ಮೊದಲು ಹುಟ್ಟಿದ (ಹಿರಣ್ಯ ಗರ್ಭನು). ಋತಕ್ಕೆ ಎಂದರೆ ಸತ್ಯಕ್ಕೆ ಮೂರ್ತಾಮೂರ್ತರೂಪವಾದ (ಈ) ಜಗತ್ತಿಗೆ[3] (ಮೊದಲು ಹುಟ್ಟಿರುವವನು).[4] ಮತ್ತು ದೇವತೆಗಳಿಗಿಂತಲೂ ಮೊದಲು (ಹುಟ್ಟಿ ರುವ ಹಿರಣ್ಯಗರ್ಭನು)[5]. ಅಮೃತಕ್ಕೆ ನಾಭಿಯು ಎಂದರೆ ಮಧ್ಯವು ; ಪ್ರಾಣಿಗಳಿಗೆ ದೊರಕಬೇಕಾದ ಅಮೃತತ್ವವು ನನ್ನ ಅಧೀನವಾಗಿರುತ್ತದೆ ಎಂದರ್ಥ.

(ಭಾಷ್ಯ)

೨೬೧. ಯಃ ಕಶ್ಚಿತ್ ಮಾ ಮಾಮ್ ಅನ್ನಮ್ ಅನ್ನಾರ್ಥಿಭ್ಯಃ ದದಾತಿ ಪ್ರಯಚ್ಛತಿ ಅನ್ನಾತ್ಮನಾ ಬ್ರವೀತಿ (?) ಸಃ ಇತ್ ಇತ್ಥಮ್ ಏವಮ್ ಅವಿನಷ್ಟಂ[6] ಯಥಾಭೂತಮ್ ಆವಾಃ ಅವತಿ ಇತ್ಯರ್ಥಃ । ಯಃ ಪುನರನ್ಯಃ ಮಾಮ್ ಅದತ್ತ್ವಾ

1. ಮೊದಲನೆಯ ವ್ಯಾಖ್ಯಾನದಲ್ಲಿ ಶ್ಲೋಕವೆಂದರೆ ಒಟ್ಟುಗೂಡಿಸುವದು ; ಎರಡನೆಯ ವ್ಯಾಖ್ಯಾನದಲ್ಲಿ ಅನ್ನವೇ.

2. ಅನ್ನವನ್ನು ಆಯಾ ಅನ್ನಾದರಿಗೆ ತಕ್ಕಂತೆ ಏರ್ಪಡಿಸಿರುವವನೂ ನಾನೇ.

3. 'ಸತ್ಯ' ಎಂಬ ಶಬ್ದಕ್ಕೆ ಈ ಅರ್ಥವನ್ನು ಬೃ. ೨-೩-೨, ೩ರಲ್ಲಿ ಕಾಣಬಹುದು.

4. ಕ. ಭಾ. ಭಾ. ೧೧೭ರಲ್ಲಿ 'ಅದ್ಭ್ಯಃ ಪೂರ್ವಮ್' ಎಂಬುದರ ವಿವರವನ್ನು ನೋಡಿ.

5. ಅವ್ಯಾಕೃತದಿಂದ ಮೊದಲು ಹುಟ್ಟುವ, ದೇವತೆಗಳ ಸಮಷ್ಟಿಯಾದ, ಹಿರಣ್ಯ ಗರ್ಭನೂ ನಾನೇ.

6. 'ಅವಿಶಿಷ್ಟಮ್' ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.

ಅರ್ಥಿಭ್ಯಃ ಕಾಲೇ ವ್ಯಾಪ್ತೇ ಅನ್ನಮತ್ತಿ ತಮನ್ನಮ್ ಅದನ್ತಂ ಭಕ್ಷಯನ್ತಂ ಪುರುಷಮ್ ಅಹಮ್ ಅನ್ನಮೇವ ಸಂಪ್ರತಿ ಅದ್ಮಿ ಭಕ್ಷಯಾಮಿ ॥

(ಭಾಷ್ಯಾರ್ಥ)

ಯಾವನೇ ಆಗಲಿ ಅನ್ನವಾದ ನನ್ನನ್ನು ಅನ್ನವು ಬೇಕೆನ್ನುವವರಿಗೆ ಕೊಡುತ್ತಾನೋ ದಾನಮಾಡುತ್ತಾನೋ (ನಾನು ಅನ್ನವೆಂದು ಹೇಳುತ್ತಾನೋ[1] ಅವನು (ಇತ್ ಇತ್ಥಮ್) ಹೀಗೆ ನಾಶವಾಗದೆ ಇದ್ದದ್ದು ಇದ್ದಂತೆ (ಅವಾಃ - ಅವತಿ) ಕಾಪಾಡಿಕೊಳ್ಳುತ್ತಾನೆ[2] ಎಂದರ್ಥ. ಇನ್ನು ಯಾವನು (ಇವನಿಗಿಂತ) ಬೇರೆಯಾಗಿರುವವನು, ನನ್ನನ್ನು ಕೇಳುವವರಿಗೆ ಸಮಯವು ಒದಗಿರುವಾಗ[3] ಕೊಡದೆ ಅನ್ನವನ್ನು ಉಣ್ಣುವನೋ ಆ ಅನ್ನವನ್ನು ಉಣ್ಣುವ ಭಕ್ಷಿಸುವ ಮನುಷ್ಯನನ್ನು ಅನ್ನವಾದ ನಾನೇ ಈಗ ತಿನ್ನುತ್ತಿರುವೆನು, ಭಕ್ಷಿಸುತ್ತಿರುವೆನು.[4]

ಅನ್ನಾನ್ನಾದಿಗಳು ನಿಜವಾಗಿ ಬ್ರಹ್ಮವೇ

(ಭಾಷ್ಯ)

೨೬೨. ಅತ್ರಾಹ - ಏವಂ ತರ್ಹಿ ಬಿಭೇಮಿ ಸರ್ವಾತ್ಮತ್ವಪ್ರಾಪ್ತೇರ್ಮೋಕ್ಷಾತ್ । ಅಸ್ತು ಸಂಸಾರ ಏವ । ಯತೋ ಮುಕ್ತೋಽಪಿ ಅಹಮ್ ಅನ್ನಭೂತಃ ಆದ್ಯಃ[5] ಸ್ಯಾಮ್ ಅನ್ನಸ್ಯ[6] । ಏವಂ ಮಾ ಭ್ಮಿಷೀಃ । ಸಂವ್ಯವಹಾರವಿಷಯತ್ವಾತ್ ಸರ್ವಕಾಮಾಶನಸ್ಯ । ಅತೀತ್ಯಾಯಂ ಸಂವ್ಯವಹಾರವಿಷಯಮ್ ಅನ್ನಾನ್ನಾದಿಲಕ್ಷಣಮ್ ಅವಿದ್ಯಾಕೃತಂ ವಿದ್ಯಯಾ ಬ್ರಹ್ಮತ್ವಮ್ ಆಪನ್ನೋ ವಿದ್ವಾನ್ । ತಸ್ಯ ನೈವ ದ್ವಿತೀಯಂ ವಸ್ತ್ವನ್ತರಮಸ್ತಿ ಯತೋ ಬಿಭೇತಿ । ಅತಃ ನ

1. ಬ್ರಹ್ಮವು ಅನ್ನರೂಪದಿಂದ ತೋರುತ್ತಿರುವದೆಂದು ತಿಳಿಸುತ್ತಾನೋ ಎಂದರ್ಥ ಅನ್ನರೂಪನಾದ ನನ್ನನ್ನು ಉಂಟೆಂದು ಹೇಳುತ್ತಾನೋ - ಎಂದೂ ಅರ್ಥವನ್ನು ಮಾಡಬಹುದು ಈ ವಾಕ್ಯಭಾಗವು ಮೂಲಭಾಷ್ಯದಲ್ಲಿತ್ತೋ ಇಲ್ಲವೋ ಹೇಳುವದು ಕಷ್ಟ. ಮುದ್ರಿತ ಪುಸ್ತಕಗಳೆಲ್ಲೆಲ್ಲ ಇದೆ.

2. ಅವನಿಗೆ ಎಂದೆಂದಿಗೂ ಅನ್ನವು ದೊಕುತ್ತದೆ.

3. ದೇಶಕಾಲಪಾತ್ರಗಳನ್ನರಿತು - ಎಂದರ್ಥ.

4. ಅನ್ನದಾನವನ್ನು ಮಾಡದವನನ್ನು ಅನ್ನವೇ ಈಗ ತಿನ್ನುತ್ತಿರುವದು ಎಂದರೆ ಅವನು ಪಾಪದ ಫಲವನ್ನೇ ಉಣ್ಣುತ್ತಿರುವನು ಎಂದರ್ಥ. ಗೀ. ೩-೧೩.

5. 'ಅದ್ಯಃ' ವಾ॥ ಪಾಠ.

6. 'ಅನ್ನಸ್ಯ' ಎಂದು ಆ॥ ಪಾಠ.

ಭೇತವ್ಯಂ ಮೋಕ್ಷಾತ್ । ಏವಂ ತರ್ಹಿ ಕಿಮಿದಮಾಹ 'ಅಹಮನ್ನಮ್', 'ಅಹಮನ್ನಾದಃ' ಇತಿ ? ಉಚ್ಯತೇ । ಯೋಽಯಮ್ ಅನ್ನಾನ್ನಾದಿಲಕ್ಷಣಃ ಸಂವ್ಯವಹಾರಃ ಕಾರ್ಯಭೂತಃ ಸ ಸಂವ್ಯವಹಾರಮಾತ್ರಮೇವ, ನ ಪರಮಾರ್ಥವಸ್ತು । ಸ ಏವಂಭೂತೋಽಪಿ ಬ್ರಹ್ಮನಿಮಿತ್ತೋ ಬ್ರಹ್ಮವ್ಯತಿರೇಕೇಣ ಅಸನ್ ಇತಿ ಕೃತ್ವಾ ಬ್ರಹ್ಮವಿದ್ಯಾಕಾರ್ಯಸ್ಯ ಬ್ರಹ್ಮಭಾವಸ್ಯ ಸ್ತುತ್ಯರ್ಥಮ್ ಉಚ್ಯತೇ - ''ಅಹಮನ್ನಮಹಮನ್ನಮಹಮನ್ನಮ್ । ಅಹಮನ್ನಾದೋಽಹಮನ್ನಾದೋಽಹಮನ್ನಾದಃ'' ಇತ್ಯಾದಿ । ಅತಃ ಭಯಾದಿದೋಷಗನ್ಧೋಽಪಿ ಅವಿದ್ಯಾನಿಮಿತ್ತಃ ಅವಿದ್ಯೋಚ್ಛೇದಾದ್ ಬ್ರಹ್ಮಭೂತಸ್ಯ ನಾಸ್ತಿ ಇತಿ ॥

(ಭಾಷ್ಯಾರ್ಥ)

(ಆಕ್ಷೇಪ :-) ಹೀಗಾದರೆ ಎಲ್ಲವೂ ನಾನೇ ಆಗುವದೆಂಬ (ಈ) ಮೋಕ್ಷಕ್ಕೆ ಹೆದರುತ್ತೇನೆ. ಸಂಸಾರವೇ ಇದ್ದುಕೊಂಡಿರಲಿ ! ಏಕೆಂದರೆ ಮುಕ್ತನಾದರೂ ನಾನು ಅನ್ನವಾಗಿ ಮತ್ತೊಬ್ಬನಿಗೆ[1] ತಿನ್ನತಕ್ಕ (ಪದಾರ್ಥ)ವಾದೇನು !

(ಪರಿಹಾರ :-) ಹೀಗೆ ಹೆದರದಿರು. ಏಕೆಂದರೆ ಕಾಮಗಳು, ಉಣ್ಣುವದು - ಎಂಬುದೆಲ್ಲ[2] ಸಂವ್ಯವಹಾರಕ್ಕೆ[3] ಸೇರಿದ್ದಾಗಿದೆ. ಅನ್ನ, ಅನ್ನಾದ - ಮುಂತಾದ ರೂಪದ ಅವಿದ್ಯೆಯಿಂದಾಗಿರುವ ಸಂವ್ಯವಹಾರಕ್ಕೆ ಸೇರಿರುವದನ್ನು ಮಾರಿ ಜ್ಞಾನಿಯು ವಿದ್ಯೆಯಿಂದ ಬ್ರಹ್ಮತ್ವವನ್ನು ಪಡೆದುಕೊಂಡಿರುತ್ತಾನೆ. ಅವನಿಗೆ ಎರಡನೆಯದಾದ ಮತ್ತೊಂದು ವಸ್ತುವೇ ಇರುವದಿಲ್ಲ ; ಹಾಗಿರುವದಾಗಿದ್ದರೆ ಅದಕ್ಕೆ ಹೆದರಬೇಕಾಗಿತ್ತು. ಆದ್ದರಿಂದ ಮೋಕ್ಷಕ್ಕೆ ಹೆದರಬೇಕಾದದ್ದಿಲ್ಲ.

(ಆಕ್ಷೇಪ :-) ಹಾಗಾದರೆ 'ನಾನು ಅನ್ನವು', 'ನಾನು ಅನ್ನಾದನು' ಎಂದು (ಶ್ರುತಿಯು) ಹೇಳಿದೆಯಲ್ಲ, ಇದೇನು ?

---

1. 'ಅನ್ನಸ್ಯ' ಎಂಬ ವಾ॥ ಪಾಠಕ್ಕೆ ಅರ್ಥವಿದು. ನಾನು ಅನ್ನವಾದರೆ ನನ್ನನ್ನು ಅನ್ನಾದನಾದ ಮತ್ತೊಬ್ಬನು ತಿನ್ನುವನೆಂದಾಯಿತಲ್ಲ ! ಎಂದು ಆಕ್ಷೇಪ. 'ಅನ್ಯಸ್ಯ' ಎಂಬ ಆ॥ ಪಾಠದಲ್ಲಿ ನಾನು ಮತ್ತೊಬ್ಬನಿಗೆ ಕೊಡದೆ ಇದ್ದರೆ ಅನ್ನವೇ ನನ್ನನ್ನು ತಿನ್ನುತ್ತದೆ ಯೆಂದಾಯಿತಲ್ಲ ! ಎಂದು ಭಾವ.

2. ಕಾಮಗಳು ಅನ್ನವು, ಅವುಗಳನ್ನು ಉಣ್ಣುವದು ಅನ್ನಾದತ್ವವು ; ಅನ್ನ, ಅನ್ನಾದತ್ವ - ಎಂಬುದು ಬರಿಯ ವ್ಯವಹಾರಮಾತ್ರವಾಗಿದೆ.

3. ಅಜ್ಞರ ವ್ಯವಹಾರ, ತಿಳಿದವರು ತಿಳಿದುಮಾಡುವ ವ್ಯವಹಾರ - ಇವೆರಡನ್ನೂ ಸಂವ್ಯವಹಾರ ಎಂಬ ಮಾತಿನಿಂದ ಕರೆದಿರುವದು ಭಾಷ್ಯದಲ್ಲಿ ಕೆಲವು ಕಡೆಗಳಲ್ಲಿ ಕಂಡು ಬರುತ್ತದೆ. ಬೃ.ಭಾ. ೩-೫-೧ ರಲ್ಲಿ ನಾಮರೂಪಗಳ ವಿಚಾರದ ಭಾಷ್ಯವನ್ನು ನೋಡಿ.

(ಪರಿಹಾರ :-) ಹೇಳುತ್ತೇವೆ (ಕೇಳಿರಿ) ಅನ್ನ, ಅನ್ನಾದ - ಎಂಬ ಕಾರ್ಯವಾದ ಈ ಸಂವ್ಯವಹಾರವಿದೆಯಲ್ಲಾ ಇದು ಬರಿಯ ಸಂವ್ಯವಹಾರವೇ ಹೊರತು ಪರಮಾರ್ಥವಾದ ವಸ್ತುವಲ್ಲ. ಆ (ಅನ್ನಾನ್ನಾದತ್ವವು) ಇಂಧನ್ನಾಗಿರುವದಾದರೂ[1] ಬ್ರಹ್ಮವೆಂಬ ಕಾರಣದಿಂದಲೇ ಆಗಿರುತ್ತದೆ[2] (ಆದ್ದರಿಂದ) ಬ್ರಹ್ಮಕ್ಕಿಂತ ಬೇರೆಯಾಗಿ ಇರುವದಿಲ್ಲ ಎಂದಿಟ್ಟುಕೊಂಡು ಬ್ರಹ್ಮವಿದ್ಯೆಯ ಫಲವಾದ ಬ್ರಹ್ಮತ್ವವನ್ನು ಹೊಗಳುವದಕ್ಕಾಗಿ[3] ''ನಾನು ಅನ್ನವು, ನಾನು ಅನ್ನವು, ನಾನು ಅನ್ನವು . ನಾನು ಅನ್ನಾದನು, ನಾನು ಅನ್ನಾದನು, ನಾನು ಅನ್ನಾದನು'' ಎಂದುಮುಂತಾಗಿ ಹೇಳರುತ್ತದೆ. ಆದ್ದರಿಂದ ಅವಿದ್ಯೆಯನ್ನು ನಾಶಪಡಿಸಿಕೊಂಡು ಬ್ರಹ್ಮವಾದವನಿಗೆ ಅವಿದ್ಯೆಯ ನಿಮಿತ್ತದಿಂದಾಗುವ ಹೆದರಿಕೆಯೇ ಮುಂತಾದ[4] ದೋಷಗಳ ಗಂಧವೂ ಇರುವದಿಲ್ಲ - ಎಂದು (ನಿಶ್ಚಯಿಸಬೇಕು).

(ಭಾಷ್ಯ)

೨೬೩. ಅಹಂ ವಿಶ್ವಂ ಸಮಸ್ತಂ ಭುವನಮ್, ಭೂತೈಃ ಸಂಭಜನೀಯಂ ಬ್ರಹ್ಮಾದಿಭಿಃ । ಭವನ್ತಿ ವಾ[5] ಅಸ್ಮಿನ್ ಭೂತಾನಿ ಇತಿ ಭುವನಮ್ । ಅಭ್ಯ ಭವಾಮ್ ಅಭಿಭವಾಮಿ ಪರೇಣ ಈಶ್ವರೇಣ ರೂಪೇಣ । ಸುವರ್ನಜ್ಯೋತೀಃ । ಸುವಃ ಆದಿತ್ಯಃ । ನಕಾರ ಉಪಮಾರ್ಥೇ । ಆದಿತ್ಯ ಇವ ಸಕೃದ್ವಿಭಾತಮ್ ಅಸ್ಮದೀಯಂ ಜ್ಯೋತೀಃ ಜ್ಯೋತಿಃ ಪ್ರಕಾಶಃ ಇತ್ಯರ್ಥಃ ॥

(ಭಾಷ್ಯಾರ್ಥ)

ನಾನು ಇಡಿಯ ಸಮಸ್ತವಾದ ಭುವನವನ್ನು - ಬ್ರಹ್ಮವೇ ಮುಂತಾದ ಭೂತಗಳು (ಇದನ್ನು) ಪ್ರೀತಿಸುತ್ತವೆಯಾದ್ದರಿಂದ[6] ಅಥವಾ ಇದರಲ್ಲಿ ಭೂತ

1. ಬರಿಯ ವ್ಯವಹಾರಮಾತ್ರಕ್ಕೆ ಸೇರಿದ್ದಾದರೂ.

2. ತೋರಿಕೆಯ ಹಾವು ಹಗ್ಗದ ಆಧಾರದಿಂದಲೇ ತೋರುವಂತೆ ಬ್ರಹ್ಮವೆಂಬ ಆಧಾರದಲ್ಲಿಯೇ ಈ ಸಂವ್ಯವಹಾರವು ತೋರತಕ್ಕದ್ದಾಗಿದೆ

3. ಬ್ರಹ್ಮಜ್ಞಾನಿಯು ಅನ್ನಾನ್ನಾದಿಯಾಗಿ ಸರ್ವವೂ ಆಗಿರುತ್ತಾನೆ ಎಂದು ಹೊಗಳುವದಕ್ಕಾಗಿ.

4. ಹೆದರಿಕೆ, ದುಃಖಪ್ರಾಪ್ತಿ, ಸ್ವರೂಪನಾಶ ಮುಂತಾದ.

5. 'ಭವನ್ತೀತಿ ವಾ' ಎಂಬ ಪಾಠದಲ್ಲಿ 'ಇತಿ' ಹೆಚ್ಚು.

6. ಭೂ (ಭೂತಗಳಿಂದ) ವನ (ವನನೀಯ, ಬೇಡಲ್ಪಡತಕ್ಕದ್ದು) ಎಂದು ಅರ್ಥವನ್ನು ಕಲ್ಪಿಸಿದೆ. ಕ. ಭಾ. ೨-೨-೩ ರಲ್ಲಿ ವಾಮನ ಎಂಬ ಶಬ್ದದ ಅರ್ಥವನ್ನು ನೋಡಿ.

ಗಳು ಇರುತ್ತವೆಯಾದ್ದರಿಂದ[1] (ಇದಕ್ಕೆ) ಭುವನವೆಂದು ಹೆಸರು. (ಆ ಭುವನವನ್ನು) ಉತ್ತಮವಾದ ಈಶ್ವರರೂಪದಿಂದ (ಅಭ್ಯಭವಾಮ್ - ಅಭಿಭವಾಮಿ) ಹೋಗಲಾಡಿಸುತ್ತೇನೆ.[2] ಸುವಃ ಎಂದರೆ ಆದಿತ್ಯನು ; (ಇಲ್ಲಿರುವ) ನಕಾರವು ಉಪಮಾರ್ಥದಲ್ಲಿ[3] ಪ್ರಯುಕ್ತವಾಗಿರುತ್ತದೆ. ನನ್ನ (ಜ್ಯೋತೀಃ - ಜ್ಯೋತಿಃ) ಬೆಳಕು ಪ್ರಕಾಶವು ಸೂರ್ಯನ ಬೆಳಕಿನಂತೆ ಎಂದೆಂದಿಗೂ ಬೆಳಗುತ್ತಲೇ (ಇರುತ್ತದೆ)[4] ಎಂದರ್ಥ.

ಯ ಏವಂ ವೇದ । ಇತ್ಯುಪನಿಷತ್ ॥೯॥

೯. ಯಾವನು ಹೀಗೆಂದು ತಿಳಿಯುವನೋ (ಅವನಿಗೆ ಈ ಫಲವು). ಇಂತು ಉಪನಿಷತ್ತು.

(ಭಾಷ್ಯ)

೨೬೪. ಇತಿ ವಲ್ಲೀದ್ವಯವಿಹಿತಾ ಉಪನಿಷತ್ ಪರಮಾತ್ಮಜ್ಞಾನಮ್ । ತಾಮ್ ಏತಾಂ ಯಥೋಕ್ತಾಂ ಶಾನ್ತೋ ದಾನ್ತ ಉಪರತಃ ತಿತಿಕ್ಷುಃ ಸಮಾಹಿತೋ ಭೂತ್ವಾ ಭೃಗುವತ್ ತಪೋ ಮಹದಾಸ್ಥಾಯ ಯ ಏವಂ ವೇದ ತಸ್ಯ ಇದಂ ಫಲಂ ಯಥೋಕ್ತಮ್[5] ಓಮಿತಿ ॥

ಇತಿ ತೈತ್ತಿರೀಯೋಪನಿಷದ್ಭಾಷ್ಯಂ ಸಂಪೂರ್ಣಮ್

(ಭಾಷ್ಯಾರ್ಥ)

ಇಂತಿದು (ಈ) ಎರಡು ವಲ್ಲಿಗಳಲ್ಲಿ ಹೇಳಿರುವ[6] ಉಪನಿಷತ್ತು, ಪರಮಾತ್ಮ ಜ್ಞಾನವು. ಆ ಈ (ವಲ್ಲಿಗಳಲ್ಲಿ) ಹೇಳಿರುವಂಥ (ಉಪನಿಷತ್ತನ್ನು) ಶಾಂತನಾಗಿ

---

1. ಗೀ. ಭಾ. ೮-೧೬.

2. ಅವಿದ್ಯೆಯಿಂದಾಗಿರುವದೆಲ್ಲವನ್ನೂ ಈ ಸ್ವರೂಪದ ಜ್ಞಾನದಿಂದ ನಾಶಗೊಳಿಸುತ್ತೇನೆ ಎಂದರ್ಥ. ಈ.ಭಾ. ೧೫ನ್ನು ನೋಡಿ.

3. ವೇದದಲ್ಲಿ ನಕಾರಕ್ಕೆ ಈ ಅರ್ಥವೂ ಇದೆ ; ಆದರೆ ಇದು ಮಾತಿನ ಮುಂದೆ ಇದ್ದರೆ ಮಾತ್ರ ಹೀಗೆ ಅರ್ಥವಾಗುವದು.

4. ನಿತ್ಯಪ್ರಕಾಶಸ್ವರೂಪನಾದ ನನ್ನ ಪ್ರಕಾಶವು ಹುಟ್ಟಿ ನಾಶವಾಗುವದಲ್ಲ - ಎಂದರ್ಥ

5. 'ಯಥೋಕ್ತಮೋಕ್ಷಃ' ಎಂದು ವಾ।। ಪಾಠ.

6. ಆನಂದವಲ್ಲಿ, ಭೃಗುವಲ್ಲಿ ಎರಡೂ ಪರಬ್ರಹ್ಮವಿದ್ಯೆಯನ್ನೇ ತಿಳಿಸುವವು ಭೃಗುವಲ್ಲಿಯಲ್ಲಿ ಹೇಳಿರುವ ಉಪಾಸನೆಗಳು ಈ ಮಹಾಪ್ರಕರಣಕ್ಕೆ ಸೇರಿದವುಗಳಲ್ಲ.

ದಾಂತನಾಗಿ ಉಪರತನಾಗಿ ತಿತಿಕ್ಷುವಾಗಿ ಸಮಾಹಿತನಾಗಿ[1] ಭೃಗುವಿನಂತೆ ಹೆಚ್ಚಿನ ತಪಸ್ಸನ್ನು ಮಾಡಿ ಯಾವನು ಹೀಗೆಂದು ಅರಿತುಕೊಳ್ಳುವನೋ ಅವನಿಗೆ ಈ ಹೇಳಿದಂಥ ಫಲವು[2] (ಆಗುತ್ತದೆ), ಓಮ್ ![3]

ಓಂ ತತ್ ಸತ್

1. ಶಮ - ಅಂತಃಕರಣನಿಗ್ರಹ, ದಮ - ಇಂದ್ರಿಯನಿಗ್ರಹ, ಉಪರತಿ - ಕರ್ಮತ್ಯಾಗ, ತಿತಿಕ್ಷೆ - ದ್ವಂದ್ವಸಹಿಷ್ಣುತೆ, ಸಮಾಧಾನ - ಕರಣಗಳನ್ನು ಏಕಾಗ್ರತೆಗೊಳಿಸಿಕೊಳ್ಳುವಿಕೆ - ಈ ಐದು ಸಾಧನಗಳೂ ಆತ್ಮದರ್ಶನಕ್ಕೆ ಬೇಕೆಂದು ಬೃ. ೪-೪-೨೩ರಲ್ಲಿ ಹೇಳಿದೆ. ಶ್ರದ್ಧೆ ಎಂಬ ಸಾಧನವೊಂದನ್ನು ಹೆಚ್ಚಾಗಿ ಆ ಉಪನಿಷತ್ತಿನ ಮಾಧ್ಯಂದಿನಪಾಠದಲ್ಲಿ ಹೇಳಿದೆ.

2. ಸರ್ವಾತ್ಮಭಾವವು.

3. ಹತ್ತನೆಯ ಅನುವಾಕವಾದ ಬಳಿಕ 'ಸಹ ನಾವವತು' ಎಂಬ ಶಾಂತಿಯನ್ನು ಪಠಿಸುವದು ವೈದಿಕರ ಪದ್ಧತಿ. ಭಾಷ್ಯಕಾರರು ಹತ್ತನೆಯ ಅನುವಾಕದ ಕೊನೆಯಲ್ಲೇ ಉಪನಿಷತ್ಸಮಾಪ್ತಿಯನ್ನು 'ಓಮಿತಿ' ಎಂಬ ಮಾತುಗಳಿಂದ ಸೂಚಿಸಿರುತ್ತಾರೆ.

ಉಪನಿಷತ್ತಿನ ಸಾರ

ಶೀ ಕ್ಷಾ ವ ಲ್ಲಿ

(ಅನು. ೧) ಬ್ರಹ್ಮವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕೆನ್ನುವಾತನು ತನ್ನ ಕರಣ ಗಳಿಗೆ ಬಲವನ್ನು ಕೊಟ್ಟು ಸುಖವನ್ನುಂಟುಮಾಡುವಂತೆ ಮಿತ್ರಾದಿದೇವತೆಗಳನ್ನು ನಿತ್ಯವೂ ಪ್ರಾರ್ಥಿಸುತ್ತಿರಬೇಕು ಇದರಂತೆ ಅಪರಬ್ರಹ್ಮವಾದ ವಾಯುವನ್ನು (ಅಥವಾ ಹಿರಣ್ಯಗರ್ಭ ನನ್ನು) ಶ್ರದ್ಧಾಭಕ್ತಿಗಳಿಂದ ನಮಸ್ಕರಿಸುತ್ತಾ ಬ್ರಹ್ಮಭಾವನೆಯಿಂದ ಸ್ತುತಿಸುತ್ತಿರಬೇಕು. ಇದರಿಂದ ಗುರುಗಳಿಗೆ ವಿದ್ಯೆಯನ್ನು ಹೇಳಿಕೊಡುವ ಸಾಮರ್ಥ್ಯವೂ ತನಗೆ ವಿದ್ಯೆಯ ವ್ಯಾಪ್ತಿಯೂ ಆಗುವದು. ಅಧ್ಯಾತ್ಮಾದಿತಾಪತ್ರಯಗಳೂ ತೊಲಗುವವು

(೨) ಉಪನಿಷತ್ತಿಗೆ ಅರ್ಥವೇ ಮುಖ್ಯವಾದರೂ ಸ್ವರವರ್ಣಾದಿಗಳನ್ನು ಸರಿಯಾಗಿ ಉಚ್ಚರಿಸಿ ಅಧ್ಯಯನಮಾಡುವದನ್ನು ಮರೆಯಬಾರದು.

(೩) ವೇದದಲ್ಲಿ ಆಗುವ ಸಂಹಿತೆ (ಸಂಧಿ)ಗಳನ್ನು ಕುರಿತು ಐದು ಬಗೆಯಲ್ಲಿ ಉಪಾಸನೆಮಾಡಬೇಕು. (ಅ) ಹಿಂದಿನ ವರ್ಣವು ಪೃಥ್ವಿ ; ಮುಂದಿನದು ಸ್ವರ್ಗ , ಸಂಧಿಯು ಎಂದರೆ ಈ ವರ್ಣಗಳ ನಡುವೆ ಆಕಾಶವು ಎಂದು ಲೋಕದೃಷ್ಟಿಯಿಂದಲೂ (ಆ) ಇದರಂತೆ ಈ ಅವಯವಗಳನ್ನು ಅಗ್ನಿ, ಆದಿತ್ಯ, ಅವ್ಪು, ಮಿಂಚು ಎಂದು ಜ್ಯೋತಿಯ ದೃಷ್ಟಿಯಿಂದಲೂ (ಇ) ಆಚಾರ್ಯ, ಶಿಷ್ಯ, ವಿದ್ಯೆ, ಹೇಳಿಕೊಡುವ ಕರ್ಮ - ಎಂದು ವಿದ್ಯೆಯು ದೃಷ್ಟಿಯಿಂದಲೂ (ಈ) ತಾಯಿ, ತಂದೆ, ಪ್ರಜೆ, ಪ್ರಜೋತ್ಪತ್ತಿಯೆಂದು ಪ್ರಜಾದೃಷ್ಟಿಯಿಂದಲೂ (ಉ) ಕೆಳದವಡೆ ಮೇಲುದವಡೆ, ಮಾತು, ನಾಲಗೆ - ಎಂಬ ಅಧ್ಯಾತ್ಮ ದೃಷ್ಟಿಯಿಂದಲೂ ಉಪಾಸನೆ ಮಾಡಬೇಕು. ಹೀಗೆ ಐದು ಬಗೆಯಿಂದ ಮಾಡುವ ಉಪಾಸನೆಯಿಂದ ಗುರುವಿಗೂ ಶಿಷ್ಯನಿಗೂ ಕೀರ್ತಿಯೂ ಬ್ರಹ್ಮವರ್ಚಸ್ಸೂ ಉಂಟಾಗುತ್ತದೆ.

(೪) ಮುಮುಕ್ಷುವಾದವನು ವೇದಸಾರವಾದ ಓಂಕಾರವನ್ನು ಹೊಗಳುವ 'ಯಶ್ಛನ್ದ ಸಾಮ್' ಎಂಬ ಮಂತ್ರವನ್ನು ಜಪಿಸುತ್ತಿರಬೇಕು. ಇದರಿಂದ ಧಾರಣಶಕ್ತಿ ಉಂಟಾಗುತ್ತದೆ. ಶರೀರೇಂದ್ರಿಯಗಳು ಜ್ಞಾನಸಂಪಾದನೆಗೆ ತಕ್ಕವಾಗುತ್ತವೆ, ಜ್ಞಾನವುದಕ್ಕುತ್ತದೆ. ಇದರಂತೆ ಶ್ರೀಕಾಮನಾದವನು 'ಆವಹನ್ತೀ' ಮುಂತಾದ ಮಂತ್ರದಿಂದ ಹೋಮವನ್ನು ಮಾಡಬೇಕು. ಶಿಷ್ಯರು ತನಗೆ ಆಗಬೇಕೆನ್ನುವವನು 'ಆ ಮಾ ಯನ್ತು' ಮುಂತಾದ ಮಂತ್ರಗಳಿಂದ ಹೋಮ ವನ್ನು ಮಾಡಬೇಕು. ಇಲ್ಲಿ ಹೇಳಿರುವ ಶ್ರೀಕಾಮಾದಿಗಳು ಕರ್ಮದ್ವಾರದಿಂದ ಚಿತ್ತಶುದ್ಧಿಯಾಗಿ ಜ್ಞಾನವು ಪ್ರಾಪ್ತವಾಗಲೆಂಬ ಉದ್ದೇಶದಿಂದ ಉಕ್ತವಾಗಿವೆ.

(೫) ಬ್ರಹ್ಮವನ್ನು 'ಮಹಃ' ಎಂಬ ವ್ಯಾಹೃತಿರೂಪವಾದದ್ದೆಂದೂ ಭೂಃ ಭುವಃ ಸುವಃ ಎಂಬ ಅಂಗಗಳುಳ್ಳದ್ದೆಂದೂ ಉಪಾಸನೆಮಾಡಬೇಕು. ಭೂರಾದಿ ಲೋಕಗಳನ್ನು ವ್ಯಾಪಿಸಿ ಕೊಂಡಿರುವ ಆದಿತ್ಯ, ಅಗ್ನಿವಾಯ್ವಾದಿತ್ಯರನ್ನು ವ್ಯಾಪಿಸಿರುವ ಚಂದ್ರ, ಋಕ್ಸಾಮಯಜುಸ್ಸು ಗಳನ್ನು ವ್ಯಾಪಿಸಿರುವ ಓಂಕಾರ, ಪ್ರಾಣಾಪಾನವ್ಯಾನಗಳನ್ನು ಪೋಷಿಸುವ ಮೂಲಕ ವ್ಯಾಪಿಸಿರುವ ಅನ್ನ - ಇವೆಲ್ಲವೂ 'ಮಹಃ' ಎಂಬ ವ್ಯಾಹೃತಿಯೇ. ಈ ವ್ಯಾಹೃತಿಯನ್ನು ಮಾಹಾಚಮಸ್ಯ

ನೆಂಬ ಋಷಿಯು ಕಂಡುಹಿಡಿದಿರುತ್ತಾನೆ ಅದು ಬ್ರಹ್ಮವೇ. ಮಿಕ್ಕ ವ್ಯಾಹೃತಿಗಳ ಅರ್ಥವೇ ಈ ಬ್ರಹ್ಮವು ಹೃದಯಾಕಾಶದಲ್ಲಿ ಪುರುಷರೂಪದಲ್ಲಿ ಅಮೃತವಾಗಿ ಹಿರಣ್ಮಯವಾಗಿ ನೆಲೆಸಿರುತ್ತದೆ , ಆಕಾಶಶರೀರವುಳ್ಳದ್ದು, ಸತ್ಯರೂಪವಾದದ್ದು, ವ್ಯಾಸಾತ್ಮವಾದದ್ದು, ಆನಂದಕಾರಿಯಾಗಿರುವ ಮನಸ್ಸುಳ್ಳದ್ದು, ಶಾಂತಿಯಿಂದ ಜೀವಿಗಳು ಅನುಭವಕ್ಕೆ ಬರತಕ್ಕದ್ದು - ಹೀಗೆಂದು ಉಪಾಸನೆಮಾಡಬೇಕು ಉಪಾಸಕನು ಹೃದಯದಿಂದ ಮೇಲಕ್ಕೆ ಹೋಗಿ ಮೂರ್ಧಪ್ರದೇಶವನ್ನು ಒಡೆದುಕೊಂಡು ಹೋಗಿರುವ ಸುಷುಮ್ನಾನಾಡಿಯ ಮೂಲಕವಾಗಿ ಹೊರಟು ಭೂಃ ಎಂಬ ವ್ಯಾಹೃತಿಯ ಅರ್ಥವಾದ ಅಗ್ನಿಯ ರೂಪವನ್ನೂ ಭುವಃ ಎಂಬುದರರ್ಥವಾದ ವಾಯುವಿನ ರೂಪವನ್ನೂ ಸುವಃ ಎಂಬುದರ ಅರ್ಥವಾದ ಆದಿತ್ಯನ ರೂಪವನ್ನೂ ಕ್ರಮಕ್ರಮವಾಗಿ ಪಡೆದುಕೊಂಡು ಕೊನೆಗೆ ''ಮಹಃ' ಎಂಬ ವ್ಯಾಹೃತಿಯ ಅರ್ಥವಾದ ಇಂದ್ರಿಯಗಳ ಮತ್ತು ಅಂತಃಕರಣಗಳ ಒಟ್ಟಿನ ಒಡೆಯನಾಗಿರುವ ಮೇಲೆ ಹೇಳಿರುವ ಬ್ರಹ್ಮದ ರೂಪದಲ್ಲಿ ನೆಲೆ ನಿಲ್ಲುತ್ತಾನೆ.

(೬) ಇದೇ ಬ್ರಹ್ಮವನ್ನು ಲೋಕಪಾಙ್ಕ್ತಿ, ದೇವತಾಪಾಙ್ಕ್ತಿ, ಭೂತಪಾಙ್ಕ್ತಿ, ವಾಯುಪಾಙ್ಕ್ತಿ, ಇಂದ್ರಿಯಪಾಙ್ಕ್ತಿ, ಧಾತುಪಾಙ್ಕ್ತಿ ಪಾಙ್ಕ್ತಿಗಳ ರೂಪದಿಂದ ಉಪಾಸನೆ ಮಾಡಬಹುದು. ಪಾಙ್ಕ್ತಿಯೆಂದರೆ ಐದೈದಾಗಿ ಮಿಗಡಿಸಿ ಕೊಂಡಿರುವದು ಆಧ್ಯಾತ್ಮಿಕವಾದ ಪಾಙ್ಕ್ತಿವನ್ನು ಹೊರಗಿನ ಪಾಙ್ಕ್ತಿಗಳೊಡನೆ ಒಂದುಗೂಡಿಸಿ ಇಡಿಯ ಜಗತ್ತೇ ಪಾಙ್ಕ್ತಿರೂಪವಾಗಿರುತ್ತದೆಯೆಂದು ಮಾಡಿಕೊಂಡು ಪಾಙ್ಕ್ತಿಯೆಂಬ ಉಪಾಧಿಯ ಮೂಲಕವಾಗಿ ಬ್ರಹ್ಮವನ್ನು ಉಪಾಸನೆಮಾಡುವಾತನಿಗೆ ಪಾಙ್ಕ್ತಿರೂಪ ಪ್ರಜಾಪತಿಯ ರೂಪವೇ ಪ್ರಾಪ್ತವಾಗುತ್ತದೆ

(೭) ಓಂಕಾರವೆಂಬುದು ಪರಬ್ರಹ್ಮದ ಉಪಾಸನೆಗೂ ಅಪರಬ್ರಹ್ಮದ ಉಪಾಸನೆಗೂ ಅಂಗವಾಗಿರುತ್ತದೆ. ಓಂಕಾರವನ್ನು ಪ್ರತೀಕವಾಗಿ ಮಾಡಿಕೊಂಡು ಈ ಎರಡು ಬಗೆಯ ಬ್ರಹ್ಮವನ್ನೂ ಉಪಾಸನೆಮಾಡಿ ಪಡೆದುಕೊಳ್ಳಬಹುದು ಓಂಕಾರವು ಸರ್ವವೂ ಆಗಿರುತ್ತದೆ ಓಂಕಾರಪೂರ್ವಕವಾಗಿ ಮಾಡುವ ಕರ್ಮಗಳೆಲ್ಲವೂ ಸಫಲವಾಗುತ್ತವೆ ಆದ್ದರಿಂದ ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು. (೮-೧೦) ಉಪಾಸನೆಯಿಂದಲೇ ಬ್ರಹ್ಮವನ್ನು ಪಡೆದುಕೊಳ್ಳಬಹುದೆಂದದ್ದರಿಂದ ಕರ್ಮಗಳು ವ್ಯರ್ಥವೆಂದು ತಿಳಿಯಬಾರದು ಋತ, ಸತ್ಯ, ತಪಸ್ಸು, ದಮ, ಶಮ, ಅಗ್ನಿಹೋತ್ರ, ಅತಿಥಿಪೂಜೆ, ಲೌಕಿಕವ್ಯವಹಾರ, ಪ್ರಜಾಸಂತತಿವ್ಯಾಪ್ತಿ - ಈ ಎಲ್ಲಾ ಕರ್ಮಗಳೂ ಅವಶ್ಯ ; ಅಧ್ಯಯನವೂ ಅಧ್ಯಾಪನವೂ ಅತ್ಯವಶ್ಯ ಸತ್ಯ, ತಪಸ್ಸು, ಅಧ್ಯಯನಾಧ್ಯಾಪನಗಳು - ಈ ಮೂರೂ ಕರ್ಮಗಳಲ್ಲಿ ಮುಖ್ಯವಾದವುಗಳು, ಕರ್ಮದಿಂದ ಉತ್ತಮವಾದ ಆರ್ಷದರ್ಶನಗಳು ಉಂಟಾಗುವವು ; ಹೀಗೆ ಉಂಟಾದ ದರ್ಶನದಿಂದ ತ್ರಿಶಂಕುವೆಂಬ ಋಷಿಯು ಹೊರಪಡಿಸಿರುವ 'ಅಹಂ ವೃಕ್ಷಸ್ಯ' ಎಂಬ ಮಂತ್ರವನ್ನು ಮುಮುಕ್ಷುಗಳು ನಿತ್ಯವೂ ಜಪಿಸುತ್ತಿರಬೇಕು. ಕರ್ಮಗಳಿಂದ ಚಿತ್ತಶುದ್ಧಿಯಾಗಿ ಬ್ರಹ್ಮಜ್ಞಾನವೂ ಉಂಟಾಗುತ್ತದೆಯಾದ್ದರಿಂದ ಜ್ಞಾನೋತ್ಪತ್ತಿಗಾಗಿಯೂ ಕರ್ಮಗಳನ್ನು ಮಾಡುತ್ತಿರಬೇಕು. ಇದುವರೆಗೂ ಹೇಳಿದ ಕರ್ಮಗಳೂ ಉಪಾಸನೆಗಳೂ ಶಾಸ್ತ್ರವಿಹಿತವಾಗಿರುವದರಿಂದಲೂ ಹಿರಿಯರು ಉಪದೇಶಿಸಿರುವವಾದ್ದರಿಂದಲೂ ವೇದದ ರಹಸ್ಯವಾಗಿರುವದರಿಂದಲೂ ಇವನ್ನು ಅವಶ್ಯವಾಗಿ ಅನುಷ್ಠಾನ ಮಾಡಬೇಕು.

ಆ ನಂ ದ ವ ಲ್ಲಿ

(ಭಾ. ಭಾ. ೮೭-೮೯) ಹಿಂದಿನವಲ್ಲಿಯಲ್ಲಿ ಹೇಳಿರುವದು ಅಪರಬ್ರಹ್ಮದ ಉಪಾಸನೆ ; ಈ ವಲ್ಲಿಯಲ್ಲಿ ಪ್ರಾರಂಭಿಸಿರುವದು ಪರಬ್ರಹ್ಮದ ಜ್ಞಾನ. ಈ ಜ್ಞಾನದ ಪ್ರಾಪ್ತಿಗೆ ಇರುವ ಅಡ್ಡಿಗಳನ್ನು ಕಳೆದುಕೊಳ್ಳಬೇಕೆನ್ನುವವರು 'ಶಂ ನೋ ಮಿತ್ರಃ', 'ಸಹ ನಾವವತು' ಎಂಬ ಶಾಂತಿ ಗಳನ್ನು ನಿತ್ಯವೂ ಪಠಿಸುತ್ತಿರಬೇಕು.

೯೦-೧೦೯. ಬ್ರಹ್ಮವನ್ನು ಅರಿತುಕೊಂಡವನು ಪರಮಪುರುಷಾರ್ಥವನ್ನು ಪಡೆಯುತ್ತಾನೆ. ಬ್ರಹ್ಮವು ಸತ್ಯಜ್ಞಾನಾನಂತಸ್ವರೂಪವಾಗಿದೆ. ಅದು ಹೃದಯಾಕಾಶದಲ್ಲಿ ಬುದ್ಧಿಗುಹೆಯಲ್ಲಿದೆ ಎಂದು ತಿಳಿದುಕೊಂಡವನಿಗೆ ಎಲ್ಲಾ ಕಾಮಗಳೂ ಒಮ್ಮೆಗೇ ದೊರಕುವವು ; ಬ್ರಹ್ಮ ರೂಪದಿಂದ ಅವನ್ನು ಅವನು ಅನುಭವಿಸುತ್ತಾನೆ.

೧೧೦-೧೫೩. ಬ್ರಹ್ಮವು ನಮ್ಮೆಲ್ಲರ ಆತ್ಮನೇ ; ಅದರಿಂದಲೇ ಆಕಾಶಾದಿಪಂಚಭೂತ ಗಳಾಗಿರುತ್ತವೆ. ಭೂಮಿಯಲ್ಲಿರುವ ಸಸ್ಯಗಳಿಂದ ಅನ್ನವಾಗಿ ಅನ್ನದಿಂದ ಮನುಷ್ಯನ ಶರೀರವಾಗುತ್ತದೆಯಷ್ಟೆ. ಈ ಅನ್ನಮಯವಾದ ಶರೀರದಿಂದ ಹಿಡಿದು ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ - ಎಂಬ ನಾಲ್ಕು ಕೋಶಗಳು ಒಂದರೊಳಗೊಂದು ಇರುತ್ತವೆ. ಇವುಗಳು ಒಂದೊಂದಾಗಿ ಮುಂದುಮುಂದಿನದು ಆತ್ಮನೆಂಬ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಹಿಂದುಹಿಂದಿನದನ್ನು ಅನಾತ್ಮಬುದ್ಧಿಯಿಂದ ಕೈಬಿಡುತ್ತಾ ಹೋಗಿ ಕೊನೆಗೆ ಆನಂದಮಯಕೋಶದ ಆತ್ಮನಾಗಿರುವ ಆನಂದವೇ ನಿಜವಾದ ಬ್ರಹ್ಮವೆಂದೂ ಆನಂದಮಯಕ್ಕೂ ಅದು ಆಧಾರವಾಗಿರುವದೆಂದೂ ತಿಳಿದುಕೊಳ್ಳಬೇಕು. ಈ ಬ್ರಹ್ಮವು ಇಲ್ಲವೆಂದು ತಿಳಿದರೆ ತಾನೇ ಇಲ್ಲವಾಗುವನು ; ಅದು ಇದೆ ಎಂದು ಅರಿತುಕೊಂಡರೆ ತಾನೇ ಇದ್ದಂತೆ.

೧೫೪-೧೫೬. ಈವರೆಗೆ ಹೇಳಿದ ಉಪದೇಶವನ್ನು ಪಡೆದವರು ಈ ಪ್ರಶ್ನೆಗಳನ್ನು ಕೇಳಬಹುದು ; ಬ್ರಹ್ಮವು ಎಲ್ಲರಿಗೂ ಆತ್ಮನಾದಮೇಲೆ ಅಜ್ಞನು ಅದನ್ನು ಹೊಂದುವದಿಲ್ಲವೇಕೆ ? ಅವನಿಗೆ ಅದು ದೊರಕದಿದ್ದರೆ ಜ್ಞಾನಿಗಾದರೂ ಅದು ದೊರಕುವದೆಂದು ಹೇಗೆ ಗೊತ್ತು ? ಇಲ್ಲವೆಂದು ಅರಿತವನಿಗೆ ಇಂಥ ಗತಿ, ಇದೆಯೆಂದು ಅರಿತವನಿಗೆ ಇಂಥ ಗತಿ ಎಂದದ್ದರಿಂದ ಒಂದು ಸಂಶಯವುಂಟಾಗುತ್ತದೆ ; ಅದು ಇದೆಯೊ, ಇಲ್ಲವೋ ? ಅದು ಇದೆ ಎಂಬುದು ಹೇಗೆ ?

೧೫೭-೧೯೫. ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕಷ್ಟೆ, ಮೊದಲು ಬ್ರಹ್ಮವು ಇದೆ ಎಂಬುದಕ್ಕೆ ಉತ್ತರವನ್ನು ಹೇಳಲಾಗುತ್ತದೆ : ಬ್ರಹ್ಮವು (೧) ಜಗತ್ತನ್ನು ವಿಚಾರಪೂರ್ವಕವಾಗಿ ಸೃಷ್ಟಿಸುವ ಕಾರಣವಾಗಿರುವದರಿಂದ ಇದೆ. (೨) ಸೃಷ್ಟಿಸಿರುವ ಜಗತ್ತಿನಲ್ಲಿ ಜೀವರೂಪದಿಂದ ಹೊಕ್ಕಿರುವದರಿಂದ. ಇದೆ. (೩) ಹೊರಗೆ ಕಾಣುವ ಮೂರ್ತಾಮೂರ್ತ ಪದಾರ್ಥಗಳೆಲ್ಲವೂ ಅದೇ ಆಗಿರುವದರಿಂದ ಇದೆ. (೪) ಬ್ರಹ್ಮವು ತಾನೇ ತನ್ನನ್ನು ಮಾಡಿಕೊಂಡಿರುವದರಿಂದಲೂ ಪುಣ್ಯಕ್ಕೆ ಫಲವನ್ನು ಕೊಡುವದರಿಂದಲೂ ಇದೆ. (೫) ಜೀವರ ಆನಂದಕ್ಕೆ ಹೇತುವಾದ್ದರಿಂದ ಇದೆ. (೬) ಪ್ರಾಣಿಗಳ ಪ್ರವೃತ್ತಿಗೆ

ಕಾರಣವಾಗಿರುವದರಿಂದ ಇದೆ (೭) ಜ್ಞಾನಿಗೂ ಅಜ್ಞಾನಿಗೂ ಭಯಾಭಯಗಳಿಗೆ ಕಾರಣವಾಗಿರುವದರಿಂದಲೂ ಇದೆ.

೧೯೬-೨೦೮. ಬ್ರಹ್ಮಸ್ವರೂಪವಾದ ಆನಂದವು ಪ್ರಾಣಿಗಳಲ್ಲಿ ಮನುಷ್ಯನಿಂದ ಹಿಡಿದು ಬ್ರಹ್ಮನವರೆಗೆ ತಾರತಮ್ಯದಿಂದ ಇರುವಂತೆ ಕಂಡರೂ ನಿಜವಾಗಿ ಅವ್ಯಭಿಚಾರಿಯಾಗಿರುತ್ತದೆ. ಉತ್ಕೃಷ್ಟೋಪಾಧಿಯಾದ ಸೂರ್ಯನಲ್ಲಿಯೂ ನಿಕೃಷ್ಟೋಪಾಧಿಯಾದ ಮನುಷ್ಯನಲ್ಲಿಯೂ ಒಂದೇ ಆಗಿರುತ್ತದೆ. ಅದು ವಿಷಯವಿಷಯಿಗಳ ಸಂಬಂಧದಿಂದ ಉಂಟಾದದ್ದಲ್ಲ, ಸ್ವಾಭಾವಿಕವಾದದ್ದು. ಶ್ರೋತ್ರಿಯನೂ ಅಕಾಮಹತನೂ ಆದವನಿಗೆ ಈ ಆನಂದದ ಅನುಭವವಿರುತ್ತದೆ.

೨೦೯-೨೨೭. ಈಗ ಉಳಿದ ಇನ್ನೈರಡು ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಾಗುತ್ತದೆ. ಯಾವನು ಇಂಥ ಸ್ವಾಭಾವಿಕವಾದ ಆನಂದವೇ ಸತ್ಯಜ್ಞಾನಾನಂತವಾಗಿರುವ ಬ್ರಹ್ಮವು ಎಂದು ತಿಳಿಯುತ್ತಾನೋ ಅವನು ಈ ಲೋಕದಿಂದ ಹಿಂತಿರುಗಿ ಅನ್ನಮಯಾದಿಗಳನ್ನು ಮೀರಿ ಅದೃಶ್ಯತ್ವಾದಿಗುಣಗಳಿಂದ ಕೂಡಿರುವ ಈ ಬ್ರಹ್ಮದಲ್ಲಿ ಅಭಯಪ್ರತಿಷ್ಠೆಯನ್ನು ಹೊಂದುತ್ತಾನೆ. ಮನೋವಾಕ್ಕುಗಳಿಗೆ ದೂರವಾಗಿರುವ ಬ್ರಹ್ಮಾನಂದವು ತನ್ನ ಆತ್ಮನೇ ಎಂದು ತಿಳಿದವನು ಮಾತ್ರ ಏತಕ್ಕೂ ಹೆದರುವದಿಲ್ಲ. ಆದ್ದರಿಂದ ಅಂಥ ಜ್ಞಾನಿಯು ಮಾತ್ರ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ಅಜ್ಞಾನಿಗೆ ಬ್ರಹ್ಮವು ಆತ್ಮನಾಗಿದ್ದರೂ ಅವನಿಗೆ ಅದರ ಪ್ರಾಪ್ತಿಯಿಲ್ಲ, ಪಾಪವನ್ನು ಮಾಡಿರುವದರಿಂದಲೂ ಪುಣ್ಯವನ್ನು ಮಾಡದಿರುವದರಿಂದಲೂ ಆಗುವ ಸಂತಾಪವು ಆತನಿಗೆ ಉಂಟು. ಆದರೆ ಜ್ಞಾನಿಯ ದೃಷ್ಟಿಯಲ್ಲಿ ಪಾಪಪುಣ್ಯಗಳು, ಅವುಗಳ ಫಲಗಳು - ಎಲ್ಲವೂ ಆನಂದಸ್ವರೂಪನಾದ ಆತ್ಮನೇ ಆಗಿ ಬಿಟ್ಟಿರುವದರಿಂದ ಅವನಿಗೆ ಯಾವ ಸಂತಾಪವೂ ಇರುವದಿಲ್ಲ. ಈ ಜ್ಞಾನವೇ ವಿದ್ಯೆಗಳಲ್ಲೆಲ್ಲ ರಹಸ್ಯವೆನಿಸಿರುವ ಬ್ರಹ್ಮವಿದ್ಯೆಯು

ಭೃಗುವಲ್ಲಿ

೨೨೮-೨೩೧. ಭೃಗುವೆಂಬಾತನು ತಂದೆಯಾದ ವರುಣನಲ್ಲಿಗೆ ಬಂದು 'ಪೂಜ್ಯನೆ, ಬ್ರಹ್ಮವನ್ನು ತಿಳಿಸಿಕೊಡು' ಎಂದು ಕೇಳಿಕೊಂಡನು. ತಂದೆಯು ಶರೀರ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು, - ವಾಕ್ಕು - ಎಂಬ ಜ್ಞಾನದ್ವಾರಗಳನ್ನು ಅವನಿಗೆ ಉಪದೇಶಿಸಿದನು. ಬಳಿಕ "ಯಾವದರಿಂದ ಭೂತಗಳು ಹುಟ್ಟುತ್ತವೆಯೋ ಹುಟ್ಟಿದ ಬಳಿಕ ಯಾವದರಿಂದ ಭೂತಗಳು ಬದುಕಿರುತ್ತವೆಯೋ ಕೊನೆಗೆ ಯಾವದರಲ್ಲಿ ಸೇರಿ ಒಂದಾಗಿ ಬಿಡುವವೋ ಅದನ್ನು ತಿಳಿದುಕೊ, ಅದೇ ಬ್ರಹ್ಮವು" ಎಂದು ಬ್ರಹ್ಮದ ಸಾಮಾನ್ಯ ಲಕ್ಷಣವನ್ನು ಹೇಳಿಕೊಟ್ಟನು.

೨೩೨-೨೩೫. ಭೃಗುವು ಇಂದ್ರಿಯಗಳನ್ನೂ ಅಂತಃಕರಣಗಳನ್ನೂ ವಿಕಾಗ್ರವಾಗಿಸಿ ವಿಚಾರಮಾಡುವ ತಪಸ್ಸಿನಿಂದ ಅನ್ನವನ್ನು ಬ್ರಹ್ಮವೆಂದು ತಿಳಿದುಕೊಂಡನು. ಆಮೇಲೆ ಅದಕ್ಕೆ ಲಕ್ಷಣವು ಪೂರ್ಣವಾಗಿ ಹೊಂದುವದಿಲ್ಲವೆಂದು ಮತ್ತೆ ತಂದೆಯ ಉಪದೇಶದಿಂದ ತಪಸ್ಸು ಮಾಡಿ ಪ್ರಾಣವನ್ನು ಬ್ರಹ್ಮವೆಂದು ತಿಳಿದುಕೊಂಡನು. ಆಮೇಲೆ ಅದರಿಂದಲೂ ಸಮಾಧಾನವನ್ನು ಹೊಂದದೆ ಕ್ರಮಕ್ರಮವಾಗಿ ಮನಸ್ಸು, ವಿಜ್ಞಾನ - ಇವುಗಳನ್ನು ಬ್ರಹ್ಮವೆಂದು ತಿಳಿದುಕೊಂಡು ಕೊನೆಗೆ ಎಲ್ಲಕ್ಕೂ ಒಳಗಿರುವ ಆನಂದವೇ ಬ್ರಹ್ಮವೆಂದು ನಿಶ್ಚಯಿಸಿದನು.

೨೩೬-೨೩೯ ಭೃಗುವಿನಂತೆಯೇ ತಪಸ್ಸುಮಾಡಿ ಈ ಆದ್ಯೈತಾನಂದವನ್ನು ಬ್ರಹ್ಮವೆಂದು ಮನಗಂಡವನು ಬ್ರಹ್ಮವೇ ಆಗುತ್ತಾನೆ ಅವನಿಗೆ ಬೇಕಾದಷ್ಟು ಅನ್ನವು ದೊರೆಯುತ್ತದೆ , ಅವನು ಅನ್ನವನ್ನುಣ್ಣುವ ದೀಪ್ತಾಗ್ನಿಯಾಗುತ್ತಾನೆ ; ಅವನಿಗೆ ಪ್ರಜಾಸಂತತಿ, ಪಶುಗಳು, ಬ್ರಹ್ಮವರ್ಚಸ್ಸು, ಕೀರ್ತಿ - ಇವೆಲ್ಲವೂ ಹೆಚ್ಚುತ್ತವೆ.

೨೪೦-೨೪೭. ಪ್ರಾಣವು ಅನ್ನವು, ಶರೀರವು ಅನ್ನಾದವು ; ಇನ್ನೊಂದು ದೃಷ್ಟಿಯಿಂದ ಶರೀರವೇ ಅನ್ನವು, ಪ್ರಾಣವು ಅನ್ನಾದವು ಹೀಗೆ ಅನ್ನವನ್ನು ಉಪಾಸನೆಮಾಡುವವನು ಅನ್ನವನ್ನು ನಿಂದಿಸಬಾರದು. ಶರೀರಪ್ರಾಣಗಳನ್ನು ಅನ್ನವೆಂದು ಉಪಾಸನೆಮಾಡುವವನು ಅನ್ನವನ್ನು ಬೇಡ ಎನ್ನಬಾರದು. ಹೀಗೆಯೇ ಅಪ್ಸು, ಜ್ಯೋತಿ - ಇವುಗಳು ವರಸ್ಪರವಾಗಿ ಅನ್ನಾನ್ನಾದಗಳೆಂದು ಉಪಾಸನೆಮಾಡಬೇಕು , ಹಾಗೆ ಮಾಡುವವನು. ಅನ್ನವನ್ನು ಹೆಚ್ಚಾಗಿ ಸಂಪಾದಿಸಿಕೊಳ್ಳಬೇಕು. ಪೃಥಿವಿ, ಆಕಾಶ - ಇವುಗಳು ಒಂದಕ್ಕೊಂದು ಅನ್ನಾನ್ನಾದಗಳೆಂದು ಉಪಾಸನೆಮಾಡಬೇಕು ಆ ಉಪಾಸಕನು ಎಲ್ಲರಿಗೂ ವಾಸಗೃಹವನ್ನು ಕೊಟ್ಟು, ಅನ್ನವನ್ನೂ ನೀಡಬೇಕು. ಯಾವನು ಇವುಗಳಲ್ಲಿ ಯಾವಯಾವ ಜೋಡಿಯನ್ನು ಅನ್ನಾನ್ನಾದವೆಂದೂ ಒಂದರಲ್ಲಿ ಒಂದು ನಿಂತಿರುವವೆಂದೂ ಉಪಾಸನೆಮಾಡುತ್ತಾನೋ ಅವನು ಆಯಾ ರೂಪದಿಂದ ನೆಲೆ ನಿಲ್ಲುವನು ; ಪ್ರಜಾದಿಗಳನ್ನು ಪಡೆದುಕೊಳ್ಳುವನು. ಯಾವನು ಅನ್ನೋಪಾಸಕನಾಗಿ ಅನ್ನವನ್ನು ಯಾವಯಾವ ಅವಸ್ಥೆಯಲ್ಲಿ ಹೇಗೆಹೇಗೆ ದಾನಮಾಡಿರುವನೋ ಅವನಿಗೆ ಹಾಗೆಹಾಗೆಯೇ ಹಿಂತಿರುಗಿ ಅನ್ನವು ಒದಗುವದು.

೨೪೮-೨೬೩. ಬ್ರಹ್ಮವನ್ನು ಆಧ್ಯಾತ್ಮಿಕವಾಗಿಯೂ ಅಧಿದೈವಿಕವಾಗಿಯೂ ಶಾಸ್ತ್ರದಲ್ಲಿ ಹೇಳಿರುವಂತೆ ಉಪಾಸನೆಮಾಡುವವರಿಗೆ ಶಾಸ್ತ್ರದಲ್ಲಿ ಹೇಳಿರುವ ಬಗೆಬಗೆಯ ದೃಷ್ಟಫಲಗಳಾಗುವವು ಆದರೆ ಭೋಕ್ತೃಭೋಜ್ಯವೆಂಬ ಅನ್ನಾನ್ನಾದರೂಪವಾಗಿರುವದೆಲ್ಲವೂ ಸಂಸಾರವೇ ಆಗಿರುವದರಿಂದ ಯಾವನು ಈ ಸಂಸಾರಲೋಕವನ್ನು ತೊರೆದು ಆತ್ಮನು ಒಬ್ಬನೇ ಇರುವವನು, ಅವನಲ್ಲಿ ಉಪಾಧಿಗಳಿಂದ ತೋರುವ ಉತ್ಕರ್ಷಾಪಕರ್ಷಗಳು ಯಾವವೂ ಇರುವದಿಲ್ಲ - ಎಂಬ ತತ್ತ್ವವನ್ನು ಮನಗಾಣುವನೋ ಅವನು ಅನ್ನಮಯಾದಿಯಾಗಿ ಆನಂದಮಯನವರೆಗಿನ ಅನಾತ್ಮಗಳನ್ನು ಮೀರಿ ಸರ್ವರಿಗೂ ಆತ್ಮನಾಗಿರುವ ಆದ್ಯೈತಾನಂದವೆಂಬ ಬ್ರಹ್ಮಸ್ವರೂಪದಿಂದ ಎಲ್ಲವನ್ನೂ ಅನುಭವಿಸುತ್ತಾ ಹೀಗೆಂದುಕೊಳ್ಳುತ್ತಿರುವನು ; ''ಆಹಾ ! ಅನ್ನ, ಅನ್ನಾದ, ಇವುಗಳ ಸಂಬಂಧದಿಂದಾಗಿರುವ ಒಟ್ಟು ಇದೆಲ್ಲವೂ ನಾನೇ ! ಸರ್ವಜಗತ್ತಿಗೂ ಅಗ್ರಜನಾಗಿರುವ, ದೇವತೆಗಳೆಲ್ಲರಿಗೂ ಪೂರ್ವಜನಾದ, ಹಿರಣ್ಯಗರ್ಭನೂ ನಾನೇ. ಸರ್ವರಿಗೂ ಮುಕ್ತಿಯು ನನ್ನಿಂಬಲೇ ಆಗುತ್ತದೆ. ಅನ್ನರೂಪನಾದ ನನ್ನನ್ನು ದಾನಮಾಡುವವರಿಗೆ ಅನ್ನವು ಸುರಕ್ಷಿತವಾಗಿ ದೊರಕುವದು. ದಾನಮಾಡದೆ ತಿನ್ನುವವರನ್ನು ಅನ್ನರೂಪನಾದ ನಾನೇ ತಿನ್ನುತ್ತಿರುವೆನು ! ನನ್ನ ಬ್ರಹ್ಮ ಸ್ವರೂಪದಲ್ಲಿ ಇಡಿಯ ಜಗತ್ತೇ ಲಯವಾಗುತ್ತದೆ ; ನಾನು ನಿತ್ಯಸ್ವಯಂಪ್ರಕಾಶನು !

೨೬೪. ಹೀಗೆಂಬ ತತ್ತ್ವವನ್ನು ಯಾರು ಭೃಗುವಿನಂತೆ ಮನಗಾಣುವರೋ ಅವರೂ ಈ ಫಲವನ್ನು ಹೊಂದುವರು. ಇದೇ ಆನಂದವಲ್ಲಿ, ಭೃಗುವಲ್ಲಿ - ಈ ಎರಡರಲ್ಲಿ ಹೇಳಿರುವ ಪರಮಾತ್ಮಜ್ಞಾನವು.

ಅನುವಾಕಗಳ ಅನುಕ್ರಮಣಿಕೆ

ವಿಶೇಷಸೂಚನೆ : ವೈದಿಕರು ಅಧ್ಯಯನಮಾಡುವಾಗ ಮಾತಿಕೊಂಡಿರುವ ಅನುವಾಕಗಳ ಕ್ರಮದಂತೆ ಆನಂದಾಶ್ರಮಮುದ್ರಣಾಲಯದ ಪುಸ್ತಕಕ್ಕೆ ಅನುಗುಣವಾಗಿ ಕೊಟ್ಟಿದೆ ಅನುವಾಕ ವಿಭಾಗಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ

ಪ್ರತೀಕ	ವಲ್ಲಿ	ಅನು	ಪುಟ
ಅನ್ನಂ ನ ನಿನ್ದ್ಯಾತ್		೭	೨೯೦
ಅನ್ನಂ ನ ಪರಿಚಕ್ಷೀತ		೮	೨೯೩
ಅನ್ನಂ ಬಹು ಕುರ್ವೀತ	೩	೯	೨೯೪
ಅನ್ನಂ ಬ್ರಹ್ಮೇತಿ	೩	೨	೨೮೨
ಅನ್ನಾದ್ಧ್ಯೇ ಪ್ರಜಾಃ	೨	೨	೧೫೨
ಅಸದ್ವಾ ಇದಮಗ್ರ	೨	೭	೨೭೧
ಅಸನ್ನೇವ ಸಃ	೨	೬	೧೯೦
ಅಹಂ ವೃಕ್ಷಸ್ಯ	೧	೧೦	೬೭
ಆನನ್ದೋ ಬ್ರಹ್ಮೇತಿ	೩	೬	೨೫೭
ಋತಂ ಚ	೧	೯	೬೨
ಓಮಿತಿ ಬ್ರಹ್ಮ	೧	೮	೫೮
ನ ಕಂಚನ ವಸತೌ	೩	೧೦	೨೯೫
ಪೃಥಿವ್ಯನ್ತರಿಕ್ಷಂ	೧	೭	೫೪
ಪ್ರಾಣಂ ದೇವಾ ಅನು	೨	೩	೧೬೧
ಪ್ರಾಣೋ ಬ್ರಹ್ಮೇತಿ	೩	೩	೨೮೪
ಬ್ರಹ್ಮವಿದಾಪ್ನೋತಿ	೨	೧	೧೮೫
ಭೀಷಾಸ್ಮಾದ್ವಾತಃ	೨	೮	೨೩೪
ಭೂರ್ಭುವಃ ಸುವಃ	೧	೫	೨೬
ಭೃಗುರ್ವೈ	೩	೧	೨೭೬
ಮನೋ ಬ್ರಹ್ಮೇತಿ	೩	೪	೨೮೫

ಪ್ರತೀಕ	ವಲ್ಲಿ	ಅನು	ಪುಟ
ಯತೋ ವಾಚೋ	೨	೪	೧೭೨
ಯತೋ ವಾಚೋ	೨	೯	೨೬೭
ಯಶ್ಚನ್ದಸಾಮ್	೧	೪	೨೫
ವಿಜ್ಞಾನಂ ಯಜ್ಞಂ	೨	೫	೧೭೭
ವಿಜ್ಞಾನಂ ಬ್ರಹ್ಮೇತಿ	೩	೫	೨೮೬
ವೇದಮನೂಚ್ಯ	೧	೧೦	೭೩
ಶಂ ನೋ ಮಿತ್ರಃ	೧	೧	೧೨
ಶಂ ನೋ ಮಿತ್ರಃ	೧	೧೨	೧೦೮
ಶೀಕ್ಷಾಂ ವ್ಯಾಖ್ಯಾಸ್ಯಾಮಃ	೧	೨	೧೬
ಸ ಯ ಏಷೋಽನ್ತರ್ಹೃದಯ	೧	೬	೪೫೫
ಸಹ ನಾವವತು	೨	೧	೧೧೧
ಸಹ ನೌ ಯಶಃ	೧	೩	೧೮

ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದ ಭಾಗವನ್ನು ಸೂಚಿಸುವವು

೧. **ಅಕ್ಷರಮ್** –

ಶಬ್ದ ೧೩೩.

೨. **ಅಜ್ಞಾನಮ್** –

ಬ್ರಹ್ಮದ ವಿಷಯದ ತಪ್ಪು ತಿಳಿವಳಿಕೆ ೯೦.

೩. **ಅತ್ತಾ** –

ಶರೀರದೊಳಗೆ ಇದ್ದುಕೊಂಡು ವಿಷಯಗಳನ್ನು ಭೋಗಿಸುವ ಪ್ರಾಣ ೯೬.

೪. **ಅದೃಷ್ಟಾರ್ಥ** –

ಪರಲೋಕದಲ್ಲಿ ಪಡೆಯಬೇಕಾದ ಫಲಕ್ಕಾಗಿ ಮಾಡುವ (ಕರ್ಮ) ೬೩, ೧೯೮.

೫. **ಅಧಿಕಾರಃ** –

(ಕರ್ಮಕ್ಕೆ ಅಥವಾ ಜ್ಞಾನಕ್ಕೆ ಬೇಕಾದ) ಯೋಗ್ಯತೆ ೭೦, ೭೨, ೮೬.

೬. **ಅಧ್ಯಾತ್ಮ** –

ನಮ್ಮ ಒಳಗಿನ ೧೩, ೪೮.

೭. **ಅನಾತ್ಮದರ್ಶೀ, ಅನಾತ್ಮವಿತ್** –

ಆತ್ಮನಲ್ಲದ ದೇಹಾದಿಗಳನ್ನು ತಾನೆಂದುಕೊಂಡು ವಿಷಯಗಳನ್ನು ಸತ್ಯವೆಂದು ತಿಳಿಯುವವನು ೬, ೮೦.

೮. **ಅನುಶಾಸನಮ್** –

ಗುರುಹಿರಿಯರ ಅಪ್ಪಣೆ ೬೧, ೬೮ ; ಈಶ್ವರವಚನ ೬೮.

೯. **ಅನುಷಙ್ಗಃ** –

ಹಿಂದಿನ ಮಾತನ್ನು ಇಲ್ಲಿಯೂ ಸೇರಿಸಿಕೊಳ್ಳುವದು ೧೩.

೧೦. **ಅನ್ಯತಮ್** –

ಮಾರ್ಪಡುವ ಸ್ವರೂಪವನ್ನು ೯೮, ೧೦೩, ೧೧೭ , ಹುಸಿತೋರಿಕೆ (ಬಿಸಿಲು ಕುದುರೆಯ ನೀರಿನಂಥದ್ದು) ೧೪೦

೧೧. **ಅನ್ತರ್ಯಾಮೀ** –

ನಮ್ಮೊಳಗಿದ್ದುಕೊಂಡು ನಮ್ಮ ಶರೀರೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವ ಆತ್ಮ ೫೭

೧೨. **ಅನ್ತಃಕರಣಗುಹಾ** –

ಬುದ್ಧಿಯೆಂಬ ಗುಹೆ ೧೭೭

೧೩. **ಅನ್ನರಸಮಯಃ, ಅನ್ನಮಯಃ** –

ಅನ್ನರಸದಿಂದ ಆಗಿರುವ ಶರೀರ, ಆತ್ಮನೆಂದು ಜನರು ತಪ್ಪಾಗಿ ತಿಳಿದುಕೊಂಡಿರುವ ಕೋಶಗಳಲ್ಲಿ ಒಂದು ೧೧೫, ೧೧೮, ೧೧೯, ೧೨೨

೧೪. **ಅನ್ನಬ್ರಹ್ಮವಿತ್** –

ಸಮಷ್ಟ್ಯನ್ನವನ್ನು ಬ್ರಹ್ಮವೆಂದು ಉಪಾಸನೆ ಮಾಡುವವನು ೧೨೦

೧೫. **ಅನ್ನಾನ್ನಾದೌ** –

ಭೋಜ್ಯ, ಭೋಕ್ತೃ, ಯಾವದು ಒಳಗೆ ಅಧೀನದಲ್ಲಿರುವದೋ ಅದು ಅನ್ನ ; ಯಾವದರ ಅಧೀನದಲ್ಲಿ ಅದರೊಳಗೆ ಇರುವದೋ ಅದು ಅನ್ನಾದವು ೨೫೮.

೧೬. **ಅಪಮೃತ್ಯುಃ** –

ಆಯುಸ್ಸು ಮುಗಿಯುವದರೊಳಗೇ ಒದಗುವ ಮೃತ್ಯು ೧೨೯.

೧೭. **ಅಭಿಧಾನಮ್** –

ಹೆಸರು ೫೧, ೨೨೨.

೧೮. **ಅಭಿಧೇಯಮ್** –

ಹೆಸರಿಸುವ ವಸ್ತು ೫೧.

೧೯. **ಅಯಂ ಲೋಕಃ** –

ಭೂಲೋಕ ೩೪, ೮೨ ; ಇಹಪರಲೋಕ ಗಳಲ್ಲಿರುವ ಇಷ್ಟವಿಷಯಗಳ ಸಮೂಹ ೨೧೦, ೧.

೨೦. **ಅವಿದ್ಯಾ** –

ಬ್ರಹ್ಮಸ್ವರೂಪವು ಇಲ್ಲವೆಂದು ತಿಳಿಯು ವದು, ಅನಾತ್ಮವನ್ನು ಆತ್ಮನೆಂದು ಕಾಣುವ ತಪ್ಪು ತಿಳಿವಳಿಕೆ ೯೩, ೧೯೨, ೧೯೭, ೨೧೬, ೨೧೮, ೨೨೩.

೨೧. **ಅವಿದ್ಯಾಕಲ್ಪಿತ** –

ತಪ್ಪು ತಿಳಿವಳಿಕೆಯಿಂದ ಹುಟ್ಟುಗಟ್ಟಿ ರುವ (ದ್ವೈತ) ೧೫೦, (ಆತ್ಮರು) ೨೫೬, (ಸಂಸಾರ) ೨೧೭.

೨೨. **ಅವಿದ್ಯಾಕೃತ** –

ಅವಿದ್ಯೆಯಿಂದ ಮಾಡಲ್ಪಟ್ಟಿರುವ ತಪ್ಪು ತಿಳಿವಳಿಕೆಯಿಂದ ಕಾಣುವ (ಅನ್ನಮಯಾದಿ ವಿಶೇಷಾತ್ಮರು) ೨೨೩ ; (ಅನ್ಯವಸ್ತು) ೨೧೫, (ಎಚ್ಚರ ಕನಸುಗಳು) ೨೧೬ ; (ತಾದಾತ್ಮ್ಯ) ೫೧ ; (ನಾನಾತ್ವ) ೧೯೦ ; (ಪಂಚಕೋಶಗಳು) ೧೨೨, ೧೨೭ ; (ಭಯ ಹೇತು) ೧೯೦ ; (ವಿಷಯವಿಷಯಿವಿಭಾಗ) ೧೯೭.

೨೩. **ಅವಿದ್ಯಾಕಾಮಕರ್ಮಾಣಿ** –

ಬ್ರಹ್ಮದಲ್ಲಿ ವಿಷಯಗಳನ್ನು ಕಾಣುವ ತಪ್ಪುತಿಳಿವು, ಅವುಗಳ ಬಯಕೆ, ಮತ್ತು ಅವು ಗಳನ್ನು ಪಡೆಯುವದಕ್ಕೆ ಅಥವಾ ತೊಲಗಿಸು ವದಕ್ಕೆ ಮಾಡುವ ಕರ್ಮ ೧೯೭.

೨೪. **ಅವಿದ್ಯಾಕಾರ್ಯಮ್** –

ತಪ್ಪು ತಿಳಿವಳಿಕೆಯ ಫಲವಾಗಿ ತೋರು ವದು ೨೨೩.

೨೫. **ಅವಿದ್ಯಾನಿವೃತ್ತಿಃ** –

ಬ್ರಹ್ಮದ ವಿಷಯದ ತಪ್ಪುತಿಳಿವಳಿಕೆಯು ತೊಲಗುವದು ೨, ೧೧, ೯೧.

೨೬. **ಅವಿದ್ಯಾವಸ್ಥಾ** –

ಆತ್ಮನಿಗಿಂತ ಬೇರೆಯಾದ ಅನಾತ್ಮ ವನ್ನು ಕಾಣುವ ಸ್ಥಿತಿ ೧೯೨.

೨೭. **ಅವಿದ್ವಾನ್** –

ಆತ್ಮತತ್ತ್ವವನ್ನು ತಿಳಿಯುವವನು ೧೫೫, ೧೫೬.

೨೮. **ಅವ್ಯಾಕೃತ** –

ವಿಂಗಡವಾಗಿ ಬಿಡಿಸದೆ ಇರುವ (ನಾಮ ರೂಪಗಳು) ೧೮೩.

೨೯. **ಅಸತ್** –

ಇಲ್ಲದಿರುವದು ೧೫೧ ; ನಾಮರೂಪ ಗಳ ವಿಂಗಡವಿಲ್ಲದ ಅವ್ಯಾಕೃತರೂಪವಾದ ಬ್ರಹ್ಮ ೧೮೩.

೩೦. **ಅಸನ್** –

ಇದ್ದರೂ ಇಲ್ಲದಂತೆ ಎನ್ನಿಸುವ, ಪುರು ಷಾರ್ಥದ ಸಂಬಂಧವಿಲ್ಲದ ೧೫೧ ; ಸನ್ಮಾರ್ಗ ದಲ್ಲಿಲ್ಲದ ೧೫೧.

೩೧. **ಅಸ್ತಿತ್ವಭಾವಿತ** –

ಇದೆ ಎಂದು ಗಟ್ಟಿಯಾಗ ಭಾವನೆ ಯುಳ್ಳ (ಬುದ್ಧಿ) ೧೫೧.

೩೨. **ಅಸೌ ಲೋಕಃ** –

ಆ ಲೋಕ, ಸ್ವರ್ಗಲೋಕ, ೩೪ ; ಪರಮಾತ್ಮ ೧೫೫.

೩೩. **ಆಕಾಶಃ** –

ಪಂಚಭೂತಗಳಲ್ಲಿ ಒಂದು, ೧೧೩, ೧೧೪, ೨೨೮ ; ಆಕಾಶದಲ್ಲಿರುವ ಸಮಾನ ವೆಂಬ ಪ್ರಾಣವೃತ್ತಿ, ೧೨೪ ; ಹೃದಯಾಕಾಶ, ೧೮೮.

೩೪. **ಆಚಾರ್ಯಃ** –

ಶಾಸ್ತ್ರವನ್ನು ಹೇಳಿಕೊಡುವ ಗುರು ೧೪, ೧೭, ೪೫, ೬೪.

೩೫. **ಆತ್ಮಾ** –

ಸ್ವರೂಪ, ೧೦೫, ೧೦೬, ೧೧೪, ೧೨೭, ೧೩೧, ೧೬೬, ೨೫೦ ವ್ಯಾಪಿಸಿರುವ (ವ್ಯಾಹೃತಿ) ೩೩ , ನಡುವೆ ಇರುವ ಅವಯವ, ೧೧೭, ೧೨೪ ; ವಿರಾಟ್ಪುರುಷ ೪೭.

೩೬. **ಆತ್ಮಚೈತನ್ಯಮ್** –

ಸ್ವರೂಪವಾಗಿರುವ ಅರಿವು ೧೩೩.

೩೭. **ಆತ್ಮದರ್ಶನಮ್** –

ಆತ್ಮನ ಉಪಾಸನೆ ೫೮.

೩೮. **ಆತ್ಮಭಾವಃ, ಆತ್ಮಾಭಿಮಾನಃ** –

ತಾನೇ ಆದೆಂಬ ಭಾವನೆ ೧೪೨, ೧೯೦.

೩೯. **ಆತ್ಮಭೂತ** –

ಸ್ವರೂಪವಾಗಿರುವ ೪೧, ೯೩.

೪೦. **ಆತ್ಮಭಾವಿತ** –

ಆತ್ಮನೆಂಬ ಭಾವನೆಯಿಂದ ಕೂಡಿದ ೧೧೭, ೧೪೨.

೪೧. **ಆತ್ಮವಿದ್ಯಾ** –

ಬ್ರಹ್ಮರೂಪವಾದ ಆತ್ಮನ ನಿಜದ ಅರಿವು ೮೯.

೪೨. **ಆತ್ಮವಿವೇಕವಿಜ್ಞಾನಮ್** –

ಆತ್ಮನನ್ನು ಬಿಡಿಸಿ ತಿಳಿದುಕೊಳ್ಳುವದು ೨೨೦.

೪೩. **ಆತ್ಮೈಕತ್ವವಿಜ್ಞಾನಮ್** –

ಆತ್ಮನು ಅದ್ವಿತೀಯನೆಂಬ ತಿಳಿವಳಿಕೆ ೫೮, ೭೮, ೨೫೭.

೪೪. **ಆತ್ಯಂತಿಕಃ ಸಂಸಾರಾಭಾವಃ** –

ಸಂಸಾರವು ಸ್ವಲ್ಪವೂ ಬಾಳಿಯದೆ ಹೋಗಿ ಬಿಡುವದು ೯೧

೪೫. **ಆಧ್ಯಾತ್ಮಿಕ** –

ನಮ್ಮ ಒಳಗಿರುವ ೧೨೬

೪೬. **ಆನನ್ದಮಯಃ** –

ಕರ್ಮ ಮತ್ತು ಉಪಾಸನೆ - ಇವುಗಳ ಫಲ ಭೋಕ್ತವಾದ ಆತ್ಮ ೧೨೨, ೧೪೫, ೧೪೬, ೧೪೭, ೧೪೯, ೧೫೦, ೨೧೧

೪೭. **ಆರಬ್ಧ** –

ಫಲವನ್ನುಂಟುಮಾಡಿರುವ (ಕರ್ಮ) ೩, ೪, ೫, ೭೧

೪೮. **ಆರಭ್ಯ** –

ಹೊಸದಾಗಿ ಉಂಟುಮಾಡಬಹುದಾದ ೯, ೭೩.

೪೯. **ಆರಮ್ಭಕ** –

ಕಾರಣವಾಗಿರುವ ೭೪

೫೦. **ಆರ್ಷದರ್ಶನಮ್** –

ತಾನೇ ಹೊಳೆಯುವ ಅಮೂಲ್ಯಜ್ಞಾನ ೫೮

೫೧. **ಇನ್ದ್ರಃ** –

ಒಡೆಯ (ಸರ್ವಕಾಮಗಳನ್ನೂ ಕೊಡುವ ಓಂಕಾರ) ೨೨ ; ದೇವತೆಗಳ ಒಡೆಯ ೧೪೧, ೧೯೫, ೨೦೧ , ಸಗುಣಬ್ರಹ್ಮ ೪೨.

೫೨. **ಈಶ್ವರಃ** –

ಪರಮೇಶ್ವರನು ೪೧, ೨೧೭ , ಸ್ವತಂತ್ರನಾದ ೧೯೫.

೫೩. **ಉತ್ಪತ್ತ್ಯಾದಿಃ** –

ಉತ್ಪತ್ತಿ (ಹುಟ್ಟುವದು), ಸಂಸ್ಕಾರ (ಗುಣವನ್ನುಂಟುಮಾಡುವದು), ವಿಕಾರ (ಮಾರ್ಪಡಿಸುವದು), ಆಪ್ತಿ (ಹೊಸದಾಗಿ

ಪಡೆಯುವದು) - ಎಂಬ ಕರ್ಮದ ನಾಲ್ಕು ಬಗೆಯ ಫಲ ೭೪.

೫೪. ಉಪನಿಷತ್ -

ರಹಸ್ಯವಾದ ಬ್ರಹ್ಮವಿದ್ಯೆ ೧೧, ೧೨, ೧೫, ೨೨೭, ೨೬೨ ; ಈ ವಿದ್ಯೆಯನ್ನು ತಿಳಿಸುವ ಗ್ರಂಥ ೧೨.

೫೫. ಉಪಸನ್ನ, ಉಪಗತ -

ಭಕ್ತಿಯಿಂದ ಸಮೀಪಿಸುವದು ೨೨೯, ೨೩೦.

೨೬. ಉಪಾಧಿಃ -

ವಸ್ತುಸ್ವರೂಪದಲ್ಲಿ ಸೇರದೆ ಅದನ್ನು ತಿಳಿಸಿ ಕೊಡುವ ವಸ್ತು ೯೦, ೧೦೯.

೫೭. ಉಪಾಸನೆ -

ಎಡೆಬಿಡದೆ ಅದನ್ನೇ ಚಿಂತಿಸುತ್ತಿರುವದು ೨೦, ೫೦, ೬೦

೫೮. ಋತಮ್ -

ಹೀಗೆ ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡ ಶಾಸ್ತ್ರೀಯಕರ್ಮ ೧೪, ೫೪.

೫೯. ಋಷಿಃ -

ವೇದ ೪೯ ; ತತ್ತ್ವವನ್ನು ಕಂಡುಹಿಡಿದಾತನು ೪೯, ೫೮.

೬೦. ಏಕಾರ್ಥವೃತ್ತಿತ್ವಮ್ -

ಒಂದೇ ಪ್ರಯೋಜನಕ್ಕಾಗಿ ಕೆಲಸಮಾಡುತ್ತಿರುವದು ೧೮೭.

೬೧. ಏಕಾಶ್ರಮ್ಯಮ್ -

ಗಾರ್ಹಸ್ಥ್ಯವೆಂಬ ಒಂದೇ ಆಶ್ರಮವನ್ನಿಟ್ಟುಕೊಳ್ಳುವದು ೮೨.

೬೨. ಕರ್ಮ -

ಶಾಸ್ತ್ರದಲ್ಲಿ ಮಾಡಬೇಕೆಂದು ಅಥವಾ ಬಿಡಬೇಕೆಂದು ಹೇಳಿರುವ ಕರ್ಮ, ೧, ೩ ರಿಂದ ೫, ೮ ರಿಂದ ೧೦, ೫೩, ೫೮, ೫೯, ೬೧ ೬೨, ೬೬, ೬೯ ರಿಂದ ೭೪, ೭೭ ರಿಂದ ೮೧.

೬೩. ಕರ್ಮಹೇತುಃ, ಕರ್ಮೋಪಾದಾನ ಹೇತುಃ -

ಕರ್ಮವನ್ನು ಮಾಡುವಂತೆ ಪ್ರೇರಿಸುವ ಕಾರಣ ೨, ೬, ೧೧.

೬೪. ಕರ್ಮಕರ್ತೃತ್ವಮ್ -

ಅದೇ ಕ್ರಿಯೆಗೆ ತಾನೇ ಕರ್ತೃವೂ ಕರ್ಮವೂ ಆಗಿರುವದು ೨೧೧, ೨೧೯.

೬೫. ಕಾಮ್ಯ೦ ಕರ್ಮ -

ಫಲಕ್ಕಾಗಿ ಮಾಡುವ ಶಾಸ್ತ್ರೀಯ ಕರ್ಮ ೧, ೩, ೭೧.

೬೬. ಕಾರಣ೦ ಬ್ರಹ್ಮ -

ಜಗತ್ತಿಗೆ ಕಾರಣವಾಗಿರುವ ನಿರ್ವಿಶೇಷ ಬ್ರಹ್ಮ ೭೬, ೧೭೪, ೧೭೮.

೬೭. ಕಾರ್ಯಕರಣಸಙ್ಘಾತಃ, ಕಾರ್ಯ ಕರಣಾನಿ -

ಶರೀರ ಮತ್ತು ಇಂದ್ರಿಯಾದಿಗಳು ಒಟ್ಟು ಗೂಡಿ ಕೆಲಸಮಾಡುವ ಗುಂಪು ೨೩, ೧೬೩, ೧೯೯.

೬೮. ಕಾರ್ಯ೦ ಬ್ರಹ್ಮ -

ಹುಟ್ಟಿದ (ಹಿರಣ್ಯ ಗರ್ಭನೆಂಬ) ಬ್ರಹ್ಮ ೭೬.

೬೯. ಕೇವಲಬ್ರಹ್ಮವಿದ್ಯಾ, ಕೇವಲ ವಿದ್ಯಾ -

ಕರ್ಮದ ಸಹಾಯವನ್ನು ಬಯಸದೆ ಮುಕ್ತಿಯನ್ನು ಕೊಡುವ ಆತ್ಮಜ್ಞಾನ ೮೬.

೭೦. ಗುಹಾ -

ಅವ್ಯಾಕೃತಾಕಾಶ ೧೦೮ , ಹೃದಯಾಕಾಶ,

೧೦೮, ೧೮೨, ೨೦೬, ೨೨೦ ; ಬುದ್ಧಿ, ೧೦೮, ೧೭೭, ೧೭೮.

೭೧. **ಘಟಾಕಾಶಾಕಾಶೈಕತ್ವಮ್** –

ಗಡಿಗೆಯೊಳಗಿನ ಆಕಾಶವೂ ಬರಿಯ ಆಕಾಶವೂ ಒಂದಾಗಿರುವದು ೨೦೬.

೭೨. **ಜನ್ಮಾನ್ತರಕೃತ** –

ಹಿಂದಿನ ಜನ್ಮದಲ್ಲಿ ಮಾಡಿದ (ಕರ್ಮ) ೩೩.

೭೩. **ಜೀವಃ** –

ಸಂಸಾರಿಯಾಗಿ ತೋರುವ ಪ್ರಾಣಧಾರಿಯಾದ ಆತ್ಮ ೧೭೨, ೧೭೩, ೧೭೪, ೨೫೨.

೭೪. **ಜ್ಞಾನಮ್** –

ತಿಳಿದುಕೊಳ್ಳುವದು, ೧೫, ೧೮, ೫೫, ೭೨, ೯೯, ೧೦೧, ೧೦೨, ೧೦೬, ೧೧೬ ; ಬ್ರಹ್ಮವನ್ನು ಉಪಾಸನೆಮಾಡುವದು, ಅರಿತುಕೊಳ್ಳುವದು, ೨೨, ೨೩, ೨೪ ; ಬ್ರಹ್ಮದ ಅರಿವು ೬೦, ೨೩೮.

೭೫. **ಜ್ಞಾನಜ್ಞೇಯಜ್ಞಾತೃ ಪದಾರ್ಥಾಃ** –

ತಿಳಿವು, ವಿಷಯ, ತಿಳಿಯುವವನು – ಎಂಬಿವು ೧೦೮.

೭೬. **ಜ್ಞಾನಾಭಾಸಃ** –

ಚೈತನ್ಯದಂತೆ ತೋರುವ ಬುದ್ಧಿವೃತ್ತಿ ೧೦೭.

೭೭. **ಜ್ಞಾಪಕಮ್** –

ಇದ್ದದ್ದನ್ನು ಇದ್ದಂತೆ ತಿಳಿಸುವ (ಶಾಸ್ತ್ರವಚನ) ೭೩.

೭೮. **ಜ್ಯೇಷ್ಠಮ್** –

ಪ್ರಾಣಿಗಳಿಗೆಲ್ಲ ಹಿರಿಯದಾದ (ಅನ್ನ) ೧೨೦ ; ಎಲ್ಲರಿಗೂ ಮೊದಲು ಹುಟ್ಟಿದ ಹಿರಣ್ಯಗರ್ಭ, ಅಥವಾ ಪ್ರವೃತ್ತಿಗಳಿಗಿಂತ ಮೊದಲು ಉಂಟಾಗುವ ನಿಶ್ಚಯ ೧೪೧

೭೯. **ತಪಃ** –

ಕೃಚ್ಛ್ರವೇ ಮುಂತಾದದ್ದು, ೫೪, ೫೫ ; ಇಂದ್ರಿಯಗಳ ಮತ್ತು ಮನಸ್ಸಿನ ಏಕಾಗ್ರತೆ ೮೨, ೮೩, ೮೫, ೨೩೦, ೨೩೨, ೨೩೭

೮೦. **ತ್ರಿವಿಧಮ್ ಆನನ್ತ್ಯಮ್** –

ದೇಶದಿಂದ, ಕಾಲದಿಂದ, ಮಾಪ್ಯವಿನಿಂದ ಎಂದು ಮೂರು ಬಗೆಯಿಂದಲೂ ಅಂತವಿಲ್ಲದಿರುವದು ೧೧೧.

೮೧. **ದರ್ಶನಮ್** –

ಉಪಾಸನೆ ೧೯ ; ತಾನೇ ಆಗುವ ಆತ್ಮಾದಿ ವಿಷಯದ ಜ್ಞಾನ ೫೮.

೮೨. **ದಮಃ** –

ಹೊರಗಿನ ಇಂದ್ರಿಯಗಳನ್ನು ಬಿಗಿಹಿಡಿಯುವದು ೮೨, ೨೩೮

೮೩. **ದೃಷ್ಟಾರ್ಥಕರ್ಮ** –

ಈ ಲೋಕದಲ್ಲಿ ಆಗಬೇಕಾದ ಫಲಕ್ಕಾಗಿ ಮಾಡುವ ಶಾಸ್ತ್ರೀಯಕರ್ಮ ೧೯೮.

೮೪. **ಧ್ಯಾನಮ್** –

ಈಶ್ವರಾದಿಗಳನ್ನು ಚಿಂತಿಸುವದು ೮೨.

೮೫. **ಧಾರಣಮ್** –

ಮನಸ್ಸನ್ನು ಉಕ್ತಮಧ್ಯೇಯದಲ್ಲಿ ನಿಲ್ಲಿಸಿಕೊಳ್ಳುವದು ೮೨.

೮೬. **ನಾಮರೂಪೇ** –

ಪ್ರಪಂಚವು ತೋರಿಕೊಳ್ಳುವ ಬಗೆ, ಹೆಸರು ರೂಪ ೧೬೦, ೧೬೫, ೧೭೩, ೧೮೧, ೨೧೮.

೮೭. **ನಿತ್ಯಕರ್ಮಾಣಿ** –

ಅವಶ್ಯವಾಗಿ ಮಾಡಬೇಕಾದ ಶಾಸ್ತ್ರೀಯ ಕರ್ಮಗಳು ೧, ೫, ೭, ೭೧.

೮೮. ನಿರಞ್ಜನಃ –

ಯಾವದರ ಅಂಟೂ ಇಲ್ಲದ ಆತ್ಮ, ೨೫೮.

೮೯. ನಿರೇಷಣಾಃ –

ಮಕ್ಕಳು, ಕರ್ಮ ಉಪಾಸನೆಗಳು ಇವುಗಳ ಫಲವನ್ನು ಬಯಸದವರು ೧೮೬.

೯೦. ನಿರ್ವಿಶೇಷಮ್ –

ಯಾವ ವಿಶೇಷವೂ ಇಲ್ಲದ (ಅಭಾವ) ೯ ; ಬ್ರಹ್ಮ ೧೦೮.

೯೧. ನಿರ್ವಿಕಲ್ಪ –

ದ್ರವ್ಯ, ಗುಣ, ಕ್ರಿಯೆ – ಮುಂತಾದ ವಿಕಲ್ಪಗಳಿಲ್ಲದ ೧೭೭, ೨೨೧, ೨೨೨.

೯೨. ಪಂಚಕೋಶಃ –

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ – ಎಂದು (ಆತ್ಮನ) ಮುಸುಕುಗಳು ೧೪೯.

೯೩. ಪರ ಆತ್ಮಾ, ಪರಮಾತ್ಮಾ –

ನಿಜವಾಗಿ ನಮ್ಮ ಸ್ವರೂಪವಾಗಿರುವ ಆತ್ಮ ೧೪೫, ೨೦೭, ೨೧೧.

೯೪. ಪರಂ ಶ್ರೇಯಃ –

ಹೆಚ್ಚಿನ ಶ್ರೇಯಸ್ಸು, ಮುಕ್ತಿ ೬೯, ೮೧, ೮೬, ೮೯.

೯೫. ಪರಪ್ರಾಪ್ತಿಃ –

ಹೆಚ್ಚಿನ ಪುರುಷಾರ್ಥವನ್ನು ಪಡೆಯುವದು, ಬ್ರಹ್ಮವನ್ನು ಪಡೆಯುವದು ೨.

೯೬. ಪರಮಾರ್ಥಬ್ರಹ್ಮ –

ನಿಜವಾಗಿಯೂ ಬ್ರಹ್ಮವಾಗಿರುವ ಆತ್ಮ ೧೪೯.

೯೭. ಪರಮಾರ್ಥಸತ್ಯಮ್ –

ನಿಜವಾಗಿಯೂ ಸತ್ಯವಾಗಿರುವ ಬ್ರಹ್ಮ ೯೮, ೧೧೩, ೧೪೦.

೯೮. ಪರಮಾರ್ಥಸದಾಪನ್ನಃ –

ನಿಜವಾಗಿರುವ ಬ್ರಹ್ಮದ ರೂಪವನ್ನು ಪಡೆದುಕೊಂಡವನು ೧೫೧.

೯೯. ಪರಮಾತ್ಮಭಾವಃ –

ಪರಮಾತ್ಮನ ಸ್ವರೂಪ ೨೧೨, ೨೨೭.

೧೦೦. ಪರಮಾನನ್ದಃ –

ಮಿಗಿಲಿಲ್ಲದ ಆನಂದ, ಬ್ರಹ್ಮ ೧೯೭, ೨೦೦, ೨೦೬, ೨೦೮, ೨೨೨.

೧೦೧. ಪರಂ ಬ್ರಹ್ಮ –

ಹೆಚ್ಚಿನ ನಿರುಪಾಧಿಕವಾದ ಬ್ರಹ್ಮ ೬, ೧೪೮

೧೦೨. ಪರಾರ್ಥಃ –

ಮತ್ತೊಂದಕ್ಕಾಗಿರುವ (ವಿಶೇಷಣ) ೯೭.

೧೦೩. ಪಾರಿಶೇಷ್ಯಮ್ –

ಮಿಕ್ಕವುಗಳು ಆಗದೆ ಇರುವದರಿಂದ ಇದು ಒಂದೇ ಉಳಿಯುವದೆಂಬ ನ್ಯಾಯ ೨೨೦.

೧೦೪. ಪಿಣ್ಡಃ –

ಶರೀರ ೧೨೩, ೧೪೭, ೨೧೦.

೧೦೫. ಪುರುಷಃ –

ತಲೆ ಕೈ ಮುಂತಾದವುಗಳುಳ್ಳ ಶರೀರ, ಮನುಷ್ಯ ೧೧೪, ೧೧೫, ೧೧೬ ; ಶರೀರಗಳಲ್ಲಿರುವ ಅಥವಾ ಭೂರಾದಿಲೋಕಗಳನ್ನು ವ್ಯಾಪಿಸಿರುವ ಹಿರಣ್ಯಗರ್ಭ – ೪೦.

೧೦೬. ಪುರುಷವಿಧಃ –

ಪುರುಷನ ಆಕಾರವಾದ ೧೨೩, ೧೨೪.

೧೦೭. ಪುರುಷಾರ್ಥಃ –

ಪುರುಷನು ಪಡೆಯಲು ಬಯಸುವ ಫಲ, ೫೩, ೭೮, ೧೫೧.

೧೦೮. ಪ್ರಜಾಪತಿಃ –
ಹಿರಣ್ಯಗರ್ಭ ೨೨ , ವಿರಾಟ್ಪುರುಷ ೪೬, ೪೯, ೨೦೧

೧೦೯. ಪ್ರತಿಷಿದ್ಧಕರ್ಮಾಣಿ –
ಮಾಡಕೂಡದೆಂದು ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳು ೩.

೧೧೦. ಪ್ರತ್ಯಗಾತ್ಮಾ –
ಒಳಗಿರುವ ಆತ್ಮ, ನಮ್ಮ ಸ್ವರೂಪ ೯೪, ೧೨೨.

೧೧೧. ಪ್ರತ್ಯಯಾವಭಾಸಃ –
ಪ್ರತ್ಯಯದಲ್ಲಿ ತೋರುವ ಚೈತನ್ಯದ ಹೊಳಪು ೧೮೨.

೧೧೨. ಪ್ರತ್ಯವಾಯಃ –
ಕರ್ಮವನ್ನು ಮಾಡದೆ ಇದ್ದರೆ ತೋರಿಕೊಳ್ಳುವ ದೋಷ ೩, ೫, ೭, ೭೧.

೧೧೩. ಪ್ರಥಮಜಃ –
ಎಲ್ಲಕ್ಕೂ ಮೊದಲು ಹುಟ್ಟಿದ ಹಿರಣ್ಯಗರ್ಭನ ಬುದ್ಧಿ ೧೩೯, ೧೪೧.

೧೧೪. ಪ್ರಧ್ವಂಸಾಭಾವಃ –
ವಸ್ತುನಾಶವಾದ ಬಳಿಕ ತೋರುವ ಅಭಾವ ೯.

೧೧೫. ಪ್ರವಚನಮ್ –
ಅಧ್ಯಯನ, ಬ್ರಹ್ಮಯಜ್ಞ ೫೨, ೫೪, ೫೫.

೧೧೬. ಪ್ರಾಣಮಯಃ –
ವಾಯುವಿಕಾರವಾದ ಕೋಶ, ೧೨೩, ೧೨೪, ೧೨೫, ೧೩೭, ೨೧೦.

೧೧೭. ಪ್ರಾಣವೃತ್ತಯಃ –
ಪ್ರಾಣ, ಅಪಾನ - ಮುಂತಾದ ಪ್ರಾಣದ ವ್ಯಾಪಾರಗಳು ೧೨೪.

೧೧೮. ಬುದ್ಧಿಃ –
ನಿಶ್ಚಯಮಾಡುವ ಅಂತಃಕರಣ ೧೩೮

೧೧೯. ಬ್ರಹ್ಮ –
ಓಂಕಾರ ೩೪, ೫೧ , ದೊಡ್ಡದು ೯೨ ೯೪, ೧೦೮ , ಪರಮಾತ್ಮ ೨೮, ೩೬, ೪೩, ೪೬, ೧೮೫

೧೨೦. ಬ್ರಹ್ಮಚರ್ಯಮ್ –
ಮೈಥುನಾಸಮಾಚರಣ ೮೨, ೮೩, ೮೫

೧೨೧. ಬ್ರಹ್ಮವರ್ಚಸಮ್ –
ಉಪಾಸನೆಯಿಂದ ಅಥವಾ ಶಮದಮ ಜ್ಞಾನಾದಿಗಳಿಂದ ಬರುವ ತೇಜಸ್ಸು ೧೭, ೨೩೮

೧೨೨. ಬ್ರಹ್ಮವಿಜ್ಞಾನಮ್ –
ಬ್ರಹ್ಮದ ಅರಿವು, ಅನುಭವ ೫೯

೧೨೩. ಬ್ರಹ್ಮವಿತ್ –
ಬ್ರಹ್ಮವನ್ನು ಅರಿತುಕೊಂಡವನು ೫೮, ೧೦೮

೧೨೪. ಬ್ರಹ್ಮವಿದ್ಯಾ –
ಅಪರಬ್ರಹ್ಮದ ಜ್ಞಾನ ೧೪ , ಪರ ಬ್ರಹ್ಮದ ಜ್ಞಾನ ೧, ೧೧, ೫೯, ೬೧, ೬೪, ೨೨೮.

೧೨೫. ಬ್ರಹ್ಮಾ –
ಸಮಷ್ಟಿವ್ಯಷ್ಟಿರೂಪನಾದ ಹಿರಣ್ಯಗರ್ಭ, ೨೮೦.

೧೨೬. ಬ್ರಹ್ಮಾನನ್ದಃ –
ಬ್ರಹ್ಮದ ಸ್ವರೂಪವಾದ ಆನಂದ ೧೯೭.

೧೨೭. ಬ್ರಹ್ಮೋಪಲಬ್ಧಿದ್ವಾರಾಣಿ –
ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಸಾಧನಗಳಾದ ಶರೀರಾದಿಗಳು ೨೩೦, ೨೩೧, ೨೩೨.

೧೨೮. **ಭೂತಮಾತ್ರಾಃ** –

ಭೂತಗಳ ಅಂಶಗಳು ೯೩.

೧೨೯. **ಭೂತಾನಿ** –

ಪ್ರಾಣಿಗಳು ೧೨೮, ೧೨೯, ೨೦೬.

೧೩೦. **ಭೋಗಾಪವರ್ಗೌ** –

ಕರ್ಮಫಲದ ಭೋಗ ಮತ್ತು ಮುಕ್ತಿ ೧೦೮

೧೩೧. **ಮನಃ** –

ಸಂಕಲ್ಪವನ್ನು ಮಾಡುವ ಅಂತಃಕರಣ ೧೩೧.

೧೩೨. **ಮನೋಮಯಃ** –

ಪ್ರಾಣಮಯದೊಳಗಿರುವ ಕೋಶ ೧೩೧, ೧೩೭ ; ಮನಸ್ಸಿನಿಂದ ಉಪಾಸ್ಯನಾಗಿರುವ, ಮನಸ್ಸಿನ ಅಭಿಮಾನಿಯಾದ (ಹಿರಣ್ಯಗರ್ಭ) ೪೦, ೪೩, ೪೫.

೧೩೩. **ಮನ್ತ್ರಾವೃತ್ತಿಃ, ಮಾನಸೋಜಪಃ** –

ಮಂತ್ರವನ್ನು ಮನಸ್ಸಿನಲ್ಲಿಯೇ ಮತ್ತೆ ಮತ್ತೆ ತಿರುಗಿಸುವದು ೧೩೨, ೧೩೩.

೧೩೪. **ಮಹತ್ತತ್ತ್ವಮ್** –

ಮೊದಲು ಹುಟ್ಟಿದ ಹಿರಣ್ಯಗರ್ಭನ ಬುದ್ಧಿ ೧೩೯.

೧೩೫. **ಮೂರ್ತಾಮೂರ್ತೇ** –

ವ್ಯಾಕೃತ ನಾಮರೂಪಗಳು ೧೭೯, ೧೮೧, ೨೦೬.

೧೩೬. **ಮೋಕ್ಷಃ** –

ಸಂಸಾರದಿಂದ ಬಿಡುಗಡೆ ೩, ೮, ೯, ೧೦, ೧೧.

೧೩೭. **ಯಾವಜ್ಜೀವಾದಿಶ್ರುತಯಃ** –

ಬದುಕಿರುವವರೆಗೂ ಕರ್ಮವನ್ನು ಮಾಡ ಬೇಕೆಂದು ವಿಧಿಸುವ ಶ್ರುತಿಗಳು ೮೨.

೧೩೮. **ರಸಾದಿಭಾವಃ** –

ಅನ್ನವು ರಸವೇ ಮುಂತಾದ ರೂಪದಿಂದ ಮಾರ್ಪಡುವದು ೧೧೯.

೧೩೯. **ಲಕ್ಷಣಮ್** –

ಅಸಾಧಾರಣಧರ್ಮ ೯೬, ೧೦೩, ೨೩೩.

೧೪೦. **ಲೌಕಿಕಂ ಜ್ಞಾನಮ್** –

ವೃತ್ತಿರೂಪವಾದ ಜ್ಞಾನವು ೧೦೨.

೧೪೧. **ಲೌಕಿಕಾನನ್ದಃ** –

ವಿಷಯಗಳಿಂದ ಆಗುವ ಸುಖ ೧೯೬, ೧೯೭,

೧೪೨. **ವಾಯುಃ** –

ಕ್ರಿಯಾಶಕ್ತಿ ಪ್ರಧಾನವಾದ ಅಪರಬ್ರಹ್ಮ, ಸೂತ್ರಾತ್ಮ ೧೪.

೧೪೩. **ವಿಕಲ್ಪಃ** –

ವಸ್ತುವಿಲ್ಲದೆ ಬರಿಯ ಮಾತಿನಿಂದ ಉಂಟಾಗುವ ಪ್ರತ್ಯಯ ೯ ; ದ್ರವ್ಯ, ಗುಣ ಎಂದು ಮುಂತಾಗಿ ಕಲ್ಪಿಸುವುದು ೧೫೧, ೧೭೭, ೨೨೧

೧೪೪. **ವಿಕಾರಃ** –

ಕಾರ್ಯ ೯೮, ೧೪೧.

೧೪೫. **ವಿಜ್ಞಾನಮ್** –

ಉಪಾಸನೆ ೨೪, ೫೩ ; ಆತ್ಮಜ್ಞಾನ ೧೧, ೪೦, ೫೯, ೭೮, ೧೦೯ ; ವೇದಾರ್ಥ ನಿಶ್ಚಯ ೧೩೮, ೧೩೯, ೧೪೧.

೧೪೬. **ವಿಜ್ಞಾನಮಯಃ** –

ವೇದಾರ್ಥನಿಶ್ಚಯದಿಂದಾದ ಬುದ್ಧಿ, ಒಂದು ಕೋಶ, ೧೩೮, ೧೩೯, ೧೪೦, ೧೪೧, ೧೫೫, ೨೧೦.

೧೪೭. **ವಿದ್ಯಾ** –

ಉಪಾಸನೆ ಮತ್ತು ಜ್ಞಾನ ೩೦, ೫೬, ೬೯,

೮೨ , ಜ್ಞಾನ ೫೯, ೭೮, ೮೨, ೮೩, ೮೪, ೮೫, ೮೬, ೮೭, ೨೧೮

೧೪೮. ವಿದ್ಯಾಪರಿಪಾಕಃ –

ಜ್ಞಾನವು ಬಲಿತುಕೊಳ್ಳುವದು ೮೨.

೧೪೯. ವಿದ್ಯಾವಾನ್, ವಿದ್ವಾನ್ –

ಆತ್ಮಜ್ಞಾನಿ ೧೫೫, ೧೫೬, ೧೯೩, ೨೦೯, ೨೨೨, ೨೨೩.

೧೫೦. ವಿಶೇಷಣಮ್ –

ಸಜಾತೀಯವಸ್ತುಗಳಿಂದ ಬೇರ್ಪಡಿಸುವ ಧರ್ಮ ೯೫

೧೫೧. ವಿಷಯವಿಷಯಿಸಂಬನ್ಧಃ –

ಇದನ್ನು ಅನುಭವಿಸುವದು, ಇದು ಅನುಭವಿಸುವದು – ಎಂಬ ಸಂಬಂಧ ೧೯೬, ೨೦೪, ೨೨೨.

೧೫೨. ವೃತ್ತಿಃ –

ಭಾಷ್ಯ ೧೧೦, ೧೭೭ ; ಪ್ರಾಣದ ವ್ಯಾಪಾರ ೧೨೪ ; ಮನಸ್ಸಿನ ಅಲೆ ೧೦೬, ೧೩೨.

೧೫೩. ಶಬ್ದಾನುಗಮಃ –

ಅರ್ಥವು ಮಾತುಗಳಿಗೆ ಹೊಂದಿಕೊಂಡಿರುವದು ೧೫೮.

೧೫೪. ಶಮಃ –

ಅಂತಃಕರಣನಿಗ್ರಹ ೮೨.

೧೫೫. ಶ್ರವಣಮನನ
ನಿದಿಧ್ಯಾಸನಾನಿ –

ಆತ್ಮನ ವಿಷಯವಾಗಿ ಕೇಳುವದು ಆಲೋಚಿಸುವದು, ಚಿಂತಿಸಿ ಅನುಭವಕ್ಕೆ ಹೊಂದಿಸಿಕೊಳ್ಳುವದು ೮೫.

೧೫೬. ಸಂಸಾರಬೀಜಮ್ –

ಸಂಸಾರಕ್ಕೆ ಕಾರಣವಾದ ಅಜ್ಞಾನ ೯೦.

೧೫೭. ಸಂವ್ಯವಹಾರಃ –

ಹಾಗೆಂದು ತಿಳಿಯುವದು, ಮಾತಾಡು

೧೫೮. ಸಂಹತ –

ಒಂದಕ್ಕೊಂದು ಸಮಪ್ರಧಾನವಾಗಿ ಸೇರಿರುವ (ಜ್ಞಾನಕರ್ಮಗಳು) ೭೪ ; ಒಂದಕ್ಕೊಂದು ಸೇರಿಕೊಂಡು ಮತ್ತೊಬ್ಬನ ಕಾರ್ಯವನ್ನು ಮಾಡುವದು ೧೮೭.

೧೫೯. ಸತ್ತಾಸಾಮಾನ್ಯಮ್ –

ದ್ರವ್ಯಗುಣಕರ್ಮಗಳಲ್ಲಿ ಸಮಾನವಾಗಿರುವ ಇರವು ೧೦೭

೧೬೦. ಸತ್ಯಮ್ –

ವಾಕ್ಕಾಯಗಳಿಂದ ಮಾಡುವ ಕರ್ಮ ೧೪, ೧೫೯ ; ನಿಜವಾಗಿ ಹೇಳುವದು ೬೨ , ಮೂರ್ತಾಮೂರ್ತಗಳು ೪೪ , ನಿಜವಾಗಿ ಮಾರ್ಪಡದೆ ಇರುವದು ೯೮, ೧೦೩, ೧೦೪, ೧೮೦.

೧೬೧. ಸನ್ಯಾತ್ರಮ್ –

ಬರಿಯ ಇರವೇ ಆಗಿರುವ ಬ್ರಹ್ಮ ೧೦೧

೧೬೨. ಸನ್ಮಾರ್ಗಃ –

ಬ್ರಹ್ಮವನ್ನು ಅರಿಯುವ ಮಾರ್ಗ ೫೨.

೧೬೩. ಸಮಾನಾಧಿಕರಣಾನಿ –

ಒಂದೇ ವಸ್ತುವಿನಲ್ಲಿರುವವು, ೯೫.

೧೬೪. ಸಮುಚ್ಚಯಃ –

(ಜ್ಞಾನಕರ್ಮಗಳನ್ನು) ಸೇರಿಸಿಕೊಂಡು ಅನುಷ್ಠಾನಮಾಡುವದು, ೭೭.

೧೬೫. ಸರ್ವಗತಮ್ –

ಎಲ್ಲೆಲ್ಲಿಯೂ
೭೫, ೯೩, ೧೦೮, ೧೧೩, ೨೨೦

೧೬೬. **ಸರ್ವಜ್ಞಮ್** –

ಎಲ್ಲವನ್ನೂ ಅರಿಯುವ, ಜ್ಞಾನಮಾತ್ರ ರೂಪವಾದ ೫೭, ೧೦೯, ೧೬೧.

೧೬೭. **ಸರ್ವಪ್ರವೃತ್ತಿಬೀಜಮ್** –

ಎಲ್ಲಾ ವ್ಯಾಪಾರಗಳಿಗೂ ಕಾರಣವಾಗಿರುವ ಬ್ರಹ್ಮ ೧೫೧.

೧೬೮. **ಸರ್ವವಿಶೇಷಪ್ರತ್ಯಸ್ತಮಿತಮ್** ಯಾವ ವಿಶೇಷಗಳೂ ಇಲ್ಲದಿರುವ ಬ್ರಹ್ಮ ೧೫೧.

೧೬೯. **ಸರ್ವಾತ್ಮಕ** –

ಸರ್ವರೂಪವಾಗಿಯೂ ಇರುವ ಅಪರ ಬ್ರಹ್ಮ, ಮುಕ್ತ ೪೩ ; ಪರಬ್ರಹ್ಮ ೯೩.

೧೭೦. **ಸರ್ವಾತ್ಮಭಾವಃ** –

ಎಲ್ಲವನ್ನೂ ವ್ಯಾಪಿಸಿಕೊಳ್ಳುವದು ೪೩ ; ಎಲ್ಲವೂ ಆಗುವದು ೯೪, ೨೫೭, ೨೫೮.

೧೭೧. **ಸರ್ವಾತ್ಮಾ** –

ಎಲ್ಲರ ಆತ್ಮನಾದ ಬ್ರಹ್ಮ ೫೭, ೧೨೭.

೧೭೨. **ಸರ್ವಾನನ್ಯಮ್** –

ಯಾವದಕ್ಕಿಂತಲೂ ಅನ್ಯವಲ್ಲದ, ಎಲ್ಲವೂ ಆಗಿರುವ ಬ್ರಹ್ಮ, ೨೫೮.

೧೭೩, **ಸರ್ವಾನ್ತರಃ, ಸರ್ವಾನ್ತರತಮಃ** –

ಎಲ್ಲಕ್ಕೂ ಒಳಗಿರುವ ನಿಜವಾದ ಆತ್ಮ ೧೮೨, ೨೨೦.

೧೭೪. **ಸವಿಕಲ್ಪವಸ್ತೂನಿ** –

ದ್ರವ್ಯಾದಿವಿಕಲ್ಪವುಳ್ಳ ವಸ್ತುಗಳು ೨೨೨.

೧೭೫. **ಸಾಧುಮಾರ್ಗಃ** –

ವರ್ಣಾಶ್ರಮಾದಿವ್ಯವಸ್ಥೆ ೧೫೨.

೧೭೬. **ಸಾಧ್ಯಾನಿ** –

ಪುತ್ರ, ಕರ್ಮ, ಉಪಾಸನೆ – ಇವುಗಳಿಂದ ಸಿಕ್ಕುವ ಈ ಲೋಕ, ಪಿತೃಲೋಕ ಇವು ೪೨.

೧೭೭. **ಸಾಮ** –

ವೇದದಲ್ಲಿರುವ ಗಾನ ; ಸಮವಾಗಿರುವ ಬ್ರಹ್ಮ ೨೫೪.

೧೭೮. **ಸುಷುಮ್ನಾ** –

ಉಪಾಸಕರು ಬ್ರಹ್ಮಲೋಕಕ್ಕೆ ಹೋಗುವಾಗ ಅನುಸರಿಸಬೇಕಾದ ಮಾರ್ಗದ ನಾಡಿ ೪೨.

೧೭೯. **ಸೋಪಾಧಿಕಮ್** –

ಉಪಾಧಿಗಳಿಂದೊಡಗೂಡಿದ (ಅಪರ ಬ್ರಹ್ಮ) ೯೦.

೧೮೦. **ಸ್ವರೂಪಪ್ರತಿಷ್ಠಃ** –

ತನ್ನ ಸ್ವರೂಪದಲ್ಲಿ ನೆಲೆನಿಂತವನು ೧೯೧.

೧೮೧. **ಸ್ವಾತ್ಮನಿ ಅವಸ್ಥಾನಮ್** –

ತನ್ನ ಸ್ವರೂಪದಲ್ಲಿ ನೆಲೆನಿಲ್ಲುವದು, ಮೋಕ್ಷ ೨, ೩, ೭, ೧೧.

೧೮೨. **ಸ್ವಾಭಾವಿಕ** –

ಅವಿಚಾರಸ್ವಭಾವದಿಂದ ಇರುವ (ಅಜ್ಞಾನ) ೭೭ ; ಮತ್ತೊಂದರಿಂದ ಆಗದ ಸ್ವರೂಪವನಾಗಿರುವ (ಆನಂದ) ೧೯೬, ೨೧೬, ೨೨೨, ೨೫೮.

೧೮೩. **ಹಿರಣ್ಯಗರ್ಭಃ** –

ಧರ್ಮಜ್ಞಾನಾದಿಗಳು ಮಿಗಿಲಿಲ್ಲದಷ್ಟು ಇರುವ ಬ್ರಹ್ಮನು, ಅಪರಬ್ರಹ್ಮ ೨೦೧.

೧೮೪. **ಹೃದಯಾಕಾಶಃ** –

ಅಪರಬ್ರಹ್ಮದ ಉಪಾಸನೆಗೆ ಸ್ಥಾನ ೪೦ ; ಬ್ರಹ್ಮವಿಜ್ಞಾನಕ್ಕೆ ಸ್ಥಾನ ೧೦೮.